# ಶ್ರೀಸುಮಧ್ವವಿಜಯಮಹಾಕಾವ್ಯಂ

## ಶ್ರೀನಾರಾಯಣಪಂಡಿತಾಚಾರ್ಯವಿರಚಿತಂ

**ಭಾಗ–೩**

**(೯ ರಿಂದ ೧೨ರವರೆಗಿನ ನಾಲ್ಕು ಸರ್ಗಗಳು)**

**ಕನ್ನಡಟೀಕಾಸಹಿತ**

ಅನುವಾದಕ ಮತ್ತು ಪ್ರಕಾಶಕ :

ಆಚಾರ್ಯ ಸಾಣೂರು ಭೀಮಭಟ್ಟರು, ಎಂ.ಎ

ನಿವೃತ್ತ ತರ್ಕಶಾಸ್ತ್ರ ಪ್ರಾಧ್ಯಾಪಕರು

ಸರ್ಕಾರದ ಸಂಸ್ಕೃತ ಮಹಾಪಾಠಶಾಲಾ

ಬೆಂಗಳೂರು-೫೬೦ ೦೧೮

ಆಚಾರ್ಯ ಸಾಣೂರು ಭೀಮಭಟ್ಟರು, ಎಂ.ಎ.
ನಂ. 22/4, 'ಈಶಾವಾಸ್ಯಂ'
6ನೇ ಅಡ್ಡರಸ್ತೆ, ಅಪ್ಪೂರಾವ್ ರಸ್ತೆ
ಚಾಮರಾಜಪೇಟೆ, ಬೆಂಗಳೂರು-18

ಪ್ರಥಮಮುದ್ರಣ : 1989

ಸರ್ವಾಧಿಕಾರಗಳೂ ಸುರಕ್ಷಿತ

1000 ಪ್ರತಿಗಳು

ಮುದ್ರಕರು :

ಶ್ರೀವಿಜಯ ಪ್ರಿಂಟಿಂಗ್ ಹೌಸ್
ಕೆ. ಜಿ. ನಗರ, ಬೆಂಗಳೂರು-19.

Rarest Archiver

# ಅನುವಾದಕನ ಮನವಿ

'ಗುರುಭಕ್ತಿಯಿಂದ ಉಂಟಾಗುವ ಹರಿಭಕ್ತಿಗಾಗಿ' ಮುಖ್ಯಪ್ರಾಣನ ಅವತಾರಲೀಲೆಗಳನ್ನು ತಿಳಿಸಲು ಕವಿಕುಲತಿಲಕ ಶ್ರೀಮನ್ನಾರಾಯಣ ಪಂಡಿತಾಚಾರ್ಯರು **'ಶ್ರೀಸುಮಧ್ವವಿಜಯ'**ವೆಂಬ ಮಹಾಕಾವ್ಯವನ್ನು ರಚಿಸಿ ಮುಮುಕ್ಷುಜನರಿಗೆ ಪರಮೋಪಕಾರ ಮಾಡಿದ್ದಾರೆ. ಈ ಮಹಾ ಕಾವ್ಯವು ವಿಲಾಸಿಗಳ ಮನೋರಂಜಕವಾದ ಲೌಕಿಕ ಕಾವ್ಯವಲ್ಲ. ಮಾಧ್ವರಿಗೆ ಉದ್ಧಾರಕವಾದ ಮಂತ್ರಸಂಹಿತೆಯೇ ಆಗಿದೆ. ಇದರಲ್ಲಿ ೧೦೦೮ (ಒಂದುಸಾವಿರದ ಎಂಟು) ಶ್ಲೋಕಗಳಿದ್ದು ಇದು ಆದ್ಯಂತಮಧ್ಯ ಗಳಲ್ಲಿಯೂ ಪರಮಮಂಗಳಮಯವಾಗಿದೆ. ಅದ್ಭುತವಾದ ಇತಿಹಾಸ-ಮಂತ್ರ-ತತ್ತ್ವಗರ್ಭಿತವಾದ ಎಲ್ಲಾ ಪ್ರಮುಖಕಾವ್ಯಲಕ್ಷಣಗಳನ್ನು ಒಳಗೊಂಡಿರುವ ಈ ಸುಮಧ್ವವಿಜಯವು ವಿಜಯಕಾವ್ಯಗಳಲ್ಲಿ **ಮೇರುಕೃತಿ** ಎನ್ನಿಸಿಕೊಳ್ಳಲು ಅರ್ಹವಾಗಿದೆ.

ಶ್ರೀಹರಿಗುರುಗಳ ಅನುಗ್ರಹದಿಂದ ಇದರ ಮೂರನೆಭಾಗವು ಎರಡನೆಯ ಭಾಗ ಪ್ರಕಟವಾದ ನಾಲ್ಕು ವರ್ಷಗಳ ಅನಂತರ ತಡವಾಗಿಯೇ ಪ್ರಕಟವಾಗುತ್ತಿದೆ. ಎರಡನೆಯ ಭಾಗದಲ್ಲಿ ಅನ್ವಯವನ್ನು ಕೈಬಿಟ್ಟರೂ ಈ ಭಾಗದಲ್ಲಿ ಅದನ್ನು ಕೊಡಲಾಗಿದೆ. ವಿಗ್ರಹಗಳನ್ನು ಸಂಕ್ಷಿಪ್ತವಾಗಿ ಕೊಟ್ಟಿದ್ದರೂ, ಒಂದು ಎರಡನೆಯ ಭಾಗವನ್ನು ಓದಿದವರು ಸ್ವಲ್ಪ ಪರಿಶ್ರಮದಿಂದ, ಅಥವಾ ಗುರುಗಳ ಸ್ವಲ್ಪವಾದ ಸಹಾಯದಿಂದ ತಿಳಿಯಲು ಸಾಧ್ಯವೆಂದು ಭಾವಿಸಲಾಗಿದೆ. ಧಾತುರೂಪಗಳಲ್ಲಿ ಹಿಂದೆ ಬಂದಿರುವ ಧಾತುರೂಪಗಳನ್ನು ಪುನಃ ಕೊಟ್ಟಿಲ್ಲ. ಕೆಲವು ಕಠಿನವಾದ ಕ್ರಿಯಾರೂಪ ಗಳಲ್ಲಿ, ಆಯಾ ಪುರುಷದ ಮೂರುರೂಪಗಳನ್ನು ಮಾತ್ರ ಕೊಟ್ಟಿದೆ. ಹೊಸದಾದ ಕ್ರಿಯಾರೂಪಗಳನ್ನು ಪೂರ್ತಿಕೊಟ್ಟಿದೆ. ಅವತಾರಿಕಾ, ಶ್ಲೋಕ, ಅನ್ವಯ, ಅನ್ವಯಾರ್ಥ, ತಾತ್ಪರ್ಯ, ವಿಗ್ರಹ, ಕ್ರಿಯಾರೂಪ, ವಿಶೇಷಾಂಶಗಳನ್ನು ಒಳಗೊಂಡ ಈ ಗ್ರಂಥವು ಸಂಸ್ಕೃತ ಬಾರದ ಮಾಧ್ವ ಬಂಧುಗಳಿಗೆ ಹಿಂದಿನ ಭಾಗಗಳಂತೆಯೇ ಉಪಕಾರಕವಾಗುತ್ತದೆಯೆಂದು

Rarest Archiver

ಭಾವಿಸಿದ್ದೇನೆ. ಆದರೂ ಒಬ್ಬರು ಗುರುಗಳನ್ನು ಎದುರಿಗೆ ಇಟ್ಟುಕೊಂಡು ಈ ಗ್ರಂಥವನ್ನು ಓದುವುದು ಶ್ರೇಯಸ್ಕರವಾಗಿದೆ.

ನಾಲ್ಕನೆಯ ಭಾಗವನ್ನೂ ಆದಷ್ಟು ಬೇಗನೆ ಹೊರತರಬೇಕೆಂಬ ಅತಿಶಯವಾದ ಉತ್ಕಂಠೆಯಿದೆ. **'ಭಾವಪ್ರಕಾಶಿಕಾ'** ಎಂಬ ನಾರಾಯಣ ಪಂಡಿತಾಚಾರ್ಯರ ಸುಮಧ್ವವಿಜಯವ್ಯಾಖ್ಯಾನ ಮತ್ತು ಅದರ ಅನುವಾದ ಶ್ಲೋಕಾನುಕ್ರಮಣಿಕಾ, ಕೆಲವು ಆಕ್ಷೇಪಗಳ ಸಮಾಧಾನಗಳು, ಎಂಬ ವಿಷಯಗಳನ್ನು ಒಳಗೊಂಡು ಆ ಭಾಗವನ್ನು ಹೊರತಬೇಕೆಂಬ ಆಸೆಯಿದೆ. ಕಾಗದದ ಬೆಲೆ, ಮುದ್ರಣದ ವೆಚ್ಚ ಗಗನಕ್ಕೇರಿ ದುಬಾರಿಯಾಗಿರುವ ಈ ಕಾಲದಲ್ಲಿ ಅನುವಾದಕನ ಈ ಸಾಹಸಕಾರ್ಯವನ್ನು ಮಾಧ್ವಬಂಧುಗಳು ಪ್ರೋತ್ಸಾಹಿಸುವರೆಂದು ನಂಬಿರುತ್ತೇನೆ.

ಈ ಗ್ರಂಥದ ಮುದ್ರಣಕಾರ್ಯವನ್ನು ಅಂದವಾಗಿ ನಡೆಸಿಕೊಟ್ಟ ವಿಜಯ ಮುದ್ರಣಾಲಯದ ಅಧಿಕಾರಿಗಳಿಗೆ ನನ್ನ ಕೃತಜ್ಞತೆಗಳು, ಈ ಗ್ರಂಥವನ್ನು ಕೊಂಡು ಓದುವ ಹರಿಗುರುಭಕ್ತರಿಗೆ ಸಕಲಶ್ರೇಯಸ್ಸುಗಳೂ ಕೈಗೂಡಲಿ ಎಂದು ಹಾರೈಸುತ್ತೇನೆ.

ಶುಕ್ಲ ಸಂವತ್ಸರ ಶ್ರಾವಣ ಶುಕ್ಲ
ವರಮಹಾಲಕ್ಷ್ಮೀ ನವಮೀ
೧೧-೮-೧೯೮೯ ಬೆಂಗಳೂರು

ಇತಿ ಹರಿದಾಸದಾಸ

**ಆಚಾರ್ಯ ಸಾಣೂರು ಭೀಮಭಟ್ಟರು**

Rarest Archiver

# ವಿಷಯಾನುಕ್ರಮಣಿಕಾ


| [illegible] | [illegible] | ಪುಟ |
|---|---|---|
| | **೯ನೆಯ ಸರ್ಗದ ಕಥಾಸಾರಾಂಶ** | ೧ |
| ೧ | ಬದರಿಯಿಂದ ಅನಂತಮಠಕ್ಕೆ ಆಗಮನ | ೫ |
| ೨ | ಬ್ರಹ್ಮಸೂತ್ರಭಾಷ್ಯರಚನಾ | ೧೫ |
| ೩ | ಗೋದಾವರೀತೀರದಲ್ಲಿ ಭಾಟ್ಟಾದಿಮತನಿರಾಕರಣ | ೨೫ |
| ೪ | ಗುರುಶಿಷ್ಯಸಮಾಗಮ | ೪೪ |
| ೫ | ಅಚ್ಯುತಪ್ರೇಕ್ಷರು ಶುದ್ಧವೈಷ್ಣವರಾದರು | ೪೮ |
| ೬ | ಶ್ರೀಕೃಷ್ಣಪ್ರತಿಷ್ಠಾ | ೬೧ |
| ೭ | ಗುರುಪುತ್ರವಾಸುದೇವನಿಂದ ಯಾಗಮಾಡಿಸುವುದು. | ೭೮ |
| ೮ | ಪುನಃ ಬದರಿಕಾಶ್ರಮಗಮನ, ಉಡುಪಿಗೆ ಹಿಂತಿರುಗುವುದು | ೮೩ |
| | ಮತ್ತು ಶ್ರೀಕೃಷ್ಣಧ್ಯಾನ | ೮೯ |
| ೯ | **ಹತ್ತನೆಯ ಸರ್ಗದ ಕಥಾಸಾರಾಂಶ** | ೯೧ |
| ೧೦ | ಆಚಾರ್ಯರ ಮಹಿಮೆಗಳು, ಈಶ್ವರದೇವರಾಜನ ಮೇಲೆ ಸಂಮೋಹನ ಪ್ರಯೋಗ | ೧೦೮ |
| ೧೧ | ಗಂಗಾತರಣ, ಶಿಷ್ಯರಕ್ಷಣ | ೧೧೨ |
| ೧೨ | ತುರುಷ್ಕರಾಜನು ಆಚಾರ್ಯರಿಗೆ ಅರ್ಧರಾಜ್ಯ ಪ್ರದಾನಮಾಡಿದನು | ೧೨೬ |
| ೧೩ | ಚೋರನಿಗ್ರಹ | ೧೩೦ |
| ೧೪ | ಶತಚೋರನಿಗ್ರಹ | ೧೩೨ |
| ೧೫ | ವ್ಯಾಘ್ರದೈತ್ಯನಿಗ್ರಹ | ೧೩೫ |
| ೧೬ | ಜಲಸ್ತಂಭನವಿದ್ಯೆಯಿಂದ ಗಂಗಾತರಣ | ೧೪೯ |
| ೧೭ | ಮಂಗಳಗಂಗೆಯು ಉತ್ತುಂಗಗುರುಗಳನ್ನು ಸೇವಿಸಿದಳು | ೧೫೨ |
| ೧೮ | ಮಲ್ಲಯುದ್ಧದಲ್ಲಿ ಶಿಷ್ಯಪರಾಜಯ | ೧೫೪ |
| ೧೯ | ಅಮರೇಂದ್ರಪುರಿಯತಿಯ ಪರಾಜಯ | ೧೬೧ |
| ೨೦ | ಪೂರ್ವಭೀಮಸೇನರು ಕುರುಕ್ಷೇತ್ರದಲ್ಲಿ ತನ್ನ ಗದೆಯನ್ನು ತೋರಿಸಿದರು | ೧೭೫ |


Rarest Archive

| | | |
|---|---|---|
| ೨೧ | ಹೃಷೀಕೇಶದಲ್ಲಿ ಶಿವನಿಂದ ಮಧ್ವರಿಗೆ ಭಿಕ್ಷಾಪ್ರದಾನ | ೧೭೭ |
| ೨೨ | ಇಷುಪಾತ ಮತ್ತು ಗೋವೆಗಳಲ್ಲಿ ಸಹಸ್ರಾಧಿಕ ಕದಲೀಫಲಭಕ್ಷಣ | ೧೮೦ |
| ೨೩ | ಸಂಗೀತಕಲಾನಿಪುಣ ಶ್ರೀಗುರುಮಧ್ವರು | ೧೮೪ |
| ೨೪ | **ಹನ್ನೊಂದನೆಯ ಸರ್ಗದ ಕಥಾಸಾರಾಂಶ** | **೧೯೩** |
| ೨೫ | ಶೇಷದೇವರು ಮಧ್ವಶಾಸ್ತ್ರಶ್ರವಣಾದಿ ಫಲವನ್ನು ವರ್ಣಿಸಿದರು | ೨೦೧ |
| ೨೬ | ವೈಕುಂಠಲೋಕವರ್ಣನಂ, ವೈಕುಂಠದಲ್ಲಿರುವ ಶೇಷಶಯನನ ವರ್ಣನ | ೨೦೭ |
| ೨೭ | ಮುಕ್ತವರ್ಣನಂ | ೨೧೮ |
| ೨೮ | ವೈಕುಂಠದಲ್ಲಿರುವ ನಾರಾಯಣನ ಆನಂದಜ್ಞಾನ ದೇಹದ ವರ್ಣನ, ಭಾಷ್ಯಮನನಾದಿ ಫಲಂ | ೨೩೬ |
| ೨೯ | **ಹನ್ನೆರಡನೆಯ ಸರ್ಗದ ಕಥಾಸಾರಾಂಶ** | **೨೯೯** |
| ೩೦ | ಮಾಯಾವಾದಿ ಮಂತ್ರಾಲೋಚನಂ | ೩೦೨ |
| ೩೧ | ಆಚಾರ್ಯಕೃತವೇದೋಚ್ಚಾರಣ, ಪ್ರವಚನವರ್ಣನಂ | ೩೪೧ |
| ೩೨ | ಪುಂಡರೀಕಪುರಿಯ ಪರಾಜಯ | ೩೫೩ |
| ೩೩ | ಪದ್ಮತೀರ್ಥಪರಾಜಯ-ಆಚಾರ್ಯರ ಚಾತುರ್ಮಾಸ್ಯ ವ್ರತಸ್ವೀಕಾರ | ೩೫೯ |


Rarest Archiver

|| ಶ್ರೀಃ ||

# ಶ್ರೀಸುಮಧ್ವವಿಜಯಮಹಾಕಾವ್ಯಂ

## ಒಂಭತ್ತನೆಯ ಸರ್ಗದ ಕಥಾಸಾರಾಂಶ

ನಾರಾಯಣಮುನಿಗಳಿಂದ 'ನೀನು ಭರತಭೂಮಿಗೆ ಹೋಗು; ಭಾಷ್ಯರಚನೆಯನ್ನು ಮಾಡು' ಎಂದು ಆಜ್ಞಪ್ತರಾದ ಶ್ರೀಮಧ್ವಾಚಾರ್ಯರು ವೇದವ್ಯಾಸರೊಡನೆ ಅವರ ಆಶ್ರಮಕ್ಕೆ ಬಂದರು. ಅಲ್ಲಿ ಅವರಿಂದ ಅನೇಕ ರಹಸ್ಯೋಪದೇಶಗಳನ್ನು ಪಡೆದು ಹಿಮಾಲಯಪರ್ವತದ ದಕ್ಷಿಣದ ತಪ್ಪಲಿನಲ್ಲಿರುವ ಚಿಕ್ಕಬದರಿಗೆ ಬಂದರು. ಅನಂತಮಠದಲ್ಲಿರುವ ಶಿಷ್ಯರಿಗೆ ಅವರನ್ನು ಕಂಡು ತುಂಬಾ ಸಂತೋಷವಾಯಿತು. ಆಚಾರ್ಯರು ಅಲ್ಲಿರುವಾಗಲೇ ಅಗ್ನಿಶರ್ಮಮುಂತಾದ ಐದಾರುಮಂದಿ ಬ್ರಾಹ್ಮಣರು ಒಂದೇ ದಿನ ಅರ್ಪಿಸಿದ ಭಿಕ್ಷೆಯನ್ನು ತಾನೊಬ್ಬನೇ ಸ್ವೀಕರಿಸಿದರು. ಅನಂತರ ಶ್ರೀ ಮಧ್ವಾಚಾರ್ಯರು ಹಿಂದಿನ ಇಪ್ಪತ್ತೊಂದು ಭಾಷ್ಯಗಳನ್ನೂ ಖಂಡಿಸಿ ಬ್ರಹ್ಮ ಸೂತ್ರಗಳಿಗೆ ನಿರ್ದೋಷವಾದ ಭಾಷ್ಯವನ್ನು ರಚಿಸಿದರು. ಸತ್ಯತೀರ್ಥರು ಆ ಭಾಷ್ಯವನ್ನು ಬರೆದರು.

ಅಲ್ಲಿಂದ ಶ್ರೀಮಧ್ವಾಚಾರ್ಯರು ತನ್ನ ಶಿಷ್ಯರೊಡಗೂಡಿ ಗೋದಾವರೀ ತೀರಕ್ಕೆ ಬಂದರು. ಅಲ್ಲಿ ಅನೇಕಮಂದಿ ಪಂಡಿತರು ಅವರ ಪರೀಕ್ಷೆಗಾಗಿ ಕೆಲವು ವೇದವಾಕ್ಯಗಳನ್ನು ಪ್ರಸ್ತಾಪಿಸಿದರು. ಆಚಾರ್ಯರು ಆ ವೇದವಾಕ್ಯಗಳನ್ನು ಪೂರ್ತಿಯಾಗಿ ಹೇಳಿ ಅದೇ ಸಭೆಯಲ್ಲಿ ಆ ಮಂತ್ರಗಳ ಅರ್ಥವನ್ನೂ ಹೇಳಿದರು. ಎಲ್ಲಾ ಪಂಡಿತರೂ ತಮ್ಮ ತಮ್ಮ ಶಾಖೆಯಿಂದ ಆಚಾರ್ಯರನ್ನು ಪರೀಕ್ಷಿಸಿ ಅವರನ್ನು ಗೌರವಿಸಿದರು. ಅವರನ್ನು ಸರ್ವಜ್ಞರೆಂದು ಹೊಗಳಿದರು. ಆ ಪಂಡಿತರಲ್ಲಿ ಶ್ರೇಷ್ಠರಾದ ಶೋಭನಭಟ್ಟರು ಆಚಾರ್ಯರ ಶಿಷ್ಯರಾಗಿ ಅವರಿಂದ ಭಾಷ್ಯವನ್ನು ಕೇಳಿದರು. ಅವರು ಪೂರ್ಣಪ್ರಜ್ಞರ

Rarest Archiver

ಅದ್ಭುತವಾದ ಭಾಷ್ಯವನ್ನು ಕೇಳಿದಮೇಲೆ ಮತ್ತೆ ಯಾವ ಶಾಸ್ತ್ರವನ್ನೂ ಓದಲು ಇಚ್ಛಿಸಲಿಲ್ಲ. ಆ ಶೋಭನಭಟ್ಟರು ಸಭೆಗಳಲ್ಲಿ ಆನಂದತೀರ್ಥರು ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ ಯುಕ್ತಿಗಳಿಂದ ದುರ್ವಾದಿಗಳನ್ನು ಖಂಡಿಸಿದರು.

'ಸುಣ್ಣಮಾಡುವವನೊಬ್ಬನಿಗೆ ಸಂಪತ್ಕರವಾದ ಬಲಮುರಿಶಂಖವು ಸಿಕ್ಕಿತು. ಅವನು ಸುಣ್ಣಮಾಡುವುದಕ್ಕಾಗಿ ಅದನ್ನು ಬೆಂಕಿಯಲ್ಲಿರಿಸಿ ಕಾಯಿಸಿದನು. ಆದರೆ ಅದು ಸುಟ್ಟುಹೋಗಲಿಲ್ಲ. ಪುಡಿಯಾಗಲಿಲ್ಲ. ಅವನು ಆ ಶಂಖವು ವ್ಯರ್ಥವೆಂದು ಅದನ್ನು ಎಸೆದನು. ಇವನೊಬ್ಬ ಅಧಮ ಪುರುಷನು. ಅದೃಷ್ಟವಿಲ್ಲದವರಿಗೆ ಅಂತಹ ಅಮೂಲ್ಯವಸ್ತುವಿನ ಪ್ರಯೋಜನವು ಲಭಿಸುವುದಿಲ್ಲ. ಆ ಶಂಖದ ಸ್ವರೂಪವನ್ನರಿತ ಮತ್ತೊಬ್ಬನು ಅದನ್ನು ಮಾರಿ ಅಪಾರವಾದ ಸಂಪತ್ತನ್ನು ಗಳಿಸಿದನು. ಇವನು ಮಧ್ಯಮನು. ಆ ಶಂಖವನ್ನು ಕ್ರಯಕ್ಕೆ ಪಡೆದ ಒಬ್ಬ ರಾಜನು ಬಹಳಭಕ್ತಿಯಿಂದ ಅದನ್ನು ಪೂಜಿಸುತ್ತಾ ನಿರಂತರವಾಗಿ ಅಮಿತೈಶ್ವರ್ಯ ವನ್ನು ಪಡೆಯುತ್ತಿದ್ದನು. ಇವನು ಉತ್ತಮನು. ಶ್ರೀಮಧ್ವರ ಶಾಸ್ತ್ರವೂ ಬಲಮುರಿಶಂಖದಂತೆ ಇದೆ. ಇದನ್ನು ತ್ಯಜಿಸುವವನು ಅಧಮನು. ಇದನ್ನು ಪ್ರವಚನಮಾಡಿ ಜೀವಿಸುವವನು ಮಧ್ಯಮನು. ಇದನ್ನು ಭಕ್ತಿ ಯಿಂದ ಶ್ರವಣಮಾಡುತ್ತಾ ಪೂಜಿಸುವವನು ಉತ್ತಮನು.' ಹೀಗೆ ಬಲ ಮುರಿಶಂಖದ ದೃಷ್ಟಾಂತದಿಂದ ಮಧ್ವಶಾಸ್ತ್ರದ ಮಹಿಮೆಯನ್ನು ಪ್ರಚಾರ ಗೊಳಿಸುತ್ತಾ ಶೋಭನಭಟ್ಟರು ಸಭೆಯಲ್ಲಿ ಸೇರಿದ ಜನರನ್ನು ಸಂತೋಷ ಗೊಳಿಸಿದರು. 'ಮಧ್ವಶಾಸ್ತ್ರವು ಕಲ್ಪವೃಕ್ಷಕ್ಕೆ ಸಮಾನವಾದುದು. ಇದರ ಸಂಪೂರ್ಣಫಲಲಾಭವು ಬ್ರಹ್ಮದೇವರಿಗೆ ಮತ್ತು ಬ್ರಹ್ಮದೇವರ ಪದವಿಗೆ ಬರುವವರಿಗೆ ಮಾತ್ರ ಲಭ್ಯವಾಗುವುದು' ಎಂದೂ ಅವರು ಉಪ ದೇಶಿಸಿದರು.

ಶ್ರೀಮಧ್ವಾಚಾರ್ಯರು ಗೋದಾವರೀತೀರದಿಂದ ಉಡುಪಿಗೆ ಹೋಗುತ್ತಾ ಮಾರ್ಗದಲ್ಲಿ ಅನೇಕಸಜ್ಜನರಿಗೆ ತತ್ತ್ವೋಪದೇಶವನ್ನು ಮಾಡುತ್ತಾ ಉಡುಪಿಗೆ ಬಂದರು. ಅಲ್ಲಿ ಅನಂತೇಶ್ವರದೇವರಿಗೆ ವಂದಿಸಿ,

Rarest Archiver

ಗುರುಗಳಾದ ಅಚ್ಯುತಪ್ರೇಕ್ಷರನ್ನೂ ನಮಸ್ಕರಿಸಿ ಅವರನ್ನು ಸಂತೋಷ ಗೊಳಿಸಿದರು. ಆಚಾರ್ಯರು ಮೊದಲೇ ತಾನು ರಚಿಸಿದ್ದ ಬ್ರಹ್ಮಸೂತ್ರ ಭಾಷ್ಯದ ಒಂದು ಪ್ರತಿಯನ್ನು ಜ್ಯೇಷ್ಠ ಯತಿಗಳಿಗೆ ಕಳುಹಿಸಿದ್ದರು. ಅದನ್ನು ಓದಿ ವಿಮರ್ಶಿಸಿದ್ದ ಜ್ಯೇಷ್ಠ ಯತಿಗಳು ಆಚಾರ್ಯರನ್ನೂ ಕಂಡು ಆನಂದಿಸಿದರು. ಅಚ್ಯುತಪ್ರೇಕ್ಷರು ಸಾತ್ತ್ವಿಕರಾದರೂ ಕಲಿದೋಷದಿಂದಾಗಿ ಮಾಯಾವಾದಿಮತದಲ್ಲಿದ್ದ ಪಕ್ಷಪಾತವನ್ನು ಬಿಟ್ಟಿರಲಿಲ್ಲ. ಆಚಾರ್ಯರು ವಿವಿಧಯುಕ್ತಿಗಳಿಂದ ತನ್ನ ಸಿದ್ಧಾಂತದ ಉತ್ಕರ್ಷವನ್ನು ಗುರುಗಳಿಗೆ ಬೋಧಿಸಿ ಅವರ ಮನಸ್ಸಿನಿಂದ ಕಲಿಯನ್ನು ದೂರಗೊಳಿಸಿದರು. ಆಗ ಅಚ್ಯುತಪ್ರೇಕ್ಷರು ಆಚಾರ್ಯರ ಸಿದ್ಧಾಂತವೇ ಶ್ರೇಷ್ಠವೆಂದು ನಿರ್ಣಯಿಸಿದರು ಮತ್ತು ಭಾಷ್ಯದ ಶ್ರವಣಾವೃತ್ತಿಯನ್ನೂ ಮನನಾವೃತ್ತಿಯನ್ನೂ ಮಾಡುತ್ತಾ ಆನಂದಿಸಿದರು. ಅನಂತರ ಅವರೂ ಜ್ಯೇಷ್ಠ ಯತಿಗಳೂ ಆಚಾರ್ಯರ ಸಿದ್ಧಾಂತವನ್ನು ಹಗಲಿರುಳು ಶಿಷ್ಯರಿಗೆ ಬೋಧಿಸಿದರು. ಶ್ರೀಮಧ್ವರು ತನ್ನ ಶಾಸ್ತ್ರವೆಂಬ ಸುದರ್ಶನವನ್ನು ಜನರಿಗೆ ಬೋಧಿಸಿ, ಸಜ್ಜನರಿಗೆ ಸುದರ್ಶನ ಚಕ್ರಾಂಕನವನ್ನು ಅನುಗ್ರಹಿಸಿದರು.

ಅನಂತರ ಒಂದಾನೊಂದುದಿನ ಆಚಾರ್ಯರು ಸಜ್ಜನರಿಗೆ ಸಿದ್ಧಿವಿಘ್ನವನ್ನು ಪರಿಹರಿಸಲು ಶ್ರೀಕೃಷ್ಣನನ್ನು ಉಡುಪಿಯಲ್ಲಿ ಪ್ರತಿಷ್ಠಿಸಲು ನಿಶ್ಚಯಿಸಿದರು. ಅವರು ಪಶ್ಚಿಮಸಮುದ್ರತೀರಕ್ಕೆ ಹೋಗಿ ಶ್ರೀಕೃಷ್ಣ ಪ್ರತಿಮೆಯನ್ನು ತರಿಸಿ, ಮೂರು-ನಾಲ್ಕು ಮಂದಿ ಶಿಷ್ಯರಿಂದ ಅದನ್ನು ತೊಳೆಯಿಸಿ ಜಲಾಧಿವಾಸ ಮಾಡಿಸಿದರು. ತನ್ನ ಸ್ಪರ್ಶದಿಂದ ಮೂವತ್ತು ಮಂದಿ ಬಲಿಷ್ಠರಾದ ಶಿಷ್ಯರಿಗೂ ಎತ್ತಲು ಅಸಾಧ್ಯವಾದ ಆ ಪ್ರತಿಮೆಯನ್ನು ತಾನೊಬ್ಬನೇ ಎತ್ತಿ ತಂದು ತನ್ನ ಮಠದಲ್ಲಿ ಶಾಸ್ತ್ರೋಕ್ತವಾದ ವಿಧಿಯಿಂದ ಪ್ರತಿಷ್ಠೆಮಾಡಿದರು. ಮರಡಿತ್ತಾಯನೆಂಬವನು ತಾನೇ ಯಾಗಮಾಡಲು ಸಮರ್ಥನೆಂದು ಅಹಂಕಾರ ಪಡುತ್ತಿದ್ದನು. ಆಚಾರ್ಯರು ಅವನನ್ನು ಖಂಡಿಸಿ ತನ್ನ ದಿಗ್ದರ್ಶನದಲ್ಲಿ, ತಮ್ಮ ವೇದೋಪಾಧ್ಯಾಯರ ಮಗನಾದ ವಾಸುದೇವನಿಂದ ಯಾಗವನ್ನು ಮಾಡಿಸಿದರು. ಆ ಯಾಗದಲ್ಲಿ ಅವರ ತಮ್ಮನೇ ಹೋತೃವಾಗಿದ್ದನು. ವೇದದಲ್ಲಿ ಯಾಗಾದಿಕರ್ಮಗಳಿಗೆ ನಶ್ವರ

Rarest Archiver

ವಾದ ಸ್ವರ್ಗಾದಿಗಳೇ ಫಲವೆಂದು ಹೇಳಿದ್ದರೂ ಮುಮುಕ್ಷುಗಳು ಸ್ವರ್ಗಾದಿ ಫಲಗಳನ್ನು ಬಯಸದೆ, ಪರಮಾತ್ಮನ ಪ್ರೀತಿಗಾಗಿ ತಮ್ಮ ಅಧಿಕಾರಕ್ಕೆ ತಕ್ಕಂತೆ ಯಾಗಾದಿಕರ್ಮವನ್ನು ಮಾಡುವುದೂ ಮೋಕ್ಷಸಾಧನವೆಂದು ಆಚಾರ್ಯರು ಇದರಿಂದ ತಿಳಿಯಪಡಿಸಿದರು.

ಹೀಗೆ ಶ್ರೀಪೂರ್ಣಪ್ರಜ್ಞರ ಕಾರ್ಯಗಳೂ, ಪ್ರವಚನಗಳೂ, ಶಾಸ್ತ್ರಗಳೂ ಸಜ್ಜನಾನಂದಕರವಾಗಿ ಅದ್ಭುತವಾಗಿದ್ದುವು. ಅವರು ಅನಂತರ ಹಿಂದಿನಂತೆಯೇ ಗೋದಾವರ್ಯಾದಿನದಿಗಳನ್ನು ದಾಟಿ ಶ್ರೀವೇದವ್ಯಾಸರಿಗೆ ಪ್ರಿಯವಾದ ಬದರಿಕಾಶ್ರಮಕ್ಕೆ ಮತ್ತೊಮ್ಮೆ ಹೋದರು. ಹಿಂದೆ ಹನುಮಂತನಾಗಿದ್ದಾಗ ಆಚಾರ್ಯರು ಮಾಡಿದ ಸೇವೆಗೆ ಮೆಚ್ಚಿ ರಾಮದೇವರು ಅವರಿಗೆ ಸಹಭೋಗವೆಂಬ ಶ್ರೇಷ್ಠವಾದ ಐಶ್ವರ್ಯವನ್ನು ಕೊಟ್ಟಿದ್ದರು. ಈಗ ತನಗೆ ಪ್ರಿಯವಾದ ಸಿದ್ಧಾಂತಪ್ರಚಾರಾದಿಕಾರ್ಯಗಳನ್ನು ಮಾಡಿದ ಆನಂದತೀರ್ಥರಿಗೆ ರಾಮಾಭಿನ್ನರಾದ ಶ್ರೀವೇದವ್ಯಾಸದೇವರು ಆ ಸಹಭೋಗವನ್ನೇ ಅಧಿಕವನ್ನಾಗಿಮಾಡಿದರು. ಶ್ರೀಪೂರ್ಣಪ್ರಜ್ಞರು ಬದರಿಕಾಶ್ರಮದಲ್ಲಿ ವೇದವ್ಯಾಸರನ್ನು ವಂದಿಸಿ, ಅವರ ಅಪ್ಪಣೆಯನ್ನು ಶಿರಸಾ ವಹಿಸಿ ಪರಿವಾರಸಮೇತರಾಗಿ ಪುನಃ ಉಡುಪಿಗೆ ಬಂದು ಶ್ರೀಕೃಷ್ಣ ಮತ್ತು ಅನಂತೇಶ್ವರರಿಗೆ ವಂದಿಸಿದರು. ಅಲ್ಲಿದ್ದ ಭಕ್ತರೆಲ್ಲರೂ ಆಚಾರ್ಯರನ್ನು ಅಭಿನಂದಿಸಿದರು.

Rarest Archive

॥ ಶ್ರೀಃ ॥

# ಶ್ರೀಸುಮಧ್ವವಿಜಯಮಹಾಕಾವ್ಯಮ್

## ಒಂಭತ್ತನೆಯ ಸರ್ಗ

ಭಾಷ್ಯನಿರ್ಮಾಣ, ಶಿಷ್ಯಸಂಗ್ರಹ ಮತ್ತು ಶ್ರೀಕೃಷ್ಣಪ್ರತಿಷ್ಠಾ.

**ಅವತಾರಿಕಾ :**—ನಾರಾಯಣಮುನಿಗಳಿಂದ 'ಭರತಖಂಡಕ್ಕೆ ಹಿಂದಿರುಗಿ ಸೂತ್ರಭಾಷ್ಯಾದಿಗಳನ್ನು ರಚಿಸು' ಎಂದು ಆಜ್ಞಪ್ತರಾದ ಆಚಾರ್ಯರು ಮುಂದೆ ಏನು ಮಾಡಿದರೆಂದು ಹೇಳುತ್ತಾರೆ—

**ಚೋದಯಂತಮಥ ಗಂತುಮಾದರಾತ್**
**ತತ್ರ ಧರ್ಮಜಮಜಂ ಪ್ರಣಮ್ಯ ಸಃ ।**
**ಸೌಖ್ಯತೀರ್ಥಕವಿಲೋಕನಾಯಕೋ**
**ವೇದನಾಯಕಪುರಸ್ಸರೋ ಯಯೌ** ॥೧॥

**ಅನ್ವಯ :**—ಅಥ, ಸಃ, ಸೌಖ್ಯತೀರ್ಥಕವಿಲೋಕನಾಯಕಃ, ತತ್ರ, ಗಂತುಂ ಚೋದಯಂತಂ ಅಜಂ ಧರ್ಮಜಂ ಆದರಾತ್ ಪ್ರಣಮ್ಯ ವೇದನಾಯಕ ಪುರಸ್ಸರಃ ಸನ್ ಯಯೌ.

**ಅನ್ವಯಾರ್ಥ :**—ಅಥ = ಅನಂತರ, ಸಃ=ನಾರಾಯಣಮುನಿಗಳಿಂದ ಆಜ್ಞಪ್ತರಾದ, ಸೌಖ್ಯತೀರ್ಥ = ಆನಂದತೀರ್ಥರೆಂಬ, ಕವಿಲೋಕನಾಯಕಃ = ಜ್ಞಾನಿಶ್ರೇಷ್ಠರು, ತತ್ರ = ಆ ನರನಾರಾಯಣಾಶ್ರಮದಲ್ಲಿ, ಗಂತುಂ = ಹಿಂತಿರುಗಿ ಹೋಗುವುದಕ್ಕೆ, ಚೋದಯಂತಂ = ಪ್ರೇರಿಸುತ್ತಿರುವ, ಅಜಂ = ಉತ್ಪತ್ತಿರಹಿತರಾದ, ಧರ್ಮಜಂ=ಧರ್ಮಪ್ರಜೇಶ್ವರನ ಮಗನಾದ ನಾರಾಯಣ ಮುನಿಗಳನ್ನು, ಆದರಾತ್ = ಭಕ್ತಿಯಿಂದ, ಪ್ರಣಮ್ಯ = ವಂದಿಸಿ, ವೇದ

Rarest Archiver

ನಾಯಕ = ಶ್ರೀವೇದವ್ಯಾಸರೇ, ಪುರಸ್ಸರಃ (ಸನ್) = ಮುಂದಾಳಾಗಿ ಉಳ್ಳವರಾಗಿ, ಯಯೌ = (ನಾರಾಯಣಾಶ್ರಮದಿಂದ ವ್ಯಾಸಾಶ್ರಮವನ್ನು ಕುರಿತು) ಹೊರಟರು.

**ತಾತ್ಪರ್ಯ :**—ಶ್ರೀನಾರಾಯಣಮುನಿಗಳು 'ಎಲೈ! ಆನಂದತೀರ್ಥನೇ! ನೀನು ಸೂತ್ರಭಾಷ್ಯಾದಿಗಳನ್ನು ರಚಿಸು, ಸಜ್ಜನರಿಗೆ ಜ್ಞಾನೋಪದೇಶವನ್ನು ಮಾಡು' ಎಂದು ಅಪ್ಪಣೆಮಾಡಿದನಂತರ ಜ್ಞಾನಿಶ್ರೇಷ್ಠರಾದ ಶ್ರೀಮದಾನಂದ ತೀರ್ಥರು ತನ್ನನ್ನು ಭರತಖಂಡಕ್ಕೆ ಹಿಂದಿರುಗಿ ಹೋಗಲು ಪ್ರೇರಿಸುತ್ತಿರುವ ಉತ್ಪತ್ತಿರಹಿತರಾದ, ಧರ್ಮಪ್ರಜೇಶ್ವರನ ಪುತ್ರರಾದ ನಾರಾಯಣಮುನಿಗಳನ್ನು ಭಕ್ತಿಯಿಂದ ವಂದಿಸಿದರು. ಅನಂತರ ತನ್ನ ಗುರುಗಳಾದ ವೇದವ್ಯಾಸ ದೇವರನ್ನು ಮುಂದಿಟ್ಟುಕೊಂಡು ನಾರಾಯಣಾಶ್ರಮದಿಂದ ಬದರಿಕಾಶ್ರಮವನ್ನು ಕುರಿತು ಹೋದರು.

**ವಿಗ್ರಹ :**—ಧರ್ಮಾತ್ ಜಾಯತೇ ಇತಿ ಧರ್ಮಜಃ, ತಂ, ನ ಜಾಯತೇ ಇತಿ ಅಜಃ ತಂ, ಸುಖಮೇವ ಸೌಖ್ಯಂ, ಸೌಖ್ಯಂ (–ಕರಂ) ತೀರ್ಥಂ ಯಸ್ಮಾತ್ ಸಃ ಸೌಖ್ಯತೀರ್ಥಃ, ಕವಯಶ್ಚ ತೇ ಲೋಕಾಶ್ಚ ಕವಿಲೋಕಾಃ, ಕವಿಲೋಕಾನಾಂ ನಾಯಕಃ ಕವಿಲೋಕನಾಯಕಃ. ಸೌಖ್ಯತೀರ್ಥ ಇತಿ ಕವಿಲೋಕನಾಯಕಃ ಸೌಖ್ಯತೀರ್ಥ ಕವಿಲೋಕನಾಯಕಃ, ವೇದಾನಾಂ ನಾಯಕಃ ವೇದನಾಯಕಃ ಸಃ ಪುರಸ್ಸರಃ ಯಸ್ಯ ಸಃ ವೇದನಾಯಕಪುರಸ್ಸರಃ.

**ಕ್ರಿಯಾಪದ :**—ಯಯೌ ಯಯತುಃ ಯಯುಃ ಯಾ - ಪ್ರಾಪಣೇ, ಲಿಟ್.

**ವೃತ್ತ :**—'ರಾನ್ನರಾವಿಹ ರಥೋದ್ಧತಾ ಲಗೌ' ಎಂಬ ಲಕ್ಷಣದಂತೆ ಐವತ್ತೆರಡನೆಯ ಶ್ಲೋಕದ ವರೆಗೆ ರಥೋದ್ಧತಾವೃತ್ತವು.

**ಅವ :**—ಬದರಿಕಾಶ್ರಮಕ್ಕೆ ಹೋದಮೇಲೆ ಆಚಾರ್ಯರು ಏನು ಮಾಡಿದರೆಂದು ಹೇಳುತ್ತಾರೆ —

**ಆಶ್ರಮಾಂತರಮವಾಪ್ಯ ಕೃಷ್ಣತಃ**
**ಶ್ರಾವ್ಯಮೇಷ ಸಕಲಂ ಚ ಶುಶ್ರುವಾನ್ ।**

Rarest Archives

**ಚಿತ್ತವೃತ್ತಿಮನುವೃತ್ತಿಮಾನ್ ಗುರೋಃ**
**ಸಾಧ್ವವೇತ್ಯ ಗಮನೋನ್ಮುಖೋಽಭವತ್** ||೨||

**ಅ :**—ಏಷಃ ಆಶ್ರಮಾಂತರಮ್ ಅವಾಪ್ಯ ಗುರೋಃ ಚಿತ್ತವೃತ್ತಿಂ ಸಾಧು ಅವೇತ್ಯ ಅನುವೃತ್ತಿಮಾನ್ (ಸನ್) ಕೃಷ್ಣತಃ ಸಕಲಂ ಚ ಶ್ರಾವ್ಯಂ ಶುಶ್ರುವಾನ್ ಗಮನೋನ್ಮುಖಃ ಅಭವತ್.

**ಅರ್ಥ :**—ಏಷಃ = ಈ ಮಧ್ವಾಚಾರ್ಯರು, ಆಶ್ರಮಾಂತರಂ = ವೇದವ್ಯಾಸಾಶ್ರಮವನ್ನು, ಅವಾಪ್ಯ = ಹೊಂದಿ, ಗುರೋಃ = ಗುರುಗಳಾದ ಶ್ರೀವ್ಯಾಸರ, ಚಿತ್ತವೃತ್ತಿಂ = ಮನೋವ್ಯಾಪಾರವನ್ನು, ಸಾಧು = ಚೆನ್ನಾಗಿ, ಅವೇತ್ಯ = ತಿಳಿದು, ಅನುವೃತ್ತಿಮಾನ್ (ಸನ್) = ಅನುಸರಣಮಾಡುವವರಾಗಿ, ಕೃಷ್ಣತಃ = ಶ್ರೀವೇದವ್ಯಾಸರಿಂದ, ಸಕಲಂ ಚ=ಎಲ್ಲಾ, ಶ್ರಾವ್ಯಂ = ಕೇಳತಕ್ಕ ವಿಷಯವನ್ನು, ಶುಶ್ರುವಾನ್ (ಸನ್)=ಕೇಳಿದವರಾಗಿ, ಗಮನೋನ್ಮುಖಃ = ದಕ್ಷಿಣಬದರಿಗೆ ಹೋಗಲು ಅಭಿಮುಖರು, ಅಭವತ್ = ಆದರು.

**ತಾ :**— ಈ ಮಧ್ವಾಚಾರ್ಯರು ನಾರಾಯಣಾಶ್ರಮದಿಂದ ವೇದವ್ಯಾಸಾಶ್ರಮಕ್ಕೆ ಹೋದರು. ಅಲ್ಲಿ ಗುರುಗಳ ಶುಶ್ರೂಷೆ, ಅನುಸರಣಗಳನ್ನು ಮಾಡುತ್ತಾ ಕೇಳಬೇಕಾದ ಎಲ್ಲಾ ವಿಷಯವನ್ನು ಶ್ರವಣಮಾಡಿದರು. ಗುರುಗಳ ಅಭಿಪ್ರಾಯವನ್ನು ಅನುಸರಿಸಿ ಅಲ್ಲಿಂದ ಹೊರಡಲು ಉದ್ಯುಕ್ತರಾದರು.

**ವಿ :**—ಅನ್ಯಃ ಆಶ್ರಮಃ ಆಶ್ರಮಾಂತರಂ ತತ್, ಶ್ರೋತುಂ ಯೋಗ್ಯಂ ಶ್ರಾವ್ಯಂ ತತ್. ಶುಶ್ರುವಸ್ (ಸಕಾರಾಂತ) ಶಬ್ದವು ಶುಶ್ರುವಾನ್ ಶುಶ್ರುವಾಂಸೌ, ಶುಶ್ರುವಾಂಸಃ. ಚಿತ್ತಸ್ಯ ವೃತ್ತಿಃ ಚಿತ್ತವೃತ್ತಿಃ ತಾಂ, ಅನುವೃತ್ತಿಃ ಅಸ್ಯ ಅಸ್ತೀತಿ ಅನುವೃತ್ತಿಮಾನ್, ಗಮನೇ ಉನ್ಮುಖಃ ಗಮನೋನ್ಮುಖಃ, ಕೃಷ್ಣ = ವೇದವ್ಯಾಸರು. ವ್ಯಾಸಾರ್ಜುನಾಗ್ನಿ ಹರಿಕೋಕಿಲಕಾಕಶೂದ್ರತಾಮಿಸ್ರಪಕ್ಷಕಲಿನೀಲಗುಣೇಷು ಕೃಷ್ಣಃ—**ಭಾಸ್ಕರಕೋಶ.**

**ಅವ :**—ಆಚಾರ್ಯರು ಗುರುಗಳನ್ನು ನಮಸ್ಕರಿಸಿ ಭರತಭೂಮಿಗೆ ಹೊರಟರು ಎಂದು ಹೇಳುತ್ತಾರೆ—

Rarest Archiver

**ಮಂದಹಾಸಮೃದುಸುಂದರಾನನಂ**
**ವಂದನೀಯಮಭಿವಂದ್ಯ ಸತ್ಪತಿಂ ।**
**ಪ್ರಾಜ್ಞಮೌಳಿಮಣಿರಭ್ಯನುಜ್ಞಯಾ**
**ತಸ್ಯ ತಾವದಗಮನ್ಮಹಾಮತಿಃ ॥೩॥**

ಅ :—ಪ್ರಾಜ್ಞಮೌಳಿಮಣಿಃ ಮಹಾಮತಿಃ ಮಂದಹಾಸಮೃದು-ಸುಂದರಾನನಂ ವಂದನೀಯಂ ಸತ್ಪತಿಂ ಅಭಿವಂದ್ಯ, ತಸ್ಯ ಅಭ್ಯನುಜ್ಞಯಾ ತಾವತ್ ಅಗಮತ್.

ಅರ್ಥ :—ಪ್ರಾಜ್ಞಮೌಲಿಮಣಿಃ = ಜ್ಞಾನಿಶಿರೋಮಣಿಗಳಾದ, ಮಹಾಮತಿಃ = ಪೂರ್ಣಜ್ಞಾನವುಳ್ಳ ಶ್ರೀಮಧ್ವಾಚಾರ್ಯರು, ಮಂದಹಾಸ = ಮುಗುಳ್ನಗೆಯುಳ್ಳ, ಮೃದು = ಕೋಮಲವಾದ, ಸುಂದರಾನನಂ = ಸುಂದರವಾದ ಮುಖವುಳ್ಳ, ವಂದನೀಯಂ = ನಮಸ್ಕರಿಸಲು ಮತ್ತು ಸ್ತುತಿಸಲು ಅರ್ಹರಾದ, ಸತ್‌ಪತಿಂ = ಸಜ್ಜನರಿಗೆ ಸ್ವಾಮಿಯಾದ ಶ್ರೀವೇದವ್ಯಾಸರನ್ನು, ಅಭಿವಂದ್ಯ = ನಮಸ್ಕರಿಸಿ, ಸ್ತುತಿಸಿ, ತಸ್ಯ = ಆ ವೇದವ್ಯಾಸದೇವರ, ಅಭ್ಯ-ನುಜ್ಞಯಾ ತಾವತ್ = ಅಂಗೀಕಾರದಿಂದಲೇ, ಅಗಮತ್ = ಹೊರಟರು.

ತಾ:—ಮುಗುಳ್ನಗೆಯುಳ್ಳ ಸುಂದರವಾದ, ಹಾಗೂ ಕೋಮಲವಾದ ಮುಖವುಳ್ಳ, ನಮಸ್ಕರಿಸಲು ಮತ್ತು ಸ್ತುತಿಸಲು ಯೋಗ್ಯರಾದ, ಸಜ್ಜನರಿಗೆ ಸ್ವಾಮಿಯಾದ ಶ್ರೀವೇದವ್ಯಾಸರನ್ನು ಜ್ಞಾನಿಶ್ರೇಷ್ಠರಾದ ಶ್ರೀ ಮಧ್ವಾಚಾರ್ಯರು ನಮಸ್ಕರಿಸಿದರು ಅನಂತರ ಅವರ ಅನುಮತಿಯಿಂದಲೇ ಬದರಿಕಾಶ್ರಮದಿಂದ ಹೊರಟರು.

ವಿ:—ಮಂದಃ ಹಾಸಃ ಯಸ್ಮಿನ್ ತತ್ ಮಂದಹಾಸಂ, ಮೃದು ಚ ತತ್ ಸುಂದರಂ ಚ ಮೃದುಸುಂದರಂ, ಮೃದುಸುಂದರಂ ಚ ತತ್ ಆನನಂ ಚ ಮೃದುಸುಂದರಾನನಂ, ಮಂದಹಾಸಂ ಮೃದುಸುಂದರಾನನಂ ಯಸ್ಯ ಸಃ ತಂ, ಸತಾಂ ಪತಿಃ ಸತ್‌ಪತಿಃ ತಂ, ಮೌಲೇಃ ಮಣಿರಿವ ಮೌಲಿಮಣಿಃ, ಪ್ರಾಜ್ಞಾನಾಂ ಮೌಲಿಮಣಿಃ ಪ್ರಾಜ್ಞಮೌಲಿಮಣಿಃ, ಮಹತೀ ಮತಿಃ ಯಸ್ಯ ಸಃ ಮಹಾಮತಿಃ.

Rarest Archive

**ಕ್ರಿ:**—ಅಗಮತ್ ಅಗಮತಾಂ ಅಗಮನ್. ಗಮ್ಲೃ ಗತೌ. ಪರ. ಲುಙ್.

**ಅವ:**—ಶ್ರೀಮಧ್ವಾಚಾರ್ಯರು ಗುರುಗಳನ್ನು ಬಿಟ್ಟು ಹೊರಟರೂ ಅವರಿಗೆ ಗುರುಗಳ ವಿಯೋಗವುಂಟಾಗಲಿಲ್ಲವೆಂದು ಹೇಳುತ್ತಾರೆ—

**ತಸ್ಯ ವಲ್ಲಭತಮಾಸ ವಾಸಭೂ-**
**ರ್ಮಾನಸಾತ್ ಪೃಥುಲಮಾನಸಸ್ಯ ನೋ ।**
**ನಾತ್ಯಜತ್ ಕ್ಷಣಮಪಿ ಹ್ಯಸಾವಿದಂ**
**ನೈಷ ನಾಥವಿರಹೀ ತತೋಽಭವತ್ ॥೪॥**

**ಅ:**—ತಸ್ಯ ಪೃಥುಲಮಾನಸಸ್ಯ ಮಾನಸಾತ್ (ಅನ್ಯಾ) ವಲ್ಲಭತಮಾ ವಾಸಭೂಃ ನೋ ಆಸ, ಹಿ ಅಸೌ ಇದಂ ಕ್ಷಣಂ ಅಪಿ ನ ಅತ್ಯಜತ್, ತತಃ ಏಷಃ ನಾಥವಿರಹೀ ನ ಅಭವತ್.

**ಅರ್ಥ:**—ತಸ್ಯ=ಆ ವೇದವ್ಯಾಸರಿಗೆ, ಪೃಥುಲಮಾನಸಸ್ಯ=ಶ್ರೀ ಪೂರ್ಣಪ್ರಜ್ಞರ, ಮಾನಸಾತ್=ಮನಸ್ಸಿಗಿಂತ (ಅನ್ಯಾ=ಬೇರೆಯಾದ) ವಲ್ಲಭತಮಾ=ಅತ್ಯಂತ ಪ್ರಿಯವಾದ, ವಾಸಭೂಃ=ವಾಸಸ್ಥಾನವು, ನೋ ಆಸ=ಇರಲಿಲ್ಲ. ಹಿ=ಯಾವ ಕಾರಣದಿಂದ, ಅಸೌ=ಈ ವೇದವ್ಯಾಸರು, ಇದಂ=ಶ್ರೀಮಧ್ವರ ಈ ಮನಸ್ಸನ್ನು, ಕ್ಷಣಂ ಅಪಿ=ಸ್ವಲ್ಪಹೊತ್ತೂ, ನ ಅತ್ಯಜತ್=ಬಿಡಲಿಲ್ಲವೋ, ತತಃ=ಆದುದರಿಂದ, ಏಷಃ=ಈ ಮಧ್ವರು, ನಾಥವಿರಹೀ=ಸ್ವಾಮಿಯಾದ ಶ್ರೀವೇದವ್ಯಾಸದೇವರ ವಿಯೋಗಉಳ್ಳವರು, ನ ಅಭವತ್=ಆಗಲಿಲ್ಲ.

**ತಾ:**—ಶ್ರೀಪೂರ್ಣಪ್ರಜ್ಞಾಚಾರ್ಯರ ಮನಸ್ಸು ಶ್ರೀವೇದವ್ಯಾಸರಿಗೆ ಅತ್ಯಂತಪ್ರೀತಿಪಾತ್ರವಾದ ಆವಾಸಸ್ಥಾನವಾಗಿತ್ತು. ವ್ಯಾಸರಿಗೆ ಆಚಾರ್ಯರ ಅಂತಃಕರಣಕ್ಕಿಂತ ಪ್ರೀತಿಪಾತ್ರವಾದ ವಾಸಸ್ಥಾನವು ಬೇರೊಂದಿರಲಿಲ್ಲ. ಶ್ರೀವೇದವ್ಯಾಸರು ಆಚಾರ್ಯರ ಮನಸ್ಸನ್ನು ಒಂದು ಕ್ಷಣವೂ ಬಿಡುತ್ತಿರಲಿಲ್ಲ. ಆದುದರಿಂದ ವೇದವ್ಯಾಸರನ್ನು ಬಿಟ್ಟು ಹೊರಡುತ್ತಿದ್ದರೂ ಆಚಾರ್ಯರಿಗೆ ವೇದವ್ಯಾಸರ ವಿಯೋಗವು ಉಂಟಾಗಲಿಲ್ಲ. ಶ್ರೀಮಧ್ವರ

Rarest Archiver

ಅಂತಃಕರಣದಲ್ಲಿ ವೇದವ್ಯಾಸರು ಯಾವಾಗಲೂ ಸಂನಿಹಿತರಾಗಿದ್ದರು. ಆಚಾರ್ಯರು ಯಾವಾಗಲೂ ವೇದವ್ಯಾಸರ ಧ್ಯಾನಮಾಡುತ್ತಾ ಇದ್ದರು. ಆದುದರಿಂದ ಆಚಾರ್ಯರಿಗೆ ವೇದವ್ಯಾಸರ ವಿಯೋಗವುಂಟಾಗಲಿಲ್ಲ.

**ವಿ:**—ಅತಿಶಯೇನ ವಲ್ಲಭಾ ವಲ್ಲಭತಮಾ, ವಾಸಸ್ಯ ಭೂಃ ವಾಸಭೂಃ, ಪೃಥುಲಂ ಮಾನಸಂ ಯಸ್ಯ ಸಃ ಪೃಥುಲಮಾನಸಃ ತಸ್ಯ, ನಾಥಸ್ಯ ವಿರಹಃ ನಾಥವಿರಹಃ ಸಃ ಅಸ್ಯ ಅಸ್ತೀತಿ ನಾಥವಿರಹೀ.

**ಕ್ರಿ:** —ಆಸ—ಇದು ತಿಙಂತಪ್ರತಿರೂಪಕ (ಕ್ರಿಯಾಪದದಂತೆ ಕಾಣಿಸುವ) ಅವ್ಯಯವು. ಅಥವಾ ಅಸ ಗತಿದೀಪ್ತ್ಯಾದಾನೇಷು ಎಂಬ ಉಭಯಪದಿಧಾತುವಿನ ಪರ. ಲಿಟ್‌ರೂಪ. ಧಾತುಗಳಿಗೆ ಅನೇಕಾರ್ಥವಿರುವುದರಿಂದ ಇಲ್ಲಿ ಸತ್ತಾರ್ಥಕವಾಗಿದೆ ಎಂದು ಹೇಳಬೇಕು. ಆಸ ಆಸತುಃ ಆಸುಃ ಇತ್ಯಾದಿ ರೂಪ. ಅತ್ಯಜತ್ ಅತ್ಯಜತಾಂ ಅತ್ಯಜನ್ ತ್ಯಜ ಹಾನೌ ಪರ. ಲಙ್.

**ಅವ:**—ಆಚಾರ್ಯರು ಉತ್ತರಬದರಿಯಿಂದ ಬಂದು ಹಿಮಾಲಯ ಪರ್ವತದಿಂದ ಇಳಿದರೀತಿಯನ್ನು ವರ್ಣಿಸುತ್ತಾರೆ.

**ವೀರದೃಷ್ಟಿಕೃತಸಿಂಹವಿಭ್ರಮಃ**
**ಶಾಂತದೃಷ್ಟಿಕೃತಶಾಂತಸಂಮುದಃ ।**
**ತತ್ರ ತತ್ರ ಪಥಿ ಪಥ್ಯವಿಭ್ರಮಃ**
**ಪರ್ವತಾದವತತಾರ ಸರ್ವಧೀಃ ॥೫॥**

**ಅ:** — ವೀರದೃಷ್ಟಿಕೃತಸಿಂಹವಿಭ್ರಮಃ ಶಾಂತದೃಷ್ಟಿಕೃತಶಾಂತಸಂಮುದಃ ತತ್ರ ತತ್ರ ಪಥಿ ಪಥ್ಯವಿಭ್ರಮಃ ಸರ್ವಧೀಃ ಪರ್ವತಾತ್ ಅವತತಾರ.

**ಅರ್ಥ:**—ವೀರ = ಕ್ರೂರಪ್ರಾಣಿಗಳ, ದೃಷ್ಟಿ = ಕಣ್ಣುಗಳಿಗೆ, ಕೃತ = ಮಾಡಲ್ಪಟ್ಟ, ಸಿಂಹವಿಭ್ರಮಃ = ಸಿಂಹದ ವಿಲಾಸವುಳ್ಳ, ಶಾಂತ = ಸೌಮ್ಯವಾದ, ದೃಷ್ಟಿ = ನೋಟಗಳಿಂದ, ಕೃತ = ಮಾಡಲ್ಪಟ್ಟ, ಶಾಂತಸಂಮುದಃ = ಸಾಧುಪ್ರಾಣಿಗಳ ಸಂತೋಷವುಳ್ಳ, ತತ್ರ ತತ್ರ = ಆಯಾ

Rarest Archiver

ಸ್ಥಲವಿಶೇಷರೂಪವಾದ, ಪಥಿ = ದಾರಿಯಲ್ಲಿ, ಪಥ್ಯ = ಉಚಿತವಾದ, ವಿಭ್ರಮಃ = ವಿಲಾಸವುಳ್ಳ, ಸರ್ವಧೀಃ = ಶ್ರೀಪೂರ್ಣಪ್ರಜ್ಞರು, ಪರ್ವತಾತ್ = ಹಿಮಾಲಯದಿಂದ, ಅವತತಾರ = ಇಳಿದರು.

**ತಾ:** — ಶ್ರೀಮಧ್ವಾಚಾರ್ಯರು ಹಿಮಾಲಯದಿಂದ ಕೆಳಗಿಳಿದು ಬರುವದಾರಿಯಲ್ಲಿ ಅಲ್ಲಲ್ಲಿ ಸಿಂಹ, ಹುಲಿ ಮುಂತಾದ ಕ್ರೂರಮೃಗಗಳಿದ್ದುವು. ಅವುಗಳ ಕಣ್ಣುಗಳಿಗೆ ಆಚಾರ್ಯರು ಸಿಂಹದಂತೆ ಭಯಂಕರವಾಗಿಯೇ ಕಾಣುತ್ತಿದ್ದರು. ದಾರಿಯಲ್ಲಿ ಅಲ್ಲಲ್ಲಿ ಓಡಾಡುತ್ತಿದ್ದ, ಜಿಂಕೆ, ಮೊಲ ಮುಂತಾದ ಸಾಧುಪ್ರಾಣಿಗಳಿಗೆ ತಮ್ಮ ಸೌಮ್ಯದೃಷ್ಟಿಯಿಂದ ಆನಂದವನ್ನುಂಟುಮಾಡುತ್ತಿದ್ದರು. ಹೀಗೆ ದಾರಿಯಲ್ಲಿ ಅವರು ಆಯಾ ಪ್ರಾಣಿಗಳಿಗೆ ತಕ್ಕ ರೀತಿಯಲ್ಲಿ ತನ್ನ ನೋಟ ವಿಲಾಸಗಳಿಂದ ಕೂಡಿದವರಾಗಿ ಪರ್ವತದಿಂದ ಇಳಿದರು.

**ವಿ:** — ವೀರಾಣಾಂ ದೃಷ್ಟಯಃ ವೀರದೃಷ್ಟಯಃ, ವೀರದೃಷ್ಟೀನಾಂ ಕೃತಃ ಸಿಂಹಸ್ಯ ವಿಭ್ರಮಃ ಯೇನ ಸಃ ವೀರದೃಷ್ಟಿಕೃತಸಿಂಹವಿಭ್ರಮಃ, ಶಾಂತಾ ಚ ಸಾ ದೃಷ್ಟಿಶ್ಚ ಶಾಂತದೃಷ್ಟಿಃ, ಶಾಂತದೃಷ್ಟ್ಯಾ ಕೃತಃ ಶಾಂತಾನಾಂ ಸಂಮದಃ ಯೇನ ಸಃ ಶಾಂತದೃಷ್ಟಿಕೃತಶಾಂತಸಂಮದಃ, ಪಥಃ ಅನಪೇತಃ ಪಥ್ಯಃ, ಪಥ್ಯಃ ವಿಭ್ರಮಃ ಯಸ್ಯ ಸಃ ಪಥ್ಯವಿಭ್ರಮಃ, ಸರ್ವಾ (ಪೂರ್ಣಾ) ಧೀಃ ಯಸ್ಯ ಸಃ ಸರ್ವಧೀಃ;

**ಕ್ರಿಯಾ:** — ಅವ + ತತಾರ ತೇರತುಃ ತೇರುಃ, ತೃ ಪ್ಲವನತರಣಯೋಃ ಲಿಟ್.

**ಅವ:** — ಆಚಾರ್ಯರು ಚಿಕ್ಕಬದರಿಗೆ ಬಂದು ತನ್ನ ಶಿಷ್ಯರನ್ನು ಆನಂದಪಡಿಸಿದರೆಂದು ಹೇಳುತ್ತಾರೆ—

**ವಾನರೇಂದ್ರ ಇವ ತೀರ್ಣವಾರಿಧಿಃ**
**ವಾಸುದೇವ ಇವ ರತ್ನರಾಜವಾನ್ ।**
**ಭೀಮಸೇನ ಇವ ಸೂನವರ್ಯಹೃ-**
**ನ್ನಿರ್ವೃತಿಂ ಸ್ವಜನಮಾನಿನಾಯ ಸಃ ॥೬॥**

Rarest Archiver

**ಅ.**—ಸಃ ತೀರ್ಣವಾರಿಧಿಃ ವಾನರೇಂದ್ರಃ ಇವ, ರತ್ನರಾಜವಾನ್ ವಾಸುದೇವಃ ಇವ, ಸೂನವರ್ಯಹೃತ್ ಭೀಮಸೇನಃ ಇವ ಸ್ವಜನಂ ನಿರ್ವೃತಿಂ ಅನಿನಾಯ.

**ಅರ್ಥ :**—ಸಃ = ಆ ಶ್ರೀಮಧ್ವಾಚಾರ್ಯರು, ತೀರ್ಣವಾರಿಧಿಃ = (ಲಂಕೆಗೆ ಹೋಗಿ ಹಿಂತಿರುಗಿ) ಸಮುದ್ರವನ್ನು ದಾಟಿದ, ವಾನರೇಂದ್ರಃ ಇವ = ಹನುಮಂತದೇವರಂತೆಯೂ, ರತ್ನರಾಜವಾನ್ = ಸ್ಯಮಂತಕವೆಂಬ ಶ್ರೇಷ್ಠವಾದ ರತ್ನವುಳ್ಳ, ವಾಸುದೇವಃ ಇವ = ಶ್ರೀಕೃಷ್ಣನಂತೆಯೂ, ಸೂನವರ್ಯಹೃತ್ = ಶ್ರೇಷ್ಠವಾದ ಸೌಗಂಧಿಕಾಪುಷ್ಪಗಳನ್ನು ತಂದ, ಭೀಮಸೇನಃ ಇವ = ಭೀಮಸೇನದೇವರಂತೆಯೂ, ಸ್ವಜನಂ = ತನ್ನ ಶಿಷ್ಯಜನರನ್ನು (ರಿಗೆ), ನಿರ್ವೃತಿಂ = ಸಂತೋಷವನ್ನು, ಆನಿನಾಯ = ತಂದರು.

**ತಾ:**—ಹಿಂದೆ ತ್ರೇತಾಯುಗದಲ್ಲಿ ಹನುಮಂತದೇವರು ಶ್ರೀರಾಮನ ಅಪ್ಪಣೆಯಿಂದ ಸೀತಾದೇವಿಯನ್ನು ಹುಡುಕುತ್ತಾ ಹೋದರು. ಅವರು ಏಕಾಕಿಯಾಗಿ ದಕ್ಷಿಣಸಮುದ್ರವನ್ನು ದಾಟಿ ಲಂಕೆಗೆ ಹೋಗಿ, ಸೀತೆಯನ್ನು ಕಂಡು ಕೃತಕೃತ್ಯರಾಗಿ ಪುನಃ ಸಮುದ್ರವನ್ನು ದಾಟಿ ಈಚಿನ ದಡಕ್ಕೆ ಬಂದು ಅಲ್ಲಿದ್ದ ಅಂಗದ, ಜಾಂಬವಂತ ಮುಂತಾದ ತನ್ನವರಿಗೆ ಸೀತೆಯ ಸಮಾಚಾರವನ್ನು ತಿಳಿಸಿ, ಅವರನ್ನು ಸಂತೋಷಪಡಿಸಿದರು. ಜಾಂಬವಂತನು ಸ್ಯಮಂತಕಮಣಿಯನ್ನು ಅಪಹರಿಸಿಕೊಂಡು ಹೋಗಿದ್ದನು. ಶ್ರೀಕೃಷ್ಣನು ಒಬ್ಬನೇ ಜಾಂಬವಂತನನ್ನು ಜಯಿಸಿ ಸತ್ರಾಜಿತನ ಸ್ಯಮಂತಕಮಣಿಯನ್ನು ತಂದು, ಸತ್ರಾಜಿತನಿಗೆ ಕೊಟ್ಟು ವಸುದೇವನೇ ಮೊದಲಾದ ಯಾದವರನ್ನು ಆನಂದಗೊಳಿಸಿದ್ದನು. ಭೀಮಸೇನದೇವರು ಧರ್ಮರಾಜಾದಿಗಳನ್ನು ಬಿಟ್ಟು ಒಬ್ಬರೇ ಹೋಗಿ ದ್ರೌಪದೀದೇವಿಗಾಗಿ ಸೌಗಂಧಿಕಾಪುಷ್ಪಗಳನ್ನು ತಂದು ಕೊಟ್ಟು ತನ್ನವರನ್ನು ಆನಂದಪಡಿಸಿದ್ದರು. ಹಾಗೆಯೇ ಶ್ರೀಮಧ್ವಾಚಾರ್ಯರು ಅನಂತಮಠದಲ್ಲಿ ಸತ್ಯತೀರ್ಥರೇ ಮೊದಲಾದ ಶಿಷ್ಯರನ್ನು ಇರಿಸಿ ತಾನೊಬ್ಬನೇ ಹಿಮಾಲಯವನ್ನು ದಾಟಿ ಉತ್ತರಬದರಿಯಲ್ಲಿರುವ ವೇದವ್ಯಾಸಾಶ್ರಮಕ್ಕೆ ಹೋಗಿ ತನ್ನ ಕಾರ್ಯವನ್ನು ಪೂರೈಸಿ ಹಿಂತಿರುಗಿ ಚಿಕ್ಕಬದರಿಯಲ್ಲಿ ಇರುವ ಅನಂತಮಠಕ್ಕೆ ಬಂದು ತನ್ನ ಶಿಷ್ಯರನ್ನು ಸಂತೋಷಪಡಿಸಿದರು.

Rarest Archiver

ವಿ:—ವಾನರಾಣಾಂ ಇಂದ್ರಃ ವಾನರೇಂದ್ರಃ, ತೀರ್ಣಃ ವಾರಿಧಿಃ ಯೇನ ಸಃ ತೀರ್ಣವಾರಿಧಿಃ, ರತ್ನಾನಾಂ ರಾಜಾ ರತ್ನರಾಜಃ, ಸಃ ಅಸ್ಯ ಅಸ್ತೀತಿ ರತ್ನರಾಜವಾನ್, ಸೂನಾನಾಂ ವರ್ಯಂ ಸೂನವರ್ಯಂ ತತ್ ಹರತಿ ಇತಿ ಸೂನವರ್ಯಹೃತ್, ಸೂನಂ=ಹೂವು, ಸೂನಂ ಪ್ರಸವ ಪುಷ್ಪಯೋಃ—ವಿಶ್ವ, ಸೂನ=ಫಲ ಮತ್ತು ಪುಷ್ಪ, ಸ್ವಶ್ಚಾಸೌ ಜನಶ್ಚ ಸ್ವಜನಃ ತಂ.

ಕ್ರಿ:—ಆ+ನಿನಾಯ ನಿನ್ಯತುಃ ನಿನ್ಯುಃ, ಣೀಞ್ (ನೀ) ಪ್ರಾಪಣೇ ಪರ. ಲಿಟ್.

ಅವ:—ಆಚಾರ್ಯರು ಅನೇಕಭಕ್ತರು ತಂದಿರುವ ಬಹಳವಾದ ಭಿಕ್ಷೆಯನ್ನು ತಾನೊಬ್ಬನೇ ಸ್ವೀಕರಿಸಿದರು ಎಂದು ಹೇಳುತ್ತಾರೆ-

**ಅಗ್ನಿಶರ್ಮಮುಖಪಂಚಷೈರ್ದ್ವಿಜೈಃ**
**ಅನ್ನಮಾಹೃತಮಲಂ ಪೃಥಕ್ ಸಮಂ ।**
**ಕೃತ್ಸ್ನಮಾದದಯಮಿತ್ಯವಿಸ್ಮಯಃ**
**ಕೃತ್ಸ್ನಮತ್ತುಮಲಮೇಷ ಹಿ ಕ್ಷಯೇ ॥೭॥**

ಅ:—ಅಯಂ ಅಗ್ನಿಶರ್ಮಮುಖಪಂಚಷೈರ್ದ್ವಿಜೈಃ ಸಮಂ ಆಹೃತಂ ಪೃಥಕ್ ಅಲಂ ಕೃತ್ಸ್ನಂ ಅನ್ನಂ ಆದದತ್. ಇತಿ ಅವಿಸ್ಮಯಃ ; ಏಷಃ ಕ್ಷಯೇ ಕೃತ್ಸ್ನಂ ಅತ್ತುಂ ಅಲಂ ಹಿ.

ಅರ್ಥ:—ಅಯಂ=ಈ ಶ್ರೀಮಧ್ವಾಚಾರ್ಯರು, ಅಗ್ನಿಶರ್ಮಮುಖ =ಅಗ್ನಿಶರ್ಮನೇ ಮೊದಲಾದ, ಪಂಚಷೈಃ=ಐದಾರು ಮಂದಿ, ದ್ವಿಜೈಃ= ಬ್ರಾಹ್ಮಣರಿಂದ, ಸಮಂ=ಒಂದೇ ಸಲ, ಆಹೃತಂ=ತರಲ್ಪಟ್ಟ, ಪೃಥಕ್ =ಪ್ರತ್ಯೇಕವಾಗಿ, ಅಲಂ=ಸಾಕಾಗಿದ್ದ, ಕೃತ್ಸ್ನಂ=ಎಲ್ಲಾ, ಅನ್ನಂ= ಅನ್ನವನ್ನು, ಆದದತ್=ತಿಂದರು. ಇತಿ=ಈ ರೀತಿ ಬಹಳವಾದ ಅನ್ನ ಭೋಜನವು, ಅವಿಸ್ಮಯಃ=ಆಶ್ಚರ್ಯಕರವಲ್ಲ. ಏಷಃ=ಈ ಮಧ್ವಾಚಾರ್ಯರು, ಕ್ಷಯೇ=ಪ್ರಲಯಕಾಲದಲ್ಲಿ, ಕೃತ್ಸ್ನಂ=ಚರಾಚರಜಗತ್ತನ್ನು, ಅತ್ತುಂ= ತಿನ್ನುವುದಕ್ಕೆ (ಸಂಹರಿಸುವುದಕ್ಕೆ) ಅಲಂ ಹಿ=ಸಮರ್ಥರಾಗಿದ್ದಾರಷ್ಟೆ !

Rarest Archiver

ತಾ: —ಆಚಾರ್ಯರು ಅನಂತಮಠದಿಂದ ಬಹಳ ಬೇಗನೆ ಮುಂದಕ್ಕೆ ಪ್ರಯಾಣಮಾಡಲಿದ್ದರು. ಈ ವಿಷಯವನ್ನು ತಿಳಿದು, ಅಲ್ಲಿಯ ಅಗ್ನಿಶರ್ಮ ಮುಂತಾದ ಐದಾರು ಮಂದಿ ಬ್ರಾಹ್ಮಣರು—'ಆಚಾರ್ಯರೇ ! ನಾನು ಈ ದಿನವೇ ತಮಗೆ ಭಿಕ್ಷಾಪ್ರದಾನ ಮಾಡುತ್ತೇನೆ' ಎಂದು ಎಲ್ಲರೂ ಪ್ರಾರ್ಥಿಸಿದರು. ಈ ಎಲ್ಲಾ ಭಕ್ತರ ಆಮಂತ್ರಣವನ್ನು ತಿರಸ್ಕರಿಸಲಾರದೆ, ಮುಂದಕ್ಕೆ ಪ್ರಯಾಣಮಾಡುವ ಅವಸರವಿದ್ದದ್ದರಿಂದ ಬೇರೆ ದಿವಸ ಭಿಕ್ಷಾ ಪ್ರದಾನದ ಸಮಾರಂಭವನ್ನು ಇಟ್ಟುಕೊಳ್ಳಲೂ ಆಗದಿರುವುದರಿಂದ ಆಚಾರ್ಯರು ಒಂದೇ ದಿನ ಅವರೆಲ್ಲರಿಂದಲೂ ಭಿಕ್ಷಾಸ್ವೀಕಾರ ಮಾಡುವೆ ನೆಂದು ಒಪ್ಪಿಗೆಯಿತ್ತರು. ಅಗ್ನಿಶರ್ಮನೇ ಮೊದಲಾದ ಒಬ್ಬೊಬ್ಬರೂ ಆಚಾರ್ಯರಿಗೂ, ಅವರ ಶಿಷ್ಯಪರಿವಾರಕ್ಕೂ ಸಾಕಾಗುವಷ್ಟು ಭೋಜ್ಯವಸ್ತು ಗಳನ್ನು ದೇವಾಲಯಕ್ಕೆ ತಂದಿದ್ದರು. ಆಚಾರ್ಯರು ಅನ್ನ, ಭಕ್ಷ್ಯಮುಂತಾದ ಆ ಆಹಾರಪದಾರ್ಥವನ್ನು ತಾನೊಬ್ಬನೇ ಸ್ವಲ್ಪವೂ ಮಿಗದಂತೆ ಭೋಜನ ಮಾಡಿದರು. ಪ್ರಳಯಕಾಲದಲ್ಲಿ ಸಮಸ್ತ ಪ್ರಪಂಚವನ್ನೂ ತಾನೊಬ್ಬನೇ ಸಂಹರಿಸಲು ಸಮರ್ಥರಾದ ಆಚಾರ್ಯರಿಗೆ ಇದು ಆಶ್ಚರ್ಯಕರವಲ್ಲ.

## ಪ್ರಮಾಣ :—

ಶೀಘ್ರಂ ಜಿಗಮಿಷುಂ ಮಧ್ವಂ ಜ್ಞಾತ್ವಾ-ಸರ್ವೇ ಸಮಾಶ್ರಯನ್ ।
ಅದ್ಯೈವಾಹಂ ಕರಿಷ್ಯಾಮೀತ್ಯೈಚ್ಛ್ರತ್ವಾ ದಯಾಪರಃ ॥
ಸರ್ವೇಷಾಮಪಿ ಭಕ್ತಾನಾಂ ಅನುಲ್ಲಂಘ್ಯಂ ಕ್ಷಣಂ ಸ್ಮರನ್ ।
ಗಮನತ್ವರಿತೋ ಮಧ್ವಃ ಸರ್ವೇಭ್ಯೋಽಪಿ ಕ್ಷಣಂ ದದೌ ॥
ತೇ ಚ ಪ್ರತ್ಯೇಕಮಾಜಹ್ರುರನ್ನಂ ಸೋಪಸ್ಕರಂ ಬಹು ।
ಯಥಾ ಸಪರಿವಾರಸ್ಯ ಪರ್ಯಾಪ್ತಂ ಸ್ಯಾದಯಂ ಪುನಃ ॥
ತತ್ಸರ್ವಂ ಬುಭುಜೇ ಮಧ್ವೋ ನೈತಚ್ಚಿತ್ರಂ ಸಮೀರಣೇ ।

ವಿ :—ಪಂಚ ವಾ ಷಡ್ವಾ ಪಂಚಷಾಃ, ಅಗ್ನಿಶರ್ಮಾ ಮುಖಂ ಯೇಷಾಂ ತೇ ಅಗ್ನಿಶರ್ಮಮುಖಾಃ, ಅಗ್ನಿಶರ್ಮಮುಖಾಶ್ಚ ತೇ ಪಂಚ ಷಾಶ್ಚ ಅಗ್ನಿಶರ್ಮಮುಖಪಂಚಷಾಃ ತೈಃ, ವಿಸ್ಮಯಸ್ಯ ಅಭಾವಃ ಅವಿಸ್ಮಯಃ.

Rarest Archive

**ಕ್ರಿ:**—ಆದತ್ ಆತ್ತಾಂ ಆದನ್, ಆದಃ ಆತ್ತಂ ಆತ್ತ, ಆದವ್ ಆದ್ವ ಆದ್ಮ. ಅದ—ಭಕ್ಷಣೇ ಲಙ್ ।

**ಅವ:**—ಶ್ರೀಮಧ್ವಾಚಾರ್ಯರು ರಚಿಸಿದ ಭಾಷ್ಯವನ್ನು ಮುಂದೆ ಐದು ಶ್ಲೋಕಗಳಿಂದ ಕುಲಕದಿಂದ ವರ್ಣಿಸುತ್ತಾರೆ—

**ವ್ಯಾಸದೇವಹೃದಯಾತಿವಲ್ಲಭಂ**
**ವಾಸುದೇವಮಗಣಯ್ಯಸದ್ಗುಣಮ್ ।**
**ಸಾಧಯತ್ಸಕಲದೋಷವರ್ಜಿತಂ**
**ಜ್ಞಾನಭಕ್ತಿದಮನಂತಸೌಖ್ಯದಮ್** ||೮||

ಅ:—(ಅನಂತಧೀಃ) ವ್ಯಾಸದೇವಹೃದಯಾತಿವಲ್ಲಭಂ, ವಾಸುದೇವಂ ಅಗಣಯ್ಯಸದ್ಗುಣಂ ಸಕಲದೋಷವರ್ಜಿತಂ ಸಾಧಯತ್, ಜ್ಞಾನಭಕ್ತಿದಂ ಅನಂತಸೌಖ್ಯದಮ್, (ಆತ್ಮನಃ ಅನ್ಯತ್ ರೂಪಮಿವ ಅದ್ಭುತಂ ಬ್ರಹ್ಮ-ಸೂತ್ರಗಣಭಾಷ್ಯಂ, ಅತನೋತ್)

**ಅರ್ಥ** — ಅನಂತಧೀಃ = ಶ್ರೀಪೂರ್ಣಪ್ರಜ್ಞರು, ವ್ಯಾಸದೇವ = ವೇದವ್ಯಾಸರ, ಹೃದಯ = ಮನಸ್ಸಿಗೆ, ಅತಿವಲ್ಲಭಂ = ಅತ್ಯಂತಪ್ರಿಯವಾದ, (ಅಥವಾ ವ್ಯಾಸದೇವಹೃದಯಸ್ಯ = ವೇದವ್ಯಾಸದೇವರ ಅಭಿಪ್ರಾಯಕ್ಕೆ ಅತಿವಲ್ಲಭಂ = ಅತ್ಯಂತಅನುಕೂಲವಾದ) ವಾಸುದೇವಂ = ಶ್ರೀಮನ್ನಾ-ರಾಯಣನನ್ನು, ಅಗಣಯ್ಯಸದ್ಗುಣಂ = ಅಗಣಿತವಾದ ಗುಣಗಳುಳ್ಳವನಾಗಿಯೂ, ಸಕಲದೋಷವರ್ಜಿತಂ = ಎಲ್ಲಾದೋಷಗಳು ಇಲ್ಲದವನನ್ನಾಗಿಯೂ, ಸಾಧಯತ್ = ಸಮರ್ಥಿಸುವ, ಜ್ಞಾನಭಕ್ತಿದಂ = ಜ್ಞಾನ ಮತ್ತು ಭಕ್ತಿಯನ್ನು ಕೊಡುವ, ಅನಂತಸೌಖ್ಯದಂ = ಮೋಕ್ಷದ ಆನಂದವನ್ನು ಕೊಡುವ (ತಮ್ಮ ಮತ್ತೊಂದುರೂಪದಂತಿರುವ ಅದ್ಭುತವಾದ ಬ್ರಹ್ಮಸೂತ್ರಭಾಷ್ಯವನ್ನು ರಚಿಸಿದರು.)

**ತಾ:** —ಶ್ರೀಮಧ್ವರು ಚಿಕ್ಕಬದರಿಯಲ್ಲಿಯೇ ಅನಂತಮಠದಲ್ಲಿ ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ರಚಿಸಿದರು. ಅದು ವೇದವ್ಯಾಸರ ಅಭಿಪ್ರಾಯಕ್ಕೆ ಅನುಕೂಲವಾಗಿಯೂ ಅವರಿಗೆ ಅತಿಪ್ರಿಯವಾಗಿಯೂ ಇದ್ದಿತು. ಶ್ರೀಮನ್

Rarest Archiver

ನಾರಾಯಣನು ಅಸಂಖ್ಯಗುಣಗಳಿಂದ ಕೂಡಿದವನೆಂದೂ ಸಮಸ್ತದೋಷ ರಹಿತನೆಂದೂ ಪ್ರತಿಪಾದಿಸುತ್ತಿದ್ದಿತು. ಆ ಭಾಷ್ಯವು ಶ್ರವಣಮಾಡಿ ಮನನ ಮಾಡುವವರಿಗೆ ಜ್ಞಾನ-ಭಕ್ತಿಯನ್ನೂ, ಮೋಕ್ಷವನ್ನೂ ಕೊಡುವುದಾಗಿತ್ತು. ಅದು ಆಚಾರ್ಯರ ಮತ್ತೊಂದು ರೂಪದಂತೆ ಇದ್ದಿತು. ಆಚಾರ್ಯರು ವೇದವ್ಯಾಸ ದೇವರ ಹೃದಯಕ್ಕೆ ಅತ್ಯಂತ ಪ್ರೀತಿಪಾತ್ರರು. ಶ್ರೀಮನ್ನಾರಾಯಣನು ಸಕಲಗುಣಪೂರ್ಣನೆಂದೂ ಸಮಸ್ತದೋಷವರ್ಜಿತನೆಂದೂ ಪ್ರತಿಪಾದಿಸು ತ್ತಿದ್ದರು. ತನ್ನನ್ನು ಸೇವಿಸಿದವರಿಗೆ ಜ್ಞಾನಭಕ್ತಿಗಳನ್ನೂ ಕೊಡುತ್ತಿದ್ದರು. ಆದುದರಿಂದ ಇವೇ ಗುಣಗಳುಳ್ಳಭಾಷ್ಯವು ಆಚಾರ್ಯರ ಮತ್ತೊಂದು ರೂಪದಂತೆ ಇದ್ದಿತು. **ಪ್ರಮಾಣ:**—ವಿಷ್ಣುರ್ಹಿ ದಾತಾ ಮೋಕ್ಷಸ್ಯ ವಾಯುಶ್ಚ ತದನುಜ್ಞಯಾ.

ವಿ:—ವ್ಯಾಸಶ್ಚಾಸೌ ದೇವಶ್ಚ ವ್ಯಾಸದೇವಃ ವ್ಯಾಸದೇವಸ್ಯ ಹೃದಯಂ ವ್ಯಾಸದೇವಹೃದಯಂ ತಸ್ಯ ಅತಿವಲ್ಲಭಂ ತತ್. ಗಣಯಿತುಂ ಶಕ್ಯಾಃ ಗಣಯ್ಯಾಃ ನ ಗಣಯ್ಯಾಃ ಅಗಣಯ್ಯಾಃ। ಸಂತಶ್ಚತೇ ಗುಣಾಶ್ಚ, ಸದ್ಗುಣಾಃ ಅಗಣಯ್ಯಾಃ ಸದ್ಗುಣಾಃ ಯಸ್ಯ ತತ್, ತತ್. (ಅಗಣೇಯ ಎಂಬ ಪಾಠದಲ್ಲಿಯೂ ಹೀಗೆಯೇ ವಿಗ್ರಹ) ಸಕಲಾಶ್ಚ ತೇ ದೋಷಾಶ್ಚ ಸಕಲದೋಷಾಃ ತೈಃ ವರ್ಜಿತಂ ಸಕಲದೋಷವರ್ಜಿತಂ, ತತ್. ಜ್ಞಾನಂ ಚ ಭಕ್ತಿಶ್ಚ ಜ್ಞಾನಭಕ್ತೀ ತೇ ದದಾತೀತಿ ಜ್ಞಾನಭಕ್ತಿದಂ; ತತ್. ಅನಂತಂ ಚ ತತ್ ಸೌಖ್ಯಂ ಚ ಅನಂತಸೌಖ್ಯಂ ತತ್ ದದಾತೀತಿ ಅನಂತ-ಸೌಖ್ಯದಂ ತತ್. (ಈ ಶ್ಲೋಕವನ್ನು ಆರಂಭಿಸಿ ಹನ್ನೆರಡನೆಯ ಶ್ಲೋಕದ ವರೆಗೆ ಅತನೋತ್ ಎಂಬ ಕ್ರಿಯಾಪದದೊಡನೆ ಏಕಾನ್ವಯವಿರುವುದರಿಂದ ರಿಂದ ಇದು ಅಂತ್ಯಕುಲಕವು.)

ಉಕ್ತಮುಕ್ತಮಭಿಧೇಯಮುತ್ತಮಂ
ವೇದವಾಕ್ಯಮನುವಾದಯನ್ಮುಹುಃ ।
ವ್ಯಂಜಯತ್ ಸ್ಮೃತಿವಚೋಭಿರಂಜಸಾ
ತಸ್ಯ ಚಾರ್ಥಮತಿಯುಕ್ತಯುಕ್ತಿಮತ್ ॥೯॥

ಅ:—(ಅನಂತಧೀಃ) ಉಕ್ತಂ ಉಕ್ತಂ ಉತ್ತಮಂ ಅಭಿಧೇಯಂ ಪ್ರತಿ

Rarest Archiver

ಮುಹುಃ ವೇದವಾಕ್ಯಂ ಅನುವಾದಯತ್, ತಸ್ಯ ಅರ್ಥಂ ಚ ಸ್ಮೃತಿ-ವಚೋಭಿಃ ಅಂಜಸಾ ವ್ಯಂಜಯತ್, ಅತಿಯುಕ್ತಯುಕ್ತಿಮತ್ (ಆತ್ಮನಃ ಅನ್ಯತ್ ರೂಪಮಿವ ಅದ್ಭುತಂ ಬ್ರಹ್ಮಸೂತ್ರಗಣಭಾಷ್ಯಂ ಅತನೋತ್.)

**ಅರ್ಥ:**—(ಅನಂತಧೀಃ = ಶ್ರೀಪೂರ್ಣಪ್ರಜ್ಞಾಚಾರ್ಯರು) ಉಕ್ತಂ ಉಕ್ತಂ = ತನ್ನಿಂದ ಪ್ರತಿಪಾದಿತವಾದ ಪ್ರತಿಯೊಂದೂ, ಉತ್ತಮಂ = ಶ್ರೇಷ್ಠವಾದ, ಅಭಿಧೇಯಂ (ಪ್ರತಿ) = ಸೂತ್ರಾರ್ಥವನ್ನು ಕುರಿತು, ಮುಹುಃ = ಪುನಃ ಪುನಃ, ವೇದವಾಕ್ಯಂ = ವೇದವಾಕ್ಯವನ್ನು, ಅನುವಾದಯತ್ = ಪ್ರಮಾಣೀಕರಿಸುತ್ತಿರುವ, ತಸ್ಯ = ತಾನು ಉದಾಹರಿಸಿದ ವೇದವಾಕ್ಯದ, ಅರ್ಥಂ ಚ = ಅರ್ಥವನ್ನೂ, ಸ್ಮೃತಿವಚೋಭಿಃ = ಸ್ಮೃತಿವಾಕ್ಯಗಳಿಂದ, ಅಂಜಸಾ = ಚೆನ್ನಾಗಿ, ವ್ಯಂಜಯತ್ = ಸ್ಪಷ್ಟಪಡಿಸುತ್ತಿರುವ, ಅತಿಯುಕ್ತಯುಕ್ತಿಮತ್ = ಅತಿಶಯವಾಗಿ ಉಚಿತವಾದ ಯುಕ್ತಿಯುಳ್ಳ, (ತನ್ನ ಮತ್ತೊಂದು ರೂಪದಂತಿರುವ ಅದ್ಭುತವಾದ ಬ್ರಹ್ಮಸೂತ್ರಸಮೂಹದ ಭಾಷ್ಯವನ್ನು ರಚಿಸಿದರು.)

**ತಾ:**—ಆ ಬ್ರಹ್ಮಸೂತ್ರಭಾಷ್ಯವು ಮತ್ತೂ ಹೇಗಿತ್ತು? ಎಂದರೆ ತಾನು ಹೇಳಿದ ಸೂತ್ರಾರ್ಥದ ಸಂಮತಿಗಾಗಿ ಮತ್ತೂ ಮತ್ತೂ ವೇದವಾಕ್ಯವನ್ನು ಉದಾಹರಿಸುವಂತಹುದು. ಉದಾಹರಿಸಿದ ಆ ವೇದವಾಕ್ಯದ ಅರ್ಥವನ್ನು ಸ್ಮೃತಿವಚನಗಳಿಂದ ಚನ್ನಾಗಿ ಪ್ರಕಟಿಸತಕ್ಕದ್ದೂ, ಅತಿಶಯವಾಗಿ ಒಪ್ಪಿಗೆಯಾಗುವ ಯುಕ್ತಿಗಳಿಂದ ಕೂಡಿದ್ದೂ ಆಗಿತ್ತು. ಶ್ರೀಮಧ್ವಸ್ವರೂಪವೂ ಕೂಡ ತನ್ನ ವಚನವು ಪ್ರಾಮಾಣಿಕವೆಂದು ಸಾಧಿಸುವುದಕ್ಕಾಗಿ ಪ್ರಮಾಣವಾಗಿರುವ ವೇದವಚನವನ್ನು ಉದಾಹರಿಸಿ ಅದರ ಅರ್ಥವನ್ನು ಸ್ಮೃತಿವಚನಗಳಿಂದ ಪ್ರಕಟಗೊಳಿಸಿ ಅನೇಕಯುಕ್ತಿಗಳನ್ನು ಉದಾಹರಿಸುವಂತಹುದು ಆಗಿತ್ತು. ಆಚಾರ್ಯರು ತನ್ನ ಭಾಷ್ಯದಲ್ಲಿ ಪ್ರತಿಯೊಂದು ಸೂತ್ರಕ್ಕೂ ತಾನು ಹೇಳಿದ ಅರ್ಥವು ಪ್ರಾಮಾಣಿಕವೆಂದು ಸಾಧಿಸಲು ವೇದವಾಕ್ಯಗಳನ್ನು ಉದಾಹರಿಸಿ ಆ ವಾಕ್ಯಗಳಿಗೆ ಸ್ಮೃತಿವಾಕ್ಯಗಳಿಂದಲೂ ಅರ್ಥವನ್ನು ತಿಳಿಸಿ ಅತ್ಯಂತ ಉಚಿತವಾದ ಯುಕ್ತಿಗಳನ್ನೂ ತನ್ನ ಭಾಷ್ಯದಲ್ಲಿ ತೋರಿಸಿದ್ದಾರೆ ಎಂದು ಅಭಿಪ್ರಾಯ.

Rarest Archiver

ವಿ :—ವೇದಸ್ಯ ವಾಕ್ಯಂ ವೇದವಾಕ್ಯಂ ತತ್, ಸ್ಮೃತಿರೂಪಾಣಿ ಚ ತಾನಿ ವಚಾಂಸಿ ಚ ಸ್ಮೃತಿವಚಾಂಸಿ ತೈಃ. ಅತಿಯುಕ್ತಾ ಚ ಸಾ ಯುಕ್ತಿಶ್ಚ ಅತಿಯುಕ್ತಯುಕ್ತಿಃ ಸಾ ಅಸ್ಯ ಅಸ್ತೀತಿ ಅತಿಯುಕ್ತಯುಕ್ತಿಮತ್.

**ಬಾಲಸಂಘಮಪಿ ಬೋಧಯದ್ ಭೃಶಂ**
**ದುರ್ನಿರೂಪವಚನಂ ಚ ಪಂಡಿತೈಃ ।**
**ಅಪ್ರಮೇಯಹೃದಯಂ ಪ್ರಸಾದವತ್**
**ಸೌಮ್ಯಕಾಂತಿ ಚ ವಿಪಕ್ಷಭೀಷಣಮ್ ॥೧೦॥**

ಅ :—ಬಾಲಸಂಘಮಪಿ ಭೃಶಂ ಬೋಧಯತ್ ಪಂಡಿತೈಃ ಚ ದುರ್ನಿರೂಪವಚನಂ ಅಪ್ರಮೇಯಹೃದಯಂ ಪ್ರಸಾದವತ್ ಸೌಮ್ಯಕಾಂತಿ ವಿಪಕ್ಷಭೀಷಣಂ ಚ (ಆತ್ಮನಃ ಅನ್ಯತ್ ರೂಪಮಿವ ಅದ್ಭುತಂ ಬ್ರಹ್ಮಸೂತ್ರಗಣ ಭಾಷ್ಯಂ ಅತನೋತ್).

ಅರ್ಥ :—(ಶ್ರೀಮಧ್ವಾಚಾರ್ಯರು), ಬಾಲಸಂಘಂ ಅಪಿ = ಅಲ್ಪ ಬುದ್ಧಿಯುಳ್ಳವರ ಸಮೂಹವನ್ನೂ ಕೂಡ, ಭೃಶಂ = ಚೆನ್ನಾಗಿ, ಬೋಧಯತ್ = ಪರಮಾತ್ಮನ ಸ್ವರೂಪವನ್ನು ತಿಳಿಸುವ, ಪಂಡಿತೈಃ ಚ = ವಿದ್ವಾಂಸರಿಂದಲೂ, ದುರ್ನಿರೂಪವಚನಂ = ತಿಳಿಯಲು ಸಾಧ್ಯವಾಗದಿರುವ ಮಾತುಳ್ಳ, ಅಪ್ರಮೇಯ = ತಿಳಿಯಲು ಸಾಧ್ಯವಿಲ್ಲದ, ಹೃದಯಂ = ಅಭಿಪ್ರಾಯವುಳ್ಳ, ಪ್ರಸಾದವತ್ = ಸರಳವಾದ ಶಬ್ದಗಳುಳ್ಳ, ಸೌಮ್ಯಕಾಂತಿ = ಶಾಂತವಾದ ಪ್ರಕಾಶವುಳ್ಳ, ವಿಪಕ್ಷಭೀಷಣಂ ಚ = ಪ್ರತಿವಾದಿಗಳಿಗೆ ಭಯಂಕರವೂ ಆದ, (ತನ್ನ ಮತ್ತೊಂದು ರೂಪದಂತಿರುವ ಅದ್ಭುತವಾದ ಬ್ರಹ್ಮಸೂತ್ರ ಸಮೂಹದ ಭಾಷ್ಯವನ್ನು ರಚಿಸಿದರು.)

ತಾ :—ಮತ್ತೂ ಆ ಭಾಷ್ಯವನ್ನು ವರ್ಣಿಸುತ್ತಾರೆ. ಆ ಭಾಷ್ಯವು ಅಲ್ಪಬುದ್ಧಿಯುಳ್ಳ ಜನರಿಗೂ ಕೂಡ ಚೆನ್ನಾಗಿ ಸೂತ್ರಾರ್ಥವನ್ನು ತಿಳಿಸಿ ಕೊಡುತ್ತಿತ್ತು. ಪಂಡಿತರ ಸಮೂಹದಿಂದಲೂ ಕೂಡ ತಿಳಿಯಲು ಅಸಾಧ್ಯವಾದ ಕಠಿಣವಾದ ವಾಕ್ಯಾರ್ಥಗಳಿಂದ ಕೂಡಿತ್ತು. ಸಾಮಾನ್ಯಜನರಿಂದ ಅದರ ಅಭಿಪ್ರಾಯವನ್ನು ತಿಳಿಯಲು ಅಸಾಧ್ಯವಾಗಿತ್ತು. ಮೃದುವಾದ ಶಬ್ದ

Rarest Archive

ಗಳಿಂದ ಕೂಡಿದ್ದು ಪ್ರಸನ್ನವಾಗಿತ್ತು. ಸಜ್ಜನರಿಗೆ ಶಾಂತಕಾಂತಿಯುಳ್ಳದ್ದೂ, ಶತ್ರುಗಳಿಗೆ ಭಯಂಕರವೂ ಆಗಿತ್ತು. ಶ್ರೀಮಧ್ವರೂ ಕೂಡ ಅಲ್ಪಪ್ರಜ್ಞರಾದ ಜನರಿಗೂ ತತ್ವೋಪದೇಶ ಮಾಡುತ್ತಿದ್ದರು. ಪಂಡಿತರಿಗೂ ತಿಳಿಯಲು ಸಾಧ್ಯವಿಲ್ಲದ ಗೂಢವಾದ ಅರ್ಥವುಳ್ಳ ವಚನಗಳನ್ನು ಉದಾಹರಿಸುತ್ತಿದ್ದರು. ಗಂಭೀರವಾದ ಅಭಿಪ್ರಾಯವುಳ್ಳವರೂ ಆಗಿದ್ದರು. ಮೃದುವಾದ ಶಬ್ದಗಳನ್ನು ಆಡುತ್ತಿದ್ದರು, ಪ್ರಸನ್ನರಾಗಿದ್ದರು, ಸಜ್ಜನರಿಗೆ ಶಾಂತರೂ ಶತ್ರುಗಳಿಗೆ ಭಯಂಕರರೂ ಆಗಿದ್ದರು.

ವಿ :—ಬಾಲಾನಾಂ ಸಂಘಃ ಬಾಲಸಂಘಃ ತಂ, ದುಃಖೇನ ನಿರೂಪಯಿತುಂ ಶಕ್ಯಾನಿ ದುರ್ನಿರೂಪಾಣಿ, ದುರ್ನಿರೂಪಾಣಿ ವಚನಾನಿ ಯಸ್ಯ ತತ್, ಪ್ರಮಾತುಂ ಶಕ್ಯಂ ಪ್ರಮೇಯಂ ನ ಪ್ರಮೇಯಂ ಅಪ್ರಮೇಯಂ, ತಾದೃಶಂ ಹೃದಯಂ ಯಸ್ಯ ತತ್. ಪ್ರಸಾದಃ ಅಸ್ಯ ಅಸ್ತೀತಿ ಪ್ರಸಾದವತ್, ಸೌಮ್ಯಾ ಕಾಂತಿಃ ಯಸ್ಯ ತತ್. ವಿಪಕ್ಷಾಣಾಂ ಭೀಷಣಂ ವಿಪಕ್ಷಭೀಷಣಂ.

**ಅಸ್ತದೂಷಣಮವಂಧ್ಯಭಾಷಣಂ**
**ಲಕ್ಷಿತಂ ಸಕಲಲಕ್ಷಣೈಃ ಸಮಂ ।**
**ಮಾನನೀಯಮಪಿ ನಾಕಿನಾಯಕೈ**
**ರೂಪಮನ್ಯದಿವ ಧನ್ಯಮಾತ್ಮನಃ ॥೧೧॥**

ಅ :—ಅಸ್ತದೂಷಣಂ, ಅವಂಧ್ಯಭಾಷಣಂ, ಸಕಲಲಕ್ಷಣೈಃ ಸಮಂ ಲಕ್ಷಿತಂ, ನಾಕಿನಾಯಕೈಃ ಅಪಿ ಮಾನನೀಯಂ, ಧನ್ಯಂ ಆತ್ಮನಃ ಅನ್ಯತ್ ರೂಪಮಿವ (ಅದ್ಭುತಂ ಬ್ರಹ್ಮಸೂತ್ರಗಣಭಾಷ್ಯಂ ಅತನೋತ್.)

**ಅರ್ಥ** :—ಅಸ್ತದೂಷಣಂ = ಅಪಶಬ್ದಾದಿದೋಷಗಳಿಲ್ಲದ, ಕಾಮಾದಿ ದೋಷಗಳಿಲ್ಲದ, ಅವಂಧ್ಯಭಾಷಣಂ = ನಿಷ್ಫಲವಾಗದಿರುವ ಮಾತುಳ್ಳ, ಸತ್ಯವಾದ ಮಾತುಳ್ಳ, ಸಕಲಲಕ್ಷಣೈಃ ಸಮಂ=ಭಾಷ್ಯದ ಎಲ್ಲಾ ಲಕ್ಷಣಗಳೊಡನೆ, ಲಕ್ಷಿತಂ = ಲಕ್ಷಣವುಳ್ಳದ್ದಾಗಿ ವರ್ಣಿಸಲ್ಪಟ್ಟ, ಮೂವತ್ತೆರಡುಲಕ್ಷಣಗಳಿಂದ ಕೂಡಿದ, ನಾಕಿನಾಯಕೈಃ ಅಪಿ = ದೇವಶ್ರೇಷ್ಠರಿಂದಲೂ, ಮಾನನೀಯಂ = ಪೂಜ್ಯವಾದ, ಧನ್ಯಂ = ಪುಣ್ಯಕರವಾದ, ಆತ್ಮನಃ = ತನ್ನ, ಅನ್ಯತ್ ರೂಪಂ

Rarest Archiver

ಇವ = ಮತ್ತೊಂದು ಆಕೃತಿಯಂತಿರುವ (ಆಶ್ಚರ್ಯಕರವಾದ ಬ್ರಹ್ಮಸೂತ್ರ ಸಮೂಹದ ಭಾಷ್ಯವನ್ನು ರಚಿಸಿದರು.)

ತಾ :—ಅಪಶಬ್ದಾದಿದೋಷಗಳಿಲ್ಲದೆ, ನಿರರ್ಥಕವಾದ ಮಾತುಗಳಿಲ್ಲದೆ, ಸಕಲಭಾಷ್ಯಲಕ್ಷಣಗಳಿಂದ ವ್ಯತ್ಯಾಸವಿಲ್ಲದೆ ಕೂಡಿದ್ದ ದೇವಶ್ರೇಷ್ಠರಿಗೂ ಮಾನ್ಯವಾದ ಪುಣ್ಯಕರವಾದ ಆಚಾರ್ಯರ ಭಾಷ್ಯವು, ನಿರ್ದೋಷವಾದ ಪ್ರಯೋಜನವಿಲ್ಲದ ಮಾತುಗಳಿಲ್ಲದ ಮೂವತ್ತೆರಡು ಮಹಾಪುರುಷಲಕ್ಷಣ ಗಳಿಂದ ಕೂಡಿದ ದೇವಶ್ರೇಷ್ಠರಿಗೂ ಮಾನ್ಯವಾದ, ಪುಣ್ಯಕರವಾದ ಅವರ ಸ್ವರೂಪದಂತೆ ಇದ್ದಿತು. ಇಂತಹ ಆಶ್ಚರ್ಯಕರವಾದ ಬ್ರಹ್ಮಸೂತ್ರಭಾಷ್ಯ ವನ್ನು ಆಚಾರ್ಯರು ರಚಿಸಿದರು.

ವಿ :—ಅಸ್ತಾನಿ ದೂಷಣಾನಿ ಯಸ್ಮಾತ್ ತತ್ ಅಸ್ತದೂಷಣಂ, ನ ವಂಧ್ಯಾನಿ ಅವಂಧ್ಯಾನಿ, ಅವಂಧ್ಯಾನಿ ಭಾಷಣಾನಿ ಯಸ್ಮಿನ್ ತತ್, ಸಕ-ಲಾನಿ ಚ ತಾನಿ ಲಕ್ಷಣಾನಿ ಚ ಸಕಲಲಕ್ಷಣಾನಿ ತೈಃ, ಮಾನಯಿತುಂ ಯೋಗ್ಯಂ ಮಾನನೀಯಂ, ನಾಕಃ ಏಷಾಂ ಅಸ್ತೀತಿ ನಾಕಿನಃ ನಾಕಿನಾಂ ನಾಯಕಾಃ ನಾಕಿನಾಯಕಾಃ ತೈಃ.

ಭಾಷ್ಯಲಕ್ಷಣ :—

ಸೂತ್ರಾರ್ಥೋ ವರ್ಣ್ಯತೇ ಯತ್ರ ಪದೈಃ ಸೂತ್ರಾನುಕಾರಿಭಿಃ |
ಸ್ವಪದಾನಿ ಚ ವರ್ಣ್ಯಂತೇ ಭಾಷ್ಯಂ ಭಾಷ್ಯವಿದೋ ವಿದುಃ ||

ಸೂತ್ರವನ್ನು ಅನುಕರಿಸುತ್ತಿರುವ ಪದಗಳಿಂದ ಎಲ್ಲಿ ಸೂತ್ರಾರ್ಥವು ವರ್ಣಿಸಲ್ಪಡುತ್ತದೆಯೋ ಮತ್ತು ಸೂತ್ರವಿವರಣಾತ್ಮಕವಾದ ತಮ್ಮ ಪದ ಗಳೂ ಎಲ್ಲಿ ವರ್ಣಿಸಲ್ಪಡುತ್ತವೆಯೋ ಅದು ಭಾಷ್ಯ ಎಂಬುದಾಗಿ ಭಾಷ್ಯಜ್ಞರು ತಿಳಿಯುತ್ತಾರೆ.

ಏಕವಿಂಶತಿಕುಭಾಷ್ಯದೂಷಕಂ
ಬ್ರಹ್ಮಸೂತ್ರಗಣಭಾಷ್ಯಮುದ್ಭೃತಂ |
ಅಪ್ಯದೂಷ್ಯಮತನೋದನಂತಧೀ
ರ್ಭೂತಭಾವಿಭವದಾತ್ಮಭಿಃ ಕ್ವಚಿತ್ ||೧೨||

Rarest Archiver

ಅ :—ಅನಂತಧೀಃ ಏಕವಿಂಶತಿಕುಭಾಷ್ಯದೂಷಕಂ, ಭೂತಭಾವಿಭವ-ದಾತ್ಮಭಿಃ, ಕ್ವಚಿತ್ ಅಪಿ ಅದೂಷ್ಯಂ ಅದ್ಭುತಂ ಬ್ರಹ್ಮಸೂತ್ರಗಣಭಾಷ್ಯಂ ಅತನೋತ್.

ಅರ್ಥ :—ಅನಂತಧೀಃ = ಶ್ರೀಪೂರ್ಣಪ್ರಜ್ಞಾಚಾರ್ಯರು, ಏಕ-ವಿಂಶತಿಕುಭಾಷ್ಯದೂಷಕಂ=ಇಪ್ಪತ್ತೊಂದು ದುರ್ಭಾಷ್ಯಗಳನ್ನು ಖಂಡಿಸುವ, ಭೂತ = ಹಿಂದೆ ಆಗಿಹೋದ, ಭಾವಿ = ಮುಂದೆ ಬರಲಿರುವ, ಭವತ್= ಈಗಿರುವ, ಆತ್ಮಭಿಃ = ಜೀವಾತ್ಮರುಗಳಿಂದ, (ಕ್ವಚಿತ್ ಅಪಿ = ಯಾವ ಭಾಗದಲ್ಲಿಯೂ) ಅದೂಷ್ಯಂ = ಖಂಡಿಸಲು ಅಸಾಧ್ಯವಾದ, ಅದ್ಭುತಂ= ಆಶ್ಚರ್ಯಕರವಾದ, ಬ್ರಹ್ಮಸೂತ್ರಗಣಭಾಷ್ಯಂ= ಬ್ರಹ್ಮಸೂತ್ರಗಳ ಭಾಷ್ಯವನ್ನು, ಅತನೋತ್ = ರಚಿಸಿದರು.

ತಾ :—ಆಚಾರ್ಯರ ಭಾಷ್ಯವು ಇಪ್ಪತ್ತೊಂದು ದುರ್ಭಾಷ್ಯಗಳನ್ನು ನಿರಾಕರಿಸುವಂತಹುದು ಆಗಿತ್ತು. ಭೂತಭವಿಷ್ಯದ್ವರ್ತಮಾನಗಳೆಂಬ ಕಾಲ ತ್ರಯದಲ್ಲಿಯೂ ಇರುವ ಯಾವ ವಾದಿಗಳಿಂದಲೂ ಯಾವ ಪ್ರಮಾಣ ಪ್ರಮೇಯಭಾಗದಲ್ಲಿಯೂ ದೂಷಿಸಲು ಅಸಾಧ್ಯವಾಗಿತ್ತು. ಆಶ್ಚರ್ಯಕರವೂ ಆಗಿತ್ತು. ಇಪ್ಪತ್ತೊಂದು ಭಾಷ್ಯಗಳನ್ನು ನಿರಾಕರಿಸಿದ ಮೂರುಕಾಲದಲ್ಲಿರುವ ವಾದಿಗಳಿಂದಲೂ ಸೋಲಿಸಲು ಅಸಾಧ್ಯವಾದ ಆಶ್ಚರ್ಯಕರವಾದ ತನ್ನ ಮತ್ತೊಂದು ರೂಪದಂತೆ ಇರುವ ಇಂತಹ ಬ್ರಹ್ಮಸೂತ್ರಭಾಷ್ಯವನ್ನು ಶ್ರೀಮಧ್ವಾಚಾರ್ಯರು ರಚಿಸಿದರು.

### ಇಪ್ಪತ್ತೊಂದು ಭಾಷ್ಯಕಾರರು:—

ಭಾರತೀವಿಜಯಶ್ಚೈವ ಸಚ್ಚಿದಾನಂದ ಏವ ಚ ।
ಬ್ರಹ್ಮಘೋಷಃ ಶತಾನಂದ ಉದ್ವರ್ತಶ್ಚೈವ ಪಂಚಮಃ ॥
ವಿಜಯೋ ರುದ್ರಭಟ್ಟಶ್ಚ ವಾಮನಾಖ್ಯಸ್ತಥಾಷ್ಟಮಃ ।
ಸ ಯಾದವಪ್ರಕಾಶಶ್ಚ ನವಮಸ್ತತ್ರ ಕೀರ್ತಿತಃ ॥
ರಾಮಾನುಜಸ್ತಥಾ ಭರ್ತೃಪ್ರಪಂಚೋ ದ್ರವಿಡಸ್ತಥಾ ।
ಬ್ರಹ್ಮದತ್ತೋ ಭಾಸ್ಕರಶ್ಚ ಪಿಶಾಚೋ ವೃತ್ತಿಕಾರಕಃ ॥

Rarest Archiver

**ತಥಾ ವಿಜಯಭಟ್ಟಶ್ಚ ವಿಷ್ಣುಕ್ರಾಂತಸ್ತಥೈವ ಚ ।**
**ವಾದೀಂದ್ರಸ್ತು ತತಃ ಪಶ್ಚಾತ್ ತತೋ ಮಾಧವದಾಸಕಃ ॥**
**ತತಃ ಪಶ್ಚಾತ್ ಸಂಕರಶ್ಚೇತ್ಯೇಕವಿಂಶತಿವಾದಿಭಿಃ ।**
**ಪ್ರಣೀತಾನಿ ನಿರಾಚಕ್ರೇ ಕುಭಾಷ್ಯಾಣಿ ಮಹಾಮತಿಃ ॥**

**ವಿ :**—ಏಕಾಧಿಕಾ ವಿಂಶತಿಃ ಏಕವಿಂಶತಿಃ ಕುತ್ಸಿತಾನಿ ಚ ತಾನಿ ಭಾಷ್ಯಾಣಿ ಚ ಕುಭಾಷ್ಯಾಣಿ ಏಕವಿಂಶತಿಶ್ಚ ತಾನಿ ಕುಭಾಷ್ಯಾಣಿ ಚ ಏಕವಿಂಶತಿಕುಭಾಷ್ಯಾಣಿ, ತಾನಿ ದೂಷಯತೀತಿ ಏಕವಿಂಶತಿಕುಭಾಷ್ಯ-ದೂಷಕಂ ತತ್. ಬ್ರಹ್ಮಸೂತ್ರಾಣಾಂ ಗಣಃ ಬ್ರಹ್ಮಸೂತ್ರಗಣಃ ಬ್ರಹ್ಮ ಸೂತ್ರಗಣಸ್ಯ ಭಾಷ್ಯಂ ಬ್ರಹ್ಮಸೂತ್ರಗಣಭಾಷ್ಯಂ ತತ್, ದೂಷಯಿತುಂ ಅಶಕ್ಯಂ ಅದೂಷ್ಯಂ, ಅನಂತಾ ಧೀಃ ಯಸ್ಯ ಸಃ ಅನಂತಧೀಃ ಭೂತಾಶ್ಚ ತೇ ಭಾವಿನಶ್ಚತೇ ಭವಂತಶ್ಚ ತೇ ಭೂತಭಾವಿಭವಂತಃ ತಾದೃಶಾಶ್ಚ ತೇ ಆತ್ಮಾನಶ್ಚ ಭೂತಭಾವಿಭವದಾತ್ಮಾನಃ ತೈಃ.

**ಕ್ರಿ :**—ಅತನೋತ್ ಅತನುತಾಂ ಅತನ್ವನ್, ಅತನೋಃ ಅತನುತಂ ಅತನುತ, ಅತನವಮ್ ಅತನುವ ಅತನ್ವ ಅತನುಮ ಅತನ್ಮ. ತನು— ವಿಸ್ತಾರೇ ಲಙ್ ।

**ಅವ :**—ಆಚಾರ್ಯರಿಗೆ ಪರಮಪ್ರೀತಿಪಾತ್ರರಾದ ಸತ್ಯತೀರ್ಥರು ಈ ಭಾಷ್ಯವನ್ನು ಬರೆದರು—

**ಗಾಂಗಮಂಗಲತರಂಗಭಂಗದ**
**ಪ್ರಾಂತಸುಶ್ರೀಹರಿವೇಶ್ಮಕೃತ್ಸಮಃ ।**
**ಯದ್ಗತೈಕತಮವರ್ಣಲೇಖಕಃ**
**ಸತ್ಯತೀರ್ಥ ಇಹ ಭಾಷ್ಯಮಾಲಿಖತ್ ॥** ॥೧೩॥

**ಅ :**— ಯದ್ಗತೈಕತಮವರ್ಣಲೇಖಕಃ, ಗಾಂಗಮಂಗಲತರಂಗ-ಭಂಗದಪ್ರಾಂತಸುಶ್ರೀಹರಿವೇಶ್ಮಕೃತ್ಸಮಃ, ಇಹ, ಸತ್ಯತೀರ್ಥಃ ಭಾಷ್ಯಮ್ ಆಲಿಖತ್.

Rarest Archiver

**ಅರ್ಥ**—ಯದ್ಗತ = ಯಾವ ಮಧ್ವಭಾಷ್ಯದಲ್ಲಿರುವ, ಏಕತಮವರ್ಣ = ಯಾವುದಾದರೊಂದು ಅಕ್ಷರವನ್ನು, ಲೇಖಕಃ = ಬರೆಯುವವನು, ಗಾಂಗ = ಗಂಗಾಸಂಬಂಧಿಯಾದ, ಮಂಗಲ = ಮಂಗಳಕರವಾದ, ತರಂಗ = ಅಲೆಗಳಿಗೆ, ಭಂಗದ = ತಡೆಯನ್ನುಂಟುಮಾಡುವ, ಪ್ರಾಂತ = ತೀರಸಮೀಪದಲ್ಲಿ, ಸುಶ್ರಿ = ಒಳ್ಳೆಯ ಶೋಭೆಯುಳ್ಳ, ಹರಿವೇಶ್ಮ = ವಿಷ್ಣುದೇವಾಲಯವನ್ನು, ಕೃತ್ = ಮಾಡಿದವನಿಗೆ, ಸಮಃ = ಸಮಾನನಾಗುತ್ತಾನೋ, ಇಹ = ಈ ಭಾಷ್ಯನಿರ್ಮಾಣಸಮಯದಲ್ಲಿ, ಸತ್ಯತೀರ್ಥಃ = ಸತ್ಯತೀರ್ಥರು, (ತತ್) ಭಾಷ್ಯಂ = ಅಂತಹ ಸೂತ್ರಭಾಷ್ಯವನ್ನು, ಅಲಿಖತ್ = ಬರೆದರು.

**ತಾ :**—ಶ್ರೀಮಧ್ವಭಾಷ್ಯದ ಅನೇಕಅಕ್ಷರಗಳಲ್ಲಿ ಒಂದಕ್ಷರವನ್ನು ಬರೆದವನೂ ಕೂಡ ಗಂಗಾನದಿಯ ಮಂಗಳಕರವಾದ ಅಲೆಗಳು ಬಡಿಯುವ ದಡದಲ್ಲಿ ಭವ್ಯವಾದ ವಿಷ್ಣುದೇವಾಲಯವನ್ನು ನಿರ್ಮಾಣಮಾಡಿದವನಿಗೆ ಸಮಾನನಾಗುತ್ತಾನೆ. ವಿಷ್ಣುದೇವಾಲಯನಿರ್ಮಾಣವನ್ನು ಮಾಡಿದಾಗ ಸಂಪಾದಿಸುವ ಪುಣ್ಯದಷ್ಟು ಪುಣ್ಯವನ್ನು ಪಡೆಯುತ್ತಾನೆ. ಅಂತಹ ವ್ಯಾಸಸಮ್ಮತವಾದ ಮಧ್ವಭಾಷ್ಯವನ್ನು ಮೊದಲು ಶ್ರೀಸತ್ಯತೀರ್ಥರು ಬರೆದರು.

ವಿ :—ಗಂಗಾಯಾಃ ಇಮೇ ಗಾಂಗಾಃ ಗಾಂಗಾಶ್ಚ ತೇ ಮಂಗಲಾಶ್ಚ ತೇ ತರಂಗಾಶ್ಚ ಗಾಂಗಮಂಗಲತರಂಗಾಃ, ತೇಷಾಂ ಭಂಗಂ ದದಾತೀತಿ ಗಾಂಗ .... ಭಂಗದಃ ಸ ಚಾಸೌ ಪ್ರಾಂತಶ್ಚ ಗಾಂಗ .... ಪ್ರಾಂತಃ, ಸು ಶೋಭನಾ ಶ್ರೀಃ ಯಸ್ಯ ತತ್ ಸುಶ್ರಿ ಸುಶ್ರಿ ಚ ತತ್ ಹರೇಃ ವೇಶ್ಮ ಚ, ಗಾಂಗ.... ಪ್ರಾಂತೇ ಸುಶ್ರಿ ಹರಿವೇಶ್ಮ, ತತ್ ಕರೋತೀತಿ ಗಾಂಗ.... ಹರಿವೇಶ್ಮಕೃತ್ ತೇನ ಸಮಃ, ಯಸ್ಮಿನ್ ಗತಾಃ ಯದ್ಗತಾಃ ಏಕತಮಶ್ಚಾಸೌ ವರ್ಣಶ್ಚ ಏಕತಮವರ್ಣಃ, ಯದ್ಗತೇಷು ಏಕತಮವರ್ಣಃ ಯದ್ಗತೈಕತಮವರ್ಣಃ, ಯದ್ಗತೈಕತಮವರ್ಣಸ್ಯ ಲೇಖಕಃ ಯದ್ಗತೈಕತಮವರ್ಣಲೇಖಕಃ.

**ಕ್ರಿ:**—ಅ + ಅಲಿಖತ್. ಅಲಿಖತಾಂ ಅಲಿಖತಾಂ ಅಲಿಖನ್ ಇತ್ಯಾದಿ ಲಿಖ-ಅಕ್ಷರವಿನ್ಯಾಸೇ ಲಙ್.

Rarest Archiver

ಅವ :—ಹೀಗೆ ಭಾಷ್ಯವನ್ನು ಮಾಡಿದ ಮೇಲೆ ಅದರ ಪ್ರಚಾರಕ್ಕಾಗಿ ವ್ಯಾಸಾಜ್ಞೆಯನ್ನು ಶಿರಸಾ ವಹಿಸಿ ಅನಂತಮಠದಿಂದ ಹೊರಟು ಆಚಾರ್ಯರು ಗೋದಾವರೀತೀರಕ್ಕೆ ಬಂದರು.

**ತತ್ರ ದೇವಮಭಿವಂದ್ಯ ಯಾತವಾನ್**
**ಸ್ವಾಮಿನೋ ವಚನಗೌರವಾದ್ ದ್ರುತಮ್ ।**
**ಸಾನುಗೋ ವಿವಿಧಭೂರತೀತ್ಯ ಗೋ-**
**ದಾವರೀತಟಮಗಾದಲೇಶಧೀಃ ॥** ॥೧೪॥

ಅ :—ತತ್ರ ದೇವಂ ಅಭಿವಂದ್ಯ ಸ್ವಾಮಿನಃ ವಚನಗೌರವಾತ್ ದ್ರುತಂ ಯಾತವಾನ್ ಸಾನುಗಃ ಅಲೇಶಧೀಃ ವಿವಿಧಭೂಃ ಅತೀತ್ಯ ಗೋದಾವರೀ-ತಟಂ ಅಗಾತ್.

ಅರ್ಥ :—ತತ್ರ=ಆ ಬದರಿಕಾಶ್ರಮದಲ್ಲಿ, ದೇವಂ=ಬದರೀನಾರಾಯಣ ದೇವರನ್ನು, ಅಭಿವಂದ್ಯ=ನಮಸ್ಕರಿಸಿ, ಸ್ವಾಮಿನಃ=ನಾರಾಯಣಮುನಿ ಗಳ, ವಚನಗೌರವಾತ್=ಆಜ್ಞಾವಚನದಲ್ಲಿರುವ ಗೌರವದಿಂದ, ದ್ರುತಂ ಯಾತವಾನ್=ಶೀಘ್ರವಾಗಿ ಹೊರಟ, ಸಾನುಗಃ=ಪರಿವಾರಸಹಿತರಾದ, ಅಲೇಶಧೀಃ=ಶ್ರೀಪೂರ್ಣಪ್ರಜ್ಞರು, ವಿವಿಧಭೂಃ=ನಾನಾಪ್ರದೇಶಗಳನ್ನು, ಅತೀತ್ಯ=ದಾಟಿ, ಗೋದಾವರೀತಟಂ=ಗೋದಾವರೀತೀರವನ್ನು ಕುರಿತು, ಅಗಾತ್=ಹೋದರು.

ತಾ :—ಶ್ರೀಪೂರ್ಣಪ್ರಜ್ಞಾಚಾರ್ಯರು ಆ ಬದರಿಕಾಶ್ರಮದಲ್ಲಿ ಬದರೀ ನಾರಾಯಣದೇವರನ್ನು ವಂದಿಸಿದರು. 'ಕುರು ಸೂತ್ರಭಾಷ್ಯವಿಲಂಬಿತಂ ವ್ರಜೇಃ' 'ಸೂತ್ರಭಾಷ್ಯವನ್ನು ಮಾಡು, ಬೇಗನೆ ಭಾರತಭೂಮಿಗೆ ಹೋಗು' ಎಂಬ ನಾರಾಯಣಮುನಿಗಳ ಆಜ್ಞಾವಚನದ ಮೇಲಿನ ಗೌರವದಿಂದ ಬೇಗನೆ ಪರಿವಾರಸಮೇತರಾಗಿ ಪ್ರಯಾಣಮಾಡುತ್ತಾ ಅನೇಕದೇಶಗಳನ್ನು ದಾಟಿ ಗೋದಾವರೀತೀರಕ್ಕೆ ಬಂದರು.

ವಿ :—ವಚನೇ ಗೌರವಂ ವಚನಗೌರವಂ, ತಸ್ಮಾತ್, ಅನುಗೈಃ ಸಹ ವರ್ತತೇ ಇತಿ ಸಾನುಗಃ, ವಿವಿಧಾಶ್ಚ ತಾಃ ಭುವಶ್ಚ ವಿವಿಧಭುವಃ ತಾಃ

Rarest Archiver

ವಿವಿಧಭೂಃ, ಗೋದಾವರ್ಯಾಃ ತಟಂ ಗೋದಾವರೀತಟಂ ತತ್. ಲೇಶಾ ನ ಭವತೀತಿ ಅಲೇಶಾ, ಅಲೇಶಾ ಧೀಃ ಯಸ್ಯ ಸಃ ಅಲೇಶಧೀಃ.

ಕ್ರಿ :—ಅಗಾತ್ ಅಗಾತಾಂ ಅಗುಃ, ಅಗಾಃ ಅಗಾತಂ ಅಗಾತ, ಅಗಾಂ ಅಗಾವ ಅಗಾಮ. ಇಣ್ ಗತೌ, ಲುಙ್, ಇಣೋ ಗಾ ಲುಙಿ ಎಂಬ ಸೂತ್ರದಿಂದ 'ಗಾ' ಆದೇಶ.

**ವಿಶೇಷ ವಿಚಾರ** :—ಇಲ್ಲಿ ಭೂಮಿವಾಚಕವಾದ ಭೂಶಬ್ದವನ್ನು ದ್ವಿತೀಯಾಬಹುವಚನದಲ್ಲಿ 'ವಿವಿಧಭುವಃ' ಎಂದು ಹೇಳಬೇಕಾಗಿತ್ತು, ವಿವಿಧಭೂಃ ಎಂದು ಹೇಳಿರುವುದು ಸರಿಯಲ್ಲವೆಂದು ಆಶಂಕಿಸಕೂಡದು. ಇದು ಮಹಾಕವಿಪ್ರಯೋಗವಾದುದರಿಂದ ಸಾಧು ಎಂದು ತಿಳಿಯಬೇಕು. **ಮಿತದ್ರ್ವಾದಿಭ್ಯಃ ಉಪಸಂಖ್ಯಾನಂ** (ವಾ.—2152) ಮಿತದ್ರು ಮುಂತಾದ ಶಬ್ದಗಳ ಸಿದ್ಧಿಗೋಸ್ಕರ ಡು ಪ್ರತ್ಯಯವನ್ನು ಅಧಿಕವಾಗಿ ಹೇಳಬೇಕು ಎಂಬ ವಾರ್ತಿಕದಿಂದ ಡುಪ್ರತ್ಯಯ ಬಂದು ಉಕಾರಾಂತ ಭು ಎಂಬ ಶಬ್ದ ದ್ವಿ. ಬಹು. ಧೇನೂಃ ಎಂಬಂತೆ ಭೂಃ ಎಂದಾಗಿದೆ ಎಂದೂ ತಿಳಿಯಬಹುದು. ಭೂಃ ಎಂಬ ಅವ್ಯಯ ಎಂದೂ ತಿಳಿಯಬಹುದು. ಭೂಧಾತುವಿಗೆ ಉಣಾದಿಸೂತ್ರದಿಂದ ಊಪ್ರತ್ಯಯಬಂದು ದ್ವಿ. ಬ. ಭೂಃ ಎಂದಾಗಿದೆ ಎಂದೂ ತಿಳಿಯಬಹುದು.

ಅವ:—ಆ ಗೋದಾವರೀತೀರದಲ್ಲಿ ಆಚಾರ್ಯರು ಮಾಡಿದ ವಾದಿ ದಿಗ್ವಿಜಯವನ್ನು ವರ್ಣಿಸುತ್ತಾರೆ—

**ಪ್ರಾಜ್ಞವಿತ್ತಮಯಮಾಪ್ತಮಾಗತೈಃ**
**ಪಂಡಿತೈರ್ದ್ವಿನವಶಾಖಿಭಿಃ ಶ್ರುತೀಃ ।**
**ಪ್ರಸ್ತುತಾ ಅಭಿದಧೌ ಪರೀಕ್ಷಕೈಃ**
**ಷಟ್ ಚ ತತ್ರ ಸಮಯಾನಖಂಡಯತ್** ॥೧೫॥

ಅ :—ಅಯಂ ತತ್ರ ಪ್ರಾಜ್ಞವಿತ್ತಂ ಆಪ್ತಂ ಆಗತೈಃ ದ್ವಿನವಶಾಖಿಭಿಃ ಪರೀಕ್ಷಕೈಃ ಪ್ರಸ್ತುತಾಃ ಶ್ರುತೀಃ ಅಭಿದಧೌ । ತತ್ರ ಷಟ್ ಸಮಯಾಂಶ್ಚ ಅಖಂಡಯತ್.

Rarest Archiver

ಅರ್ಥ : ಅಸೌ = ಈ ಮಧ್ವಾಚಾರ್ಯರು, ತತ್ರ = ಆ ಗೋದಾವರೀ ತೀರದಲ್ಲಿ, ಪ್ರಾಜ್ಞವಿತ್ತಂ = ಪಂಡಿತರಿಂದ ತಮ್ಮ ಪಾಂಡಿತ್ಯತಾರತಮ್ಯಕ್ರಮದಿಂದ ಹೊಂದಲು ಯೋಗ್ಯವಾದ ಹಣವನ್ನು, ಆಪ್ತುಂ = ಹೊಂದಲು, ಆಗತೈಃ = ಬಂದಿದ್ದ, ದ್ವಿನವಶಾಖಿಭಿಃ = ಹದಿನೆಂಟುವೇದಶಾಖೆಗಳನ್ನು ಬಲ್ಲ, ಪಂಡಿತೈಃ = ವಿದ್ವಾಂಸರಿಂದ, ಪ್ರಸ್ತುತಾಃ = ಪ್ರಸ್ತಾವಿತವಾದ, ಶ್ರುತೀಃ = ವೇದವಾಕ್ಯಗಳನ್ನು, ಅಭಿದಧೌ = ಹೇಳಿದರು. ಷಟ್ = ಆರು, ಸಮಯಾನ್ ಚ = ಸಿದ್ಧಾಂತಗಳನ್ನೂ, ಅಖಂಡಯತ್ = ಖಂಡಿಸಿದರು.

ತಾ: ಪರೀಕ್ಷಕರಾದ ಬಹಳ ಮಂದಿ ಪಂಡಿತರು ಆ ಗೋದಾವರೀ ತೀರದಲ್ಲಿ ಪಾಂಡಿತ್ಯದ ತಾರತಮ್ಯಕ್ರಮದಿಂದ ಬಹುಮಾನದ್ರವ್ಯವನ್ನು ಪಡೆಯಲು ಬಂದು ಸೇರಿದ್ದರು. ಹದಿನೆಂಟು ಶಾಖೆಗಳನ್ನು ಬಲ್ಲ ಅವರು ಆಚಾರ್ಯರನ್ನು ಪರೀಕ್ಷಿಸಲು ಕೆಲವು ಶ್ರುತಿವಾಕ್ಯಗಳನ್ನು ಪ್ರಸ್ತಾಪಿಸಿದರು. ಆಚಾರ್ಯರು ಆ ವೇದವಾಕ್ಯಗಳನ್ನು ಸರಿಯಾಗಿ ಪಠಿಸುತ್ತಾ ಪೂರ್ಣವಾಗಿ ಹೇಳಿ, ಅವುಗಳ ಅರ್ಥಗಳನ್ನು ಹೇಳಿದರು. ಮತ್ತು ಆ ಸಭೆಯಲ್ಲಿ ಆರು ಸಿದ್ಧಾಂತಗಳನ್ನು ನಿರಾಕರಿಸಿದರು.

ಪಾಣಿನೇರ್ಜೈಮಿನೇಶ್ಚೈವ ವ್ಯಾಸಸ್ಯ ಕಪಿಲಸ್ಯ ಚ ।
ಕಣಾದಸ್ಯಾಕ್ಷಪಾದಸ್ಯ ದರ್ಶನಾನಿ ಷಡೇವ ಹಿ ॥

ವ್ಯಾಕರಣ, ಮೀಮಾಂಸಾ, ವೇದಾಂತ (ರಾಮಾನುಜೀಯ, ಮತ್ತು ಶಾಂಕರ) ಸಾಂಖ್ಯ, ವೈಶೇಷಿಕ, ಗೌತಮೀಯ ಎಂದು ಆರು ದರ್ಶನಗಳು. ಆಚಾರ್ಯರು ಅವುಗಳನ್ನೂ ಮತ್ತು ಶಂಕರಾಚಾರ್ಯರು ಪ್ರಸಿದ್ಧಿಗೊಳಿಸಿದ ಶಾಕ್ತ, ಗಾಣಪತ, ಸೌರ, ಶೈವ, ವೈಷ್ಣವ, ಸ್ಕಾಂದ, ಎಂಬ ಆರುಸಿದ್ಧಾಂತಗಳನ್ನೂ ಖಂಡಿಸಿದರು. ವೈಷ್ಣವಮತವು ತನಗೆ ಸಂಮತವಾದರೂ ಶಂಕರಾಚಾರ್ಯರು ಹೇಳಿರುವ ರೀತಿಯು ತನಗೆ ಅಸಂಮತವಾದುದರಿಂದ ಅದನ್ನು ಖಂಡಿಸಿದರು. ಅಥವಾ ಭಾಟ್ಟ, ಪ್ರಾಭಾಕರ, ವೈಶೇಷಿಕ, ನೈಯಾಯಿಕ, ಚಾರ್ವಾಕ, ಬೌದ್ಧಸಿದ್ಧಾಂತಗಳನ್ನು ಖಂಡಿಸಿದರು.

ವಿ: — ಪ್ರಾಜ್ಞೈಃ ಲಭ್ಯಂ ವಿತ್ತಂ ಪ್ರಾಜ್ಞವಿತ್ತಂ ತತ್, ಅಥವಾ

Rarest Archiver

ಪ್ರಾಜ್ಞಾನಾಂ ವಿತ್ತಂ ಪ್ರಾಜ್ಞವಿತ್ತಂ ತತ್. ದ್ವಿರಾವೃತ್ತಾಃ ನವ ದ್ವಿನವ, ಅಥವಾ ದ್ವಿಗುಣಿತಾಃ ನವ ದ್ವಿನವ, ದ್ವಿನವ ಚ ತಾಃ ಶಾಖಾಶ್ಚ ದ್ವಿನವ-ಶಾಖಾಃ ತಾಃ ಏಷಾಂ ಸಂತೀತಿ ದ್ವಿನವಶಾಖಿನಃ ತೈಃ ;

**ಕ್ರಿ:**—ಅಭಿ+ದಧೌ ದಧತುಃ ದಧುಃ ಇತ್ಯಾದಿ. ಅಭಿ ಉಪ. ಡುಧಾಞ್ ಧಾರಣಪೋಷಣಯೋಃ ಲಿಟ್. ಅಖಂಡಯತ್ ಅಖಂಡ-ಯತಾಂ ಅಖಂಡಯನ್ ಇತ್ಯಾದಿ, ಖಡಿ ಭೇದನೇ ಚುರಾದಿ ಉಭಯಪದಿ. ಲಙ್.

ಅವ:—ಆಗ ವಾದಿಗಳು ಆಚಾರ್ಯರನ್ನು ಸ್ತುತಿಸಿದರು-

**ತೇ ಪೃಥಕ್ ಪೃಥಗಮುಂ ಸ್ವಶಾಖಯಾ**
**ದರ್ಶನೇನ ಚ ಪರೀಕ್ಷ್ಯ ನಿರ್ಜಿತಾಃ ।**
**ಸರ್ವವಿತ್ತ್ವಮಸಿ ಮುಖ್ಯತಃ ಕವೇ**
**ನಾಸ್ತಿ ತೇ ಸದೃಶ ಇತ್ಯಥಾಬ್ರುವನ್ ॥೧೬॥**

**ಅ:**—ತೇ ಪೃಥಕ್ ಪೃಥಕ್ ಅಮುಂ ಸ್ವಶಾಖಯಾ ದರ್ಶನೇನ ಚ ಪರೀಕ್ಷ್ಯ ನಿರ್ಜಿತಾಃ ಅಥ ಹೇ ಕವೇ ! ತ್ವಂ ಮುಖ್ಯತಃ ಸರ್ವವಿತ್ ಅಸಿ. ತೇ ಸದೃಶಃ ನ ಅಸ್ತಿ ಇತಿ ಅಬ್ರುವನ್.

**ಅರ್ಥ:**—ತೇ = ಆ ಪಂಡಿತರು, ಪೃಥಕ್ ಪೃಥಕ್ = ಪ್ರತ್ಯೇಕ ಪ್ರತ್ಯೇಕವಾಗಿ, ಅಮುಂ = ಈ ಶ್ರೀಮಧ್ವಾಚಾರ್ಯರನ್ನು, ಸ್ವಶಾಖಯಾ = ತಮ್ಮ ವೇದಶಾಖೆಯಿಂದ, ದರ್ಶನೇನ ಚ = ಸಿದ್ಧಾಂತದಿಂದಲೂ, ಪರೀಕ್ಷ್ಯ = ಪರೀಕ್ಷಿಸಿ, ನಿರ್ಜಿತಾಃ (ಸಂತಃ) = ಸೋತವರಾಗಿ, ಹೇ ಕವೇ ! = ಎಲೈ ಜ್ಞಾನಿಗಳೇ ! ತ್ವಂ = ನೀವು, ಮುಖ್ಯತಃ = ಸರಿಯಾದ ಅರ್ಥದಿಂದ, ಸರ್ವವಿತ್ = ಸರ್ವಜ್ಞರು, ಅಸಿ = ಆಗಿದ್ದೀರಿ. ತೇ = ನಿಮಗೆ, ಸದೃಶಃ = ಸಮಾನರಾದವರು, ನಾಸ್ತಿ = ಇಲ್ಲ, ಇತಿ = ಹೀಗೆಂದು, ಅಬ್ರುವನ್ = ಹೇಳಿದರು.

**ತಾ:**—ಆ ಪಂಡಿತರು ಈ ಮಧ್ವಾಚಾರ್ಯರನ್ನು ಪ್ರತ್ಯೇಕ ಪ್ರತ್ಯೇಕ ವಾಗಿ ತಮ್ಮ ತಮ್ಮ ಶಾಖೆಯಿಂದಲೂ, ಸಿದ್ಧಾಂತಗಳಿಂದಲೂ ಪರೀಕ್ಷಿಸಿ

Rarest Archiver

ತಾವೆಲ್ಲರೂ ಸೋತರು. ಆ ಬಳಿಕ ಅವರೆಲ್ಲರೂ, 'ಎಲೈ ಪಂಡಿತಶ್ರೇಷ್ಠರಾದ ಶ್ರೀಮಧ್ವಾಚಾರ್ಯರೇ! ನೀವು ಸರ್ವಜ್ಞರು, (ಎಲ್ಲವನ್ನೂ ತಿಳಿದವರು) ಎಂಬ ಹೆಸರಿಗೆ ತಕ್ಕವರಾಗಿದ್ದೀರಿ. ನಿಮಗೆ ಸಮಾನನಾದ ಪಂಡಿತನು ಯಾರೂ ಇಲ್ಲ.' ಎಂದು ಹೇಳಿದರು.

ವಿ :—ಸ್ವಸ್ಯ ಶಾಖಾ ಸ್ವಶಾಖಾ ತಯಾ, ಸರ್ವಂ ವೇತ್ತಿ ಇತಿ ಸರ್ವವಿತ್.

ಕ್ರಿ :—ಅಸ್ತಿ, ಅಸಿ, ಅಸ್ಮಿ ಸ್ತಃ ಸಂತಿ, ಅಸಿ ಸ್ಥಃ ಸ್ಥ ಇತ್ಯಾದಿ. ಅಸ ಭುವಿ ಅಕ. ಲಿಟ್. ಅಬ್ರುವನ್, ಅಬ್ರವೀತ್ ಅಬ್ರೂತಾಂ ಅಬ್ರುವನ್ ಇತ್ಯಾದಿ ಬ್ರೂಞ್ ವ್ಯಕ್ತಾಯಾಂ ವಾಚಿ ಅನದ್ಯತನಭೂತೇ ಲಙ್.

ಅವ :—ಅಲ್ಲಿ ಸೇರಿದ ಸಭ್ಯರಲ್ಲಿ ಅತಿಶ್ರೇಷ್ಠ ಪಂಡಿತರೆನಿಸಿದ ಶೋಭನ ಭಟ್ಟರು ಆಚಾರ್ಯರ ಪಾಂಡಿತ್ಯಕ್ಕೆ ಮನಸೋತು ಅವರನ್ನು ವಂದಿಸಿದರು—

**ಯಸ್ತ್ರಯೀಸಕಲಪಕ್ಷಶಿಕ್ಷಕ-**
**ಸ್ತತ್ರ ಸಂಸದಿ ವರಿಷ್ಠಸಂಮತಃ ।**
**ಶೋಭನೋಪಪದಭಟ್ಟನಾಮಕಃ**
**ಪೂರ್ಣಸಂಖ್ಯಮನಮನ್ಮಹುರ್ಮುದಾ ॥೧೭॥**

ಅ: —ತ್ರಯೀಸಕಲಪಕ್ಷಶಿಕ್ಷಕಃ ತತ್ರ ಸಂಸದಿ ವರಿಷ್ಠಸಂಮತಃ ಯಃ ಶೋಭನೋಪಪದಭಟ್ಟನಾಮಕಃ (ಸಃ) ಪೂರ್ಣಸಂಖ್ಯಂ ಮುಹುಃ ಮುದಾ ಅನಮತ್.

ಅರ್ಥ :—ತ್ರಯೀ=ಮೂರುವೇದಗಳ, ಸಕಲ=ಎಲ್ಲಾ, ಪಕ್ಷ=ಲಕ್ಷಣಸಿದ್ಧಾಂತತಾತ್ಪರ್ಯಗಳ, ಶಿಕ್ಷಕಃ=ಉಪದೇಶಕನಾದ, ತತ್ರ ಸಂಸದಿ =ಆ ಸಭೆಯಲ್ಲಿ, ವರಿಷ್ಠಸಂಮತಃ=ಶ್ರೇಷ್ಠನೆಂದು ತಿಳಿಯಲ್ಪಟ್ಟ (ಅಥವಾ ಶ್ರೀಪೂರ್ಣಪ್ರಜ್ಞರಿಗೆ ಇಷ್ಟನಾದ), ಯಃ=ಯಾವ, ಶೋಭನೋಪಪದ= ಶೋಭನವೆಂಬಪದಕ್ಕೆ ಸಮೀಪದಪದವಾದ, ಭಟ್ಟನಾಮಕಃ = ಭಟ್ಟನೆಂಬ ಹೆಸರುಳ್ಳವನೋ (ಶೋಭನಭಟ್ಟರು) (ಸಃ=ಅವನು), ಪೂರ್ಣಸಂಖ್ಯಂ=

Rarest Archiver

ಶ್ರೀಪೂರ್ಣಪ್ರಜ್ಞರನ್ನು, ಮುಹುಃ=ಬಹಳವಾಗಿ, (ಕೂಡಲೇ, ಪುನಃ ಪುನಃ) ಮುದಾ=ಸಂತೋಷದಿಂದ, ಅನಮತ್=ನಮಸ್ಕಾರಮಾಡಿದನು.

**ತಾ :**—ಯಾವನು ಋಗ್ಯಜುಃಸಾಮವೇದಗಳೆಂಬ ಮೂರುವೇದಗಳ ಎಲ್ಲಾ ಲಕ್ಷಣ-ಸಿದ್ಧಾಂತ-ತಾತ್ಪರ್ಯಗಳನ್ನು ನಿರ್ಣಯಿಸಿ ಉಪದೇಶ ಮಾಡ ತಕ್ಕವನಾಗಿದ್ದನೋ, ಆ ಪಂಡಿತಸಭೆಯಲ್ಲಿ ಪಂಡಿತಶ್ರೇಷ್ಠನೆಂದು ಸರ್ವರಿಗೂ ಸಂಮತನಾಗಿದ್ದನೋ, ಮತ್ತು ಆಚಾರ್ಯರಿಗೂ ಪ್ರೀತಿವಿಷಯನಾಗಿದ್ದನೋ ಅಂತಹ ಮಹಾತ್ಮನಾದ ಶೋಭನಭಟ್ಟನೆಂಬ ವಿದ್ವಾಂಸನು ಆಚಾರ್ಯರ ಪಾಂಡಿತ್ಯಕ್ಕೆ ಮೆಚ್ಚಿ ಸಂತೋಷದಿಂದ ಭಕ್ತಿಪುರಸ್ಸರವಾಗಿ ಶ್ರೀಮಧ್ವಾಚಾರ್ಯರಿಗೆ ಬಹಳವಾಗಿ ಪುನಃ ಪುನಃ ನಮಸ್ಕರಿಸಿದನು. ಶಾಸ್ತ್ರತಾತ್ಪರ್ಯವನ್ನು ನಿರ್ಣಯಿಸುವವರಲ್ಲಿ ಶ್ರೀಮಧ್ವಾಚಾರ್ಯರೇ ಅತ್ಯಂತಶ್ರೇಷ್ಠರಾದುದರಿಂದ ಇವರಿಂದಲೇ ಶಾಸ್ತ್ರತತ್ವವನ್ನು ತಿಳಿಯುವೆನೆಂದು ವಿಚಾರಮಾಡಿ ಶೋಭನ ಭಟ್ಟರು ಬಹಳ ಸಂತೋಷ ಮತ್ತು ಭಕ್ತಿಯಿಂದ ಆಚಾರ್ಯರ ಪಾದಗಳಿಗೆ ಎರಗಿದರು ಎಂದು ಭಾವ.

**ಕ್ರಿ :**—ಸಕಲಾಶ್ಚ ತೇ ಪಕ್ಷಾಶ್ಚ ಸಕಲಪಕ್ಷಾಃ, ತ್ರಯ್ಯಾಃ ಸಕಲ-ಪಕ್ಷಾಃ ತ್ರಯೀಸಕಲಪಕ್ಷಾಃ, ತ್ರಯೀಸಕಲಪಕ್ಷಾಣಾಂ ಶಿಕ್ಷಕಃ ತ್ರಯೀ-ಸಕಲಪಕ್ಷಶಿಕ್ಷಕಃ, ವರಿಷ್ಠಃ ಇತಿ ಸಂಮತಃ ವರಿಷ್ಠಸಂಮತಃ (ವರಿಷ್ಠಸ್ಯ ಸಂಮತಃ ವರಿಷ್ಠಸಂಮತಃ) ಭಟ್ಟ ಇತಿ ನಾಮ ಭಟ್ಟನಾಮ, ಶೋಭನ ಇತಿ ಉಪಪದಂ ಯಸ್ಯ ತತ್ ಶೋಭನೋಪಪದಂ, ಶೋಭನೋಪಪದಂ ಭಟ್ಟ-ನಾಮ ಯಸ್ಯ ಸಃ ಶೋಭನೋಪಪದಭಟ್ಟನಾಮಕಃ, ಪೂರ್ಣಾ ಸಂಖ್ಯಾ ಯಸ್ಯ ಸಃ ಪೂರ್ಣಸಂಖ್ಯಃ ತಂ, ಸಂಖ್ಯಾ=ಮನಸ್ಸಿನಿಂದ ವಿಷಯ ಪರೀಕ್ಷಣೆ Investigation, ಚರ್ಚಾ ಸಂಖ್ಯಾ ವಿಚಾರಣಾ—ಅಮರ.

**ಅವ :**—ಆ ಶೋಭನಭಟ್ಟರ ಪಾಂಡಿತ್ಯವು ಹೇಗಿತ್ತು ?—

**ಯಸ್ತು ತಾರ್ಕಿಕಶಿಖಾಮಣಿಃ ಸುಧೀ-**
**ರ್ವರ್ತಮಾನಸಮಯಾನ್ ನಿರಾಕರೋತ್ ।**
**ವೇದಭಾರತಪುರಾಣನಿಷ್ಠಿತೋ**
**ಭಾಷ್ಯಮೇತದಶೃಣೋತ್ ಸ ಮಧ್ವತಃ ॥೧೮॥**

ಅ :—ತಾರ್ಕಿಕಶಿಖಾಮಣಿಃ ಸುಧೀಃ ಯಃ ತು ವರ್ತಮಾನಸಮ-ಯಾನ್ ನಿರಾಕರೋತ್, ವೇದಭಾರತಪುರಾಣನಿಷ್ಠಿತಃ ಸಃ ಏತತ್ ಭಾಷ್ಯಂ ಮಧ್ವತಃ ಅಶೃಣೋತ್.

ಅರ್ಥ : ತಾರ್ಕಿಕಶಿಖಾಮಣಿಃ = ತರ್ಕಶಾಸ್ತ್ರವನ್ನು ಅರಿತವರಲ್ಲಿ ಶ್ರೇಷ್ಠನಾದ, ಸುಧೀಃ = ಪಂಡಿತನಾದ, ಯಃ ತು = ಯಾವ ಶೋಭನಭಟ್ಟರಾದರೋ, ವರ್ತಮಾನಸಮಯಾನ್ = ಆ ಕಾಲದಲ್ಲಿ ಪ್ರಚಲಿತವಾಗಿದ್ದ ಭಾಟ್ಟಾದಿಸಿದ್ಧಾಂತಗಳನ್ನು, ನಿರಾಕರೋತ್ = ಖಂಡಿಸಿದ್ದರೋ, ವೇದಭಾರತಪುರಾಣನಿಷ್ಠಿತಃ = ವೇದಗಳು, ಮಹಾಭಾರತ, ಹದಿನೆಂಟು ಪುರಾಣಗಳು, ಇವುಗಳಲ್ಲಿ ಆದರವುಳ್ಳ, ಸಃ = ಆ ಶೋಭನಭಟ್ಟರು, ಏತತ್ ಭಾಷ್ಯಂ = ಶ್ರೀಮಧ್ವರು ರಚಿಸಿದ್ದ ಈ ಬ್ರಹ್ಮಸೂತ್ರಭಾಷ್ಯವನ್ನು, ಮಧ್ವತಃ = ಶ್ರೀಮಧ್ವಾಚಾರ್ಯರಿಂದಲೇ, ಅಶೃಣೋತ್ = ಕೇಳಿದರು.

ತಾ :—ಶೋಭನಭಟ್ಟರು ತರ್ಕಶಾಸ್ತ್ರವನ್ನು ತಿಳಿದವರಲ್ಲಿ ಅತ್ಯಂತ ಶ್ರೇಷ್ಠರು ಎಂದು ಪರಿಗಣಿತರಾಗಿದ್ದರು. ಅವರು ಆ ಕಾಲದಲ್ಲಿ ಪ್ರಸಿದ್ಧವಾಗಿದ್ದ ಭಾಟ್ಟಸಾಂಖ್ಯಾದಿಮತಗಳನ್ನೆಲ್ಲಾ ನಿರಾಕರಿಸಿದ್ದರು. ವೇದಮಹಾ-ಭಾರತ ಮತ್ತು ಪುರಾಣಗಳಲ್ಲಿ ತುಂಬಾ ವಿಶ್ವಾಸವನ್ನಿಟ್ಟಿದ್ದರು, ಅಲ್ಲಿ ಹೇಳಿದಂತೆ ನಡೆಯುತ್ತಿದ್ದರು. ಅಂತಹ ಪಂಡಿತಶ್ರೇಷ್ಠರು ಶ್ರೀಮಧ್ವಾಚಾರ್ಯರ ಭಾಷ್ಯವನ್ನು ಅವರಿಂದಲೇ ಶ್ರವಣಮಾಡಿದರು.

ವಿ :—ತರ್ಕಂ ಅಧೀತೇ ತಾರ್ಕಿಕಃ (ಕ್ರತೂಕ್ಥಾದಿಸೂತ್ರಾಂತಾಟ್ಠಕ್ 4-2-60 ಠಕ್‌ಪ್ರತ್ಯಯ) ತಾರ್ಕಿಕೇಷು ಶಿಖಾಮಣಿಃ ತಾರ್ಕಿಕಶಿಖಾಮಣಿಃ, ಸು ಶೋಭನಾ ಧೀಃ ಯಸ್ಯ ಸಃ ಸುಧೀಃ, ವರ್ತಮಾನಾಶ್ಚ ತೇ ಸಮಯಾಶ್ಚ ವರ್ತಮಾನಸಮಯಾಃ ತಾನ್, ವೇದಾಶ್ಚ ಭಾರತಂ ಚ ಪುರಾಣಾನಿ ಚ ವೇದಭಾರತಪುರಾಣಾನಿ, ನಿಷ್ಠಾ ಅಸ್ಯ ಸಂಜಾತಾ ಇತಿ ನಿಷ್ಠಿತಃ, ವೇದಭಾರತಪುರಾಣೇಷು ನಿಷ್ಠಿತಃ.

ಕ್ರಿ :—ಅಶೃಣೋತ್ ಅಶೃಣುತಾಂ ಅಶೃಣ್ವನ್, ಶ್ರು ಶ್ರವಣೇ ಪರ. ಅನದ್ಯತನಭೂತೇ ಲಙ್. (ತೇನ ಭಾಷ್ಯಂ ಅಶ್ರೂಯತ—ಕರ್ಮಣಿ).

Rarest Archiver

**ಅವ :**—ಶೋಭನಭಟ್ಟರಿಗೆ ಮಧ್ವಭಾಷ್ಯದಲ್ಲಿ ತುಂಬಾ ಪ್ರೀತಿ ಉಂಟಾಯಿತು—

**ನಾಪರೇಷು ರತಿಮಾಯಯೌ ಕ್ವಚಿದ್**
**ಭಾಷ್ಯಮದ್ಭುತಮಿದಂ ಸ ಶುಶ್ರುವಾನ್ ।**
**ನಾರವಿಂದಮಕರಂದಮಾಪ್ತವಾನ್**
**ಅಚ್ಛಪಿಚ್ಛ ಇವ ವಾಂಛತೀತರತ್ ॥೧೯॥**

ಅ:—ಸಃ ಅದ್ಭುತಂ ಇದಂ ಭಾಷ್ಯಂ ಶುಶ್ರುವಾನ್ (ಸನ್) ಅರವಿಂದಮಕರಂದಂ ಆಪ್ತವಾನ್ ಅಚ್ಛಪಿಚ್ಛಃ ಇತರತ್ ನ ವಾಂಛತಿ ಇವ ಅಪರೇಷು ಕ್ವಚಿತ್ ರತಿಂ ನ ಆಯಯೌ ।

**ಅರ್ಥ :**—ಸಃ = ಆ ಶೋಭನಭಟ್ಟರು, ಅದ್ಭುತಂ = ಆಶ್ಚರ್ಯಕರವಾದ, ಇದಂ = ಈ, ಭಾಷ್ಯಂ = ಭಾಷ್ಯವನ್ನು, ಶುಶ್ರುವಾನ್ (ಸನ್) = ಕೇಳಿದವರಾಗಿ, ಅರವಿಂದಮಕರಂದಂ = ಕಮಲದ ಹೂವಿನ ರಸವನ್ನು, ಆಪ್ತವಾನ್ = ಹೊಂದಿದ, ಅಚ್ಛಪಿಚ್ಛಃ = ಬಿಳಿಯ ಗರಿಗಳುಳ್ಳ ಹಂಸವು, ಇತರತ್ ನ ವಾಂಛತಿ ಇವ = ಬೇರೆ ಹೂವಿನ ಮಕರಂದವನ್ನು ಅಪೇಕ್ಷಿಸದೆ ಇರುವಂತೆ, ಅಪರೇಷು = ಬೇರೆಶಾಸ್ತ್ರಗಳಲ್ಲಿ, ಕ್ವಚಿತ್ = ಯಾವುದರಲ್ಲಿಯೂ, ರತಿಂ = ಪ್ರೀತಿಯನ್ನು, ನ ಆಯಯೌ = ಹೊಂದಲಿಲ್ಲ.

**ತಾ:**—ತಾವರೆಯ ಹೂವಿನ ಮಕರಂದರಸವನ್ನು ಕುಡಿದ ಹಂಸಪಕ್ಷಿಯು ಬೇರೆ ಹೂವುಗಳ ರಸವನ್ನು ಬಯಸದಿರುವಂತೆ, ಈ ಶೋಭನ ಭಟ್ಟರು ಅದ್ಭುತವಾದ ಈ ಮಧ್ವಭಾಷ್ಯವನ್ನು ಕೇಳಿದ ಮೇಲೆ ಬೇರೆ ಯಾವ ಶಾಸ್ತ್ರಗಳಲ್ಲಿಯೂ ಪ್ರೀತಿಯನ್ನು ಇಡಲಿಲ್ಲ. ಮಧ್ವಭಾಷ್ಯವೇ ಅತ್ಯದ್ಭುತವಾದ ತಾರಕಭಾಷ್ಯವೆಂದು ತಿಳಿದು ಅದನ್ನೇ ಆವೃತ್ತಿಮಾಡುತ್ತಾ ಸಂತೋಷಪಡುತ್ತಿದ್ದರು.

**ವಿ:**—ಅರವಿಂದಸ್ಯ ಮಕರಂದಃ ಅರವಿಂದಮಕರಂದಃ ತಂ, ಅಚ್ಛೇ ಪಿಚ್ಛೇ ಯಸ್ಯ ಸಃ ಅಚ್ಛಪಿಚ್ಛಃ; ಪಿಚ್ಛ = ಗರಿ. ಪಿಚ್ಛಬರ್ಹೇ ನಪುಂಸಕೇ —ಅಮರ.

Rarest Archives

ಕ್ರಿ: ಆ+ಯಯಸೌ ಯಯತುಃ ಯಯುಃ ಇತ್ಯಾದಿ. ಯಾ ಪ್ರಾಪಣೇ ಲಿಟ್ ವಾಂಛತಿ ವಾಂಛತಃ ವಾಂಛಂತಿ ಇತ್ಯಾದಿ. ವಾಛಿ ಇಚ್ಛಾಯಾಂ ಲಟ್.

ಅವ:—ಮಹಾನುಭಾವರಾದ ಈ ಶೋಭನಭಟ್ಟರು ಮಧ್ವಭಾಷ್ಯ ದಲ್ಲಿ ಹೇಳಿರುವ ಯುಕ್ತಿಗಳಿಂದ ಎಲ್ಲಾ ವಾದಿಗಳನ್ನೂ ಗೆದ್ದರು—

ತತ್ರ ತತ್ರ ಸ ಸಭಾಸು ಭಾಸುರೋ
ನಂದಿತೀರ್ಥಸಮಯೋಕ್ತಯುಕ್ತಿಭಿಃ ।
ವಾದಿನೋ ವಿಶಕಲಯ್ಯ ತಾನ್ ಸಮಾ-
ಕ್ರಮ್ಯ ವಾಚಮುಚಿತಾಮುದಾಹರತ್ ॥೨೦॥

ಅ:—ಭಾಸುರಃ ಸಃ ತತ್ರ ತತ್ರ ಸಭಾಸು ವಾದಿನಃ ನಂದಿತೀರ್ಥ-ಸಮಯೋಕ್ತಯುಕ್ತಿಭಿಃ ವಿಶಕಲಯ್ಯ ತಾನ್ ಸಮಾಕ್ರಮ್ಯ ಉಚಿತಾಂ ವಾಚಂ ಉದಾಹರತ್ ।

ಅರ್ಥ:—ಭಾಸುರಃ ಸಃ = ಪ್ರಕಾಶಮಾನರಾದ ಆ ಶೋಭನಭಟ್ಟರು, ತತ್ರ ತತ್ರ ಸಭಾಸು = ಅಲ್ಲಲ್ಲಿ ನಡೆದ ಪಂಡಿತರ ಸಭೆಗಳಲ್ಲಿ, ವಾದಿನಃ = ದುರ್ವಾದಿಗಳನ್ನು, ನಂದಿತೀರ್ಥಸಮಯ = ಆನಂತೀರ್ಥರ ಸಿದ್ಧಾಂತದಲ್ಲಿ, ಉಕ್ತಯುಕ್ತಿಭಿಃ = ಹೇಳಲ್ಪಟ್ಟಯುಕ್ತಿಗಳಿಂದ, ವಿಶಕಲಯ್ಯ = ಖಂಡಿಸಿ, ತಾನ್ = ಅವರನ್ನು, ಸಮಾಕ್ರಮ್ಯ = ಲೆಕ್ಕಿಸದೆ, ಉಚಿತಾಂ ವಾಚಂ = ಯೋಗ್ಯವಾದ ಮಾತನ್ನು, ಉದಾಹರತ್ = ಹೇಳಿದರು. (ದೃಷ್ಟಾಂತಸಹಿತ ವಾಗಿ ಸಮರ್ಥಿಸಿದರು.)

ತಾ:—ವಿದ್ಯೆಯಿಂದ ಶೋಭಿಸುವ ಆ ಶೋಭನಭಟ್ಟರು ಅಲ್ಲಲ್ಲಿ ಪಂಡಿತರ ಸಭೆಗಳಲ್ಲಿ ಶ್ರೀಮಧ್ವಾಚಾರ್ಯರ ಶಾಸ್ತ್ರಗಳಲ್ಲಿ ಹೇಳಿದ ಯುಕ್ತಿ ಗಳಿಂದ ವಾದಿಗಳನ್ನು ಗೆದ್ದು, ಆ ಪಂಡಿತರನ್ನು ಲೆಕ್ಕಿಸದೆ ಸಭೆಯ ಮಧ್ಯ ದಲ್ಲಿ ಯೋಗ್ಯವಾದ ಮಾತನ್ನು ಹೇಳಿದರು.

ವಿ:—ನಂದಃ (ಆನಂದಃ) ಅಸ್ಯ ಅಸ್ತೀತಿ ನಂದೀ, ನಂದೀ ಚಾಸೌ ತೀರ್ಥಶ್ಚ ನಂದಿತೀರ್ಥಃ, ನಂದಿತೀರ್ಥಸ್ಯ ಸಮಯಃ ನಂದಿತೀರ್ಥಸಮಯಃ,

Rarest Archiver

ತಸ್ಮಿನ್ ಉಕ್ತಾಶ್ಚ ತಾಃ ಯುಕ್ತಯಶ್ಚ ನಂದಿತೀರ್ಥಸಮಯೋಕ್ತ್ಯುಕ್ತಯಃ ತಾಭಿಃ (ನಂದತೀರ್ಥ ಎಂಬ ಪಾಠದಲ್ಲಿ ನಂದಶ್ಚಾಸೌ ತೀರ್ಥಶ್ಚ ನಂದತೀರ್ಥಃ ಎಂದು ವಿಗ್ರಹ)

**ಕ್ರಿ:**—ಉದ್ + ಆ + ಅಹರತ್ ಅಹರತಾಂ ಅಹರನ್ ಹೃಞ್ ಹರಣೇ ಲಙ್.

**ಅವ:**—ಶ್ರೀಶೋಭನಭಟ್ಟರು ಉದಾಹರಣಪೂರ್ವಕವಾಗಿ ಆಡಿದ ಮಾತೇನು ?

**ಚೂರ್ಣಕೃದ್ ವಿವಿಧಶಂಖಚೂರ್ಣಕ-**
**ಶ್ಚೂರ್ಣನಾಯ ಬಹುಧಾಪ್ಯಶಕ್ನುವನ್ ।**
**ಅತ್ಯಜದ್ ವಿಫಲಧೀಃ ಪ್ರದಕ್ಷಿಣಾ-**
**ವರ್ತವಾರಿಜಮನರ್ಘ್ಯ (ರ್ಘ) ಮಪ್ಯಹೋ ॥೨೧॥**

ಅ:—ವಿವಿಧಶಂಖಚೂರ್ಣಕಃ ಚೂರ್ಣಕೃತ್ ಅನರ್ಘ್ಯಂ ಅಪಿ ಪ್ರದಕ್ಷಿಣಾವರ್ತವಾರಿಜಂ ಬಹುಧಾ ಅಪಿ ಚೂರ್ಣನಾಯ ಅಶಕ್ನುವನ್ ವಿಫಲಧೀಃ ಅತ್ಯಜತ್ ಅಹೋ

**ಅರ್ಥ:**—ವಿವಿಧ = ಬಗೆ ಬಗೆಯ, ಶಂಖಚೂರ್ಣಕಃ = ಶಂಖಗಳನ್ನು ಪುಡಿಮಾಡುವ, ಚೂರ್ಣಕೃತ್ = ಸುಣ್ಣವನ್ನು ತಯಾರಿಸುವವನು, ಅನರ್ಘ್ಯಂ ಅಪಿ = ಅಮೂಲ್ಯವಾದಾಗ್ಯೂ, ಪ್ರದಕ್ಷಿಣಾವರ್ತವಾರಿಜಂ = ಬಲಮುರಿಶಂಖವನ್ನು, ಬಹುಧಾ ಅಪಿ = ಅನೇಕ ಪ್ರಕಾರಗಳಿಂದಲೂ, ಚೂರ್ಣನಾಯ = ಪುಡಿಮಾಡುವುದಕ್ಕೆ, ಅಶಕ್ನುವನ್ = ಅಸಮರ್ಥನಾಗಿ, ವಿಫಲಧೀಃ (ಸನ್) = ಇದು ಪ್ರಯೋಜನವಿಲ್ಲದ್ದು ಎಂಬ ಬುದ್ಧಿಯುಳ್ಳವನಾಗಿ, ಅತ್ಯಜತ್ = ಬಿಸಾಡಿದನು, ಅಹೋ = ಆಶ್ಚರ್ಯವು.

**ತಾ:**—ಅನೇಕತರಹದ ಶಂಖಗಳನ್ನು ಪುಡಿಮಾಡುವ ಸುಣ್ಣಗಾರನೊಬ್ಬನಿಗೆ ಒಂದುಬಾರಿ ಅಮೂಲ್ಯವಾದ ಬಲಮುರಿಶಂಖವು ಸಿಕ್ಕಿತು. ಅವನು ಇದೂ ಒಂದು ಸುಣ್ಣದ ಚಿಪ್ಪು, ಇದರಿಂದ ತಾಂಬೂಲದ ಸುಣ್ಣ ಮಾಡಬೇಕೆಂದು ನಿರ್ಧರಿಸಿದನು. ಅದನ್ನು ಅನೇಕರೀತಿಯಿಂದ ಪುಡಿ

Rarest Archiver

ಮಾಡಲು ಪ್ರಯತ್ನಿಸಿದನು. ಮೂಸೆಯಲ್ಲಿಟ್ಟು ಕಾಯಿಸುವುದೇ ಮೊದಲಾದ ಎಷ್ಟು ಪ್ರಯತ್ನ ಮಾಡಿದರೂ ಅದು ಪುಡಿಯಾಗಲಿಲ್ಲ. ಕೊನೆಗೆ ಅವನು ಈ ಚಿಪ್ಪಿನಿಂದ ಏನೂ ಪ್ರಯೋಜನವಿಲ್ಲವೆಂದು ಭಾವಿಸಿ ಅದನ್ನು ಎಸೆದನು. ಎಲ್ಲಾ ಐಶ್ವರ್ಯಗಳನ್ನು ಕೊಡುವ ಬಲಮುರಿಶಂಖವನ್ನು ಎಸೆಯುವ ಇವನ ಮೂಢತನವು ಎಷ್ಟೊಂದು ಆಶ್ಚರ್ಯಕರ !

ವಿ:—ಚೂರ್ಣಂ ಕರೋತಿ ಇತಿ ಚೂರ್ಣಕೃತ್, ವಿವಿಧಾಶ್ಚ ತೇ ಶಂಖಾಶ್ಚ ವಿವಿಧಶಂಖಾಃ,ತಾನ್ ಚೂರ್ಣಯತೀತಿ ವಿವಿಧಶಂಖಚೂರ್ಣಕಃ, ವಿಗತಂ ಫಲಂ ಯಸ್ಮಾತ್ ತತ್ ವಿಫಲಂ, ವಿಫಲಂ ಇತಿ ಧೀಃ ಯಸ್ಯ ಸಃ ವಿಫಲಧೀಃ, (ವಿಫಲೇ ಧೀಃ ಯಸ್ಯ ಸಃ, ವಿಫಲಾ ವಿಫಲತ್ವವಿಷಯಕವಾದ ಧೀಃ ಬುದ್ಧಿಃ ಯಸ್ಯ ಸಃ) ಪ್ರದಕ್ಷಿಣಃ ಆವರ್ತಃ ಯಸ್ಯ ಸಃ ಪ್ರದಕ್ಷಿಣಾವರ್ತಃ, ವಾರಿಣಃ ಜಾಯತೇ ಇತಿ ವಾರಿಜಃ ಪ್ರದಕ್ಷಿಣಾವರ್ತಶ್ಚಾಸೌ ವಾರಿಜಶ್ಚ ಪ್ರದಕ್ಷಿಣಾವರ್ತವಾರಿಜಃ ತಂ, ಅರ್ಘಂ ಅರ್ಹತಿ ಇತಿ ಅರ್ಘ್ಯಃ, ನ ಅರ್ಘ್ಯಃ ಅನರ್ಘ್ಯಃ ತಂ, (ನ ವಿದ್ಯತೇ ಅರ್ಘಃ ಯಸ್ಯ ಸಃ ಅನರ್ಘಃ ತಂ) ಅರ್ಘ = ಬೆಲೆ, ಪೂಜೆಯ ವಿಧಾನ, ಮೂಲ್ಯೇ ಪೂಜಾವಿಧಾವರ್ಘಃ— ಅಮರ.

ಕ್ರಿ:—ಅತ್ಯಜತ್ ಅತ್ಯಜತಾಂ ಅತ್ಯಜನ್-ತ್ಯಜ ಹಾನೌ ಪರ. ಲಙ್.

ಅವ:—ಶ್ರೀಶೋಭನಭಟ್ಟರು ತಾನು ತೋರಿಸಿದ ದೃಷ್ಟಾಂತವನ್ನು ಶ್ರೀಮಧ್ವಶಾಸ್ತ್ರವನ್ನು ಬಿಟ್ಟವನಿಗೆ ಸರಿಹೋಲಿಸಿ ವರ್ಣಿಸುತ್ತಾರೆ—

**ಅಪ್ರಮೇಯಮತಿಶಾಸ್ತ್ರಮೀದೃಶಂ**
**ಯಸ್ತ್ಯಜತ್ಯುಪನತಂ ಸುದುರ್ಲಭಂ ।**
**ತಸ್ಯ ತುಲ್ಯಮತಿರೇಷ ದುರ್ಜನೋ**
**ನಾಥವಾಸ್ಯ ಸದೃಶೋಽಸ್ತಿ ನೀಚಧೀಃ ॥೨೨॥**

ಅ:—ಯಃ ಉಪನತಂ ಸುದುರ್ಲಭಂ ಈದೃಶಂ ಅಪ್ರಮೇಯಮತಿ-ಶಾಸ್ತ್ರಂ ತ್ಯಜತಿ, ಏಷ ದುರ್ಜನಃ ತಸ್ಯ ತುಲ್ಯಮತಿಃ, ಅಥವಾ ಅಸ್ಯ ಸದೃಶಃ ನೀಚಧೀಃ ನಾಸ್ತಿ.

Rarest Archiver

ಅರ್ಥ :—ಯಃ=ಯಾವ ಮಾನವನು, ಉಪನತಂ = ಒದಗಿದ, ಸುದುರ್ಲಭಂ=ಪುಣ್ಯವಿಲ್ಲದವರಿಗೆ ಸರ್ವಥಾ ಸಿಗಲಾರದ, ಈದೃಶಂ = ಬಲಮುರಿಶಂಖಕ್ಕೆ ಸಮಾನವಾದ, ಅಪ್ರಮೇಯಮತಿ=ಸರ್ವಜ್ಞಾಚಾರ್ಯರ, ಶಾಸ್ತ್ರಂ=ಸಿದ್ಧಾಂತಗ್ರಂಥವನ್ನು, ತ್ಯಜತಿ=ಬಿಡುತ್ತಾನೋ, ಏಷಃ ದುರ್ಜನಃ = ಈ ದುಷ್ಟನು, ತಸ್ಯ = ಆ ಬಲಮುರಿಶಂಖವನ್ನು ತ್ಯಜಿಸಿದವನಿಗೆ, ತುಲ್ಯಮತಿಃ = ಸಮಾನವಾದ ಬುದ್ಧಿಯುಳ್ಳವನು. ಅಥವಾ=ಹಾಗಲ್ಲದ ಪಕ್ಷದಲ್ಲಿ, ತಸ್ಯ ಸದೃಶಃ=ಆ ಮಧ್ವಶಾಸ್ತ್ರವನ್ನು ತ್ಯಜಿಸಿದವನಿಗೆ ಸಮಾನನಾದ, ನೀಚಧೀಃ=ಹೀನಬುದ್ಧಿಯುಳ್ಳವನು, ನಾಸ್ತಿ=ಇಲ್ಲ.

ತಾ:—ಯಾವನು ತನಗೆ ಲಭಿಸಿದ ಅತಿದುರ್ಲಭವಾದ ಬಲಮುರಿ ಶಂಖದಂತಿರುವ ಶ್ರೀಮಧ್ವಶಾಸ್ತ್ರವನ್ನು ಬಿಡುತ್ತಾನೋ, ಈ ದುರ್ಜನನು, ಆ ಬಲಮುರಿಶಂಖವನ್ನು ಎಸೆದವನಿಗೆ ಸಮಾನನಾದ ಮೂಢಬುದ್ಧಿಯವನು. ಅಥವಾ ಸರ್ವಜ್ಞಶಾಸ್ತ್ರವನ್ನು ಬಿಟ್ಟವನಿಗೆ ಸಮಾನನಾದ ಮೂರ್ಖನು ಇಲ್ಲವೇ ಇಲ್ಲ. ಬಲಮುರಿಶಂಖವನ್ನು ಮೌಢ್ಯದಿಂದ ನಿಷ್ಫಲವೆಂದು ಎಸೆದವನಿಗೆ ಸ್ವಲ್ಪವೇ ಹಣ ನಷ್ಟವಾದೀತು. ಆಚಾರ್ಯರ ಶಾಸ್ತ್ರವನ್ನು ಬಿಟ್ಟವನಿಗೆ ಮಹಾಪುರುಷಾರ್ಥವಾದ ಮೋಕ್ಷವೇ ಕೈಬಿಟ್ಟುಹೋಗುತ್ತದೆ. ಆದುದರಿಂದ ಇವನಿಗೆ ಸಮಾನನಾದ ನೀಚನು ಎಲ್ಲಿಯೂ ಸಿಗಲಾರನು ಎಂದು ಭಾವ.

ವಿ:—ಅಪ್ರಮೇಯಾ ಮತಿಃ ಯಸ್ಯ ಸಃ ಅಪ್ರಮೇಯಮತಿಃ ತಸ್ಯ ಶಾಸ್ತ್ರಂ ಅಪ್ರಮೇಯಮತಿಶಾಸ್ತ್ರಂ ತತ್, ಸು ಅತ್ಯಂತಂ, ದುಃಖೇನ ಲಬ್ಧುಂ ಶಕ್ಯಂ ಸುದುರ್ಲಭಂ (ಪುಣ್ಯರಹಿತರಿಗೆ ಮಹಾಪ್ರಯತ್ನದಿಂದಲೂ ಹೊಂದಲು ಅಸಾಧ್ಯವಾದುದು) ತುಲ್ಯಾ ಮತಿಃ ಯಸ್ಯ ಸಃ, ನೀಚಾ ಧೀಃ ಯಸ್ಯ ಸಃ.

ಕ್ರಿ: —ತ್ಯಜತಿ ತ್ಯಜತಃ ತ್ಯಜಂತಿ —ತ್ಯಜ ಹಾನೌ ಲಟ್; ಅಸ್ತಿ ಸ್ತಃ ಸಂತಿ—ಅಸ ಭುವಿ ಲಟ್.

ಅವ:—ಬೇರೊಂದುರೀತಿಯಿಂದ ಬಲಮುರಿಶಂಖದ ದೃಷ್ಟಾಂತವನ್ನು ಕೊಡುತ್ತಾರೆ—

**ಕೋಽಪಿ ತಂ ಗುಣವಿಶೇಷವಿಚ್ಚ ವಿ-**
**ಕ್ರೀಯ ಭೂರಿಧನಮಾಪ ಪೂರುಷಃ ।**

Rarest Archiver

**ನಹ್ಯನರ್ಘ್ಯ(ರ್ಘ)ಗುಣಮೂಲ್ಯಮಾಪ್ಯತೇ**
**ಭಾಗ್ಯದೈವಮಿಹ ಯೋಗ್ಯತಾನುಗಂ ॥೨೩॥**

ಅ :—ಹಿ ಅನರ್ಘ್ಯಗುಣಮೂಲ್ಯಂ ನಾಪ್ಯತೇ ; ಗುಣವಿಶೇಷವಿತ್ ಕಃ ಅಪಿ ಪೂರುಷಃ ತಂ ವಿಕ್ರೀಯ ಭೂರಿಧನಂ ಆಪ ಚ. ಇಹ ಭಾಗ್ಯದೈವಂ ಯೋಗ್ಯತಾನುಗಂ.

**ಅರ್ಥ** :—ಹಿ = ಯಾವ ಕಾರಣದಿಂದ, ಅನರ್ಘ್ಯಗುಣ = ಅಮೂಲ್ಯವಾದ ಗುಣವುಳ್ಳ ವಸ್ತುವಿನ, ಮೂಲ್ಯಂ = ಬೆಲೆಯು, ನ ಆಪ್ಯತೇ = ಹೊಂದಲ್ಪಡುವುದಿಲ್ಲ ; ಗುಣವಿಶೇಷವಿತ್ = ಬಲಮುರಿಶಂಖದ ಅಮೂಲ್ಯ ಗುಣವನ್ನು ತಿಳಿದ, ಕಃ ಅಪಿ ಪೂರುಷಃ = ಯಾವನೋ ಒಬ್ಬ ಮನುಷ್ಯನು, ತಂ = ಆ ಶಂಖವನ್ನು, ವಿಕ್ರೀಯ = ಮಾರಿ, ಭೂರಿಧನಂ=ಬಹಳಹಣವನ್ನು, ಆಪ ಚ = ಹೊಂದಿದನು. ಇಹ = ಈ ಲೋಕದಲ್ಲಿ, ಭಾಗ್ಯದೈವಂ = ಅದೃಷ್ಟ ನಿಯಾಮಕವಾದ ದೇವತೆಯೂ, ಯೋಗ್ಯತಾನುಗಂ = ಮನುಷ್ಯನ ಯೋಗ್ಯತಾನುಗುಣವಾಗಿರತಕ್ಕದ್ದು.

**ತಾ**:—ಬಲಮುರಿಶಂಖದ ಮಹಿಮೆಯನ್ನು ಸ್ವಲ್ಪಮಟ್ಟಿಗೆ ಅರಿತ ಒಬ್ಬನು ಆ ಶಂಖವನ್ನು ಮಾರಿ ಬಹಳ ಹಣವನ್ನು ಗಳಿಸಿದನು. ಆದರೆ ಎಷ್ಟೇ ಸಂಪತ್ತನ್ನು ಗಳಿಸಿದರೂ ಆ ಹಣವು ಅಮೂಲ್ಯವಾದ ಶಂಖಕ್ಕೆ ಸಮಾನವಾಗಲಾರದು. ಏಕೆಂದರೆ ಆ ಶಂಖದ ಗುಣಗಳು ಅತ್ಯಮೂಲ್ಯವಾಗಿರುತ್ತವೆ. ಅದರ ಗುಣವಿಶೇಷಗಳಿಗೆ ಸರಿಯಾದ ಬೆಲೆಯು ಎಲ್ಲಿಯೂ ದೊರೆಯಲಾರದು. ಅದು ನ್ಯಾಯಸಂಮತವಾಗಿಯೇ ಇದೆ. ಏಕೆಂದರೆ ಅದೃಷ್ಟಕ್ಕೆ ಪ್ರೇರಕವಾದ ದೈವವು ಪುರುಷನ ಯೋಗ್ಯತೆಯನ್ನು ಅನುಸರಿಸಿಯೇ ಫಲವನ್ನು ಕೊಡುತ್ತದೆ. ಇಷ್ಟೇ ಬೆಲೆಯೆಂದು ನಿರ್ಧರಿಸಲು ಸಾಧ್ಯವಿಲ್ಲದ ಶಂಖವನ್ನು ತನಗೆ ಉಚಿತವೆಂದು ಕಂಡ ಮಹತ್ತಾದ ಸಂಪತ್ತನ್ನು ತೆಗೆದುಕೊಂಡು ಮಾರಿದವನೂ ಕೂಡ ಅಲ್ಪಯೋಗ್ಯತೆಯ ಮಧ್ಯಮಮಾನವನೇ ಸರಿ.

ವಿ :—ಗುಣಾನಾಂ ವಿಶೇಷಾಃ ಗುಣವಿಶೇಷಾಃ, ತಾನ್ ವೇತ್ತೀತಿ ಗುಣವಿಶೇಷವಿತ್, ಭೂರಿ ಚ ತತ್ ಧನಂ ಚ ಭೂರಿಧನಂ ತತ್, ಅರ್ಘಂ

Rarest Archiver

ಅರ್ಹತಿ ಇತಿ ಅರ್ಘ್ಯಃ, ನ ಅರ್ಘ್ಯಃ ಅನರ್ಘ್ಯಃ, ಅನರ್ಘ್ಯಶ್ಚಾಸೌ ಗುಣಶ್ಚ ಅನರ್ಘ್ಯಗುಣಃ, ತಸ್ಯ ಮೂಲ್ಯಂ ತತ್, (ಅನರ್ಘ್ಯಃ ಗುಣಃ ಯಸ್ಯ ಸಃ ಅನರ್ಘ್ಯಗುಣಃ ತಸ್ಯ ಪದಾರ್ಥಸ್ಯ ಮೂಲ್ಯಂ ತತ್) ಭಾಗ್ಯಸ್ಯ ದೈವಂ ಭಾಗ್ಯದೈವಂ. ಯೋಗ್ಯತಾಂ ಅನುಗಚ್ಛತೀತಿ ಯೋಗ್ಯತಾನುಗಂ.

**ಕ್ರಿ :**—ಆಪ್ಯತೇ ಆಪ್ಯೇತೇ ಆಪ್ಯಂತೇ, ಆಪ್‌ಲೃ ವ್ಯಾಪ್ತೌ ಕರ್ಮಣಿ ಲಟ್; (ಪುರುಷಃ) ಅನರ್ಘ್ಯಗುಣಸ್ಯ ಮೂಲ್ಯಂ ನ ಆಪ್ನೋತಿ. (ಕರ್ತರಿ). ಆಪ ಆಪತುಃ ಆಪುಃ ಇತ್ಯಾದಿ, ಆಪ್‌ಲೃ ವ್ಯಾಪ್ತೌ ಲಿಟ್.

**ಅವ :**—ಈ ದೃಷ್ಟಾಂತಕ್ಕೆ ಸರಿಯಾಗಿ ಪ್ರಕೃತವಿಷಯವನ್ನು (ದಾರ್ಷ್ಟಾಂತಿಕವನ್ನು) ವಿವರಿಸುತ್ತಾರೆ—

**ವ್ಯಕ್ತಮುನ್ನತಿಮಿತೋಽಪ್ಯಯಂ ಜನಃ**
**ತಸ್ಯ ಯನ್ನ ಲಭತೇಽಖಿಲಂ ಫಲಂ ।**
**ಸ್ತೋಕಮಾನಸತಯಾ ತತೋ ವ್ರಜೇತ್**
**ತಸ್ಯ ಹಂತ ಪುರುಷಸ್ಯ ತುಲ್ಯತಾಂ** ॥೨೪॥

**ಅ:** —ಅಯಂ ಜನಃ ವ್ಯಕ್ತಂ ಉನ್ನತಿಂ ಇತಃ ಅಪಿ ತಸ್ಯ ಅಖಿಲಂ ಫಲಂ ಯತ್ ನ ಲಭತೇ ತತಃ ಅಸೌ ಸ್ತೋಕಮಾನಸತಯಾ ತಸ್ಯ ಪುರುಷಸ್ಯ ತುಲ್ಯತಾಂ ವ್ರಜೇತ್ ಹಂತ.

**ಅರ್ಥ :**—ಅಯಂ ಜನಃ= ಈಗಿನ ವರ್ತಮಾನಕಾಲದ ಮಧ್ಯಸ್ಥ ಜನವು, ವ್ಯಕ್ತಂ=ಸ್ಪಷ್ಟವಾಗಿ, ಉನ್ನತಿಂ = ಜ್ಞಾನಭಕ್ತ್ಯಾದಿಗುಣಗಳಿಂದ ಉತ್ಕರ್ಷವನ್ನು, ಇತಃ ಅಪಿ= ಹೊಂದಿದ್ದರೂ, ತಸ್ಯ= ಆ ಮಧ್ವಶಾಸ್ತ್ರದ, ಅಖಿಲಂ ಫಲಂ=ಎಲ್ಲಾ ಪ್ರಯೋಜನವನ್ನು, ಯತ್ =ಯಾವ ಕಾರಣ ದಿಂದ, ನ ಲಭತೇ ಹೊಂದುವುದಿಲ್ಲವೋ, ತತಃ= ಆ ಕಾರಣದಿಂದ, ಅಸೌ = ಈ ಮಧ್ಯಸ್ಥಪುರುಷನು, ಸ್ತೋಕಮಾನಸತಯಾ= ಅಲ್ಪವಾದ ಬುದ್ಧಿ ವುಳ್ಳವನಾದ್ದರಿಂದ, ತಸ್ಯ ಪುರುಷಸ್ಯ= ಆ ಶಂಖವನ್ನು ಮಾರಿದವನಿಗೆ, ತುಲ್ಯತಾಂ ವ್ರಜೇತ್= ಸಾಮ್ಯವನ್ನು ಹೊಂದಿಯಾನು, ಹಂತ = ಅವನು ಅನುಕಂಪಾರ್ಹನು.

Rarest Archiver

**ತಾ :**—ಇನ್ನು ಮಧ್ಯಸ್ಥನಾದ ಪುರುಷನು ಮಧ್ವಶಾಸ್ತ್ರವನ್ನು ಅನುಸರಿಸಿ ಸ್ಪಷ್ಟವಾಗಿ ತನ್ನ ಯೋಗ್ಯತಾನುಸಾರವಾಗಿ ಜ್ಞಾನಭಕ್ತ್ಯಾದಿ ಗುಣಗಳಿಂದ ಶ್ರೇಷ್ಠತ್ವವನ್ನು ಹೊಂದಿದರೂ ಅಲ್ಪಬುದ್ಧಿಯವನಾದುದರಿಂದ ಆ ಮಧ್ವಶಾಸ್ತ್ರದ ಸಂಪೂರ್ಣಫಲವನ್ನು ಹೊಂದುವುದಿಲ್ಲ. ಹೀಗೆ ಅಲ್ಪ ತೃಪ್ತಿ, ಸ್ವಾರ್ಥ, ಕ್ಷುಲ್ಲಕಬುದ್ಧಿಯಿಂದ ಈ ಮಧ್ವಶಾಸ್ತ್ರದ ಸಂಪೂರ್ಣಫಲ ವನ್ನು ಹೊಂದದವನು ಬಲಮುರಿಶಂಖವನ್ನು ಮಾರಿ ಹಣವನ್ನು ಪಡೆದವನಿಗೆ ಸಮಾನನಾಗುತ್ತಾನೆ. ಇದು ನಿಶ್ಚಯವು. ಮಧ್ಯಮನಾದ ಜೀವನು ತನ್ನ ಯೋಗ್ಯತೆಯು ಕಡಿಮೆಯಾದುದರಿಂದ ಶಾಸ್ತ್ರದಲ್ಲಿ ಪ್ರವೃತ್ತಿಮಾಡಿದರೂ ಪೂರ್ಣಫಲವನ್ನು ಹೊಂದಲಾರನು ಎಂದು ಭಾವ.

**ವಿ :**—ಸ್ತೋಕಂ ಮಾನಸಂ ಯಸ್ಯ ಸಃ ಸ್ತೋಕಮಾನಸಃ ತಸ್ಯ ಭಾವಃ ಸ್ತೋಕಮಾನಸತಾ ತಯಾ, ತುಲ್ಯಸ್ಯ ಭಾವಃ ತುಲ್ಯತಾ ತಾಂ.

**ಕ್ರಿ :**—ಲಭತೇ ಲಭೇತೇ ಲಭಂತೇ ಇತ್ಯಾದಿ ಡುಲಭಷ್ ಪ್ರಾಪ್ತೌ ಆತ್ಮ. ಲಟ್. ವ್ರಜೇತ್ ವ್ರಜೇತಾಂ ವ್ರಜೇಯುಃ ವ್ರಜ ಗತೌ ವಿಧಿಲಿಙ್.

**ಅವ :**—ಬಲಮುರಿಶಂಖದ ದೃಷ್ಟಾಂತವನ್ನು ಮತ್ತೊಂದು ರೀತಿ ಯಿಂದ ವಿವರಿಸುತ್ತಾರೆ—

**ಕ್ರೀತವಾನ್ನರಪತಿರ್ಮಹಾದರಂ**
**ಸಾದರಂ ಪುನರುದಾರಚೇಷ್ಟಿತಃ ।**
**ಅರ್ಚಯನ್ ಸತತಮಾಪ ಸಂಪದೋ**
**ಯಾ ನ ತಾ ವಚನಚಿತ್ತಗೋಚರಾಃ ॥೨೫॥**

**ಅ :**—ಉದಾರಚೇಷ್ಟಿತಃ ಸಾದರಂ ಮಹಾದರಂ ಕ್ರೀತವಾನ್ ನರ ಪತಿಃ ಪುನಃ ಸತತಂ ಅರ್ಚಯನ್ ಯಾಃ ಸಂಪದಃ ಆಪ ತಾಃ ವಚನಚಿತ್ತ- ಗೋಚರಾಃ ನ (ಭವಂತಿ).

**ಅರ್ಥ :**—ಉದಾರಚೇಷ್ಟಿತಃ = ಉತ್ಕೃಷ್ಟವಾದ ಕಾರ್ಯಗಳನ್ನು ಮಾಡುವ, ಸಾದರಂ = ಭಕ್ತಿಯಿಂದ, ಮಹಾದರಂ ಕ್ರೀತವಾನ್ = ಉತ್ತಮ ವಾದ ಬಲಮುರಿಶಂಖವನ್ನು ಕೊಂಡುಕೊಂಡಿರುವ, ನರಪತಿಃ ಪುನಃ = ರಾಜ

Rarest Archive

ನಾದರೋ, ಸತತಂ = ಯಾವಾಗಲೂ, (ಸಾದರಂ = ಪ್ರೀತಿಪೂರ್ವಕವಾಗಿ, ಸತತಂ = ವಾದ್ಯಘೋಷಾದಿಸಹಿತವಾಗಿ), ಅರ್ಚಯನ್ = ಪೂಜಿಸುತ್ತಾ, ಯಾಃ ಸಂಪದಃ = ಯಾವ ಎಷ್ಟು ಸಂಪತ್ತುಗಳನ್ನು, ಆಪ = ಹೊಂದಿದನೋ, ತಾಃ = ಅವುಗಳು, ವಚನಚಿತ್ತಗೋಚರಾಃ ನ ಭವಂತಿ = ಮಾತುಗಳಿಗೆ ಮತ್ತು ಮನಸ್ಸಿಗೆ ವಿಷಯಗಳಾಗಿ ಆಗುವುದಿಲ್ಲ.

**ತಾಃ**—ದುಷ್ಟಶಿಕ್ಷಣ, ಶಿಷ್ಟರಕ್ಷಣ, ವಿಷ್ಣುವೈಷ್ಣವಪೂಜಾ ಮುಂತಾದ ಸತ್ಕರ್ಮಗಳನ್ನು ಆಚರಿಸುವ ಮಹಾರಾಜನೊಬ್ಬನು ತುಂಬಾ ಬೆಲೆಬಾಳುವ ಉತ್ತಮವಾದ ಆ ಬಲಮುರಿಶಂಖವನ್ನು ಬಹಳ ಭಕ್ತಿಯಿಂದ ಬೆಲೆಗೆ ಕೊಂಡುಕೊಂಡನು. ಅನಂತರ ಬಹಳ ಭಕ್ತಿಯಿಂದ ನಿತ್ಯವೂ ವಾದ್ಯ ಸಂಗೀತಾದಿವೈಭವಸಮೇತವಾಗಿ ಅದನ್ನು ಪೂಜಿಸುತ್ತಿದ್ದನು. ಅವನು ಎಷ್ಟು ವಿಧದ ಯಾವ ಯಾವ ಸಂಪತ್ತುಗಳನ್ನು ಹೊಂದಿದನೋ ಆ ಸಂಪತ್ತುಗಳನ್ನು ಬಾಯಿಯಿಂದ ಹೇಳಲೂ, ಮನಸ್ಸಿನಿಂದ ತಿಳಿಯಲೂ ಸಾಧ್ಯವಿಲ್ಲ. ಆ ಮಹಾರಾಜನು ಸಪ್ತದ್ವೀಪಾಧಿಪತ್ಯವೇ ಮೊದಲಾದ ಅತುಲೈಶ್ವರ್ಯವನ್ನು ಆ ಮಹಾಶಂಖದ ಪೂಜೆಯಿಂದ ಪಡೆದಿರುತ್ತಾನೆ ಎಂದು ಭಾವ.

**ವಿ :**—ನರಾಣಾಂ ಪತಿಃ ನರಪತಿಃ, ಮಹಾಂಶ್ಚ ಅಸೌ ದರಶ್ಚ ಮಹಾದರಃ, ದರ = ಶಂಖ, ಆದರೇಣ ಸಹಿತಂ ಯಥಾ ಭವತಿ ತಥಾ ಸಾದರಂ. ಉದಾರಾಣಿ ಚೇಷ್ಟಿತಾನಿ ಯಸ್ಯ ಸಃ, ತತೇನ ಸಹಿತಂ ಯಥಾ ಭವತಿ ತಥಾ, ತತಂ = ವೀಣಾದಿವಾದ್ಯಗಳು, ವಚನಾನಿ ಚ ಚಿತ್ತಾನಿ ಚ ವಚನಚಿತ್ತಾನಿ, ವಚನಚಿತ್ತಾನಾಂ ಗೋಚರಾಃ ವಚನಚಿತ್ತಗೋಚರಾಃ |

**ಅವ :**—ಈ ದೃಷ್ಟಾಂತವನ್ನು ಸರಿಹೋಲಿಸಿ ಪ್ರಕೃತವಿಷಯವನ್ನು ವಿವರಿಸುತ್ತಾರೆ—

**ಶಾಸ್ತ್ರಕಲ್ಪಕತರೋರಮುಷ್ಯ ಕಃ**
**ಪ್ರಾಪ್ನುಯಾತ್ ಸಕಲಮಸ್ಯಹೋ ಫಲಂ |**
**ಯಸ್ತಮುತ್ತಮಗುಣಂ ವಿಡಂಬಯೇ-**
**ದಿತ್ಯುದೀರ್ಯ ಸ ಜನಾನರಂಜಯತ್ ||೨೬||**

Rarest Archiver

ಅ :—ಅಮುಷ್ಯ ಶಾಸ್ತ್ರಕಲ್ಪಕತರೋಃ ಫಲಂ ಸಕಲಂ ಅಪಿ ಅಹೋ ಯಃ ಕಃ ಪ್ರಾಪ್ನುಯಾತ್ ಅಸೌ ಉತ್ತಮಗುಣಂ ತಂ (ನೃಪಂ) ವಿಡಂಬಯೇತ್ ಇತಿ ಉದೀರ್ಯ ಸಃ ಜನಾನ್ ಅರಂಜಯತ್.

ಅರ್ಥ:—ಅಮುಷ್ಯ= ಈ ಶ್ರೀಮಧ್ವಾಚಾರ್ಯರ, ಶಾಸ್ತ್ರಕಲ್ಪಕತರೋಃ= ಶಾಸ್ತ್ರವೆಂಬ ಕಲ್ಪವೃಕ್ಷದ, ಫಲಂ ಸಕಲಂ ಅಪಿ= ಫಲವನ್ನೆಲ್ಲವನ್ನೂ, ಅಹೋ= ಸಚ್ಛಾಸ್ತ್ರದ ಮಹಿಮೆಯು ಆಶ್ಚರ್ಯಕರವಾದದು. ಯಃ ಕಃ= ಯಾವನಾದರೊಬ್ಬನು (ಯಾವ ಬ್ರಹ್ಮದೇವರು) ಪ್ರಾಪ್ನುಯಾತ್ = ಹೊಂದುವನೋ, ಅಸೌ = ಅಂತಹ ಪುರುಷನು, ಉತ್ತಮಗುಣಂ ತಂ (ನೃಪಂ)= ಶ್ರೇಷ್ಠವಾದ ಗುಣಗಳುಳ್ಳ ಆ ರಾಜನನ್ನು, ವಿಡಂಬಯೇತ್= ಅನುಕರಿಸಿಯಾನು, ಇತಿ ಉದೀರ್ಯ = ಈ ರೀತಿ ಉಪನ್ಯಾಸ ಮಾಡಿ, ಜನಾನ್= ಜನರನ್ನು, ಅರಂಜಯತ್= ಸಂತೋಷಪಡಿಸಿದರು.

ತಾ :—ಶ್ರೀಪೂರ್ಣಪ್ರಜ್ಞರು ರಚಿಸಿರುವ ಈ ಶಾಸ್ತ್ರವು ಕಲ್ಪವೃಕ್ಷದಂತೆ ಇಷ್ಟವಾದ ಅಪರೋಕ್ಷಜ್ಞಾನ, ಮತ್ತು ಮೋಕ್ಷವೆಂಬ ಮಹಾಫಲಗಳನ್ನು ಕೊಡುತ್ತದೆ. ಆದರೆ ಅಂತಹ ಉತ್ತಮವಾದ ಫಲವನ್ನು ಎಲ್ಲರೂಹೊಂದಲಾರರು. ಬಲಮುರಿಶಂಖವನ್ನು ಪೂಜಿಸಿ ಉತ್ತಮವಾದ ಐಶ್ವರ್ಯವನ್ನು ಪಡೆದ ರಾಜನಂತೆ ಉತ್ತಮಗುಣಗಳುಳ್ಳ ಬ್ರಹ್ಮದೇವರು ಮಾತ್ರ ಹೊಂದಿಯಾರು. ಕಲ್ಪವೃಕ್ಷದಂತಿರುವ ಈ ಮಧ್ವಶಾಸ್ತ್ರದ ಫಲವನ್ನು ಯಾವನು ಪಡೆಯುತ್ತಾನೋ ಅವನು ಬಲಮುರಿಶಂಖವನ್ನು ಪೂಜಿಸಿ ಹೆಚ್ಚು ಐಶ್ವರ್ಯವನ್ನು ಪಡೆದ ಮಹಾರಾಜನಂತೆ ಎಂದು ತಿಳಿಯಬಹುದು, ಎಂದು ಹೇಳಿ ಶೋಭನಭಟ್ಟರು ಆ ಸಭೆಗಳಲ್ಲಿ ಸೇರಿದ್ದ ಜನರನ್ನು ಸಂತೋಷಪಡಿಸಿದರು. ಪೂರ್ವಪುಣ್ಯದಿಂದ ಸಾಧುಸಂಪರ್ಕದಿಂದ ದೊರಕಿದ ಮಧ್ವಶಾಸ್ತ್ರವನ್ನು ಬಿಟ್ಟವನು ಅತಿಮೂಢನು. ಅದನ್ನು ಉಪದೇಶದಿಂದ ಪಡೆದರೂ ಯೋಗ್ಯತೆ ಕಡಿಮೆಯಾಗಿ ಆದರಿಂದ ಲೌಕಿಕಸಂಪತ್ತನ್ನು ವಿಶೇಷವಾಗಿ ಹೊಂದಿ ಅದರ ಸಂಪೂರ್ಣಫಲವನ್ನು ಪಡೆಯದವನು ಮಧ್ಯಮನು. ಉತ್ತಮಾಧಿಕಾರಿಯು ಮಾತ್ರವೇ ಆ ಶಾಸ್ತ್ರದ ಸಂಪೂರ್ಣಜ್ಞಾನದ ಫಲವನ್ನು ಹೊಂದುತ್ತಾನೆ ಎಂದು ಶ್ರೀಮಧ್ವಶಾಸ್ತ್ರದ ಮಹಾಮಹಿಮೆ

Rarest Archiver

ಯನ್ನು ಬಲಮುರಿಶಂಖದ ದೃಷ್ಟಾಂತದಿಂದ ವರ್ಣಿಸಿ ಶ್ರೀಮಧ್ವಶಾಸ್ತ್ರದ ಮಹಿಮೆಯನ್ನು ಬೋಧಿಸಿ ಈ ಶಾಸ್ತ್ರವನ್ನು ಸತ್‌ಪುರುಷರು ಎಂದೂ ಬಿಡಬಾರದು ಎಂಬುದಾಗಿ ಶ್ರೀಶೋಭನಭಟ್ಟರು ಸಭೆಗಳಲ್ಲಿ ಉಪನ್ಯಾಸ ಮಾಡಿ ಜನರನ್ನು ಆನಂದ ಪಡಿಸಿದರು ಎಂದು ಭಾವ.

**ವಿ :**—ಕಲ್ಪ ಏವ ಕಲ್ಪಕಃ, ಕಲ್ಪಕ ಇತಿ ತರುಃ ಕಲ್ಪಕತರುಃ, ಶಾಸ್ತ್ರಮೇವ ಕಲ್ಪಕತರುಃ ಶಾಸ್ತ್ರಕಲ್ಪಕತರುಃ ತಸ್ಯ; ಉತ್ತಮಾಃ ಗುಣಾಃ ಯಸ್ಯ ಸಃ ತಂ; ಕಃ=ಯಾವನು, ಮತ್ತು ಬ್ರಹ್ಮದೇವರು, ಕಃ ಪ್ರಾಪ್ನು-ಯಾದ್ ಬ್ರಹ್ಮಾ ಚ-**ಭಾವಪ್ರಕಾಶಿಕಾ.**

**ಕ್ರಿ :**—ಪ್ರ + ಆಪ್ನುಯಾತ್ ಆಪ್ನುಯಾತಾಂ ಆಪ್ನುಯುಃ ಇತ್ಯಾದಿ-ಪ್ರ-ಉಪಸರ್ಗ, ಆಪ್ಲೃ ವ್ಯಾಪ್ತೌ ವಿಧಿಲಿಙ್; ವಿ + ಡಂಬ-ಯೇತ್; ಡಂಬಯೇತಾಂ ಡಂಬಯೇಯುಃ ವಿ ಉಪ. ಡಬಿ ಅನುಕರಣೇ, ವಿಧಿಲಿಙ್.

**ಅನ:**—ಹೀಗೆ ಈ ಲೋಕದಲ್ಲಿ ಶೋಭನಭಟ್ಟರಂತಹ ಪಂಡಿತ ಶ್ರೇಷ್ಠರು ಮಾತ್ರವೇ ಆಚಾರ್ಯರನ್ನು ಪೂಜಿಸುತ್ತಾರೆಂದು ಅಲ್ಲ, ಆಚಾರ್ಯರ ಸಿದ್ಧಾಂತಶಾಸ್ತ್ರದ ಆವಿರ್ಭಾವಕಾಲದಲ್ಲಿ ದೇವತೆಗಳೂ ಕೂಡ ಆಚಾರ್ಯರನ್ನು ಪೂಜಿಸಿದರು.

**ನೇದೃಶೈಃ ಕವಿಭಿರೇವ ಕೇವಲಂ**
**ಹಂತ ಪೂಜ್ಯಚರಣೋಽಭ್ಯಪೂಜ್ಯತ ।**
**ಶರ್ವಶಕ್ರಗುರುಪೂರ್ವದೈವತೈ-**
**ರಪ್ಯಲಂ ಸುಸಮಯೋದ್ಗಮೋತ್ಸವೇ ॥೨೭॥**

**ಅ:**—ಸುಸಮಯೋದ್ಗಮೋತ್ಸವೇ ಈದೃಶೈಃ ಕವಿಭಿರೇವ ಕೇವಲಂ ನ, ಅಪಿ ತು, ಶರ್ವಶಕ್ರಗುರುಪೂರ್ವದೈವತೈರಪಿ ಪೂಜ್ಯಚರಣಃ ಅಭ್ಯ-ಪೂಜ್ಯತ ಹಂತ!

**ಅರ್ಥ :**— ಸುಸಮಯೋದ್ಗಮೋತ್ಸವೇ = ಸತ್‌ಸಿದ್ಧಾಂತದ ಆವಿರ್ಭಾವದ ಸಂತೋಷಕಾಲದಲ್ಲಿ, ಈದೃಶೈಃ ಕವಿಭಿಃ ಏವ = ಇಂತಹ

Rarest Archiver

ಶೋಭನಭಟ್ಟರಂತಿರುವ ಪಂಡಿತರಿಂದಲೇ, ಕೇವಲಂ ನ (ಅಭ್ಯಪೂಜ್ಯತ) = ಪೂಜಿಸಲ್ಪಟ್ಟರೆಂದು ಮಾತ್ರವಲ್ಲ, (ಅಪಿತು) = ಮತ್ತೇನಂದರೆ, ಶರ್ವ ಶಕ್ರಗುರುಪೂರ್ವದೈವತೈಃ ಅಪಿ = ರುದ್ರ, ಇಂದ್ರ, ಬೃಹಸ್ಪತಿಮೊದಲಾದ ದೇವತೆಗಳಿಂದಲೂ, ಪೂಜ್ಯಚರಣಃ = ಪೂಜ್ಯವಾದ ಸ್ವರೂಪವುಳ್ಳ (ಪೂಜಿಸಲು ಯೋಗ್ಯವಾದ ಪಾದವುಳ್ಳ ಅಥವಾ ಆಚಾರವುಳ್ಳ) ಆಚಾರ್ಯರು, ಅಲಂ ಅಭ್ಯಪೂಜ್ಯತ = ವಿಶೇಷವಾಗಿ ಪೂಜಿಸಲ್ಪಟ್ಟರು. ಹಂತ= ಸಂತೋಷವು.

**ತಾ :**—ವಂದನೀಯಚರಣರಾದ, ಉತ್ತಮವಾದ ಆಚಾರವುಳ್ಳ, ಶ್ರೀಮದಾನಂದತೀರ್ಥಭಗವತ್‌ಪಾದರನ್ನು ಶೋಭನಭಟ್ಟರಂತಹ ಪಂಡಿತ ಶ್ರೇಷ್ಠರು ಮಾತ್ರವೇ ಪೂಜಿಸಿದರೆಂದಲ್ಲ. ಉತ್ತಮವಾದ ದ್ವೈತಸಿದ್ಧಾಂತ ಶಾಸ್ತ್ರದ ಆವಿರ್ಭಾವಮಹೋತ್ಸವಕಾಲದಲ್ಲಿ, ರುದ್ರದೇವರು, ಇಂದ್ರ ದೇವರು, ಬೃಹಸ್ಪತ್ಯಾಚಾರ್ಯರು ಮೊದಲಾದ ದೇವತೆಗಳೂ ಕೂಡ ಅತಿಶಯವಾಗಿ ಶ್ರೀಮಧ್ವಾಚಾರ್ಯರನ್ನು ಪೂಜಿಸಿದರು. ಹೀಗೆ ದೇವತೆಗಳೇ ಶ್ಲಾಘಿಸಿ ಪೂಜಿಸುವಾಗ ಮನುಷ್ಯರು ಪೂಜಿಸಿದ್ದರಲ್ಲಿ ಆಶ್ಚರ್ಯವೇನು! ಎಂದು ಭಾವ.

**ವಿ :**—ಪೂಜ್ಯಂ ಚರಣಂ ಯಸ್ಯ ಸಃ (ಪೂಜ್ಯೌ ಚರಣೌ ಯಸ್ಯ ಸಃ) ಶರ್ವಶ್ಚ ಶಕ್ರಶ್ಚ ಗುರುಶ್ಚ ಶರ್ವಶಕ್ರಗುರವಃ, ತೇ ಪೂರ್ವೇ ಯೇಷಾಂ ತಾನಿ ಶರ್ವಶಕ್ರಗುರುಪೂರ್ವಾಣಿ, ತಾನಿ ಚ ತಾನಿ ದೈವತಾನಿ ಚ, ತೈಃ, ವೃಂದಾರಕಾ ದೈವತಾನಿ ಪುಂಸಿ ವಾ—**ಅಮರ.** ಸು ಶೋಭನಶ್ಚಾಸೌ ಸಮಯಶ್ಚ ಸುಸಮಯಃ ಸುಸಮಯಸ್ಯ ಉದ್ಗಮಃ ಸುಸಮಯೋದ್ಗಮಃ, ಸ ಚಾಸೌ ಉತ್ಸವಶ್ಚ ತಸ್ಮಿನ್, ಸಮಯ = ಸಿದ್ಧಾಂತ, ಸಮಯಾಃ ಶಪಥಾಚಾರಕಾಲಸಿದ್ಧಾಂತಸಂವಿದಃ—**ಅಮರ.**

**ಕ್ರಿ:** —ಅಭಿ+ಅಪೂಜ್ಯತ, ಅಪೂಜ್ಯೇತಾಂ ಅಪೂಜ್ಯಂತ. ಇತ್ಯಾದಿ. ಅಭಿ ಉಪಸರ್ಗ, ಪೂಜ ಪೂಜಾಯಾಂ (1643) ಉಭಯ. ಕರ್ಮಣಿ ಲಙ್ (ಈ ದೃಶಾಃ ಕವಯ ಏವ ಪೂಜ್ಯಚರಣಂ ನ ಅಭ್ಯಪೂಜಯನ್— **ಕರ್ತರಿ.**)

Rarest Archive

ಅವ:—ಅಲ್ಲಲ್ಲಿ ದಿಗ್ವಿಜಯ ಮಾಡುವಾಗ ಆಚಾರ್ಯರು ಸಜ್ಜನರಿಗೆ ಪರತತ್ತ್ವವನ್ನು ಉಪದೇಶಿಸಿದರು—

**ನಿಮ್ನಭೂರಿವ ಸತೀಃ ಪ್ರಜಾ ವ್ರಜನ್**
**ವಾರಿದರ್ತುರಶನೈರಪೂರಿ ಸಃ ।**
**ಪ್ರಾಜ್ಯತಾಪಹರದರ್ಶನಾಂಬುನಾ**
**ತುಂಗದೇಶಮಿವ ದುರ್ಜನಂ ತು ನೋ ॥೨೮॥**

ಅ:—ಸಃ ಅಶನೈಃ ವ್ರಜನ್ ಪ್ರಾಜ್ಯತಾಪಹರದರ್ಶನಾಂಬುನಾ ವಾರಿದರ್ತುಃ ನಿಮ್ನಭೂಃ ಇವ ಸತೀಃ ಪ್ರಜಾಃ ಅಪೂರಿ। ತುಂಗದೇಶಂ ಇವ ದುರ್ಜನಂ ತು ನೋ ಅಪೂರಿ.

ಅರ್ಥ:—ಸಃ=ಶ್ರೀಮಧ್ವಾಚಾರ್ಯರು, ಅಶನೈಃ=ತ್ವರಿತವಾಗಿ, ವ್ರಜನ್=(ದೇಶಗಳಲ್ಲಿ) ಸಂಚಾರಮಾಡುತ್ತಾ, ಪ್ರಾಜ್ಯ=ಅಧಿಕವಾದ, ತಾಪ=ಸಂಸಾರತಾಪವನ್ನು (ಸೂರ್ಯತಾಪವನ್ನು), ಹರ=ಪರಿಹರಿಸುವ, ದರ್ಶನ=ತಮ್ಮ ಸಿದ್ಧಾಂತವೆಂಬ, (ತಮ್ಮ ದರ್ಶನವೆಂಬ) ಅಂಬುನಾ=ನೀರಿನಿಂದ, ವಾರಿದರ್ತುಃ=ವರ್ಷಋತುವು (ಮಳೆಗಾಲವು) ನಿಮ್ನ ಭೂಃ ಇವ =ತಗ್ಗು ಭೂಮಿಗಳನ್ನೋಪಾದಿಯಲ್ಲಿ, ಸತೀಃ ಪ್ರಜಾಃ=ಸಜ್ಜೀವರಾದ ಪ್ರಜೆಗಳನ್ನು, ಅಪೂರಿ=ತುಂಬಿದರು. ತುಂಗದೇಶಂ ಇವ=ಎತ್ತರವಾದ ಪ್ರದೇಶವನ್ನೆಂಬಂತೆ, ದುರ್ಜನಂ ತು ನೋ ಅಪೂರಿ = ದುರ್ಜನರನ್ನು ತುಂಬಲಿಲ್ಲ.

ತಾ:—ಆ ಶ್ರೀಮಧ್ವಾಚಾರ್ಯರು ತ್ವರಿತವಾಗಿ ಬೇರೆ ಬೇರೆ ದೇಶಗಳಲ್ಲಿ ಸಂಚಾರಮಾಡುತ್ತಾ, ಬಹಳವಾದ ಸಂಸಾರತಾಪವನ್ನು ಪರಿಹರಿಸುವ ತಮ್ಮ ಸಿದ್ಧಾಂತವೆಂಬ ಜಲದಿಂದ ಮತ್ತು ತನ್ನ ದರ್ಶನದಿಂದ ತತ್ತ್ವಜ್ಞಾನಯೋಗ್ಯರಾದ ಸಾತ್ತ್ವಿಕಜನರನ್ನು ಜ್ಞಾನಪೂರ್ಣರನ್ನಾಗಿ ಮಾಡಿದರು. ಮಳೆಗಾಲದಲ್ಲಿ ಸೂರ್ಯತಾಪವನ್ನು ಪರಿಹರಿಸುವ ಜಲದಿಂದ ತಗ್ಗುಪ್ರದೇಶಗಳು ಮಾತ್ರ ತುಂಬುವಂತೆ ಸಜ್ಜನರ ಮನಸ್ಸಿನಲ್ಲಿ ಸಚ್ಛಾಸ್ತ್ರತತ್ತ್ವಾಮೃತವು ತುಂಬಿತು. ಮಳೆಗಾಲವು ಎತ್ತರವಾದ ಪ್ರದೇಶವನ್ನು ನೀರಿನಿಂದ ಪೂರ್ಣವಾಗಿ ಮಾಡುವುದಿಲ್ಲ. ಅದರಂತೆ

Rarest Archiver

ಆಚಾರ್ಯರು ದುರ್ಜನರನ್ನು ತತ್ತ್ವಜ್ಞಾನಪೂರ್ಣರನ್ನಾಗಿ ಮಾಡಲಿಲ್ಲ. ದುರ್ಜನರ ಮನಸ್ಸಿನಲ್ಲಿ ಆಚಾರ್ಯರ ತತ್ತ್ವಜ್ಞಾನವು ಪ್ರವೇಶಿಸಲಿಲ್ಲ. ಆಚಾರ್ಯರು ಸಜ್ಜನರಿಗೆ ಮಾತ್ರವೇ ತತ್ತ್ವವನ್ನು ಉಪದೇಶಿಸಿದರೇ ಹೊರತು ದುರ್ಜನರಿಗೆ ಉಪದೇಶಿಸಲಿಲ್ಲ ಎಂದು ಭಾವ.

**ವಿ :**—ನಿಮ್ನಾಶ್ಚ ತಾಃ ಭುವಶ್ಚ ನಿಮ್ನಭುವಃ ತಾಃ, (ವಿವಿಧಭೂಃ ಶ್ಲೋ. ೧೪. ನೋಡಿರಿ.) ವಾರಿದಶ್ಚಾಸೌ ಋತುಶ್ಚ ವಾರಿದರ್ತುಃ, ನ ಶನೈಃ ಅಶನೈಃ, ಪ್ರಾಜ್ಯಶ್ಚಾಸೌ ತಾಪಶ್ಚ ಪ್ರಾಜ್ಯತಾಪಃ, ಪ್ರಾಜ್ಯತಾಪಸ್ಯ ಹರಂ ಪ್ರಾಜ್ಯತಾಪಹರಂ, ದರ್ಶನಮೇವ ಅಂಬು ದರ್ಶನಾಂಬು, ಪ್ರಾಜ್ಯ ತಾಪಹರಂ ಚ ತತ್ ದರ್ಶನಾಂಬು ಚ ತೇನ, ತುಂಗಶ್ಚಾಸೌ ದೇಶಶ್ಚ, ತಂ.

**ಕ್ರಿ :**—ಅಪೂರಿ ಅಪೂರಿಷಾತಾಂ ಅಪೂರಿಷತ ಇತ್ಯಾದಿ, ಪೂರೀ ಆಪ್ಯಾಯನೇ (1804) ಉಭಯ. ಕರ್ತರಿ ಲುಙ್.

**ಅವ:**—ಶ್ರೀಮಧ್ವಾಚಾರ್ಯರು ತಿರುಗಿ ರಜತಪೀಠಪುರಕ್ಕೆ (ಉಡುಪಿಗೆ) ಬಂದರು—

**ಕರ್ಮಭಿಃ ಸಕಲಲೋಕಕೌತುಕೈ-**
**ರ್ಮಾನಿತಃ ಪಥಿಜನೈಃ ಸಮಾಗತಃ ।**
**ಸನ್ನನಾಮ ಶಿವನಾಮಕೀರ್ತನಂ**
**ರಾಜತಾಸನಪುರೇ ವಿರಾಜಿತಂ** ॥೨೯॥

**ಅ :**—ಸಕಲಲೋಕಕೌತುಕೈಃ ಕರ್ಮಭಿಃ ಮಾನಿತಃ ಪಥಿ ಜನೈಃ ಸಮಾಗತಃ ರಾಜತಾಸನಪುರೇ ವಿರಾಜಿತಂ ಶಿವನಾಮಕೀರ್ತನಂ ಸಂನನಾಮ.

**ಅರ್ಥ:**—ಸಕಲಲೋಕಕೌತುಕೈಃ = ಸಮಸ್ತಜನರಿಗೂ ಆಶ್ಚರ್ಯ-ಕರವಾದ, ಕರ್ಮಭಿಃ = ಚರಿತ್ರೆಗಳಿಂದ, ಮಾನಿತಃ = ಸನ್ಮಾನಿತರಾದ, ಪಥಿ = ದಾರಿಯಲ್ಲಿ, ಜನೈಃ ಸಮಾಗತಃ (ಸಃ) ಜನರಿಂದ ಪ್ರಾಪ್ತರಾದ, ಆ ಶ್ರೀಮಧ್ವಾಚಾರ್ಯರು, ರಾಜತಾಸನಪುರೇ = ರಜತಪೀಠಪುರದಲ್ಲಿ

Rarest Archiver

ವಿರಾಜಿತಂ = ಪ್ರಕಾಶಿಸುವ, ಶಿವನಾಮಕೀರ್ತನಂ = ಶಿವನೆಂಬ ವಾಚಕ ಶಬ್ದವುಳ್ಳ (ಶಿವನೆಂದು ಕರೆಸಿಕೊಳ್ಳುವ) ಶ್ರೀಹರಿಯನ್ನು, ಸಂನನಾಮ = ವಂದಿಸಿದರು.

ತಾ :—ದಾರಿಯಲ್ಲಿ ಸಮಸ್ತಜನರಿಗೂ ಆಶ್ಚರ್ಯವನ್ನುಂಟು ಮಾಡುವ ತನ್ನ ವ್ಯಾಪಾರಗಳಿಂದ ಜನರಿಂದ ಸನ್ಮಾನಿತರಾದ, ಅನೇಕ ಜನರಿಂದ ಎದುರುಗೊಳ್ಳಲ್ಪಟ್ಟ ಶ್ರೀಮಧ್ವಾಚಾರ್ಯರು, ರೂಪ್ಯಪೀಠ ಪುರಕ್ಕೆ (ಉಡುಪಿಗೆ) ಬಂದು ಅಲ್ಲಿ, ಕಂಗೊಳಿಸುವ ಶಿವನ ಹೆಸರಿನಿಂದ ಕರೆಸಿಕೊಳ್ಳುವ ಶ್ರೀಹರಿಯನ್ನು ಭಕ್ತಿಪೂರ್ವಕವಾಗಿ ವಂದಿಸಿದರು. (ಅನಂತೇಶ್ವರನನ್ನು ನಮಸ್ಕರಿಸಿದರು.)

ವಿ:— ಸಕಲಾಶ್ಚ ತೇ ಲೋಕಾಶ್ಚ ಸಕಲಲೋಕಾಃ, ಸಕಲ ಲೋಕಾನಾಂ ಕೌತುಕಂ ಯೈಃ ತಾನಿ ತೈಃ, ಶಿವ ಇತಿ ನಾಮ ಶಿವನಾಮ, ಕೀರ್ತ್ಯತೇ ಅನೇನೇತಿ ಕೀರ್ತನಂ (ವಾಚಕಶಬ್ದ) ಅಥವಾ ಕೀರ್ತನಂ ವಚನವು. ಶಿವನಾಮ ಕೀರ್ತನಂ ಯಸ್ಯ ಸಃ ತಂ. ರಜತಸ್ಯ ಇದಂ ರಾಜತಂ, ರಾಜತಂ ಚ ತತ್ ಆಸನಂ ಚ ರಾಜತಾಸನಂ, ರಾಜತಾಸನಸ್ಯ ಪುರಂ ತಸ್ಮಿನ್.

ಕಿ:—ಸಂ+ನನಾಮ ನೇಮತುಃ ನೇಮುಃ ಇತ್ಯಾದಿ, ಣಮ ಪ್ರಹ್ವತ್ವೇ ಶಬ್ದೇ ಚ (981) ಲಿಟ್.

ಅವ:—ತನ್ನನ್ನಗಲಿ ದೂರದೇಶಕ್ಕೆ ಹೋಗಿದ್ದ ಶಿಷ್ಯನನ್ನು ಮರಳಿ ಕಂಡಾಗ ಅಚ್ಯುತಪ್ರೇಕ್ಷರಿಗೆ ಆದ ಆನಂದವೆಷ್ಟು!—

**ಅಚ್ಯುತಪ್ರಮತಿರಚ್ಯುತಪ್ರಿಯಂ**
**ತಂ ದಶಪ್ರಮತಿಮಾಗತಂ ತದಾ ।**
**ವಂದಮಾನಮವಲೋಕ್ಯ ಯಾಂ ಮುದಂ**
**ಪ್ರಾಪ್ತವಾಂಸ್ತದವಧಿರ್ನ ವಿದ್ಯತೇ ॥೩೦॥**

ಅ:—ತದಾ ಅಚ್ಯುತಪ್ರಮತಿಃ ಅಚ್ಯುತಪ್ರಿಯಂ ಆಗತಂ ತಂ ದಶಪ್ರಮತಿಂ ವಂದಮಾನಂ ಅವಲೋಕ್ಯ ಯಾಂ ಮುದಂ ಪ್ರಾಪ್ತವಾನ್ ತದವಧಿಃ ನ ವಿದ್ಯತೇ.

Rarest Archiver

**ಅರ್ಥ:**— ತದಾ = ಆಗ, ಅಚ್ಯುತಪ್ರಮತಿಃ = ಶ್ರೀಅಚ್ಯುತ ಪ್ರೇಕ್ಷತೀರ್ಥರು, ಅಚ್ಯುತಪ್ರಿಯಂ = ಶ್ರೀಹರಿಗೆ ಪ್ರೀತಿಪಾತ್ರರಾದ, ಆಗತಂ = ಬಂದುಸೇರಿದ, ತಂ ದಶಪ್ರಮತಿಂ = ಆ ಪೂರ್ಣಪ್ರಜ್ಞರನ್ನು, ವಂದಮಾನಂ (ಸಂತಂ) ಅವಲೋಕ್ಯ=ನಮಸ್ಕಾರ ಮಾಡುವವರನ್ನಾಗಿ ನೋಡಿ, ಯಾಂ ಮುದಂ=ಯಾವ (ಎಷ್ಟು) ಆನಂದವನ್ನು, ಪ್ರಾಪ್ತ-ವಾನ್=ಹೊಂದಿದರೋ, ತದವಧಿಃ=ಅದಕ್ಕೆ ಮಿತಿಯು, ನ ವಿದ್ಯತೇ= ಇರುವುದಿಲ್ಲ.

**ತಾ :**—ಶ್ರೀಪೂರ್ಣಬೋಧರು ಶ್ರೀಹರಿಗೆ ಅತ್ಯಂತಪ್ರೀತಿಪಾತ್ರರು. ಅವರು ತನ್ನನ್ನಗಲಿ ದೂರದ ತೀರ್ಥಯಾತ್ರೆಗೆ ಹೋಗಿ ಹಿಂತಿರುಗಿ ಬಂದು ತನಗೆ ನಮಸ್ಕರಿಸುತ್ತಿರುವುದನ್ನು ನೋಡಿದಾಗ ಅವರ ಗುರುಗಳಾದ ಶ್ರೀಅಚ್ಯುತಪ್ರೇಕ್ಷರು ಅನುಭವಿಸಿದ ಆನಂದಕ್ಕೆ ಪಾರವೇ ಇರಲಿಲ್ಲ. ಶಿಷ್ಯನನ್ನು ನೋಡಿ ಅಚ್ಯುತಪ್ರೇಕ್ಷರು ಅಪರಿಮಿತ ಆನಂದವನ್ನು ಹೊಂದಿದರು ಎಂದು ಭಾವ.

**ವಿ :**—ಅಚ್ಯುತಸ್ಯ ಪ್ರಮತಿಃ ಜ್ಞಾನಂ ಯಸ್ಯ ಸಃ ಅಚ್ಯುತಪ್ರಮತಿಃ, ಅಚ್ಯುತಸ್ಯ ಪ್ರಿಯಃ ತಂ, ದಶ (ಪೂರ್ಣಾಃ) ಪ್ರಮತಯಃ ಯಸ್ಯ ಸಃ ತಂ, ತಸ್ಯಾಃ ಅವಧಿಃ ತದವಧಿಃ.

**ಕ್ರಿ:**—ವಿದ್ಯತೇ ವಿದ್ಯೇತೇ ವಿದ್ಯಂತೇ, ಇತ್ಯಾದಿ. ವಿದ ಸತ್ತಾಯಾಂ (1171) ಅಕ. ಲಟ್.

**ಅವ:**—ಜ್ಯೇಷ್ಠಯತಿಗಳಿಗೂ ಆಚಾರ್ಯರ ದರ್ಶನದಿಂದ ಅಪಾರ ಆನಂದವಾಯಿತು—

**ಪ್ರೀತಿಮಾರ್ಯಯತಿರುತ್ತಮಾಂ ಪುರಾ**
**ಪ್ರೇಷಿತಾಪ್ರತಿಮಭಾಷ್ಯದೃಗ್ ಯಯೌ ।**
**ಅಪ್ಯತೋಽತಿಶಯಿನೀಂ ಶುಚಿಸ್ಮಿತಂ**
**ತಂ ವಿಲೋಕ್ಯ ಸುಚಿರಾದ್ವಿದೃಕ್ಷಿತಂ** ॥೩೧॥

**ಅ :**— ಪುರಾ ಪ್ರೇಷಿತಾಪ್ರತಿಮಭಾಷ್ಯದೃಕ್ ಆರ್ಯಯತಿಃ

Rarest Archive

ಉತ್ತಮಾಂ ಪ್ರೀತಿಂ ಯಯೌ. ಸುಚಿರಾತ್ ದಿದೃಕ್ಷಿತಂ ಶುಚಿಸ್ಮಿತಂ ತಂ ವಿಲೋಕ್ಯ ಅತಃ ಅಪಿ ಅತಿಶಯಿನೀಂ ಪ್ರೀತಿಂ ಯಯೌ.

**ಅರ್ಥ:**—ಪುರಾ= (ಬರುವುದಕ್ಕೆ) ಮೊದಲೇ, ಪ್ರೇಷಿತ=ಕಳುಹಿಸಲ್ಪಟ್ಟ, ಅಪ್ರತಿಮಭಾಷ್ಯದೃಕ್ = ಅಸದೃಶವಾದ ಭಾಷ್ಯವನ್ನು ನೋಡಿದಂತಹ, ಆರ್ಯಯತಿಃ=ಜ್ಯೇಷ್ಠಯತಿಗಳು, ಉತ್ತಮಾಂ ಪ್ರೀತಿಂ ಯಯೌ = ಅಧಿಕವಾದ ಪ್ರೀತಿಯನ್ನು ಹೊಂದಿದರು. ಸುಚಿರಾತ್ = ಬಹಳ ಕಾಲದಿಂದ,ದಿದೃಕ್ಷಿತಂ=ನೋಡಲು ಬಯಸಿದ್ದ, ಶುಚಿಸ್ಮಿತಂ=ಶುಭ್ರವಾದ ಮಂದಹಾಸವುಳ್ಳ, ತಂ=ಆ ಪೂರ್ಣಪ್ರಜ್ಞರನ್ನು, ವಿಲೋಕ್ಯ = ನೋಡಿ, ಅತಃ ಅಪಿ = ಮೊದಲಿನ ಆನಂದಕ್ಕಿಂತಲೂ, ಅತಿಶಯಿನೀಂ=ಅಧಿಕವಾದ, ಪ್ರೀತಿಂ = ಆನಂದವನ್ನು, ಯಯೌ = ಹೊಂದಿದರು.

**ತಾ:**—ಆಚಾರ್ಯರು ತಾನು ಯಾತ್ರೆಯಿಂದ ಹಿಂದಿರುಗುವುದಕ್ಕೆ ಮೊದಲೇ ಜ್ಯೇಷ್ಠಯತಿಗಳಿಗೆ ಅಸದೃಶವಾದ ತನ್ನ ಬ್ರಹ್ಮಸೂತ್ರಭಾಷ್ಯ ಗ್ರಂಥವನ್ನು ಕಳುಹಿಸಿದ್ದರು. ಅದನ್ನು ನೋಡಿ ಅವರು ಆಚಾರ್ಯರಲ್ಲಿ ಎಷ್ಟು ಪ್ರೀತಿಯನ್ನು ಹೊಂದಿದ್ದರೋ, ಈಗ ಬಹುಕಾಲದಿಂದ ನೋಡಬೇಕೆಂದು ಅಪೇಕ್ಷಿಸಿದ್ದ, ಕಿರುನಗೆಯುಳ್ಳ ಶ್ರೀಮಧ್ವಾಚಾರ್ಯರನ್ನು ಪ್ರತ್ಯಕ್ಷವಾಗಿ ಕಂಡಾಗ ಹಿಂದಿನ ಆನಂದಕ್ಕಿಂತಲೂ ಅತ್ಯಧಿಕವಾದ ಆನಂದವನ್ನು ಹೊಂದಿದರು.

**ವಿ:**—ಆರ್ಯಶ್ಚಾಸೌ ಯತಿಶ್ಚ ಆರ್ಯಯತಿಃ, ನ ವಿದ್ಯತೇ ಪ್ರತಿಮಾ ಯಸ್ಯ ತತ್ ಅಪ್ರತಿಮಂ, ಅಪ್ರತಿಮಂ ಚ ತತ್ ಭಾಷ್ಯಂ ಚ ಅಪ್ರತಿಮಭಾಷ್ಯಂ, ಪ್ರೇಷಿತಂ ಚ ತತ್ ಅಪ್ರತಿಮಭಾಷ್ಯಂ ಚ, ಪ್ರೇಷಿತಾ-ಪ್ರತಿಮಭಾಷ್ಯಂ ಪಶ್ಯತೀತಿ ಪ್ರೇಷಿತಾಪ್ರತಿಮಭಾಷ್ಯದೃಕ್, ಅತಿಶಯಃ ಅಸ್ಯಾಃ ಅಸ್ತೀತಿ ಅತಿಶಯಿನೀ ತಾಂ, ಶುಚಿ ಸ್ಮಿತಂ ಯಸ್ಯ ಸಃ ತಂ, ದ್ರಷ್ಟುಂ ಇಷ್ಟಃ ದಿದೃಕ್ಷಿತಃ ತಂ.

**ಕ್ರಿ:**—ಯಯೌ, ಸರ್ಗ ೯, ಶ್ಲೋ. ೧ ನೋಡಿರಿ.

**ಅವ:**—ಜ್ಯೇಷ್ಠಯತಿಗಳಿಗೆ ಭಾಷ್ಯದ ವಿಷಯದಲ್ಲಿ ಎಷ್ಟೊಂದು ಶ್ರದ್ಧೆಯಿತ್ತು !—

Rarest Archiver

**ಪೂರ್ಣದೃಷ್ಟಿಜಲಧೇರ್ಗೃಹೀತವಾನ್**
**ಭಾಷ್ಯಸಂಜ್ಞಮಮೃತಂ ಸುಖಾವಹಂ ।**
**ಚಿತ್ರಮೇಷ ಯತಿರಾಡ್‌ಘನಾಘನೋ**
**ಗ್ರಾಹಯಂಶ್ಚ ಮನುಜಾನ್ ಮುಮೋಚ ನೋ ॥೩೨॥**

**ಅ:**—ಪೂರ್ಣದೃಷ್ಟಿಜಲಧೇಃ ಭಾಷ್ಯಸಂಜ್ಞಂ ಸುಖಾವಹಂ ಅಮೃತಂ ಗೃಹೀತವಾನ್ ಏಷಃ ಯತಿರಾಡ್‌ಘನಾಘನಃ ಮನುಜಾನ್ ಗ್ರಾಹಯನ್ ಚ ನೋ ಮುಮೋಚ, ಚಿತ್ರಂ.

**ಅರ್ಥ:**—ಪೂರ್ಣದೃಷ್ಟಿಜಲಧೇಃ = ಸಂಪೂರ್ಣವಾದ ಜ್ಞಾನವುಳ್ಳ ಶ್ರೀಮಧ್ವಾಚಾರ್ಯರೆಂಬ ಸಮುದ್ರದ ದೆಸೆಯಿಂದ, ಭಾಷ್ಯಸಂಜ್ಞಂ = ಬ್ರಹ್ಮಸೂತ್ರಭಾಷ್ಯವೆಂಬ ಹೆಸರುಳ್ಳ, ಸುಖಾವಹಂ = ಸುಖವನ್ನು ಕೊಡುವ, ಅಮೃತಂ = ಅಮೃತವನ್ನು (ಜಲವನ್ನು) ಗೃಹೀತವಾನ್ = ಸ್ವೀಕರಿಸಿದಂತಹ, ಏಷಃ = ಈ, ಯತಿರಾಟ್ = ಜ್ಯೇಷ್ಠಯತಿಗಳೆಂಬ, ಘನಾಘನಃ = ಮಳೆಗಾಲದ ಮೋಡವು, ಮನುಜಾನ್ = ಇತರ ಪುರುಷರನ್ನು ಕುರಿತು, ಗ್ರಾಹಯನ್ ಚ = ಈ ಅಮೃತವನ್ನು ಸ್ವೀಕರಿಸುವಂತೆ ಮಾಡಿದಾಗ್ಯೂ, ನೋ ಮುಮೋಚ = (ತಾನು) ಬಿಡಲಿಲ್ಲ. ಚಿತ್ರಂ = ಆಶ್ಚರ್ಯವು.

**ತಾ:**—ಶ್ರೀಮಧ್ವಾಚಾರ್ಯರೆಂಬ ಅಮೃತಸಮುದ್ರದಿಂದ ಸೂತ್ರಭಾಷ್ಯವೆಂಬ ಆನಂದಕರವಾದ ಅಮೃತಸಮಾನವಾದ ಜಲವನ್ನು ಸಂಗ್ರಹಿಸಿದ ಈ ಜ್ಯೇಷ್ಠಯತಿಗಳೆಂಬ ಮಳೆಸುರಿಸುವ ಮೋಡವು ಆ ಭಾಷ್ಯವೆಂಬ ಅಮೃತೋದಕವನ್ನು ಸಜ್ಜನರಿಗೆ ಮಳೆಗರಿಸಿತು. ಆದರೆ ತಾನು ಮಾತ್ರ ಆ ಅಮೃತಜಲವು ಕಡಿಮೆಯಾಗಿ ರಿಕ್ತನಾಗಲೇ (ಖಾಲಿಯಾಗಲೇ) ಇಲ್ಲ. ಎಷ್ಟು ನೀರನ್ನು ಇತರರಿಗೆ ಕೊಟ್ಟರೂ ತಾನು ನೀರನ್ನು ಬಿಡಲಿಲ್ಲವೆಂಬುದು ಆಶ್ಚರ್ಯವು. ಮೋಡವು ಸಮುದ್ರದಿಂದ ನೀರನ್ನು ಗಳಿಸಿ ಮಳೆಗಾಲದಲ್ಲಿ ಭೂಮಿಗೆ ಮಳೆಸುರಿಸಿದ ಮೇಲೆ ತಾನು ನೀರಿಲ್ಲದೆ ಇರುತ್ತದೆ. ಆದರೆ ಜ್ಯೇಷ್ಠಯತಿಗಳು ಶ್ರೀಮಧ್ವಾಚಾರ್ಯರಿಂದ ಭಾಷ್ಯವನ್ನು ಓದಿಕೊಂಡು ಇತರಶಿಷ್ಯರಿಗೆ ಉಪದೇಶಿಸಿದರೂ ತಾನು ಆ ಭಾಷ್ಯವನ್ನು

Rarest Archive

ಬಿಡಲಿಲ್ಲ. ಮೋಡದಂತೆ ಇನ್ನೊಬ್ಬರಿಗೆ ಕೊಟ್ಟಮೇಲೆ ತನಗೆ ಇಲ್ಲದಿರ ಬೇಕಾಗಿತ್ತು. ಜ್ಯೇಷ್ಠಯತಿಗಳು ಮೋಡದಂತೆ. ಅವರು ಇನ್ನೊಬ್ಬರಿಗೆ ಕೊಟ್ಟರೂ ತಾನು ಭಾಷ್ಯಾರ್ಥಜ್ಞಾನವೆಂಬ ಜಲವನ್ನು ಬಿಡದಿರುವುದು ಆಶ್ಚರ್ಯಕಾರಣವು. ನೀರನ್ನು ಸುರಿಸಿದ ಕೂಡಲೇ ಮೋಡವು ರಿಕ್ತವಾಗು ತ್ತದೆ, ಆದರೆ ಶಾಸ್ತ್ರಜ್ಞಾನವು ಶ್ರದ್ಧೆಯಿಂದ ಇನ್ನೊಬ್ಬರಿಗೆ ಕೊಟ್ಟಹಾಗೆ ತನ್ನಲ್ಲಿ ವೃದ್ಧಿಯಾಗುತ್ತದೆ. ಪ್ರಕೃತ ಜ್ಯೇಷ್ಠಯತಿಗಳು ಭಾಷ್ಯವಿಚಾರ ದಲ್ಲೇ ಮುಳುಗಿದ್ದರು. ಎಂದು ಭಾವ.

**ವಿ:**—ಪೂರ್ಣಾ ದೃಷ್ಟಿಃ ಯಸ್ಯ ಸಃ ಪೂರ್ಣದೃಷ್ಟಿಃ, ಪೂರ್ಣ ದೃಷ್ಟಿರೇವ ಜಲಧಿಃ ಪೂರ್ಣದೃಷ್ಟಿಜಲಧಿಃ ತಸ್ಮಾತ್, ಭಾಷ್ಯಂ ಇತಿ ಸಂಜ್ಞಾ ಯಸ್ಯ ತತ್ ಭಾಷ್ಯಸಂಜ್ಞಂ, ಸುಖಂ ಆವಹತಿ ಕರೋತಿ ಇತಿ ಸುಖಾವಹಂ, ಯತೀನಾಂ ರಾಟ್ ಯತಿರಾಟ್, ಯತಿರಾಟ್ ಏವ ಘನಾಘನಃ ಯತಿರಾಡ್ ಘನಾಘನಃ :

**ಕ್ರಿ:**—ಮುಮೋಚ ಮುಮುಚತುಃ ಮುಮುಚುಃ, ಮುಚ್ಲೃ ಮೋಕ್ಷಣೇ (1430) ಲಿಟ್.

**ಅವ:**—ಶ್ರೀಮಧ್ವಾಚಾರ್ಯರು ತನ್ನ ಗುರುಗಳಿಗೆ ದ್ವೈತಭಾಷ್ಯದ ಗುಣಗಳನ್ನು ತಿಳಿಸಿದರು—

**ಸಾನುನೀತಿರಥ ನೀತಿಮಾನಯಂ**
**ಭಾಷ್ಯಸದ್ಗುಣಗಣಾನವರ್ಣಯತ್ ।**
**ಶೋಭನಾಯ ಗುರವೇ ಸ್ವಭಾವತಃ**
**ಕಾಲತಃ ಕುಮತಲೀನಬುದ್ಧಯೇ** ॥೩೩॥

**ಅ:**—ಅಥ ನೀತಿಮಾನ್ ಅಯಂ ಸಾನುನೀತಿಃ (ಸನ್) ಸ್ವಭಾವತಃ ಶೋಭನಾಯ ಕಾಲತಃ ಕುಮತಲೀನಬುದ್ಧಯೇ ಗುರವೇ ಭಾಷ್ಯಸದ್ಗುಣ-ಗಣಾನ್ ಅವರ್ಣಯತ್.

**ಅರ್ಥ:**— ಅಥ = ಉಡುಪಿಗೆ ಬಂದನಂತರ, ನೀತಿಮಾನ್ = ಕಾಲೋಚಿತವಾದ ವ್ಯವಹಾರವನ್ನು ತಿಳಿದ, ಅಯಂ = ಈ ಮಧ್ವಾಚಾರ್ಯರು,

Rarest Archiver

ಸಾನುನೀತಿಃ ಸನ್ = ಮನಸ್ಸಿಗೆ ಸಮಾಧಾನವನ್ನು ಕೊಡುವ ಮೃದು ಮಾರ್ಗವನ್ನು ಅನುಸರಿಸಿದವರಾಗಿ, ಕಾಲತಃ = ಕಲಿಕಾಲದ ಬಲದಿಂದ, ಕುಮತಲೀನಬುದ್ಧಯೇ = ಕುತ್ಸಿತವಾದ ಮಾಯಾವಾದಿಮತದಲ್ಲಿ ಆಸಕ್ತವಾದ ಬುದ್ಧಿಯುಳ್ಳ, ಸ್ವಭಾವತಃ ಶೋಭನಾಯ = ಸ್ವರೂಪದಿಂದ ಒಳ್ಳೆಯವರಾದ (ಸಜ್ಜೀವರಾದ), (ಕಾಲತಃ = ಕಲಿಕಾಲದ ಸಾಮರ್ಥ್ಯದಿಂದ, ಕುಮತ = ಮಾಯಾವಾದದಿಂದ, ಲೀನ = ಅಡಗಿಹೋದ, ಬುದ್ಧಯೇ = ಒಳ್ಳೆಯ ಜ್ಞಾನವುಳ್ಳ), ಗುರವೇ = ಗುರುಗಳಾದ ಅಚ್ಯುತಪ್ರೇಕ್ಷರಿಗೆ, ಭಾಷ್ಯ = ಬ್ರಹ್ಮಸೂತ್ರಭಾಷ್ಯದಲ್ಲಿರುವ, ಸದ್ಗುಣ = ಶ್ರೇಷ್ಠವಾದ ಗುಣಗಳ, ಗಣಾನ್ = ಸಮೂಹಗಳನ್ನು, ಅವರ್ಣಯತ್ = ವರ್ಣಿಸಿದರು.

**ತಾ:**—ಅಚ್ಯುತಪ್ರೇಕ್ಷರು ಸ್ವರೂಪದಿಂದ ಮೋಕ್ಷಯೋಗ್ಯರಾದ ಸಾತ್ತ್ವಿಕಜೀವರು. ಆದರೂ ಕಲಿಕಾಲಪ್ರಭಾವದಿಂದ ಅವರ ಸದ್ಬುದ್ಧಿಯು ಆ ಕಾಲದಲ್ಲಿ ಪ್ರಚಾರದಲ್ಲಿದ್ದ ಮಾಯಾವಾದಸಿದ್ಧಾಂತದಿಂದ ಮಲಿನವಾಗಿತ್ತು. ಅವರ ಅಂತಃಕರಣವು ಮಾಯಾವಾದ ಸಿದ್ಧಾಂತದಲ್ಲಿ ದೃಢವಾಗಿ ನೆಲಸಿತ್ತು. ಹೀಗಿದ್ದರೂ ಶ್ರೀಮಧ್ವಾಚಾರ್ಯರು ಸಾಂತ್ವನವಾಕ್ಯಗಳಿಂದ ಅನೇಕವಿಧವಾದ ನ್ಯಾಯಪ್ರಕಾರಗಳನ್ನು ಬಳಸಿಕೊಂಡು ತಾವು ರಚಿಸಿದ ಶ್ರೀಮದ್‌ಬ್ರಹ್ಮಸೂತ್ರಭಾಷ್ಯದ ಉತ್ತಮವಾದ ಗುಣಗಳನ್ನು ಒಂದಾನೊಂದು ದಿನ ತಾನೇ ಸ್ವತಃ ಹೇಳಲಾರಂಭಿಸಿದರು.

**ವಿ:**—ಅನುನೀತ್ಯಾ ಸಹ ವರ್ತತೇ ಇತಿ ಸಾನುನೀತಿಃ, ನೀತಿಃ ಅಸ್ಯ ಅಸ್ತೀತಿ ನೀತಿಮಾನ್, ಸಂತಶ್ಚ ತೇ ಗುಣಾಶ್ಚ ಸದ್ಗುಣಾಃ, ಸದ್ಗುಣಾನಾಂ ಗಣಾಃ ಸದ್ಗುಣಗಣಾಃ ಭಾಷ್ಯಸ್ಯ ಸದ್ಗುಣಗಣಾಃ ಭಾಷ್ಯಸದ್ಗುಣಗಣಾಃ ತಾನ್ | ಕುತ್ಸಿತಂ ಚ ತತ್ ಮತಂ ಚ ಕುಮತಂ, ಕುಮತೇನ ಲೀನಾ ಬುದ್ಧಿಃ ಯಸ್ಯ ಸಃ ಕುಮತಲೀನಬುದ್ಧಿಃ ತಸ್ಮೈ.

**ಕ್ರಿಯಾ:** — ಅವರ್ಣಯತ್ ಅವರ್ಣಯತಾಂ ಅವರ್ಣಯನ್ ಇತ್ಯಾದಿ. ವರ್ಣ ವರ್ಣ ಕ್ರಿಯಾ ವಿಸ್ತಾರ ಗುಣವಚನೇಷು ಲಙ್.

**ಅವ:**—ಎಷ್ಟು ಬಾರಿ ತಿಳಿಸಿ ಹೇಳಿದರೂ ತನ್ನ ಗ್ರಂಥದಲ್ಲಿ ಗುರುಗಳಿಗೆ

Rarest Archiver

ಪ್ರೀತಿಯು ಉಂಟಾಗದಿರುವಾಗ ಆಚಾರ್ಯರು ಅದರ ಕಾರಣವನ್ನು ಕಂಡು ಹಿಡಿದರು-

ಉಕ್ತಿಭಿಸ್ತಮಸಕೃತ್ ಸುಯುಕ್ತಿಭಿ-
ರ್ಬೋಧಯನ್ ಬಹುಲಧೀಃ ಪ್ರಸಂಗತಃ |
ಸ್ಥೇಯಸೋ ಭಿಷಗಿವಾಸ್ಯ ಹೃದ್ಗತಂ
ಮೂಲದೋಷಮರುಚೇರಚಿಂತಯತ್ ||೩೪||

ಅ:— ಬಹುಲಧೀಃ ಪ್ರಸಂಗತಃ ಸುಯುಕ್ತಿಭಿಃ ಉಕ್ತಿಭಿಃ ತಂ ಅಸಕೃತ್ ಬೋಧಯನ್ ಅಸ್ಯ ಹೃದ್ಗತಂ ಅರುಚೇಃ ಮೂಲದೋಷಂ ಭಿಷಕ್ ಇವ ಅಚಿಂತಯತ್ |

**ಅರ್ಥ:**—ಬಹುಲಧೀಃ = ಶ್ರೀಪೂರ್ಣಪ್ರಜ್ಞರು, ಪ್ರಸಂಗತಃ = ಒಂದಾನೊಂದು ಸಂದರ್ಭದಲ್ಲಿ, ಸುಯುಕ್ತಿಭಿಃ = ಒಳ್ಳೆಯ ಯುಕ್ತಿಗಳುಳ್ಳ, ಉಕ್ತಿಭಿಃ = ಮಾತುಗಳಿಂದ, ತಂ = ಆ ಗುರುಗಳನ್ನು, ಅಸಕೃತ್ = ಅನೇಕ ಬಾರಿ, ಬೋಧಯನ್ = ತಿಳಿಸುತ್ತಾ, ಸ್ಥೇಯಸಃ = ಮಾಯಾವಾದಿ ಸಿದ್ಧಾಂತದಲ್ಲಿ ದೃಢಬುದ್ಧಿಯುಳ್ಳ, ಅಸ್ಯ = ಈ ಅಚ್ಯುತಪ್ರೇಕ್ಷರ, ಹೃದ್ಗತಂ = ಅಂತಃಕರಣದಲ್ಲಿ ನೆಲಸಿರುವ, ಅರುಚೇಃ = ಮಧ್ವಸಿದ್ಧಾಂತ ದಲ್ಲಿರುವ ಅಸ್ವಾರಸ್ಯದ (ನಾಲಿಗೆಯ ರುಚಿ ಇಲ್ಲದಿರುವಿಕೆಯು), ದೋಷಂ = ಕಾರಣವಾದ ದೋಷವನ್ನು, ಭಿಷಕ್ ಇವ = ವೈದ್ಯನಂತೆ, ಅಚಿಂತಯತ್ = ಆಲೋಚಿಸಿದರು.

**ತಾ:**—ಆಚಾರ್ಯರು ಹೀಗೆ ಅನೇಕಬಾರಿ ಯುಕ್ತಿಯುಕ್ತವಾದ ಶಾಸ್ತ್ರವಚನಗಳಿಂದ ತನ್ನ ಸಿದ್ಧಾಂತವನ್ನು ಗುರುಗಳಿಗೆ ಬೋಧಿಸಿದರು. ಆದರೂ ಅಚ್ಯುತಪ್ರೇಕ್ಷರ ಮನಸ್ಸು ಬದಲಾಗಲಿಲ್ಲ. ಅವರ ಅಂತಃಕರಣವು ಮಾಯಾವಾದಿ ಮತದಲ್ಲಿಯೇ ಸ್ಥಿರವಾಗಿ ನೆಟ್ಟಿತ್ತು. ಅವರು ಆಚಾರ್ಯರ ಸಿದ್ಧಾಂತದಲ್ಲಿ ಅಸ್ವಾರಸ್ಯವನ್ನೇ ಪ್ರಕಟಿಸುತ್ತಿದ್ದರು. ರೋಗಿಯೊಬ್ಬನು ಬಂದು ತನಗೆ ನಾಲಿಗೆರುಚಿಯಿಲ್ಲ ಎಂದು ಹೇಳಿದಾಗ ವೈದ್ಯನು ಉತ್ತಮ ವಾದ ಔಷಧವನ್ನು ಕೊಟ್ಟರೂ ಆ ಅರುಚಿರೋಗವು ಹೋಗಲಿಲ್ಲವೆಂದು ರೋಗಿಯು ಹೇಳಿದರೆ ವೈದ್ಯನು ಚೆನ್ನಾಗಿ ಆಲೋಚಿಸಿ ಆ ಅರುಚಿರೋಗಕ್ಕೆ

Rarest Archiver

ಮೂಲಕಾರಣವನ್ನು ಕಂಡುಹಿಡಿಯುತ್ತಾನೆ. ಆದರಂತೆ ಆಚಾರ್ಯರು ಇಷ್ಟೊಂದು ಯುಕ್ತಿಯುಕ್ತವಾದ ಈ ಸಿದ್ಧಾಂತದಲ್ಲಿ ನನ್ನ ಗುರುಗಳಿಗೆ ಅರುಚಿ ಉಂಟಾಗಲು ಮೂಲಕಾರಣವೇನೆಂದು ಆಲೋಚಿಸಿ ಅದನ್ನು ಕಂಡುಹಿಡಿದರು.

ವಿ:—ನ ಸಕೃತ್ ಅಸಕೃತ್, ಸು ಶೋಭನಾಃ ಯುಕ್ತಯಃ ಯಾಸು ತಾಃ ಸುಯುಕ್ತಯಃ ತಾಭಿಃ, ಬಹುಲಾ ಧೀಃ ಯಸ್ಯ ಸಃ ಬಹುಲಧೀಃ, ಅತಿಶಯೇನ ಸ್ಥಿರಃ ಸ್ಥೇಯಾನ್ ತಸ್ಯ, ಹೃದಂ ಗತಃ ಹೃದ್ಗತಃ, ಮೂಲಂ ಚಾಸೌ ದೋಷಶ್ಚ ಮೂಲದೋಷಃ ತಂ, ರುಚೇಃ ಅಭಾವಃ ಅರುಚಿಃ ತಸ್ಯಾಃ.

ಕ್ರಿ :—ಅಚಿಂತಯತ್ ಅಚಿಂತಯತಾಂ ಅಚಿಂತಯನ್ ಇತ್ಯಾದಿ. ಚಿತಿ ಸ್ಮೃತ್ಯಾಂ ಲಙ್.

ಅವ :—ಆಚಾರ್ಯರು ಅರುಚಿಗೆ ಕಾರಣವಾದ ದೋಷವನ್ನು ಕಂಡುಹಿಡಿದು ಅದನ್ನು ಪರಿಹರಿಸಿದರು.

**ದಕ್ಷಪಕ್ಷವಿಹೃತೇನ ತಾಡಯನ್**
**ಭೀಷಯನ್ ಸಮಧಿಕಸ್ವರಶ್ರಿಯಾ ।**
**ಹಂಸರಾಟ್‌ಕಲಿಮಲಂ ನಿರಾಕರೋ**
**ದೇಕದೃಷ್ಟಿಮಿವ ಮಾನಸಾದ್ ಗುರೋಃ ॥೩೫॥**

ಅ :—ಹಂಸರಾಟ್ ದಕ್ಷಪಕ್ಷವಿಹೃತೇನ ತಾಡಯನ್ ಸಮಧಿಕ ಸ್ವರಶ್ರಿಯಾ ಭೀಷಯನ್ ಗುರೋಃ ಮಾನಸಾತ್ ಕಲಿಮಲಂ, ಹಂಸರಾಟ್ ದಕ್ಷಪಕ್ಷವಿಹೃತೇನ ತಾಡಯನ್ ಸಮಧಿಕಸ್ವರಶ್ರಿಯಾ ಭೀಷಯನ್ ಗುರೋಃ ಮಾನಸಾತ್ ಏಕದೃಷ್ಟಿಮಿವ ನಿರಾಕರೋತ್.

ತಾ:–ಹಂಸರಾಟ್ = ಪರಮಹಂಸಶ್ರೇಷ್ಠರಾದ ಶ್ರೀಮಧ್ವಾಚಾರ್ಯರು, ದಕ್ಷ = ದೃಢವಾದ (ಮಂಗಳಕರವಾದ), ಪಕ್ಷ= ಸಿದ್ಧಾಂತದ, ವಿಹೃತೇನ ಯುಕ್ತಿಕಥನವೆಂಬ ಲೀಲೆಯಿಂದ, ತಾಡಯನ್ = ಅಚ್ಯುತಪ್ರೇಕ್ಷರ ಮಾತುಗಳನ್ನು ಖಂಡಿಸುತ್ತಾ, ಸಮಧಿಕ= ಬಹಳ ಹೆಚ್ಚಾದ, ಸ್ವರ-

Rarest Archiver

ಶ್ರಿಯಾ = ಕಂಠಧ್ವನಿಯ ಸಂಪತ್ತಿನಿಂದ, ಭೀಷಯನ್ = (ಅವರ ಪಕ್ಷದಲ್ಲಿ ಬಾಧಕಗಳನ್ನು ತೋರಿಸುವ ಮೂಲಕ) ಹೆದರಿಸುತ್ತಾ, ಗುರೋಃ = ಗುರುಗಳಾದ ಅಚ್ಯುತಪ್ರೇಕ್ಷರ, ಮಾನಸಾತ್ = ಮನಸ್ಸಿನ ದೆಸೆಯಿಂದ, ಕಲಿಮಲಂ = ಕಲ್ಯಾವೇಶದಿಂದ ಉಂಟಾಗಿರುವ ಬುದ್ಧಿದೋಷವನ್ನು, ಹಂಸರಾಟ್ = ಶ್ರೇಷ್ಠವಾದ ಹಂಸಪಕ್ಷಿಯು, ದಕ್ಷ = ಸಮರ್ಥವಾದ, ಪಕ್ಷ = ಎರಡು ರೆಕ್ಕೆಗಳ, ವಿಹೃತೇನ = ಅನಾಯಾಸವಾದ ಹೊಡೆತದಿಂದ, ಸಮಧಿಕ = ಗಟ್ಟಿಯಾದ, ಸ್ವರಶ್ರಿಯಾ = ಕಂಠಧ್ವನಿಸಂಪತ್ತಿನಿಂದ, ಭೀಷಯನ್ = ಹೆದರಿಸುತ್ತಾ, ಗುರೋಃ ಮಾನಸಾತ್ = ಮಹತ್ತಾದ ಮಾನಸ ಸರೋವರದ ದೆಸೆಯಿಂದ, ಏಕದೃಷ್ಟಿಂ ಇವ = ಕಾಗೆಯನ್ನೋಪಾದಿಯಲ್ಲಿ, ನಿರಾಕರೋತ್ = ನಿರಾಕರಿಸಿದರು. (ದೂರಮಾಡಿದರು.)

ತಾ:—ಮಾನಸಸರೋವರದಲ್ಲಿ ಶ್ರೇಷ್ಠವಾದ ಹಂಸಗಳು ಮಾತ್ರ ವಾಸಿಸುತ್ತವೆ. ಆದರೆ ಯಾವುದೋ ಒಂದು ಧೈರ್ಯಶಾಲಿಯಾದ ಕಾಗೆಯು ಮಾನಸಸರೋವರವನ್ನು ಪ್ರವೇಶಿಸಿ ಇದು ನನ್ನ ಸ್ಥಳವೆಂದು ಅಹಂಕಾರ ಪಡುತ್ತಾ ಸಾಮಾನ್ಯಪಕ್ಷಿಗಳನ್ನೂ ಸಾಧಾರಣ ಹಂಸಗಳನ್ನೂ ಬೆದರಿಸುತ್ತಾ ಅಲ್ಲಿ ವಾಸಿಸುತ್ತಿತ್ತು. ಆ ಸರೋವರದ ಶಾಶ್ವತನಿವಾಸಿಯಾದ ರಾಜಹಂಸ ರಾಜನು ಅಲ್ಲಿಗೆ ಬಂದು ತನ್ನ ಶತ್ರುವಾದ ಕಾಗೆಯನ್ನು ನೋಡಿ ತಡ ಮಾಡದೆ ತನ್ನ ಬಲವಾದ ರೆಕ್ಕೆಗಳಿಂದ ಆ ಕಾಗೆಯನ್ನು ಹೊಡೆಯ ಲಾರಂಭಿಸಿತು. ಈ ಸ್ಥಳವನ್ನು ಬಿಟ್ಟು ಹೋಗು ಎಂದು ಸೂಚಿಸುತ್ತಾ ಭಯಂಕರ ಧ್ವನಿಯಿಂದ ಕೂಗಿತು. ಅಷ್ಟೊಂದು ವಿಶಾಲವಾದ ಮಾನಸ ಸರೋವರದಲ್ಲಿಯೂ ನನಗೆ ಸ್ಥಳವಿಲ್ಲವೆಂದು ತಿಳಿದು ಬೇರೆ ಉಪಾಯವನ್ನು ಕಾಣದೆ ಒಕ್ಕಣ್ಣಿನ ಆ ನೀಚಕಾಗೆಯು ಆ ಸರೋವರವನ್ನು ಬಿಟ್ಟು ಹೋಯಿತು. ಅದರಂತೆ ಪರಮಹಂಸಶ್ರೇಷ್ಠರಾದ ಶ್ರೀಮಧ್ವಾಚಾರ್ಯರು ಪ್ರಬಲವಾದ ಮತ್ತು ಮಂಗಳಕರವಾದ ತಮ್ಮ ಸಿದ್ಧಾಂತದ ಯುಕ್ತಿಗಳನ್ನು ಸ್ವಾರಸ್ಯವಾಗಿ ವಿವರಿಸಿ ಅಚ್ಯುತಪ್ರೇಕ್ಷರ ಪೂರ್ವಪಕ್ಷವನ್ನು ಪೂರ್ತಿಯಾಗಿ ಖಂಡಿಸಿದರು. ತಾವು ಹೀಗೆ ಸಿದ್ಧಾಂತದ ಸ್ವಾರಸ್ಯವನ್ನು ವರ್ಣಿಸುವಾಗ ಅಚ್ಯುತಪ್ರೇಕ್ಷರ ಧ್ವನಿಗಿಂತಲೂ, ಎತ್ತರವಾದ ಮಧುರ ಗಂಭೀರಕಂಠ

Rarest Archiver

ಧ್ವನಿಯಿಂದ ತಾನು ಹೇಳಿದ್ದಕ್ಕೆ ವಿರುದ್ಧವಾಗಿ ಹೇಳಿದರೆ ಬರುವ ಬಾಧಕಗಳನ್ನು ತಿಳಿಯ ಹೇಳಿದರು. ತನ್ನ ಸಿದ್ಧಾಂತವನ್ನು ಅನುಸರಿಸದೆ ಇದ್ದರೆ ಬರುವ ನರಕಾದ್ಯನರ್ಥಗಳನ್ನು ವಿವರಿಸಿದರು. ತಮ್ಮ ಸಿದ್ಧಾಂತದ ಪ್ರಗಾಢದೃಢತೆಗೆ ದ್ಯೋತಕವಾದ ಅವರ ಉಚ್ಚಧ್ವನಿಯು ಸಂಶಯ ಸ್ವಭಾವದ ಪುಕ್ಕಲು ಮನಸ್ಸಿನ ಪೂರ್ವಪಕ್ಷಿಗೆ ಭಯವನ್ನುಂಟು ಮಾಡುತ್ತಿತ್ತು. ಹೀಗೆ ಮಾಡಿದಾಗ ಗುರುಗಳ ಮಾನಸದಲ್ಲಿ ನೆಲಸಿದ್ದ ಕಲಿಯ ಆವೇಶವು ಐಕ್ಯದೃಷ್ಟಿಯು (ಜೀವೇಶ್ವರಾಭೇದದೃಷ್ಟಿಯು) ಏಕದೃಷ್ಟಿಯಾದ (ಒಕ್ಕಣ್ಣ) ಕಾಗೆಯಂತೆ ದೂರಕ್ಕೆ ಓಡಿಹೋಯಿತು (ವಾಯುದೇವರ ಹುಂಕಾರದಿಂದ ಕಲಿಯು ಓಡಿಹೋಗುತ್ತಾನೆ ಎಂದು ಪ್ರಸಿದ್ಧಿ ಇದೆ. ಆಚಾರ್ಯರ ಉಚ್ಚಕಂಠಧ್ವನಿಯಿಂದ ಹೆದರಿದ ಕಲಿಯು ಅಚ್ಯುತಪ್ರೇಕ್ಷರ ಮನಸ್ಸನ್ನು ಬಿಟ್ಟು ಓಡಿಹೋದನು. ಆಚಾರ್ಯರು ಕಲಿಯನ್ನು ಹೆದರಿಸಿದ್ದಾರೆಯೇ ಹೊರತು ಅಚ್ಯುತಪ್ರೇಕ್ಷರನ್ನಲ್ಲವೆಂದು ತಿಳಿಯಬೇಕು.)

ವಿ:—ದಕ್ಷಶ್ಚಾಸೌ ಪಕ್ಷಶ್ಚ ದಕ್ಷಪಕ್ಷಃ ದಕ್ಷಪಕ್ಷಸ್ಯ ವಿಹೃತಂ ದಕ್ಷಪಕ್ಷವಿಹೃತಂ ತೇನ, ದಕ್ಷೌ ಚ ತೌ ಪಕ್ಷೌ ಚ ದಕ್ಷಪಕ್ಷೌ, ದಕ್ಷಪಕ್ಷಯೋಃ ವಿಹೃತಂ ದಕ್ಷಪಕ್ಷವಿಹೃತಂ ತೇನ, ಸಮ್ಯಕ್ ಅಧಿಕಃ ಸಮಧಿಕಃ, ಸಮಧಿಕಶ್ಚಾಸೌ ಸ್ವರಶ್ಚ ಸಮಧಿಕಸ್ವರಃ ತಸ್ಯ ಶ್ರೀಃ ತಯಾ, ಹಂಸಾನಾಂ ರಾಟ್ ಹಂಸರಾಟ್, ಕಲೇಃ ಮಲಂ ಕಲಿಮಲಂ ತತ್, ಏಕಾ ದೃಷ್ಟಿಃ ಯಸ್ಯ ಸಃ ಏಕದೃಷ್ಟಿಃ ತಂ, ಏಕಾ ಚಾಸೌ ದೃಷ್ಟಿಶ್ಚ.

ಭಾವಪ್ರಕಾಶಿಕಾ—ಏಕದೃಷ್ಟಿಮಿವ ಕಾಕಮಿವ, ರೂಪಿಣಂ ಐಕ್ಯಜ್ಞಾನಮಿವ ಚ, ಏಕದೃಷ್ಟಿಮಿವ ಎಂದರೆ ಕಾಗೆಯನ್ನೋ ಎಂಬಂತೆ, ಎಂದು ಅರ್ಥ, ಏಕಮಿತಿದೃಷ್ಟಿಃ ಏಕದೃಷ್ಟಿಃ, ಮೂರ್ತಿಮತ್ತಾದ ಐಕ್ಯಜ್ಞಾನದಂತಿರುವ ಎಂದು ಅರ್ಥ. ಮಾನಸಾತ್ ಮನಸಃ ಸರಃಶ್ರೇಷ್ಠಾಚ್ಚ, ಮಾನಸವೆಂದರೆ ಮನಸ್ಸು ಮತ್ತು ಶ್ರೇಷ್ಠವಾದ ಮಾನಸಸರೋವರ ಎಂದು ಎರಡು ಅರ್ಥಗಳು.

ಕ್ರಿ:—ನಿರ್ + ಆ + ಅಕರೋತ್ ಅಕುರುತಾಂ ಅಕುರ್ವನ್ ಅಕರೋಃ ಅಕುರುತಂ ಅಕುರುತ, ಅಕರವಂ ಅಕುರ್ವ ಅಕುರ್ಮ ಡುಕೃಞ್ (ಕೃ) ಕರಣೇ ಲಙ್.

Rarest Archiver

ಅವ :—ಮುಂದೆ ಅಚ್ಯುತಪ್ರೇಕ್ಷರ ಮನಸ್ಸು ಹೇಗೆ ಶೋಭಿಸಿತು?

**ನಿಷ್ಕಲಂಕಮಿವ ಚಂದ್ರಮಂಡಲಂ**
**ಪುಂಡರೀಕಮಿವ ಫುಲ್ಲತಾಂ ಗತಂ ।**
**ವಾರಿ ಶಾರದಮಿವ ಪ್ರಸಾದವ-**
**ಚ್ಚಿತ್ತಮಚ್ಯುತಮತೇರ್ಭೃಶಂ ಬಭೌ ॥೩೬॥**

ಅ—ಅಚ್ಯುತಮತೇಃ ಚಿತ್ತಂ, ನಿಷ್ಕಲಂಕಂ ಚಂದ್ರಮಂಡಲಂ ಇವ, ಫುಲ್ಲತಾಂ ಗತಂ ಪುಂಡರೀಕಂ ಇವ ಪ್ರಸಾದವತ್ ಶಾರದಂ ವಾರಿ ಇವ ಭೃಶಂ ಬಭೌ.

ಅರ್ಥ :—ಅಚ್ಯುತಮತೇಃ = ಶ್ರೀಅಚ್ಯುತಪ್ರೇಕ್ಷಾಚಾರ್ಯರ, ಚಿತ್ತಂ = ಅಂತಃಕರಣವು, ನಿಷ್ಕಲಂಕಂ ಚಂದ್ರಮಂಡಲಂ ಇವ = ಕಳಂಕವಿಲ್ಲದ ಚಂದ್ರಮಂಡಲದಂತೆಯೂ, ಫುಲ್ಲತಾಂ ಗತಂ = ಅರಳಿದ, ಪುಂಡರೀಕಂ ಇವ = ಬಿಳಿಯ ತಾವರೆಹೂವಿನಂತೆಯೂ, ಪ್ರಸಾದವತ್ = ನಿರ್ಮಲತೆಯುಳ್ಳ, ಶಾರದಂ ವಾರಿ ಇವ = ಶರತ್ಕಾಲದ ನೀರಿನಂತೆಯೂ, ಭೃಶಂ = ಚೆನ್ನಾಗಿ, ಬಭೌ = ಶೋಭಿಸಿತು.

ತಾ :—ಶ್ರೀಮಧ್ವಾಚಾರ್ಯರು ಕಾಲಬಲದಿಂದ ಉಂಟಾದ ತನ್ನ ಗುರುಗಳ ಔಪಾಧಿಕವಾದ ಬುದ್ಧಿದೋಷವನ್ನು ಹೋಗಲಾಡಿಸಿದರು. ಅನಂತರ ಅಚ್ಯುತಪ್ರೇಕ್ಷರ ಅಂತಃಕರಣವು ಕಳಂಕವಿಲ್ಲದ ಚಂದ್ರಮಂಡಲದಂತೆಯೂ, ಅರಳಿದ ಬಿಳಿಯ ತಾವರೆ ಹೂವಿನಂತೆಯೂ. ಶರತ್ಕಾಲದ ಸ್ವಚ್ಛವಾದ ನೀರಿನಂತೆಯೂ ಚೆನ್ನಾಗಿ ಶೋಭಿಸಿತು. ಅಚ್ಯುತಪ್ರೇಕ್ಷರು ಶುದ್ಧಾಂತಃಕರಣರಾದರು.

ವಿ:—ನಿರ್ಗತಃ ಕಲಂಕಃ ಯಸ್ಮಾತ್ ತತ್ ನಿಷ್ಕಲಂಕಂ, ಚಂದ್ರಸ್ಯ ಮಂಡಲಂ ಚಂದ್ರಮಂಡಲಂ, ಶರದಃ ಇದಂ ಶಾರದಂ, ಪ್ರಸಾದಃ ಅಸ್ಯ ಅಸ್ತೀತಿ ಪ್ರಸಾದವತ್, ಅಚ್ಯುತೇ ಮತಿಃ ಯಸ್ಯ ಸಃ ಅಚ್ಯುತಮತಿಃ ತಸ್ಯ

ಕ್ರಿ :—ಬಭೌ ಬಭತುಃ ಬಭುಃ ಇತ್ಯಾದಿ, ಭಾ ದೀಪ್ತೌ ಲಿಟ್.

Rarest Archiver

**ಅವ:**—ಅನಂತರ ಅಚ್ಯುತಪ್ರೇಕ್ಷಾಚಾರ್ಯರಿಗೆ ಆದ ಆನಂದವು ಹೀಗಿತ್ತು—

**ಆನನಂದ ಸ ಹಿ ಮಧ್ವಶಾಸ್ತ್ರಮಾ-**
**ಕರ್ಣಯನ್ ಕುಸಮಯಾಗ್ರಹೀ ಪುರಾ।**
**ಮೋಹಪೀತಲವಣೋದಕೋ ಮುಹುಃ**
**ಪ್ರಾಕ್ ಪಿಪಾಸುರಮೃತಂ ಪಿಬನ್ನಿವ ॥೩೭॥**

**ಅ:**—ಪುರಾ ಕುಸಮಯಾಗ್ರಹೀ ಮಧ್ವಶಾಸ್ತ್ರಮಾಕರ್ಣಯನ್ ಸಃ ಪ್ರಾಕ್ ಮೋಹಪೀತಲವಣೋದಕಃ ಅಮೃತಂ ಪಿಬನ್ ಪಿಪಾಸುಃ ಇವ ಮುಹುಃ ಆನನಂದ ಹಿ.

**ಅರ್ಥ:**—ಪುರಾ = ಮೊದಲು, ಕುಸಮಯಾಗ್ರಹೀ = ದುಷ್ಟವಾದ ಮಾಯಾವಾದಸಿದ್ಧಾಂತದಲ್ಲಿ ಹಠವನ್ನು ಹೊಂದಿದ್ದ, (ಇದಾನೀಂ = ಈಗ) ಮಧ್ವಶಾಸ್ತ್ರಂ ಆಕರ್ಣಯನ್ = ಮಧ್ವಸಿದ್ಧಾಂತವನ್ನು ಕೇಳುತ್ತಿರುವ, ಸಃ = ಆ ಅಚ್ಯುತಪ್ರೇಕ್ಷರು, ಪ್ರಾಕ್ = ಮೊದಲು, ಮೋಹಪೀತಲವಣೋದಕಃ = (ಸಿಹಿನೀರೆಂಬ) ಭ್ರಾಂತಿಯಿಂದ ಕುಡಿಯಲ್ಪಟ್ಟ ಉಪ್ಪುನೀರುಳ್ಳ, (ಇದಾನೀಂ = ಈಗ) ಅಮೃತಂ = ಅಮೃತವನ್ನು (ಸಿಹಿನೀರನ್ನು) ಪಿಬನ್ = ಕುಡಿಯುತ್ತಿರುವ, ಪಿಪಾಸುಃ ಇವ = ಬಾಯಾರಿದವನಂತೆ, ಮುಹುಃ = ಮತ್ತೂ ಮತ್ತೂ, ಆನನಂದ ಹಿ = ಸಂತೋಷಪಟ್ಟರಷ್ಟೆ !

**ತಾ:**—ಬಾಯಾರಿದ ಒಬ್ಬ ಮನುಷ್ಯನು ಮೊದಲು ಉಪ್ಪುನೀರೆಂದು ತಿಳಿಯದೆ ಅದನ್ನು ಕುಡಿದು, ಅದೇ ಚೆನ್ನಾಗಿದೆ, ನೀರು ಇರುವುದೇ ಹೀಗೆಂದು ನಿಶ್ಚಯಿಸಿದ್ದನು. ಅನಂತರ ಒಂದು ದಿನ ಸಿಹಿಯಾದ ನೀರನ್ನು ಕುಡಿದಾಗ, ತಾನು ಹಿಂದೆ ಕುಡಿದುದು ಉಪ್ಪುನೀರು. ಅದು ಕುಡಿಯಲು ಯೋಗ್ಯವಲ್ಲ. ಅನಾರೋಗ್ಯಕರವು, ಎಂದೂ ತಿಳಿದನು. ಅದರಂತೆ ಶ್ರೀಅಚ್ಯುತ ಪ್ರೇಕ್ಷಾಚಾರ್ಯರು ತತ್ತ್ವವನ್ನು ತಿಳಿಯುವ ಸಲುವಾಗಿ ಮೊದಲು ಆಗ ತನಗೆ ಲಭ್ಯವಾದ ಮಾಯಾವಾದಸಿದ್ಧಾಂತವನ್ನೇ ಅಧ್ಯಯನ ಮಾಡಿದ್ದರು.

Rarest Archiver

ಆಗ ಅವರಿಗೆ ಬೇರೊಂದು ಸಿದ್ಧಾಂತದ ಅರಿವೇ ಇಲ್ಲದ್ದರಿಂದ ಇದೇ ಸತ್-ಸಿದ್ಧಾಂತವೆಂಬ ಆಗ್ರಹವೂ ಉಂಟಾಯಿತು. ಈಗ ಪುಣ್ಯಪರಿಪಾಕದಿಂದ ಶ್ರೀಮಧ್ವರಂತಹ ಜಗದ್ಗುರುಗಳಾದ ಶಿಷ್ಯೋತ್ತಮರು ದೊರೆತು ಅವರಿಂದ ಶಾಸ್ತ್ರಶ್ರವಣಮಾಡುವ ಭಾಗ್ಯ ಒದಗಿತು. ಸಕಲಮಿಥ್ಯಾಜ್ಞಾನನಿವರ್ತಕವಾದ, ಅಂತಃಕರಣಪ್ರಸಾದವನ್ನುಂಟುಮಾಡಿ ಪರಮಾತ್ಮನ ದರ್ಶನವನ್ನು ಉಂಟುಮಾಡುವ ಈ ಸಿದ್ಧಾಂತದ ಅರಿವಾದ ಮೇಲೆ ಈ ಶಾಸ್ತ್ರಕ್ಕೆ ಸಮಾನವಾದ ಶಾಸ್ತ್ರವು ಮತ್ತಾವುದೂ ಇಲ್ಲವೆಂಬ ಪರಿಜ್ಞಾನವುಂಟಾಗಿ ಅವರಿಗೆ ತುಂಬಾ ಆನಂದವಾಯಿತು. ಅನಂತರ ಅವರು ಮಧ್ವಶಾಸ್ತ್ರಶ್ರವಣ ಮತ್ತು ಮನನಗಳನ್ನು ಮಾಡುತ್ತಾ ಆನಂದಿಸಿದರು ಎಂದು ಭಾವ.

**ವಿ:**—ಮಧ್ವಸ್ಯ ಶಾಸ್ತ್ರಂ ಮಧ್ವಶಾಸ್ತ್ರಂ, ಕುತ್ಸಿತಶ್ಚಾಸೌ ಸಮಯಶ್ಚ ಕುಸಮಯಃ ಆಗ್ರಹಃಅಸ್ಯ ಅಸ್ತೀತಿ ಆಗ್ರಹೀ, ಕುಸಮಯೇ ಆಗ್ರಹೀ ಕುಸಮಯಾಗ್ರಹೀ, ಲವಣಂ ಚ ತತ್ ಉದಕಂ ಚ ಲವಣೋದಕಂ, ಮೋಹೇನ ಪೀತಂ ಮೋಹಪೀತಂ, ಮೋಹಪೀತಂ ಲವಣೋದಕಂ ಯೇನ ಸಃ ಮೋಹಪೀತಲವಣೋದಕಃ, ಪಾತುಂ ಇಚ್ಛುಃ ಪಿಪಾಸುಃ ;

**ಕ್ರಿ:**—ಆ+ನನಂದ, ನನಂದತುಃ ನನಂದುಃ ಇತ್ಯಾದಿ. ಟುನದಿ (ನಂದ್) ಸಮೃದ್ಧೌ ಲಿಟ್.

**ಅವ:**—ಅನಂತರ ಅಚ್ಯುತಪ್ರೇಕ್ಷರು ಮತ್ತು ಜ್ಯೇಷ್ಠಯತಿಗಳೂ ಕೂಡ ಶ್ರೀಮಧ್ವಶಾಸ್ತ್ರವನ್ನು ಆದರದಿಂದ ಇತರರಿಗೆ ಉಪದೇಶಮಾಡಲಾರಂಭಿಸಿದರು—

**ವಿಸ್ತೃತಾಂತರವಿಯತ್ಪದೌ ಯತೀ**
**ಆಸ್ಯತಾಂ ಸುಸಮಯಪ್ರಕಾಶನಾತ್ ।**
**ತೌ ಯಥಾ ವಿಧುರವೀ ಅಹೋ ಅಹೋ ।**
**ರಾತ್ರಮಪ್ಯುರುತಮೋ ನೃಮೋಹಕಂ** ॥೩೮॥

ಅ:—ವಿಸ್ತೃತಾಂತರವಿಯತ್ಪದೌ ತೌ ಯತೀ ಅಹೋರಾತ್ರಂ ಅಪಿ ಸುಸಮಯಪ್ರಕಾಶನಾತ್ ನೃಮೋಹಕಂ ಉರುತಮಃ ವಿಧುರವೀ ಯಥಾ ಆಸ್ಯತಾಂ ಅಹೋ !

Rarest Archiver

**ಅರ್ಥ :**—ವಿಸ್ತೃತಾಂತರ= ವಿಸ್ತಾರವಾದ ಜ್ಞಾನವುಳ್ಳ ಶ್ರೀಪೂರ್ಣ ಪ್ರಜ್ಞರೆಂಬ, ವಿಯತ್ಪದೌ = ಆಕಾಶವೇ ಆಶ್ರಯವಾಗಿ ಉಳ್ಳ, ತೌ ಯತೀ = ಆ ಇಬ್ಬರು ಯತಿಗಳೂ (ಅಚ್ಯುತಪ್ರೇಕ್ಷರು ಮತ್ತು ಜ್ಯೇಷ್ಠಯತಿಗಳು) ಅಹೋರಾತ್ರಂ ಅಪಿ= ಹಗಲು ರಾತ್ರಿಗಳಲ್ಲಿಯೂ, ಸುಸಮಯ = ಒಳ್ಳೆಯ ಸಿದ್ಧಾಂತದ (ಒಳ್ಳೆಯ ಕಾಲದ), ಪ್ರಕಾಶನಾತ್ = ಪ್ರಕಟನದಿಂದ, ನೃಮೋಹಕಂ= ಜೀವರಿಗೆ ಭ್ರಾಂತಿಯನ್ನುಂಟುಮಾಡುವ, ಉರುತಮಃ = ಅಧಿಕವಾದ ಅಜ್ಞಾನವನ್ನು (ಗಾಢವಾದ ಕತ್ತಲೆಯನ್ನು), ವಿಧುರವೀ ಯಥಾ= ಚಂದ್ರಸೂರ್ಯರಂತೆ, ಅಸ್ಯತಾಂ= ನಿವಾರಿಸಿದರು. ಅಹೋ= ಆಶ್ಚರ್ಯವು.

ತಾ :—ಚಂದ್ರಸೂರ್ಯರು ಒಳ್ಳೆಯ ಶರದೃತುವಿನ ಸಮಯದಲ್ಲಿ ಕ್ರಮವಾಗಿ ರಾತ್ರಿ ಮತ್ತು ಹಗಲುಗಳಲ್ಲಿ ಉದಯಿಸಿ, ಪ್ರಕಾಶಿಸಿ, ವಸ್ತು ಗಳನ್ನು ಕಾಣದಂತೆ ಮಾಡುವ ಗಾಢವಾದ ಕತ್ತಲೆಯನ್ನು ನಿವಾರಿಸು ತ್ತಾರೆ. ಎಲ್ಲರನ್ನೂ ಆನಂದಪಡಿಸುತ್ತಾರೆ. ಅದರಂತೆ ಶ್ರೀಮಧ್ವರು ಹೇಳಿದ ದಾರಿಯಲ್ಲಿ ನಡೆಯುತ್ತಾ, ಅವರನ್ನೇ ಆಶ್ರಯಿಸಿ ಮೊದಲೇ ಆಚಾರ್ಯರ ಸಿದ್ಧಾಂತದಲ್ಲಿ ಅತಿಶಯವಾದ ಪ್ರೀತಿಯಿಂದ ಅದನ್ನೇ ಅನುಸರಿಸಿದ್ದ ಜ್ಯೇಷ್ಠಯತಿಗಳೂ, ಈಗ ಆಚಾರ್ಯರ ಸಿದ್ಧಾಂತದಲ್ಲಿ ಶ್ರದ್ಧೆಯನ್ನು ಹೊಂದಿದ ಅಚ್ಯುತಪ್ರೇಕ್ಷರೂ ಇವರಿಬ್ಬರೂ ಹಗಲು ರಾತ್ರಿ ನಿರಂತರ ಶ್ರೀಮಧ್ವಶಾಸ್ತ್ರವನ್ನು ಪ್ರವಚನಮಾಡುತ್ತಾ ಇದ್ದರು. ಇದರಿಂದ ಇತರ ಅನೇಕಜೀವರ ಅಜ್ಞಾನವೂ ನೀಗಿತು. ಅವರೂ ತಮ್ಮ ಅಜ್ಞಾನವನ್ನು ಕಳೆದುಕೊಂಡರು. ಇಂತಹ ಶ್ರೀಮಧ್ವಭಾಷ್ಯದ ಮಹಿಮೆಯು ಆಶ್ಚರ್ಯಕರವಾಗಿದೆ. ಈ ಲಿಕುಚಕುಲೋತ್ಪನ್ನರಾದ ಜ್ಯೇಷ್ಠಯತಿಗಳೂ ಅಚ್ಯುತಪ್ರೇಕ್ಷರೂ ಇಬ್ಬರೂ ಭಾಗ್ಯಶಾಲಿಗಳು.

ವಿ:—ವಿಸ್ತೃತಂ ಅಂತರಂ ಯಸ್ಯ ಸಃ ವಿಸ್ತೃತಾಂತರಃ, ವಿಸ್ತೃತಾಂತರ ಏವ ವಿಯತ್ ವಿಸ್ತೃತಾಂತರವಿಯತ್, ವಿಸ್ತೃತಾಂತರ ವಿಯತ್ ಏವ ಪದಂ ಯಯೋಃ ತೌ ವಿಸ್ತೃತಾಂತರವಿಯತ್ಪದೌ, ಶೋಭನಶ್ಚಾಸೌ ಸಮಯಶ್ಚ ಸುಸಮಯಃ, ಸುಸಮಯಸ್ಯ ಪ್ರಕಾಶನಂ

Rarest Archiver

ಸುಸಮಯಪ್ರಕಾಶನಂ, ತಸ್ಮಾತ್, ವಿಧುಶ್ಚ ರವಿಶ್ಚ ವಿಧುರವೀ, ಅಹಶ್ಚ ರಾತ್ರಿಶ್ಚ ಅಹೋರಾತ್ರಃ ತಂ, ಉರು ಚ ತತ್ ತಮಶ್ಚ ಉರುತಮಃ ತತ್, ಮೋಹಯತೀತಿ ಮೋಹಕಂ. ನೃಣಾಂ ಮೋಹಕಂ ನೃಮೋಹಕಂ,

ಕ್ರಿ :—ಆಸ್ಯತ್ ಆಸ್ಯತಾಂ ಆಸ್ಯನ್; ಅಸು ನಿರಸನೇ (ಕ್ಷೇಪಣೇ) ಲಙ್.

**ವಿಶೇಷಾಂಶ:**— ಸಮಯ = ಕಾಲ-ಸಿದ್ಧಾಂತ; ಸಮಯಾಃ ಶಪಥಾ, ಚಾರಕಾಲಸಿದ್ಧಾಂತ ಸಂವಿದ:— **ಅಮರ.** ಯತೀ ಆಸ್ಯತಾಂ, ವಿಧುರವೀ ಅಹೋ ಎಂಬಲ್ಲಿ **ಈದೂದೇದ್ದ್ವಿವಚನಂ ಪ್ರಗೃಹ್ಯಂ** ಎಂಬ ಸೂತ್ರ ದಿಂದ ಪ್ರಗೃಹ್ಯಸಂಜ್ಞೆಯು ಬಂದಿದೆ. ಅಹೋ ಅಹೋರಾತ್ರಂ ಎಂಬಲ್ಲಿ **ಓತ್** ಎಂಬ ಸೂತ್ರದಿಂದ ಪ್ರಗೃಹ್ಯಸಂಜ್ಞೆಯು ಬಂದಿದೆ. ಈ ಮೂರೂ ಕಡೆಗಳಲ್ಲಿ **ಪ್ಲುತಪ್ರಗೃಹ್ಯಾ ಅಚಿ ನಿತ್ಯಂ** ಎಂಬ ಸೂತ್ರದಿಂದ ಪ್ರಕೃತಿ ಭಾವವು ಬಂದಿದೆ.

ಸುಸಮಯಪ್ರಕಾಶನಾತ್ = ಸುಶಾಸ್ತ್ರವ್ಯಾಖ್ಯಾನಾತ್ ಸುಕಾಲೋದಯಾಚ್ಚ. (ಭಾವಪ್ರಕಾಶಿಕಾ) ಒಳ್ಳೆಯ ಶಾಸ್ತ್ರದ ಪ್ರವಚನದಿಂದ, ಒಳ್ಳೆಯ ಸಮಯದಲ್ಲಿ ಉದಯವಾಗುವುದರಿಂದ ಎಂದು ಎರಡು ಅರ್ಥಗಳು.

**ಅವ :**— ಶ್ರೀಭಾರತೀರಮಣಮುಖ್ಯಪ್ರಾಣರು ಶ್ರೀಮಧ್ವರೂಪದಿಂದ ಭೂಮಿಯಲ್ಲಿ ಅವತರಿಸಿ ಮಾಡಿದ ಎರಡು ಮಹೋಪಕಾರಗಳು—

**ಸಜ್ಜನಾನ್ ಸಹ ಮಹಾದರೇಣ ನ್ನೂನ್**
**ಪಾಪಿನಾಂ ಪ್ರಕೃತಿತೋಽಪ್ರಿಯಾಕೃತಿ ।**
**ದಾರುಣಾಘಗಣದಾರಣಂ ಸ್ಮ ಸ**
**ಗ್ರಾಹಯತ್ಯಪಿ ಸುದರ್ಶನದ್ವಯಂ ॥೩೯॥**

ಅ :— ಸಃ ಸಜ್ಜನಾನ್ ನ್ನೂನ್ ಪಾಪಿನಾಂ ಪ್ರಕೃತಿತಃ ಅಪ್ರಿಯಾಕೃತಿ ದಾರುಣಾಘಗಣದಾರಣಂ ಸುದರ್ಶನದ್ವಯಂ ಅಪಿ ಮಹಾದರೇಣ ಸಹ ಗ್ರಾಹಯತಿ ಸ್ಮ.

Rarest Archiver

**ಅರ್ಥ:**—ಸಃ = ಆ ಮಧ್ವಾಚಾರ್ಯರು, ಸಜ್ಜನಾನ್ ನೃನ್= ಸಾತ್ವಿಕರಾದ ಮನುಷ್ಯ(ರನ್ನು)ರಿಗೆ, ಪಾಪಿನಾಂ= ಪಾಪಿಗಳಿಗೆ, ಪ್ರಕೃತಿತಃ =ಸ್ವಭಾವದಿಂದ, ಅಪ್ರಿಯಾಕೃತಿ = ಅಪ್ರಿಯವಾದ ಸ್ವರೂಪವುಳ್ಳ, ದಾರುಣಾಘಗಣದಾರಣಂ = ಭಯಂಕರವಾದ ಪಾಪಗಳ ಸಮೂಹದ ಪರಿಹಾರಕವಾದ, ಸುದರ್ಶನದ್ವಯಂ ಅಪಿ = ಸಚ್ಛಾಸ್ತ್ರಗಳೆಂಬ ಸುದರ್ಶನ ಮತ್ತು ಸುದರ್ಶನಚಕ್ರವೆಂಬ ಸುದರ್ಶನವನ್ನೂ, ಮಹಾದರೇಣ ಸಹ= ಬಹಳ ಪ್ರೀತಿಯಿಂದ ಸಹಿತವಾಗಿ (ಪೂಜ್ಯವಾದ ಪಾಂಚಜನ್ಯವೆಂಬ ಮಹಾ ಶಂಖಸಹಿತವಾಗಿ) ಗ್ರಾಹಯತಿಸ್ಮ = ಸ್ವೀಕಾರ ಮಾಡಿಸಿದರು, (ಉಪ ದೇಶಿಸಿದರು,) ಧಾರಣಮಾಡಿಸಿದರು.

**ತಾ :**— ಶ್ರೀಮಧ್ವಶಾಸ್ತ್ರವು ಪಾಪಿಗಳಿಗೆ ಸ್ವಾಭಾವಿಕವಾಗಿಯೇ ಅಹಿತವಾಗಿ ತೋರುತ್ತದೆ. ಭಯಂಕರವಾದ ಪಾಪಗಳ ಸಮೂಹವನ್ನು ನಿವಾರಿಸುತ್ತದೆ. ಶ್ರೀಮಧ್ವರು ಅಂತಹ ಸರ್ವೋತ್ತಮವಾದ ಸಚ್ಛಾಸ್ತ್ರ ವೆಂಬ ಸುದರ್ಶನವನ್ನು ತತ್ತ್ವಜ್ಞಾನಯೋಗ್ಯರಾದ ಸಾತ್ವಿಕಜನರಿಗೆ ಪರಮಪ್ರೀತಿಯಿಂದ ಉಪದೇಶಿಸಿದರು. ಶ್ರೀಮನ್ನಾರಾಯಣನ ಸುದರ್ಶನ ಚಕ್ರವೂ ಪಾಪಿಗಳಾದ ಅಸುರರಿಗೆ, ರಾಕ್ಷಸರಿಗೆ ಮತ್ತು ಅಧಮಮಾನವರಿಗೆ ಸ್ವಭಾವತಃ ಅಪ್ರಿಯವಾದುದು. ಪಾಪಿಗಳಾದ ಭಯಂಕರ ರಾಕ್ಷಸರನ್ನು ಸೀಳಿ ಕೊಲ್ಲುತ್ತದೆ. ಶ್ರೀಮಧ್ವರು ಇಂತಹ ಸುದರ್ಶನಚಕ್ರಚಿಹ್ನೆಯನ್ನೂ, ಅದರೊಡನೆ ಮಹಾವಿಷ್ಣುವಿನ ಕೈಯಲ್ಲಿರುವ ಪಾಂಚಜನ್ಯವೆಂಬ ಶ್ರೇಷ್ಠ ವಾದ ಶಂಖದ ಚಿಹ್ನೆಯನ್ನೂ, ಭಕ್ತರ ಎಡಬಲತೋಳುಗಳಲ್ಲಿ ಧಾರಣ ಮಾಡಿಸುತ್ತಿದ್ದರು. ಆಚಾರ್ಯರು ತತ್ತ್ವಜ್ಞಾನ ಯೋಗ್ಯರಾದ ಜನರಿಗೆ ಭುಜಗಳಲ್ಲಿ ಸುದರ್ಶನಹೋಮಾಗ್ನಿಯಿಂದ ತಪ್ತವಾದ ಚಕ್ರಶಂಖಚಿಹ್ನೆಗಳ ಧಾರಣಮಾಡಿಸಿ ವೈಷ್ಣವದೀಕ್ಷೆಯನ್ನು ಕೊಟ್ಟು ಅವರಿಗೆ ಬಹಳ ಪ್ರೀತಿ ಯಿಂದ ತನ್ನ ಶಾಸ್ತ್ರವನ್ನು ಉಪದೇಶಿಸುತ್ತಿದ್ದರು ಎಂದು ಭಾವವು (ಇದರಿಂದ ತಪ್ತಮುದ್ರಾಧಾರಣರೂಪವಾದ ವೈಷ್ಣವದೀಕ್ಷೆ ಇಲ್ಲದವರಿಗೆ ಶ್ರೀಮಧ್ವ ಶಾಸ್ತ್ರಶ್ರವಣದಲ್ಲಿ ಅಧಿಕಾರವಿಲ್ಲವೆಂದು ಸೂಚಿತವಾಗುತ್ತದೆ.)

**ವಿ:**—ಸಂತಶ್ಚ ತೇ ಜನಾಶ್ಚ ಸಜ್ಜನಾಃ ತಾನ್, ಮಹಾಂಶ್ಚ

Rarest Archives

ಅಸೌದರಶ್ಚ ಮಹಾದರಃ, ಮಹಾಂಶ್ಚ ಅಸೌ ಆದರಶ್ಚ ಮಹಾದರಃ ತೇನ; ನ ಪ್ರಿಯಾ ಅಪ್ರಿಯಾ, ಅಪ್ರಿಯಾ ಆಕೃತಿಃ ಯಸ್ಯ ತತ್ ಅಪ್ರಿಯಾಕೃತಿ; ದಾರುಣಾನಿ ಚ ತಾನಿ ಅಘಾನಿ ಚ ದಾರುಣಾಘಾನಿ, ದಾರುಣಾಘಾನಾಂ ಗಣಸ್ಯ ದಾರಣಂ ದಾರುಣಾಘಗಣದಾರಣಂ ತತ್; ಸುದರ್ಶನಯೋಃ ದ್ವಯಂ ಸುದರ್ಶನದ್ವಯಂ, ತತ್;

**ಕ್ರಿ:**—ಗ್ರಾಹಯತಿ ಗ್ರಾಹಯತಃ ಗ್ರಾಹಯಂತಿ ಇತ್ಯಾದಿ ; ಗ್ರಹ ಉಪಾದಾನೇ, ಣಿಜಂತ ಲಟ್. ಸ್ಮ ಶಬ್ದಯೋಗದಿಂದ ಭೂತಕಾಲದ ಅರ್ಥಬಂದಿದೆ.

**ಅವ:**—ಮೋಕ್ಷಸಾಧಕವಾದ ಸಚ್ಛಾಸ್ತ್ರಾಭ್ಯಾಸಕ್ಕೆ ವಿಘ್ನಪರಿಹಾರಕವಾಗಿ ಶ್ರೀಕೃಷ್ಣಪ್ರತಿಷ್ಠೆಯನ್ನು ಮಾಡಬೇಕೆಂದು ಆಚಾರ್ಯರು ಬಯಸಿದರು—

**ನನ್ವನನ್ಯಶರಣಾತ್ಮನಾಂ ಸತಾಂ**
**ಸಿದ್ಧಿವಿಘ್ನಮುಖದೋಷಭೇಷಜಂ ।**
**ಐಚ್ಛದಚ್ಛಲದಯೋದಯಾದಯಂ**
**ರೂಪ್ಯಪೀಠಪುರಗಃ ಕದಾಚನ** ॥೪೦॥

**ಅ:**—ಕದಾಚನ ರೂಪ್ಯಪೀಠಪುರಗಃ ಅಯಂ ಅಚ್ಛಲದಯೋದಯಾತ್ ಅನನ್ಯಶರಣಾತ್ಮನಾಂ ಸತಾಂ ಸಿದ್ಧಿವಿಘ್ನಮುಖದೋಷಭೇಷಜಂ ಐಚ್ಛತ್‌ನನು.

**ಅರ್ಥ:**—ಕದಾಚನ = ಒಂದಾನೊಂದು ಸಮಯದಲ್ಲಿ, ರೂಪ್ಯಪೀಠಪುರಗಃ = ಉಡುಪಿಪಟ್ಟಣದಲ್ಲಿರುತ್ತಿದ್ದ, ಅಯಂ = ಈ ಶ್ರೀಮಧ್ವಾಚಾರ್ಯರು, ಅಚ್ಛಲದಯೋದಯಾತ್ = ನಿರ್ವ್ಯಾಜವಾದ ದಯೆ ಹುಟ್ಟಿದ್ದರಿಂದ, ಅನನ್ಯಶರಣಾತ್ಮನಾಂ = ಮತ್ತೊಬ್ಬರು ರಕ್ಷಕರು ಇಲ್ಲವೆಂಬ ಬುದ್ಧಿಯುಳ್ಳ, ಸತಾಂ = ಸಾತ್ತ್ವಿಕಜನರಿಗೆ, ಸಿದ್ಧಿವಿಘ್ನಮುಖದೋಷಭೇಷಜಂ = ಮುಕ್ತಿಗೆ (ಜ್ಞಾನಕ್ಕೆ) ಪ್ರತಿಬಂಧಕವಾದ ಪಾಪವೇ ಮೊದಲಾದ ದೋಷಗಳಿಗೆ ಔಷಧವನ್ನು (ಪರಿಹಾರೋಪಾಯವನ್ನು) ಐಚ್ಛತ್ ನನು = ಇಚ್ಛೈಸಿದರು. ನಿಶ್ಚಯವು.

Rarest Archiver

ತಾ:—ಶ್ರೀಮಧ್ವಾಚಾರ್ಯರು ರಜತಪೀಠಪುರದಲ್ಲಿ ಇರುವಾಗ ಒಂದಾನೊಂದು ಸಮಯದಲ್ಲಿ ಮೋಕ್ಷಯೋಗ್ಯರಿಗೆ ಅಜ್ಞಾನಾದಿದೋಷ ಗಳಿಂದ ಮೋಕ್ಷ ಮತ್ತು ಜ್ಞಾನಪ್ರಾಪ್ತಿಗಳಿಗೆ ಆವಶ್ಯಕವಾದ ಶಾಸ್ತ್ರಾಭ್ಯಾಸ ದಲ್ಲಿ ಔದಾಸೀನ್ಯದೋಷವನ್ನು ಕಂಡರು. ಪುರುಷಾರ್ಥಪ್ರಾಪ್ತಿಗೆ ಪ್ರತಿ ಬಂಧಕವಾದ ಇಂತಹ ದೋಷಗಳನ್ನು ಪರಿಹರಿಸಬೇಕೆಂದು ಆಲೋಚಿಸಿ, ಆ ಸಾತ್ತ್ವಿಕಜನರಲ್ಲಿ ನಿರ್ಹೇತುಕವಾದ ಕರುಣೆಯಿಂದ ಅವರು ಆ ಅಜ್ಞಾನ ಆಲಸ್ಯ ಮುಂತಾದ ದೋಷಗಳ ಪರಿಹಾರೋಪಾಯವನ್ನು (ಭವರೋಗ ಭೇಷಜವನ್ನು) ಅಪೇಕ್ಷಿಸಿದರು. (ಶ್ರೀಕೃಷ್ಣನನ್ನು ಪ್ರತಿಷ್ಠೆಮಾಡಬೇಕೆಂದು ಅಪೇಕ್ಷಿಸಿದರು.) ಇದರಿಂದ ಶ್ರೀಕೃಷ್ಣನು ಭವರೋಗವೈದ್ಯನು, ಅವನ ದರ್ಶನಸೇವಾದಿಗಳು, ಸಚ್ಛಾಸ್ತ್ರಾಭ್ಯಾಸವಿಘ್ನಪರಿಹಾರಕವಾದ, ಜ್ಞಾನ ಸಾಧಕವಾದ ಪುರುಷಾರ್ಥಪ್ರದಾಯಕವಾದ ಔಷಧಗಳು ಎಂದು ಸೂಚಿತ ವಾಯಿತು.

ವಿ:—ಅನ್ಯಚ್ಚ ತತ್ ಶರಣಂ ಚ ಅನ್ಯಶರಣಂ, ನ ವಿದ್ಯತೇ ಅನ್ಯಶರಣಂ ಯೇಷಾಂ ತೇ ಅನನ್ಯಶರಣಾಃ, ಅನನ್ಯಶರಣಾಃ ಇತಿ ಆತ್ಮಾ ಯೇಷಾಂ ತೇ ಅನನ್ಯಶರಣಾತ್ಮಾನಃ ತೇಷಾಂ ; ಸಿದ್ಧೇಃ ವಿಘ್ನಃ ಸಿದ್ಧಿ- ವಿಘ್ನಃ ಸಿದ್ಧಿವಿಘ್ನ ಏವ ಮುಖಂ ಯೇಷಾಂ ತೇ ಸಿದ್ಧಿವಿಘ್ನಮುಖಾಃ, ಸಿದ್ಧಿವಿಘ್ನಮುಖಾಶ್ಚ ತೇ ದೋಷಾಶ್ಚ ಸಿದ್ಧಿವಿಘ್ನಮುಖದೋಷಾಃ, ತೇಷಾಂ ಭೇಷಜಂ, ತತ್ ; ನ ವಿದ್ಯತೇ ಛಲಂ ಯಸ್ಯಾಃ ಸಾ ಅಚ್ಛಲಾ, ಅಚಲಾ ಚ ಸಾ ದಯಾ ಚ ಅಚ್ಛಲದಯಾ, ಅಚ್ಛಲದಯಾಯಾಃ ಉದಯಃ ಅಚ್ಛಲದಯೋದಯಃ ತಸ್ಮಾತ್; ರೂಪ್ಯಪೀಠಪುರಂ ಗಚ್ಛತೀತಿ ರೂಪ್ಯಪೀಠಪುರಗಃ ||

ಕ್ರಿ:—ಐಚ್ಛತ್ ಐಚ್ಛತಾಂ ಐಚ್ಛನ್ ಇತ್ಯಾದಿ. ಇಷ ಇಚ್ಛಾಯಾಂ ಪರ. ಲಙ್.

ಅವ:—ಹೀಗೆ ಆಲೋಚಿಸಿದ ಸರ್ವಜ್ಞಾಚಾರ್ಯರು ಶ್ರೀಕೃಷ್ಣ ಪ್ರತಿಮೆಯನ್ನು ತಂದರು –

Rarest Archive

**ಗೋಪಿಕಾಪ್ರಣಯಿನಃ ಶ್ರಿಯಃ ಪತೇ**
**ರಾಕೃತಿಂ ದಶಮತಿಃ ಶಿಲಾಮಯೀಂ ।**
**ಶಿಷ್ಯಕೈಸ್ತ್ರಿಚತುರೈರ್ಜಲಾಶಯೇ**
**ಶೋಧಯನ್ನಿಹ ತತೋ ವ್ಯಗಾಹಯತ್ ॥೪೧॥**

ಅ :—ದಶಮತಿಃ ಗೋಪಿಕಾಪ್ರಣಯಿನಃ ಶ್ರಿಯಃಪತೇಃ ಶಿಲಾಮಯೀಂ ಆಕೃತಿಂ ತ್ರಿಚತುರೈಃ ಶಿಷ್ಯಕೈಃ ಇಹ ಜಲಾಶಯೇ ಶೋಧಯನ್ ತತಃ ವ್ಯಗಾಹಯತ್.

**ಅರ್ಥ :**— ದಶಮತಿಃ = ಶ್ರೀಪೂರ್ಣಪ್ರಜ್ಞರು, ಗೋಪಿಕಾ ಪ್ರಣಯಿನಃ = ಗೊಲ್ಲತಿಯರಿಗೆ ಪ್ರೀತಿಪಾತ್ರನಾದ, ಶ್ರಿಯಃ ಪತೇಃ= ಲಕ್ಷ್ಮೀಪತಿಯಾದ ಶ್ರೀಕೃಷ್ಣನ, ಶಿಲಾಮಯೀಂ ಆಕೃತಿಂ= ಶಾಲಗ್ರಾಮ ಶಿಲಾಮಯವಾದ ಪ್ರತಿಮೆಯನ್ನು, ತ್ರಿಚತುರೈಃ ಶಿಷ್ಯಕೈಃ = 'ಮೂರು ನಾಲ್ಕುಮಂದಿ ಶಿಷ್ಯರಿಂದ, ಇಹ ಜಲಾಶಯೇ = ಈ ಉಡುಪಿಯಲ್ಲಿರುವ ಸರೋವರದಲ್ಲಿ, ಶೋಧಯನ್= ಶುದ್ಧಿಮಾಡಿಸುತ್ತಾ (ತೊಳೆಯಿಸುತ್ತಾ), ತತಃ= ಅನಂತರದಲ್ಲಿ, ವ್ಯಗಾಹಯತ್ = ಜಲಾಧಿವಾಸಮಾಡಿಸಿದರು.

ತಾ:—ಶ್ರೀಮಧ್ವಾಚಾರ್ಯರು ಗೋಪಿಕಾಸ್ತ್ರೀಯರಿಗೆ ಪ್ರಿಯನೂ ಲಕ್ಷ್ಮೀದೇವಿಗೆ ಸ್ವಾಮಿಯೂ ಆದ ಶ್ರೀಕೃಷ್ಣನ ಸಾಲಿಗ್ರಾಮಶಿಲೆಯಿಂದ ನಿರ್ಮಿತವಾದ ಪ್ರತಿಮೆಯನ್ನು ಮೂರುನಾಲ್ಕು ಮಂದಿ ಶಿಷ್ಯರಿಂದ ಶ್ರೀಮಧ್ವಸರೋವರದಲ್ಲಿ ಚೆನ್ನಾಗಿ ತೊಳೆಯಿಸಿದರು. ಅನಂತರ ಆ ಸರೋವರದಲ್ಲಿಯೇ ಪ್ರತಿಮೆಗೆ ಜಲಾಧಿವಾಸಮಾಡಿಸಿದರು. (ಮೂರು ನಾಲ್ಕು ಜನರಿಂದ ಶೋಧನೆ ಮಾಡಿಸಿದರು ಎಂದು ಹೇಳಿದ್ದರಿಂದ ಆ ಪ್ರತಿಮೆಯು ಗೋಪೀಚಂದನದ ಗಡ್ಡೆಯ ಒಳಗೆ ಇದ್ದಿತೆಂದು ಸೂಚಿತ ವಾಗುತ್ತದೆ.) (ಸ್ಥಳ ಮಾಹಾತ್ಮ್ಯದಲ್ಲಿ ಈ ಕಥೆಯು ಹೀಗೆ ವಿವರಿಸಲ್ಪಟ್ಟಿದೆ. 'ನಾನು ನಿನ್ನ ಬಳಿಗೆ ಬರುವೆನು, ನನ್ನನ್ನು ಕರೆದುಕೊಂಡು ಹೋಗು' ಎಂಬ ಪರಮಾತ್ಮನ ಅಪ್ಪಣೆಯಂತೆ ಆಚಾರ್ಯರು ಉಡುಪಿಯಿಂದ ಪಶ್ಚಿಮ ದಲ್ಲಿರುವ ಒಡಭಾಂಡೇಶ್ವರ ಎಂಬಲ್ಲಿ ಮಿಂದು ಶ್ರೀಕೃಷ್ಣನ ಆಗಮನವನ್ನು ಎದುರುನೋಡುತ್ತಾ ಇದ್ದಾಗ, ಸಮುದ್ರದಲ್ಲಿ ಚಲಿಸುತ್ತಿದ್ದ ಒಂದು

Rarest Archiver

ಹಡಗು ತೊಂದರೆಗೊಳಗಾಯಿತು. ಹಡಗಿನವರು ಅನುಗ್ರಹಿಸಬೇಕೆಂದು ಆಚಾರ್ಯರನ್ನು ಬೇಡಲು ಅವರು ತಮ್ಮ ಶಾಟಿಯ ಗಾಳಿಯಿಂದ ಹಡಗನ್ನು ಸುರಕ್ಷಿತವನ್ನಾಗಿ ಮಾಡಿದರು. ಹಡಗಿನ ಯಜಮಾನನು ದಡಕ್ಕೆ ಬಂದು ಆಚಾರ್ಯರು ಅಪೇಕ್ಷಿಸಿದ್ದನ್ನು ಕೊಡುವೆನೆಂದನು. ಆಚಾರ್ಯರು ಅದ ರೊಳಗಿನಿಂದ ಗೋಪೀಚಂದನದ ದೊಡ್ಡ ಗಡ್ಡೆಯೊಂದನ್ನು ತೆಗೆದುಕೊಂಡರು. ಅದರೊಳಗಿದ್ದ ಶ್ರೀಕೃಷ್ಣಪ್ರತಿಮೆಯನ್ನು ಉಡುಪಿಗೆ ತಂದು, ಪ್ರತಿಮೆಗೆ ಅಂಟಿಕೊಂಡಿದ್ದ ಗೋಪೀಚಂದನವನ್ನು ತೊಳೆಯಿಸಿ ಸರೋವರದಲ್ಲಿ ಜಲಾಧಿವಾಸಮಾಡಿಸಿದರು. ಶಾಲಗ್ರಾಮಶಿಲಾಮಯವಾದ ಆ ಪ್ರತಿಮೆ ಯನ್ನು ಹಿಂದೆ ರುಕ್ಮಿಣೀದೇವಿಗಾಗಿ ಶ್ರೀಕೃಷ್ಣನ ಆಜ್ಞೆಯಂತೆ ವಿಶ್ವಕರ್ಮನೇ ಮಾಡಿಕೊಟ್ಟಿದ್ದನು. ರುಕ್ಮಿಣೀಮೊದಲಾದ ಅಷ್ಟಮಹಿಷಿಯರಿಂದ ಆ ಪ್ರತಿಮೆಯು ಪೂಜಿತವಾಗಿತ್ತು. ಶ್ರೀಕೃಷ್ಣನು ಪರಂಧಾಮಕ್ಕೆ ಹೋದಾಗ ದ್ವಾರಕೆಯು ಮುಳುಗಿತು. ಆ ಪ್ರತಿಮೆಯನ್ನು ಅರ್ಜುನನು ಗೋಪೀ ಚಂದನದ ರಾಶಿಯಲ್ಲಿ ಮುಚ್ಚಿಟ್ಟು ಹೊರಟುಹೋದನು. ಮುಂದೆ ನಾವಿಕರು ಹಡಗಿನ ಭಾರಕ್ಕಾಗಿ ಗೋಪೀಚಂದನದ ಗಡ್ಡೆಗಳನ್ನು ಹಡಗಿನಲ್ಲಿ ತುಂಬಿದಾಗ ಈ ಪ್ರತಿಮೆಯೂ ಆ ಗಡ್ಡೆಗಳಲ್ಲಿ ಸೇರಿಕೊಂಡಿದ್ದು ಮುಂಡೆ ಶ್ರೀಕೃಷ್ಣನ ಭಕ್ತಾಗ್ರೇಸರರಾದ ಶ್ರೀಮಧ್ವರಿಗೆ ದೊರಕಿತು.'

ವಿ :—ಪ್ರಣಯಃ ಅಸ್ಯ ಅಸ್ತೀತಿ ಪ್ರಣಯೀ, ಗೋಪಿಕಾನಾಂ ಪ್ರಣಯೀ ಗೋಪಿಕಾಪ್ರಣಯೀ ತಸ್ಯ, ಶಿಲೈವ ಶಿಲಾಮಯೀ ತಾಂ, ಶಿಷ್ಯಾ ಏವ ಶಿಷ್ಯಕಾಃ ತೈಃ, ತ್ರಯೋ ವಾ ಚತ್ವಾರೋ ವಾ ತ್ರಿಚತುರಾಃ ತೈಃ, ಜಲಸ್ಯ ಆಶಯಃ ಜಲಾಶಯಃ ತಸ್ಮಿನ್;

ಕ್ರಿ :—ವಿ + ಅಗಾಹಯತ್, ಅಗಾಹಯತಾಂ ಅಗಾಹಯನ್, ಅಗಾಹಯಃ ಇತ್ಯಾದಿ. ಗಾಹೂ ವಿಲೋಡನೇ ಣಿಜಂತ, ಲಙ್. ವಿ ಉಪಸರ್ಗ.

ಅವ :—ಸಾಲಿಗ್ರಾಮಶಿಲಾಮಯವಾಗಿದ್ದು ಸ್ವಯಂವ್ಯಕ್ತನಾದ ಭಗವಂತನ ಸಂನಿಧಾನವುಳ್ಳ ಈ ಪ್ರತಿಮೆಯು ಶ್ರೀಕೃಷ್ಣನ ಆಜ್ಞೆಯಿಂದ ವಿಶ್ವಕರ್ಮನಿಂದ ನಿರ್ಮಿತವಾಗಿದ್ದು, ರುಕ್ಮಿಣೀಕರಾರ್ಚಿತವೂ ಆಗಿದೆ.

Rarest Archiver

ಆಚಾರ್ಯರ ಕರಸ್ಪರ್ಶದಿಂದ ಮತ್ತಷ್ಟು ಭಗವಂತನ ಸಂನಿಧಾನವು ಹೆಚ್ಚಿ ಮೂವತ್ತು ಮಂದಿಗೂ ಎತ್ತಲು ಅಸಾಧ್ಯವಾಯಿತು—

**ಸ್ಪರ್ಶನಾದ್ ಭಗವತೋಽತಿಪಾವನಾತ್**
**ಸಂನಿಧಾನಪದತಾಂ ಗತಾಂ ಹರೇಃ |**
**ತ್ರಿಂಶದುದ್ಯತನರೈಃ ಸುದುರ್ಧರಾಂ**
**ಲೀಲಯಾನಯದಿಮಾಮಸೌ ಮಠಮ್** ||೪೨||

ಅ :—ಭಗವತಃ ಅತಿಪಾವನಾತ್ ಸ್ಪರ್ಶನಾತ್ (ಭಗವತಃ) ಹರೇಃ ಸಂನಿಧಾನಪದತಾಂ ಗತಾಂ, ತ್ರಿಂಶದುದ್ಯತನರೈಃ ಸುದುರ್ಧರಾಂ ಇಮಾಂ ಅಸೌ ಲೀಲಿಯಾ ಮಠಂ ಆನಯತ್ |

**ಅರ್ಥ:**—ಭಗವತಃ = ಷಡ್ಗುಣೈಶ್ವರ್ಯಸಂಪನ್ನರಾದ ಶ್ರೀಮಧ್ವಾಚಾರ್ಯರ, ಅತಿಪಾವನಾತ್ = ಅತ್ಯಂತಪವಿತ್ರವಾದ, ಸ್ಪರ್ಶನಾತ್= ಮುಟ್ಟುವಿಕೆಯಿಂದ (ಕರಸ್ಪರ್ಶದಿಂದ) (ಭಗವತಃ = ನಿರವಧಿಕಷಡ್ಗುಣೈಶ್ವರ್ಯಸಂಪನ್ನನಾದ), ಹರೇಃ = ಶ್ರೀಕೃಷ್ಣನ, ಸಂನಿಧಾನಪದತಾಂ= ಸಂನಿಧಾನದ ಆಶ್ರಯತ್ವವನ್ನು, ಗತಾಂ= ಹೊಂದಿದ, ತ್ರಿಂಶತ್-ಉದ್ಯತನರೈಃ = ಮೂವತ್ತು ಮಂದಿ ಪ್ರಯತ್ನಶಾಲಿಗಳಾದ ಯುವಕರಾದ ಜನರಿಂದ, ಸುದುರ್ಧರಾಂ= ಎತ್ತಲು ಅಸಾಧ್ಯವಾದ, ಇಮಾಂ= ಈ ಪ್ರತಿಮೆಯನ್ನು, ಅಸೌ = ಈ ಶ್ರೀಮಧ್ವಾಚಾರ್ಯರು, ಲೀಲಯಾ= ಅನಾಯಾಸದಿಂದ, ಮಠಂ= ಮಠವನ್ನು ಕುರಿತು, ಅನಯತ್ = ಒಯ್ದರು.

ತಾ :—ಪರಮಪೂಜ್ಯರಾದ ಶ್ರೀಮಧ್ವಾಚಾರ್ಯರ ಅತ್ಯಂತಪವಿತ್ರವಾದ ಹಸ್ತಸ್ಪರ್ಶದಿಂದ ಆ ಪ್ರತಿಮೆಯಲ್ಲಿ ಶ್ರೀಕೃಷ್ಣನ ಸಂನಿಧಾನವು ಮತ್ತಷ್ಟು ಹೆಚ್ಚಿತು. ಮೂವತ್ತು ಮಂದಿ ತರುಣರಾದ ಶಿಷ್ಯರು ಒಟ್ಟುಸೇರಿ ಪ್ರಯತ್ನಿಸಿದರೂ ಆ ಪ್ರತಿಮೆಯನ್ನು ಎತ್ತಲು ಸಾಧ್ಯವಾಗಲಿಲ್ಲ. ಆಗ ಆಚಾರ್ಯರು ತಾವೊಬ್ಬರೇ ಅನಾಯಾಸವಾಗಿ ಆ ಪ್ರತಿಮೆಯನ್ನು ಎತ್ತಿ ಮಠಕ್ಕೆ ತೆಗೆದುಕೊಂಡು ಬಂದರು. (ಆ ಪ್ರತಿಮೆಯು ಮೊದಲು ಮೂರುನಾಲ್ಕುಮಂದಿ ಶಿಷ್ಯರಿಗೆ ಎತ್ತಲು ಸಾಧ್ಯವಾಗಿತ್ತು. ಆಚಾರ್ಯರ ಕರಸ್ಪರ್ಶವಾದ ಕೂಡಲೇ ಮೂವತ್ತುಮಂದಿಗೂ ಎತ್ತಲು ಸಾಧ್ಯವಾಗಲಿಲ್ಲ.

Rarest Archiver

ಇದರಿಂದ ಆಚಾರ್ಯರ ಹಸ್ತಸ್ಪರ್ಶದಿಂದ ಪ್ರತಿಮೆಯಲ್ಲಿ ಕೃಷ್ಣಸಂನಿಧಾನವು ಹೆಚ್ಚಾಯಿತೆಂದು ತಿಳಿದುಬರುತ್ತದೆ. ಮೂವತ್ತುಮಂದಿ ಜನರಿಗೆ ಎತ್ತಲು ಅಸಾಧ್ಯವಾದ ಪ್ರತಿಮೆಯನ್ನು ತಾವೊಬ್ಬರೇ ಎತ್ತಿದರು ಎಂದು ಹೇಳಿದ್ದರಿಂದ ಆಚಾರ್ಯರ ದೇಹಬಲವು ಮಾನವಾತೀತವಾಗಿತ್ತು ಎಂದೂ ತಿಳಿದು ಬರುತ್ತದೆ.)

**ವಿ :**—ಭಗಃ ಅಸ್ಯ ಅಸ್ತೀತಿ ಭಗವಾನ್ ತಸ್ಯ, ಸನ್ನಿಧಾನಸ್ಯ ಪದಂ ಸನ್ನಿಧಾನಪದಂ, ತಸ್ಯ ಭಾವಃ ಸನ್ನಿಧಾನಪದತಾ ತಾಂ, ಉದ್ಯತಾಶ್ಚ ತೇ ನರಾಶ್ಚ ಉದ್ಯತನರಾಃ, ತ್ರಿಂಶಚ್ಚ ತೇ ಉದ್ಯತನರಾಶ್ಚ ತ್ರಿಂಶದುದ್ಯತನರಾಃ ತೈಃ, ದುಃಖೇನ ಧರ್ತುಂ ಶಕ್ಯಾ ದುರ್ಧರಾ, ಸು ಅತಿಶಯೇನ ದುರ್ಧರಾ ಸುದುರ್ಧರಾ ತಾಂ.

**ಕ್ರಿ:**—ಅನಯತ್ ಅನಯತಾಂ ಅನಯನ್ ಇತ್ಯಾದಿ. ಣೀಞ್ (ನೀ) ಪ್ರಾಪಣೇ ಪರ. ಲಙ್

**ಅವ:**—ಆ ಪ್ರತಿಮೆಯನ್ನು ವಿಧಿಪುರಸ್ಸರವಾಗಿ ಪ್ರತಿಷ್ಠಿಸಿದ್ದರಿಂದ ಅದರಲ್ಲಿ ಶ್ರೀಹರಿಯ ಸಂನಿಧಾನವು ವಿಶೇಷವಾಗಿ ನೆಲೆಸಿತು—

**ಮಂದಹಾಸಮೃದುಸುಂದರಾನನಂ**
**ನಂದನಂದನಮತೀಂದ್ರಿಯಾಕೃತಿಂ ।**
**ಸುಂದರಂ ಸ ಇಹ ಸನ್ನ್ಯಧಾಪಯದ್**
**ವಂದ್ಯಮಾಕೃತಿಶುಚಿಪ್ರತಿಷ್ಠಯಾ** ॥೪೩॥

**ಅ :**—ಸಃ ಮಂದಹಾಸಮೃದುಸುಂದರಾನನಂ ಅತೀಂದ್ರಿಯಾಕೃತಿಂ ಸುಂದರಂ ವಂದ್ಯಂ ನಂದನಂದನಂ ಆಕೃತಿಶುಚಿಪ್ರತಿಷ್ಠಯಾ ಇಹ ಸನ್ನ್ಯಧಾಪಯತ್ ।

**ಅರ್ಥ:**—ಸಃ = ಆ ಶ್ರೀಮಧ್ವಾಚಾರ್ಯರು, ಮಂದಹಾಸ= ಮುಗುಳ್ನಗೆಯಿಂದ, ಮೃದು= ಸೌಮ್ಯವಾದ, ಸುಂದರ= ಸೌಂದರ್ಯ ಭರಿತವಾದ, ಆನನಂ= ಮುಖವುಳ್ಳ, ಅತೀಂದ್ರಿಯಾಕೃತಿಂ = ಪ್ರಾಕೃತೇಂದ್ರಿಯಗಳಿಗೆ ಕಾಣಿಸದಿರುವ ಸ್ವರೂಪವುಳ್ಳ, ಸುಂದರಂ= ಮನಸ್ಸನ್ನು

Rarest Archiver

ಆರ್ದ್ರಗೊಳಿಸುವ ಶೋಭೆಯುಳ್ಳ, ವಂದ್ಯಂ = ಬ್ರಹ್ಮಾದಿಗಳ ನಮಸ್ಕಾರ ಮತ್ತು ಸ್ತೋತ್ರಕ್ಕೆ ಅರ್ಹನಾದ, ನಂದನಂದನಂ = ನಂದಗೋಪನಿಗೆ ಆನಂದಕರನಾದ ಪುತ್ರನಾಗಿ ಅವತರಿಸಿದ ಶ್ರೀಕೃಷ್ಣಪರಬ್ರಹ್ಮನನ್ನು, ಆಕೃತಿ = ಪ್ರತಿಮೆಯು, ಶುಚಿಪ್ರತಿಷ್ಠಯಾ = ಶುದ್ಧವಾದ ಪ್ರತಿಷ್ಠೆಯ ರೀತಿಯಿಂದ, ಇಹ = ಈ ಪ್ರತಿಮೆಯಲ್ಲಿ, ಸನ್ನ್ಯಧಾಪಯತ್ = ಸನ್ನಿಹಿತನನ್ನಾಗಿ ಮಾಡಿದರು.

ತಾ:—ಶ್ರೀಕೃಷ್ಣನು ಕಿರುನಗೆಯಿಂದ ಸುಂದರವಾದ ಮುಖವುಳ್ಳವನು. ಅವನ ಸ್ವರೂಪವು ಪ್ರಾಕೃತಗಳಾದ ನಮ್ಮ ಇಂದ್ರಿಯಗಳಿಗೆ ಎಂದೂ ಗೋಚರವಾಗಲಾರದು. ಭಕ್ತರು ದಿವ್ಯದೃಷ್ಟಿಯಿಂದ ಅವನನ್ನು ನೋಡಿ ದ್ರವೀಭೂತರಾಗುತ್ತಾರೆ. ಬ್ರಹ್ಮರುದ್ರಾದಿದೇವತೆಗಳೂ ಅವನನ್ನು ನಮಿಸುತ್ತಾರೆ ಮತ್ತು ಸ್ತುತಿಸುತ್ತಾರೆ. ಆಚಾರ್ಯರು ವಿಧಿಯನ್ನು ಅನುಸರಿಸಿ ಪ್ರತಿಷ್ಠೆಮಾಡಿದ ರೀತಿಯಿಂದ ಇಂತಹ ಪರಬ್ರಹ್ಮರೂಪನಾದ ಶ್ರೀಕೃಷ್ಣನ ಸಂನಿಧಾನವು ವಿಶೇಷವಾಗಿ ಆ ಪ್ರತಿಮೆಯಲ್ಲಿ ನೆಲೆಸಿತು. 'ಪ್ರತಿಮಾಯಾಂ ತು ಸಾಂನಿಧ್ಯಂ ಅರ್ಚಕಸ್ಯ ತಪೋಬಲಾತ್' ಎಂಬ ಪ್ರಮಾಣದಂತೆ ಶಿಲಾಮಯವಾದ ಪ್ರತಿಮೆಯಲ್ಲಿ ಅಪ್ರಾಕೃತಜ್ಞಾನ-ಆನಂದ-ತೇಜೋಮಯನಾದ ಭಗವಂತನು ಅರ್ಚಕನ ಸಾಂಗವಾದ ಪ್ರತಿಷ್ಠೆಯಿಂದ, ಆವಾಹನಾದಿ ಅರ್ಚನಬಲದಿಂದ ತನ್ನ ಸಂನಿಧಾನವನ್ನಿಡುತ್ತಾನೆ. ಪ್ರತಿಮೆಯೇ ಭಗವಂತನಲ್ಲವಷ್ಟೆ! ಆಚಾರ್ಯರು ತನ್ನ ಅರ್ಚನ ಕ್ರಮದಿಂದ ಆ ವಿಗ್ರಹದಲ್ಲಿ ಕೃಷ್ಣನ ಸಂನಿಧಾನವನ್ನು ನೆಲೆಗೊಳಿಸಿದರು. ಆದುದರಿಂದ ನಿತ್ಯದಲ್ಲಿಯೂ ಭಜಕರು ತಾವು ಆವಾಹನಾದಿಗಳನ್ನು ಮಾಡದಿದ್ದರೂ ದರ್ಶನ, ನಮಸ್ಕಾರಾದಿಸೇವೆಗಳಿಂದ ಇಷ್ಟಾರ್ಥವನ್ನು ಗಳಿಸಲು ಅನುಕೂಲವಾಯಿತು ಎಂದು ಭಾವ.

ವಿ:—ಮಂದಶ್ಚಾಸೌ ಹಾಸಶ್ಚ ಮಂದಹಾಸಃ ಮಂದಹಾಸೇನ ಮೃದು ಮಂದಹಾಸಮೃದು, ಮಂದಹಾಸಮೃದು ಸುಂದರಂ ಆನನಂ ಯಸ್ಯ ಸಃ ಮಂದಹಾಸಮೃದುಸುಂದರಾನನಃ ತಂ, ನಂದಯತೀತಿ ನಂದನಃ ನಂದಸ್ಯ ನಂದನಃ ನಂದನಂದನಃ ತಂ, ಇಂದ್ರಿಯಂ ಅತಿಕ್ರಾಂತಾ

Rarest Archiver

ಅತೀಂದ್ರಿಯಾ, ಅತೀಂದ್ರಿಯಾ ಆಕೃತಿಃ ಯಸ್ಯ ಸಃ ತಂ, ವಂದಿತುಂ ಯೋಗ್ಯಃ ವಂದ್ಯಃ ತಂ, ಶುಚಿಶ್ಚಾಸೌ ಪ್ರತಿಷ್ಠಾ ಚ ಶುಚಿಪ್ರತಿಷ್ಠಾ ಆಕೃತೇಃ ಶುಚಿಪ್ರತಿಷ್ಠಾ ಆಕೃತಿಶುಚಿಪ್ರತಿಷ್ಠಾ ತಯಾ.

**ಕ್ರಿ:**—ಸಂ + ನಿ + ಅಧಾಪಯತ್ ಅಧಾಪಯತಾಂ ಅಧಾಪಯನ್ ಇತ್ಯಾದಿ ಡುಧಾಞ್ (ಧಾ) ಧಾರಣಪೋಷಣಯೋಃ, ಧಾಧಾತು ಣಿಜಂತ, ಲಙ್.

**ಅವ :**— ಶ್ರೀಕೃಷ್ಣಪ್ರತಿಷ್ಠಾನಂತರದಲ್ಲಿ ಆಚಾರ್ಯರು ಒಂದು ಉತ್ತಮವಾದ ಯಾಗವನ್ನು ಮಾಡಿಸಿದರು. ಅದು ರಾಜಸೂಯಯಾಗಕ್ಕೆ ಸಮಾನವೆಂದು ವರ್ಣಿಸಲು ಉಪೋದ್ಘಾತವನ್ನು ಪ್ರಾರಂಭಿಸುತ್ತಾರೆ. (ಈ ಮುಂದಿನ ನಾಲ್ಕು ಶ್ಲೋಕಗಳು ಏಕಾನ್ವಯಹೊಂದಿರುವುದರಿಂದ **ಕಲಾಪಕ** ಎಂಬ ಹೆಸರಿನಿಂದ ಕರೆಯಲ್ಪಡುತ್ತವೆ. ಅವುಗಳನ್ನು ಒಟ್ಟಿಗೆ ಸೇರಿಸಿ ಅರ್ಥವನ್ನು ಹೇಳಬೇಕು.) ಆಚಾರ್ಯರು ಮಾಡಿಸುವ ಯಾಗಕ್ಕೆ ಜರಾಸಂಧನಂತಿರುವ ಒಬ್ಬ ಯಾಜ್ಞಿಕನು ವಿಘ್ನಕಾರಿಯಾಗಿದ್ದನು. ಆಚಾರ್ಯರು ಅವನನ್ನು ದೂರಮಾಡಿ ತನ್ನ ವೇದೋಪಾಧ್ಯಾಯರ ಮಗನಾದ ವಾಸುದೇವನೆಂಬ ಯಾಜ್ಞಿಕಶ್ರೇಷ್ಠನಿಂದ ಹೋಮಾದಿಕಾರ್ಯವನ್ನು ನಡೆಸಿದರೆಂದು ತಿಳಿಸುತ್ತಾರೆ –

**ಮಾನಿನೋಽಪಿ ಹಿ ವಶೀಚಕಾರ ಯೋ**
**ದೈವತಪ್ರತಿಭಯಾತ್ಮನಃ ಖಲಃ ।**
**ಮಾಯಿಜೂಕಗುಣಮಾತ್ಮನಃ ಸ್ಮರನ್**
**ಯೋ ಜರಾಘಟಿತಗೋತ್ರ ಉಚ್ಯತೇ ॥೪೪॥**

**ಅವ:**— ಜರಾಘಟಿತಗೋತ್ರ (ಜರಾಸಂಧಗೋತ್ರದವನು-ಮರಡಿತ್ತಾಯ)ದವನನ್ನು ಆಚಾರ್ಯರು ನಿರಾಕರಿಸಿದರು –

**ಆತ್ಮನಃ ಪ್ರಿಯತಮಕ್ರತೋರಮುಂ**
**ಪಾಪಪೂರುಷಮವೇಕ್ಷ್ಯ ಘಾತುಕಂ ।**
**ತಂ ನಿರಸ್ಯ ಜನಮಪ್ಯಥಾಹಿತಂ**
**ಸರ್ವಭೂಧರಸಮರ್ಥಪೂರ್ವಕಂ ॥೪೫॥**

Rarest Archiver

**ಅವ :**—ಅಂತಹ ಬಲಿಷ್ಠಯಾಜ್ಞಿಕನನ್ನು ಪರಾಜಯಗೊಳಿಸಿ ಬಹಿಷ್ಕರಿಸುವಷ್ಟು ಶಕ್ತಿಯು ಆಚಾರ್ಯರಲ್ಲಿದೆ–

**ವಿಶ್ವವಿಸ್ಮಯಕರಃ ಸ್ವತೇಜಸಾ**
**ವಂದ್ಯಮಾನಚರಣಃ ಪುನರ್ಜನೈಃ ।**
**ಚಿತ್ರದಿಗ್ವಿಜಯಕೀರ್ತ್ಯಕೀರ್ತಿಮಾನ್**
**ಮೋದಯನ್ನನುದಿನಂ ನಿಜಾಃ ಪ್ರಜಾಃ ॥೪೬॥**

**ಅವ:**—ಜರಾಸಂಧನ ದೃಷ್ಟಾಂತದಿಂದ ಹೇಳಲು ಪ್ರಾರಂಭಿಸಿದ ಚರಿತ್ರೆಯನ್ನು ಮುಗಿಸುತ್ತಾರೆ–

**ವಾಸುದೇವದಯಿತೋ ಮಹಿಷ್ಠಧೀಃ**
**ವಾಸುದೇವಮಥ ಸಾಧ್ವಯಾಜಯತ್ ।**
**ಧರ್ಮಸೂನುಮಿವ ಧಾರ್ಮಿಕಂ ಪುರಾ**
**ಭೀಮಮೂರ್ತಿರಯಮೇವ ಭೂಸುರಂ ॥೪೭॥**

**ಅ:**—ಸ್ವತೇಜಸಾ ವಿಶ್ವವಿಸ್ಮಯಕರಃ ಜನೈಃ ಪುನಃ ವಂದ್ಯಮಾನಚರಣಃ ಚಿತ್ರದಿಗ್ವಿಜಯಕೀರ್ತ್ಯಕೀರ್ತಿಮಾನ್ ನಿಜಾಃ ಪ್ರಜಾಃ ಅನುದಿನಂ ಮೋದಯನ್ ವಾಸುದೇವದಯಿತಃ ಮಹಿಷ್ಠಧೀಃ 'ಯಃ ಖಲು ಆತ್ಮನಃ ದೈವತಪ್ರತಿಭಯಾ ಮಾನಿನಃ ಅಪಿ ವಶೀಚಕಾರ ಹಿ. (ಯಃ) ಆತ್ಮನಃ ಯಾಯಜೂಕಗುಣಂ ಸ್ಮರನ್, ಯಃ ಜರಾಘಟಿತಗೋತ್ರಃ ಉಚ್ಯತೇ, ಅಮುಂ ಪಾಪಪೂರುಷಂ ಆತ್ಮನಃ ಪ್ರಿಯತಮಕ್ರತೋಃ ಘಾತುಕಂ ಅವೇಕ್ಷ್ಯ, ಅಥ ಸರ್ವಭೂಧರಸಮರ್ಥಪೂರ್ವಕಂ ತಂ ಅಹಿತಂ ಜನಂ ಅಪಿ ನಿರಸ್ಯ, ಅಥ ಭೀಮಮೂರ್ತಿಃ ಅಯಂ ಏವ ಪುರಾ ಧಾರ್ಮಿಕಂ ಧರ್ಮಸೂನುಂ ಇವ ವಾಸುದೇವಂ ಧಾರ್ಮಿಕಂ ಭೂಸುರಂ ಸಾಧು ಅಯಾಜಯತ್ ।

**ಅರ್ಥ :**—ಸ್ವತೇಜಸಾ = ತನ್ನಸಾಮರ್ಥ್ಯದಿಂದ, ಪರಾಕ್ರಮದಿಂದ, ವಿಶ್ವವಿಸ್ಮಯಕರಃ = ಸಮಸ್ತಪ್ರಪಂಚಕ್ಕೆ ಆಶ್ಚರ್ಯವನ್ನುಂಟುಮಾಡುವ, ಜನೈಃ ಪುನಃ = ಜನರಿಂದ ಮತ್ತೂ ಮತ್ತೂ, ವಂದ್ಯಮಾನಚರಣಃ = ವಂದಿಸಲ್ಪಟ್ಟ ಪಾದವುಳ್ಳ, ಚಿತ್ರ = ನಾನಾವಿಧವಾದ (ಆಶ್ಚರ್ಯಕರವಾದ),

Rarest Archiver

ದಿಗ್ವಿಜಯ=ಎಲ್ಲಾ ದಿಕ್ಕಿನಲ್ಲಿರುವ ವಾದಿಗಳನ್ನು (ಶತ್ರುಗಳನ್ನು) ಜಯಿಸಿದ್ದರಿಂದ, ಕೀರ್ತ್ಯ=ಹೊಗಳಲು ಯೋಗ್ಯವಾದ, ಕೀರ್ತಿಮಾನ್=ಕೀರ್ತಿಯುಳ್ಳ, ನಿಜಾಃ ಪ್ರಜಾಃ=ತನ್ನವರಾದ ಭಕ್ತಜನರನ್ನು (ತನ್ನ ಪ್ರಜೆಗಳನ್ನು), ಅನುದಿನಂ=ಪ್ರತಿದಿವಸವೂ, ಮೋದಯನ್=ಆನಂದಪಡಿಸುತ್ತಿರುವ, ವಾಸುದೇವದಯಿತಃ = ಉಪಾಧ್ಯಾಯರ ಪುತ್ರರಾದ ವಾಸುದೇವರಿಗೆ, ವೇದವ್ಯಾಸರಿಗೆ (ಶ್ರೀಕೃಷ್ಣನಿಗೆ) ಪ್ರೀತಿಪಾತ್ರರಾದ, ಮಹಿಷ್ಠಧೀಃ = ಶ್ರೀ ಪೂರ್ಣಪ್ರಜ್ಞರು (ಅತಿಶಯವಾದ ಬುದ್ಧಿಯುಳ್ಳ ಭೀಮಸೇನದೇವರು) ಯಃ ಖಲಃ=ಯಾವ ದುರ್ಜನನು, ಆತ್ಮನಃ=ತನ್ನ, ದೈವತಪ್ರತಿಭಯಾ=ಉಪಾಸ್ಯದೇವತೆಯಿಂದ ಪಡೆದ ಅತಿಶಯವಾದ ಬುದ್ಧಿಯಿಂದ, ಮಾನಿನಃ = ಪಂಡಿತರೆಂದು ಪ್ರತಿಷ್ಠಿತರಾದವರನ್ನು ಕೂಡ, (ಬಲಶಾಲಿಗಳೆಂಬ ಅಭಿಮಾನವುಳ್ಳವರನ್ನು ಕೂಡ), ವಶೀಚಕಾರ ಹಿ=ವಶಮಾಡಿಕೊಂಡಿದ್ದನು ಎಂದು ಪ್ರಸಿದ್ಧವಾಗಿದೆಯೋ, ಯಃ=ಯಾವನು, ಆತ್ಮನಃ =ತನಗೆ, ಯಾಯಜೂಕಗುಣಂ = ಸಾಂಗಯಾಗಮಾಡುವ ಸ್ವಭಾವವುಳ್ಳವರ ಗುಣವನ್ನು, ಸ್ಮರನ್=ಆಲೋಚಿಸುವವನಾಗಿ (ಇದ್ದನೋ), ಯಃ=ಯಾವನು, ಜರಾಘಟಿತಗೋತ್ರಃ, ಜರಾ=ಮುಪ್ಪು, ಇದರಿಂದ, ಘಟಿತ = ಕೂಡಿದ, ಮುಪ್ಪನ್ನು ಹೇಳುವ ಮರಡಿ ಎಂಬ ಶಬ್ದದಿಂದ ಕೂಡಿದ, ಗೋತ್ರಃ = ಕುಲದವನೆಂದು, ಮರಡಿತ್ತಾಯ ವಂಶದವನೆಂದು, (ಜರಾ ಎಂಬ ರಾಕ್ಷಸಿಯಿಂದ ಸೇರಿಸಲ್ಪಟ್ಟ ಶರೀರಉಳ್ಳವನೆಂದು), ಉಚ್ಯತೇ=ಹೇಳಲ್ಪಡುತ್ತಾನೋ, ಅಮುಂ ಪಾಪಪೂರುಷಂ = ಈ ಪಾಪಿಯಾದ ಮರಡಿತ್ತಾಯನನ್ನು (ಜರಾಸಂಧನನ್ನು), ಆತ್ಮನಃ = ತನ್ನ, ಪ್ರಿಯತಮಕ್ರತೋಃ = ಅತ್ಯಂತಪ್ರೀತಿಪಾತ್ರವಾದ ಯಜ್ಞದ (ಅತ್ಯಂತ ಪ್ರೀತಿಪಾತ್ರನಾದ ಉಪಾಧ್ಯಾಯಪುತ್ರನ, ಧರ್ಮರಾಜನ ಯಜ್ಞದ), ಘಾತುಕಂ ವಿಘ್ನಕರ (ನಾಶಕ) ನನ್ನಾಗಿ, ಅವೇಕ್ಷ್ಯ=ಕಂಡು, ಅಥ=ಅನಂತರ, ಸರ್ವ=ಎಲ್ಲಾ ಜನರೂ, ಭೂಧರ=ಬಾರಕೂರಿನರಾಜನೂ, ಸಮರ್ಥ=ಮೂಡುಬಲ್ಲಾಳ, ಪಡುಬಲ್ಲಾಳ ಇವರೂ, (ಎಲ್ಲಾ ರಾಜರು ಮತ್ತು ಸಾಮರ್ಥ್ಯಶಾಲಿಗಳಾದ ಸಾಮಂತಸೇನಾಪತಿಗಳೂ ಮತ್ತು ಶ್ರೀಕೃಷ್ಣನು ಇವರ), ಪೂರ್ವಕಂ = ಪುರಸ್ಸರವಾಗಿ, ತಂ = ಆ ಮರಡಿತ್ತಾಯನನ್ನು

Rarest Archiver

(ಜರಾಸಂಧನನ್ನು), ನಿರಸ್ಯ = ಖಂಡಿಸಿ (ದಂಡಿಸಿ), ಅಥ = ಅನಂತರ, ಭೀಮಮೂರ್ತಿಃ = ಭೀಮಸೇನಾವತಾರವುಳ್ಳ, ಅಯಂ ಏವ = ಈ ಶ್ರೀಮಧ್ವಾಚಾರ್ಯರೇ, ಪುರಾ = ಹಿಂದೆ, ಯಃ ಖಲಃ = ಯಾವ ದುಷ್ಟಜರಾ ಸಂಧನು, ಆತ್ಮನಃ = ತನಗೆ, ಯಾಯಜೂಕಗುಣಂ ಸ್ಮರನ್ = ನರಮೇಧ ಯಾಗವನ್ನು ಮಾಡುವ ಯೋಗ್ಯತೆಯನ್ನು ಸ್ಮರಿಸಿಕೊಳ್ಳುತ್ತಾ, ದೈವತ ಪ್ರತಿಭಯಾ = ರುದ್ರಾದಿದೇವತೆಗಳ ವರದಿಂದ ಲಭಿಸಿದ ಬುದ್ಧಿಯಿಂದ, ಮಾನಿನಃ ಅಪಿ ವಶೀಚಕಾರ ಹಿ = ಪ್ರಬಲರಾದ ಮಾನವಂತರಾದ ರಾಜರನ್ನೂ ವಶಪಡಿಸಿಕೊಂಡಿದ್ದನೆಂದು ಪ್ರಸಿದ್ಧವಾಗಿದೆಯೋ, ಯಃ = ಯಾವನು, ಜರಾಘಟಿತಗೋತ್ರಃಇತಿ ಉಚ್ಯತೇ = ಜರಾ ಎಂಬ ರಾಕ್ಷಸಿ ಯಿಂದ ಸೇರಿಸಲ್ಪಟ್ಟ ಶರೀರವುಳ್ಳವನೆಂದು (ಜರಾಸಂಧನೆಂದು) ಹೇಳಲ್ಪಡು ತ್ತಾನೋ, ಅಮುಂ ಪಾಪಪೂರುಷಂ = ಈ ಪಾಪಿಯನ್ನು ಆತ್ಮನಃ ಪ್ರಿಯ-ತಮಕ್ರತೋಃ = ತನ್ನ ಇಷ್ಟನಾದ ಧರ್ಮರಾಜನ ಯಾಗಕ್ಕೆ, ಘಾತುಕಂ ಅವೇಕ್ಷ್ಯ = ನಾಶಕನನ್ನಾಗಿ ಕಂಡು, ಅಥ = ಅನಂತರ, ಸರ್ವಭೂಧರ ಸಮರ್ಥಪೂರ್ವಕಂ = ಎಲ್ಲಾ ರಾಜಶ್ರೇಷ್ಠರೇ ಮೊದಲಾಗಿ ಉಳ್ಳ, ಅಹಿತಂ ಜನಂ ಅಪಿ ನಿರಸ್ಯ = ಶತ್ರುಜನರನ್ನೂ ಜಯಿಸಿ (ಕೊಂದು) ಧರ್ಮಸೂನುಂ ಇವ = ಧರ್ಮರಾಜನನ್ನೋ ಎಂಬಂತೆ, ವಾಸುದೇವಂ = ವಾಸುದೇವನೆಂಬ, ಧಾರ್ಮಿಕಂ = ಧರ್ಮಾತ್ಮನಾದ, ಭೂಸುರಂ = ಬ್ರಾಹ್ಮಣನನ್ನು, (ತನ್ನ ಪೂರ್ವಾಶ್ರಮದ ವೇದೋಪಾಧ್ಯಾಯರ ಮಗನನ್ನು) ಸಾಧು = ಚೆನ್ನಾಗಿ, ಅಯಾಜಯತ್ = ಯಾಗಮಾಡುವವನನ್ನಾಗಿ ಮಾಡಿದರು. (ಭೀಮಸೇನ ದೇವರು ಧರ್ಮರಾಜನಿಂದ ಯಾಗಮಾಡಿಸಿದಂತೆ ಗುರುಪುತ್ರನಿಂದ ಯಾಗ ಮಾಡಿಸಿದರು.)

ತಾ: —ಶ್ರೀಮಧ್ವಾಚಾರ್ಯರು ಪರಮಾತ್ಮನ ಅನುಗ್ರಹದಿಂದ ತನಗೆ ಬಂದಿರುವ ಸ್ವಾಭಾವಿಕವಾದ ಮತ್ತು ಅದ್ಭುತವಾದ ಶಕ್ತಿಸಾಮರ್ಥ್ಯ ಮತ್ತು ತೇಜಸ್ಸುಗಳಿಂದ ಸಕಲಪ್ರಪಂಚಕ್ಕೂ ಆಶ್ಚರ್ಯವನ್ನುಂಟುಮಾಡು ತ್ತಿದ್ದರು. ಭಕ್ತಜನರು ಪರಮಭಕ್ತಿಯಿಂದ ಆಚಾರ್ಯರ ಚರಣಗಳನ್ನು ಪುನಃ ಪುನಃ ವಂದಿಸುತ್ತಿದ್ದರು. ಆಚಾರ್ಯರ ದಿವ್ಯವಾದ ಮತ್ತು ಅದ್ಭುತ ವಾದ ದಿಗ್ವಿಜಯದ ಕೀರ್ತಿಯು ಎಲ್ಲಾ ಕಡೆಗಳಲ್ಲಿಯೂ ಹರಡಿತ್ತು.

Rarest Archiver

ಜನರು ಆ ಕೀರ್ತಿಯನ್ನು ಹೊಗಳಿ ಹಾಡುತ್ತಿದ್ದರು. ಶ್ರೀಕೃಷ್ಣನನ್ನು ಸಂತೋಷಪಡಿಸಿದ ಆಚಾರ್ಯರು ಭಕ್ತಜನರನ್ನೂ ತಮ್ಮ ಉಪದೇಶದಿಂದ ಸಂತೋಷಪಡಿಸುತ್ತಿದ್ದರು. ಇಂತಹ ಆಚಾರ್ಯರು ಹಿಂದೆ ದ್ವಾಪರಯುಗ ದಲ್ಲಿ ಭೀಮಸೇನದೇವರು ಶತ್ರುಗಳನ್ನು ನಿರಾಕರಿಸಿ ಧರ್ಮರಾಜನಿಂದ ರಾಜಸೂಯಯಾಗ ಮಾಡಿಸಿದಂತೆ, ತನ್ನ ಯಾಗಕ್ಕೆ ವಿಘ್ನಮಾಡುವವರನ್ನು ದೂರದಲ್ಲಿ ಇರಿಸಿ, ತನ್ನ ಉಪಾಧ್ಯಾಯಪುತ್ರನಿಂದ ರಾಜಸೂಯಯಾಗ ದಂತಿರುವ ಯಾಗವನ್ನು ಮಾಡಿಸಿದರು. ಈ ಯಾಗಕ್ಕೆ ರಾಜಸೂಯ ಯಾಗದ ಸಾಮ್ಯವು ಹೇಗೆಂದರೆ-

ಹಿಂದೆ ದ್ವಾಪರಯುಗದಲ್ಲಿ ಜರಾಸಂಧನೆಂಬ ಒಬ್ಬ ದುಷ್ಟರಾಜನಿದ್ದನು. ಅವನು ಈಶ್ವರನನ್ನು ನರಮೇಧಯಾಗದಿಂದ ಸಂತೋಷಪಡಿಸುವುದಕ್ಕಾಗಿ ಸಾವಿರಾರು ರಾಜರನ್ನು ಬಂಧನದಲ್ಲಿಟ್ಟಿದ್ದನು. ಯಾಗಮಾಡಿ ಶಂಕರಾದಿ ದೇವತೆಗಳನ್ನು ಸಂತೋಷಪಡಿಸಲು ತಾನೇ ಸಮರ್ಥನು, ಯಾಗಮಾಡುವ ವರಲ್ಲಿ ತಾನೇ ಶ್ರೇಷ್ಠನು ಎಂದೂ ತಿಳಿದಿದ್ದನು. ಈಶ್ವರನ ವರಪ್ರಸಾದದಿಂದ ಅವನಿಗೆ ಎಲ್ಲಾ ಶಸ್ತ್ರಾಸ್ತ್ರಗಳೂ ಸಿಕ್ಕಿದ್ದುವು. ಅವನು ತನ್ನ ಬುದ್ಧಿಶಕ್ತಿ ಯಿಂದ ತನಗಿಂತ ಪ್ರಬಲರಾದ ರಾಜರನ್ನೂ ವಶಪಡಿಸಿಕೊಂಡಿದ್ದನು. ಇವನು ಪರಮಸಾತ್ತ್ವಿಕನಾದ ಧರ್ಮರಾಜನ ರಾಜಸೂಯಯಾಗಕ್ಕೆ ವಿಘ್ನಕಾರಿ ಯಾಗಿದ್ದನು. ಇಂತಹ ದುಷ್ಟನನ್ನು ಶ್ರೀಮಧ್ವಾಚಾರ್ಯರೇ ಹಿಂದೆ ಭೀಮಸೇನನಾಗಿ ಅವತರಿಸಿದ್ದಾಗ, ಶ್ರೀಕೃಷ್ಣ ಅರ್ಜುನರ ಎದುರು ಮತ್ತು ಇತರ ಸಾಮಂತರಾಜರು ಮತ್ತು ಸೈನಿಕರ ಎದುರು ಮಲ್ಲಯುದ್ಧದಲ್ಲಿ ಜಯಿಸಿಕೊಂಡರು. ಇತರ ರಾಜರನ್ನೂ ಜಯಿಸಿ, ತನಗೂ ಅತ್ಯಂತ ಪ್ರಿಯವಾದ ರಾಜಸೂಯಯಾಗವನ್ನು ತಮ್ಮ ಅಣ್ಣನಾದ ಧರ್ಮರಾಜ ನಿಂದ ಮಾಡಿಸಿದ್ದರು. ಅದರಂತೆ ಈಗಲೂ ಕೂಡ ಆಚಾರ್ಯರು ಜರಾ- ಘಟಿತಗೋತ್ರ = ಜರಾಸಂಧಗೋತ್ರವುಳ್ಳವನು, (ಜರಾ = ಮರಡಿ ಎಂಬ ಪದದಿಂದ, ಘಟಿತ = ಕೂಡಿದ, ಗೋತ್ರ = ವಂಶವುಳ್ಳ ಮರಡಿತ್ತಾಯ) ಎಂಬವನನ್ನು ಸೋಲಿಸಿ, ದೂರೀಕರಿಸಿ ತಮ್ಮ ಗುರುಪುತ್ರನಿಂದ ಯಾಗ ಮಾಡಿಸಿದರು. ದುಷ್ಟನಾದ ಈ ಮರಡಿತ್ತಾಯನು ದೇವತೋಪಾಸನೆಯಿಂದ ಪ್ರಾಪ್ತವಾದ ಪ್ರತಿಭಾಶಕ್ತಿಯಿಂದ ಅತ್ಯಂತಸಮರ್ಥರೂ ಅಭಿಮಾನಶಾಲಿಗಳೂ

Rarest Archiver

ಆದ ಪೂಜ್ಯರಾದ ಜ್ಞಾನಿಗಳನ್ನು ವಶಪಡಿಸಿಕೊಂಡಿದ್ದನು. ಯಾಗಮಾಡುವುದರಲ್ಲಿ ತಾನೇ ಸಮರ್ಥನೆಂದೂ, ತನಗೇ ವಿಧಿಪೂರ್ವಕವಾಗಿ ಯಾಗಮಾಡುವವನೆಂಬ ಕೀರ್ತಿಯು ಸಲ್ಲತಕ್ಕದೆಂದೂ ಭಾವಿಸಿದ್ದನು. ಆಚಾರ್ಯರ ಪೂರ್ವಾಶ್ರಮದ ವೇದೋಪಾಧ್ಯಾಯರ ಪುತ್ರನಾದ ವಾಸುದೇವ ಎಂಬವನಲ್ಲಿ ಇವನು ಒಳ್ಳೆಯ ಕುಲದವನಲ್ಲವೆಂದು ಮಿಥ್ಯಾಪವಾದವನ್ನು ಹೊರಿಸಿ ಇವನಿಂದ ಯಾಗಮಾಡಿಸಬಾರದೆಂದು ಅಡ್ಡಿಪಡಿಸುತ್ತಿದ್ದನು. ಈ ಪ್ರಾಂತದಲ್ಲಿ ಯಾಗ-ಹೋಮಮಾಡಲು ತಾನೇ ಸಮರ್ಥನೆಂದು ಜಂಬಕೊಚ್ಚಿಕೊಳ್ಳುತ್ತಿದ್ದನು. ಇಂತಹ ಮರಡಿತ್ತಾಯ ಬ್ರಾಹ್ಮಣನನ್ನು ಆಚಾರ್ಯರು ವಾದದಲ್ಲಿ ಸೋಲಿಸಿದರು. ಬಾರಕೂರಿನ ರಾಜನೂ, ಉಡುಪಿಯ ಪೂರ್ವ ಪಶ್ಚಿಮಗಳಲ್ಲಿರುವ ಮೂಡುಬಲ್ಲಾಳರು ಪಡುಬಲ್ಲಾಳರೆಂಬ ಸಮರ್ಥರಾದ ವಿದ್ವಾಂಸರೂ, ಸಮರ್ಥರಾದ ಇತರಪಂಡಿತರೂ ಇರುವ ಸಭೆಯಲ್ಲಿ ಪರಾಜಿತನಾದ ಮರಡಿತ್ತಾಯನನ್ನು ನಿರಾಕರಿಸಿ, ರಾಜಾದಿಗಳ ಎದುರಲ್ಲಿ ಹಿಂದೆ ಹೇಳಿದ ವಾಸುದೇವನಿಂದ ಒಂದು ಉತ್ತಮವಾದ ಯಾಗವನ್ನು ಆಚಾರ್ಯರು ಮಾಡಿಸಿದರು.

**ವಿಶೇಷಾಂಶ:—** ದೈವತಪ್ರತಿಭಯಾ = ದೈವತಲಬ್ಧಪ್ರಜ್ಞಯಾ, ರುದ್ರಾಖ್ಯದೇವವರಜಪ್ರಜ್ಞಯಾ = **ಮರಡಿತ್ತಾಯನು** ರುದ್ರೋಪಾಸನೆಯಿಂದಪಡೆದಿದ್ದ ವಿಶೇಷವಾದ ಪ್ರಜ್ಞಾಶಕ್ತಿಯಿಂದ; ಮರಡಿತ್ತಾಯನು ರುದ್ರದೇವರ ಉಪಾಸನೆಯಿಂದ ವಿಶೇಷವಾದ ಪ್ರತಿಭಾಶಕ್ತಿಯನ್ನು ಪಡೆದಿದ್ದನು ಎಂದು ಅಭಿಪ್ರಾಯ. ಜರಾಘಟಿತಗೋತ್ರಃ = ಜರಾಸಂಬದ್ಧಗಾತ್ರಃ, ಮರಡಿತ್ತಾಯ ಇತಿ ಅಪಭ್ರಷ್ಟಭಾಷಾ = ಜರಾ ಅಂದರೆ ಮುಪ್ಪು, ಅದನ್ನು ಹೇಳುವ ಮರಡಿ ಎಂಬ ದೇಶಭಾಷೆಯ ಶಬ್ದದಿಂದ ಕೂಡಿದ ವಂಶದ ಹೆಸರಿನಿಂದ ಕೂಡಿದವನು, **ಮರಡಿತ್ತಾಯವಂಶದವನು**. ಜರಾಸಂಧನೂ ಕೂಡ ಜರಾಘಟಿತಗೋತ್ರನು, ಇಬ್ಬರು ತಾಯಂದಿರು ಪ್ರತ್ಯೇಕವಾಗಿ ಶಿಶುವಿನ ಒಂದೊಂದು ಭಾಗವನ್ನು ಪ್ರಸವಿಸಿದ್ದರು. ಆ ಎರಡು ಖಂಡಗಳನ್ನು ಜರಾ ಎಂಬ ರಾಕ್ಷಸಿಯು ಜೋಡಿಸಿದಾಗ ಶಿಶುವು ಬದುಕಿತು. ಇದರಿಂದ ಅವನಿಗೆ ಜರಾಸಂಧ ಅಂದರೆ ಜರಾ ಎಂಬ ರಾಕ್ಷಸಿಯಿಂದ ಕೂಡಿಸಲ್ಪಟ್ಟವನು ಎಂದು ಹೆಸರು ಬಂತು. ಪ್ರಿಯತಮಕ್ರತೋಃ = ಪ್ರಿಯತಮಃ ಉಪಾಧ್ಯಾಯಸುತಃ

Rarest Archiver

ಯುಧಿಷ್ಠಿರಶ್ಚ=ಪ್ರಿಯತಮ ಎಂದರೆ ತನಗೆ ಪ್ರೀತಿಪಾತ್ರನಾದ ಉಪಾಧ್ಯಾಯರ ಪುತ್ರ ಮತ್ತು ಧರ್ಮರಾಜ ಎಂದು ಅರ್ಥ. ಭೂಧರಃ ರಾಜಾ=ಭೂಧರ ಎಂದರೆ ಬಾಲ(ರ) ಕನ್ಯಾಪುರ (ಬಾರಕೂರಿನ) ದ ರಾಜನು ; ಸಮರ್ಥೌ= ಪೂರ್ವಪಶ್ಚಿಮಪಕ್ಷಾಧಿಪೌ=ಮೂಡುಬಲ್ಲಾಳರು ಮತ್ತು ಪಡುಬಲ್ಲಾಳರು ಎಂದು ಅರ್ಥ. ಭೂಧರಸಮರ್ಥಾಃ ರಾಜಶ್ರೇಷ್ಠಾಶ್ಚ = (ಭೀಮಸೇನಪಕ್ಷದಲ್ಲಿ) ರಾಜಶ್ರೇಷ್ಠರು. ಇವರ ಸಹಿತರಾಗಿ ಶತ್ರುಗಳನ್ನು ಪರಾಜಯಗೊಳಿಸಿ, ಎಂದು ಅರ್ಥ. (ಭಾವಪ್ರಕಾಶಿಕಾ)

ವಿ:—ಮಾನಃ ಏಷಾಂ ಅಸ್ತೀತಿ ಮಾನಿನಃ (ಮಾನಿನ್ ಶಬ್ದ) ತಾನ್; ದೇವತಾಯಾಃ ಆಗತಾ ದೈವತಾ, ದೈವತಾ ಚ ಸಾ ಪ್ರತಿಭಾ ಚ ದೈವತಪ್ರತಿಭಾ ತಯಾ, ಯಾಯಜೂಕಸ್ಯ ಗುಣಃ ಯಾಯಜೂಕಗುಣಃ ತಂ, ಜರಯಾ ಘಟಿತಂ ಗೋತ್ರಂ ಯಸ್ಯ ಸಃ ಜರಾಘಟಿತಗೋತ್ರಃ ; ಅತಿಶಯೇನ ಪ್ರಿಯಃ ಪ್ರಿಯತಮಃ ಪ್ರಿಯತಮಸ್ಯ ಕ್ರತುಃ ಪ್ರಿಯತಮಕ್ರತುಃ ತಸ್ಯ, ಪಾಪಂ ಅಸ್ಯ ಅಸ್ತೀತಿ ಪಾಪಃ ಪಾಪಶ್ಚಾಸೌ ಪೂರುಷಶ್ಚ ಪಾಪ-ಪೂರುಷಃ ತಂ, ನ ಹಿತಃ ಅಹಿತಃ ತಂ, ಸರ್ವೇ ಚ ಭೂಧರಾಶ್ಚ (ಭೂಧರಶ್ಚ) ಸಮರ್ಥೌ ಚ (ಸಮರ್ಥಾಶ್ಚ, ಸಮರ್ಥಶ್ಚ) ಸರ್ವಭೂಧರಸಮರ್ಥಾಃ, ತೇ ಪೂರ್ವೇ ಯಸ್ಯ ಸಃ ಸರ್ವ....ಕಃ ತಂ, ಸರ್ವ....ರ್ಥಾಃ ಪೂರ್ವೇ ಯಸ್ಮಿನ್ ಕರ್ಮಣಿ ತದ್ಯಥಾ ಭವತಿ ತಥಾ; (ಕ್ರಿ. ವಿ.) ಕರೋತೀತಿ ಕರಃ, ವಿಶ್ವಸ್ಯ ವಿಸ್ಮಯಃ ವಿಶ್ವವಿಸ್ಮಯಃ, ತಸ್ಯ ಕರಃ ವಿಶ್ವ-ವಿಸ್ಮಯಕರಃ, ಸ್ವಸ್ಯ ತೇಜಃ ಸ್ವತೇಜಃ ತೇನ ಸ್ವತೇಜಸಾ ; ವಂದ್ಯಮಾನೌ ಚರಣೌ ಯಸ್ಯ ಸಃ ವಂದ್ಯಮಾನಚರಣಃ, ದಿಶಾಂ ವಿಜಯಃ ದಿಗ್ವಿಜಯಃ, ಚಿತ್ರಶ್ಚಾಸೌ ದಿಗ್ವಿಜಯಶ್ಚ ಚಿತ್ರದಿಗ್ವಿಜಯಃ ಚಿತ್ರದಿಗ್ವಿಜಯೇನ ಕೀರ್ತ್ಯಾ ಕೀರ್ತಿಃ ಅಸ್ಯ ಅಸ್ತೀತಿ ಚಿತ್ರದಿಗ್ವಿಜಯಕೀರ್ತ್ಯಾಕೀರ್ತಿಮಾನ್, ವಾಸು-ದೇವಸ್ಯ ದಯಿತಃ ವಾಸುದೇವದಯಿತಃ, ಅತಿಶಯೇನ ಮಹತೀ ಮಹಿಷ್ಠಾ, ಮಹಿಷ್ಠಾ ಧೀಃ ಯಸ್ಯ ಸಃ ಮಹಿಷ್ಠಧೀಃ, ಧರ್ಮಸ್ಯ ಸೂನುಃ ಧರ್ಮ-ಸೂನುಃ ತಂ, ಭೀಮಸ್ಯ ಮೂರ್ತಿಃ ಯಸ್ಯ ಸಃ ಭೀಮಮೂರ್ತಿಃ, ಭುವಃ ಸುರಃ ಭೂಸುರಃ ತಂ,

Rarest Archiver

ಕ್ರಿ :—ಅವಶಂ ವಶಂ ಸಂಪದ್ಯಮಾನಂ ಚಕಾರ ವಶೀಚಕಾರ, ಚಕಾರ ಚಕ್ರತುಃ ಚಕ್ರುಃ ಇತ್ಯಾದಿ ಡು(ಕೃ)ಞ್ ಕರಣೇ ಲಿಟ್. ಉಚ್ಯತೇ ಉಚ್ಯೇತೇ ಉಚ್ಯಂತೇ, ಬ್ರೂಞ್ ವ್ಯಕ್ತಾಯಾಂ ವಾಚಿ ಕರ್ಮಣಿ ಲಟ್; ಅಯಾಜಯತ್ ಅಯಾಜಯತಾಂ ಆಯಾಜಯನ್ ಇತ್ಯಾದಿ. ಯಜ ದೇವಪೂಜಾಸಂಗತಿಕರಣದಾನೇಷು ಣಿಜಂತ, ಲಙ್.

ಅವ :—ಈ ಯಾಗದಲ್ಲಿ ಶ್ರೀಮಧ್ವಾಚಾರ್ಯರ ತಮ್ಮಂದಿರೇ ಮುಖ್ಯ ಪುರೋಹಿತರು (ಹೋತೃಗಳು) ಆಗಿದ್ದರು —

**ಯಾಜ್ಯಯಾ ಸಮುಚಿತಾನುವಾಕ್ಯಯಾ**
**ಸಪ್ರವರ್ಗ್ಯವಿಭವೈರಭಿಷ್ಟವೈಃ ।**
**ವಿಶ್ವವೇತ್ತುರನುಜೋಽತ್ರ ಹೋತೃತಾಂ**
**ಪ್ರಾಪ್ಯ ದೈವತತತೀರತೋಷಯತ್ ॥೪೮॥**

ಅ :—ವಿಶ್ವವೇತ್ತುಃ ಅನುಜಃ ಅತ್ರ ಹೋತೃತಾಂ ಪ್ರಾಪ್ಯ ಸಮುಚಿತಾನುವಾಕ್ಯಯಾ ಯಾಜ್ಯಯಾ, ಸಪ್ರವರ್ಗ್ಯವಿಭವೈಃ ಅಭಿಷ್ಟವೈಃ ದೈವತತತೀಃ ಅತೋಷಯತ್ ।

ಅರ್ಥ :—ವಿಶ್ವವೇತ್ತುಃ=ಸಮಸ್ತವನ್ನೂ ತಿಳಿದ (ಅಸ್ಯ) ಶ್ರೀಪೂರ್ಣಪ್ರಜ್ಞಾಚಾರ್ಯರ, ಅನುಜಃ = ತಮ್ಮನು, ಅತ್ರ = ಈ ಯಾಗದಲ್ಲಿ, ಹೋತೃತಾಂ= ಹೋತೃ ಎಂಬ ಋಗ್ವೇದವನ್ನು ಬಲ್ಲ ಋತ್ವಿಜನ ಸ್ಥಾನವನ್ನು (ಋಗ್ವೇದದ ಪೌರೋಹಿತ್ಯವನ್ನು), ಪ್ರಾಪ್ಯ = ಹೊಂದಿ, ಸಮುಚಿತಾನುವಾಕ್ಯಯಾ = ಯೋಗ್ಯವಾದ ಅನುವಾಕ್ಯಾ ಎಂಬ ಮಂತ್ರವುಳ್ಳ, ಯಾಜ್ಯಯಾ = ಯಾಜ್ಯಾ ಎಂಬ ಮಂತ್ರದಿಂದ, ಸಪ್ರವರ್ಗ್ಯವಿಭವೈಃ = ಪ್ರವರ್ಗ್ಯವಿಭವಗಳಿಂದ ಕೂಡಿದ, ಅಭಿಷ್ಟವೈಃ=ಅಭಿಷ್ಟವಮಂತ್ರಗಳಿಂದಲೂ, ದೈವತತತೀಃ = ದೇವತೆಗಳ ಸಮೂಹಗಳನ್ನು, ಅತೋಷಯತ್=ಸಂತೋಷಪಡಿಸಿದರು.

**ಕಠಿನಶಬ್ದಾರ್ಥ :**—ಪೂರ್ವಭಾವಿನೀ ಋಕ್ ಅನುವಾಕ್ಯಾ, ಹೋಮಕ್ಕಿಂತ ಪೂರ್ವದಲ್ಲಿ ಹೇಳುವ ಋಕ್ಕು ಅನುವಾಕ್ಯಾ. ಕೃಣುಷ್ವಪಾಜಃ ಪ್ರಸಿತಿಂ ನ ಪೃಥ್ವೀಂ—ತಪಿಷ್ಠೈಃ ॥ ಎಂದು ಹೇಳಿ ಅನಂತರ ಹೇಳುವ ಓಂ ಖಂತವೇ-

Rarest Archiver

ಭ್ರಮಾಸ–ಎಂಬ ಮಂತ್ರವು ಅನುವಾಕ್ಯಾ ಎಂದು ಹೇಳಲ್ಪಡುತ್ತದೆ. ಯಜ ಎಂದು ಹೇಳಿದ ಮೇಲೆ ಈ ಮಂತ್ರವನ್ನು ಹೇಳಿ ವೌಷಟ್ ಎಂದು ಹೇಳಬೇಕು. ಅಧ್ವರ್ಯುಪ್ರೈಷಾನಂತರಾ ಪ್ರಣವಾಂತಾ ಯಾಜ್ಯಾ = ಅನುಬ್ರೂಹಿ ಎಂದು ಅಧ್ವರ್ಯುವು ಪ್ರೈಷಮಂತ್ರವನ್ನು (ಅನುಮತಿವಾಕ್ಯವನ್ನು) ಹೇಳಿದ ಮೇಲೆ ಹೇಳಬೇಕಾಗಿರುವ ಓಂಕಾರವು ಕೊನೆಯಲ್ಲಿ ಉಳ್ಳ ಮಂತ್ರವು ಯಾಜ್ಯಾ। ವಷಟ್ಕಾರಾಂತಾಃ ಯಾಜ್ಯಮಹಾವೀರಪ್ರಸ್ತೋತ್ರೃಸಾಮಾದಯಃ ಪ್ರವರ್ಗ್ಯವಿಭವಾಃ = ವಷಟ್ಕಾರಾಂತವಾದ ಯಾಜ್ಯಮಹಾವೀರಪ್ರಸ್ತೋತ್ರೃಸಾಮಾದಿಗಳು ಪ್ರವರ್ಗ್ಯವೈಭವಗಳು. ಅನವರತಂ ಉಚ್ಯಮಾನಾಃ ಪ್ರಣವಾಂತಾಃ ಬ್ರಹ್ಮಜಜ್ಞಾನಂ ಪ್ರಥಮಂ ಪುರಸ್ತಾತ್ ಇತ್ಯಾದ್ಯಾಃ ಋಚಃ ಅಭಿಷ್ಟವಾಃ = ನಿರಂತರವಾಗಿ ಹೇಳಲ್ಪಡುವ ಓಂಕಾರವು ಕೊನೆಯಲ್ಲಿ ಉಳ್ಳ ಬ್ರಹ್ಮಜಜ್ಞಾನಂ ಪ್ರಥಮಂ ಪುರಸ್ತಾತ್ ಇತ್ಯಾದಿ ಋಕ್ಕುಗಳು ಅಭಿಷ್ಟವಗಳು.

ತಾ :—ಈ ಯಾಗದಲ್ಲಿ ಶ್ರೀಪೂರ್ಣಪ್ರಜ್ಞರ ತಮ್ಮಂದಿರು ಋಗ್ವೇದವನ್ನು ಬಲ್ಲ ಹೋತೃ ಎಂಬ ಋತ್ವಿಜನ ಸ್ಥಾನವನ್ನು ವಹಿಸಿದರು. ಆಚಾರ್ಯರ ತಮ್ಮಂದಿರು ಅವರ ಅನುಗ್ರಹದಿಂದ ಯಜ್ಞವಿಧಾನಗಳನ್ನೆಲ್ಲಾ ಬಲ್ಲವರಾಗಿದ್ದರು. ಅವರು ಹೋಮಕ್ಕಿಂತ ಪೂರ್ವದಲ್ಲಿ ಪಠಿಸಬೇಕಾದ ಪುರೋನುವಾಕ್ಯಾ ಎಂಬ ಮಂತ್ರಗಳಿಂದ ಕೂಡಿದ ಯಾಜ್ಯಾ ಎಂಬ ಮಂತ್ರಗಳಿಂದಲೂ, ವಷಟ್‌ಕಾರಾಂತವಾದ ಯಾಜ್ಯಮಹಾವೀರಪ್ರಸ್ತೋತ್ರೃಸಾಮಗಳಿಂದ ಸಹಿತವಾದ ಬ್ರಹ್ಮಜಜ್ಞಾನಂ ಇತ್ಯಾದಿಪ್ರಣವಾಂತಋಕ್ಕುಗಳಿಂದಲೂ ದೇವತೆಗಳ ಗುಂಪನ್ನು ಸಂತೋಷಗೊಳಿಸಿದರು.

ವಿ:—ಸಮುಚಿತಾ ಅನುವಾಕ್ಯಾ ಯಸ್ಯಾಃ ಸಾ ಸಮುಚಿತಾನುವಾಕ್ಯಾ ತಯಾ, ಪ್ರವರ್ಗ್ಯಾಣಾಂ ವಿಭವಾಃ ಪ್ರವರ್ಗ್ಯವಿಭವಾಃ, ತೈಃ ಸಹ ವರ್ತಂತೇ ಇತಿ ಸಪ್ರವರ್ಗ್ಯವಿಭವಾಃ ತೈಃ, ವಿಶ್ವಂ ವೇತ್ತೀತಿ ವಿಶ್ವವೇತ್ತಾ ತಸ್ಯ, ಹೋತುಃಭಾವಃ ಹೋತೃತಾ ತಾಂ; ದೈವತಾನಾಂ ತತಯಃ ದೈವತತತಯಂ ತಾಃ ;

ಕ್ರಿ:—ಅತೋಷಯತ್ ಅತೋಷಯತಾಂ ಅತೋಷಯನ್ ಇತ್ಯಾದಿ. ತುಷ ಪ್ರೀತೌ ಣಿಜಂತ, ಲಙ್.

Rarest Archive

**ಅವ:**—ಆಚಾರ್ಯರ ತಮ್ಮಂದಿರು ಯಜ್ಞಭಾಗವನ್ನು ಬಯಸುವ ರಾಕ್ಷಸ ಮತ್ತು ದೈತ್ಯರನ್ನು ದೂರ ಮಾಡಿ ದೇವತೆಗಳಿಗೆ ಮಾತ್ರ ಆ ಯಜ್ಞ ಭಾಗವು ಸೇರುವಂತೆ ಮಾಡಿದರು—

**ಸ ಪ್ರಯುಜ್ಯ ನಿಶಿತಾ ನಿಶಾತಧೀ-**
**ರ್ವೈಶ್ವದೇವವರಶಸ್ತ್ರಸಂತತೀಃ ।**
**ರಾಕ್ಷಸಾಸುರನಿರಾಸಕೃತ್ ಸುರಾನ್**
**ವೀರವರ್ಯ ಇವ ಭಾಗಮಾಪಯತ್ ॥ ॥೪೯॥**

ಅ :—ನಿಶಾತಧೀಃ ಸಃ ನಿಶಿತಾಃ ವೈಶ್ವದೇವವರಶಸ್ತ್ರಸಂತತೀಃ ಪ್ರಯುಜ್ಯ ರಾಕ್ಷಸಾಸುರನಿರಾಸಕೃತ್ ಸುರಾನ್ ಭಾಗಂ ವೀರವರ್ಯಃ ಇವ ಆಪಯತ್.

**ಅರ್ಥ:**—ನಿಶಾತಧೀಃ = ತೀಕ್ಷ್ಣವಾದ ಬುದ್ಧಿಯುಳ್ಳ, ಸಃ = ಶ್ರೀ ಮಧ್ವಾಚಾರ್ಯರ ಆ ತಮ್ಮಂದಿರು, ನಿಶಿತಾಃ = ಸಾಮರ್ಥ್ಯದಿಂದ ಕೂಡಿದ, (ಹರಿತವಾದ) ವೈಶ್ವದೇವ = ವಿಶ್ವೇದೇವಸಂಬಂಧವುಳ್ಳ, ವರ = ಉತ್ತಮ ವಾದ, ಶಸ್ತ್ರ = ಸ್ತೋತ್ರರೂಪವಾದ ಶಸ್ತ್ರವೆಂಬ ಮುಕ್ಕುಗಳ (ಆಯುಧಗಳ) ಸಂತತೀಃ = ಸಮೂಹಗಳನ್ನು, ಪ್ರಯುಜ್ಯ = ಪ್ರಯೋಗಿಸಿ, ರಾಕ್ಷಸ = ರಾಕ್ಷಸರು, ಅಸುರ = ದೈತ್ಯರು, ಇವರ, ನಿರಾಸಕೃತ್ (ಸನ್) = ತಿರಸ್ಕಾರ ವನ್ನು ಮಾಡುವವರಾಗಿ, ಸುರಾನ್ = ದೇವತೆಗಳನ್ನು, ಭಾಗಂ = ಹವಿರ್ಭಾಗ ವನ್ನು, ವೀರವರ್ಯಃ ಇವ = ಉತ್ತಮನಾದ ಶೂರನಂತೆ, ಆಪಯತ್ = ಹೊಂದಿಸಿದರು.

**ತಾ:**—ನ್ಯಾಯಮಾರ್ಗದಲ್ಲಿರುವ ವೀರಶ್ರೇಷ್ಠನೊಬ್ಬನು ಹರಿತವಾದ ಆಯುಧಗಳನ್ನು ಉಪಯೋಗಿಸಿ ಯುದ್ಧಮಾಡಿ ಅನ್ಯಾಯದಿಂದ ಧನದ ಭಾಗವನ್ನು ಬಯಸುವ ಜನರನ್ನು ದೂರಮಾಡಿ ಆ ಧನದ ಯಥೋಚಿತ ವಾದ ಭಾಗವನ್ನು ಅರ್ಹರಾದವರಿಗೆ ಮಾತ್ರ ಕೊಡಿಸುತ್ತಾನೆ. ಅದರಂತೆ ಯಾಗ ಮಾಡಿಸುವುದರಲ್ಲಿ ಅತ್ಯಂತಕುಶಲರಾದ ಆಚಾರ್ಯರ ತಮ್ಮಂದಿರು ಅಗ್ನಿ, ಮಾರುತ, ಮರುತ್ವಂತ ಎಂಬ ವಿಶ್ವೇದೇವತೆಗಳ ಸಂಬಂಧವುಳ್ಳ ಸಮರ್ಥವಾದ ಮಂತ್ರಗಳನ್ನು ಪ್ರಯೋಗಿಸಿ ರಾಕ್ಷಸರು ಮತ್ತು ಅಸುರರು

Rarest Archives

ಯಜ್ಞಭಾಗವನ್ನು ತೆಗೆದುಕೊಳ್ಳದಂತೆ ಮಾಡಿ, ಯಜ್ಞಭಾಗವು ದೇವತೆಗಳಿಗೆ ಮಾತ್ರ ಸಲ್ಲುವಂತೆ ಮಾಡಿದರು. (ಹೋತೃ ಎಂಬ ಋತ್ವಿಜನು ಯಜ್ಞದಲ್ಲಿ ಪಠಿಸುವ ಋಕ್ಕುಗಳಿಗೆ ಶಸ್ತ್ರ ಎಂದು ಹೆಸರು.)

**ವಿ:**—ನಿಶಾತಾ ಧೀಃ ಯಸ್ಯ ಸಃ ನಿಶಾತಧೀಃ, ವಿಶ್ವೇ ಚ ತೇ ದೇವಾಶ್ಚ ವಿಶ್ವದೇವಾಃ ವಿಶ್ವದೇವಾನಾಂ ಇಮಾನಿ ವೈಶ್ವದೇವಾನಿ, ವರಾಣಿ ಚ ತಾನಿ ಶಸ್ತ್ರಾಣಿ ಚ ವರಶಸ್ತ್ರಾಣಿ, ವೈಶ್ವದೇವಾನಿ ಚ ತಾನಿ ವರಶಸ್ತ್ರಾಣಿ ಚ ವೈಶ್ವದೇವವರಶಸ್ತ್ರಾಣಿ, ತೇಷಾಂ ಸಂತತಯಃ ವೈಶ್ವದೇವವರಶಸ್ತ್ರಸಂತತಯಃ ತಾಃ ; ರಾಕ್ಷಸಾಶ್ಚ ಅಸುರಾಶ್ಚ ರಾಕ್ಷಸಾಸುರಾಃ, ತೇಷಾಂ ನಿರಾಸಃ ರಾಕ್ಷಸಾಸುರನಿರಾಸಃ, ತಂ ಕರೋತೀತಿ ರಾಕ್ಷಸಾಸುರನಿರಾಸಕೃತ್, ವೀರೇಷು ವರ್ಯಃ ವೀರವರ್ಯಃ ;

**ಕ್ರಿ :**—ಆಪಯತ್ ಆಪಯತಾಂ ಆಪಯನ್ ಇತ್ಯಾದಿ. ಆಪ್ಲೃ ವ್ಯಾಪ್ತೌ ಣಿಜಂತ ಲಙ್.

**ಅನ :**—ಪ್ರಾಣಾವತಾರರಾದ ಆಚಾರ್ಯರ ಸಂನಿಧಾನದಲ್ಲಿ ನಡೆದ ಆ ಯಾಗವನ್ನು ವರ್ಣಿಸಲು ಯಾರಿಗೆ ಸಾಧ್ಯ !

**ವಾಯುನಾ ತ್ರಿರಪಿ ಪೂರ್ವಪಾಯಿನಾ**
**ಸರ್ವದೈವತಜಿತಾ ತರಸ್ವಿನಾ ।**
**ಯೋಽಪರೋಕ್ಷವಪುಷಾಪ್ಯಪೇಕ್ಷಿತಃ**
**ಕೋಽತ್ರ ವರ್ಣಯತಿ ತಂ ಮಹಾಕ್ರತುಂ** ॥೫೦॥

**ಅ :**—ತ್ರಿಃ ಅಪಿ ಪೂರ್ವಪಾಯಿನಾ ಸರ್ವದೈವತಜಿತಾ ತರಸ್ವಿನಾ ವಾಯುನಾ ಯಃ ಅಪರೋಕ್ಷವಪುಷಾ ಅಪಿ ಅಪೇಕ್ಷಿತಃ ಅತ್ರ ತಂ ಮಹಾಕ್ರತುಂ ಕಃ ವರ್ಣಯತಿ ?

**ಅರ್ಥ :**—ತ್ರಿಃ ಅಪಿ = ಮೂರು ಸಲವೂ, ಪೂರ್ವಪಾಯಿನಾ = ಸೋಮರಸವನ್ನು ಮೊದಲು ಕುಡಿದ, ಸರ್ವ = ಎಲ್ಲಾ, ದೈವತ = ದೇವತೆಗಳನ್ನು, ಜಿತಾ = ಜಯಿಸಿದ, ತರಸ್ವಿನಾ = ವೇಗ ಮತ್ತು ಬಲವುಳ್ಳ, ವಾಯುನಾ = ಮುಖ್ಯಪ್ರಾಣದೇವರಿಂದ, ಯಃ = ಯಾವ ಯಾಗವು,

Rarest Archive

ಅಪರೋಕ್ಷವಪುಷಾ ಅಪಿ=ಪ್ರತ್ಯಕ್ಷವಾದ ಮಧ್ವರೂಪದಿಂದಲೂ, ಅಪೇಕ್ಷಿತಃ =(ಆಸೀತ್) ಚೆನ್ನಾಗಿ ಪೂರ್ಣವಾಗಬೇಕೆಂದು ಇಚ್ಛಿಸಲ್ಪಟ್ಟದ್ದು ಆಗಿದೆಯೋ, ಅತ್ರ= ಈ ಭೂಮಿಯಲ್ಲಿ, ತಂ=ಆ, ಮಹಾಕ್ರತುಂ= ದೊಡ್ಡ ಯಜ್ಞವನ್ನು, ಕಃ = ಯಾವನು ; ವರ್ಣಯತಿ=ವರ್ಣಿಸುತ್ತಾನೆ?

ತಾ :—ಹಿಂದೆ ಮಹಾಬಲಶಾಲಿಗಳಾದ ಶ್ರೀಮುಖ್ಯಪ್ರಾಣದೇವರು ಅತಿಶಯವಾದ ವೇಗದಿಂದ ಎಲ್ಲಾ ದೇವತೆಗಳನ್ನು ಜಯಿಸಿದರು. ಮೂರಾವರ್ತಿ ತಾನೇ ಮೊದಲು ಸೋಮಪಾನ ಮಾಡಿದರು. ಅವರೇ ಈಗ ಶ್ರೀ ಮಧ್ವಾಚಾರ್ಯರೂಪದಿಂದ ಪ್ರತ್ಯಕ್ಷರಾಗಿದ್ದು ಈ ಯಜ್ಞವನ್ನು ಸಂಪೂರ್ಣವನ್ನಾಗಿ ಮಾಡಲು ಅಪೇಕ್ಷಿಸಿದ್ದಾರೆ. ಇಂತಹ ಮಹತ್ತಾದ ಯಜ್ಞವನ್ನು ಯಾವನು ವರ್ಣಿಸಿಯಾನು? (ಅತ್ರ ಕಃ=ಬ್ರಹ್ಮಾ, ತಂ ಮಹಾಕ್ರತುಂ ವರ್ಣಯತಿ=ಇಲ್ಲಿ ಬ್ರಹ್ಮದೇವರು ಮಾತ್ರ ಆ ಯಜ್ಞವನ್ನು ವರ್ಣಿಸಿಯಾರು! ಎಂದು ಅರ್ಥಾಂತರ.)

ತಾ :—ಪೂರ್ವದಲ್ಲಿ ದೇವತೆಗಳು ಪ್ರಥಮಸೋಮಪಾನವು ತನಗೇ ಬೇಕೆಂದು ಸ್ಪರ್ಧಿಸಿದರು. ಯುದ್ಧದಲ್ಲಿ ಎಲ್ಲರನ್ನೂ ಜಯಿಸಿದವನೇ ಮೊದಲು ಸೋಮಪಾನಮಾಡತಕ್ಕದ್ದೆಂದು ನಿರ್ಣಯವಾಯಿತು. ಆ ಯುದ್ಧದಲ್ಲಿ ಮುಖ್ಯವಾಯುದೇವರು ಭುಜಬಲದಿಂದಲೂ, ವೇಗದಿಂದಲೂ ಎಲ್ಲಾ ದೇವತೆಗಳನ್ನೂ ಜಯಿಸಿದರು. ಮೂರು ಬಾರಿ ಎಲ್ಲರಿಗಿಂತಲೂ ಮೊದಲು ಸೋಮರಸವನ್ನು ಪಾನಮಾಡಿದರು ಎಂದು ಐತರೇಯಬ್ರಾಹ್ಮಣದಲ್ಲಿಯೂ, (ದೇವಾ ವೈ ಸೋಮಸ್ಯ ರಾಜ್ಞೋ ಅಗ್ರಪೇಯೇ....ಇತ್ಯಾದಿ) ಅಗ್ರಂ ಪಿಬಾ ಮಧೂನಾಂ ಸುತಂ ವಾಯೋ ದಿವಿಷ್ಟಿಷು| ತ್ವಂ ಹಿ ಪೂರ್ವಪಾ ಅಸಿ| ದೇವಾ ದಿಧಿಷೇ ಪೂರ್ವಪೇಯಂ|| (ಋ. 3-7-22) ಎಂಬ ಋಗ್ವೇದ ಮಂತ್ರದಲ್ಲಿಯೂ ಈ ವಿಷಯವು ಪ್ರಸಿದ್ಧವಾಗಿದೆ. ಅಂತಹ ಮಹಾತ್ಮರು ಪ್ರತ್ಯಕ್ಷವಾಗಿ ನಿಂತು ಈ ಯಜ್ಞವನ್ನು ಪೂರ್ತಿಗೊಳಿಸಿದ್ದರಿಂದ ಈ ಯಜ್ಞದ ಮಹಿಮೆಯನ್ನು ವರ್ಣಿಸಲು ಯಾರಿಗೂ ಸಾಧ್ಯವಿಲ್ಲ ಎಂದು ಭಾವ.

ವಿ :—ಪೂರ್ವಂ ಪಾತುಂ ಶೀಲಂ ಅಸ್ಯೇತಿ ಪೂರ್ವಪಾಯಿಃ (ಯಿನ್) ಸರ್ವಾಣಿ ಚ ತಾನಿ ದೈವತಾನಿ ಚ ಸರ್ವದೈವತಾನಿ, ಸರ್ವದೈವತಾನಿ

Rarest Archiver

ಜಯತೀತಿ ಸರ್ವದೈವತಜಿತ್ ತೇನ, ತರಃ ಅಸ್ಯ ಅಸ್ತೀತಿ ತರಸ್ವೀ (ಸ್ವಿನ್) ತರಸೀ ಬಲರಂಹಸೀ,—**ಅಮರ.** ತರಸ್ = ಬಲ, ವೇಗ. ನ ಪರೋಕ್ಷಂ ಅಪರೋಕ್ಷಂ, ಅಪರೋಕ್ಷಂ ವಪುಃ ಯಸ್ಯ ಸಃ ಅಪರೋಕ್ಷವಪುಃ ತೇನ, ಮಹಾನ್ ಚ ಅಸೌ ಕ್ರತುಶ್ಚ ಮಹಾಕ್ರತುಃ ತಂ |

**ಕ್ರಿ :**—ವರ್ಣಯತಿ ವರ್ಣಯತಃ ವರ್ಣಯಂತಿ ಇತ್ಯಾದಿ. ವರ್ಣ ವರ್ಣಕ್ರಿಯಾವಿಸ್ತಾರಗುಣವಚನೇಷು, ಲಟ್.

**ಅವ:**—ಜ್ಞಾನವೇ ಮೋಕ್ಷಸಾಧನವಾಗಿರುವಾಗ ಆಚಾರ್ಯರು ಯಜ್ಞ ಕರ್ಮವನ್ನೇಕೆ ಮಾಡಿಸಿದರು ?—

**ಬ್ರಹ್ಮವೇದನನಿವಿಷ್ಟಚೇತಸಾಂ**
**ಕರ್ಮ ತತ್ರ ಕರಣಾಂತರಂ ಭವೇತ್ ।**
**ಜ್ಞಾಪಯನ್ನಿತಿ ಪರಾತ್ಮವೇದಕಃ**
**ಕರ್ಮ ಧರ್ಮಮಪಿ ಸ ಹ್ಯಚೀಕರತ್** ||೩೧||

**ಅ :**—ಬ್ರಹ್ಮವೇದನನಿವಿಷ್ಟಚೇತಸಾಂ ತತ್ರ ಕರ್ಮ ಕರಣಾಂತರಂ ಭವೇತ್ ಇತಿ ಜ್ಞಾಪಯನ್ ಪರಾತ್ಮವೇದಕಃ ಸಃ ಕರ್ಮ ಅಪಿ ಧರ್ಮಂ ಅಚೀಕರತ್ ಹಿ |

**ಅರ್ಥ:**—ಬ್ರಹ್ಮ = ಗುಣಪೂರ್ಣನಾದ ನಾರಾಯಣನ, ವೇದನ = ತಿಳಿಯುವುದರಲ್ಲಿ, ನಿವಿಷ್ಟ = ಆಸಕ್ತವಾದ, ಚೇತಸಾಂ = ಮನಸ್ಸುಳ್ಳವರಿಗೆ, ತತ್ರ = ಆ ಬ್ರಹ್ಮಜ್ಞಾನದಲ್ಲಿ, ಕರ್ಮ = ಯಜ್ಞಾದಿಕರ್ಮವು, ಕರಣಾಂತರಂ ಭವೇತ್ = ಮತ್ತೊಂದು ಸಾಧನವಾಗುವುದು, ಇತಿ ಜ್ಞಾಪಯನ್ = ಹೀಗೆ ತಿಳಿಸುತ್ತಾ, ಪರಾತ್ಮವೇದಕಃ = ಪರಮಾತ್ಮನನ್ನು ತಿಳಿಸಿಕೊಡುವ, ಸಃ = ಆ ಶ್ರೀಮಧ್ವಾಚಾರ್ಯರು, ಕರ್ಮ ಅಪಿ = ಭಗವಂತನ ವಿಷಯಕವಾದ ಯಜ್ಞಾದಿಕರ್ಮವನ್ನೂ, ಧರ್ಮಂ = ಮೋಕ್ಷಾರ್ಥಿಯ ಧರ್ಮವನ್ನಾಗಿ, ಅಚೀಕರತ್ ಹಿ = ಮಾಡಿಸಿದರಷ್ಟೆ !

**ತಾ :**—ಪರಬ್ರಹ್ಮನ ಜ್ಞಾನದಲ್ಲಿ ಮಾತ್ರ ಆಸಕ್ತವಾದ ಮನಸ್ಸುಳ್ಳವರಿಗೆ ಶ್ರವಣಾದಿಗಳಂತೆ ಯಜ್ಞಾದಿಕರ್ಮವೂ ಬ್ರಹ್ಮಜ್ಞಾನಕ್ಕೆ ಸಹಕಾರಿ

Rarest Archiver

ಯೂದ ಮತ್ತೊಂದು ಉಪಾಯವಾಗಿದೆ ಎಂದು ತಿಳಿಸುತ್ತಾ ಶ್ರೀಮಧ್ವಾಚಾರ್ಯರು ತಾವು ಸ್ವತಃ ಜ್ಞಾನಮಾರ್ಗೈಕನಿಷ್ಠರಾಗಿದ್ದು ತತ್ತ್ವಜ್ಞಾನವನ್ನು ಉಪದೇಶಿಸತಕ್ಕವರಾಗಿದ್ದರೂ ಯೋಗ್ಯಜನರಿಂದ ಪರಮಾತ್ಮನಿಗೆ ಪ್ರೀತಿಕರವಾದ ಯಜ್ಞಾದಿಕರ್ಮವನ್ನು ಮಾಡಿಸಿದರು. ಕಲಿಯುಗದಲ್ಲಿ ಪ್ರತ್ಯಕ್ಷಪಶುಹಿಂಸಾಸಹಿತವಾದ ಯಜ್ಞವು ನಿಷಿದ್ಧವಾಗಿದೆ. ಉಪರಿಚರ ವಸುರಾಜನ ಕಾಲದಲ್ಲಿಯೇ ಹಿಂಸಾಯಜ್ಞವು ನಿಷಿದ್ಧವಾಗಿತ್ತು. ಆದುದರಿಂದ ಆಚಾರ್ಯರು ಹಿಂಸಾದಿದೋಷವಿಲ್ಲದ ಪಿಷ್ಟಪಶುಯಾಗವನ್ನು ನಿಷ್ಕಾಮಬುದ್ಧಿಯಿಂದ ನಡೆಸುವಂತೆ ಉಪದೇಶಿಸಿದರು. ಹೀಗೆ ಯಾಗಾದಿ ಕರ್ಮಾನುಷ್ಠಾನ ಮಾಡಿದ ಜ್ಞಾನಿಗಳು ಪರಮಾತ್ಮನ ಅಪರೋಕ್ಷವನ್ನು ಪಡೆದು ಮೋಕ್ಷವನ್ನು ಹೊಂದುವರು ಎಂದು ತಿಳಿಸಲು ಆಚಾರ್ಯರು ಇಂತಹ ಯಜ್ಞವನ್ನು ಜ್ಞಾನಿಗಳಿಂದ ನಡೆಸಿದರು ಎಂದು ತಾತ್ಪರ್ಯ.

ವಿ:—ಬ್ರಹ್ಮಣಃ ವೇದನಂ ಬ್ರಹ್ಮವೇದನಂ, ತಸ್ಮಿನ್ ನಿವಿಷ್ಟಂ ಚೇತಃ ಯೇಷಾಂ ತೇ ಬ್ರಹ್ಮವೇದನನಿವಿಷ್ಟಚೇತಸಃ ತೇಷಾಂ, ಅನ್ಯತ್ ಕರಣಂ ಕರಣಾಂತರಂ, ಪರಶ್ಚಾಸೌ ಆತ್ಮಾ ಚ ಪರಾತ್ಮಾ, ಪರಾತ್ಮಾನಂ ವೇದಯತೀತಿ ಪರಾತ್ಮವೇದಕಃ ;

ಕ್ರಿ :—ಭವೇತ್ ಭವೇತಾಂ ಭವೇಯುಃ ಇತ್ಯಾದಿ ಭೂ ಸತ್ತಾಯಾಂ ವಿಧಿಲಿಜ್; ಅಚೀಕರತ್ ಅಚೀಕರತಾಂ ಅಚೀಕರನ್ ಇತ್ಯಾದಿ ಡುಕೃಞ್ (ಕೃ) ಕರಣೇ ಣಿಜಂತ ಲುಜ್.

ಅವ :—ಶ್ರೀಮಧ್ವಾಚಾರ್ಯರ ಚರಿತ್ರೆಗಳೆಲ್ಲವೂ ಆಶ್ಚರ್ಯಕರವೇ ಆಗಿವೆ—

**ಯಾನಿ ಯಾನಿ ಚರಿತಾನಿ ಯಾನಿ ಯಾ**
**ನೀರಿತಾನಿ ಚ ಮನೋಹರಾಣ್ಯಹೋ ।**
**ತಾನಿ ತಾನಿ ಚ ವಿತಾನಚೇತಸೋ**
**ವಿಶ್ವವಿಸ್ಮಯಕರಾಣಿ ಭಾಂತಿ ಹಿ ॥೫೨॥**

ಅ :—ವಿತಾನಚೇತಸಃ ಯಾನಿ ಯಾನಿ ಚರಿತಾನಿ ಯಾನಿ ಯಾನಿ

Rarest Archiver

ಮನೋಹರಾಣಿ ಈರಿತಾನಿ ಚ ತಾನಿ ತಾನಿ ಚ ವಿಶ್ವವಿಸ್ಮಯಕರಾಣಿ ಭಾಂತಿ ಹಿ ಅಹೋ.

**ಅರ್ಥ:**— ವಿತಾನಚೇತಸಃ = ವಿಸ್ತಾರವಾದ ಜ್ಞಾನವುಳ್ಳ ಶ್ರೀಮಧ್ವಾಚಾರ್ಯರ, ಯಾನಿ ಯಾನಿ ಚರಿತಾನಿ (ಸಂತಿ) = ಯಾವ ಯಾವ ಕಾರ್ಯಗಳಿವೆಯೋ (ನಡವಳಿಕೆಗಳಿವೆಯೋ), ಯಾನಿ ಯಾನಿ = ಯಾವ ಯಾವ, ಮನೋಹರಾಣಿ = ಮನಸ್ಸನ್ನು ಆಕರ್ಷಿಸುವ, ಈರಿತಾನಿ ಚ ಸಂತಿ = ಮಾತುಗಳು ಇವೆಯೋ, ತಾನಿ ತಾನಿ ಚ = ಅವೆಲ್ಲವೂ, ವಿಶ್ವ ವಿಸ್ಮಯಕರಾಣಿ = ಪ್ರಪಂಚದಲ್ಲಿ ಎಲ್ಲರಿಗೂ ಆಶ್ಚರ್ಯಕರಗಳಾಗಿ, ಭಾಂತಿ ಹಿ = ಪ್ರಕಾಶಿಸುತ್ತವೆಯಷ್ಟೇ! ಅಹೋ = ಆಶ್ಚರ್ಯವು.

**ತಾ :**—ಹೀಗೆ ಶ್ರೀಮಧ್ವಾಚಾರ್ಯರ ಎಲ್ಲಾ ನಡವಳಿಕೆಗಳೂ, ಕಾರ್ಯಗಳೂ ಅವರ ಮನೋಹರವಾದ ಮೃದುಗಂಭೀರವಾದ ನುಡಿಗಳೂ ಪ್ರಪಂಚದ ಎಲ್ಲಾ ಜನರನ್ನೂ ಆಶ್ಚರ್ಯಗೊಳಿಸುತ್ತಿದ್ದುವು. ಹೀಗೆ ಮಾತುಗಳಿಂದ ಮತ್ತು ಕಾರ್ಯಗಳಿಂದ ಸಮಸ್ತ ಜನರನ್ನೂ ಆನಂದ ಗೊಳಿಸುವುದು ಆಶ್ಚರ್ಯಕರವಾಗಿದೆ.

**ವಿ :**—ಹರಂತೀತಿ ಹರಾಣಿ ಮನಸಃ ಹರಾಣಿ ಮನೋಹರಾಣಿ. ವಿತಾನಂ ಚೇತಃ ಯಸ್ಯ ಸಃ ವಿತಾನಚೇತಾಃ ತಸ್ಯ; ಕುರ್ವಂತೀತಿ ಕರಾಣಿ, ವಿಸ್ಮಯಸ್ಯ ಕರಾಣಿ ವಿಸ್ಮಯಕರಾಣಿ, ವಿಶ್ವೇ (ವಿಶ್ವಸ್ಯ) ವಿಸ್ಮಯಕರಾಣಿ ವಿಶ್ವವಿಸ್ಮಯಕರಾಣಿ.

**ಕ್ರಿ:**—ಭಾತಿ ಭಾತಃ ಭಾಂತಿ ಇತ್ಯಾದಿ ಭಾ ದೀಪ್ತೌ ಲಟ್.

**ವೃತ್ತ :**—'ರಾನ್ನರಾವಿಹರಥೋದ್ಧತಾ ಲಗೌ' ಎಂಬ ಲಕ್ಷಣದಂತೆ ಇಲ್ಲಿ ರಥೋದ್ಧತಾ ವೃತ್ತ.

**ಅವ :**—ವ್ಯಾಸನಾರಾಯಣರೆಂಬ ಗುರುದೇವತೆಗಳ ಆಜ್ಞೆಯಂತೆ ಭಾಷ್ಯನಿರ್ಮಾಣಾದಿಕಾರ್ಯದ ಅನಂತರ ಆಚಾರ್ಯರು ಮರಳಿ ಬದರಿಗೆ ಹೋದರು.

Rarest Archiver

ಸರಸ್ವತೀರ್ವೃತ್ತಿಕರೀಃ ಶರೀರಿಣಾ
ಮತೀತ್ಯ ಬಹ್ವೀಃ ಸಮತೀತಗೋತ್ರಕಃ।
ಪುರೇವ ಕೃಷ್ಣಪ್ರಿಯಮಾಪದಶ್ರಮಂ
ಪೃಥುಪ್ರಬೋಧಃ ಪುನರುತ್ತಮಾಶ್ರಮಂ ||೫೩||

ಅ:—ಪೃಥುಪ್ರಬೋಧಃ ಶರೀರಿಣಾಂ ವೃತ್ತಿಕರೀಃ ಬಹ್ವೀಃ ಸರಸ್ವತೀಃ ಅತೀತ್ಯ ಸಮತೀತಗೋತ್ರಕಃ (ಸನ್) ಪುರಾ ಇವ ಉತ್ತಮಾಶ್ರಮಂ ಅಶ್ರಮಂ ಆಪತ್.

**ಅರ್ಥ**:— ಪೃಥುಪ್ರಬೋಧಃ = ಶ್ರೀಪೂರ್ಣಪ್ರಜ್ಞಾಚಾರ್ಯರು ಶರೀರಿಣಾಂ = ಮಾನವರಿಗೆ, ವೃತ್ತಿಕರೀಃ = ಜೀವನವನ್ನು ಕೊಡುವ, (ಸ್ವರ್ಗಾದಿನಶ್ವರಫಲಗಳನ್ನು ಕೊಡುವುದರಿಂದ ಪ್ರವೃತ್ತಿಧರ್ಮಕ್ಕೆ ಪ್ರೇರಕವಾದ) ಬಹ್ವೀಃ = ಬಹಳವಾದ, ಸರಸ್ವತೀಃ = ಗೋದಾವರೀ ಮೊದಲಾದ-ನದಿಗಳನ್ನು (ಮೋಕ್ಷೇತರಕ್ಕೆ ಪ್ರವೃತ್ತಿಧರ್ಮಬೋಧಕವಾದ ಜ್ಯೋತಿ-ಷ್ಟೋಮಾದಿಕರ್ಮಕಾಂಡದ ವಾಕ್ಯಸಮೂಹಗಳನ್ನು), ಅತೀತ್ಯ = ದಾಟಿ (ಮೀರಿ, ಆ ವಾಕ್ಯಗಳಿಗೆ ಸರಿಯಾದ ನಿವೃತ್ತಿಮಾರ್ಗಪರವಾದ ಅರ್ಥಗಳನ್ನು ಹೇಳಿ), ಸಮತೀತ = ದಾಟಿದ, ಗೋತ್ರಕಃ = ಸಹ್ಯವಿಂಧ್ಯಾದಿ ಪರ್ವತಗಳುಳ್ಳವರಾಗಿ; (ವಿಶ್ವಾಮಿತ್ರಾದಿಗೋತ್ರದ ಗೃಹಸ್ಥರ ಆಚಾರ ವಿಶೇಷಗಳನ್ನು ಮೀರಿ), ಪುರಾ ಇವ = ಹಿಂದಿನಂತೆ, ಕೃಷ್ಣಪ್ರಿಯಂ = ಶ್ರೀವೇದವ್ಯಾಸರಿಗೆ (ಶ್ರೀಮನ್ನಾರಾಯಣನಿಗೆ) ಪ್ರೀತಿಪಾತ್ರವಾದ, ಉತ್ತಮಾಶ್ರಮಂ = ಶ್ರೇಷ್ಠವಾದ ಬದರಿಕಾಶ್ರಮವನ್ನು (ಸಂನ್ಯಾಸಾಶ್ರಮವನ್ನು), ಅಶ್ರಮಂ = ಆಯಾಸವಿಲ್ಲದೆ, ಪುನಃ = ಮತ್ತೊಮ್ಮೆ, ಆಪತ್ = ತಲುಪಿದರು.

ತಾ:—ಶ್ರೀಮಧ್ವಾಚಾರ್ಯರು ತಮ್ಮ ಈ ಅವತಾರದಲ್ಲಿ ಮಾಡಬೇಕಾಗಿದ್ದ ಮುಖ್ಯಕಾರ್ಯಗಳನ್ನು, ಹೀಗೆ ಮಾಡಿ ಪೂರೈಸಿದರು. ಎಲ್ಲಾ ವೇದಗಳಿಗೂ ಸರಿಯಾದ ಅರ್ಥವನ್ನು ಹೇಳಿದರು. ವಿಶೇಷವಾಗಿ ಕರ್ಮಕಾಂಡ ಭಾಗದ 'ಜ್ಯೋತಿಷ್ಟೋಮೇನ ಸ್ವರ್ಗಕಾಮೋ ಯಜೇತ' ಇತ್ಯಾದಿ ಕರ್ಮಪ್ರತಿಪಾದಕಭಾಗಗಳಿಗೆ ಸರಿಯಾದ ಅರ್ಥವನ್ನು ಹೇಳಿದರು. ಇಂತಹ

Rarest Archiver

ವಾಕ್ಯಗಳು ಸ್ವರ್ಗವುಂತಾದ ಫಲವನ್ನು ಬಯಸುವವರಿಗೆ ನಾನಾಬಗೆಯ ಕರ್ಮಗಳನ್ನು ಮಾಡಲು ಪ್ರೇರಿಸುತ್ತಿದ್ದುವು. ಮುಮುಕ್ಷುಗಳಿಗೆ ಈ ವಾಕ್ಯಗಳಿಂದ, ಇವುಗಳಲ್ಲಿ ಹೇಳಿದ ವಿಷಯಗಳಿಂದ ಏನು ಉಪಯೋಗ? ಎಂಬ ಆಕ್ಷೇಪವು ಬರುತ್ತದೆ. ಆಚಾರ್ಯರು ವೇದದಲ್ಲಿ ಬರುವ ಇಂತಹ ವಿಪುಲವಾದ ವಾಕ್ಯಗಳಿಗೆ ಪರಮಾತ್ಮನ ಪ್ರೀತ್ಯರ್ಥವಾಗಿ ಆಯಾ ಕರ್ಮಗಳನ್ನು ಮಾಡಬೇಕೆಂದೂ ಮತ್ತು ಜ್ಯೋತಿಷ್ಟೋಮಾದಿ ಶಬ್ದಗಳಿಗೆ ಮುಖ್ಯವೃತ್ತಿಯಿಂದ ಪರಮಾತ್ಮನೇ ಪ್ರತಿಪಾದ್ಯನಾದುದರಿಂದ ಆ ವಾಕ್ಯಗಳೂ, ಸಮಸ್ತವಾದ ಕರ್ಮಕಾಂಡವೆಂದು ತೋರುವ ವೇದಭಾಗವೂ ಪರಮಾತ್ಮನನ್ನೇ ಪ್ರತಿಪಾದಿಸುತ್ತದೆಯೆಂದೂ ತೋರಿಸಿದರು. ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ ಎಂಬ ಮೂರು ಆಶ್ರಮಗಳಿಗೆ ಉಚಿತವಾದ ವಿಶ್ವಾಮಿತ್ರಾದಿ ಗೋತ್ರಗಳನ್ನು ತೊರೆದು ಪರಮಾತ್ಮನಿಗೆ ಅತ್ಯಂತಪ್ರೀತಿಕರವೂ ಪರಮ ಪವಿತ್ರವೂ ಆದ ಸಂನ್ಯಾಸಾಶ್ರಮವನ್ನು ಸ್ವೀಕರಿಸಿದರು. ಈ ಕಾರ್ಯವನ್ನೆಲ್ಲಾ ಮಾಡಿದ ಆಚಾರ್ಯರು ಈಗ ಪುನಃ ವೇದವೆಂಬ ಮಹಾಸರಸ್ವತಿಯನ್ನು ದಾಟಿ ಅದಕ್ಕೆ ಸರಿಯಾದ ಅರ್ಥವನ್ನು ಮಾಡಿದಂತೆ, ಸ್ನಾನ, ಪಾನ, ಕೃಷಿಕಾರ್ಯಾದಿಗಳಿಂದ ಜೀವನ ನಿರ್ವಾಹಕವಾದ ಗೋದಾವರೀ ಮುಂತಾದ ಲೋಕದ ಮಹಾಸರಸ್ವತಿಗಳನ್ನೂ (ನದಿಗಳನ್ನೂ) ದಾಟಿದರು. ವಿಶ್ವಾಮಿತ್ರಾದಿಗೋತ್ರಗಳನ್ನು ತೊರೆದಂತೆ ಸಹ್ಯಪರ್ವತವೇ ಮುಂತಾದ ಗೋತ್ರ (ಪರ್ವತ) ಗಳನ್ನು ದಾಟಿ ಮುಂದೆ ಹೋದರು. ನಾರಾಯಣ ಪರಬ್ರಹ್ಮನ ಅವತಾರರಾದ ಶ್ರೀವೇದವ್ಯಾಸರಿಗೂ, ನಾರಾಯಣ ಮುನಿಗಳಿಗೂ ಅತ್ಯಂತಪ್ರಿಯವಾದ ಸಂನ್ಯಾಸಾಶ್ರಮವನ್ನು ಶ್ರಮವಿಲ್ಲದೆ ಅನುಸರಿಸಿದರು. ಆ ಪರಮಾತ್ಮನಿಗೆ ಪ್ರಿಯವಾದ ಬದರಿಕಾಶ್ರಮಕ್ಕೂ ಶ್ರಮವಿಲ್ಲದೆ ಹೋದರು.

**ವಿ:**—ವೃತ್ತಿಂ ಕುರ್ವಂತೀತಿ ವೃತ್ತಿಕರ್ಯಃ ತಾಃ ; ಶರೀರಂ ಏಷಾಂ ಅಸ್ತೀತಿ ಶರೀರಿಣಃ ತೇಷಾಂ, ಸಮತೀತಾಃ ಗೋತ್ರಾಃ (ಪರ್ವತಾಃ) ಯೇನ ಸಃ ಸಮತೀತಗೋತ್ರಕಃ, ಸಮತೀತಂ ಗೋತ್ರಂ ಯೇನ ಸಃ ಸಮತೀತ ಗೋತ್ರಕಃ, ಗೋತ್ರ= ಪರ್ವತ, ಕುಲ, (ಗೋತ್ರಂ ತು ನಾಮ್ನಿ ಚ- ಅಮರ ಗೋತ್ರ (ನ) ವಂಶ, ಗೋತ್ರ (ಪುಂ) ಪರ್ವತ. ಕೃಷ್ಣಸ್ಯ ಪ್ರಿಯಃ

Rarest Archiver

ಕೃಷ್ಣಪ್ರಿಯಃ ತಂ, ನ ವಿದ್ಯತೇ ಶ್ರಮಃ ಯಸ್ಮಿನ್ ಕರ್ಮಣಿ ತದ್ಯಥಾ ಭವತಿ ತಥಾ ಅಶ್ರಮಂ; ಪೃಥುಃ ಪ್ರಬೋಧಃ ಯಸ್ಯ ಸಃ ಪೃಥುಪ್ರಬೋಧಃ, ಉತ್ತಮಶ್ಚಾಸೌ ಆಶ್ರಮಶ್ಚ ಉತ್ತಮಾಶ್ರಮಃ ತಂ.

ಕ್ರಿ:—ಆಪತ್ ಆಪತಾಂ ಆಪನ್ ಆಪ್ಲೃ ವ್ಯಾಪ್ತೌ. ಪರ. ಲುಙ್.

ವೃತ್ತ:—'ಜತೌ ತು ವಂಶಸ್ಥಮುದೀರಿತಂ ಜರೌ' ಎಂಬ ಲಕ್ಷಣ ದಂತೆ ಇಲ್ಲಿ **ವಂಶಸ್ಥವೃತ್ತ.**

**ಅವ:**—ಶ್ರೀವೇದವ್ಯಾಸರು ತನ್ನ ಅಪ್ಪಣೆಯಂತೆ ಜ್ಞಾನಕಾರ್ಯವನ್ನೆಸಗಿ ಬಂದ ಶ್ರೀಮಧ್ವಾಚಾರ್ಯರಿಗೆ ತನ್ನ ಸಹಭೋಗವನ್ನೇ ಕೊಟ್ಟರು—

**ಸಹಭೋಗಮನನ್ಯಲಭ್ಯಮಸ್ಮೈ**
**ಹನುಮದ್ರೂಪವತೇ ದದೌ ಪುರಾಹಿ ।**
**ಅನವೇಕ್ಷ್ಯ ಪರಂ ಸ್ವಭೀಷ್ಟಕರ್ತ್ರೇ**
**ಪ್ರತಿದಾತುಂ ಹರಿರೈಧಯತ್ತಮೇವ** ॥೩೪॥

ಅ:—ಹರಿಃ ಪುರಾ ಹನುಮದ್ರೂಪವತೇ ಅಸ್ಮೈ ಅನನ್ಯಲಭ್ಯಂ ಸಹಭೋಗಂ ದದೌ ಹಿ. ಸ್ವಭೀಷ್ಟಕರ್ತ್ರೇ ಪ್ರತಿದಾತುಂ ಪರಂ ಅನವೇಕ್ಷ್ಯ ತಂ ಏವ ಐಧಯತ್.

ಅರ್ಥ:—ಹರಿಃ = ಶ್ರೀವೇದವ್ಯಾಸರು, ಪುರಾ = ಹಿಂದೆ ರಾಮಾವತಾರ ಕಾಲದಲ್ಲಿ, ಹನುಮದ್ರೂಪವತೇ = ಹನುಮಂತನ ರೂಪವುಳ್ಳ, ಅಸ್ಮೈ = ಈ ಶ್ರೀಮಧ್ವಾಚಾರ್ಯರಿಗೆ, ಅನನ್ಯಲಭ್ಯಂ = ಬೇರೆಯವರಿಗೆ ಸಿಗಲಾರದ, ಸಹಭೋಗಂ = ಸಹಭೋಗವೆಂಬ ಬ್ರಹ್ಮದೇವರಿಂದ ಲಭ್ಯವಾದ ಸತ್ಯ ಲೋಕಾಧಿಪತ್ಯವನ್ನು, ದದೌ ಹಿ = ಕೊಟ್ಟರಷ್ಟೆ! ಸ್ವಭೀಷ್ಟಕರ್ತ್ರೇ = ತನಗೆ ಅತ್ಯಂತಇಷ್ಟವಾದ ಭಾಷ್ಯನಿರ್ಮಾಣಾದಿಕಾರ್ಯವನ್ನು ಮಾಡಿರುವ ಇವರಿಗೆ, ಪ್ರತಿದಾತುಂ = ಕೊಡುವುದಕ್ಕೆ ಪರಂ = ಸಹಭೋಗಕ್ಕಿಂತ ಉತ್ತಮವಾದ ಬೇರೆ ವಸ್ತುವನ್ನು, ಅನವೇಕ್ಷ್ಯ = ನೋಡದೆ, (ಇಲ್ಲವೆಂದು ತಿಳಿದು) ತಂ ಏವ = ಹಿಂದೆ ಕೊಟ್ಟಿರುವ ಸಹಭೋಗವನ್ನೇ, ಐಧಯತ್ = ಹೆಚ್ಚಿಸಿದರು. (ಅಭಿವೃದ್ಧಿಗೊಳಿಸಿದರು.)

Rarest Archiver

**ತಾ:**—ಹಿಂದೆ ರಾಮಾವತಾರದಲ್ಲಿ ನಾರಾಯಣಾವತಾರರಾದ ವೇದ ವ್ಯಾಸರಿಗಿಂತ ಅಭಿನ್ನರಾದ ಶ್ರೀರಾಮಚಂದ್ರದೇವರು ತನಗೆ ಅತ್ಯಂತ ಇಷ್ಟ ವಾದ ಸೀತಾನ್ವೇಷಣಾದಿಕಾರ್ಯವನ್ನು ಮಾಡಿದ ಹನುಮಂತದೇವರ ಅವತಾರವೇ ಆದ ಶ್ರೀಮಧ್ವಾಚಾರ್ಯರಿಗೆ ಸಹಭೋಗವೆಂಬ ಮೋಕ್ಷವನ್ನೂ, (ಬ್ರಹ್ಮಲೋಕಾಧಿಪತ್ಯವನ್ನೂ) ಕೊಟ್ಟಿದ್ದರು. ಈಗ ಶ್ರೀಮಧ್ವಾಚಾರ್ಯರು ಪರಮಾತ್ಮನಿಗೆ ಅತ್ಯಂತಪ್ರಿಯವಾದ ಸೂತ್ರಭಾಷ್ಯರಚನೆ ಮುಂತಾದ ಕಾರ್ಯ ವನ್ನು ಮಾಡಿದ್ದನ್ನು ನೋಡಿ ರಾಮಾಭಿನ್ನರಾದ ಶ್ರೀವೇದವ್ಯಾಸದೇವರು ಅವರಿಗೆ ಹಿಂದೆ ಕೊಟ್ಟಿದ್ದಕ್ಕಿಂತ ಅಧಿಕವಾದ ಕೊಡಲು ಯೋಗ್ಯವಾದ ಬೇರೆ ಯಾವ ವಸ್ತುವೂ ಇಲ್ಲವೆಂದು ತಿಳಿದು ಹಿಂದೆ ಕೊಟ್ಟಿದ್ದ ಸಹಭೋಗವನ್ನೇ ಅಧಿಕಗೊಳಿಸಿದರು.

**ವಿಶೇಷಾಂಶ:**—ಭೋಗಾಶ್ಚ ಯೇ ಯಾನಿ ಚ ಕರ್ಮಜಾತಾನ್ಯ-ನಾದ್ಯನಂತಾನಿ ಮಮೇಹ ಸಂತಿ। ಮದಾಜ್ಞಯಾ ತಾನ್ಯಖಿಲಾನಿ ಸಂತಿ ಧಾತುಃ ಪದೇ ತತ್ ಸಹಭೋಗನಾಮ ॥ ಏತಾದೃಶಂ ಮೇ ಸಹಭೋಜನಂ ತೇ ಮಯಾ ಪ್ರದತ್ತಂ ಹನುಮನ್ ಸದೈವ ॥ **ಮಹಾಭಾರತ ತಾ ನಿ. ಅ.** ೮ ಶ್ಲೋ ೨೪೧– ೨೪೨ ಪೂರ್ವಾರ್ಧ. ಇಲ್ಲಿ 'ಎಲೈ ಹನುಮಂತನೇ! ನನ್ನ ಆನಂದದ ಪ್ರತಿಬಿಂಬವಾದ ಆನಂದವನ್ನು ಬ್ರಹ್ಮದೇವರು ಅನುಭವಿಸು ತ್ತಾರೆ. ಇಂತಹ ಸಹಭೋಗವನ್ನೂ ಬ್ರಹ್ಮಲೋಕಾಧಿಪತ್ಯವನ್ನೂ ನಿನಗೂ ನಾನು ಕೊಟ್ಟಿರುತ್ತೇನೆ' ಎಂದು ರಾಮದೇವರು ಹೇಳಿದ್ದಾರೆ.

**ವಿ:**—ಲಬ್ಧುಂ ಯೋಗ್ಯಃ ಲಭ್ಯಃ, ಅನ್ಯೇನ ಲಭ್ಯಃ ಅನ್ಯಲಭ್ಯಃ, ನ ಅನ್ಯಲಭ್ಯಃ ಅನನ್ಯಲಭ್ಯಃ, ಹನುಮತಃ ರೂಪಂ ಹನುಮದ್ರೂಪಂ, ಹನುಮ-ದ್ರೂಪಂ ಅಸ್ಯ ಅಸ್ತೀತಿ ಹನುಮದ್ರೂಪವಾನ್ ತಸ್ಮೈ; ನ ಅವೇಕ್ಷ್ಯ ಅನವೇಕ್ಷ್ಯ, ಶೋಭನಂ ಚ ತತ್ ಅಭೀಷ್ಟಂ ಚ ಸ್ವಭೀಷ್ಟಂ, ತಸ್ಯ ಕರ್ತಾ ಸ್ವಭೀಷ್ಟಕರ್ತಾ ತಸ್ಮೈ;

**ಕ್ರಿ:**—ದದೌ ದದತುಃ ದದುಃ ಇತ್ಯಾದಿ, ಡು(ದಾ)ಞ್ ದಾನೇ ಪರ. ಲಿಟ್. ಐಧಯತ್ ಐಧಯತಾಂ ಐಧಯನ್ ಇತ್ಯಾದಿ. ಏಧ ವೃದ್ಧೌ ಣಿಜಂತ ಲಙ್.

Rarest Archiver

**ವೃತ್ತ:**—ಇಲ್ಲಿ ಚಂದ್ರಿಕಾವೃತ್ತ. ವಿಷಮೇ ಸಸಜಾ ಗುರೂ ಯದಿ ಸ್ಯುಃ ಸಭರಾ ಯಶ್ಚ ಯುಜೀಹ ಚಂದ್ರಿಕಾ ಸಾ–ಎಂದು ಅದರ ಲಕ್ಷಣ.

**ಅವ:**—ಆಚಾರ್ಯರು ವೇದವ್ಯಾಸರಿಂದ ಆಜ್ಞೆಯನ್ನು ಪಡೆದು ಉಡುಪಿಗೆ ಬಂದರು—

**ಪ್ರಣಮ್ಯ ಗುರುಮಾದರಾದಥ ನಿಯೋಗತೋ ಯೋಗ್ಯತಃ**
**ಸ ತಸ್ಯ ಜಗತಾಂ ಹಿತಂ ವಿದಧತೋ ಗತಃ ಸಾನುಗಃ।**
**ಮಹಿಷ್ಠಹೃದಯೋ ಮಹಾಮಹಿಮಸಿಂಧುರಾನಂದತೋ**
**ನಿಜೈರಭಿಗತೋಽನಮದ್ರಜತಪೀಠವಾಸಂ ಹರಿಂ ॥೫೫॥**

**ಅ:**—ಅಥ ಮಹಿಷ್ಠಹೃದಯಃ ಮಹಾಮಹಿಮಸಿಂಧುಃ ಸಃ ಆದ-ರಾತ್ ಗುರುಂ ಪ್ರಣಮ್ಯ ಜಗತಾಂ ಹಿತಂ ವಿದಧತಃ ತಸ್ಯ ಯೋಗ್ಯತಃ ನಿಯೋಗತಃ ಸಾನುಗಃ ಗತಃ ಆನಂದತಃ ನಿಜೈಃ ಅಭಿಗತಃ ರಜತಪೀಠವಾಸಂ ಹರಿಂ ಅನಮತ್.

**ಅರ್ಥ:**—ಅಥ = ಅನಂತರ, ಮಹಿಷ್ಠಹೃದಯಃ = ಅತ್ಯಂತ ಮಹತ್ತಾದ (ಎಲ್ಲಾ ವಿಷಯಗಳನ್ನು ಒಳಗೊಂಡಿರುವ) ಹೃದಯವುಳ್ಳ, (ಜ್ಞಾನವುಳ್ಳ) ಮಹಾಮಹಿಮಸಿಂಧುಃ=ಶ್ರೇಷ್ಠವಾದ ಮಹಿಮೆಗಳಿಂದ ಸಮುದ್ರದಂತಿರುವ, ಸಃ = ಆ ಮಧ್ವರು, ಗುರುಂ = ಗುರುಗಳಾದ ಶ್ರೀವೇದವ್ಯಾಸರನ್ನು, ಆದ-ರಾತ್ = ಭಕ್ತಿಯಿಂದ, ಪ್ರಣಮ್ಯ = ನಮಸ್ಕರಿಸಿ, ಜಗತಾಂ = ಲೋಕಗಳಿಗೆ, ಹಿತಂ = ಹಿತವನ್ನು, ವಿದಧತಃ = ಮಾಡುತ್ತಿರುವ, ತಸ್ಯ = ಆ ವ್ಯಾಸರ, ಯೋಗ್ಯತಃ = ಉಚಿತವಾದ, ನಿಯೋಗತಃ = ಆಜ್ಞೆಯಿಂದ, ಸಾನುಗಃ = ಶಿಷ್ಯರಿಂದ ಸಹಿತರಾಗಿ, ಗತಃ = ಹೊರಟವರಾಗಿ, ಆನಂದತಃ = ಸಂತೋಷ ದಿಂದ, ನಿಜೈಃ = ತನ್ನವರಿಂದ, ಅಭಿಗತಃ = ಎದುರುಗೊಳ್ಳಲ್ಪಟ್ಟವರಾಗಿ, ರಜತಪೀಠವಾಸಂ ಹರಿಂ = ಉಡುಪಿಯಲ್ಲಿ ಸಂನಿಹಿತನಾದ ಶ್ರೀಕೃಷ್ಣನನ್ನು, ಅನಮತ್ = ನಮಸ್ಕರಿಸಿದರು.

**ತಾ:**—ಸರ್ವಜ್ಞರೂ ಮಹಿಮಾಸಮುದ್ರರೂ ಆದ ಆಚಾರ್ಯರು ಬದರಿ ಕಾಶ್ರಮದಲ್ಲಿರುವ ತಮ್ಮ ಗುರುಗಳಾದ ವೇದವ್ಯಾಸರನ್ನು ವಂದಿಸಿ, 'ನೀನು

Rarest Archiver

ಪುನಃ ಭರತಭೂಮಿಗೆ ಹಿಂತಿರುಗಿ ಸಚ್ಛಾಸ್ತ್ರೋಪದೇಶದಿಂದ ಯೋಗ್ಯಜೀವರನ್ನು 'ಉದ್ಧರಿಸು' ಎಂದು ಅವರು ಅಪ್ಪಣೆಮಾಡಿದಾಗ ಅದನ್ನು ಶಿರಸಾವಹಿಸಿ ಶಿಷ್ಯಪರಿವಾರಸಮೇತರಾಗಿ ಉಡುಪಿಗೆ ಹೊರಟರು. ಅಲ್ಲಿರುವ ಅವರ ಭಕ್ತರು ಮತ್ತು ಶಿಷ್ಯರು ಸಂತೋಷದಿಂದ ಅವರನ್ನು ಎದುರುಗೊಂಡರು. ಆಚಾರ್ಯರು ಆ ಭಕ್ತರನ್ನು ಅನುಗ್ರಹಿಸಿ ತಾನು ಪ್ರತಿಷ್ಠಿಸಿದ ಶ್ರೀಕೃಷ್ಣನನ್ನೂ, ಶ್ರೀಮದನಂತಾಸನದೇವರನ್ನೂ ನಮಿಸಿದರು.

ವಿ :—ಅತಿಶಯೇನ ಮಹತ್ ಮಹಿಷ್ಠಂ, ಮಹಿಷ್ಠಂ ಹೃದಯಂ ಯಸ್ಯ ಸಃ ಮಹಿಷ್ಠಹೃದಯಃ, ಮಹಾಂತಶ್ಚ ತೇ ಮಹಿಮಾನಶ್ಚ ಮಹಾಮಹಿಮಾನಃ, ಮಹಾಮಹಿಮಭಿಃ ಸಿಂಧುರಿವ ಮಹಾಮಹಿಮಸಿಂಧುಃ, ಆನಂದೇನ ಇತಿ ಆನಂದತಃ, ಅನುಗೈಃ ಸಹಿತಃ ಸಾನುಗಃ, ರಜತಪೀಠೇ ವಾಸಃ ಯಸ್ಯ ಸಃ ರಜತಪೀಠವಾಸಃ ತಂ.

ಕ್ರಿ :—ಅನಮತ್ ಅನಮತಾಂ ಅನಮನ್ ಇತ್ಯಾದಿ. ಣಮ ಪ್ರಹ್ವತ್ವೇ ಶಬ್ದೇ ಚ (೯೮೧) ಲಙ್.

ವೃತ್ತ :—ಈ ಶ್ಲೋಕದಲ್ಲಿ ಪೃಥ್ವೀವೃತ್ತ. 'ಜಸೌ ಜಸಯಲಾವಸುಗ್ರಹಯತಿಶ್ಚ ಪೃಥ್ವೀ ಗುರುಃ ಎಂದು' ಅದರ ಲಕ್ಷಣ.

ಇಲ್ಲಿಗೆ ಶ್ರೀಮತ್ಕವಿಕುಲತಿಲಕಶ್ರೀಮನ್ನಾರಾಯಣಪಂಡಿತಾಚಾರ್ಯ
**ವಿರಚಿತಶ್ರೀಸುಮಧ್ವವಿಜಯಮಹಾಕಾವ್ಯದ ಒಂಭತ್ತನೆಯ**
**ಸರ್ಗದ ಕರ್ನಾಟಕಭಾಷಾನುವಾದವು ಸಮಾಪ್ತವಾಯಿತು.**

Rarest Archiver

# ಉಡುಪಿಯ ಶ್ರೀಕೃಷ್ಣನ ಧ್ಯಾನಶ್ಲೋಕಗಳು

ಧ್ಯಾಯೇದಿಂದೀವರಾಭಂ ನಿಜಕರಕಮಲೇ ದಕ್ಷಿಣೇ ದಂಡಮಗ್ರ್ಯಂ
ಸವ್ಯೇ ಪಾಶಂ ದಧಾನಂ ಜಘನತಟಗತಂ ರೌಪ್ಯಪೀಠಾಲಯಸ್ಥಂ ।
ಕಾಂಚೀಗ್ರೈವೇಯಹಾರಾಂಗದಕಟಕಕಿರೀಟಾಂಗುಲೀಯಾಂಘ್ರಿಭೂಷಾ
ಕರ್ಣಾಕಲ್ಪೋಜ್ಜ್ವಲಾಂಗಂ ಯದುಕುಲತಿಲಕಂ
ಕೃಷ್ಣಮಿಷ್ಟಾರ್ಥಸಿದ್ಧ್ಯೈ ॥೧॥

ತ್ರೈಲೋಕ್ಯೈಶ್ವರ್ಯಸಾರಂ ನಿಜಗುಣಭರಿತಂ ನಿರ್ಮಿತಂ ಸ್ವೇನ ಚಿತ್ರಂ
ಪಿತ್ರೋಃ ಕಾಮಾಯ ನಾವಾಗತಮುದಧಿತಟಂ ದ್ವಾರಕಾಯಾಃ ಸಮೇತ್ಯ ।
ಮಧ್ವೇನಾನೀಯ ವಿಪ್ರೈಃ ಸಹ ಗುರುಮುನಿನಾ ರೌಪ್ಯಪೀಠಾಲಯೇಽಸ್ಮಿನ್
ಸಮ್ಯಕ್ ಸಂಪೂಜಿತಾಂಗಂ ಭಜತ ನಮತ ಚಾಧೋಕ್ಷಜಂ
ಮೋಕ್ಷಕಾಮಾಃ ॥೨॥

ಭೈಷ್ಮೀಕರಾಂಬುರುಹಪೂಜಿತಪಾದಪದ್ಮಂ
ಶ್ರೀಚಕ್ರಚಿಹ್ನಪರಿಪೂರಿತಸರ್ವಗಾತ್ರಂ ।
ಬ್ರಹ್ಮಾದಿದೇವನಿಕರೈಃ ಪರಿಸೇವ್ಯಮಾನಂ
ಧ್ಯಾಯೇತ್ ಸದಾ ಯದುವರಂ ಪುರುಷೋತ್ತಮಂ ತಂ ॥೩॥

ಸರ್ವಾಂಗೇಷು ಚ ಚಕ್ರಾಂಕಮೂರ್ತಿಃ ಸಾ ಪಾವನೀ ಹರೇಃ ।
ಸನ್ನಿಧಾನಬಲಾತ್ ಶುದ್ಧಾ ಮಧ್ವಾರಾಧ್ಯಾ ತು ಕಿಂ ಪುನಃ ॥೪॥

"ಮಂದಹಾಸಮೃದುಸುಂದರಾನನಂ...." ಸರ್ಗ ೯ ಶ್ಲೋ. ೪೩ ಎಂಬ ಶ್ಲೋಕವನ್ನು ಪಠಿಸಿ ಈ ಧ್ಯಾನಶ್ಲೋಕಗಳನ್ನು ಪಠಿಸಬೇಕು.

**ಧ್ಯಾಯೇತ್** — ಶ್ರೀಕೃಷ್ಣನು ಕನ್ನೈದಿಲೆಯಂತಹ ಮೈಬಣ್ಣವುಳ್ಳವನು. ತನ್ನ ಬಲದ ಹಸ್ತಕಮಲದಲ್ಲಿ ಶ್ರೇಷ್ಠವಾದ ಮಂಥನದಂಡವನ್ನು (ಕಡಗೋಲನ್ನು) ಹಿಡಿದಿದ್ದಾನೆ. ಎಡಗೈಯಲ್ಲಿ ಸೊಂಟದ ಮುಂಭಾಗವನ್ನು ಸುತ್ತಿರುವ ಕಡೆಯುವ ಹಗ್ಗವನ್ನು ಹಿಡಿದಿದ್ದಾನೆ. ಒಡ್ಯಾಣ, ಕಂಠಾಭರಣ ಸರ, ತೋಳ್ಬಳಿ, ಕಡಗ, ಕಿರೀಟ, ಉಂಗುರ, ಕಾಲ್ಗೆಜ್ಜೆ, ಕಿವಿಯ ಆಭರಣಗಳಿಂದ ಅವನು ಝಗಝಗಿಸುತ್ತಿದ್ದಾನೆ. ಯದುಕುಲಾಲಂಕಾರನಾದ ಈ

Rarest Archiver

ಶ್ರೀಕೃಷ್ಣನು ರಜತಪೀಠಪುರವೆಂದು (ಉಡುಪಿ) ಪ್ರಸಿದ್ಧವಾದ ಸ್ಥಳದಲ್ಲಿ ವಿರಾಜಿಸುತ್ತಿದ್ದಾನೆ. ಇಂತಹ ಶ್ರೀಕೃಷ್ಣನನ್ನು ಭಕ್ತರು ಇಷ್ಟಾರ್ಥಸಿದ್ಧಿಗಾಗಿ ಧ್ಯಾನಿಸಬೇಕು. ||೧||

**ತ್ರೈಲೋಕ್ಯ**—ತಂದೆತಾಯಿಗಳಾದ ವಸುದೇವ ದೇವಕಿಯರ ಅಪೇಕ್ಷೆಯಂತೆ ಶ್ರೀಕೃಷ್ಣನೇ ಕಡಗೋಲು ಮತ್ತು ಕಡೆಯುವ ಹಗ್ಗಗಳನ್ನು ಹಿಡಿದಿರುವ ತನ್ನ ಪ್ರತಿಮೆಯನ್ನು ವಿಶ್ವಕರ್ಮನ ಮೂಲಕ ಮಾಡಿಸಿಕೊಟ್ಟನು. **ಈ ಪ್ರತಿಮೆಯು ಮೂರುಲೋಕಗಳಲ್ಲಿ ಆಶ್ಚರ್ಯಕರವಾದ ವಸ್ತುಗಳಲ್ಲಿ ಶ್ರೇಷ್ಠವಾದುದು.** ಈ ಪ್ರತಿಮೆಯು ಪ್ರತಿಮಾಲಕ್ಷಣಗಳು, ಮಹಾಪುರುಷಲಕ್ಷಣಗಳು ಮತ್ತು ಭಗವಂತನ ಲಕ್ಷಣಗಳಿಂದ ಸಂಪನ್ನವಾಗಿದೆ. ದ್ವಾರಕೆಯಿಂದ ಹಡಗಿನ ಮೂಲಕ ಈ ಪ್ರತಿಮೆಯು ಉಡುಪಿಯ ಸಮೀಪದ ಸಮುದ್ರದ ದಡಕ್ಕೆ ಬಂದಿತು. ಶ್ರೀಮಧ್ವಾಚಾರ್ಯರು ಆ ಪ್ರತಿಮೆಯನ್ನು ತಂದು ಉಡುಪಿಯಲ್ಲಿ ಪ್ರತಿಷ್ಠಾಪಿಸಿದರು. ಜಗದ್ಗುರುಗಳಾದ ಶ್ರೀಮುಖ್ಯಪ್ರಾಣಾವತಾರರಾದ ಸರ್ವಜ್ಞಾಚಾರ್ಯರಿಂದ ಚೆನ್ನಾಗಿ ಪೂಜಿತವಾದ ಈ ಅಧೋಕ್ಷಜನನ್ನು ಮೋಕ್ಷವನ್ನು ಬಯಸುವವರು ಭಜಿಸಿರಿ ನಮಿಸಿರಿ. ||೨||

**ಭೈಷ್ಮೀ**—ಶ್ರೀರುಕ್ಮಿಣೀದೇವಿಯು ತನ್ನ ಕರಕಮಲಗಳಿಂದ ಈ ಶ್ರೀಕೃಷ್ಣನ ಪಾದಕಮಲಗಳನ್ನು ಪೂಜಿಸಿದ್ದಾಳೆ. ಶ್ರೀಕೃಷ್ಣನ ಈ ಪ್ರತಿಮೆಯು ಸರ್ವಾಂಗಗಳಲ್ಲಿಯೂ ಮಂಗಳಕರವಾದ ಸುದರ್ಶನಚಕ್ರಚಿಹ್ನೆಯಿಂದ ಅಲಂಕೃತವಾಗಿದೆ. ಬ್ರಹ್ಮಾದಿದೇವತೆಗಳೂ ಗುಂಪು-ಗುಂಪಾಗಿ ಬಂದು ಈ ಶ್ರೀಕೃಷ್ಣನನ್ನು ಸೇವಿಸುತ್ತಿದ್ದಾರೆ. ಯಾದವಶ್ರೇಷ್ಠನಾದ ಈ ಪುರುಷೋತ್ತಮಶ್ರೀಕೃಷ್ಣನನ್ನು ಯಾವಾಗಲೂ ಹೀಗೆಯೇ ಧ್ಯಾನಿಸಬೇಕು. ||೩||

**ಸರ್ವಾಂಗೇಷು**-ಸರ್ವಾಂಗಗಳಲ್ಲಿಯೂ ಸುದರ್ಶನಚಕ್ರಚಿಹ್ನೆಯಿಂದ ಕೂಡಿದ ಶ್ರೀಕೃಷ್ಣನ ಮೂರ್ತಿಯು ಅತ್ಯಂತಪವಿತ್ರವಾದುದು. ಶ್ರೀಕೃಷ್ಣನ ನಿತ್ಯಸಂನಿಧಾನ ಇಲ್ಲಿದೆ. ಇದು ನಿರಂತರಪವಿತ್ರ. ಶ್ರೀಮಧ್ವರು ಆರಾಧಿಸಿದ್ದರಿಂದ ಮತ್ತೂ ಪರಮಪವಿತ್ರ. ||೪||

|| ಶ್ರೀಕೃಷ್ಣಾಯ ಪರಬ್ರಹ್ಮಣೇನಮಃ ||

Rarest Archiver

|| ಶ್ರೀಃ ||

## ಹತ್ತನೆಯ ಸರ್ಗದ ಕಥಾಸಾರಾಂಶ

ಆಚಾರ್ಯರು ಬದರಿಕಾಶ್ರಮಕ್ಕೆ ಹೋಗಿ ಬಂದ ಅನಂತರ ತೌಳವ ದೇಶದಲ್ಲಿ (ಪರಶುರಾಮಕ್ಷೇತ್ರದಲ್ಲಿ) ತಮ್ಮ ಶಿಷ್ಯರೊಡನೆ ಸಂಚರಿಸುತ್ತಾ ಸಿದ್ಧಾಂತಪ್ರಚಾರಮಾಡುತ್ತಿದ್ದರು. ಒಂದಾನೊಂದು ದಿನ ಒಂದುಸಭೆಯಲ್ಲಿ ಕೆಲವು ಸಜ್ಜನರು ಆಚಾರ್ಯರ ಮಹಿಮೆಗಳನ್ನು ತಿಳಿಸುವಂತೆ ಅವರ ಶಿಷ್ಯರನ್ನು ಕೇಳಿಕೊಂಡರು. ಬದರಿಕಾಶ್ರಮಕ್ಕೆ ಆಚಾರ್ಯರೊಡನೆ ಹೋಗಿದ್ದ ಒಬ್ಬ ಶಿಷ್ಯರು ತಾವು ಕಣ್ಣಾರೆ ಕಂಡ ಆಚಾರ್ಯರ ಮಹಿಮೆಗಳನ್ನು ಈ ರೀತಿ ವರ್ಣಿಸಲಾರಂಭಿಸಿದರು.

೧) ಒಂದು ಪ್ರದೇಶದಲ್ಲಿ ಸಂಚಾರಮಾಡುತ್ತಾ ಆಚಾರ್ಯರು ಮುಂದೆ ಹೋಗುತ್ತಿದ್ದಾಗ ಈಶ್ವರದೇವನೆಂಬ ರಾಜನು ದಾರಿಗರಿಂದ ಬಲಾತ್ಕಾರವಾಗಿ ಕಾಲುವೆಗಾಗಿ ಭೂಮಿಯನ್ನು ಅಗೆಸುವ ಕೆಲಸವನ್ನು ಮಾಡಿಸುತ್ತಿದ್ದನು. ಆಚಾರ್ಯರ ಅಮಾನುಷಾಕೃತಿಯನ್ನು ನೋಡಿ ಈ ಕಾರ್ಯವನ್ನು ಮಾಡಲು ಇವರು ಅತ್ಯಂತ ಸಮರ್ಥರೆಂದು ತಿಳಿದ ಆ ದುಷ್ಟರಾಜನು 'ನೀವು ಸ್ವಲ್ಪಹೊತ್ತು ಭೂಮಿಯನ್ನು ಅಗೆಯುವ ಕೆಲಸವನ್ನು ಮಾಡಿಯೇ ಮುಂದೆ ಹೋಗಬೇಕೆಂದು ಒತ್ತಾಯಮಾಡಿದನು. ಆಚಾರ್ಯರು 'ನಮಗೆ ಈ ಕೆಲಸ ತಿಳಿಯದು, ನೀನೇ ಒಂದು ಬಾರಿ ಆ ಕೆಲಸವನ್ನು ಮಾಡಿ ತೋರಿಸು' ಎಂದರು. ಅದರಂತೆ ಆ ಅರಸನು ಅಗೆಯಲು ಆರಂಭಿಸಿ, ಆಚಾರ್ಯರ ಮಹಿಮೆಯಿಂದಾಗಿ ನಿರಂತರವಾಗಿ ಅಗೆಯುತ್ತಾ ಇದ್ದನು, ನಿಲ್ಲಿಸಲೇ ಇಲ್ಲ. ಆಚಾರ್ಯರು ಅವನ ಎದುರಿನಲ್ಲಿಯೇ ನಗುತ್ತಾ ಶಿಷ್ಯಸಮೇತರಾಗಿ ಮುಂದೆ ಹೋದರು.

೨) ಆಚಾರ್ಯರು ಅಲ್ಲಿಂದ ಹಾಗೆಯೇ ಉತ್ತರದೇಶದಲ್ಲಿ ಸಂಚರಿಸುತ್ತಾ ಗಂಗಾನದಿಯ ದಡಕ್ಕೆ ಬಂದರು. ಆಗ ಅಲ್ಲಿ ದೋಣಿಯನ್ನು

Rarest Archiver

ನಡೆಸುವವರು ಯಾರೂ ಇರಲಿಲ್ಲ. ಶತ್ರುಗಳ ಭಯದಿಂದ ರಾಜನು ಯಾರನ್ನೂ ದಾಟಿಸಬಾರದೆಂದು ಕಟ್ಟಪ್ಪಣೆ ಮಾಡಿದ್ದನು. ಆಚಾರ್ಯರು ತನ್ನ ಸೊಂಟಕ್ಕೆ ಕಟ್ಟಿಕೊಂಡ ಬಟ್ಟೆಯ ತುದಿಯನ್ನು ಹಿಡಿದುಕೊಳ್ಳುವಂತೆ ಒಬ್ಬ ಶಿಷ್ಯನಿಗೆ ಹೇಳಿದರು. ಆ ಶಿಷ್ಯನನ್ನು ಮತ್ತೊಬ್ಬನು ಹಾಗೆಯೇ ಅವಲಂಬಿಸಿದನು. ಅವನನ್ನು ಮತ್ತೊಬ್ಬನು ಆಶ್ರಯಿಸಿದನು. ಎಲ್ಲರೂ ಹಿಂದು ಹಿಂದಿನವರು ಮುಂದುಮುಂದಿನವರನ್ನು ಅವಲಂಬಿಸಿದ ಮೇಲೆ ಆಚಾರ್ಯರು ಎಲ್ಲರಿಗಿಂತಲೂ ಮುಂದೆ ಈಜುತ್ತಾ ಎಲ್ಲರನ್ನೂ ತಾನೊಬ್ಬನೇ ಎಳೆಯುತ್ತಾ ಆಚೆಯ ದಡವನ್ನು ಸೇರಿದರು. ಅವರು ದಡವನ್ನು ಸೇರುವುದಕ್ಕೆ ಮೊದಲೇ ರಾಜಭಟರು ಇವರು ಶತ್ರುಗಳ ಕಡೆಯವರಿರಬೇಕೆಂದು ಆಚಾರ್ಯರೂ ಅವರ ಶಿಷ್ಯರೂ ಮುಂದೆ ಬರಬಾರದೆಂದು ಹೇಳುತ್ತಾ ತಡೆದರು. ಆಚಾರ್ಯರು ಸ್ವಲ್ಪವೂ ಹೆದರದೆ ಆ ಸೈನಿಕರನ್ನು ಕುರಿತು ಹೀಗೆಂದು ಹೇಳಿದರು—

'ಎಲೈ ಮಂಕರೇ ! ನೀವೇಕೆ ನಮ್ಮನ್ನು ತಡೆಯಲು ನೀರಿಗೆ ಹಾರುತ್ತೀರಿ ? ನಾವು ನಿಮ್ಮ ರಾಜನನ್ನು ನೋಡಿ ಮಾತಾಡಲು ಹೋಗುತ್ತಿದ್ದೇವೆ. ನಾವು ಅಲ್ಪಸಂಖ್ಯೆಯವರು. ನೀವು ಬಹುಸಂಖ್ಯಾತರು· ನಮ್ಮಿಂದ ನಿಮಗೆ ಭಯವೇತರದು ?' ಎಂದು ಅವರ ಭಾಷೆಯಿಂದಲೇ ಉತ್ತರವನ್ನು ಕೊಟ್ಟು ಹಾವಾಡಿಗನು ಪುಂಗಿಯನ್ನೂದಿ ಮಂತ್ರಬಲದಿಂದ ಹಾವುಗಳನ್ನು ತಡೆಯುವಂತೆ ಆ ರಾಜಭಟರನ್ನು ತಡೆದರು. ತಮ್ಮ ಶಿಷ್ಯರ ಭಯವನ್ನು ಪರಿಹರಿಸಿ ಎಲ್ಲರನ್ನೂ ಗಂಗಾನದಿಯ ಆಚೆಯ ದಡಕ್ಕೆ ಸೇರಿಸಿದರು. ಆಚೆಯ ದಡಕ್ಕೆ ಬಂದಕೂಡಲೇ ಸಾವಿರಾರು ತುರುಷ್ಕಭಟರು ಆಚಾರ್ಯರನ್ನೂ ಅವರ ಶಿಷ್ಯರನ್ನೂ ಸುತ್ತುವರಿದರು. ಆದರೆ ಆಚಾರ್ಯರು ಯಾವ ಭಯವೂ ಇಲ್ಲದೆ ನಗುತ್ತಾ, ಶಿಷ್ಯಸಮೇತರಾಗಿ ಸೈನಿಕರ ಮಧ್ಯದಲ್ಲಿ ನಡೆಯುತ್ತಾ ಮಹಾರಾಜನಂತೆ ಮುಂದೆ ಸಾಗಿದರು. ನಗರ ಮಧ್ಯಕ್ಕೆ ಬಂದಕೂಡಲೇ, ಅರಮನೆಯ ಮಹಡಿಯ ಮೇಲೆ ನಿಂತು ನೋಡುತ್ತಿದ್ದ ತುರುಕರಾಜನು ಆಚಾರ್ಯರನ್ನು ಸಂಬೋಧಿಸಿ ಗಟ್ಟಿಯಾಗಿ ತುರುಕರಭಾಷೆಯಿಂದಲೇ ಹೀಗೆ ಕೇಳಿದನು—

Rarest Archiver

'ಹಸನ್ಮುಖವುಳ್ಳ ಮಹಾಪುರುಷನೇ ! ಶತ್ರುರಾಜರ ಗೂಢಚಾರರು ಬರದಂತೆ ತಡೆಯಲು ನಾನು ನೇಮಿಸಿರುವ ಯಮಭಟರಂತಿರುವ ನನ್ನ ಸೈನಿಕರಿಂದ ಹಿಂಸೆಗೊಳಗಾಗದೆ ನೀವೆಲ್ಲರೂ ಇಲ್ಲಿಗೆ ಹೇಗೆ ಬಂದಿರಿ ? ನಾವೆಯಿಲ್ಲದೆ ನೀವೆಲ್ಲರೂ ಗಂಗಾನದಿಯನ್ನು ಹೇಗೆ ದಾಟಿದಿರಿ ?' ಇತ್ಯಾದಿ ಪ್ರಶ್ನೆಗಳನ್ನು ಅವನು ತಮ್ಮ ಭಾಷೆಯಲ್ಲಿಯೇ ಕೇಳಿದಾಗ ಆಚಾರ್ಯರೆಂದರು— 'ರಾಜನೇ ! ಮೇಲೆ ಆಕಾಶದಲ್ಲಿ ಬೆಳಗುವ ಸೂರ್ಯನಲ್ಲಿ ನಮ್ಮ ದೇವರಿದ್ದಾನೆ. ಅವನ ಅನುಗ್ರಹಬಲದಿಂದ ನಾವು ಅತ್ಯಂತ ಅಸಾಧ್ಯವಾದ ಕಾರ್ಯವನ್ನು ಸಾಧಿಸುತ್ತೇವೆ. ಈಗ ಉತ್ತರದಿಕ್ಕಿಗೆ ಹಿಮಾಲಯದ ಕಡೆಗೆ ತ್ವರೆಯಿಂದ ಹೋಗುತ್ತಿದ್ದೇವೆ' ಹೀಗೆ ಆಚಾರ್ಯರು ತುರುಕಭಾಷೆಯಿಂದಲೇ ರಾಜನಿಗೆ ಉತ್ತರ ಕೊಟ್ಟರು.

ಆಚಾರ್ಯರ ಗಾಂಭೀರ್ಯ, ಧೈರ್ಯ, ಕಾಂತಿ, ದೇಶಕಾಲೋಚಿತವಾದ ಮಾತುಗಳು ಇವನ್ನೆಲ್ಲಾ ನೋಡಿ, ಕೇಳಿದ ರಾಜನು ತನ್ನ ಅರ್ಧ ರಾಜ್ಯವನ್ನು ಆಚಾರ್ಯರಿಗೆ ಸಮರ್ಪಿಸಿದನು. ಆಚಾರ್ಯರು ತನಗೆ ರಾಜ್ಯವು ಬೇಡವೆಂದು ಹೇಳಿ ಆ ರಾಜನನ್ನು ಬೀಳ್ಕೊಂಡು ಮುಂದಕ್ಕೆ ಪ್ರಯಾಣ ಮಾಡಿದರು.

೩) ಒಂದು ಕಡೆ ಕೆಲವು ಮಂದಿ ದರೋಡೆಕೋರರಾದ ಕಳ್ಳರು ಇವರಲ್ಲಿರುವ ಹಣವನ್ನು ಕಸಿದುಕೊಳ್ಳಲು ಎದುರಾಗಿ ಬಂದರು. ಆಚಾರ್ಯರು ತಮ್ಮ ಶಿಷ್ಯರನ್ನೆಲ್ಲಾ ಒಂದುಕಡೆ ನಿಲ್ಲಿಸಿ, ಒಂದು ಬಟ್ಟೆಯನ್ನು ಗಂಟಿನಂತೆ ಮಡಿಸಿ ಅದು ಹಣದ ಗಂಟೆಂಬ ಭ್ರಾಂತಿಯನ್ನುಂಟುಮಾಡಿದರು. ಆ ಕಳ್ಳರ ಮಧ್ಯದಲ್ಲಿ 'ಯಾರು ಬೇಕಾದರೂ ಹಣದ ಗಂಟನ್ನು ತೆಗೆದುಕೊಳ್ಳಿರಿ' ಎಂದು ಗಂಟನ್ನು ತೋರಿಸುತ್ತಾ ಸುತ್ತಲೂ ಸಂಚರಿಸುತ್ತಿದ್ದರು. ಆ ಕಳ್ಳರು 'ಹಣದ ಗಂಟು ತನಗೆ ಬೇಕು, ತನಗೆ ಬೇಕು' ಎಂದು ಪರಸ್ಪರ ಜಗಳ ವಾಡುತ್ತಾ ಒಬ್ಬರನ್ನೊಬ್ಬರು ಹೊಡಿಯುತ್ತಾ ಬಡಿಯುತ್ತಾ ಎಲ್ಲರೂ ಸತ್ತು ಹೋದರು. ಹಿಂದೆ ಅರ್ಜುನನು ಸಂಸಪ್ತಕರನ್ನು ಮೋಹಗೊಳಿಸಿ ಒಬ್ಬರು ಇನ್ನೊಬ್ಬರನ್ನು ಅರ್ಜುನನೆಂದು ತಿಳಿದುಕೊಳ್ಳುವಂತೆ ಮಾಡಿ ಪರಸ್ಪರ ಜಗಳವಾಡಿಸಿ ಸಾಯಿಸಿದಂತೆ ಈ ಕಾರ್ಯವನ್ನು ಮಾಡಿದರು.

Rarest Archiver

೪) ಆಚಾರ್ಯರು ಮುಂದುವರೆದು ಶಿಷ್ಯರೊಡನೆ ಪ್ರಯಾಣ ಮಾಡುತ್ತಾ ಇದ್ದಾಗ ನೂರುಮಂದಿ ವೀರರಾದ ಕಳ್ಳರು ಶಿಷ್ಯಸಮೇತರಾದ ಆಚಾರ್ಯರನ್ನು ಕೊಲ್ಲಲು ಬಂದರು. ಆಗ ಆಚಾರ್ಯರು ತಮ್ಮ ಶಿಷ್ಯರಲ್ಲಿ ಒಬ್ಬರಾದ ಉಪೇಂದ್ರತೀರ್ಥರೆಂಬವರನ್ನು ಕರೆದು ಆ ಕಳ್ಳರ ಕೈಯಲ್ಲಿದ್ದ ಕೊಡಲಿಗಳನ್ನು ಕಿತ್ತುಕೊಳ್ಳುವಂತೆ ಹೇಳಿದರು. ಅವರು ಕೊಡಲಿ ಕಿತ್ತು ಕೊಂಡ ಕೂಡಲೇ 'ಅವರ ಕೊಡಲಿಯಿಂದಲೇ ಕಳ್ಳರನ್ನು ಹೊಡೆ' ಎಂದು ಹೇಳಿದರು. ಉಪೇಂದ್ರತೀರ್ಥರು ಒಬ್ಬ ಕಳ್ಳನನ್ನು ಹೊಡೆದ ಕೂಡಲೇ ಉಳಿದ ಕಳ್ಳರೆಲ್ಲರೂ ಹೆದರಿ ಓಡಿಹೋದರು.

೫) ಆಚಾರ್ಯರು ಮುಂದೆ ಪ್ರಯಾಣ ಮಾಡುತ್ತಿದ್ದಾಗ ಕೆಲವು ಮಂದಿ ಕಳ್ಳರು ಶಿಷ್ಯಸಮೇತರಾದ ಆಚಾರ್ಯರನ್ನು ಹಿಡಿಯಲು ಬಂದರು. ಆದರೆ ಹತ್ತಿರಕ್ಕೆ ಬರುತ್ತಿದ್ದಂತೆ ಪರೀಕ್ಷಿಸಿ ಚೆನ್ನಾಗಿ ನೋಡಿದರೂ, ಆಚಾರ್ಯರೂ ಅವರ ಶಿಷ್ಯರೂ ಕಳ್ಳರಿಗೆ ಎತ್ತರವಾದ ಬಂಡೆಕಲ್ಲುಗಳಂತೆ ಕಂಡರು. ಆಗ ಕಳ್ಳರು ಅವರನ್ನೆಲ್ಲಾ ಬಿಟ್ಟು ದೂರ ಹೋದರು. ಬದರಿಕಾ ಶ್ರಮದ ದಾರಿಯಲ್ಲಿ ಮುಂದೆ ಹೋಗುತ್ತಿದ್ದಾಗ ಅದೇ ಕಳ್ಳರು ಪುನಃ ದೂರ ದಲ್ಲಿಯೂ, ಮನುಷ್ಯರು ಓಡಾಡುವಂತೆ ಕಾಣಿಸಿದ ಆಚಾರ್ಯರನ್ನೂ ಅವರ ಶಿಷ್ಯರನ್ನೂ ನೋಡಿ ತುಂಬಾ ಆಶ್ಚರ್ಯಪಟ್ಟು ಹತ್ತಿರಕ್ಕೆ ಬಂದು ನಮಸ್ಕರಿಸಿ ತಮಗೆ ಆದ ಅನುಭವವನ್ನು ನಿವೇದಿಸಿ ಆಚಾರ್ಯರಲ್ಲಿ ಕ್ಷಮೆಯನ್ನು ಪ್ರಾರ್ಥಿಸಿದರು.

೬) ಹಿಮಾಲಯವನ್ನೇರುತ್ತಾ ಆಚಾರ್ಯರು ಮುಂದೆ ಹೋಗು ತ್ತಿದ್ದರು. ಸತ್ಯತೀರ್ಥರೆಂಬ ಶಿಷ್ಯರು ದೇವರಪೆಟ್ಟಿಗೆಯನ್ನು ಹೊತ್ತುಕೊಂಡು ಮುಂದೆ ಹೋಗುತ್ತಿದ್ದರು. ದುಷ್ಟದೈತ್ಯನೊಬ್ಬನು ಹುಲಿಯರೂಪವನ್ನು ತಾಳಿ ಅವರನ್ನು ಕೊಲ್ಲಲು ಮೇಲೆ ಹಾರಿದನು. ಆಚಾರ್ಯರು ತನ್ನ ಎಡ ಅಂಗೈಯ ಸ್ಪರ್ಶಮಾತ್ರದಿಂದ ಆ ಹುಲಿಯನ್ನು ದೂರಕ್ಕೆ ತಳ್ಳಿದರು. ಅದು ಅಲ್ಲಿಂದ ಎದ್ದು ಮುಂದೆ ಬರಲಾರದೆ ನಿಶ್ಚೇಷ್ಟವಾಗಿ ಬಿದ್ದಿತ್ತು.

೭) ಆಚಾರ್ಯರು ಬದರಿಕಾಶ್ರಮಕ್ಕೆ ಹೋಗಿ ತನ್ನ ಗುರುಗಳಾದ ಶ್ರೀವೇದವ್ಯಾಸರನ್ನೂ, ಶ್ರೀನಾರಾಯಣಮುನಿಗಳನ್ನೂ ಕಂಡರು. ಅಲ್ಲಿ ಕೆಲವು

Rarest Archiver

ದಿನಗಳವರೆಗೆ ಇದ್ದು ಅವರಿಂದ ತತ್ತ್ವೋಪದೇಶವನ್ನು ಪಡೆದರು. ಆಚಾರ್ಯರು ಬದರೀತೀರ್ಥವನ್ನು, ಶ್ರೀವೇದವ್ಯಾಸರ ಸಂನಿಧಾನವನ್ನು ಬಿಟ್ಟುಹೋಗಲು ಇಚ್ಛಿಸಲಿಲ್ಲ. ಇಲ್ಲೇ ಇರುತ್ತೇನೆಂದರು. ಆಗ ವೇದವ್ಯಾಸರು ತನ್ನ ಪಕ್ಕದಲ್ಲಿದ್ದ ಮಂದಾಕಿನಿಯ ಮರಳನ್ನು ಮುಷ್ಟಿಯಿಂದ ಬಿಗಿಯಾಗಿ ಹಿಡಿದು ಅದು ಗಟ್ಟಿಯಾದ ಶಿಲೆಯಾಗುವಂತೆ ಮಾಡಿ ತನ್ನ ಸನ್ನಿಧಾನವುಳ್ಳ ಆ ಮಳಲುಮುಷ್ಟಿಗಳನ್ನು ಆಚಾರ್ಯರಿಗೆ ಕೊಟ್ಟು, 'ನೀವು ಎಲ್ಲಿ ಸ್ನಾನಮಾಡುತ್ತೀರೋ, ಅಲ್ಲಿ ಗಂಗಾಸಂನಿಧಾನವಿರುತ್ತದೆ, ಈ ಪ್ರತಿಮೆಗಳಲ್ಲಿ ನಾನು ಇರುತ್ತೇನೆ. ನಿಮಗೆಂದೂ ನನ್ನ ಮತ್ತು ಈ ತೀರ್ಥದ ಅಗಲುವಿಕೆಯ ಭಯವಿಲ್ಲ' ಎಂದು ಹೇಳಿದರು.

೮) ಆಚಾರ್ಯರು ಎರಡನೆಯ ಬಾರಿ ಬದರಿಕಾಶ್ರಮಕ್ಕೆ ಹೋಗಿ ಅಲ್ಲಿ ವೇದವ್ಯಾಸರ ಬಳಿ ಇದ್ದಾಗ ಶ್ರೀವೇದವ್ಯಾಸರು ಆಚಾರ್ಯರಿಗೆ ಒಂದು ವಿಶೇಷವಾದ ಅಪ್ಪಣೆಯನ್ನು ಮಾಡಿದರು. 'ಪರಾಪರತತ್ತ್ವಗಳ ನಿರೂಪಣೆಯನ್ನು ಆಖ್ಯಾನೋಪಾಖ್ಯಾನಗಳ ಮೂಲಕ ಚೆನ್ನಾಗಿ ತಿಳಿಸಲು ನಾನು ರಚಿಸಿರುವ ಮಹಾಭಾರತದ ತಾತ್ಪರ್ಯವನ್ನು ತಿಳಿಸಲು ಒಂದು ಉತ್ತಮವಾದ ಗ್ರಂಥವನ್ನು ರಚಿಸಬೇಕಾಗಿದೆ. ಆ ಕಾರ್ಯವನ್ನು ನೀನೇ ಮಾಡಬೇಕು' ಎಂಬ ತಮ್ಮ ಗುರುಗಳ ಆಜ್ಞೆಯನ್ನು ಆಚಾರ್ಯರು ಶಿರಸಾ ವಹಿಸಿದರು.

೯) ಆಚಾರ್ಯರು ಬದರಿಕಾಶ್ರಮದಿಂದ ಹಿಂದಿರುಗಿಬರುತ್ತಿರುವಾಗ ವಿಶಾಲಪ್ರವಾಹದಿಂದ ಹರಿಯುತ್ತಿರುವ ಗಂಗೆಯ ಬಳಿ ಸಾಯಂಕಾಲವಾಯಿತು. ಗಂಗೆಯನ್ನು ದಾಟಲು ದೋಣಿಗಳು ಇರಲಿಲ್ಲ. ಸೂರ್ಯನೂ ಮುಳುಗಲಾರಂಭಿಸಿದ್ದನು. ಶಿಷ್ಯರೆಲ್ಲರೂ ದಿಕ್ಕು ತೋಚದೆ ಗಂಗಾನದಿಯ ದಡದಲ್ಲಿ ಕುಳಿತುಬಿಟ್ಟರು. ಆಚಾರ್ಯರು ತಾವು ಒಬ್ಬರೇ ಉಟ್ಟಬಟ್ಟೆಯೂ ಒದ್ದೆಯಾಗದಂತೆ ಗಂಗಾನದಿಯನ್ನು ದಾಟಿದರು. ರಾತ್ರಿಯಲ್ಲಿ ಗಂಗೆಯನ್ನು ದಾಟಿದ ಆಚಾರ್ಯರು ಏನಾದರೋ ಎಂದು ಶಿಷ್ಯರು ಈಕಡೆದಡದಲ್ಲಿ ವ್ಯಥೆಪಡುತ್ತಾ ಕುಳಿತಿದ್ದರು. ಕತ್ತಲೆಯಲ್ಲಿ ಏನೂ ಕಾಣಿಸುತ್ತಿರಲಿಲ್ಲ. ಆಚಾರ್ಯರಾದರೋ ಗರುಡನು ಹಸುವಿನ ಹೆಜ್ಜೆಯನ್ನು ದಾಟುವಂತೆ ಅನಾಯಾಸವಾಗಿ ಗಂಗಾನದಿಯನ್ನು ದಾಟಿ ಆಚೆಯ ದಡಕ್ಕೆ ಬಂದು, ಅಲ್ಲಿ ಸೇರಿದ್ದ

Rarest Archiver

ಒಂದು ದೊಡ್ಡ ಸಭೆಗೆ ಬಂದರು. ಅಲ್ಲಿ ಅನೇಕ ಪಂಡಿತರೂ ಅವರಿಗೆ ಆಶ್ರಯವನ್ನು ಕೊಟ್ಟಿರುವ ರಾಜನೂ ಇತರ ಮುಖಂಡರೂ ಇದ್ದರು. ಆಚಾರ್ಯರಂತಹ ಮಹಾನುಭಾವರನ್ನು ನೋಡಿ ಅವರೆಲ್ಲರೂ ಬೆರಗಾಗಿ ಆಚಾರ್ಯರಿಗೆ ನಮಸ್ಕಾರ ಮಾಡಿದರು. ಆಚಾರ್ಯರಿಂದ ಅವರ ಶಿಷ್ಯರ ವಿಷಯವನ್ನು ತಿಳಿದು ರಾಜನು ತನ್ನ ನಾವಿಕರನ್ನು ಕಳುಹಿಸಿ ಆಚೆಯ ದಡದಲ್ಲಿದ್ದ ಆಚಾರ್ಯರ ಶಿಷ್ಯರನ್ನೆಲ್ಲಾ ಈ ದಡಕ್ಕೆ ತರಿಸಿದನು. ಶತ್ರುಗಳ ಭಯದಿಂದ ನಾವಿಕರು ರಾಜಾಜ್ಞೆ ಇಲ್ಲದೆ ಯಾರನ್ನೂ ಈ ಕಡೆ ದಾಟಿಸುತ್ತಿರಲಿಲ್ಲ. ಆದರೂ ಆಚಾರ್ಯರ ಪ್ರಭಾವದಿಂದ ಆ ಕಗ್ಗತ್ತಲೆಯಲ್ಲಿಯೂ ರಾಜನು ಆಚಾರ್ಯರ ಶಿಷ್ಯರನ್ನು ಈ ದಡಕ್ಕೆ ತರಿಸಿದನು. ಆಚಾರ್ಯರು ಎಲ್ಲೋ ಒಂದು ಮೂಲೆಯಲ್ಲಿ, ಕತ್ತಲಲ್ಲಿ ಕುಳಿತಿರಬಹುದು ಎಂದು ಆಲೋಚಿಸುತ್ತಿದ್ದ ಶಿಷ್ಯರು ಇಲ್ಲಿ ನೋಡಿದ ದೃಶ್ಯವೇ ಬೇರೆ. ಗಂಗಾತೀರದಲ್ಲಿ ಸಾವಿರಾರು ಜನರ ಸಭೆಯು ಸೇರಿದೆ. ದೀಪಗಳು ಪ್ರಜ್ವಲಿಸುತ್ತಿವೆ. ಎತ್ತರವಾದ ಆಸನದಲ್ಲಿ ಸಭೆಯ ನಡುವೆ ಆಚಾರ್ಯರು ಕುಳಿತಿದ್ದಾರೆ. ಅನೇಕ ಪಂಡಿತರು ಪ್ರಶ್ನಿಸುತ್ತಿದ್ದಾರೆ. ಸತ್ಯಲೋಕದಲ್ಲಿ ಬ್ರಹ್ಮದೇವರು ಋಷಿಗಳಿಗೆ ವೇದವನ್ನು ವ್ಯಾಖ್ಯಾನಿಸಿ ಹೇಳುವಂತೆ ಆಚಾರ್ಯರೂ ವೇದಾಭಿಪ್ರಾಯವನ್ನು ಪಂಡಿತರಿಗೆ ತಿಳಿಸುತ್ತಿದ್ದಾರೆ. ಪಂಡಿತರು ಆಚಾರ್ಯರ ಗಂಭೀರಧ್ವನಿಯ ಉತ್ತರವನ್ನು ಕೇಳಿ ಆನಂದಪರವಶರಾಗಿದ್ದಾರೆ. ಇಂತಹ ಸಂನಿವೇಶದಲ್ಲಿ ಆಚಾರ್ಯರ ದರ್ಶನವಾದಾಗ ಆಚಾರ್ಯರ ಶಿಷ್ಯರಿಗೆ ಉಂಟಾದ ಆನಂದ ಮತ್ತು ಆಶ್ಚರ್ಯಗಳಿಗೆ ಪಾರವೇ ಇಲ್ಲ.

೧೦) ಅಲ್ಲಿಂದ ಆಚಾರ್ಯರು ಹಸ್ತಿನಾವತಿಗೆ ಬಂದರು. ಗಂಗೆಯಿಂದ ಸ್ವಲ್ಪ ದೂರದಲ್ಲಿರುವ ಮಠದಲ್ಲಿ ಚಾತುರ್ಮಾಸ್ಯವ್ರತದೀಕ್ಷಿತರಾದರು. ಆಗ ಒಂದುದಿನ ಗಂಗಾದೇವಿಯು ಆಚಾರ್ಯರನ್ನು ಸೇವಿಸಲು ತಾನೇ ಒಂದು ಶಾಖೆಯಾಗಿ ಗುಪ್ತಗಾಮಿನಿಯಾಗಿ ಬಂದು ಮಠದ ಹತ್ತಿರದ ಒಂದು ಸ್ಥಳವನ್ನು ಸೀಳಿ ಮೇಲಕ್ಕೆ ಬಂದು ಕಾಣಿಸಿಕೊಂಡಳು. ಸುಂದರವಾದ ದಿವ್ಯಸ್ತ್ರೀ ರೂಪವನ್ನು ಸ್ವೀಕರಿಸಿ ಆಚಾರ್ಯರನ್ನು ವಂದಿಸುತ್ತಿರುವ ಅವಳನ್ನು ನೋಡಿ ಶಿಷ್ಯರು ಆಶ್ಚರ್ಯಪಟ್ಟರು.

Rarest Archiver

೧೧) ಚಾತುರ್ಮಾಸ್ಯವ್ರತದ ಅನಂತರ ಆಚಾರ್ಯರು ಕಾಶಿಗೆ ಹೋದರು. ಒಂದು ದಿನ ವಿನೋದವಿಹಾರಸಮಯದಲ್ಲಿ ತಾವೇ ಬಲಿಷ್ಠರೆಂದು ಅಹಂಕರಿಸುತ್ತಿದ್ದ ಶಿಷ್ಯರನ್ನು ಅನುಗ್ರಹಿಸಿ, ತನ್ನ ಮಹಿಮೆಯನ್ನೂ ಸ್ವಲ್ಪ ಪ್ರಕಟಪಡಿಸಲು ಬಯಸಿದರು. "ನಿಮ್ಮಲ್ಲಿ ಪ್ರತಿಯೊಬ್ಬರೂ 'ನಾನೇ ಎಲ್ಲರಿಗಿಂತ ಬಲಶಾಲಿ' ಎಂದು ಹುಂಕರಿಸುತ್ತೀರಲ್ಲವೆ? ನನ್ನೊಡನೆ ಬಾಹುಯುದ್ಧಕ್ಕೆ ಬನ್ನಿ. ನಿಮ್ಮ ಪೂರ್ಣಶಕ್ತಿಯನ್ನು ಉಪಯೋಗಿಸಿರಿ. ಗುರುಗಳೆಂದು ದಾಕ್ಷಿಣ್ಯದಿಂದ ಪೂರ್ಣಶಕ್ತಿಯನ್ನು ತೋರಿಸದವನಿಗೆ ನಮ್ಮ ಆಜ್ಞೆಯ ಉಲ್ಲಂಘನದೋಷವು ಬರುತ್ತದೆ. ತಿಳಿಯಿರಿ" ಎಂದರು. ಆಗ ಹದಿನೈದು ಮಂದಿ ತರುಣರಾದ ಬಲಿಷ್ಠರಾದ ಯುವಕರು ಒಟ್ಟಿಗೆ ಆಚಾರ್ಯರ ಮೇಲೆರಗಿದರು. ಆದರೆ ಆಚಾರ್ಯರು ಒಂದುಕ್ಷಣದಲ್ಲಿ ಅವರನ್ನು ನೆಲಕ್ಕೆ ಕೆಡವಿ ತನ್ನ ಕೈಯಿಂದ ಅವರೆಲ್ಲರನ್ನೂ ಒತ್ತಿಹಿಡಿದು 'ನಿಮ್ಮಲ್ಲಿ ಯಾವನಿಗೆ ಶಕ್ತಿಯಿದೆಯೋ ಅವನು ಏಳಲಿ. ನೀವೆಲ್ಲರೂ ಒಟ್ಟಿಗಾದರೂ ಏಳಿರಿ!' ಎಂದು ಹೇಳುತ್ತಾ ನಕ್ಕರು. 'ಸ್ವಾಮಿ! ನಮ್ಮ ಮೈಮೇಲಿರುವ ನಿಮ್ಮ ಕೈ ಮತ್ತು ಕೈಬೆರಳುಗಳು ನಮಗೆ ಮೇರುಪರ್ವತದಷ್ಟು ಭಾರವಾಗಿವೆ. ನಾವು ಸಾಯದಂತೆ ಕಾಪಾಡಿರಿ. ಕೈಯನ್ನು ಮೇಲೆತ್ತಿರಿ' ಎಂದು ಶಿಷ್ಯರು ಅಂಗಲಾಚಿ ಬೇಡಿದರು.

೧೨) ಕಾಶಿಯಲ್ಲಿ ಅಮರೇಂದ್ರಪುರಿ ಎಂಬ ಯತಿಯೊಡನೆ ಆಚಾರ್ಯರು ವಾದನಡೆಸಿದರು. ಎಲ್ಲಾ ವಾದಿಗಳನ್ನು ಸುಲಭವಾಗಿ ಸೋಲಿಸುತ್ತಿದ್ದ ಆ ವಾದಿಮಲ್ಲನು ಆಚಾರ್ಯರೊಡನೆ ಹೀಗೆಂದನು—'ಅಜ್ಞಾನಿಯು ಕರ್ಮವನ್ನು ಮಾಡಬೇಕು. ಜ್ಞಾನಿಯು ಸಂನ್ಯಾಸವನ್ನು ಸ್ವೀಕರಿಸಬೇಕು. ಕರ್ಮಜ್ಞಾನಗಳಿಗೆ ಪರಸ್ಪರ ವಿರೋಧವಿದೆ. ನೀವು ಇಲ್ಲವೆನ್ನುತ್ತೀರಿ. ಇದು ಹೇಗೆ?' ಎಂದಾಗ ಆಚಾರ್ಯರು 'ಕರ್ಮವು ಅಂತಃಕರಣಶುದ್ಧಿಯನ್ನು ಉಂಟುಮಾಡಿ ಜ್ಞಾನಕ್ಕೆ ಕಾರಣವಾಗುತ್ತದೆ. ಜ್ಞಾನಪ್ರಾಪ್ತಿಯಾದ ಮೇಲೆ ಮಾಡುವ ಕರ್ಮವು ಭಗವಂತನ ವಿಶೇಷಪ್ರೀತಿಗೆ ಕಾರಣವಾಗುತ್ತದೆ. ಆದುದರಿಂದ ಜ್ಞಾನಸಿದ್ಧಿಗಿಂತ ಮೊದಲೂ ಕರ್ಮ ಬೇಕು, ಜ್ಞಾನಪ್ರಾಪ್ತಿಯ ಅನಂತರದಲ್ಲಿಯೂ ಕರ್ಮ ಬೇಕು. ಜ್ಞಾನಕರ್ಮಗಳೆರಡೂ ಸೇರಿ ಉತ್ತಮ

ವಾದ ಮೋಕ್ಷಾನಂದವನ್ನು ತಂದುಕೊಡುತ್ತವೆ' ಎಂದು ಹೇಳಿದ ಆಚಾರ್ಯರು ಶ್ರುತಿಸ್ಮೃತಿಗಳ ಆಧಾರದಿಂದ ಈ ವಿಷಯವನ್ನು ಸಮರ್ಥಿಸಿದರು.

ಇದಕ್ಕೆ ಪ್ರತಿವಾದ ಮಾಡಲು ತೋಚದ ಆ ಸಂನ್ಯಾಸಿಯು-'ಜ್ಞಾನವೆಂದರೇನು ?' ಎಂದು ಆಚಾರ್ಯರನ್ನು ಕೇಳಿದನು. ಅವರು ಹೇಳಿದರು- 'ನೀನು ಜ್ಞಾನಿಯೋ ಅಲ್ಲವೆ? ಜ್ಞಾನ ಉಳ್ಳವನಾದರೆ ಜ್ಞಾನವೆಂದರೆ ಏನೆಂದು ನಿನಗೆ ತಿಳಿದಿದೆ. ಜ್ಞಾನವುಳ್ಳವನಲ್ಲವಾದರೆ ಪ್ರಶ್ನೆಯನ್ನು ಹೇಗೆ ಮಾಡುತ್ತಿ? ನಾನು ಉತ್ತರ ಕೊಟ್ಟರೆ ಅದನ್ನು ಹೇಗೆ ತಿಳಿಯುತ್ತೀ?' ಯತಿಯು ನಿರುತ್ತರನಾದನು. ಆಚಾರ್ಯರ ವಾದಕೌಶಲದಿಂದ ಅಲ್ಲಿದ್ದ ವಿದ್ವಾಂಸರಿಗೆ ಪರಮಾನಂದವಾಯಿತು.

೧೩) ಆಚಾರ್ಯರು ಕುರುಕ್ಷೇತ್ರಕ್ಕೆ ಬಂದರು. ಅಲ್ಲಿ ತಾನು ಭೀಮಸೇನನಾಗಿದ್ದಾಗ ನಡೆಸಿದ ಯುದ್ಧವನ್ನು ಶಿಷ್ಯರಿಗೆ ಯಥಾವತ್ತಾಗಿ ಬಣ್ಣಿಸಿದರು. ಆಗ ಸತ್ಯತೀರ್ಥರು 'ಗುರುಗಳೇ ! ನೀವೇ ಭೀಮಸೇನರಲ್ಲವೇ ? ತಮ್ಮ ಗದೆ ಎಲ್ಲಿದೆ ? ತೋರಿಸಿರಿ' ಎಂದಾಗ ಆಚಾರ್ಯರು ಅಲ್ಲಿ ಒಂದು ಸ್ಥಳವನ್ನು ಅಗೆಸಿದರು. ಅಲ್ಲಿದ್ದ ಅನೇಕ ಆಯುಧಗಳಲ್ಲಿ ಅವರ ಗದೆಯೂ ಕಾಣಿಸಿತು. ಆಚಾರ್ಯರು ಗದೆಯನ್ನು ಎತ್ತಿಹಿಡಿದು—'ಇದು ನನ್ನ ಗದೆ' ಎಂದಾಗ ಶಿಷ್ಯರಿಗೆ ಮೈಯಲ್ಲಿ ರೋಮಾಂಚನವಾಯಿತು. ಪರಮಾಶ್ಚರ್ಯ ಉಂಟಾಯಿತ್ತು, ಪರಮಾನಂದ ಉಂಟಾಯಿತು.

೧೪) **ಮುಂದಿನ ಕಲ್ಪದ ಮಾರೀಚನನ್ನು ಆಚಾರ್ಯರು ತೋರಿಸಿದರು— ಅದು ಹೇಗೆ ?** ಅಲ್ಲಿಯೇ ಸಮೀಪದಲ್ಲಿ ತಪಸ್ಸು ಮಾಡುತ್ತಾ ಕುಳಿತಿದ್ದ ಒಬ್ಬನನ್ನು ನೋಡಿ ಆಚಾರ್ಯರು-'ನೋಡಿರಿ, ಇವನೊಬ್ಬ ಕಪಟಸಂನ್ಯಾಸಿ. ಮುಂದಿನ ಕಲ್ಪದಲ್ಲಿ ಇವನು ಮಾರೀಚನಾಗಿ ಹುಟ್ಟುವನು' ಎಂದರು. ಶಿಷ್ಯರು ಅವನ ಹತ್ತಿರ ಮಾತನಾಡಿ ಪರೀಕ್ಷಿಸಿ ನೋಡಿದಾಗ ಅವನು ಭಗವಂತನ ಮತ್ತು ಭಕ್ತರ ದ್ವೇಷಿಯೆಂದು ತಿಳಿಯಿತು. ಆಚಾರ್ಯರ ಸರ್ವಾಭಿಜ್ಞತ್ವವು, ತ್ರಿಕಾಲಜ್ಞಾನವೂ ಇದರಿಂದ ವ್ಯಕ್ತವಾಯಿತು.

೧೫) ಕುರುಕ್ಷೇತ್ರದಿಂದ ಆಚಾರ್ಯರು ಹೃಷೀಕೇಶಕ್ಕೆ ಹೋದರು. ಅಲ್ಲಿ ಸ್ಫಟಿಕಬಣ್ಣದ ಬ್ರಾಹ್ಮಣನೊಬ್ಬನು ಆಚಾರ್ಯರ ಬಳಿಗೆ ಬಂದು

Rarest Archive

ನಮಿಸಿ 'ಸ್ವಾಮಿ ! ನಾಳೆ ನಾನು ತಮಗೆ ಭಿಕ್ಷೆ ನೀಡಬೇಕೆಂದು ಸಂಕಲ್ಪಿಸಿದ್ದೇನೆ. ದಯವಿಟ್ಟು ಸ್ವೀಕರಿಸಿ ಅನುಗ್ರಹಿಸಬೇಕು' ಎಂದು ವಿಜ್ಞಾಪಿಸಿದನು. ಆಚಾರ್ಯರು ಒಪ್ಪಿದರು. ಕೂಡಲೆ ಆ ಬ್ರಾಹ್ಮಣನು ಅದೃಶ್ಯನಾದನು. 'ಈ ಬ್ರಾಹ್ಮಣನು ಯಾರಿರಬಹುದು ?' ಎಂದು ಶಿಷ್ಯರು ಆಶ್ಚರ್ಯಚಕಿತರಾದರು. ಮರುದಿನ ಆ ಊರಿನ ಸಮೀಪದ ಶಿವಾಲಯದ ಅರ್ಚಕನು ಆಚಾರ್ಯರನ್ನು ಹುಡುಕಿಕೊಂಡುಬಂದು 'ಸ್ವಾಮಿ ! ನನಗೆ ನಿನ್ನೆ ರಾತ್ರಿ ಮೂರು ಬಾರಿ ಕನಸಿನಲ್ಲಿ ತ್ರಿಶೂಲಜಟಾಧಾರಿಯಾಗಿ ಈಶ್ವರನು ಕಾಣಿಸಿಕೊಂಡು ಲೋಕಗುರುಗಳಾದ ತಮಗೆ ಭಿಕ್ಷೆ ನೀಡಲು ಆಜ್ಞೆ ಮಾಡಿದ್ದಾನೆ. ತಾವು ಸ್ವೀಕರಿಸಿ ಅನುಗ್ರಹಿಸಬೇಕು' ಎಂದು ಹೇಳಿದನು. ಅನಂತರ ರಾಶಿರಾಶಿಯಾಗಿ ನಾನಾವಿಧವಾದ ಭಕ್ಷ್ಯಭೋಜ್ಯಗಳನ್ನೂ, ಷಡ್ರಸೋಪೇತವಾದ ಇತರ ಆಹಾರವಸ್ತುಗಳನ್ನೂ ಸಮರ್ಪಿಸಿದನು. 'ಹಿಂದಿನದಿನ ಬಂದು ಭಿಕ್ಷೆಯನ್ನು ಸ್ವೀಕರಿಸಲು ಬೇಡಿದವನು ಸ್ವತಃ ಅನ್ನಪೂರ್ಣೆಯಿಂದ ಭಿಕ್ಷೆಯನ್ನು ಬೇಡುವ ಸಾಕ್ಷಾತ್ ಪರಮೇಶ್ವರನೇ' ಎಂದು ಆಗ ಶಿಷ್ಯರಿಗೆ ತಿಳಿಯಿತು.

೧೬) ಆಚಾರ್ಯರು ಅಲ್ಲಿಂದ ದಕ್ಷಿಣಕ್ಕೆ ಪ್ರಯಾಣಮಾಡುತ್ತಾ ಇಷುಪಾತ (ಬಾಣಗಾರ) ಎಂಬ ಪರಶುರಾಮಕ್ಷೇತ್ರಕ್ಕೆ ಬಂದರು. ಲಕ್ಷ್ಮೀಪತಿಯನ್ನು ನೆನೆದರು. ಅಲ್ಲಿನ ರಾಜನು ಆಚಾರ್ಯರು ಭಿಕ್ಷಾಸ್ವೀಕಾರ ಮಾಡಿ ಮುಗಿಸುತ್ತಿರುವಾಗ ಒಂದು ಸಾವಿರ ರಾಜಬಾಳೆಹಣ್ಣುಗಳನ್ನು ತಂದಿರಿಸಿ ಸ್ವೀಕರಿಸಬೇಕೆಂದು ಬೇಡಿದನು. ಆಚಾರ್ಯರು ಯಾವ ಆಯಾಸವೂ ಇಲ್ಲದೆ ಅವನ್ನೆಲ್ಲಾ ತಿಂದು ಮುಗಿಸಿದರು.

೧೭) ಆಚಾರ್ಯರು ಗೋವೆಗೆ ಬಂದರು. ಅಲ್ಲಿ ಶಂಕರಭಟ್ಟ ಎಂಬ ಬ್ರಾಹ್ಮಣನು ಆಚಾರ್ಯರಿಗೆ ಭಿಕ್ಷೆಯನ್ನು ನೀಡಿ, ಕೊನೆಯಲ್ಲಿ ನಾಲ್ಕು ಸಾವಿರ ಬಾಳೆಹಣ್ಣುಗಳನ್ನು ಮೂವತ್ತು ಕೊಡ ಹಾಲನ್ನೂ ಮುಂದಿಟ್ಟನು. ಆಚಾರ್ಯರು ಅದೆಲ್ಲವನ್ನೂ ಸೇವಿಸಿ ಎಲ್ಲರನ್ನೂ ದಂಗುಬಡಿಸಿದರು.

'ಇಂತಹ ವಿಚಿತ್ರಶಕ್ತಿಯ ಮನುಷ್ಯನು ದುರ್ಲಭ, ಇವನನ್ನು ನಮ್ಮ ರಾಜ್ಯದಲ್ಲಿಯೇ ಇರಿಸಿಕೊಂಡರೆ, ಸಮಯ ಬಂದಾಗ ಇವನ ಸಹಾಯ

Rarest Archiver

ಪಡೆಯಬಹುದು' ಎಂಬ ದುರಾಲೋಚನೆಯಿಂದ ಅಲ್ಲಿಯ ರಾಜನು ಆಚಾರ್ಯರನ್ನು ಕೇಳಿಕೊಳ್ಳಲು ಬಂದನು. ಆಗ ಆಚಾರ್ಯರು ಅಲ್ಲಿನ ಒಂದು ದೇವಾಲಯದೊಳಗೆ ಗರ್ಭಗುಡಿಯಲ್ಲಿ ಬಾಗಿಲು ಮುಚ್ಚಿಕೊಂಡು ದೇವತೆಗಳೊಡನೆ ರಹಸ್ಯವಾಗಿ ಮಂತ್ರಾಲೋಚನೆ ನಡೆಸುತ್ತಿದ್ದರು. ರಾಜನು 'ತಾನು ರಾಜ ; ಯತಿಯಾದರೇನು ? ನರಪತಿಯಾದರೇನು ?' ಎಲ್ಲರೂ ತಾನು ಬಯಸಿದಾಗ ತನಗೆ ದರ್ಶನಕೊಡಬೇಕೆಂದು ಅಹಂಕಾರಪಡುತ್ತಾ- 'ಆಚಾರ್ಯರೇ ! ಬಾಗಿಲು ತೆಗೆಯಿರಿ' ಎಂದು ಗರ್ಜಿಸಿದನು. ಆಚಾರ್ಯರು ಒಳಗಿನಿಂದ 'ಇದು ಭೇಟಿಯ ಸಮಯವಲ್ಲ'ವೆಂದು ಹೇಳಿದರೂ ದುರಹಂಕಾರಿಯಾದ ರಾಜನು 'ಕೂಡಲೇ ನನಗೆ ನಿಮ್ಮ ಭೆಟ್ಟಿಯಾಗಬೇಕು' ಎಂದು ಆಗ್ರಹವನ್ನು ಮಾಡಿದನು. 'ನೀನೀಗ ಒಳಗೆ ಬರಬಾರದು. ಬಂದರೆ ಸಾಯುತ್ತೀ' ಎಂದು ಆಚಾರ್ಯರು ಗುಡುಗಿದರು. ರಾಜನು ಆಚಾರ್ಯರು ತನಗೆ ಅವಮಾನ ಮಾಡಿದರೆಂದು ಬಗೆದು ಸೇವಕರಿಂದ ಬಲಾತ್ಕಾರವಾಗಿ ಬಾಗಿಲು ತೆರೆಸಿ ಒಳಗೆ ಕಾಲಿಟ್ಟನು. ಕೆಂಪಾದ ಕಣ್ಣುಗಳಿಂದ ಉಗ್ರನರಸಿಂಹನಂತೆ ತನ್ನನ್ನು ನೋಡುತ್ತಿದ್ದ ಆಚಾರ್ಯರನ್ನು ನೋಡಿ ರಾಜನು ಇವರ ಶಾಪದಿಂದ ನಾನು ಸಾಯುವೆನು ಎಂದು ಭಯಪಟ್ಟು ಕಂಪಿಸಿದನು. ಕೂಡಲೇ ತನ್ನ ಪುರೋಹಿತರನ್ನು ಕರೆಸಿ, ಅವರನ್ನು ಶರಣುಹೊಂದಿ ಆಚಾರ್ಯರನ್ನು ಹೇಗಾದರೂ ಸಮಾಧಾನಪಡಿಸಿ ತನ್ನನ್ನು ಉಳಿಸಬೇಕೆಂದು ಬೇಡಿಕೊಂಡನು. ಪುರೋಹಿತನು ರಾಜನ ಪರವಾಗಿ ಆಚಾರ್ಯರಲ್ಲಿ ಕ್ಷಮೆಯನ್ನು ಬೇಡಿ ನಾನಾರೀತಿಗಳಿಂದ ಆಚಾರ್ಯರನ್ನು ಒಲಿಸಲು ಪ್ರಯತ್ನಿಸಿದನು. ಕೊನೆಗೆ ಆಚಾರ್ಯರು ರಾಜನಿಗೆ ಆರು ತಿಂಗಳು ಮಾತ್ರ ಆಯುಸ್ಸನ್ನು ಕೊಟ್ಟರು.

ಅನಂತರ ರಾಜನು ವಿನೀತನಾಗಿ ಆಚಾರ್ಯರು ತನ್ನಲ್ಲಿಯೇ ವಾಸ ಮಾಡಬೇಕೆಂದು ಅನೇಕರೀತಿಯಿಂದ ಬೇಡಿಕೊಂಡನು. ಆಚಾರ್ಯರು ಸಂಮತಿಸಲಿಲ್ಲ. ಆದರೂ ರಾಜನು ಸುತ್ತಲೂ ಗುಪ್ತಚಾರರನ್ನೂ, ಗುಪ್ತ ಸೈನಿಕರನ್ನೂ ನಿಲ್ಲಿಸಿದನು. ಆಚಾರ್ಯರು ಆ ಊರಿನಿಂದ ಹೊರಡುವಾಗ ಬೇಹುಗಾರರಿಂದ ಅದನ್ನು ತಿಳಿದು ಅವರ ಕಾಲಿಗೆ ಬಿದ್ದು ಪ್ರಯಾಣವನ್ನು ನಿಲ್ಲಿಸಬೇಕೆಂದು ರಾಜನ ಉದ್ದೇಶವಾಗಿತ್ತು. ಆಚಾರ್ಯರಿಗೆ ಈ ವಿಷಯ

Rarest Archiver

ತಿಳಿದಿತ್ತು. ಅವರು ತನ್ನ ಶಿಷ್ಯರಿಗೆ ಈ ವಿಷಯವನ್ನು ಸೂಚಿಸಿ, ಬೇರೆಬೇರೆ ನೆವದಿಂದ ಎಲ್ಲರನ್ನೂ ಒಬ್ಬೊಬ್ಬರನ್ನಾಗಿ ಮುಂದಿನ ಊರುಗಳಿಗೆ ಕಳುಹಿಸಿ, ಕೊನೆಯಲ್ಲಿ ತಾನೂ ಅದೃಶ್ಯರಾಗಿ ಅಲ್ಲಿಂದ ಹೊರಟುಹೋದರು. ರಾಜನ ಕಡೆಯವರೆಲ್ಲಾ ಸುಸ್ತಾದರು, ಬೇಸ್ತು ಬಿದ್ದರು. ಮುಂದೆ ಆರುತಿಂಗಳು ಕಳೆಯುತ್ತಲೆ ರಾಜ್ಯವು ಶತ್ರುರಾಜರ ಆಕ್ರಮಣಕ್ಕೆ ಒಳಗಾಯಿತು. ರಾಜನ ರಾಜ್ಯ ನಗರ ಎಲ್ಲವೂ ನಾಶವಾಯಿತು. ರಾಜನೂ ಸತ್ತನು. ಯಾರಿಗೂ ಬೆದರದ ಅಪರಾಜಿತಧೀರರು ಈ ಸಮೀರಾವತಾರ ಮಧ್ವರೆಂದು ಇದರಿಂದ ಸಿದ್ಧವಾಯಿತು.

೧೮) ಆಚಾರ್ಯರು ಒಂದು ಬಾರಿ ಪಶುಪೆ ಎಂಬಲ್ಲಿಗೆ ಬಂದರು. ಅಲ್ಲಿನ ಸಂಗೀತವಿದ್ವಾಂಸರೆಲ್ಲರೂ 'ಇವರು ದೇವಲೋಕದ ಸಂಗೀತವನ್ನು ಬಲ್ಲ ರೆ'ಂದು ಕೇಳಿದ್ದರು. ಅವರು ಆಚಾರ್ಯರನ್ನು ಗಾನಮಾಡಬೇಕೆಂದು ಪ್ರಾರ್ಥಿಸಿದರು. ಅವರ ಗಾನಸುಧೆಯನ್ನು ಆಸ್ವಾದಿಸಿದ ಶ್ರೋತೃಗಳಿಗೆ ನಿದ್ರೆಯೇ ಬಂದುಬಿಟ್ಟಿತು. ಬೇಸಿಗೆಯಲ್ಲಿ ಒಣಗಿದ್ದ ಮರಗಿಡಗಳು ಚಿಗುರಿ ಹೂವು ಹಣ್ಣುಗಳನ್ನು ಹೊತ್ತವು. ಆಚಾರ್ಯರು ಗಂಧರ್ವವಿದ್ಯಾನಿಪುಣ ರಲ್ಲಿ ಮೊದಲನೆಯವರೆಂದು ಅಲ್ಲಿದ್ದ ವಿದ್ವಾಂಸರೆಲ್ಲರೂ ಆಚಾರ್ಯರನ್ನು ಹೊಗಳಿ ಸಂಗೀತಶಾಸ್ತ್ರದ ಮೇಲೆ ಒಂದು ಗ್ರಂಥವನ್ನು ರಚಿಸಬೇಕೆಂದು ಪ್ರಾರ್ಥಿಸಿದರು. ಆಚಾರ್ಯರು ಸಂಗೀತದ ಲಕ್ಷಣಶಾಸ್ತ್ರದ ಮೇಲೆ ಕೂಡಲೇ ಒಂದು ಅತ್ಯಂತದುರ್ಲಭವಾದ ಪ್ರೌಢಗ್ರಂಥವನ್ನು ರಚಿಸಿದರು.

ಇಂತಹ ಅದ್ಭುತಸಾಮರ್ಥ್ಯವುಳ್ಳ ಜಗದ್ಗುರು ಶ್ರೀಮಧ್ವಾಚಾರ್ಯ ರನ್ನು ಎಲ್ಲಾ ಸಾತ್ತ್ವಿಕಭಕ್ತರೂ ಪೂಜಿಸಿದರು, ಗೌರವಿಸಿದರು. ಆಚಾರ್ಯರ ಚರಿತ್ರೆಗಳನ್ನು ಕೇಳಿ ಮನನಮಾಡುವ ಭಕ್ತರ ಇಷ್ಟಾರ್ಥಗಳು ಅನಾಯಾಸ ವಾಗಿ ನೆರವೇರುವುವು.

ಈ ರೀತಿ ಶ್ರೀಮಧ್ವಮುನಿವರ್ಯರ ಶಿಷ್ಯರೊಬ್ಬರು ಆಚಾರ್ಯರ ಚರಿತಾಮೃತವನ್ನು ಪಾನಮಾಡಿಸಿ ಸಂಸಾರದ ಬೇಗೆಯಿಂದ ಬಳಲಿದ ಸಜ್ಜನರನ್ನು ಆನಂದಪಡಿಸಿದರು.

Rarest Archiver

|| ಶ್ರೀಃ ||

## ಹತ್ತನೆಯ ಸರ್ಗ

**ಅವ:—** ಶ್ರೀಮಧ್ವಾಚಾರ್ಯರು ಪುನಃ ಪರಶುರಾಮಕ್ಷೇತ್ರಕ್ಕೆ ದಿಗ್ವಿಜಯಮಾಡಿದರು—

**ಸಪದಿ ಸಮುಸ್ಕುರುತ ಭೃಶಂ**
**ಮಾಧವಗುಣಸಾಧಕೋಽಥ ಮಧ್ವರವಿಃ ।**
**ಭೃಗುಕುಲತಿಲಕಸ್ಥಾನಂ ತಾಪಕರಃ**
**ಪಾಪಪಾಂಥಾನಾಂ ॥೧॥**

**ಅ:—**ಅಥ ಮಾಧವಗುಣಸಾಧಕಃ ಪಾಪಪಾಂಥಾನಾಂ ತಾಪಕರಃ ಮಧ್ವರವಿಃ ಸಪದಿ ಭೃಗುಕುಲತಿಲಕಸ್ಥಾನಂ ಭೃಶಂ ಸಮುಸ್ಕುರುತ.

**ಅರ್ಥ :—**ಅಥ=ಅನಂತರ, ಮಾಧವಗುಣಸಾಧಕಃ, ಮಾಧವ= ಲಕ್ಷ್ಮೀಪತಿಯಾದ ನಾರಾಯಣನ (ವೈಶಾಖಮಾಸದ), ಗುಣ=ಜ್ಞಾನ ಆನಂದ, ಔದಾರ್ಯಾದಿಗುಣಗಳನ್ನು (ಮನೋಹರತ್ವಾದಿಗುಣಗಳನ್ನು), ಸಾಧಕಃ=ಸ್ಥಾಪಿಸುವ (ಉಂಟುಮಾಡುವ), ಪಾಪಪಾಂಥಾನಾಂ=ಪಾಪಿಗಳೆಂಬ ಮಾರ್ಗಸ್ಥರಿಗೆ, ತಾಪಕರಃ=ತಾಪವನ್ನು ಕೊಡುವ, ಮಧ್ವರವಿಃ= ಶ್ರೀಮಧ್ವಾಚಾರ್ಯರೆಂಬ ಸೂರ್ಯನು, ಸಪದಿ=ಕೂಡಲೇ, ಭೃಗುಕುಲ ತಿಲಕಸ್ಥಾನಂ, ಭೃಗುಕುಲತಿಲಕ=ಪರಶುರಾಮದೇವರ (ಶುಕ್ರಾಚಾರ್ಯರ) ಸ್ಥಾನಂ=ಸ್ಥಳವಾದ ತೌಳವದೇಶ (ಪಾಜಕಕ್ಷೇತ್ರ) ವನ್ನು, ವೃಷಭರಾಶಿಯನ್ನು, ಭೃಶಂ=ವಿಶೇಷವಾಗಿ, ಸಮುಸ್ಕುರುತ=ಅಲಂಕರಿಸಿದರು.

**ತಾ:—**ಆಚಾರ್ಯರು ಯಾವಾಗಲೂ ಪರಮಾತ್ಮನ ಜ್ಞಾನಾನಂದಾದಿ ಗುಣಗಳನ್ನು ಸಾಧಿಸುವವರು. ಪಾಪಾತ್ಮರಿಗೆ ಸಂತಾಪವನ್ನುಂಟುಮಾಡು

Rarest Archiver

ವವರು. ಇಂತಹ ಶ್ರೀಮಧ್ವಾಚಾರ್ಯರೆಂಬ ಸೂರ್ಯನು ಭೃಗುಮುನಿಗಳ ವಂಶಕ್ಕೆ ಅಲಂಕಾರರಾಗಿರುವ ಪರಶುರಾಮದೇವರ ತೌಳವದೇಶಕ್ಕೆ ಬಂದರು, ಅಲ್ಲಿಂದ ಪಾಜಕಕ್ಷೇತ್ರಕ್ಕೆ ಹೋಗಿ ಸಮಗ್ರಪರಶುರಾಮಕ್ಷೇತ್ರವನ್ನು (ನಿಷಿದ್ಧವಾದ ಸ್ಥಳವನ್ನು ಬಿಟ್ಟು), ಉಳಿದ ಕೇರಳವೆಂಬ ಪರಶುರಾಮಕ್ಷೇತ್ರವನ್ನೂ ಅಲಂಕರಿಸಿದರು. ಅಲ್ಲೆಲ್ಲಾ ಸಂಚರಿಸಿದರು. ಸೂರ್ಯನು ಮಾಧವನೆಂಬ ಹೆಸರುಳ್ಳ ವಸಂತನ (ವಸಂತಋತುವಿನ) ಚಿಗುರೆಲೆ ಮಲಯಮಾರುತ ಮುಂತಾದ ಗುಣಗಳಿಗೆ ಸಾಧಕನು, ವಸಂತನನ್ನು ಮನೋಹರನನ್ನಾಗಿ ಮಾಡುವವನು. ಮಾರ್ಗಸ್ಥರಿಗೆ ಸಂತಾಪವನ್ನುಂಟು ಮಾಡುತ್ತಾನೆ. ಅವನು ಭೃಗುಕುಲತಿಲಕರಾದ (ಭಾರ್ಗವ ಎಂಬ ಹೆಸರಿನ) ಶುಕ್ರಾಚಾರ್ಯರ ಸ್ಥಾನವನ್ನು ಅಲಂಕರಿಸಿದಾಗಲೇ (ವೃಷಭರಾಶಿಗೆ ಬಂದಾಗಲೇ) ವಸಂತಋತುವು ಪ್ರಾರಂಭವಾಗುತ್ತದೆ. ಹೀಗೆ ಸೂರ್ಯನು ಭೃಗುಕುಲತಿಲಕರಾದ ಶುಕ್ರಾಚಾರ್ಯರ ವೃಷಭರಾಶಿಯನ್ನು ಪ್ರವೇಶಿಸಿ (ವೈಶಾಖಮಾಸವನ್ನುಂಟು ಮಾಡಿ) ವಸಂತಮಾಧವನ ಮನೋಹರತ್ವಗುಣವನ್ನು ಸಾಧಿಸಿ, ಛತ್ರಿ ಚಪ್ಪಲಿಗಳಿಲ್ಲದ ದರಿದ್ರದಾರಿಗರಿಗೆ ಸಂತಾಪವನ್ನುಂಟುಮಾಡುವಂತೆ, ಸೂರ್ಯನಂತೆ ಮಹಾತೇಜಸ್ವಿಗಳಾದ ಆಚಾರ್ಯರು ಮಾಧವನ ಸರ್ವೋತ್ತಮತ್ವಾದಿ ಗುಣಗಳನ್ನು ಸಾಧಿಸಿ, ಐಕ್ಯವಾದಿಗಳೇ ಮುಂತಾದ ದುರಧ್ಯಾತ್ಮಪಾಂಥರಿಗೆ ತಾಪವನ್ನುಂಟುಮಾಡುತ್ತಾ ಕೂಡಲೇ ಭಾರ್ಗವನ ಕ್ಷೇತ್ರಗಳಲ್ಲಿ ಪ್ರವಾಸ ಮಾಡಿ, ಸಜ್ಜನರ ಸಂತಾಪವನ್ನು ಪರಿಹರಿಸಿ, ಆ ದೇಶಗಳನ್ನು ಅಲಂಕರಿಸಿದರು.

**ವಿ:**—ಮಾಧವಸ್ಯ ಗುಣಾಃ ಮಾಧವಗುಣಾಃ, ತೇಷಾಂ ಸಾಧಕಃ ಮಾಧವಗುಣಸಾಧಕಃ, ಮಧ್ವಃ ಏವ ರವಿಃ ಮಧ್ವರವಿಃ, ಭೃಗೋಃ ಕುಲಂ ಭೃಗುಕುಲಂ, ತಸ್ಯ ತಿಲಕಃ, ಭೃಗುಕುಲತಿಲಕಃ ತಸ್ಯ ಸ್ಥಾನಂ ಭೃಗುಕುಲತಿಲಕಸ್ಥಾನಂ ತತ್. ಕರೋತೀತಿ ಕರಃ, ತಾಪಸ್ಯ ಕರಃ ತಾಪಕರಃ, ಪಾಪಾಏವ ಪಾಂಥಾಃ ಪಾಪಪಾಂಥಾಃ, ಪಾಪಾಶ್ಚ ತೇ ಪಾಂಥಾಶ್ಚ ಪಾಪ-ಪಾಂಥಾಃ ತೇಷಾಂ;

**ಕ್ರಿ:**—ಸಮಸ್ಕುರುತ ಸಮಸ್ಕುರ್ವಾತಾಂ ಸಮಸ್ಕುರ್ವತ, ಸಮ-ಸ್ಕುರುಥಾಃ ಸಮಸ್ಕುರ್ವಾಥಾಂ ಸಮಸ್ಕುರುಧ್ವಂ, ಸಮಸ್ಕುರ್ವಿ, ಸಮ-

Rarest Archiver

ಸ್ಕುರ್ವಹಿ ಸಮುಸ್ಕುರ್ವಹಿ ಡುಕೃಞ್ ಕರಣೇ ಆತ್ಮ. ಲಙ್ ಸಂಪರಿಭ್ಯಾಂ ಕರೋತೌ ಭೂಷಣೆ ಇತಿ ಸುಟ್.

ವೃತ್ತ:—ಯಸ್ಯಾಃ ಪ್ರಥಮೇ ಪಾದೇ ದ್ವಾದಶಮಾತ್ರಾಸ್ತಥಾ ತೃತೀಯೇಽಪಿ। ಅಷ್ಟಾದಶ ದ್ವಿತೀಯೇ ಚತುರ್ಥಕೇ ಪಂಚದಶ ಸಾರ್ಯಾ॥ ಎಂಬ ಲಕ್ಷಣದಂತೆ ಇಲ್ಲಿ ಆರ್ಯಾವೃತ್ತ.

ಲಕ್ಷ್ಮೈತತ್ ಸಪ್ತಗಣಾ ಗೋಪೇತಾ ಭವತಿ ನೇಹ ವಿಷಮೇ ಜಃ।
ಷಷ್ಠೋಽಯಂ ನಲಘೂ ವಾ ಪ್ರಥಮೇಽರ್ಧೇ ನಿಯತಮಾರ್ಯಾಯಾಃ॥
ಷಷ್ಠೇ ದ್ವಿತೀಯಲಾನ್ ಲೇ, ಪರಕೇ ಮುಖಲಾಚ್ಚ ಸಯತಿಪದನಿಯಮಃ।
ಚರಮೇಽರ್ಧೇ ಪಂಚಮಕೇ ತಸ್ಮಾದಿಹ ಭವತಿ ಷಷ್ಠೋ ಲಃ॥

—ವೃತ್ತರತ್ನಾಕರ

ಅವ:—ಆಚಾರ್ಯರ ಚರಿತ್ರೆಯನ್ನು ಕಾವ್ಯದ ರೀತಿಯಿಂದ ಒಬ್ಬ ಶಿಷ್ಯನು ವರ್ಣಿಸಿದನು—

**ದಶಮತಿಶಿಷ್ಯಃ ಕಶ್ಚಿಚ್ಛುಭಜನತಾಯೈ**
**ಕುತೂಹಲನತಾಯೈ।**
**ವಿವಿಧಸುವೃತ್ತಂ ವಾಕ್ಯಂ ಕಾವ್ಯ-**
**ಮಿವೋಚೇ ಸನಾಯಕಸ್ತವಕಂ ॥೨॥**

ಅ:—ಕಶ್ಚಿತ್ ದಶಮತಿಶಿಷ್ಯಃ ಕುತೂಹಲನತಾಯೈ ಶುಭಜನತಾಯೈ ಸನಾಯಕಸ್ತವಕಂ ಕಾವ್ಯಂ ಇವ ವಿವಿಧಸುವೃತ್ತಂ ವಾಕ್ಯಂ ಊಚೇ।

ಅರ್ಥ:—ಕಶ್ಚಿತ್ = ಒಬ್ಬ, ದಶಮತಿಶಿಷ್ಯಃ = ಪೂರ್ಣಪ್ರಜ್ಞರ ಶಿಷ್ಯನು, ಕುತೂಹಲನತಾಯೈ = ಕುತೂಹಲದಿಂದ ನಮ್ರವಾದ, ಶುಭ-ಜನತಾಯೈ = ಸಾಧುಜನಸಮುದಾಯಕ್ಕೆ, ಸನಾಯಕಸ್ತವಕಂ = ಕಥಾನಾಯಕನ ಸ್ತೋತ್ರದಿಂದ ಸಹಿತವಾದ, ಕಾವ್ಯಂ ಇವ = ಕಾವ್ಯವನ್ನೋ ಎಂಬಂತೆ, ವಿವಿಧಸುವೃತ್ತಂ = ನಾನಾವಿಧವಾದ ಶ್ಲಾಘ್ಯವಾದ ಚರಿತ್ರೆಯನ್ನೊಳಗೊಂಡ (ನಾನಾವಿಧವಾದ ಒಳ್ಳೆಯ ಪದಬಂಧವುಳ್ಳ), ವಾಕ್ಯಂ = ವಚನವನ್ನು (ಕಥೆಯನ್ನು) ಊಚೇ = ಹೇಳಿದನು.

Rarest Archiver

ತಾ :—ಒಂದು ಸ್ಥಳದಲ್ಲಿ ಅನೇಕ ಸಜ್ಜನರು ಸೇರಿ ಆಚಾರ್ಯರ ಚರಿತ್ರೆಯನ್ನು ಕೇಳಲು ನಮ್ರರಾಗಿ ಕುಳಿತಿದ್ದರು. ಆಗ ಆಚಾರ್ಯರ ಶಿಷ್ಯನೊಬ್ಬನು ಉತ್ತಮವಾದ ಚರಿತ್ರಸಂಪನ್ನರಾದ ನಾಯಕರಾದ ಶ್ರೀಮಧ್ವಾಚಾರ್ಯರ ಸ್ತೋತ್ರದಿಂದ ಕೂಡಿದ ವಚನಸಮುದಾಯದಿಂದ ಆಚಾರ್ಯರ ಚರಿತ್ರೆಯನ್ನು ಕಾವ್ಯದಂತೆ ಬಣ್ಣಿಸಿ ಹೇಳಿದನು. ಕಾವ್ಯದಲ್ಲಿ ಉತ್ತಮವಾದ ವೃತ್ತಗಳು (ಛಂದಸ್ಸುಗಳು) ಇರುತ್ತವೆ. ಅದು ಮುಖ್ಯವಾಗಿ ವರ್ಣಿಸಬೇಕಾದ ನಾಯಕನ ಸ್ತೋತ್ರದಿಂದ ಕೂಡಿರುತ್ತದೆ. ಅಂತಹ ಕಾವ್ಯವನ್ನು ಕವಿಯು ವರ್ಣಿಸುವಂತೆ ಆಚಾರ್ಯರ ಬದರೀಯಾತ್ರೆ ಮುಂತಾದ ಚರಿತ್ರೆಗಳನ್ನು ಕೇಳಲು ಅಪೇಕ್ಷಿಸುವ ಜನರಿಗೆ ಆಚಾರ್ಯರ ಶಿಷ್ಯನೊಬ್ಬನು ಅವುಗಳಲ್ಲಿ ಕೆಲವನ್ನು ವರ್ಣಿಸಿ ಹೇಳಿದನು ಎಂದು ಭಾವ.

ವಿ :—ದಶಮತೇಃ ಶಿಷ್ಯಃ ದಶಮತಿಶಿಷ್ಯಃ; ಜನಾನಾಂ ಸಮೂಹಃ ಜನತಾ, ಶುಭಾ ಚ ಸಾ ಜನತಾ ಚ ಶುಭಜನತಾ ತಸ್ಯೈ, ಕುತೂಹಲೇನ ನತಾ ಕುತೂಹಲನತಾ ತಸ್ಯೈ, ವಿವಿಧಾನಿ ಸು ಶೋಭನಾನಿ ವೃತ್ತಾನಿ ಯಸ್ಮಿನ್ ತತ್ ವಿವಿಧಸುವೃತ್ತಂ, ನಾಯಕಸ್ಯ ಸ್ತವಃ ನಾಯಕಸ್ತವಃ, ನಾಯಕಸ್ತವೇನ ಸಹ ವರ್ತತೇ ಇತಿ ಸನಾಯಕಸ್ತವಕಂ|

ಕ್ರಿ :—ಊಚೇ ಊಚಾತೇ ಊಚಿರೇ ಬ್ರೂಞ್(ವಚ್) ವ್ಯಕ್ತಾಯಾಂ ವಾಚಿ ಆತ್ಮನೇ. ಲಿಟ್.

ವೃತ್ತ :—'ಆರ್ಯಾಪ್ರಥಮಾರ್ಧಸಮಂ ಯಸ್ಯಾ ಅಪರಾರ್ಧಮಾಹ ತಾಂ ಗೀತಿಂ' ಆರ್ಯಾಪ್ರಥಮದಲೋಕ್ತಂ ಯದಿಕಥಮಪಿ ಲಕ್ಷಣಂ ಭವೇದುಭಯೋಃ| ದಲಯೋಃ ಕೃತಯತಿಶೋಭಾಂತಾಂ ಗೀತಿಂ ಗೀತವಾನ್ ಭುಜಂಗೇಶಃ|| (ವೃತ್ತರತ್ನಾಕರ) ಈ ಲಕ್ಷಣವಾಕ್ಯಗಳಂತೆ ಇಲ್ಲಿ ಗೀತಿವೃತ್ತ. ಪೂರ್ವಾರ್ಧದಲ್ಲಿಯೂ ಮೂವತ್ತು ಮಾತ್ರೆಗಳು, ಉತ್ತರಾರ್ಧದಲ್ಲಿಯೂ ಮೂವತ್ತು ಮಾತ್ರೆಗಳಿವೆ.

ಅವ :—ಆ ಶಿಷ್ಯನು ಆಚಾರ್ಯರ ಚರಿತ್ರೆಯನ್ನು ವರ್ಣಿಸುವ ಮೊದಲು ಸ್ವಾಹಂಕಾರಖಂಡನೆಯನ್ನು ಮಾಡಿಕೊಳ್ಳುತ್ತಾನೆ—

Rarest Archiver

ಭುವನಾದ್ಭುತಮಧ್ವಚೇಷ್ಟಿತಂ
ನ ವದೇಮಾಪಿ ಸುರಾಯುಷಾ ವಯಂ |
ಸಕಲಂ ಖಲು ಕಿಂತು ಕಿಂಚಿದಪ್ಯಥ
ಶುಶ್ರೂಷುಜನಾಯ ವರ್ಣ್ಯತೇ ||೩||

ಅ :—ವಯಂ ಸುರಾಯುಷಾ ಅಪಿ ಭುವನಾದ್ಭುತಮಧ್ವಚೇಷ್ಟಿತಂ ಸಕಲಂ ನ ವದೇಮ ಖಲು | ಅಥ ಕಿಂತು ಶುಶ್ರೂಷುಜನಾಯ ಕಿಂಚಿದಪಿ ವರ್ಣ್ಯತೇ ||

**ಅರ್ಥ :**—ವಯಂ = ನಾವೆಲ್ಲರೂ, ಸುರಾಯುಷಾ ಅಪಿ = ದೇವತೆಗಳ ಆಯುಃಪ್ರಮಾಣದಿಂದಲೂ, ಭುವನಾದ್ಭುತಮಧ್ವಚೇಷ್ಟಿತಂ=ಲೋಕಗಳಲ್ಲಿ ಆಶ್ಚರ್ಯಕರವಾದ ಶ್ರೀಮದಾನಂದತೀರ್ಥರ ಚರಿತ್ರೆಯನ್ನು, ನ ವದೇಮ ಖಲು = ಹೇಳಲಾರೆವು ನಿಶ್ಚಯ, ಅಥ ಕಿಂತು = ಹಾಗಿದ್ದರೂ, ಶುಶ್ರೂಷು-ಜನಾಯ = ಕೇಳಲಿಚ್ಛಿಸುವ ಜನರಿಗೋಸ್ಕರ, ಕಿಂಚಿದಪಿ = ಸ್ವಲ್ಪವಾದರೂ ವರ್ಣ್ಯತೇ = ವರ್ಣಿಸಲ್ಪಡುತ್ತದೆ.

**ತಾ :**— ನಾವು ಲೋಕಾಶ್ಚರ್ಯಕರವಾದ ಶ್ರೀಮಧ್ವಾಚಾರ್ಯರ ಚರಿತ್ರೆಯನ್ನು ದೇವತೆಗಳ ನೂರುವರ್ಷ ಆಯುಸ್ಸಿನಿಂದಲೂ ಸಂಪೂರ್ಣವಾಗಿ ಹೇಳಲಾರೆವು. ಇದು ನಿಶ್ಚಯ. ಆದರೂ ಕೇಳಲು ಅಪೇಕ್ಷಿಸುವ ಜನರಿಗಾಗಿ ಸ್ವಲ್ಪಮಾತ್ರ ಚರಿತ್ರೆಯನ್ನು ನಾನು ವರ್ಣಿಸುವೆನು. ಮನುಷ್ಯರ ಒಂದು ವರ್ಷವು ದೇವತೆಗಳಿಗೆ ಒಂದು ದಿನವು. ಇಂತಹ ದೇವತೆಗಳ ನೂರು ವರ್ಷಗಳಲ್ಲಿಯೂ ( ಮಾನವರ 36,000 ವರ್ಷಗಳಲ್ಲಿ) ಆಚಾರ್ಯರ ಚರಿತ್ರೆಯನ್ನು ವರ್ಣಿಸಲು ಅಸಾಧ್ಯವೆಂದು ಹೇಳಿದ್ದರಿಂದ ದೇವತೆಗಳಿಗೂ ವರ್ಣಿಸಲು ಅಸಾಧ್ಯವೆಂದಾಯಿತು. ಹಾಗಿರುವಾಗ ಮನುಷ್ಯಮಾತ್ರದವರಿಗೆ ಸಂಪೂರ್ಣವಾಗಿ ಆಚಾರ್ಯರ ಚರಿತ್ರವರ್ಣನವು ಅಸಾಧ್ಯವೆಂದು ಬೇರೆ ಹೇಳಬೇಕಾಗಿಲ್ಲವಷ್ಟೆ ! ಎಂದು ಭಾವ.

ವಿ:—ಭುವನೇಷು ಅದ್ಭುತಂ ಭುವನಾದ್ಭುತಂ, ಮಧ್ವಸ್ಯ ಚೇಷ್ಟಿತಂ ಮಧ್ವಚೇಷ್ಟಿತಂ, ಭುವನಾದ್ಭುತಂ ಚ ತತ್ ಮಧ್ವಚೇಷ್ಟಿತಂ ಚ ಭುವನಾ-

Rarest Archiver

ದ್ಭುತಮಧ್ವಚೇಷ್ಟಿತಂ, ಸುರಾಣಾಂ ಆಯುಃ ಸುರಾಯುಃ ತೇನ, ಶ್ರೋತುಂ ಇಚ್ಛುಃ ಶುಶ್ರೂಷುಃ ಶುಶ್ರೂಷುಶ್ಚಾಸೌ ಜನಶ್ಚ ಶುಶ್ರೂಷುಜನಃ ತಸ್ಮೈ.

ಕ್ರಿ :—ವದೇತ್ ವದೇತಾಂ ವದೇಯುಃ, ವದೇಃ ವದೇತಂ ವದೇತ, ವದೇಯಂ ವದೇವ ವದೇಮ ವದ ವ್ಯಕ್ತಾಯಾಂ ವಾಚಿ ಪರ. ವಿಧಿಲಿಙ್ ಉ. ಪು. ಬ. ವರ್ಣ್ಯತೇ ವರ್ಣ್ಯೇತೇ ವರ್ಣ್ಯಂತೇ ಇತ್ಯಾದಿ, ವರ್ಣ ವರ್ಣಕ್ರಿಯಾ ವಿಸ್ತಾರಗುಣವಚನೇಷು ಕರ್ಮಣಿ ಲಟ್.

ವೃತ್ತ :—ಅಯುಜೋರ್ಯದಿ ಸೌ ಜಗೌ ಸಮಯೋಃ ಸ್ಭೌ ರಲಗಾಶ್ಚ ಸುಂದರೀ ಎಂಬ ಲಕ್ಷಣದಂತೆ ಸುಂದರೀವೃತ್ತ.

ಅವ :—ಆಚಾರ್ಯರ ಒಂದು ಚರಿತ್ರೆಯು ಹೀಗಿದೆ-ಕೇಳಿರಿ—

**ಕ್ವಚಿದೀಶ್ವರದೇವಮೇಷ ಭೂಪಂ**
**ಖನನಂ ಪಾಂಥಜನೈರ್ವಿಧಾಪಯಂತಮ್ ।**
**ಸ್ವಮಪಿ ಪ್ರತಿಚೋದಯಂತಮೂಚೇ**
**ಕ್ರಿಯಯಾ ನೋಽಕುಶಲಾನ್ ಪ್ರಬೋಧಯೇತಿ ॥೪॥**

ಅ :—ಕ್ವಚಿತ್ ಏಷಃ ಪಾಂಥಜನೈಃ ಖನನಂ ವಿಧಾಪಯಂತಂ ಸ್ವಂ ಅಪಿ ಪ್ರತಿಚೋದಯಂತಂ ಈಶ್ವರದೇವಂ ಭೂಪಂ ಕ್ರಿಯಯಾ ಅಕುಶಲಾನ್ ನಃ ಪ್ರಬೋಧಯ ಇತಿ ಊಚೇ ॥

ಅರ್ಥ :—ಕ್ವಚಿತ್ = ಒಂದು ದೇಶದಲ್ಲಿ, ಏಷಃ = ಈ ಶ್ರೀಮಧ್ವಾಚಾರ್ಯರು, ಪಾಂಥಜನೈಃ = ದಾರಿನಡೆಯುವ ಜನರಿಂದ, ಖನನಂ = ಕೆರೆ-ಕಾಲುವೆ ತೋಡಿಸುವ ಕಾರ್ಯವನ್ನು, ವಿಧಾಪಯಂತಂ = ಮಾಡಿಸುತ್ತಿರುವ ಸ್ವಂ ಅಪಿ = ತನ್ನನ್ನು ಕೂಡ, ಪ್ರತಿಚೋದಯಂತಂ = (ಮಾಡಿರಿ) ಎಂದು ಪ್ರೇರಿಸುತ್ತಿರುವ, ಈಶ್ವರದೇವಂ ಭೂಪಂ = ಮಹಾದೇವನೆಂಬ ಅರಸನನ್ನು ಕುರಿತು, ಕ್ರಿಯಯಾ = (ನೀನು ಆ ಕಾರ್ಯವನ್ನು) ಮಾಡುವುದರಿಂದ, ಅಕುಶಲಾನ್ ನಃ = ನಿಪುಣರಲ್ಲದ ನಮ್ಮನ್ನು, ಪ್ರಬೋಧಯ = ತಿಳಿಯುವವರನ್ನಾಗಿ ಮಾಡು (ತಿಳಿಸಿಕೊಡು), ಇತಿ ಊಚೇ = ಎಂದು ಹೇಳಿದರು.

Rarest Archives

ತಾಃ-ಶ್ರೀಮಧ್ವಾಚಾರ್ಯರು ಉಡುಪಿಯಿಂದ ಉತ್ತರಕ್ಕೆ ಬದರಿಕಾ-ಶ್ರಮಕ್ಕೆ ದಿಗ್ವಿಜಯಮಾಡುತ್ತಿದ್ದರು. ದಾರಿಯಲ್ಲಿ ಮಹಾದೇವನೆಂಬ ರಾಜನ ರಾಜ್ಯವನ್ನು ಆಚಾರ್ಯರು ಹಾದುಹೋಗುತ್ತಿದ್ದರು. ಆ ರಾಜನು ದಾರಿಗರನ್ನು ಹಿಡಿದು ನಿಲ್ಲಿಸಿ ಅವರಿಂದ ಕೆರೆ ಕಾಲುವೆ ಅಗೆಸುವ ಕೆಲಸವನ್ನು ಬಿಟ್ಟಿಯಾಗಿ ಮಾಡಿಸುತ್ತಿದ್ದನು. ಆ ರಾಜನು ಆಚಾರ್ಯರನ್ನು ನೋಡಿ 'ನೀವೂ ಇಲ್ಲಿ ಅಗೆಯುವ ಕೆಲಸವನ್ನು ಮಾಡಿ ಅನಂತರ ಮುಂದೆ ಹೋಗಿರಿ' ಎಂದನು. ಆಗ ಆಚಾರ್ಯರು- ರಾಜನೇ! ನಮಗೆ ಈ ಕೆಲಸವು ಗೊತ್ತಿಲ್ಲ. ನೀನು ಅಗೆದು ತೋರಿಸಿದರೆ ಅನಂತರ ನಾವೂ ಹಾಗೆಯೇ ಅಗೆಯುತ್ತೇವೆ. ನೀನು ಅಗೆಯುವ ಕಾರ್ಯವನ್ನು ಮಾಡಿ ತೋರಿಸು' ಎಂದು ಹೇಳಿದರು. (ಮಹಾದೇವನೆಂಬ ಮಹಾರಾಷ್ಟ್ರದ ಅರಸನು ದಾರಿಯಲ್ಲಿ ಕೆರೆಕಾಲುವೆಗಾಗಿ ದಾರಿಗರಿಂದ ಬಿಟ್ಟಿಯಾಗಿ ಮಣ್ಣನ್ನು ಅಗೆಸುತ್ತಿದ್ದು, ಆಚಾರ್ಯರನ್ನು ಕಂಡು ಅವರ ಮಹಿಮೆಯನ್ನರಿಯದೆ ಅವರನ್ನು ಕುರಿತು ಅಗೆಯಲು ಹೇಳಿದನು ಎಂದು ಭಾವ.)

ವಿ :—ಪಾಂಥಾಶ್ಚ ತೇ ಜನಾಶ್ಚ ಪಾಂಥಜನಾಃ ತೈಃ | ನ ಕುಶಲಾಃ ಅಕುಶಲಾಃ ತಾನ್;

ಕ್ರಿ : — ಪ್ರ + ಬೋಧಯ, ಬೋಧಯತು ಬೋಧಯತಾತ್ ಬೋಧಯತಾಂ ಬೋಧಯಂತು, ಬೋಧಯ ಬೋಧಯತಾತ್ ಬೋಧ-ಯತಂ ಬೋಧಯತ; ಪ್ರ ಉಪಸರ್ಗ ಬುಧ ಅವಗಮೇ ಣಿಜಂತ ಲೋಟ್.

ವೃತ್ತ :—ವಿಷಮೇ ಸಸಜಾ ಗುರೂ ಯದಿ ಸ್ಯುಃ ಸಭರಾ ಯಶ್ಚ ಯುಜೀಹ ಚಂದ್ರಿಕಾ ಸಾ-ಎಂಬ ಲಕ್ಷಣದಂತೆ ಇಲ್ಲಿ ಚಂದ್ರಿಕಾವೃತ್ತ.

ಅವ :—ಆ ರಾಜನು ಅಗೆಯಲು ಆರಂಭಿಸಿ ಆಚಾರ್ಯರ ಮಹಿಮೆಯಿಂದ ಆ ಕಾರ್ಯವನ್ನು ಬಿಡಲು ಅಸಮರ್ಥನಾದನು—

**ಪ್ರಕಾರಂ ಪ್ರಕಟೀಕರ್ತುಮಾರಭ್ಯ ವಿರರಾಮ ನೋ ।**
**ಮಹೀಯೋಮತಿಮಾಹಾತ್ಮ್ಯಾದ್**
**ವೈವಶ್ಯೇನ ಖನನ್ ಖಲಃ ॥೫॥**

ಅ :—ಖಲಃ ಪ್ರಕಾರಂ ಪ್ರಕಟೀಕರ್ತುಂ ಆರಭ್ಯ ಮಹೀಯೋಮತಿ-ಮಾಹಾತ್ಮ್ಯಾತ್ ವೈವಶ್ಯೇನ ಖನನ್ ಸನ್ ನೋ ವಿರರಾಮ.

ಅರ್ಥ :—ದುರ್ಜನನಾದ (ಈಶ್ವರದೇವನು) ಪ್ರಕಾರಂ = ಅಗೆಯುವ ರೀತಿಯನ್ನು, ಪ್ರಕಟೀಕರ್ತುಂ = ಪ್ರಕಟಗೊಳಿಸಲು, ಆರಭ್ಯ = ಆರಂಭಿಸಿ, ಮಹೀಯೋಮತಿ = ಶ್ರೀಪೂರ್ಣಪ್ರಜ್ಞರ, ಮಾಹಾತ್ಮ್ಯಾತ್ = ಪ್ರಭಾವದ-ದೆಸೆಯಿಂದ, ವೈವಶ್ಯೇನ = ಪರಾಧೀನತೆಯಿಂದ, ಖನನ್ ಸನ್ = ಅಗೆಯುತ್ತಾ, ನೋ ವಿರರಾಮ = ಸುಮ್ಮನಾಗಲಿಲ್ಲ.

ತಾ :—'ನೆಲವನ್ನು ಅಗೆಯುವ ಕ್ರಮವನ್ನು ತೋರಿಸಿಕೊಡು' ಎಂದು ಆಚಾರ್ಯರು ಕೇಳಿದ ಕೂಡಲೇ, ದುಷ್ಟಬುದ್ಧಿಯ ಆ ರಾಜನು ಅಗೆಯುವ ಕ್ರಮವನ್ನು ತಿಳಿಸುವುದಕ್ಕಾಗಿ ತಾನೇ ಗುದ್ದಲಿ ಪಿಕಾಸಿಗಳನ್ನು ಹಿಡಿದು 'ಆಚಾರ್ಯರೇ! ನೋಡಿ, ಹೀಗೆ ಅಗೆಯಬೇಕು' ಎಂದು ಹೇಳುತ್ತಾ ಅಗೆಯಲಾರಂಭಿಸಿದನು. ಆದರೆ ಸಮಸ್ತ ಜೀವರಾಶಿಗಳಿಗೆ ಪ್ರೇರಕರಾದ ಆಚಾರ್ಯರು ಅವನಲ್ಲಿ ನಿಂತು ನಿರಂತರ ಅಗೆಯುವಂತೆ ಪ್ರೇರಿಸಿದ್ದರಿಂದ, ಆಚಾರ್ಯರ ಅದ್ಭುತಮಹಿಮೆಯಿಂದ ರಾಜನು ಪರಾಧೀನನಂತಾಗಿ ಅಗೆಯುವ ಕೆಲಸವನ್ನು ನಿಲ್ಲಿಸಲೇ ಇಲ್ಲ. (ಆಚಾರ್ಯರು ನಗುತ್ತಾ ಶಿಷ್ಯ ಸಮೇತರಾಗಿ ಅಲ್ಲಿಂದ ಮುಂದೆ ಸಾಗಿದರು.)

ವಿ :—ಮಹೀಯಸೀ ಮತಿಃ ಯಸ್ಯ ಸಃ ಮಹೀಯೋಮತಿಃ ತಸ್ಯ ಮಾಹಾತ್ಮ್ಯಂ ತಸ್ಮಾತ್, ವಿವಶಸ್ಯ ಭಾವಃ ವೈವಶ್ಯಂ ತೇನ;

ಕ್ರಿ :—ವಿ + ರರಾಮ ರೇಮತುಃ ರೇಮುಃ ಇತ್ಯಾದಿ. ವಿ ಉಪಸರ್ಗ ರಮು ಕ್ರೀಡಾಯಾಂ, ಲಿಟ್ ವ್ಯಾಙ್‌ಪರಿಭ್ಯೋ ರಮಃ ಎಂದು ಪರಸ್ಮೈ ಪದವು.

ವೃತ್ತ :—ಯುಜೋರ್ಜೇನ ಸರಿದ್ಭರ್ತುಃ ಪಥ್ಯಾವಕ್ತ್ರಂ ಪ್ರಕೀರ್ತಿತಂ ಎಂಬ ಲಕ್ಷಣದಂತೆ ಇಲ್ಲಿ ಪಥ್ಯಾವಕ್ತ್ರವೃತ್ತ.

ಅವ:—ಅತಿಮಹಾಪ್ರಜ್ಞಾಶಾಲಿಗಳಾದ ಆಚಾರ್ಯರ ಪ್ರಭಾವದಿಂದ

Rarest Archiver

ಈಶ್ವರದೇವನು ಭೂಮಿಯನ್ನು ಅಗೆಯುವುದನ್ನು ಬಿಡಲು ಸಾಧ್ಯವಾಗಲಿಲ್ಲ ಎಂಬ ವಿಷಯವನ್ನೇ ಸ್ಪಷ್ಟಪಡಿಸುತ್ತಾರೆ—

**ನಾನೇನೇನಾನೇನಾನೇನೋನೂನೇನ ನನು ನುನ್ನಾಃ ।**
**ನಾನಾನಾ ನೋ ನೂನಂ ನಾನೇನಾನೂನನಾನುನ್ನಃ ॥೬॥**

**ಪದಚ್ಛೇದ:**—ನ, ಅನೇನೇನ, ಅನೇನ, ಅನೇನೋನೂನೇನ, ನನು, ನುನ್ನಾಃ, ನಾನಾನಾಃ, ನೋ, ನೂನಂ, ನಾನೇನಾನೂನನಾ, ಅನುನ್ನಃ ।

**ಅ:**—ಅನೇನೋನೂನೇನ, ಅನೇನೇನ, ಅನೇನ, ನಾನಾನಾಃ ನೂನಂ ನ ನುನ್ನಾಃ ನೋ ನನು ನಾನೇನಾನೂನನಾ ಅನುನ್ನಃ ।

**ಅರ್ಥ:**—ಅನೇನ = ದೋಷವಿಲ್ಲದ, ಅನೂನೇನ = ಗುಣಾದಿಗಳಿಂದ ನ್ಯೂನರಲ್ಲದ (ಜೀವೋತ್ತಮರಾದ), ಅನ-ಪ್ರಾಣಿಗಳಿಗೆ, ಇನೇನ = ಒಡೆಯರಾದ, ಅನೇನ = ಈ ಮಧ್ವರೂಪಿಯಾದ ಮುಖ್ಯಪ್ರಾಣದೇವರಿಂದ, ನಾನಾ = ಅನೇಕಬಗೆಯ, ಅನಾಃ (ಆನಾಃ) = ಪ್ರಾಣಿಗಳು, ನೂನಂ = ಪ್ರಾಯಃ, ನನುನ್ನಾಃ = ಪ್ರೇರಿಸಲ್ಪಡದೇಇರುವವುಗಳಾಗಿ, ನೋ ನನು = ಇಲ್ಲವಷ್ಟೆ! ನಾನಾ-ಅನೇಕವುಂದಿ, ಇನ-ಬ್ರಹ್ಮನೇ ಮೊದಲಾದ ಈಶರಲ್ಲಿ (ನಿಯಾಮಕರಲ್ಲಿ), ಅನೂನ = ಪೂರ್ಣನಾದ, ನಾ = ಪುರುಷರೂಪನಾದ ನಾರಾಯಣನು, ಅನುನ್ನಃ = ಪ್ರೇರಿಸಲ್ಪಟ್ಟವನಲ್ಲ.

**ತಾ:**—ಈ ಮಧ್ವರೂಪಿಯಾದ ಮುಖ್ಯಪ್ರಾಣದೇವರು ದೋಷ-ರಹಿತರು, ಗುಣಪೂರ್ಣರು, ಪ್ರಾಣಿಗಳೆಲ್ಲರಿಗೂ ಒಡೆಯರು; ಇವರೇ ಬಹಳಮಟ್ಟಿಗೆ ಅನೇಕಬಗೆಯ ಪ್ರಾಣಿಗಳನ್ನೆಲ್ಲಾ ಆಯಾ ಕಾರ್ಯಗಳಲ್ಲಿ ಪ್ರೇರಿಸುವರು. ಹೀಗೆ ಎಲ್ಲಾ ಚೇತನರು ಇವರಿಂದ ಪ್ರೇರಿತರಾಗಿದ್ದರೂ ಬ್ರಹ್ಮಾದಿ ಸಕಲ ಚೇತನರಿಗೂ ಒಡೆಯನಾದ ಲಕ್ಷ್ಮೀಸಹಿತನಾದ ನಾರಾಯಣನು ಮಾತ್ರ (ಲಕ್ಷ್ಮೀನಾರಾಯಣರಿಬ್ಬರೂ) ವಾಯುದೇವರಿಂದ ಪ್ರೇರಿತರಾಗುವುದಿಲ್ಲ. ಹೀಗಿರುವುದರಿಂದಲೇ ಆ ಮಹಾದೇವರಾಜನು ಇವರ ಪ್ರೇರಣೆಯಿಂದ ಅಗೆಯುವ ಕೆಲಸವನ್ನು ಬಿಡಲಾರದೆಯೇ ಮಾಡುತ್ತಿದ್ದನು.

Rarest Archiver

ವಿ :—ನ ವಿದ್ಯತೇ ಏನಃ ಯಸ್ಯ ಸಃ ಅನೇನಾಃ, ಊನಃ ನ ಭವತೀತಿ ಅನೂನಃ, ಅನೇನಾಶ್ಚಾಸೌ ಅನೂನಶ್ಚ ಅನೇನೋನೂನಃ ತೇನ ಅನೇನೋ-ನೂನೇನ, ಅನಾನಾಂ ಇನಃ ಅನೇನಃ ತೇನ ಅನೇನೇನ, ಅನಸಂಬಂಧಿನಃ ಆನಾಃ, ಅಥವಾ ಅನಃ ಏಷಾಂ ಅಸ್ತೀತಿ ಅನಾಃ ಮತ್ವರ್ಥೀಯವಾದ ಅರ್ಶಆದ್ಯಚ್ ಪ್ರತ್ಯಯ, ನಾನಾ ಚ ತೇ ಆನಾಶ್ಚ (ಅನಾಶ್ಚ) ನಾನಾನಾಃ, ನ ಊನಃ ಅನೂನಃ ಅನೂನಶ್ಚಾಸೌ ನಾ ಚ ಅನೂನನಾ, ನಾನೇನೇಷು ಅನೂನನಾ ನಾನೇನಾನೂನನಾ, ಇನ = ಒಡೆಯ, ಭರ್ತೀಂದ್ರ ಇನ ಈಶಿತಾ—ವಿಶ್ವ.

ವೃತ್ತ :— ಇದು ಏಕಾಕ್ಷರಶ್ಲೋಕ ಉಪಗೀತಿವೃತ್ತ. ಆರ್ಯಾ ಪರಾರ್ಧತುಲ್ಯೇ ಪ್ರಾಹುರುಪಗೀತಿಂ — ಆರ್ಯಾವೃತ್ತದ ಉತ್ತರಾರ್ಧ ಲಕ್ಷಣವು ಪೂರ್ವಾರ್ಧ ಮತ್ತು ಉತ್ತರಾರ್ಧಗಳೆರಡರಲ್ಲಿಯೂ ಇದ್ದರೆ ಉಪಗೀತಿವೃತ್ತವು.

ಅವ :—ಪುನಃ ಆಚಾರ್ಯರ ಶಕ್ತಿಯನ್ನೇ ವರ್ಣಿಸುತ್ತಾರೆ—

**ಯಮಶೇಷಭವಪ್ರಭವಃ ಸ್ಮರತಾ**
**ಮಸುಖಾಬ್ಧಿರಪ್ಯೈತಿ ನ ಚಿತ್ರಮಿದಂ ।**
**ಮರುತೀದೃಶಿ ಭಾಂತಿ ಹಿ ಯತ್ಸ್ತವನೇ**
**ಯಮಶೇಷಭವಪ್ರಭವಃ ಸ್ಮ ರತಾಃ ॥೭॥**

ಅ :—ಯಂ ಸ್ಮರತಾಂ ಅಶೇಷಭವಪ್ರಭವಃ ಅಸುಖಾಬ್ಧಿಃ ಅಪ್ಯೈತಿ; ಕಿಂಚ ಯತ್ಸ್ತವನೇ ರತಾಃ ಯಮಶೇಷಭವಪ್ರಭವಃ ಭಾಂತಿ ಸ್ಮ; ಈದೃಶಿ ಮರುತಿ ಇದಂ ಚಿತ್ರಂ ನ ಹಿ.

ಅರ್ಥ :—ಯಂ = ಯಾವ ಮುಖ್ಯಪ್ರಾಣದೇವರನ್ನು, ಸ್ಮರತಾಂ = ಸ್ಮರಿಸುವ ಸಜ್ಜನರ, ಅಶೇಷ = ಸಮಸ್ತವಾದ, ಭವ = ಸಂಸಾರದ ದೆಸೆಯಿಂದ ಪ್ರಭವ = ಉತ್ಪತ್ತಿಯುಳ್ಳ, ಅಸುಖಾಬ್ಧಿಃ = ದುಃಖಸಮುದ್ರವು, ಅಪ್ಯೈತಿ = ತೊಲಗುವುದೋ, ಯತ್ಸ್ತವನೇ = ಯಾವ ಮುಖ್ಯಪ್ರಾಣದೇವರ ಸ್ತೋತ್ರದಲ್ಲಿ, ರತಾಃ = ಆಸಕ್ತರಾದ, ಯಮಶೇಷಭವ = ಯಮಧರ್ಮ, ಆದಿಶೇಷ,

ಶಂಕರರೆಂಬ, ಪ್ರಭವಃ = ಪ್ರಭುಗಳೂ, ಭಾಂತಿ ಸ್ಮ = ವಿರಾಜಿಸಿದರೋ, ಈದೃಶಿ ಮರುತಿ = ಇಂತಹ ಮುಖ್ಯಪ್ರಾಣದೇವರಲ್ಲಿ, ಇದಂ = ಮಹಾದೇವ ರಾಜನ ಪರವಶನಾಗಿ ಅಗೆಯುವಿಕೆಯು, ಚಿತ್ರಂ ನಹಿ = ಆಶ್ಚರ್ಯಕರವಲ್ಲ ವಷ್ಟೇ.

ತಾ :—ಯಾವ ಸಜ್ಜನರು ಈ ಮುಖ್ಯಪ್ರಾಣದೇವರನ್ನು ಸ್ಮರಿಸು ತ್ತಾರೋ ಅವರ ದುಃಖಸಮುದ್ರವೆಲ್ಲಾ ಬತ್ತಿಹೋಗುತ್ತದೆ. ಯಮ, ಶೇಷ, ಶಂಕರಮುಂತಾದ ಮಹಾಸಾಮರ್ಥ್ಯಶಾಲಿಗಳಾದ ದೇವತೆಗಳೂ ಈ ಮುಖ್ಯ ಪ್ರಾಣದೇವರನ್ನು ಸ್ತೋತ್ರಮಾಡುವುದರಲ್ಲಿ ಆಸಕ್ತರಾಗಿ ರಾರಾಜಿಸುತ್ತಿರು ವರು. ಹೀಗಿರುವಾಗ ಸಾಮಾನ್ಯನಾದ ಈ ಮಹಾದೇವರಾಜನು ನೆಲವನ್ನು ಅಗೆಯಲು ಪ್ರಾರಂಭಿಸಿ, ಆ ಕಾರ್ಯವನ್ನು ಬಿಡಲಾರದೆ ನಡೆಸುತ್ತಾ ಇದ್ದುದ ರಲ್ಲಿ ಆಶ್ಚರ್ಯವೇನೂ ಇಲ್ಲ.

ವಿ :—ಪ್ರಭವತಿ ಅಸ್ಮಾದಿತಿ ಪ್ರಭವಃ, ಅಶೇಷಶ್ಚಾಸೌ ಭವಶ್ಚ ಅಶೇಷಭವಃ, ಅಶೇಷಭವಃ ಪ್ರಭವಃ ಯಸ್ಯ ಸಃ, ನ ಸುಖಂ ಅಸುಖಂ, ಅಸುಖಮೇವ ಅಬ್ಧಿಃ, ಯಸ್ಯ ಸ್ತವನಂ ಯತ್‌ಸ್ತವನಂ ತಸ್ಮಿನ್, ಯಮಶ್ಚ ಶೇಷಶ್ಚ ಭವಶ್ಚ ಯಮಶೇಷಭವಾಃ, ಯಮಶೇಷಭವಾಶ್ಚ ತೇ ಪ್ರಭವಶ್ಚ.

ಕ್ರಿ :—ಅಪ + ಏತಿ ಇತಃ ಯಂತಿ, ಏಷಿ ಇಥಃ ಇಥ, ಏಮಿ ಇವಃ ಇಮಃ ಇಣ್ ಗತೌ ಅಪ ಉಪಸರ್ಗ ಲಟ್, ಭಾತಿ ಭಾತಃ ಭಾಂತಿ ಇತ್ಯಾದಿ ಭಾ ದೀಪ್ತೌ ಲಟ್.

ವೃತ್ತ :— ಇಲ್ಲಿ—'ಇಹ ತೋಟಕಮಂಬುಧಿಸೈಃ ಕಥಿತಂ' ಎಂಬ ಲಕ್ಷಣದಂತೆ ತೋಟಕವೃತ್ತ.

ಅವ :— ಈ ಮಹಾದೇವ (ಈಶ್ವರದೇವ) ರಾಜನ ಕಥೆಯನ್ನು ಮುಗಿಸಿ ಮತ್ತೊಂದು ಕಥೆಯನ್ನು ಪ್ರಾರಂಭಿಸುತ್ತಾರೆ—

**ಸಂಚರನ್ನಂಚನೀಯಃ ಕದಾಚಿದ್ ವಿಭು-**
**ರ್ವಿಷ್ಣುಪದ್ಯಾಸ್ತಟಂ ವೈಷ್ಣವಾಗ್ರೇಸರಃ।**
**ಪ್ರಾಪದಾಪ್ತೈರ್ನಿಜೈರೇಷ ಶಿಷ್ಯೈರ್ವೃತ-**
**ಸ್ತ್ಯಕ್ತವಿಶ್ವಪ್ಲವಂ ಶಾತ್ರವಾತಂಕತಃ ॥೮॥**

Rarest Archive

ಅ :—ಸಂಚರನ್ ಅಂಚನೀಯಃ ವೈಷ್ಣವಾಗ್ರೇಸರಃ ವಿಭುಃ ಆಪ್ತೈಃ ನಿಜೈಃ ಶಿಷ್ಯೈಃ ವೃತಃ ಕದಾಚಿತ್ ಶಾತ್ರವಾತಂಕತಃ ತ್ಯಕ್ತವಿಶ್ವಪ್ಲವಂ ವಿಷ್ಣುಪದ್ಯಾಃ ತಟಂ ಪ್ರಾಪತ್ ।

ಅರ್ಥ :—ಸಂಚರನ್=(ಉತ್ತರದೇಶಕ್ಕೆ ಹೋಗುತ್ತಿರುವಾಗ) ಅಲ್ಲಲ್ಲಿ ಸಂಚರಿಸುತ್ತಿರುವ, ಅಂಚನೀಯಃ=ಪೂಜ್ಯರಾದ, ವೈಷ್ಣವಾಗ್ರೇಸರಃ=ವಿಷ್ಣುಭಕ್ತರಲ್ಲಿ ಶ್ರೇಷ್ಠರಾದ, ವಿಭುಃ=ಎಲ್ಲಾ ವಿಷಯಗಳಲ್ಲಿ ಸಮರ್ಥರಾದ, ಆಪ್ತೈಃ=ವಿಶ್ವಾಸಿಗಳಾದ (ಪ್ರಿಯರಾದ), ನಿಜೈಃ ಶಿಷ್ಯೈಃ=ತಮ್ಮವರಾದ ಶಿಷ್ಯರಿಂದ, ವೃತಃ=ಸುತ್ತುವರಿಯಲ್ಪಟ್ಟ, ಏಷಃ=ಈ ಶ್ರೀಮಧ್ವಾಚಾರ್ಯರು, ಕದಾಚಿತ್=ಒಂದಾನೊಂದುದಿನ, ಶಾತ್ರವಾತಂಕತಃ=ಶತ್ರುಗಳ ಹೆದರಿಕೆಯಿಂದ, ತ್ಯಕ್ತವಿಶ್ವಪ್ಲವಂ=ತೆಗೆಸಲ್ಪಟ್ಟ ಎಲ್ಲಾ ದೋಣಿ ತೆಪ್ಪಗಳುಳ್ಳ, ವಿಷ್ಣುಪದ್ಯಾಃ ತಟಂ=ಗಂಗಾನದಿಯ ದಡವನ್ನು, ಪ್ರಾಪತ್=ತಲುಪಿದರು.

ತಾ :—ಆಚಾರ್ಯರು ಬದರಿಕಾಶ್ರಮಕ್ಕೆ ಹೋಗುತ್ತಾ ದಾರಿಯಲ್ಲಿ ಉತ್ತರದೇಶದಲ್ಲಿ ಸಂಚರಿಸುತ್ತಾ ಹೋಗುತ್ತಿದ್ದರು. ಪರಮಪೂಜ್ಯರಾದ ವಿಷ್ಣುಭಕ್ತರಾದ ಆಚಾರ್ಯರ ಜೊತೆಗೆ ಅವರ ಪ್ರೀತಿಪಾತ್ರರಾದ ಆಪ್ತ ಶಿಷ್ಯರೂ ಇದ್ದರು. ಹಾಗೆ ಸಂಚರಿಸುತ್ತಾ ಸರ್ವಸಮರ್ಥರಾದ ಆಚಾರ್ಯರು ಒಂದಾನೊಂದು ದಿನ ಗಂಗಾನದಿಯ ದಡಕ್ಕೆ ಬಂದರು. ಆಗ ಶತ್ರುಗಳು ನದಿಯನ್ನು ದಾಟಿ ಆ ಕಡೆಗೆ ಬಂದಾರು ಎಂಬ ಭಯದಿಂದ ನಾವಿಕರು ರಾಜಾಜ್ಞೆಯಿಂದ ಗಂಗೆಯ ದಡದಲ್ಲಿದ್ದ ಎಲ್ಲಾ ದೋಣಿಗಳನ್ನೂ ತೆಗೆದು ಬಿಟ್ಟಿದ್ದರು. ದಾಟಿಸಲು ದೋಣಿಯೂ ಇಲ್ಲ. ದಾಟಿಸುವವರೂ ಇರಲಿಲ್ಲ. ಯಾರೂ ಗಂಗೆಯನ್ನು ದಾಟಬಾರದಂತೆ ಅಲ್ಲಿಯ ತುರುಕರಾಜನ ಸೈನಿಕರು ಕಾವಲುಕಾಯುತ್ತಿದ್ದರು. ಇಂತಹ ಸಂದರ್ಭದಲ್ಲಿ ಆಚಾರ್ಯರು ಗಂಗಾ ನದಿಯ ದಡಕ್ಕೆ ಬಂದರು.

ವಿ :—ಅಂಚಯಿತುಂ ಯೋಗ್ಯಃ ಅಂಚನೀಯಃ, ಅಗ್ರೇ ಸರತೀತಿ ಅಗ್ರೇಸರಃ, ವಿಷ್ಣೌ ಭಕ್ತಿಃ ಏಷಾಂ ಇತಿ, (ವಿಷ್ಣೋಃ ಇಮೇ) ವೈಷ್ಣವಾಃ, ವೈಷ್ಣವಾನಾಂ ಅಗ್ರೇಸರಃ ವೈಷ್ಣವಾಗ್ರೇಸರಃ, ವಿಶ್ವೇ ಚ ತೇ ಪ್ಲವಾಶ್ಚ

Rarest Archiver

ವಿಶ್ವಪ್ಲವಾಃ, ತ್ಯಕ್ತಾಃ ವಿಶ್ವಪ್ಲವಾಃ ಯಸ್ಮಿನ್ ತತ್ ತ್ಯಕ್ತವಿಶ್ವಪ್ಲವಂ, ಶತ್ರವ ಏವ ಶಾತ್ರವಾಃ ಶಾತ್ರವೇಭ್ಯಃ ಆತಂಕಃ ಶಾತ್ರವಾತಂಕಃ, ತಸ್ಮಾದಿತಿ ಶಾತ್ರವಾತಂಕತಃ ।

**ಕ್ರಿ :**—ಪ್ರ+ಆಪತ್ ಆಪತಾಂ ಆಪನ್, ಆಪಃ ಆಪತಂ ಆಪತ, ಆಪಂ ಆಪಾವ ಆಪಾಮ, ಆಪ್ಲೃ ವ್ಯಾಪ್ತೌ ಪರ ಲುಜ್.

**ವೃತ್ತ :**—ಕೀರ್ತಿತೈಷಾ ಚತೂರೇಫಿಕಾ ಸ್ರಗ್ವಿಣೀ ಎಂಬ ಲಕ್ಷಣದಂತೆ ಸ್ರಗ್ವಿಣೀವೃತ್ತ.

**ಅವ :**—ಆಚಾರ್ಯರು ತಮ್ಮ ಅಲೌಕಿಕಮಹಿಮೆಯಿಂದಲೇ ಶಿಷ್ಯರನ್ನೆಲ್ಲಾ ಆ ಮಹಾನದಿಯನ್ನು ದಾಟಿಸಿದರು—

**ಇಮಾನ್ ಸ್ವಸ್ವಪೂರ್ವಾಶ್ರಯಾನಾತ್ಮವಾಕ್ಯಾತ್**
**ಸಲೀಲಂ ದಯಾಲುಃ ಸ ಮೂಲಾಶ್ರಯಾತ್ಮಾ ।**
**ನಿಷೇದ್ಧ್ರೄನನಾದೃತ್ಯ ಚಾನನ್ಯಲಂಘ್ಯಾಂ**
**ತದಾತ್ಯಾಯಯತ್ತಾಂ ನದೀಂ ಸಂಸೃತಿಂ ವಾ ॥೯॥**

**ಅ :**—ದಯಾಲುಃ ಮೂಲಾಶ್ರಯಾತ್ಮಾ ಸಃ ತದಾ ಆತ್ಮವಾಕ್ಯಾತ್ ಸ್ವಸ್ವಪೂರ್ವಾಶ್ರಯಾನ್ ಇಮಾನ್ ಅನನ್ಯಲಂಘ್ಯಾಂ ತಾಂ ನದೀಂ ಚ ನಿಷೇದ್ಧೄನ್ ಅನಾದೃತ್ಯ ಸಂಸೃತಿಂ ವಾ ಸಲೀಲಂ ಅತ್ಯಾಯಯತ್ ।

**ಅರ್ಥ :**—ದಯಾಲುಃ=ಕೃಪಾಳುಗಳಾದ, ಮೂಲಾಶ್ರಯಾತ್ಮಾ=ಮೊದಲಿನ ಆಶ್ರಯಸ್ವರೂಪರಾದ, ಸಃ ಚ=ಆ ಶ್ರೀಮಧ್ವಾಚಾರ್ಯರು, ತದಾ=ಆಗ, ಆತ್ಮವಾಕ್ಯಾತ್=ತಮ್ಮ ಮಾತಿನಿಂದ, ಸ್ವಸ್ವಪೂರ್ವಾಶ್ರಯಾನ್ = ತಮ-ತಮಗಿಂತ ಮೊದಲಿನವರು ಆಶ್ರಯವಾಗಿ ಉಳ್ಳ, ಇಮಾನ್=ಈ ಶಿಷ್ಯರನ್ನು, ಅನನ್ಯಲಂಘ್ಯಾಂ=ದೋಣಿಯ ಹೊರತಾಗಿ, ಬೇರೆಯಾವುದರಿಂದಲೂ ದಾಟಲು ಸಾಧ್ಯವಿಲ್ಲದ, ತಾಂ ನದೀಂ ಚ=ಆ ಗಂಗಾನದಿಯನ್ನು, ನಿಷೇದ್ಧೄನ್=ತಡೆಯುತ್ತಿರುವವರನ್ನು, ಅನಾದೃತ್ಯ =ಲೆಕ್ಕಿಸದೆ, ಸಂಸೃತಿಂ ವಾ=ಸಂಸಾರವನ್ನೋಪಾದಿಯಲ್ಲಿ, ಸಲೀಲಂ= ಅನಾಯಾಸವಾಗಿ, ಅತ್ಯಾಯಯತ್=ದಾಟಿಸಿದರು.

Rarest Archiver

ತಾ :—ಶ್ರೀಮಧ್ವಾಚಾರ್ಯರು ಸರ್ವಶಕ್ತಿಸಂಪನ್ನರು; ತಾವು ಒಬ್ಬರೇ ಒದ್ದೆಯಾಗದೆಯೇ ನದಿಯನ್ನು ದಾಟಲು ಸಮರ್ಥರು; ಆದರೂ ಪರಮ ದಯಾಳುಗಳಾದ ಅವರು ತಮ್ಮ ಶಿಷ್ಯರನ್ನೂ ತಮ್ಮ ಜೊತೆಯಲ್ಲಿಯೇ ದಾಟಿಸಬೇಕೆಂದು ಸಂಕಲ್ಪಿಸಿದರು. ಆಗ ನದಿಯನ್ನು ದಾಟಲು ನಾವೆಗಳಿರಲಿಲ್ಲ. ದಾಟಿಸುವ ನಾವಿಕರೂ ಇರಲಿಲ್ಲ. ನಾವೆಯಲ್ಲದೆ ಬೇರೆ ಯಾವರೀತಿಯಿಂದಲೂ ಆ ಮಹಾನದಿಯನ್ನು ದಾಟಲು ಸಾಧ್ಯವಿರಲಿಲ್ಲ. ಆದರೂ ಆಚಾರ್ಯರು ಯಾರಿಂದಲೂ ದಾಟಲಾಗದ ನದಿಯನ್ನು ಈಜಿಕೊಂಡು ದಾಟಲುಉದ್ಯುಕ್ತರಾದರು. ಆಗ ಅಲ್ಲಿದ್ದವರು 'ನದಿಯನ್ನು ದಾಟಕೂಡದು, ನದೀಪ್ರವಾಹಕ್ಕೆ ಇಳಿಯಲೇ ಬಾರದು' ಎಂದು ತಡೆದರು. ಆದರೂ ಆಚಾರ್ಯರು ಅವರನ್ನು ಲೆಕ್ಕಿಸಲಿಲ್ಲ, ಅವರು ಶಿಷ್ಯರನ್ನು ಕುರಿತು ಹೇಳಿದರು— 'ನಾನು ಮುಂದುಗಡೆ ಈಜಿಕೊಂಡು ಹೋಗುತ್ತೇನೆ. ನನ್ನನ್ನು ಒಬ್ಬನು ಆಧಾರವಾಗಿಟ್ಟುಕೊಳ್ಳಲಿ. ಅವನನ್ನು ಮತ್ತೊಬ್ಬನು ಆಶ್ರಯಿಸಲಿ. ಹೀಗೆಯೇ ಕೊನೆಯವರೆಗೂ ಒಬ್ಬರನ್ನೊಬ್ಬರು ಆಧರಿಸಿರಿ' ಎಂದು ಹೇಳಿದರು. ಶಿಷ್ಯರು ಅದರಂತೆಯೇ ಮಾಡಿದರು. ಎಲ್ಲರಿಗಿಂತಲೂ ಮುಂದಾಳಾಗಿ ಆಚಾರ್ಯರು ಈಜುತ್ತಾ ಹೋಗುತ್ತಾ ಇದ್ದರು. ಹೀಗೆ ಆಚಾರ್ಯರು ತಾವು ದಾಟುವಾಗ ತಮ್ಮ ಶಿಷ್ಯರೆಲ್ಲರನ್ನೂ ದಾಟಿಸಿದರು. ಈ ಸಂಸಾರವನ್ನು ದಾಟುವಾಗ ಕಾಮಕ್ರೋಧಾದಿಗಳು ಅಡ್ಡಿಪಡಿಸುತ್ತವೆ. ಅವುಗಳನ್ನು ಲೆಕ್ಕಿಸದೆ ಸ್ವರೂಪೋದ್ಧಾರಕಗುರುಗಳಾದ ಶ್ರೀಮಧ್ವಾಚಾರ್ಯರನ್ನು ಶರಣು ಹೊಂದಬೇಕು. ಅವರು ಎಲ್ಲರನ್ನೂ ಸಂಸಾರದಿಂದ ದಾಟಿಸಿ ಪರತೀರದಂತಿರುವ ಪರಮಾತ್ಮನ ಬಳಿಗೆ ಸೇರಿಸುತ್ತಾರೆ. ಪರಮಾತ್ಮನಲ್ಲಿಯೂ ಮುಖ್ಯಪ್ರಾಣನಲ್ಲಿಯೂ ಯಥಾಯೋಗ್ಯವಾದ ಪರಮಭಕ್ತಿಯುಳ್ಳ ಈ ಭಕ್ತರು, ತಮಗಿಂತ ಉತ್ತಮರಾದ ಇತರರಲ್ಲಿಯೂ ತಾರತಮ್ಯಾನುಸಾರವಾಗಿ ಭಕ್ತಿಯನ್ನು ಮಾಡಬೇಕು. ವಾಯುದೇವರನ್ನು ರುದ್ರಾದಿಗಳು ಅನುಸರಿಸುತ್ತಾರೆ. ಅವರನ್ನು ಇಂದ್ರಾದಿಗಳು ಅನುಸರಿಸುತ್ತಾರೆ. ಅವರನ್ನು ಇತರರು ಅನುಸರಿಸುತ್ತಾರೆ. ಇವರೆಲ್ಲರಿಗೂ ಸಮಸ್ತರಾದ ಮೋಕ್ಷಯೋಗ್ಯ ಭಕ್ತರಿಗೂ ವಾಯುದೇವರು ಮೂಲಾಶ್ರಯರು. ಅವರನ್ನು ಆಶ್ರಯಿಸಿದರೆ ಸಂಸಾರವನ್ನು ದಾಟಬಹುದು. ಆದರಂತೆ ಆಚಾರ್ಯರು ಉತ್ತರದೇಶದಲ್ಲಿ

Rarest Archiver

ಸಂಚಾರಮಾಡುತ್ತಿರುವಾಗ ಶತ್ರುಗಳು ಬರಬಾರದೆಂದು ದೋಣಿಯನ್ನೆಲ್ಲಾ ತೆಗೆಸಿ ಯಾರನ್ನೂ ದಾಟಿಸದೇ ಇದ್ದ ಸಮಯದಲ್ಲಿಯೂ, ಎಲ್ಲಾ ಶಿಷ್ಯರನ್ನು ನದಿಯನ್ನು ದಾಟಿಸಿ ತಾವೂ ದಾಟಿದರು. ಇಲ್ಲಿ ಉಪಮಾಲಂಕಾರವಿದೆ.

ವಿ :—ಸ್ವಸ್ಮಾತ್ ಸ್ವಸ್ಮಾತ್ ಪೂರ್ವಃ ಆಶ್ರಯಃ ಯೇಷಾಂ ತೇ ಸ್ವ-ಸ್ವಪೂರ್ವಾಶ್ರಯಾಃ ತಾನ್, ಆತ್ಮನಃ ವಾಕ್ಯಂ ಆತ್ಮವಾಕ್ಯಂ ತಸ್ಮಾತ್, ಲೀಲಯಾ ಸಹಿತಂ ಯಥಾ ಭವತಿ ತಥಾ ಸಲೀಲಂ, ಆಶ್ರಯಶ್ಚಾಸೌ ಆತ್ಮಾ ಚ ಆಶ್ರಯಾತ್ಮಾ, ಮೂಲಂ ಚಾಸೌ ಆಶ್ರಯಾತ್ಮಾ ಚ ಮೂಲಾಶ್ರ-ಯಾತ್ಮಾ, ನಿಷೇಧಂತಿ ಇತಿ ನಿಷೇದ್ಧಾರಃ, ತಾನ್, ಲಂಘಯಿತುಂ ಯೋಗ್ಯಾ ಲಂಘ್ಯಾ ಅನ್ಯೇನ ಲಂಘ್ಯಾ ಅನ್ಯಲಂಘ್ಯಾ, ಅನ್ಯಲಂಘ್ಯಾ ನ ಭವತೀತಿ ಅನನ್ಯಲಂಘ್ಯಾ, ತಾಂ ;

ಕ್ರಿ :—ಅತಿ + ಆಯಯತ್ ಆಯಯತಾಂ ಆಯಯನ್ ಇತ್ಯಾದಿ ಅತಿ ಉಪಸರ್ಗ, ಅಯ ಗತೌ ಣಿಜಂತ ಲಙ್.

ವೃತ್ತ :—ಈ ಶ್ಲೋಕದಲ್ಲಿ ಭುಜಂಗಪ್ರಯಾತವೃತ್ತ- ಭುಜಂಗ-ಪ್ರಯಾತಂ ಭವೇದ್ಯೈಶ್ಚತುರ್ಭಿಃ | ನಾಲ್ಕುಯಗಣಗಳಿದ್ದರೆ ಭುಜಂಗ-ಪ್ರಯಾತವೃತ್ತ.

ಅವ :—ಆಗ ರಾಜಭಟರು ಮಾಡಿದ ಗದ್ದಲವನ್ನೂ ವಿರೋಧವನ್ನೂ ವರ್ಣಿಸುತ್ತಾರೆ—

**ವಾರಯೇತ ವಾರಯತ ವೈರಿಸುಹೃದೋऽಮೂನ್**
**ಮಾರಯತ ಮಾರಯತ ಪಾರಗಮನಾತ್ ಪ್ರಾಕ್ |**
**ಆಪತತ ಆಲಪತ ಇತ್ಯವದದುಚ್ಚೈ-**
**ಸ್ಸತ್ವರಕರಾಜಪುರುಷಾನುಚಿತವಾಚಾ ||೧೦||**

ಅ :—ವೈರಿಸುಹೃದಃ ಅಮೂನ್ ವಾರಯತ ವಾರಯತ, ಪಾರ-ಗಮನಾತ್ ಪ್ರಾಕ್ ಮಾರಯತ ಮಾರಯತ, ಇತಿ ಆಲಪತಃ ಆಪತತಃ ತ್ವರಕರಾಜಪುರುಷಾನ್ ಸಃ ಉಚಿತವಾಚಾ ಉಚ್ಚೈಃ ಅವದತ್.

Rarest Archiver

ಅ :— ವೈರಿಸುಹೃದಃ=ಶತ್ರುಗಳ ಸ್ನೇಹಿತರಾದ, ಅಮೂನ್= ನದಿಯನ್ನು ದಾಟಿ ಬರುತ್ತಿರುವ ಇವರನ್ನು, ವಾರಯತ ವಾರಯತ= ತಡೆಯಿರಿ ತಡೆಯಿರಿ, ಪಾರಗಮನಾತ್ ಪ್ರಾಕ್=ಈ ಕಡೆಯ ದಡ ಸೇರುವುದಕ್ಕಿಂತ ಮೊದಲು, ಮಾರಯತ ಮಾರಯತ=ಕೊಲ್ಲಿರಿ ಕೊಲ್ಲಿರಿ, ಇತಿ ಆಲಪತಃ=ಹೀಗೆ ಕೂಗುತ್ತಿರುವ, ಆಪತತಃ=ಮೇಲೆ ಬೀಳಲು ಬರುತ್ತಿರುವ, ತ್ವರಕರಾಜಪುರುಷಾನ್=ತ್ವರೆ ಮಾಡುತ್ತಿರುವ ತುರುಕ ರಾಜನ ಸೈನಿಕರನ್ನು ಕುರಿತು, ಸಃ=ಆ ಶ್ರೀಮಧ್ವಾಚಾರ್ಯರು, ಉಚಿತ ವಾಚಾ=ಯೋಗ್ಯವಾದ (ತುರುಕಭಾಷೆಯ) ಮಾತಿನಿಂದ, ಉಚ್ಚೈಃ ಅವದತ್=ಎತ್ತರವಾದ ಧ್ವನಿಯಿಂದ ಹೇಳಿದರು.

ತಾ:—ಹೀಗೆ ಶ್ರೀಮಧ್ವಾಚಾರ್ಯರು ಮುಂಭಾಗದಲ್ಲಿ ತಾನು ಈಜಿ ಬರುತ್ತಾ ತನ್ನ ಹಿಂಭಾಗದಲ್ಲಿ ಒಬ್ಬರನ್ನೊಬ್ಬರು ಆಧರಿಸಿರುವ ಶಿಷ್ಯರನ್ನು ಸೆಳೆಯುತ್ತಾ ನದಿಯನ್ನು ದಾಟುತ್ತಿದ್ದರು. ಆಗ ಆಚೆ ಕಡೆಯಲ್ಲಿದ್ದ ತುರುಕರಾಜನ ಭಟರು -'ಯಾರೋ ಶತ್ರುಗಳ ಕಡೆಯವರು ಬರುತ್ತಿದ್ದಾರೆ. ಇವರನ್ನು ಬೇಗನೆ ತಡೆಯಿರಿ, ತಡೆಯಿರಿ. ತಡೆದರೂ ಭಯವಿಲ್ಲದೆ ಮುಂದೆ ಬರುತ್ತಿರುವ ಇವರನ್ನು ನಮ್ಮ ದಡಕ್ಕೆ ಸೇರುವ ಮೊದಲೇ ಕೊಂದುಬಿಡಿರಿ' ಎಂದು ಕೂಗಿ ಹೇಳುತ್ತಾ ಅವರೆಲ್ಲರೂ ನದಿಯ ಕಡೆಗೆ ಮುನ್ನುಗ್ಗುತ್ತಿದ್ದರು. ಆಗ ಆಚಾರ್ಯರು ಆ ತುರುಕ ರಾಜನ ಭಟರನ್ನು ಕುರಿತು ಅವರಿಗೆ ತಿಳಿಯುವ ತುರುಕಭಾಷೆಯಿಂದಲೇ ಹೀಗೆ ಹೇಳಿದರು.

ವಿ:—ವೈರಂ ಏಷಾಂ ಅಸ್ತೀತಿ ವೈರಿಣಃ, ವೈರಿಣಾಂ ಸುಹೃದಃ ವೈರಿಸುಹೃದಃ ತಾನ್, ಪಾರಸ್ಯ ಗಮನಂ ತಸ್ಮಾತ್, ತ್ವರಕಾಣಾಂ ರಾಜಾ, ತ್ವರಕರಾಜಸ್ಯ ಪುರುಷಾಃ ತಾನ್, ಉಚಿತಾ ಚ ಸಾ ವಾಕ್ ಚ ಉಚಿತ ವಾಕ್ ತಯಾ;

ಕ್ರಿ:—ವಾರಯತು ವಾರಯತಾತ್ ವಾರಯತಾಂ ವಾರಯಂತು ; ವಾರಯ ವಾರಯತಾತ್ ವಾರಯತಂ ವಾರಯತ ; ಇತ್ಯಾದಿ ವೃಞ್ ಆವರಣೇ ಣಿಜಂತ ಲೋಟ್ ; ಮಾರಯತು ಮಾರಯತಾತ್ ಮಾರ-

Rarest Archiver

ಯತಾಂ ಮಾರಯಂತು; ಮಾರಯ ಮಾರಯತಾತ್ ಮಾರಯತಂ ಮಾರಯತ; ಇತ್ಯಾದಿ. ಮೃಜ್ ಪ್ರಾಣತ್ಯಾಗೇ ಣಿಜಂತಲೋಟ್. ಅವದತ್ ಅವದತಾಂ ಅವದನ್ ಇತ್ಯಾದಿ, ವದ ವ್ಯಕ್ತಾಯಾಂ ವಾಚಿ ಲಙ್.

ವೃತ್ತ :—ಇಂದುವದನಾ ಭಜಸನ್ಯೈ: ಸಗುರುಯುಗ್ಮೈ: ಎಂಬ ಲಕ್ಷಣದಂತೆ ಇಲ್ಲಿ ಇಂದುವದನಾ ವೃತ್ತ

ಅ:—ಶ್ರೀಮಧ್ವಾಚಾರ್ಯರು ಆ ತುರುಕರಾಜನ ಭಟರನ್ನು ಕುರಿತು ಹೀಗೆಂದರು—

**ನ ಜಡಾ ಜಲೇ ಪತತ ಸಾಹಸಾದಹೋ**
**ನ ಭಯಂ ಹಿ ವೋ ಬಹುತಯಾಽಬಹೋರ್ಜನಾತ್ ।**
**ಭವತಾಂ ಪತಿಂ ಕ್ಷಿತಿಪತಿಂ ದಿದೃಕ್ಷವಃ**
**ಪ್ರತಿಯಾಮ ಕೇನ ಕಲಹಂ ಚಿಕೀರ್ಷಥ ॥೧೧॥**

ಅ :—ಹೇಜಡಾಃ! ಸಾಹಸಾತ್ ಜಲೇ ನ ಪತತ, ಅಹೋ! ವಃ ಬಹುತಯಾ ಅಬಹೋಃ ಜನಾತ್ ಭಯಂ ನ ಹಿ. ಭವತಾಂ ಪತಿಂ ಕ್ಷಿತಿಪತಿಂ ದಿದೃಕ್ಷವಃ ಪ್ರತಿಯಾಮ; ಕೇನ ಕಲಹಂ ಚಿಕೀರ್ಷಥ?

ಅರ್ಥ:— ಹೇಜಡಾಃ = ಎಲೈ ದಡ್ಡರೇ! ಸಾಹಸಾತ್ = ಮುಂದಾಲೋಚನೆ ಇಲ್ಲದೆ, ಜಲೇ ನ ಪತತ= ನೀರಿನಲ್ಲಿ ಇಳಿಯಬೇಡಿರಿ! (ಧುಮುಕಬೇಡಿರಿ.) ಅಹೋ= ಆಶ್ಚರ್ಯ. ವಃ ಬಹುತಯಾ = ನಿಮಗೆ ಅಧಿಕ ಸಂಖ್ಯೆಯಿರುವುದರಿಂದ, ಅಬಹೋಃ ಜನಾತ್ = ಅಲ್ಪಸಂಖ್ಯೆಯ ಜನರ ದೆಸೆಯಿಂದ (ನಮ್ಮಿಂದ) ಭಯಂ ನ ಹಿ= ಹೆದರಿಕೆಯು ಇಲ್ಲವಷ್ಟೆ; ಭವತಾಂ ಪತಿಂ = ನಿಮ್ಮ ಒಡೆಯನಾದ, ಕ್ಷಿತಿಪತಿಂ = ರಾಜನನ್ನು, ದಿದೃಕ್ಷವಃ ಸಂತಃ= ನೋಡುವ ಇಚ್ಛೆ ಉಳ್ಳವರಾಗಿ, ಪ್ರತಿಯಾಮ = ಹೋಗಲಿದ್ದೇವೆ. ಕೇನ= ಯಾವ ಕಾರಣದಿಂದ, ಕಲಹಂ= ಜಗಳವನ್ನು, ಚಿಕೀರ್ಷಥ= ಮಾಡಲು ಇಚ್ಛಿಸುತ್ತಿದ್ದೀರಿ?

Rarest Archiver

ತಾ :—ಎಲೈ ಥಡ್ಡರೇ! ಹಿಂದು ಮುಂದಿನ ಆಲೋಚನೆ ಇಲ್ಲದೆ ನೀರಿಗೆ ಧುಮುಕಬೇಡಿ. ಇದೇನಾಶ್ಚರ್ಯ- ನೀವು ಬಹಳ ಜನರಿದ್ದೀರಿ. ನಾವಾದರೋ ಅಲ್ಪಸಂಖ್ಯಾತರು. ನಮ್ಮಿಂದ ನಿಮಗೇನು ಹೆದರಿಕೆ? ನಾವು ನಿಮ್ಮ ದೊರೆಯನ್ನು ನೋಡುವ ಇಚ್ಛೆಯಿಂದ ಆ ಕಡೆಗೇ ಹೋಗುವವರಿದ್ದೇವೆ. ನಮ್ಮೊಡನೆ ನೀವೇಕೆ ಜಗಳವಾಡಲು ಬಯಸುತ್ತಿದ್ದೀರಿ? ಎಂದು ಹೇಳಿದರು ಎಂದು ತಾತ್ಪರ್ಯ

ವಿ: — ಬಹೂನಾಂ ಭಾವಃ ಬಹುತಾ, ತಯಾ ; ನ ಬಹುಃ ಅಬಹುಃ- ತಸ್ಮಾತ್, ಕ್ಷಿತೇಃ ಪತಿಃ ಕ್ಷಿತಿಪತಿಃ ತಂ, ದ್ರಷ್ಟುಂ ಇಚ್ಛವಃ ದಿದೃಕ್ಷವಃ, ಕರ್ತುಂ ಇಚ್ಛಥ ಚಿಕೀರ್ಷಥ.

ಕ್ರಿ:—ಪತತು ಪತತಾತ್ ಪತತಾಂ ಪತಂತು, ಪತ ಪತತಾತ್ ಪತತಂ ಪತತ, ಇತ್ಯಾದಿ ಪತ್ಲೃ ಗತೌ ಲೋಟ್, ಪ್ರತಿ + ಯಾಮ, ಯಾತು ಯಾತಾತ್ ಯಾತಾಂ ಯಾಂತು ; ಯಾಹಿ ಯಾತಾತ್ ಯಾತಂ ಯಾತ, ಯಾನಿ ಯಾವ ಯಾಮ, ಯಾ ಪ್ರಾಪಣೇ ಲೋಟ್, ಕರ್ತುಂ ಇಚ್ಛತಿ ಚಿಕೀರ್ಷತಿ, ಚಿಕೀರ್ಷತಃ ಚಿಕೀರ್ಷಂತಿ, ಚಿಕೀರ್ಷಸಿ ಚಿಕೀರ್ಷಥಃ ಚಿಕೀರ್ಷಥ, ಕೃ ಧಾತುಸನ್ನಂತ ಲಟ್.

ವೃತ್ತ:— 'ಸಜಸಾ ಜಗೌ ಭವತಿ ಮಂಜುಭಾಷಿಣೀ –ಎಂಬ ಲಕ್ಷಣದಂತೆ ಇಲ್ಲಿ ಮಂಜುಭಾಷಿಣೀ ವೃತ್ತ.

ಅ:—ಆಚಾರ್ಯರ ಚಮತ್ಕಾರ ಪೂರ್ಣವಾದ ಮಾತಿನ ಪ್ರಭಾವವನ್ನೂ, ಮತ್ತು ಅವರು ಮುಂದೆ ಮಾಡಿದ ಅದ್ಭುತಕಾರ್ಯವನ್ನೂ ವಿವರಿಸುತ್ತಾರೆ–

ವಚಸೇತ್ಯನೇನ ಸ ಪರಾನ್ನ್ಯರುಣದ್
ಭುಜಗಾನ್ನರೇಂದ್ರ ಇವ ಮಂತ್ರಬಲಾತ್ ।
ಉದತಾರಯತ್ ಪರಿಜನಂ ಮೃತಿಭೀ
ಸರಿತಶ್ಚ ದೇವಸರಿತಶ್ಚ ಸಮಂ ॥೧೨॥

ಅ:—ಸಃ ಇತಿ ಅನೇನ ವಚಸಾ ಪರಾನ್ ನರೇಂದ್ರಃ ಮಂತ್ರ

Rarest Archiver

ಬಲಾತ್ ಭುಜಗಾನ್ ಇವ ನ್ಯರುಣತ್ ; ಪರಿಜನಂ ಮೃತಿಭೀಸರಿತಶ್ಚ ದೇವಸರಿತಶ್ಚ ಸಮಂ ಉದತಾರಯತ್.

**ಅರ್ಥ:**—ಸಃ= ಆ ಮಧ್ವಾಚಾರ್ಯರು, ಇತಿ ಅನೇನ = ಈರೀತಿಯಾದ ಈ ಮಾತಿನಿಂದ, ಪರಾನ್ = ಶತ್ರುಗಳಾದ ತುರುಷ್ಕರನ್ನು, ನರೇಂದ್ರಃ ಭುಜಗಾನ್ ಇವ= ವಿಷವೈದ್ಯನು (ಹಾವಾಡಿಗನು) ಹಾವುಗಳನ್ನು ಎಂಬಂತೆ, ನ್ಯರುಣತ್= ತಡೆದರು. ಪರಿಜನಂ= ತನ್ನ ಸೇವಕರನ್ನು, ಮೃತಿಭೀಸರಿತಶ್ಚ = ಮರಣಭಯವೆಂಬ (ಮರಣ ಮತ್ತು ಭಯಗಳೆಂಬ) ನದಿಯ ದೆಸೆಯಿಂದಲೂ, ದೇವಸರಿತಶ್ಚ = ಗಂಗಾನದಿಯ ದೆಸೆಯಿಂದಲೂ, ಸಮಂ= ಒಟ್ಟಿಗೆ, ಉದತಾರಯತ್= ದಾಟಿಸಿದರು.

**ತಾ:**—ಹಾವಾಡಿಗನು (ವಿಷವೈದ್ಯನು) ಕಚ್ಚಲು ಮುಂದೆ ಬರುತ್ತಿರುವ ಸರ್ಪಗಳನ್ನು, ಮಂತ್ರಬಲದಿಂದ ಮುಂದೆ ಬರದಂತೆ ತಡೆದು ನಿಲ್ಲಿಸುವನು, ಅದರಂತೆ ಶ್ರೀ ಮಧ್ವಾಚಾರ್ಯರೂ ಮಂತ್ರದಂತಿರುವ ತಮ್ಮ ಮಾತಿನಿಂದ ಆ ತುರುಕಸೈನಿಕರನ್ನು ಮುಂದೆ ಬರದಂತೆ ತಡೆದರು. ಆಚಾರ್ಯರ ಮಾತನ್ನು ಕೇಳಿದ ಕೂಡಲೇ ಆ ಭಟರು ನಿಂತಲ್ಲಿಯೇ ನಿಂತುಬಿಟ್ಟರು. ಹೀಗೆ ಆಚಾರ್ಯರು ತಮ್ಮ ಸೇವಕ ಜನರನ್ನು ಮರಣ ಮತ್ತು ಹೆದರಿಕೆ ಎಂಬ ದಾಟಲಸಾಧ್ಯವಾದ ನದಿಯ ಆಚೆಯ ಪಾರಕ್ಕೆ ಒಯ್ದರು. ಮರಣಭಯವೆಂಬ ನದಿಯನ್ನು ದಾಟಿಸಿದರು. ಮರಣಭಯವನ್ನು ತಪ್ಪಿಸಿ ಗಂಗಾನದಿಯನ್ನು ದಾಟಿಸಿದರು.

**ವಿ:**—ಭುಜೈಃ ಗಚ್ಛಂತೀತಿ ಭುಜಗಾಃ, ತಾನ್, ಮಂತ್ರಸ್ಯ ಬಲಂ ತಸ್ಮಾತ್, ಮೃತಿಶ್ಚಭೀಶ್ಚ ಮೃತಿಭಿಯೌ, ಮೃತಿಭಿಯಾವೇವ ಸರಿತ್ ತಸ್ಯಾಃ, (ಮೃತೇಃ ಭೀಃ ಮೃತಿಭೀಃ ಮೃತಿಭೀರೇವ ಸರಿತ್ ಮೃತಿಭೀಸರಿತ್ ತಸ್ಯಾಃ) ದೇವಾನಾಂ ಸರಿತ್ ತಸ್ಯಾಃ;

**ಕ್ರಿ:**—ನಿ+ಅರುಣತ್ ಅರುಂಧಾಂ ಅರುಂಧನ್, ಅರುಣಃ ಅರುಣತ್ ಅರುಂಧಂ ಅರುಂಧ ಅರುಣಧವ್ ಅರುಂಧ್ವ ಅರುಂಧ್ಮ; ನಿ ಉಪಸರ್ಗ ರುಧಿರ್ ಆವರಣೇ ಲಙ್. ಉದ್+ಅತಾರಯತ್ ಅತಾರಯತಾಂ ಅತಾರಯನ್ ಇತ್ಯಾದಿ. ತೃಪ್ಲವನತರಣಯೋಃ ಣಿಜಂತ ಲಙ್.

Rarest Archive

**ವೃತ್ತ:**—ಇಲ್ಲಿ ಪ್ರಮಿತಾಕ್ಷರಾ ವೃತ್ತ–ಪ್ರಮಿತಾಕ್ಷರಾ ಸಜಸಸ್ಯೆ-ರುದಿತಾ –ಎಂದು ಲಕ್ಷಣ.

**ಅವ:**—ಗಂಗಾನದಿಯನ್ನು ದಾಟಿದ ಮೇಲೆ ರಾಜಭಟರು ಆಚಾರ್ಯರನ್ನು ಸುತ್ತುವರೆದರು. ಆದರೆ ಆಚಾರ್ಯರು ಹೆದರಲಿಲ್ಲ.

**ನಿರ್ವಿಕಾರಚರಿತೋಽಪಿ ಪರೀತಃ**
**ಕ್ರೂರಕಿಂಕರಸಹಸ್ರತಯೇನ ।**
**ಸ ವ್ರಜನ್ನುದಲಸಜ್ಜಗದೀಶಃ**
**ಸಿಂಹರಾಡಿವ ಸೃಗಾಲಸಮೂಹೇ** ॥೧೩॥

**ಅ:**—ಜಗದೀಶಃ ಸಃ ಕ್ರೂರಕಿಂಕರಸಹಸ್ರತಯೇನ ಪರೀತಃ ಅಪಿ ನಿರ್ವಿಕಾರಚರಿತಃ ವ್ರಜನ್ ಸೃಗಾಲಸಮೂಹೇ ಸಿಂಹರಾಟ್ ಇವ ಉದಲಸತ್.

**ಅರ್ಥ:**— ಜಗದೀಶಃ = ಪ್ರಪಂಚಕ್ಕೆ ಒಡೆಯರಾದ, ಸಃ = ಆ ಮಧ್ವಾಚಾರ್ಯರು, ಕ್ರೂರಕಿಂಕರಸಹಸ್ರತಯೇನ = ಕ್ರೂರರಾದ ತುರುಕಸೈನಿಕರ ಸಾವಿರದ ಗುಂಪಿನಿಂದ, ಪರೀತಃ ಅಪಿ = ಸುತ್ತುವರಿಯಲ್ಪಟ್ಟಿದ್ದರೂ, ನಿರ್ವಿಕಾರಚರಿತಃ=(ವ್ಯತ್ಯಾಸವಿಲ್ಲದ) ನಡತೆಯುಳ್ಳವರಾಗಿ, ವ್ರಜನ್= ಹೋಗುತ್ತಾ, ಸೃಗಾಲಸಮೂಹೇ= ನರಿಗಳ ಗುಂಪಿನಲ್ಲಿ, ಸಿಂಹರಾಟ್ ಇವ = ಶ್ರೇಷ್ಠ ಸಿಂಹದಂತೆ, ಉದಲಸತ್= ಪ್ರಕಾಶಿಸಿದರು.

**ತಾ:**—ಶ್ರೇಷ್ಠವಾದ ಸಿಂಹವು ಸಾವಿರಾರು ನರಿಗಳು ಸುತ್ತುವರಿದು ಹೆದರಿಸಿದರೂ ತನ್ನ ಚರ್ಯೆ ಮತ್ತು ಮುಖಭಾವಗಳಲ್ಲಿ ಯಾವ ವ್ಯತ್ಯಾಸವನ್ನೂ ಮಾಡಿಕೊಳ್ಳದೇ ತನ್ನ ಕಾರ್ಯಕ್ಕಾಗಿ ಮುಂದಕ್ಕೆ ಸಾಗುತ್ತಾ ಇರುತ್ತದೆ. ಅದರಂತೆ ಪ್ರಪಂಚಕ್ಕೆ ಒಡೆಯರಾದ ಆ ಮಧ್ವಾಚಾರ್ಯರು ಸಾವಿರಾರು ತುರುಕಭಟರು ಸುತ್ತುವರಿದು ಬೆದರಿಸಿದರೂ, ಅವರನ್ನು ಲೆಕ್ಕಿಸದೇ ಭಯ, ನಡುಕ ಮುಂತಾದ ಯಾವ ವಿಕಾರವೂ ಇಲ್ಲದೆ ಮುಂದಕ್ಕೆ ಸಾಗುತ್ತಾ ವಿರಾಜಿಸಿದರು.

Rarest Archiver

ವಿ:—ನಿಷ್ಕ್ರಾಂತಂ ವಿಕಾರಾತ್ ನಿರ್ವಿಕಾರಂ, ನಿರ್ವಿಕಾರಂ ಚರಿತಂ ಯಸ್ಯ ಸಃ ನಿರ್ವಿಕಾರಚರಿತಃ. ಕ್ರೂರಾಶ್ಚ ತೇ ಕಿಂಕರಾಶ್ಚ ಕ್ರೂರಕಿಂಕರಾಃ ಸಹಸ್ರಂ ಅವಯವಾಃ ಅಸ್ಯೇತಿ ಸಹಸ್ರತಯಂ-ಕ್ರೂರಕಿಂಕರಾಣಾಂ ಸಹಸ್ರತಯಂ ತೇನ. ಜಗತಾಮ್ ಈಶಃ ಜಗದೀಶಃ ಸಿಂಹಾನಾಂ ರಾಟ್ ಸಿಂಹರಾಟ್ ಸೃಗಾಲಾನಾಂ ಸಮೂಹಃ ಸೃಗಾಲಸಮೂಹಃ ತಸ್ಮಿನ್.

ಕ್ರಿ:—ಉತ್+ಅಲಸತ್ ಅಲಸತಾಂ ಇತ್ಯಾದಿ. ಲಸ-ಕಾಂತೌ. ಲಙ್.

ವೃತ್ತ:—ಸ್ವಾಗತಾ, ಸ್ವಾಗತೇತಿ ರನಭಾದ್ ಗುರುಯುಗ್ಮಂ ಎಂದು ಲಕ್ಷಣ.

ಅ:—ಅರಮನೆಯ ಉಪ್ಪರಿಗೆಯಲ್ಲಿ ನಿಂತಿದ್ದ ತುರುಕರಾಜನು ಆಚಾರ್ಯರನ್ನು ನೋಡಿ ಮಾತನಾಡಿದನು.

**ಅಪ್ರಕಂಪ್ಯವಪುಷಂ ಸುರಾಸುರೈಃ**
**ಸಿಂಹಸಂಹನನಮೇನಮುನ್ನತಂ ।**
**ಪ್ರಾಪ್ತಮಾತ್ಮನಗರಾಂತಿಕಂ ನೃಪಃ**
**ಪ್ರೇಕ್ಷ್ಯ ಸೌಧಶಿಖರೇ ಸ್ಥಿತೋಽಬ್ರವೀತ್** ॥೧೪॥

ಅ:—ಸೌಧಶಿಖರೇ ಸ್ಥಿತಃ ನೃಪಃ ಸುರಾಸುರೈಃ ಅಪ್ರಕಂಪ್ಯವಪುಷಂ ಸಿಂಹಸಂಹನನಂ ಉನ್ನತಂ ಆತ್ಮನಗರಾಂತಿಕಂ ಪ್ರಾಪ್ತಂ ಏನಂ ಪ್ರೇಕ್ಷ್ಯ ಅಬ್ರವೀತ್.

ಅರ್ಥ:—ಸೌಧಶಿಖರೇ=ರಾಜಭವನದ ಮೇಲ್ಭಾಗದಲ್ಲಿ, ಸ್ಥಿತಃ=ನಿಂತಿದ್ದ, ನೃಪಃ=ತುರುಕರಾಜನು, ಸುರಾಸುರೈಃ=ದೇವತೆಗಳು ಮತ್ತು ದಾನವರಿಂದ, ಅಪ್ರಕಂಪ್ಯವಪುಷಂ = ನಡುಗಿಸಲು ಅಸಾಧ್ಯವಾದ ಶರೀರವುಳ್ಳ, ಸಿಂಹಸಂಹನನಂ = ಶ್ರೇಷ್ಠವಾದ ಮೈಕಟ್ಟು ಮತ್ತು ಸೌಂದರ್ಯವುಳ್ಳ, ಉನ್ನತಂ=ಎತ್ತರವಾಗಿರುವ, ಆತ್ಮನಗರಾಂತಿಕಂ ಪ್ರಾಪ್ತಂ=ತನ್ನ ಪಟ್ಟಣದ ಹತ್ತಿರಕ್ಕೆ ಬಂದಿರುವ, ಏನಂ=ಈ ಮಧ್ವಾಚಾರ್ಯರನ್ನು, ಪ್ರೇಕ್ಷ್ಯ=ನೋಡಿ, ಅಬ್ರವೀತ್=ಹೇಳಿದನು.

Rarest Archiver

ತಾ:— ಈ ಮಧ್ವಾಚಾರ್ಯರು ದೇವದಾನವರಿಂದಲೂ ಬೆದರಿಸಲು ಅಶಕ್ಯರು, ಎತ್ತರವಾದ ಆಕಾರ, ಸಿಂಹದಂತಹ ಮೈಕಟ್ಟು ಮತ್ತು ಸೌಂದರ್ಯಗಳಿಂದ ಕೂಡಿದ್ದರು. ಇಂತಹ ಆಚಾರ್ಯರು ತನ್ನ ಪಟ್ಟಣದ ಹತ್ತಿರಕ್ಕೆ ಬಂದಿದ್ದನ್ನು ನೋಡಿ ಅರಮನೆಯ ಮಹಡಿಯ ಮೇಲೆ ನಿಂತಿದ್ದ ರಾಜನು ಅವರನ್ನು ಕುರಿತು ಹೀಗೆಂದನು.

ವಿ:—ಕಂಪಯಿತುಂ ಶಕ್ಯಂ ಕಂಪ್ಯಂ, ಪ್ರಕರ್ಷೇಣ ಕಂಪ್ಯಂ, ಪ್ರಕಂಪ್ಯಂ, ನ ಪ್ರಕಂಪ್ಯಂ ಅಪ್ರಕಂಪ್ಯಂ, ಅಪ್ರಕಂಪ್ಯಂ ವಪುಃ ಯಸ್ಯ ತಂ, ಸುರಾಶ್ಚ ಅಸುರಾಶ್ಚ ಸುರಾಸುರಾಃ ತೈಃ, ನಗರಸ್ಯ ಅಂತಿಕಃ ನಗರಾಂತಿಕಃ ಆತ್ಮನಃ ನಗರಾಂತಿಕಃ ತಂ, ಸೌಧಸ್ಯ ಶಿಖರಂ ತಸ್ಮಿನ್.

ವರಾಂಗರೂಪೋಪೇತೋ ಯಃ ಸಿಂಹಸಂಹನನೋ ಹಿ ಸಃ —ಅಮರ.

ಕ್ರಿ:—ಅಬ್ರವೀತ್ ಅಬ್ರೂತಾಂ ಅಬ್ರುವನ್ ಇತ್ಯಾದಿ. ಬ್ರೂಞ್ ವ್ಯಕ್ತಾಯಾಂ ವಾಚಿ ಲಙ್.

ವೃತ್ತ:— ರಥೋದ್ಧತಾ, ರಾನ್ನರಾವಿಹ ರಥೋದ್ಧತಾ ಲಗೌ ಎಂದು ಲಕ್ಷಣ.

ಅವ:—ರಾಜನು ಹೇಳಿದ ಮಾತು.

**ರಿಪುನೃಪಪ್ರಣಿಧಿಪ್ರತಿಶಂಕಯಾ**
**ಪಥಿಕಪಾಟನಕರ್ಮಣಿ ದೀಕ್ಷಿತೈಃ ।**
**ಸುಮುಖ ಮೇ ಪುರುಷೈಃ ಪರುಷೈಃ ಕಥಂ**
**ಯಮಭಟೈರಿವ ನಾಸಿ ವಿಹಿಂಸಿತಃ ||೧೫||**

ಅ:— ಹೇ ಸುಮುಖ! ರಿಪುನೃಪಪ್ರಣಿಧಿಪ್ರತಿಶಂಕಯಾ, ಪಥಿಕ ಪಾಟನ ಕರ್ಮಣಿ ದೀಕ್ಷಿತೈಃ ಯಮಭಟೈರಿವ ಪರುಷೈಃ ಮೇ ಪುರುಷೈಃ ಕಥಂ ವಿಹಿಂಸಿತಃ ನಾಸಿ|

ಅರ್ಥ:—ಹೇ ಸುಮುಖ! = ಎಲೈ ಪ್ರಸನ್ನವಾದ ಸುಂದರ ಮುಖ ವುಳ್ಳವನೇ! ರಿಪುನೃಪ = ಶತ್ರುರಾಜರ, ಪ್ರಣಿಧಿ = ಗೂಢಚಾರರೆಂಬ, ಪ್ರತಿಶಂಕಯಾ = ಊಹೆಯಿಂದ, ಪಥಿಕ = ದಾರಿಗರ, ಪಾಟನ = ಹಿಂಸೆಯ,

Rarest Archiver

ಕರ್ಮಣಿ = ಕಾರ್ಯದಲ್ಲಿ, ದೀಕ್ಷಿತೈಃ = ನಿಯುಕ್ತರಾದ, ಯಮಭಟೈರಿವ = ಯಮಕಿಂಕರರಂತಿರುವ, ಪರುಷೈಃ = ಕ್ರೂರರಾದ, ಮೇ = ನನ್ನ, ಪುರುಷೈಃ = ಭಟರಿಂದ, ಕಥಂ = ಹೇಗೆ, ವಿಹಿಂಸಿತಃ = ಹಿಂಸೆಗೆ ಒಳಗಾದವನು, ನಾಸಿ = ಆಗಿಲ್ಲ?

**ತಾ:**—ಎಲೈ! ಮಂದಹಾಸಪೂರ್ಣವಾದ ಮುಖವುಳ್ಳವನೇ! ಶತ್ರುರಾಜರ ಗೂಢಚಾರರು ಬಂದಾರು ಎಂಬ ಭಯದಿಂದ ದಾರಿಗರನ್ನು ತಡೆಗಟ್ಟಿ ಸಂದೇಹಬಂದರೆ ಅವರನ್ನು ಕೊಲ್ಲಲು ನಾನು ನನ್ನ ಭಟರನ್ನು ನೇಮಿಸಿದ್ದೇನೆ. ಅವರು ಯಮಕಿಂಕರರಂತೆ ತುಂಬಾ ಕ್ರೂರರು. ಅವರು ನಿನ್ನನ್ನು ಹಿಂಸಿಸದೆ ಹೇಗೆ ಬಿಟ್ಟರು?

**ವಿ:**—ರಿಪವಶ್ಚ ತೇ ನೃಪಾಶ್ಚ ರಿಪುನೃಪಾಃ, ರಿಪುನೃಪಾಣಾಂ ಪ್ರಣಿಧಯಃ ರಿಪುನೃಪಪ್ರಣಿಧಯಃ, ತೇ ಇತಿ ಪ್ರತಿಶಂಕಾ ರಿಪುನೃಪಪ್ರಣಿಧಿ-ಪ್ರತಿಶಂಕಾ. ಪಥಿಕಾನಾಂ ಪಾಟನಂ ಪಥಿಕಪಾಟನಂ, ಪಥಿಕಪಾಟನಂ ಇತಿ ಕರ್ಮ ಪಥಿಕಪಾಟನಕರ್ಮ ತಸ್ಮಿನ್.

**ಕ್ರಿ:**—ಅಸ್ತಿ ಸ್ತಃ ಸಂತಿ ಇತ್ಯಾದಿ ಅಸ-ಭುವಿ, ವರ್ತಮಾನೇ ಲಟ್. ಇಲ್ಲಿ ದ್ರುತವಿಲಂಬಿತವೆಂಬ ವೃತ್ತ. ಲಕ್ಷಣ–ದ್ರುತವಿಲಂಬಿತಮಾಹ ನಭೌ ಭರೌ.

**ಅಪ್ಲವದೇವನದೀತರಣಂ ತೇ**
**ಹಂತ! ಕಥಂ ಚ ಚಿಕೀರ್ಷಸಿ ಕಿಂ ತ್ವಂ।**
**ತಂ ನಿಗದಂತಮಿತಿಪ್ರಭೃತೀಹ**
**ಸ್ಮಾಹ ಮಹಾಪುರುಷೋತ್ತಮದಾಸಃ** ||೧೬||

**ಅ:**—ಅಪ್ಲವದೇವನದೀತರಣಂ, ಹಂತ! ತೇ ಕಥಂ, ತ್ವಂ ಕಿಂ ಚ ಚಿಕೀರ್ಷಸಿ? ಮಹಾಪುರುಷೋತ್ತಮದಾಸಃ ಇತಿ ಪ್ರಭೃತಿ ನಿಗದಂತಂ ತಂ ಆಹ ಸ್ಮ.

**ಅರ್ಥ:**— ಅಪ್ಲವದೇವನದೀತರಣಂ = ನಾವೆಯಿಲ್ಲದೆ ಗಂಗೆಯ ದಾಟುವಿಕೆಯು, ತೇ = ನಿನಗೆ, ಕಥಂ = ಹೇಗೆ, ಹಂತ = ಆಶ್ಚರ್ಯವು!,

Rarest Archiver

ತ್ವಂ = ನೀನು, ಕಿಂ ಚ = ಮತ್ತೇನನ್ನು, ಚಿಕೀರ್ಷಸಿ = ಮಾಡಲು ಇಚ್ಛಿಸು ತ್ತೀಯೇ ? ಮಹಾಪುರುಷೋತ್ತಮದಾಸಃ = ಶ್ರೇಷ್ಠ ಹರಿದಾಸರಾದ ಮಧ್ವಾಚಾರ್ಯರು, ಇಹ = ಈ ಸಂದರ್ಭದಲ್ಲಿ, ಇತಿ ಪ್ರಭೃತಿ = ಇದೇ ಮೊದಲಾದ ಮಾತನ್ನು, ನಿಗದಂತಂ = ಹೇಳುತ್ತಿರುವ, ತಂ = ಆ ತುರುಕ ರಾಜನನ್ನು ಕುರಿತು, ಆಹ ಸ್ಮ = ಹೇಳಿದರು.

ತಾ:—ಎಲೈ ಧೀರನೇ ! ಈ ಗಂಗಾನದಿಯಲ್ಲಿ ದೋಣಿಗಳ ಸಂಚಾರ ವನ್ನು ನಾನು ನಿಷೇಧಿಸಿದ್ದೇನೆ. ಹಾಗಿದ್ದರೂ ನೀನು ಯಾವ ಸಾಧನವೂ ಇಲ್ಲದೆ ಹೇಗೆ ನದಿಯನ್ನು ದಾಟಿದೆ ? ಇದು ಪರಮಾಶ್ಚರ್ಯವು. ಅದಿರಲಿ ಇನ್ನುಮುಂದೆ ನೀನು ಇಲ್ಲಿ ಏನು ಮಾಡಬೇಂದಿರುವೆ ? ರಾಜನು ಇದೇ ಮೊದಲಾದ ಪ್ರಶ್ನೆಗಳನ್ನು ಕೇಳಿದನು. ಆಗ ವಿಷ್ಣುಭಕ್ತಾಗ್ರಣಿಗಳಾದ ಆಚಾರ್ಯರು ಹೀಗೆಂದರು:

ವಿ:—ನ ವಿದ್ಯತೇ ಪ್ಲವಃ ಯಸ್ಯಾಂ ಸಾ, ದೇವಾನಾಂ ನದೀ, ಅಪ್ಲವಾ ಚ ಸಾ ದೇವನದೀ ಚ ಅಪ್ಲವದೇವನದೀ ತಸ್ಯಾಃ ತರಣಮ್. ಪುರುಷೋತ್ತಮಸ್ಯ ದಾಸಃ, ಮಹಾಂಶ್ಚಾಸೌ ಪುರುಷೋತ್ತಮದಾಸಶ್ಚ, ಕರ್ತುಂ ಇಚ್ಛಸಿ ಚಿಕೀರ್ಷಸಿ.

ಕ್ರಿ:—ಚಿಕೀರ್ಷತಿ ಚಿಕೀರ್ಷತಃ ಚಿಕೀರ್ಷಂತಿ, ಚಿಕೀರ್ಷಸಿ, ಇತ್ಯಾದಿ ಕೃಧಾತು, ಸನ್ನಂತ ಲಟ್. ಆಹ ಆಹತುಃ ಆಹುಃ ಇತ್ಯಾದಿ ಬ್ರೂಞ್ ವ್ಯಕ್ತಾಯಾಂ ವಾಚಿ, ಲಟ್.

ವೃತ್ತ:—ದೋಧಕ-ದೋಧಕವೃತ್ತಮಿದಂ ಭಭಭಾದ್ ಗೌ ಎಂದು ಲಕ್ಷಣ.

ಅವ:—ತುರುಕರಾಜನ ಪ್ರಶ್ನೆಗೆ ಆಚಾರ್ಯರು ಹೀಗೆ ಉತ್ತರ ಕೊಟ್ಟರು–

**ಯೋಽಸೌ ದೇವೋ ವಿಶ್ವದೀಪಃ ಪ್ರದೀಪ್ತಃ**
**ಕುರ್ವನ್ಸರ್ವಂ ತತ್ಪರಾನುಗ್ರಹೇಣ ।**

ಯೊಮುಸ್ತಾವತ್ ತೂರ್ಣಮಾಶಾಮುದೀಚೀ
ಮಿತ್ಯಾದಂ ತದ್ಭಾಷಯಾ ಚಿತ್ರವಾಕ್ಯಮ್ ||೧೭||

**ಅ:**—ವಿಶ್ವದೀಪಃ ಯಃ ಅಸೌ ಪ್ರದೀಪ್ತೋ ದೇವಃ ತತ್ಪರಾನುಗ್ರಹೇಣ ಸರ್ವಂ (ವಯಂ) ಕುರ್ಮಃ| ತಾವತ್ ತೂರ್ಣಂ ಉದೀಚೀಂ ಆಶಾಂ ಯಾಮಃ, ಇತ್ಯಾದ್ಯಂ ಚಿತ್ರವಾಕ್ಯಂ ತದ್ಭಾಷಯಾ (ಮಹಾ ಪುರುಷೋತ್ತಮದಾಸಃ ಆಹ ಸ್ಮ)

**ಅರ್ಥ:**—ವಿಶ್ವದೀಪಃ=ಜಗತ್ತಿಗೆ ದೀಪದಂತಿರುವ (ಜಗತ್ತನ್ನೆಲ್ಲಾ ಪ್ರಕಾಶಗೊಳಿಸುವ) ಯಃ ಅಸೌ=ಯಾವ ಈ, ಪ್ರದೀಪ್ತಃ=ಪ್ರಕಾಶ ಮಾನನಾದ, ದೇವಃ=(ಅಸ್ತಿ) ಸೂರ್ಯನಿದ್ದಾನೋ (ಸೂರ್ಯನಲ್ಲಿರುವ ನಾರಾಯಣನು ಇದ್ದಾನೋ) ತತ್ಪರಾನುಗ್ರಹೇಣ=ಅವನ ಉತ್ತಮ ವಾದ ಅನುಗ್ರಹದಿಂದ, ಸರ್ವಂ=ಎಲ್ಲವನ್ನೂ, (ವಯಂ = ನಾವು) ಕುರ್ಮಃ=ಮಾಡುತ್ತೇವೆ.)

**ತಾ:**—'ನಮ್ಮ ದೇವರು ಜಗತ್ತನ್ನೆಲ್ಲಾ ಬೆಳಗುವ ಪ್ರಕಾಶಮಾನ ನಾದ ಸೂರ್ಯನು. ಅವನು ಯಾವಾಗಲೂ ಉತ್ಸಾಹಶಾಲಿಯಾಗಿದ್ದು ಆಟದಂತೆ ಪ್ರಪಂಚದ ಎಲ್ಲಾ ಕೆಲಸಗಳನ್ನೂ ನಡೆಸುತ್ತಿದ್ದಾನೆ. ಅವನ ಪರಮಾನುಗ್ರಹದಿಂದ ನಾವು ಇಂತಹ ಎಲ್ಲಾ ಕೆಲಸಗಳನ್ನೂ ಅನಾಯಾಸ ವಾಗಿ ನಡೆಸುತ್ತಿದ್ದೇವೆ. ಈಗ ಸದ್ಯದಲ್ಲಿ ಉತ್ತರದಿಕ್ಕನ್ನು ಕುರಿತು ಅವಸರದಿಂದ ಹೋಗುತ್ತಿದ್ದೇವೆ' ಇದೇ ಮೊದಲಾದ ವಿಷಯವನ್ನು ಆಚಾರ್ಯರು ತುರುಕರ ಭಾಷೆಯಿಂದಲೇ ಹೇಳಿದರು. ಆಚಾರ್ಯರ ಮಾತಿನ ವೈಖರಿ ಆಶ್ಚರ್ಯಕರವಾಗಿತ್ತು.

**ವಿ:**—ದೀಪಯತೀತಿ ದೀಪಃ, ವಿಶ್ವಸ್ಯ ದೀಪಃ ವಿಶ್ವದೀಪಃ, ಪರಶ್ಚಾಸೌ ಅನುಗ್ರಹಶ್ಚ ಪರಾನುಗ್ರಹಃ ತಸ್ಯ ಪರಾನುಗ್ರಹಃ ತೇನ, ಆದೌಭವಂ ಆದ್ಯಂ, ಇತಿ ಆದ್ಯಂ ಯಸ್ಯ ತತ್, ತಸ್ಯ ಭಾಷಾ ತದ್ಭಾಷಾ, ತಯಾ, ಚಿತ್ರಂ ಚ ತತ್ ವಾಕ್ಯಂ ಚ, ತತ್.

**ವೃತ್ತ:**—ಶಾಲಿನೀ, ಶಾಲಿನ್ಯುಕ್ತಾ ಮ್ತೌ ತಗೌ ಗೋಽಬ್ಧಿ ಲೋಕೈಃ.

Rarest Archiver

ಅ:—ಶ್ರೀ ಮಧ್ವಾಚಾರ್ಯರ ಧೈರ್ಯ ಸ್ಥೈರ್ಯ ಗಾಂಭೀರ್ಯ ಮೊದಲಾದ ಗುಣಗಳನ್ನು ಕಂಡು ಚಕಿತನಾದ ತುರುಕರಾಜನು ತನ್ನ ಅರ್ಧ ರಾಜ್ಯವನ್ನೇ ಆಚಾರ್ಯರಿಗೆ ಸಮರ್ಪಿಸಿದನು–

**ಗಾಂಭೀರ್ಯಂ ಧೃತಿಮುರುವೀರ್ಯಮಾರ್ಯಭಾವಂ**
**ತೇಜೋಽಗ್ರ್ಯಂ ಗಿರಮಪಿ ದೇಶಕಾಲಯುಕ್ತಾಂ ।**
**ರಾಜಾಸ್ಯ ಸ್ಫುಟಮುಪಲಭ್ಯ ವಿಸ್ಮಿತೋಽಸ್ಮೈ**
**ರಾಜ್ಯಾರ್ಧಂ ಸಪದಿ ಸಮರ್ಪಯಾಂಬಭೂವ** ॥೧೮॥

ಅ:—ರಾಜಾ ಅಸ್ಯ ಗಾಂಭೀರ್ಯಂ ಧೃತಿಂ ಉರುವೀರ್ಯಂ ಆರ್ಯಭಾವಂ ಅಗ್ರ್ಯಂ ತೇಜಃ ದೇಶಕಾಲಯುಕ್ತಾಂ ಗಿರಂ ಅಪಿ ಸ್ಫುಟಂ ಉಪಲಭ್ಯ ವಿಸ್ಮಿತಃ ಸನ್ ಸಪದಿ ಅಸ್ಮೈ ರಾಜ್ಯಾರ್ಧಂ ಸಮರ್ಪಯಾಂ ಬಭೂವ ।

**ಅರ್ಥ:**—ರಾಜಾ = ತುರುಕರಾಜನು, ಅಸ್ಯ = ಈ ಶ್ರೀಮಧ್ವಾಚಾರ್ಯರ, ಗಾಂಭೀರ್ಯಂ = ಗಂಭೀರತೆಯನ್ನು, ಧೃತಿಂ = ಧೈರ್ಯವನ್ನು, ಉರುವೀರ್ಯಂ = ಹೆಚ್ಚಾದ ಸಾಮರ್ಥ್ಯವನ್ನು, ಆರ್ಯಭಾವಂ = ಪೂಜ್ಯತೆಯನ್ನು (ಪಾಂಡಿತ್ಯ, ಹಿರಿಯತನ, ನಾಗರಿಕತನವನ್ನು) ಅಗ್ರ್ಯಂ ತೇಜಃ = ಶ್ರೇಷ್ಠವಾದ ಬ್ರಹ್ಮವರ್ಚಸ್ಸನ್ನು, (ಕಾಂತಿಯನ್ನು) ದೇಶಕಾಲ ಯುಕ್ತಾಂ ಗಿರಂ ಚ = ದೇಶಕಾಲೋಚಿತವಾದ ಮಾತನ್ನು, ಸ್ಫುಟಂ = ಸ್ಪಷ್ಟವಾಗಿ, ಉಪಲಭ್ಯ = ತಿಳಿದು (ನೋಡಿ ಮತ್ತು ಕೇಳಿ), ವಿಸ್ಮಿತಃ ಸನ್ = ಆಶ್ಚರ್ಯಪಟ್ಟವನಾಗಿ, ಸಪದಿ = ಕೂಡಲೇ, ಅಸ್ಮೈ = ಈ ಮಧ್ವಾಚಾರ್ಯರಿಗೆ, ರಾಜ್ಯಾರ್ಧಂ = ತನ್ನ ರಾಜ್ಯದ ಅರ್ಧಭಾಗವನ್ನು, ಸಮರ್ಪಯಾಂಬಭೂವ = ಸಮರ್ಪಿಸಿದನು.

**ತಾ:**—ಆ ರಾಜನು ಶ್ರೀಮಧ್ವಾಚಾರ್ಯರ ಗಂಭೀರತೆ, ಧೈರ್ಯ, ವಿಪುಲವಾದ ಸಾಮರ್ಥ್ಯ, ಪಾಂಡಿತ್ಯ, ಪೂಜ್ಯತೆ, ಉತ್ತಮಕಾಂತಿ, ವರ್ಚಸ್ಸು, ದೇಶಕಾಲೋಚಿತವಾದ ಮಾತು ಇವುಗಳನ್ನೆಲ್ಲಾ ಚೆನ್ನಾಗಿ ತಿಳಿದುಕೊಂಡನು. ಇದನ್ನೆಲ್ಲಾ ನೋಡಿ ಕೇಳಿ ಆಶ್ಚರ್ಯಪಟ್ಟು ಕೂಡಲೇ ತನ್ನ ಅರ್ಧರಾಜ್ಯವನ್ನು ಶ್ರೀ ಮಧ್ವಾಚಾರ್ಯರಿಗೆ ಅರ್ಪಿಸಿದನು.

Rarest Archiver

ವಿ:—ಗಂಭೀರಸ್ಯ ಭಾವಃ ಗಾಂಭೀರ್ಯಂ ತತ್, ಉರು ಚ ತತ್ ವೀರ್ಯಂ ಚ ಉರುವೀರ್ಯಂ ತತ್, ಆರ್ಯಸ್ಯ ಭಾವಃ ಆರ್ಯಭಾವಃ ತಂ, ದೇಶಶ್ಚ ಕಾಲಶ್ಚ ದೇಶಕಾಲೌ ದೇಶಕಾಲಯೋಃ ಯುಕ್ತಾ ದೇಶಕಾಲ ಯುಕ್ತಾ ತಾಂ, ರಾಜ್ಯಸ್ಯ ಅರ್ಧಂ ರಾಜ್ಯಾರ್ಧಂ, ತತ್.

ಕ್ರಿ:— ಸಮರ್ಪಯಾಂ + ಬಭೂವ, ಬಭೂವತುಃ ಬಭೂವುಃ ಇತ್ಯಾದಿ ಭೂ–ಸತ್ತಾಯಾಂ ಲಿಟ್.

ವೃತ್ತ :— ಪ್ರಹರ್ಷಿಣೀ, ಲಕ್ಷಣ- ಮ್ನೌ ಜ್ರೌ ಗಸ್ತ್ರಿದಶಯತಿಃ ಪ್ರಹರ್ಷಿಣೀಯಮ್.

ಅವ:—ಯತಿಗಳು ತುರುಷ್ಕಭಾಷೆಯಿಂದ ಮಾತನಾಡಿದುದು ಯುಕ್ತವಲ್ಲವೆಂಬ ವಿಷಯಕ್ಕೆ ಸಮಾಧಾನ—

**ದಂಡಾರ್ಹಬುದ್ಧಿವಿಷಯೋ ನೃಪಪೂರುಷಾಣಾಮ್**
**ರಾಜ್ಯಾರ್ಹಬುದ್ಧಿವಿಷಯೋಽಭವದಿತ್ಥಮೇಷಃ ।**
**ನೀತಿಂ ಪ್ರಕಾಶಯಿತುಮೇವ ವಿಪತ್ಸು ಕಾರ್ಯಾಂ**
**ಗಂತುಂ ಪ್ರಭುಃ ಪ್ರಸಭತೋಽಪಿ ತಥಾ ವ್ಯಧಾತ್ಸಃ ॥೧೯॥**

ಅ:—ನೃಪಪೂರುಷಾಣಾಂ ದಂಡಾರ್ಹಬುದ್ಧಿವಿಷಯಃ ಏಷಃ ಇತ್ಥಂ (ನೃಪಸ್ಯ) ರಾಜ್ಯಾರ್ಹಬುದ್ಧಿವಿಷಯಃ ಅಭವತ್. ಪ್ರಸಭತಃ ಗಂತುಂ ಪ್ರಭುರಪಿ ಸಃ ವಿಪತ್ಸು ಕಾರ್ಯಾಂ ನೀತಿಂ ಪ್ರಕಾಶಯಿತುಂ ಏವ ತಥಾ ವ್ಯಧಾತ್.

ಅರ್ಥ:—ನೃಪಪೂರುಷಾಣಾಂ = ರಾಜಭಟರಿಗೆ, ದಂಡಾರ್ಹ = ಇವನು ಶಿಕ್ಷೆಗೆ ಯೋಗ್ಯನು ಎಂಬ, ಬುದ್ಧಿ = ಜ್ಞಾನಕ್ಕೆ, ವಿಷಯಃ = ಆಸ್ಪದರಾದ, ಏಷಃ = ಈ ಮಧ್ವಾಚಾರ್ಯರು, ಇತ್ಥಂ = ಈ ರೀತಿ (ನೃಪಸ್ಯ = ರಾಜನಿಗೆ), ರಾಜ್ಯಾರ್ಹ = ರಾಜ್ಯಕ್ಕೆ ಯೋಗ್ಯನು ಎಂಬ, ಬುದ್ಧಿವಿಷಯಃ = ಜ್ಞಾನಕ್ಕೆ ವಿಷಯರು, ಅಭವತ್ = ಆದರು. ಪ್ರಸಭತಃ = ಬಲಾತ್ಕಾರ ದಿಂದ, ಗಂತುಂ = ಹೋಗುವುದಕ್ಕೆ, ಪ್ರಭುಃ ಅಪಿ = ಸಮರ್ಥರಾಗಿದ್ದರೂ, ಸಃ = ಆ ಮಧ್ವಾಚಾರ್ಯರು, ವಿಪತ್ಸು = ಕಷ್ಟಕಾಲಗಳಲ್ಲಿ, ಕಾರ್ಯಾಂ =

Rarest Archive

ಮಾಡಬೇಕಾಗಿರುವ (ಅನುಸರಿಸಲು ಯೋಗ್ಯವಾದ), ನೀತಿಂ = ನ್ಯಾಯವನ್ನು, ಪ್ರಕಾಶಯಿತುಂ ಏವ = ಪ್ರಕಟಿಸುವುದಕ್ಕಾಗಿಯೇ, ತಥಾ ವ್ಯಧಾತ್ = ಹಾಗೆ ಮಾಡಿದರು.

ತಾ :—ಈ ಅಸಾಧಾರಣಪುರುಷನು ಶತ್ರುಗಳ ಕಡೆಯವನೇ ಇರಬೇಕು. ಇವನನ್ನು ಕೊಲ್ಲಬೇಕು ಅಥವಾ ಬಂಧಿಸಬೇಕೆಂದು ತುರುಕ ರಾಜಭಟರು ಆಲೋಚಿಸಿದ್ದರು. ಆದರೆ ತುರುಷ್ಕರಾಜನು ಇವರು ನನ್ನ ರಾಜ್ಯದ ಅರ್ಧಭಾಗಕ್ಕೆ ಅರ್ಹರು ಎಂದು ತಿಳಿದು ಅವರಿಗೆ ರಾಜ್ಯದ ಅರ್ಧಭಾಗವನ್ನು ಸಮರ್ಪಿಸಿದನು. ಶ್ರೀಮಧ್ವಾಚಾರ್ಯರು ನಿಸ್ಪೃಹರಾದ ಯತಿಗಳು. ರಾಜಭಟರನ್ನೂ ರಾಜನನ್ನೂ ತೃಣೀಕರಿಸಿ ಮುಂದಕ್ಕೆ ಹೋಗಲು ಸಮರ್ಥರು. ಹಾಗಿದ್ದರೂ ರಾಜನ ಹತ್ತಿರ ಯತಿಗಳಿಗೆ ನಿಷಿದ್ಧವಾದ ತುರುಕರ ಭಾಷೆಯಿಂದ ಏಕೆ ಮಾತನಾಡಿದರು ? ರಾಜನನ್ನು ಸಂತೋಷಗೊಳಿಸಿ ತಮ್ಮ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದೇ ? ಅಥವಾ ಯಾವುದಾದರೊಂದು ಬಹುಮಾನವನ್ನು ಪಡೆಯಬೇಕೆಂದೇ ? ಅಲ್ಲ. ಪ್ರಪಂಚದಲ್ಲಿ ಅನೇಕ ಅಶಕ್ತರು ಇರುತ್ತಾರೆ. ಅವರು ಆಪತ್ಕಾಲದಲ್ಲಿ ಯಾವ ನೀತಿಯನ್ನು ಅನುಸರಿಸಬೇಕೆಂದು ತಿಳಿಸುವುದಕ್ಕಾಗಿಯೇ ತುರುಷ್ಕಭಾಷೆಯಿಂದ ಆ ರಾಜನೊಡನೆ ಮಾತನಾಡಿ ಅವನನ್ನು ಸಂತೋಷಗೊಳಿಸಿ ಇವರು ಅರ್ಧರಾಜ್ಯವನ್ನು ಪಡೆಯಲು ಅರ್ಹರು ಎಂಬ ಗೌರವಕ್ಕೆ ಪಾತ್ರರಾದರು. ವಿರಕ್ತಶಿಖಾಮಣಿಗಳಾದ ಆಚಾರ್ಯರು ರಾಜನು ಅರ್ಪಿಸಿದ ರಾಜ್ಯವನ್ನು ಸ್ವೀಕರಿಸಲಿಲ್ಲ. ತಮ್ಮ ಸಂಕಲ್ಪದಂತೆ ಉತ್ತರಕ್ಕೆ ಬದರಿಯ ಕಡೆಗೆ ಪ್ರಯಾಣ ಬೆಳೆಸಿದರು.

ವಿ :—ದಂಡಸ್ಯ ಅರ್ಹಃ ದಂಡಾರ್ಹಃ ದಂಡಾರ್ಹ ಇತಿ ಬುದ್ಧಿಃ ದಂಡಾರ್ಹಬುದ್ಧಿಃ ತಸ್ಯಾಃ ವಿಷಯಃ, ನೃಪಸ್ಯ ಪೂರುಷಾಃ ನೃಪಪೂರುಷಾಃ (ನೃಪಶ್ಚ ಪೂರುಷಾಶ್ಚ) ತೇಷಾಂ, ರಾಜ್ಯಸ್ಯ ಅರ್ಹಃ ರಾಜ್ಯಾರ್ಹಃ ರಾಜ್ಯಾರ್ಹ ಇತಿ ಬುದ್ಧಿಃ ತಸ್ಯಾಃ ವಿಷಯಃ,

ಕ್ರಿ :—ವಿ + ಅಧಾತ್ ಅಧಾತಾಂ ಅಧುಃ ಇತ್ಯಾದಿ, ವಿ ಉಪಸರ್ಗ, ಡುಧಾಞ್ ಧಾರಣಪೋಷಣಯೋಃ ಲುಙ್.

**ವೃತ್ತ** :—ವಸಂತತಿಲಕಾ- ಲಕ್ಷಣ- ಉಕ್ತಾ ವಸಂತತಿಲಕಾ ತಭಜಾ ಜಗೌ ಗಃ |

**ಅವ** :—ತಮ್ಮನ್ನು ಕೊಲ್ಲಬೇಕೆಂದು ಬಂದ ತುರುಷ್ಕಭಟರನ್ನು ನಾಶಮಾಡುವ ಶಕ್ತಿ ಇದ್ದರೂ ತಮ್ಮ ಇಚ್ಛೆಯಿಂದಲೇ ಆಚಾರ್ಯರು ಅವರನ್ನು ಬಿಟ್ಟರು ಎಂದು ತಿಳಿಸಲು ಆಚಾರ್ಯರು ಕಳ್ಳರ ಗುಂಪನ್ನು ನಾಶಪಡಿಸಿದ ಚಮತ್ಕಾರವನ್ನು ವರ್ಣಿಸುತ್ತಾರೆ.

**ಕದಾಚಿಚ್ಚೋರಾಣಾಂ ನಿಕರಮವಲೋಕ್ಯಾಭಿಪತತಾಂ**
**ಅವಸ್ಥಾಪ್ಯ ಸ್ವೀಯಾನ್ ಕರಗಪಟಪಿಂಡಾರ್ಥಮತಿಕೃತ್ |**
**ಚರನ್ನೇತೇಷ್ವೇತಾನಥ ಮಿಥ ಇಹಾಘಾತಯದಹೋ**
**ವಿಭುಃ ಸಮ್ಮೋಹ್ಯ ಪ್ರಾಗ್ ವಿಜಯ ಇವ ಸಂಶಪ್ತಕಗಣಾನ್ ||೨೦||**

**ಅ** :—ವಿಭುಃ ಕದಾಚಿತ್ ಅಭಿಪತತಾಂ ಚೋರಾಣಾಂ ನಿಕರಂ ಅವಲೋಕ್ಯ ಸ್ವೀಯಾನ್ ಅವಸ್ಥಾಪ್ಯ ಕರಗಪಟಪಿಂಡಾರ್ಥಮತಿಕೃತ್ ಸನ್ ಏತೇಷು ಚರನ್ ಅಥ ಏತಾನ್ ಸಂಮೋಹ್ಯ ಪ್ರಾಕ್ ವಿಜಯಃ ಸಂಶಪ್ತಗಣಾನ್ ಇವ ಮಿಥಃ ಅಘಾತಯತ್ ಅಹೋ.

**ಅರ್ಥ** :— ವಿಭುಃ = ಸಮರ್ಥರಾದ ಶ್ರೀಮಧ್ವಾಚಾರ್ಯರು, ಕದಾಚಿತ್ = ಒಂದಾನೊಂದು ಸಮಯದಲ್ಲಿ, ಅಭಿಪತತಾಂ ಚೋರಾಣಾಂ = ಎದುರಾಗಿ ಮೇಲೆ ಬೀಳಲು ಬರುತ್ತಿರುವ ಕಳ್ಳರ, ನಿಕರಂ ಅವಲೋಕ್ಯ = ಸಮೂಹವನ್ನು ನೋಡಿ, ಸ್ವೀಯಾನ್ ಅವಸ್ಥಾಪ್ಯ = ತನ್ನವರನ್ನು (ಒಂದು ಕಡೆಗೆ) ನಿಲ್ಲಿಸಿ, ಕರಗಪಟಪಿಂಡಾರ್ಥಮತಿಕೃತ್, ಕರಗ = ಕೈಯಲ್ಲಿರುವ, ಪಟಪಿಂಡ = ಬಟ್ಟೆಯ ಗಂಟಿನಲ್ಲಿ, ಅರ್ಥಮತಿಕೃತ್ (ಸನ್) = ಹಣವೆಂಬ ಬುದ್ಧಿಯನ್ನು ಉಂಟುಮಾಡಿದವರಾಗಿ, ಏತೇಷು ಚರನ್ (ಸನ್) = ಈ ಕಳ್ಳರ ಮಧ್ಯದಲ್ಲಿ ಓಡಾಡುತ್ತಾ, ಅಥ = ಅನಂತರ, ಏತಾನ್ = ಈ ಕಳ್ಳರನ್ನು, ಸಂಮೋಹ್ಯ = ಮೋಹಗೊಳಿಸಿ (ಭ್ರಾಂತರನ್ನಾಗಿ ಮಾಡಿ), ಪ್ರಾಕ್ = ಹಿಂದೆ ಮಹಾಭಾರತ ಯುದ್ಧದಲ್ಲಿ, ವಿಜಯಃ = ಅರ್ಜುನನು, ಸಂಶಪ್ತಕಗಣಾನ್ ಇವ = ಸಂಶಪ್ತಕರ ಗುಂಪುಗಳನ್ನೋ

Rarest Archiver

ಪಾದಿಯಲ್ಲಿ, ಮಿಥಃ = ಪರಸ್ಪರವಾಗಿ, ಅಘಾತಯತ್ = ಕೊಲ್ಲಿಸಿದರು. ಅಹೋ = ಆಶ್ಚರ್ಯವು.

ತಾ :—ಆಚಾರ್ಯರು ಶಿಷ್ಯಸಮೇತರಾಗಿ ಬದರಿಗೆ ಹೋಗುತ್ತಿದ್ದರು. ಒಂದಾನೊಂದು ದಿನ ದಾರಿಯಲ್ಲಿ ಒಂದು ದೊಡ್ಡ ಕಳ್ಳರ ಗುಂಪು ತಮ್ಮ ಎದುರಾಗಿ ಆಕ್ರಮಿಸಲು ಬರುತ್ತಿರುವುದನ್ನು ನೋಡಿದರು. ಆಗ ಆಚಾರ್ಯರು ತಮ್ಮ ಶಿಷ್ಯರನ್ನೆಲ್ಲಾ ಒಂದು ಕಡೆ ನಿಲ್ಲಲು ಹೇಳಿದರು. ತಾವು ಕೈಯಲ್ಲಿದ್ದ ಬಟ್ಟೆಯನ್ನು ಗಂಟಿನಂತೆ ಮಾಡಿ ಹಿಡಿದುಕೊಂಡು ನಿಂತರು. ಆ ಕಳ್ಳರು ಆಚಾರ್ಯರ ಶಿಷ್ಯರ ಬಳಿಯಲ್ಲಿದ್ದ ಬೇರೆ ವಸ್ತುಗಳನ್ನು ದೋಚುವುದನ್ನು ಬಿಟ್ಟು ಆಚಾರ್ಯರ ಕೈಯಲ್ಲಿದ್ದ ಬಟ್ಟೆಯ ಗಂಟಿನಲ್ಲಿ ಭಂಗಾರ ಬೆಳ್ಳಿ ಮೊದಲಾದ ದ್ರವ್ಯಸಂಪತ್ತು ಇದೆಯೆಂದು ಭ್ರಮಿಸಿ ಅದನ್ನು ಕಿತ್ತುಕೊಳ್ಳಲು ಬಂದರು. ಆಗ ಆಚಾರ್ಯರು ನಿಮ್ಮಲ್ಲಿ ಯಾರಾದರೊಬ್ಬರು ಈ ದ್ರವ್ಯಸಂಪತ್ತನ್ನು ತೆಗೆದುಕೊಳ್ಳಿರಿ ಎಂದು ಸಂಕೇತಮಾಡಿದಾಗ, ಆ ಕಳ್ಳರು ಈ ಗಂಟನ್ನು 'ನಾನು ತೆಗೆದುಕೊಳ್ಳಬೇಕು. ನೀನಲ್ಲ, ನಾನೇ ತೆಗೆದುಕೊಳ್ಳಬೇಕೆ'ಂದು ಜಗಳವಾಡಿದರು. ಹಿಂದೆ ಮಹಾಭಾರತಯುದ್ಧಕಾಲದಲ್ಲಿ ಸಂಶಪ್ತಕರೆಂಬ ಗುಂಪುಗುಂಪಾದ ಯೋಧರು ಅರ್ಜುನನ ಜೊತೆಯಲ್ಲಿ ಯುದ್ಧ ಮಾಡುತ್ತಾ ಇದ್ದರು. ಅರ್ಜುನನು ಸಂಮೋಹನಾಸ್ತ್ರವನ್ನು ಪ್ರಯೋಗಿಸಿದಾಗ ತಮ್ಮಲ್ಲಿಯೇ ಒಬ್ಬನು ಮತ್ತೊಬ್ಬನನ್ನು ಅರ್ಜುನನೆಂದು ತಿಳಿದು ಹೊಡೆಯಲಾರಂಭಿಸಿ ಪರಸ್ಪರ ಯುದ್ಧಮಾಡಿ ಸತ್ತುಹೋದರೆಂದು ಮಹಾಭಾರತದಲ್ಲಿ ಉಲ್ಲೇಖವಿದೆ. ಇಲ್ಲಿಯೂ ಕೂಡ ಅದರಂತೆಯೇ ಕಳ್ಳರು ಬಟ್ಟೆಯ ಗಂಟಿನಲ್ಲಿ ಹಣವಿದೆಯೆಂದು ಭ್ರಾಂತಿಯನ್ನು ಹೊಂದಿ ತಮ್ಮ ತಮ್ಮಲ್ಲಿಯೇ ಜಗಳವಾಡಿ ಸತ್ತು ಹೋಗುವಂತೆ ಆಚಾರ್ಯರು ಮಾಡಿದರು. ಇದರಿಂದ ಆಚಾರ್ಯರ ಅಸಾಧಾರಣವಾದ ಬುದ್ಧಿಕೌಶಲವು ವ್ಯಕ್ತವಾಗುತ್ತದೆ. ತಾವೇ ಕೊಲ್ಲುವ ಶಕ್ತಿಯಿದ್ದರೂ ಅವರವರೇ ಹೊಡೆದುಕೊಂಡು ಸಾಯುವಂತೆ ಮಾಡಿದರು ಎಂದು ಹೇಳಿದ್ದರಿಂದ ಆಚಾರ್ಯರು ಯತಿಗಳಿಗೆ ವಿಹಿತವಾದ ಅಹಿಂಸಾವ್ರತವನ್ನು ಎಂದೂ ಬಿಡಲಿಲ್ಲವೆಂದು ಸೂಚಿತವಾಗಿದೆ.

Rarest Archives

ವಿ.ವಿ.:— ಕರತಲಗತಪಟಪಿಂಡಂ ಕನಕಮಿತಿ ವಿಚಿಂತ್ಯ ಹಂತು-ಕಾಮಾಃ ಮಧ್ವಂ ಪರಸ್ಪರಂ ಜಘ್ನುಃ=ಕೈಯಲ್ಲಿದ್ದ ಬಟ್ಟೆಗಂಟನ್ನು ಭಂಗಾರವೆಂದು ತಿಳಿದು ಆಚಾರ್ಯರನ್ನು ಹೊಡೆಯಲು ಬಂದು ತಾವೇ ಹೊಡೆದಾಡುತ್ತಾ ಸತ್ತರು. –(ಭಾವಪ್ರಕಾಶಿಕಾ)

ವಿ:— ಕರಂ ಗಚ್ಛತೀತಿ ಕರಗಃ, ಪಟಸ್ಯ ಪಿಂಡಃ ಪಟಪಿಂಡಃ, ಕರಗಶ್ಚಾಸೌ ಪಟಪಿಂಡಶ್ಚ, ಕರಗಪಟಪಿಂಡೇ ಅರ್ಥಃ ಇತಿ ಮತಿಃ, ಕರಗಪಟಪಿಂಡಾರ್ಥಮತಿಂ ಕರೋತೀತಿ, ಸಂಶಪ್ತಕಾನಾಂ ಗಣಾಃ ತಾಂ.

ಕ್ರಿ:—ಅಘಾತಯತ್ ಅಘಾತಯತಾಂ ಅಘಾತಯನ್ ಇತ್ಯಾದಿ ; ಹನ–ಹಿಂಸಾಗತ್ಯೋಃ ಣಿಜಂತಾತ್ ಲಙ್.

ವೃತ್ತ:—ಶಿಖರಿಣೀ, ಲಕ್ಷಣ– ರಸೈರುದ್ರೈಶ್ಛಿನ್ನಾ ಯಮನಸಭಲಾ ಗಶ್ಶಿಖರಿಣೀ.

ಅವ:—ಮತ್ತೊಂದು ಕಳ್ಳರ ಗುಂಪನ್ನು ಓಡಿಸಿದ ಕಥೆಯನ್ನು ಹೇಳುತ್ತಾರೆ–

**ಅನ್ಯತ್ರ ಚ ಚೋರಾನ್ ಧನ್ಯಪ್ರವರೋಽಸೌ**
**ಶೂರಾಂಛತಸಂಖ್ಯಾನ್ ಪ್ರಾಪ್ತಾನ್ ಸ್ವಜಿಘಾಂಸೂನ್ ।**
**ಏಕೇನ ತು ಶಿಷ್ಯೇಣಾಕೃಷ್ಟಕುಠಾರಾನ್**
**ನಿಸ್ತಾಡಿತಯೂಥ್ಯಾನದ್ರಾವಯತ ದ್ರಾಕ್ ॥** ॥೨೧॥

ಅ:—ಧನ್ಯಪ್ರವರಃ ಅಸೌ ಅನ್ಯತ್ರ ಚ ಶತಸಂಖ್ಯಾನ್ ಶೂರಾನ್ ಸ್ವಜಿಘಾಂಸೂನ್ ಪ್ರಾಪ್ತಾನ್ ಏಕೇನ ತು ಶಿಷ್ಯೇಣ ಆಕೃಷ್ಟಕುಠಾರಾನ್ ನಿಸ್ತಾಡಿತಯೂಥ್ಯಾನ್ ಚೋರಾನ್ ದ್ರಾಕ್ ಅದ್ರಾವಯತ.

ಅರ್ಥ:—ಧನ್ಯಪ್ರವರಃ = ಗುಣಶಾಲಿಗಳಲ್ಲಿ (ಪುಣ್ಯವಂತರಲ್ಲಿ) ಶ್ರೇಷ್ಠರಾದ, ಅಸೌ = ಈ ಮಧ್ವಾಚಾರ್ಯರು, ಅನ್ಯತ್ರ ಚ = ಮತ್ತೊಂದು ಕಡೆಯಲ್ಲಿಯೂ, ಶತಸಂಖ್ಯಾನ್ = ನೂರುಸಂಖ್ಯೆಯುಳ್ಳ, ಶೂರಾನ್ = ಪರಾಕ್ರಮಿಗಳಾದ, ಸ್ವಜಿಘಾಂಸೂನ್ = ತಮ್ಮನ್ನು ಕೊಲ್ಲುವ ಅಪೇಕ್ಷೆಯುಳ್ಳ, ಪ್ರಾಪ್ತಾನ್ = ಸಮೀಪಕ್ಕೆ ಬಂದಿರುವ, ಏಕೇನ ತು = ಒಬ್ಬನೇ

Rarest Archiver

ಆದ, ಶಿಷ್ಯೇಣ = ಶಿಷ್ಯನಿಂದ (ಉಪೇಂದ್ರತೀರ್ಥರೆಂಬ ಶಿಷ್ಯರಿಂದ), ಆಕೃಷ್ಟಕುಠಾರಾನ್ = ಕಸಿದುಕೊಳ್ಳಲ್ಪಟ್ಟ ಕೊಡಲಿಯುಳ್ಳ, ನಿಸ್ತಾಡಿತ-ಯೂಥ್ಯಾನ್ = (ಕೊಡಲಿಯಿಂದಲೇ) ಚೆನ್ನಾಗಿ ಹೊಡೆಯಲ್ಪಟ್ಟ ಗುಂಪಿನವರುಳ್ಳ, ಚೋರಾನ್ = ಕಳ್ಳರನ್ನು, ದ್ರಾಕ್ = ಬೇಗನೇ, ಅದ್ರಾವಯತ = ಓಡಿಸಿದರು.

ತಾ :—ಆಚಾರ್ಯರು ಪ್ರಯಾಣಮಾಡುತ್ತಿದ್ದಾಗ ದಾರಿಯಲ್ಲಿ ಇನ್ನೊಂದು ಕಡೆ ವೀರರಾದ ನೂರಾರು ಮಂದಿಕಳ್ಳರು ಆಚಾರ್ಯರನ್ನೂ ಅವರ ಶಿಷ್ಯರನ್ನೂ ಕೊಲ್ಲಲು ಬಂದರು. ಆಗ ಆಚಾರ್ಯರು ತಮ್ಮ ಶಿಷ್ಯರಾದ ಉಪೇಂದ್ರತೀರ್ಥರೆಂಬುವರಿಗೆ 'ಕಳ್ಳರ ನಾಯಕನ ಕೈಯಲ್ಲಿದ್ದ ಕೊಡಲಿಯನ್ನು ಕಿತ್ತುಕೊ, ಅದರಿಂದಲೇ ಅವರನ್ನು ಹೊಡಿ' ಎಂದು ಆಜ್ಞಾಪಿಸಿದರು. ಉಪೇಂದ್ರತೀರ್ಥರು ಧೈರ್ಯದಿಂದ ಮುನ್ನುಗ್ಗಿ ಕಳ್ಳರ ಮತ್ತು ಅವರ ನಾಯಕನ ಕೈಯಿಂದ ಕೊಡಲಿಯನ್ನು ಕಿತ್ತು ಕೊಂಡು ಅದರಿಂದಲೇ ಅವನನ್ನೂ ಇತರ ಕಳ್ಳರನ್ನೂ ಹೊಡೆದು ಓಡಿಸಿದರು. ಈ ರೀತಿ ಆಚಾರ್ಯರು ತಮ್ಮ ಶಿಷ್ಯನ ಮೂಲಕವಾಗಿಯೂ ಅಸಾಧಾರಣವಾದ ಕಾರ್ಯವನ್ನು ಮಾಡಿಸಿದರು. ಈ ಪ್ರಾಚೀನ ಪದ್ಯ ದಿಂದ ಮೇಲಿನ ವಿಷಯವು ತಿಳಿದು ಬರುತ್ತದೆ.

ವಿ. ಅಂ :—ದಸ್ಯೂನವಾಪ್ತಾನವಲೋಕ್ಯ ಸೋಽಬ್ರವೀತ್
ಕೋಮೇಽಸ್ತಿ ಶಿಷ್ಯೋ ವಿಭಯೋ ಜವೀತ್ಯಲಮ್ |
ಅಭ್ಯಾಸವಾಂಸ್ತೂರ್ಣಮುಪೇಂದ್ರತೀರ್ಥಃ
ತತ್ತೇಜಸಾ ಕ್ರೂರಚಮೂಂ ಪ್ರಭೋಽಭ್ಯಯಾತ್ || —(ಭಾ. ಪ್ರ)

ವಿ :— ಧನಂ ಲಬ್ಧಾ ಧನ್ಯಃ, ಧನ್ಯಾನಾಂ ಪ್ರವರಃ, ಶತಂ ಸಂಖ್ಯಾ ಯೇಷಾಂ ತೇ ತಾನ್, ಹಂತುಂ ಇಚ್ಛವಃ, ಜಿಘಾಂಸವಃ, ಸ್ವೇಷಾಂ ಜಿಘಾಂಸವಃ ಸ್ವಜಿಘಾಂಸವಃ ತಾನ್, ಆಕೃಷ್ಟಃ ಕುಠಾರಃ ಯೇಭ್ಯಃ ತೇ ಆಕೃಷ್ಟಕುಠಾರಾಃ ತಾನ್, ಯೂಥೇ ಭವಃ ಯೂಥ್ಯಃ ನಿಸ್ತಾಡಿತಃ ಯೂಥ್ಯಃ ಯೇಷು ತಾನ್.

Rarest Archiver

ಕ್ರಿ:—ಅದ್ರಾವಯತ ಅದ್ರಾವಯೇತಾಂ ಅದ್ರಾವಯಂತ ಇತ್ಯಾದಿ ದ್ರು-ಗತೌ ಣಿಜಂತ ಲಙ್.

ವೃತ್ತ:—ಮಣಿಮಾಲಾ— ತ್ಯೌ ತ್ಯೌ ಮಣಿಮಾಲಾ ಛಿನ್ನಾ ಗುಹವಕ್ತ್ರೈಃ.

ಅವ:—ಇನ್ನೊಂದು ಕಳ್ಳರ ಗುಂಪಿಗೆ ಭ್ರಾಂತಿಯನ್ನು ಉಂಟು ಮಾಡಿದ ಕಥೆಯನ್ನು ವಿವರಿಸುತ್ತಾರೆ–

**ಕ್ವಚಿಚ್ಛಿಲಾಚ್ಛಟಾಭ್ರಮಾದಮುಂ ಸಸಂಘಮತ್ಯಜನ್ ।**
**ಅವೇಕ್ಷ್ಯ ದಸ್ಯವಃ ಪುನಃ ಕುತೂಹಲಾತ್ತಮಾನಮನ್ ॥೨೨॥**

ಅ:—ಕ್ವಚಿತ್ ದಸ್ಯವಃ ಸಸಂಘಂ ಅಮುಂ ಶಿಲಾಚ್ಛಟಾಭ್ರಮಾತ್ ಅತ್ಯಜನ್, ಪುನಃ ಅವೇಕ್ಷ್ಯ ಕುತೂಹಲಾತ್ ತಂ ಆನಮನ್.

ಅರ್ಥ:—ಕ್ವಚಿತ್ = ಒಂದು ಸ್ಥಳದಲ್ಲಿ, ದಸ್ಯವಃ = ಕಳ್ಳರು, ಸಸಂಘಂ = ಶಿಷ್ಯ ಸಮೂಹದಿಂದ ಸಹಿತರಾದ, ಅಮುಂ = ಈ ಮಧ್ವಾ-ಚಾರ್ಯರನ್ನು, ಶಿಲಾಚ್ಛಟಾಭ್ರಮಾತ್ = ಬಂಡೆಕಲ್ಲುಗಳ ಸಮೂಹ ವೆಂಬ ಭ್ರಾಂತಿಯಿಂದ, ಅತ್ಯಜನ್ = ಬಿಟ್ಟರು. ಪುನಃ = ಮತ್ತೊಮ್ಮೆ, ಅವೇಕ್ಷ್ಯ = (ಶಿಷ್ಯಸಮೇತರಾಗಿ ಹೋಗುತ್ತಿರುವ ಈ ಮಧ್ವಾಚಾರ್ಯರನ್ನು) ನೋಡಿ, ಕುತೂಹಲಾತ್ = ಆಶ್ಚರ್ಯದಿಂದ, ತಂ = ಅವರನ್ನು ಆನಮನ್ = ನಮಿಸಿದರು.

ತಾ:—ಮತ್ತೊಂದು ಕಡೆ ಆಚಾರ್ಯರು ಹೋಗುತ್ತಿದ್ದಾಗ ಕೆಲವು ಮಂದಿ ಕಳ್ಳರು ಆಚಾರ್ಯರನ್ನು ಹೊಡೆದು ದೋಚಬೇಕೆಂದು ಬಂದರು. ಆಚಾರ್ಯರಿಗೆ ಈ ವಿಷಯವು ತಿಳಿದಾಗ ಅವರು ಶಿಷ್ಯರನ್ನು ಕುರಿತು 'ನೀವು ಅಲ್ಲಾಡದೆ ಸ್ವಲ್ಪ ಹೊತ್ತು ನಿಂತಿರಿ' ಎಂದು ಹೇಳಿದರು. ದೂರದಿಂದ ಬರುತ್ತಿರುವ ಕಳ್ಳರಿಗೆ ಆಚಾರ್ಯರೂ ಅವರ ಶಿಷ್ಯರೂ ಬಂಡೆಕಲ್ಲುಗಳ ರಾಶಿಯಂತೆ ಕಂಡರು. ಇವೆಲ್ಲಾ ಬಂಡೆಕಲ್ಲುಗಳೆಂದು ತಿಳಿದು ಕಳ್ಳರು ಸ್ವಲ್ಪದೂರ ಹೋಗಿ ಹಿಂದಿರುಗಿ ನೋಡಿದಾಗ ಶಿಷ್ಯಸಮೇತರಾಗಿ ಹೋಗುತ್ತಿರುವ ಆಚಾರ್ಯರು ಅವರಿಗೆ ಗೋಚರರಾದರು. ಈ ಅದ್ಭುತ

Rarest Archiver

ದೃಶ್ಯವನ್ನು ಕಂಡು ಕಳ್ಳರು ಬೆರಗಾಗಿ ಆಚಾರ್ಯರ ಯೋಗಶಕ್ತಿಯನ್ನು ಹೊಗಳಿ ಅವರನ್ನು ನಮಸ್ಕರಿಸಿ ಕ್ಷಮೆ ಕೇಳಿದರು.

**ವಿ.ಅಂ. :**—ಅಚಲಾಸ್ತಿಷ್ಠತೇತ್ಯುಕ್ತ್ವಾ ಶಿಷ್ಯಾನ್‍ದಸ್ಯೂನ-
ವಂಚಯತ್ ||
ಮಧ್ವಸ್ತೇಽಪಿ ಗತಾಃ ಪಶ್ಚಾತ್ ತತ್ರ ನೈಕ್ಷಂತ ಕಂಚನ || (ಭಾ.ಪ್ರ)

**ವಿ :**— ಶಿಲಾನಾಂ ಘಟಾಃ ಶಿಲಾಚ್ಛಟಾಃ, ತಾಃ ಇತಿ ಭ್ರಮಃ ತಸ್ಮಾತ್. ಸಂಘೇನ ಸಹಿತಃ ಸಸಂಘಃ ತಂ.

**ಕ್ರಿ :** —ಅತ್ಯಜತ್ ಅತ್ಯಜತಾಂ ಅತ್ಯಜನ್ ಇತ್ಯಾದಿ ತ್ಯಜ – ಹಾನೌ ಲಙ್ ಆ + ಅನಮನ್ ಅನಮತ್ ಅನಮತಾಂ ಅನಮನ್. ಣಮು– ಪ್ರಹ್ವತ್ವೇ ಶಬ್ದೇ ಚ ಲಙ್.

**ವೃತ್ತ :**— ಪ್ರಮಾಣಿಕಾ, ಲಕ್ಷಣ– ಪ್ರಮಾಣಿಕಾ ಜರೌ ಲಗೌ |

**ಅವ :**— ಸತ್ಯತೀರ್ಥರನ್ನು ಕೊಲ್ಲಲು ಬಂದ ದೈತ್ಯನ ಪೀಡೆಯನ್ನು ಆಚಾರ್ಯರು ಪರಿಹರಿಸಿದರು–

**ಸತ್ಯೋಚ್ಛೇದೇ ಸೇಚ್ಛಾಯಾತಂ ವ್ಯಾಘ್ರಾಕಾರಂ ದೈತ್ಯವ್ಯಾಘ್ರಂ।**
**ಪ್ರಾಲೇಯಾದ್ರೇಃ ಪ್ರಾಂತೇ ಪ್ರಾಜ್ಞಃ**
**ಪಾಣೇರ್ಲೀಲಾಲೇಶೇನಾಸ್ಯತ್ ||೨೩||**

**ಅ :**—ಪ್ರಾಜ್ಞಃ ಪ್ರಾಲೇಯಾದ್ರೇಃ ಪ್ರಾಂತೇ ಸತ್ಯೋಚ್ಛೇದೇ ಸೇಚ್ಛಾಯಾತಂ ವ್ಯಾಘ್ರಾಕಾರಂ ದೈತ್ಯವ್ಯಾಘ್ರಂ ಪಾಣೇಃ ಲೀಲಾ-ಲೇಶೇನಾಸ್ಯತ್.

**ಅರ್ಥ:**— ಪ್ರಾಜ್ಞಃ = ಸರ್ವಜ್ಞರಾದ ಶ್ರೀಮಧ್ವಾಚಾರ್ಯರು, ಪ್ರಾಲೇಯಾದ್ರೇಃ = ಹಿಮವತ್‍ಪರ್ವತದ, ಪ್ರಾಂತೇ = ಸಮೀಪದಲ್ಲಿ, ಸತ್ಯೋಚ್ಛೇದೇ=ಸತ್ಯತೀರ್ಥರನ್ನು ಕೊಲ್ಲುವುದಕ್ಕೋಸ್ಕರ, ಸೇಚ್ಛಾಯಾತಂ = ಅಪೇಕ್ಷೆಯಿಂದ ಸಹಿತವಾಗಿಬಂದ, (ಪಾ-ಸ್ವೇಚ್ಛಾಯಾತಂ=ಸ್ವೇಚ್ಛೆ

Rarest Archiver

ಯಿಂದ ಬಂದ) ವ್ಯಾಘ್ರಾಕಾರಂ= ಹುಲಿಯಾಕೃತಿಯುಳ್ಳ, ದೈತ್ಯವ್ಯಾಘ್ರಂ =ದೈತ್ಯಶ್ರೇಷ್ಠನನ್ನು, ಪಾಣೇಃ=ಕೈಯ, ಲೀಲಾಲೇಶೇನ = ವಿಲಾಸದ =ಅಲ್ಪಾಂಶದಿಂದ, (ಸ್ವಲ್ಪ ತಳ್ಳುವುದರಿಂದ), ಆಸ್ಯತ್ = ತಳ್ಳಿದರು.

ತಾ :—ಒಮ್ಮೆ ಹಿಮಾಲಯದ ಸಮೀಪದಲ್ಲಿ ಶ್ರೀಮಧ್ವಾಚಾರ್ಯರು ಶಿಷ್ಯ ಸಹಿತರಾಗಿ ಹೋಗುತ್ತಿದ್ದರು. ಆಗ ಸತ್ಯತೀರ್ಥರು ದೇವರ ಪೆಟ್ಟಿಗೆ ಯನ್ನು ಹಿಡಿದು ಕೊಂಡು ಮುಂದೆ ಹೋಗುತ್ತಿದ್ದರು. ಆಗ ದೈತ್ಯ ನೊಬ್ಬನು ಹುಲಿಯ ರೂಪದಿಂದ ಬಂದನು. ಅವನು ಮಧ್ವಾಚಾರ್ಯರನ್ನು ಆಕ್ರಮಿಸಲು ಧೈರ್ಯಸಾಲದೆ ಅವರ ಶಿಷ್ಯರಾದ ಸತ್ಯತೀರ್ಥರನ್ನು ಕೊಲ್ಲಲು ಮೇಲೆ ಬಿದ್ದನು. ಆಗ ಆಚಾರ್ಯರು ತನ್ನ ಕೈಯಿಂದ ಆ ವ್ಯಾಘ್ರದೈತ್ಯನನ್ನು ಸ್ವಲ್ಪ ತಳ್ಳಿ ದೂರಕ್ಕೆಸೆದರು.

ವಿ.ಅಂ.:– ಮಧ್ವಂ ದುರ್ವಿಷಹಂ ಮತ್ವಾ ದೇವಂ
ಸಂಗೃಹ್ಯ ಚಾಗ್ರತಃ |
ಆಯಾಂತಂ ಸತ್ಯತೀರ್ಥಾರ್ಯಂ ಜಿಘಾಂಸುರ್ವ್ಯಾಘ್ರ ಆಪತತ್ ||
–(ಭಾ.ಪ್ರ.)

ವಿ:— ಸತ್ಯಸ್ಯ ಉಚ್ಛೇದಃ ತಸ್ಮಿನ್, ಇಚ್ಛಯಾ ಸಹ ವರ್ತತ ಇತಿ ಸೇಚ್ಛಂ, ಸೇಚ್ಛಂ ಆಯಾತಂ ಯಸ್ಯ ಸಃ ತಂ, ವ್ಯಾಘ್ರಸ್ಯ ಆಕಾರಃ ಇವ ಆಕಾರಃ ಯಸ್ಯ ತಂ, ಪ್ರಾಲೇಯಸ್ಯ ಅದ್ರಿಃ ತಸ್ಯ, ಲೀಲಾಯಾಃ ಲೇಶಃ ತೇನ ;

ಕ್ರಿ :—ಆಸ್ಯತ್ ಆಸ್ಯತಾಂ ಆಸ್ಯನ್ ಇತ್ಯಾದಿ ; ಅಸು ನಿರಸನೇ ಲಙ್.

ವೃತ್ತ :— ವಿದ್ಯುನ್ಮಾಲಾ, ಲಕ್ಷಣ – ಮೋ ಮೋ ಗೋ ಗೋ ವಿದ್ಯುನ್ಮಾಲಾ.

ಅವ :—ಬದರೀಪ್ರಯಾಣದಲ್ಲಿ ಬಂದ ವಿಘ್ನಗಳನ್ನೆಲ್ಲಾ ಪರಿಹರಿಸಿ ಕೊಂಡು ಚಿಕ್ಕಬದರಿಗೆ ಹೋಗಿ, ಅಲ್ಲಿ ಶಿಷ್ಯರನ್ನು ಬಿಟ್ಟು ತಾವು ದೊಡ್ಡ

Rarest Archiver

ಬದರಿಗೆ ಹೋಗಿ ಅಲ್ಲಿ ಆಚಾರ್ಯರು ಶ್ರೀವೇದವ್ಯಾಸರಿಂದ ವ್ಯಾಸಪ್ರತಿಮಾರೂಪಗಳಾದ ವ್ಯಾಸಮುಷ್ಟಿಗಳನ್ನು ಪಡೆದರು.

**ಪ್ರಾಪ ಸ ನಾರಾಯಣತಃ ಶುದ್ಧಶಿಲಾತ್ಮಪ್ರತಿಮಾಃ ।**
**ಯಾಸು ಸ ಪದ್ಮಾಸಹಿತಃ ದೋಷ್ಯಹಿತಃ ಸನ್ನಿಹಿತಃ ॥೨೪॥**

**ಅ :**—ಯಾಸು ದೋಷ್ಯಹಿತಃ ಪದ್ಮಾಸಹಿತಃ ಸಃ ಸನ್ನಿಹಿತಃ ತಾಃ ಶುದ್ಧಶಿಲಾತ್ಮಪ್ರತಿಮಾಃ ಸಃ ನಾರಾಯಣತಃ ಪ್ರಾಪ.

**ಅರ್ಥ :**—ಯಾಸು = ಯಾವ ಪ್ರತಿಮೆಗಳಲ್ಲಿ, ದೋಷ್ಯಹಿತಃ = ಭಗವಂತನಲ್ಲಿ ದ್ವೇಷವೆಂಬ ದೋಷವುಳ್ಳವರಿಗೆ ಶತ್ರುವಾದ, ಪದ್ಮಾಸಹಿತಃ = ಲಕ್ಷ್ಮೀಸಹಿತನಾದ, ಸಃ = ಆ ನಾರಾಯಣನು, ಸನ್ನಿಹಿತಃ = ಸನ್ನಿಧಾನವನ್ನು ಇಟ್ಟಿರುವನೋ, (ತಾಃ = ಅಂತಹ) ಶುದ್ಧಶಿಲಾತ್ಮಪ್ರತಿಮಾಃ = ಪವಿತ್ರವಾದ ಕಲ್ಲಿನ ರೂಪದ ಮರಳುಮುಷ್ಟಿರೂಪದ ವಿಗ್ರಹಗಳನ್ನು, ಸಃ = ಆ ಮಧ್ವಾಚಾರ್ಯರು, ನಾರಾಯಣತಃ = ಶ್ರೀಮನ್ನಾರಾಯಣಾಭಿನ್ನರಾದ ಶ್ರೀವೇದವ್ಯಾಸರಿಂದ, ಪ್ರಾಪ = ಹೊಂದಿದರು.

**ತಾ :**— ಮಹಾಮಹಿಮರಾದ ಶ್ರೀಮಧ್ವಾಚಾರ್ಯರು ಮೊದಲು ಚಿಕ್ಕಬದರಿಗೆ ಹೋಗಿ, ಅಲ್ಲಿಯೇ ತನ್ನ ಶಿಷ್ಯರನ್ನು ಬಿಟ್ಟು ಅನಂತರ ತಾನೊಬ್ಬನೇ ಮಾನವರಿಗೆ ಅಗಮ್ಯವಾದ ದೊಡ್ಡಬದರಿಗೆ ಹೋಗಿ ಅಲ್ಲಿ ನಾರಾಯಣಮುನಿಗಳ ದರ್ಶನ ಮಾಡಿದರು. ಅಲ್ಲಿಂದ ಹೊರಡುವಾಗ ಶ್ರೀವೇದವ್ಯಾಸರು ಮರಳಿನ ಮುಷ್ಟಿರೂಪವಾದ ವ್ಯಾಸಶಾಲಗ್ರಾಮಗಳನ್ನು ಆಚಾರ್ಯರಿಗೆ ಕೊಟ್ಟರು. ಈ ಶಾಲಗ್ರಾಮಗಳಲ್ಲಿ ಲಕ್ಷ್ಮೀಸಹಿತನಾದ ಪರಮಾತ್ಮನ ನಿತ್ಯಸನ್ನಿಧಾನವಿದೆ. ವಿಷ್ಣುದ್ವೇಷಿಗಳಾದವರಿಗೆ ಪರಮಾತ್ಮನ ಪ್ರೀತಿ, ಅನುಗ್ರಹಗಳು ದೊರಕುವುದಿಲ್ಲ, ಅಂತಹ ಯಾವ ದೋಷವೂ ಇಲ್ಲದ ಹರಿಭಕ್ತಶ್ರೇಷ್ಠರಾದ ಆಚಾರ್ಯರು ಮರಳಿನ ಸೂಕ್ಷ್ಮಕಣಗಳಿಂದ ರಚಿತವಾದ ಈ ಪ್ರತಿಮೆಗಳನ್ನು ಪಡೆದರು.

**ವಿ.ಅಂ.:**— 'ತೀರ್ಥಂ ಸ್ವಪಾರ್ಶ್ವಭೂಮಿಂ ಚ
ಮೋಕ್ತುಂ ನೇಚ ತಿ ಸನ್ಮತಾ ।

Rarest Archive

ತ್ವತ್‌ಸ್ನಾನಾಂಬುನಿ ಗಂಗಾ ಸ್ಯಾಚ್ಛಿಲಾಸ್ತ್ವಾಸ್ವಹಮಿತ್ಯದಾತ್ ||'

–(ಭಾ.ಪ್ರ.)

ವಿ:—ನಾರಾಯಣಾತ್ ಇತಿ ನಾರಾಯಣತಃ, ಶುದ್ಧಾಶ್ಚ ತಾಃ ಶಿಲಾಶ್ಚ, ಶುದ್ಧಶಿಲಾಃ ಆತ್ಮಾ ಯಾಸಾಂ ತಾಃ, ಶುದ್ಧಶಿಲಾತ್ಮಾನಶ್ಚ ತಾಃ ಪ್ರತಿಮಾಶ್ಚ ತಾಃ, ಪದ್ಮಯಾ ಸಹಿತಃ, ದೋಷಾಃ ಏಷಾಂ ಸಂತೀತಿ, ದೋಷಿಣಾಂ ಅಹಿತಃ |

ಕ್ರಿ:—ಪ್ರ+ಆಪ ಆಪತುಃ ಆಪುಃ ಇತ್ಯಾದಿ, ಆಪ್ಲೃ ವ್ಯಾಪ್ತೌ ಲಿಟ್.

ವೃತ್ತ:—ಮಾಣವಕ, ಲಕ್ಷಣ–ಮಾಣವಕಂ ಭಾತ್ತಲಗಾಃ |

ಅವ:— ಶ್ರೀವೇದವ್ಯಾಸರು ಶ್ರೀಮನ್ಮಹಾಭಾರತಗ್ರಂಥವನ್ನು ರಚಿಸಲು ಆಚಾರ್ಯರಿಗೆ ಅಪ್ಪಣೆ ಮಾಡಿದರು–

**ಪಾರಾಶರ್ಯಃ ಪರತತ್ತ್ವಪ್ರಸಿದ್ಧ್ಯೈ**
**ತಾತ್ಪರ್ಯಾರ್ಥಂ ಪರಮಂ ಭಾರತಸ್ಯ |**
**ವ್ಯಕ್ತಂ ವಕ್ತುಂ ನಿಯುನಕ್ತಿ ಸ್ಮ ಸಾಕ್ಷಾತ್**
**ಏನಂ ಧನ್ಯಂ ಭುವನೇ ಮನ್ಯಮಾನಃ ||೨೫||**

ಅ:—ಪಾರಾಶರ್ಯಃ ಭುವನೇ ಏನಂ ಸಾಕ್ಷಾತ್ ಧನ್ಯಂ ಮನ್ಯ-ಮಾನಃ ಪರತತ್ತ್ವಪ್ರಸಿದ್ಧ್ಯೈ ಭಾರತಸ್ಯ ಪರಮಂ ತಾತ್ಪರ್ಯಾರ್ಥಂ ವ್ಯಕ್ತಂ ವಕ್ತುಂ (ಏನಂ) ನಿಯುನಕ್ತಿ ಸ್ಮ.

ಅರ್ಥ:—ಪಾರಾಶರ್ಯಃ = ಪರಾಶರಮುನಿಗಳಿಂದ ಪ್ರಾದುರ್ಭವಿಸಿದ ಶ್ರೀವೇದವ್ಯಾಸರು, ಭುವನೇ = ಲೋಕದಲ್ಲಿ, ಏನಂ = ಈ ಮಧ್ವಾಚಾರ್ಯರನ್ನು, ಸಾಕ್ಷಾತ್ = ಮುಖ್ಯವಾಗಿ, ಧನ್ಯಂ = ನಿರಪೇಕ್ಷ ಗುಣಪೂರ್ಣರನ್ನಾಗಿ (ಸಮರ್ಥನನ್ನಾಗಿ), ಮನ್ಯಮಾನಃ = ತಿಳಿಯುವವರಾಗಿ, ಪರತತ್ತ್ವಪ್ರಸಿದ್ಧ್ಯೈ = ಭಗವತ್‌ಸ್ವರೂಪದ ಸರಿಯಾದ ತಿಳುವಳಿಕೆಗೋಸ್ಕರ, ಭಾರತಸ್ಯ = ಶ್ರೀಮನ್ಮಹಾಭಾರತದ, ಪರಮಂ= ಮುಖ್ಯವಾದ, ತಾತ್ಪರ್ಯಾರ್ಥಂ = ರಹಸ್ಯಪ್ರಮೇಯವನ್ನು, ವ್ಯಕ್ತಂ

Rarest Archiver

ವಕ್ತುಂ = ಸ್ಪಷ್ಟವಾಗಿ ಹೇಳಲು, ಏನಂ = ಈ ಶ್ರೀಮಧ್ವಾಚಾರ್ಯರನ್ನು, ನಿಯುನಕ್ತಿಸ್ಮ = ನಿಯಮಿಸಿದರು.

**ತಾ:**— ಪರಾಶರರಿಂದ ಪ್ರಾದುರ್ಭೂತರಾದ ಶ್ರೀವೇದವ್ಯಾಸರು 'ಈ ಪೂರ್ಣಪ್ರಜ್ಞರು ಪ್ರಪಂಚದಲ್ಲಿ ಇತರ ಎಲ್ಲರಿಗಿಂತಲೂ ಸಮರ್ಥರು, ಸದ್ಗುಣಭರಿತರಾದ ಉತ್ತಮಾಧಿಕಾರಿಗಳು', ಎಂದು ತಿಳಿದಿದ್ದರು. ಆದುದರಿಂದ ಭಗವಂತನ ಸ್ವರೂಪವನ್ನು, ರಹಸ್ಯಪ್ರಮೇಯಗಳನ್ನು ಸಾತ್ವಿಕರಿಗೆ ಚೆನ್ನಾಗಿ ತಿಳಿಸಲು ಮಹಾಭಾರತದ ತಾತ್ಪರ್ಯಾರ್ಥ ನಿರ್ಣಾಯಕವಾದ ಉತ್ತಮಗ್ರಂಥವನ್ನು ರಚಿಸಬೇಕೆಂದು ಆಚಾರ್ಯರಿಗೇ ಅಪ್ಪಣೆಕೊಡಿಸಿದರು.

**ವಿ:**—ಪರಾಶರಸ್ಯ ಅಪತ್ಯಂ ಪುಮಾನ್ ಪಾರಾಶರ್ಯಃ, ಪರಸ್ಯ ತತ್ತ್ವಂ, (ಪರಂ ಚ ತತ್ ತತ್ತ್ವಂ ಚ) ಪರತತ್ತ್ವಸ್ಯ ಪ್ರಸಿದ್ಧಿಃ ತಸ್ಯೈ, ತಾತ್ಪರ್ಯಂ ಚಾಸೌ ಅರ್ಥಶ್ಚ ತಂ, ಧನಂ ಲಬ್ಧಾ ಧನ್ಯಃ, ಧನಗಣಂ ಲಬ್ಧಾ- (ಪಾ 4–4–84) ಯತ್ ಪ್ರತ್ಯಯ.

**ಕ್ರಿ:**—ನಿ+ಯುನಕ್ತಿ ಯುಂಕ್ತಃ ಯುಂಜಂತಿ, ಯುನಕ್ಷಿ ಯುಂಕ್ಥಃ ಯುಂಕ್ಥ, ಯುನಜ್ಮಿ ಯುಂಜ್ವಃ ಯುಂಜ್ಮಃ, ಯುಜಿರ್ ಯೋಗೇ ಲಟ್.

**ವೃತ್ತ:**— ವಾತೋರ್ಮಿ, ಲಕ್ಷಣ– ವಾತೋರ್ಮಿಯಂ ಗದಿತಾ ಮ್ಭೌ ತಗೌ ಗಃ.

**ಅವ :**— ಆಚಾರ್ಯರು ವೇದವ್ಯಾಸರ ಅಪ್ಪಣೆ ಪಡೆದು ಪುನಃ ಬದರಿಯಿಂದ ಗಂಗಾತೀರಕ್ಕೆ ಬಂದರು—

**ತೀರ್ಥೇಷು ತೀರ್ಥೇಷು ಚ ಸೌಖ್ಯತೀರ್ಥಃ**
**ಕ್ಷೇತ್ರೇಷು ಚ ಕ್ಷೇತ್ರವಿದಾಂ ವರಿಷ್ಠಃ ।**
**ಗೋವಿಂದಮಾವಂದ್ಯ ಸಹಾನುಗೋಽಗಾದ್**
**ಗಂಗಾಂ ಪುನಸ್ತುಂಗತರಂಗಮಾಲಾಮ್ ॥೨೬॥**

**ಅ :**— ಕ್ಷೇತ್ರವಿದಾಂ ವರಿಷ್ಠಃ ಸೌಖ್ಯತೀರ್ಥಃ ತೀರ್ಥೇಷು

Rarest Archiver

ತೀರ್ಥೇಷು ಚ, ಕ್ಷೇತ್ರೇಷು ಚ ಗೋವಿಂದಂ ಅವಂದ್ಯ ಸಹಾನುಗಃ ಪುನಃ ತುಂಗತರಂಗಮಾಲಾಂ ಗಂಗಾಂ ಅಗಾತ್ |

**ಅರ್ಥ:**—ಕ್ಷೇತ್ರವಿದಾಂ ವರಿಷ್ಠಃ=ಭಗವಂತನ ವಿಶೇಷಸಂನಿಧಾನ ಪಾತ್ರವಾದ ಸ್ಥಾನಗಳನ್ನು ತಿಳಿದ ಜೀವರಲ್ಲಿ ಶ್ರೇಷ್ಠರಾದ, ಸೌಖ್ಯತೀರ್ಥಃ= ಆನಂದಕರವಾದ ಶಾಸ್ತ್ರಗಳನ್ನು ಮಾಡಿರುವ ಶ್ರೀಮಧ್ವಾಚಾರ್ಯರು, ತೀರ್ಥೇಷು ತೀರ್ಥೇಷು ಚ=ಪವಿತ್ರವಾದ ಋಷಿಸೇವಿತವಾದ ಜಲಾಶಯ ನದಿಮುಂತಾದುವುಗಳಲ್ಲಿಯೂ, ಕ್ಷೇತ್ರೇಷು ಚ=ಪುಣ್ಯಕ್ಷೇತ್ರಗಳಲ್ಲಿಯೂ, ಗೋವಿಂದಂ ಅವಂದ್ಯ=ವೇದಪ್ರತಿಪಾದ್ಯನಾದ ಶ್ರೀಮನ್ನಾರಾಯಣನನ್ನು ಚೆನ್ನಾಗಿ ಸ್ತುತಿಸಿ, ನಮಸ್ಕರಿಸಿ, ಸಹಾನುಗಃ=ಶಿಷ್ಯಸಮೇತರಾಗಿ, ಪುನಃ= ಮತ್ತೂ, ತುಂಗತರಂಗಮಾಲಾಂ ಗಂಗಾಂ=ಎತ್ತರವಾದ ಅಲೆಗಳ ಸಾಲುಗಳುಳ್ಳ ಗಂಗಾನದಿಯನ್ನು (ಕುರಿತು), ಅಗಾತ್=ಹೋದರು.

**ತಾ :**— ಶ್ರೀಮಧ್ವಾಚಾರ್ಯರು ವೇದವ್ಯಾಸರ ಅಪ್ಪಣೆಯನ್ನು ಸ್ವೀಕರಿಸಿ ಬದರಿಯಿಂದ ಹಿಂದಿರುಗಿದರು. ಅವರು ಪವಿತ್ರವಾದ ನದೀ ಜಲಾಶಯಗಳ ಮಹಿಮೆಯನ್ನೂ ಕ್ಷೇತ್ರಮೂರ್ತಿಗಳ ಹಿರಿಮೆಯನ್ನೂ ಬಲ್ಲ ಜೀವೋತ್ತಮರು. ಅವರು ಹಿಂದಿರುಗಿ ಬರುವಾಗ ಅಲ್ಲಲ್ಲಿರುವ ತೀರ್ಥ ಕ್ಷೇತ್ರಗಳಲ್ಲಿ ಸನ್ನಿಹಿತನಾದ ಶ್ರೀಹರಿಯನ್ನು ಸ್ತುತಿಸಿ ನಮಿಸಿದರು. ಹೀಗೆ ಶಿಷ್ಯಸಮೇತರಾಗಿ ಬರುತ್ತಾ ಎತ್ತರವಾದ ಅಲೆಗಳಿಂದ ನರ್ತಿಸುವಂತೆ ಕಾಣಿಸುತ್ತಿರುವ ಗಂಗಾನದಿಯ ಹತ್ತಿರಕ್ಕೆ ಬಂದರು.

**ವಿ :**—ಸುಖಮೇವ ಸೌಖ್ಯಂ, ಸೌಖ್ಯಂ (ಸೌಖ್ಯಕರಂ) ತೀರ್ಥಂ ಯಸ್ಮಾತ್ ಸಃ ಸೌಖ್ಯತೀರ್ಥಃ. ಕ್ಷೇತ್ರಾಣಿ ವಿದಂತೀತಿ ಕ್ಷೇತ್ರವಿದಃ ತೇಷಾಂ, ಅನುಗಚ್ಛಂತೀತಿ ಅನುಗಾಃ ತೈಃ ಸಹ ವರ್ತತೇ ಇತಿ ಸಹಾನುಗಃ, ತರಂಗಾಣಾಂ ಮಾಲಾಃ, ತುಂಗಾಃ ತರಂಗಮಾಲಾಃ ಯಸ್ಯಾಂ ಸಾ ತಾಂ.

**ಕ್ರಿ:**— ಅಗಾತ್ ಅಗಾತಾಂ ಅಗುಃ, ಅಗಾಃ ಅಗಾತಂ ಅಗಾತ ಅಗಾಂ ಅಗಾವ ಅಗಾಮ. ಇಣ್-ಗತೌ, ಲಙ್.

**ವೃತ್ತ :**— ಇಂದ್ರವಜ್ರಾ, ಲಕ್ಷಣ – ಸ್ಯಾದಿಂದ್ರವಜ್ರಾ ಯದಿ ತೌ ಜಗೌ ಗಃ |

Rarest Archiver

ಅವ :—ಗಂಗಾನದಿಯನ್ನು ದಾಟಲು ನೌಕಾದಿಸಾಧನಗಳು ಇಲ್ಲದಿದ್ದಾಗಲೂ ಆಚಾರ್ಯರು ತಮ್ಮ ಯೋಗಶಕ್ತಿಯಿಂದ ನದಿಯನ್ನು ದಾಟಿದರು—

ಪ್ಲವೈರಪೇತಾಮವಲೋಕ್ಯ ಸಿಂಧುಂ
ಸರೋಜಬಂಧುಂ ಚ ತದಾಪ್ತಸಿಂಧುಂ ।
ತಟೇ ನಿಷಣ್ಣಾನಧಿಕಂ ವಿಷಣ್ಣಾನ್
ನಿರೀಕ್ಷ್ಯ ಶಿಷ್ಯಾನತರತ್ ಸ ಏತಾಂ ॥೨೭॥

ಅ:—ಸಃ ತದಾ ಪ್ಲವೈಃ ಅಪೇತಾಂ ಸಿಂಧುಂ, ಆಪ್ತಸಿಂಧುಂ ಸರೋಜಬಂಧುಂ ಚ ಅವಲೋಕ್ಯ ತಟೇ ನಿಷಣ್ಣಾನ್ ಅಧಿಕಂ ವಿಷಣ್ಣಾನ್ ಶಿಷ್ಯಾನ್ ನಿರೀಕ್ಷ್ಯ ಏತಾಂ ಅತರತ್ ।

ಅರ್ಥ:—ಸಃ = ಆ ಮಧ್ವಾಚಾರ್ಯರು, ತದಾ = ಆಗ, ಪ್ಲವೈಃ ಅಪೇತಾಂ = ನಾವೆಗಳಿಂದ ರಹಿತವಾದ, ಸಿಂಧುಂ = ಗಂಗಾನದಿಯನ್ನೂ, ಆಪ್ತಸಿಂಧುಂ = ಸಮುದ್ರವನ್ನು ಸೇರಿದ (ಅಸ್ತಹೊಂದುತ್ತಿರುವ), ಸರೋಜಬಂಧುಂ ಚ = ಕಮಲಗಳ ಮಿತ್ರನಾದ ಸೂರ್ಯನನ್ನೂ, ಅವಲೋಕ್ಯ = ನೋಡಿ, ತಟೇ ನಿಷಣ್ಣಾನ್ = ದಡದಲ್ಲಿ ಕುಳಿತಿರುವ, ಅಧಿಕಂ ವಿಷಣ್ಣಾನ್ = ಹೆಚ್ಚಾಗಿ ವ್ಯಥೆಗೊಂಡಿರುವ, ಶಿಷ್ಯಾನ್ ನಿರೀಕ್ಷ್ಯ = ಶಿಷ್ಯರನ್ನು ನೋಡಿ, ಏತಾಂ = ಈ ಗಂಗೆಯನ್ನು, ಅತರತ್ = ದಾಟಿದರು.

ತಾ :— ಶ್ರೀಮಧ್ವಾಚಾರ್ಯರು ಶಿಷ್ಯಸಮೇತರಾಗಿ ಗಂಗೆಯ ದಡಕ್ಕೆ ಬರುವ ಸಮಯದಲ್ಲಿ, ಅಲ್ಲಿ ಗಂಗೆಯನ್ನು ದಾಟಲು ದೋಣಿಗಳಿರಲಿಲ್ಲ. ಸೂರ್ಯನು ಮುಳುಗುತ್ತಾ ಇದ್ದನು ; ಶಿಷ್ಯರು ಮುಂದೇನು ಮಾಡಬೇಕೆಂದು ತಿಳಿಯದೆ ವಿಷಣ್ಣರಾಗಿ ದಡದಲ್ಲಿ ಕುಳಿತರು. ಶ್ರೀಮಧ್ವಾ-ಚಾರ್ಯರು ತಮ್ಮ ಶಿಷ್ಯರನ್ನು ಒಮ್ಮೆ ನೋಡಿದರು. ಗಂಗೆಯನ್ನೊಮ್ಮೆ ನೋಡಿದರು. ತಾವೊಬ್ಬರೇ ಜಲಸ್ತಂಭನವಿದ್ಯೆಯಿಂದ ಬಟ್ಟೆಯು ಒದ್ದೆಯಾಗದಂತೆ ಗಂಗೆಯನ್ನು ದಾಟಿದರು.

Rarest Archiver

**ವಿ:**— ಸರೋಜಾನಾಂ ಬಂಧುಃ ಸರೋಜಬಂಧುಃ, ತಂ, ಆಪ್ತಃ ಸಿಂಧುಃ ಯೇನ ಸಃ ಆಪ್ತಸಿಂಧುಃ ತಂ ;

**ಕ್ರಿ:**— ಅತರತ್ ಅತರತಾಂ ಅತರನ್ ಇತ್ಯಾದಿ ತೄ ಪ್ಲವನ ತರಣಯೋಃ ಲಙ್.

**ವೃತ್ತ :**— **ಉಪೇಂದ್ರವಜ್ರಾ.** ಲಕ್ಷಣ– ಉಪೇಂದ್ರವಜ್ರಾ ಜತಜಾಸ್ತತೋ ಗೌ.

**ಅವ :**— ಆಚಾರ್ಯರು ಹಿಂದಿನ ಅವತಾರಗಳಲ್ಲಿ ಸಮುದ್ರವನ್ನು ದಾಟಿದುದು, ಗಂಗೆಯಲ್ಲಿ ಆಟವಾಡಿದುದು ಮುಂತಾದ ಕಥೆಯನ್ನು ಅರಿಯದ ಶಿಷ್ಯರು ಹೆದರಿದರು—

**ನ ವಾನರೇಂದ್ರಸ್ಯ ವಿಲಂಘಿತಾಬ್ಧೇಃ**
**ನ ವಾ ನರೇಂದ್ರಸ್ಯ ವಿಹರ್ತುರಸ್ಯಾಂ ।**
**ಇಮೇಽಸ್ಮರಂಸ್ತದ್ವಪುಷೋಽನ್ಯಥಾಸ್ಯ**
**ಶಕ್ತಸ್ಯ ಶಂಕ್ಯೇತ ವಿಪತ್ಕಥಂ ತೈಃ ॥೨೮॥**

**ಅ:**—ಇಮೇ ವಿಲಂಘಿತಾಬ್ಧೇಃ ವಾನರೇಂದ್ರಸ್ಯ ನಾಸ್ಮರನ್, ಅಸ್ಯಾಂ ವಿಹರ್ತುಃ ನರೇಂದ್ರಸ್ಯ ವಾ ನಾಸ್ಮರನ್, ಅನ್ಯಥಾ ತದ್ವಪುಷಃ ಶಕ್ತಸ್ಯ ಅಸ್ಯ ವಿಪತ್ ತೈಃ ಕಥಂ ಶಂಕ್ಯೇತ !

**ಅರ್ಥ :**—ಇಮೇ = ಈ ಶ್ರೀಮಧ್ವಾಚಾರ್ಯರ ಶಿಷ್ಯರು, ವಿಲಂಘಿತಾಬ್ಧೇಃ = ಸಮುದ್ರವನ್ನು ದಾಟಿರುವ, ವಾನರೇಂದ್ರಸ್ಯ = ಕಪಿಶ್ರೇಷ್ಠನಾದ ಹನುಮಂತನನ್ನು, ನಾಸ್ಮರನ್ = ಸ್ಮರಿಸಲಿಲ್ಲ. ಅಸ್ಯಾಂ ವಿಹರ್ತುಃ= ಈ ಗಂಗಾನದಿಯಲ್ಲಿ ವಿಹಾರಮಾಡುತ್ತಿದ್ದ, ನರೇಂದ್ರಸ್ಯ ವಾ = ರಾಜನಾದ ಭೀಮಸೇನನನ್ನಾಗಲೀ, ನಾಸ್ಮರನ್ = ಸ್ಮರಿಸಲಿಲ್ಲ. ಅನ್ಯಥಾ = ಹಾಗಿಲ್ಲದಿದ್ದರೆ (ಅವರಿಬ್ಬರನ್ನು ಸ್ಮರಿಸಿದ್ದರೆ), ತದ್ವಪುಷಃ = ಹಿಂದೆ ಹನುಮಂತ ಮತ್ತು ಭೀಮಸೇನರ ಶರೀರವನ್ನು ಹೊಂದಿದ್ದ (ಅವರಿಬ್ಬರ ಸ್ವರೂಪರೇ ಆದ) ಶಕ್ತಸ್ಯ = ಗಂಗೆಯನ್ನೂ ಸಮುದ್ರವನ್ನೂ ದಾಟಲು ಸಮರ್ಥರಾದ, ಅಸ್ಯ= ಈ ಶ್ರೀಮಧ್ವಾಚಾರ್ಯರಿಗೆ, ವಿಪತ್ = ಆಪತ್ತು, ತೈಃ=

Rarest Archiver

ಆ ಮಧ್ವಾಚಾರ್ಯರ ಶಿಷ್ಯರಿಂದ, ಕಥಂ ಶಂಕ್ಯೇತ=ಹೇಗೆ ಸಂದೇಹಿಸಲ್ಪಟ್ಟೀತು ?

**ತಾ :**—ಶ್ರೀಮಧ್ವಾಚಾರ್ಯರು ಕತ್ತಲೆಯಾಗುತ್ತಿರುವ ಆ ಸಮಯದಲ್ಲಿ, ಗಂಗಾನದಿಯನ್ನು ದಾಟಲು ಮುಂದಾಗಿ ಕತ್ತಲೆಯಲ್ಲಿ ಕಣ್ಮರೆಯಾದರು. ಆಗ ಶಿಷ್ಯರು ನಮ್ಮ ಆಚಾರ್ಯರಿಗೆ ಏನು ವಿಪತ್ತು ಉಂಟಾಯಿತೋ ಎಂದು ಸಂದೇಹಿಸಿದರು. ಈ ಮಧ್ವಾಚಾರ್ಯರೇ ಹಿಂದೆ ತ್ರೇತಾಯುಗದಲ್ಲಿ ಹನುಮಂತನಾಗಿ ಶ್ರೀರಾಮಚಂದ್ರನ ಅಪ್ಪಣೆಯಿಂದ ನೂರುಯೋಜನವಿಸ್ತೀರ್ಣವಾದ ಸಮುದ್ರವನ್ನು ಗೋವಿನ ಹೆಜ್ಜೆಯಂತೆ ಸುಲಭವಾಗಿ ದಾಟಿದ್ದರು. ಈ ಮಧ್ವಾಚಾರ್ಯರೇ ದ್ವಾಪರಯುಗದಲ್ಲಿ ಭೀಮಸೇನನಾಗಿ ಗಂಗಾನದಿಯಲ್ಲಿ ಆಟವಾಡಿದ್ದರು. ಈ ವಿಷಯವನ್ನು ಅವರ ಶಿಷ್ಯರು ತಿಳಿದಿದ್ದರೂ ಆಗ ಅವರಿಗೆ ಆ ವೃತ್ತಾಂತದ ಸ್ಮರಣೆಯು ಬರಲಿಲ್ಲ. ಹಾಗೆ ಸ್ಮರಣೆಗೆ ಬಂದಿದ್ದರೆ ಆಚಾರ್ಯರಿಗೆ ವಿಪತ್ತು ಬಂದೀತೆಂದು ಅವರು ಖಂಡಿತವಾಗಿಯೂ ಸಂದೇಹಿಸುತ್ತಿರಲಿಲ್ಲ. ಶ್ರೀಮುಖ್ಯಪ್ರಾಣನೇ ಹನುಮ ಭೀಮ ಮಧ್ವ ಎಂಬ ಮೂರುರೂಪಗಳಿಂದ ಪರಮಾತ್ಮನ ಸೇವೆಗಾಗಿ ಅವತರಿಸಿದ್ದನು ಎಂದು ಶ್ರುತಿ ಪುರಾಣ ಮಹಾತ್ಮರ ಪ್ರತ್ಯಕ್ಷ ಮತ್ತು ಅನುಮಾನ ಪ್ರಮಾಣಗಳಿಂದ ಸಿದ್ಧವಾಗಿದೆಯಲ್ಲವೇ !

**ವಿ:**—ವಾನರಾಣಾಂ ಇಂದ್ರಃ ವಾನರೇಂದ್ರಃ, ತಸ್ಯ; ವಿಲಂಘಿತಃ ಅಬ್ಧಿಃ ಯೇನ ಸಃ ವಿಲಂಘಿತಾಬ್ಧಿಃ ತಸ್ಯ, ನರಾಣಾಂ ಇಂದ್ರಃ ನರೇಂದ್ರಃ ತಸ್ಯ, ತಯೋಃ ವಪುಃ=ತದ್ವಪುಃ ತಸ್ಯ, ವಾನರೇಂದ್ರಸ್ಯ ನರೇಂದ್ರಸ್ಯ ಎಂಬಲ್ಲಿ ಅಧೀಗರ್ಥದಯೇಶಾಂ ಕರ್ಮಣಿ ಎಂಬ ಸೂತ್ರದಿಂದ ಷಷ್ಠೀ.

**ಕ್ರಿ :**— ಅಸ್ಮರತ್ ಅಸ್ಮರತಾಂ ಅಸ್ಮರನ್ ಇತ್ಯಾದಿ, ಸ್ಮೃ ಚಿಂತಾಯಾಂ ಲಜ್. ಶಂಕ್ಯೇತ ಶಂಕ್ಯೇಯಾತಾಂ ಶಂಕ್ಯೇರನ್, ಶಂಕ್ಯೇಥಾಃ ಶಂಕ್ಯೇಯಾಥಾಂ ಶಂಕ್ಯೇಧ್ವ, ಶಂಕ್ಯೇಯ ಶಂಕ್ಯೇವಹಿ, ಶಂಕ್ಯೇಮಹಿ—ಶಕಿ ಶಂಕಾಯಾಂ ಆತ್ಮನೇ, ವಿಧಿಲಿಜ್.

**ವೃತ್ತ :**—ಉಪಜಾತಿ- ಲಕ್ಷಣ- ಸ್ಯಾದಿಂದ್ರವಜ್ರಾ ಯದಿ ತೌ ಜಗೌ ಗಃ, ಉಪೇಂದ್ರವಜ್ರಾ—ಜತಜಾಸ್ತತೋ ಗೌ, ಅನಂತರೋದೀರಿತಲಕ್ಷ್ಮ

Rarest Archiver

ಭಾಜೌ ಪಾದೌ ಯದೀಯಾವುಪಜಾತಯಸ್ತಾಃ| ಪಾದ ೧, ೨, ೩ ಉಪೇಂದ್ರವಜ್ರಾ. ೪ನೇ ಪಾದ ಇಂದ್ರವಜ್ರಾ.

ಅವ :—ಕತ್ತಲೆಯು ಕವಿಯುತ್ತಾ ಬಂದಾಗ ಆಚಾರ್ಯರನ್ನು ಕಾಣದೆ ಶಿಷ್ಯರ ಮುಖಗಳು ವ್ಯಸನದಿಂದ ಬಾಡಿದುವು—

**ಜಗತ್ಪ್ರದೀಪಾಯಿತಗೋಗಣಾಢ್ಯೇ**
**ದಿವಾಕರೇ ಮಧ್ವದಿವಾಕರೇ ಚ |**
**ಅವ್ಯಕ್ತರೂಪೇ ಶ್ರಿಯಮತ್ಯಜನ್ದ್ರಾಕ್**
**ಸಹಾಂಬುಜೈಸ್ತನ್ನಯನಾಂಬುಜಾನಿ ||೨೯||**

ಅ :—ಜಗತ್ಪ್ರದೀಪಾಯಿತಗೋಗಣಾಢ್ಯೇ, ದಿವಾಕರೇ, ಅವ್ಯಕ್ತ-ರೂಪೇ ಸತಿ (ಜಗತ್ಪ್ರದೀಪಾಯಿತಗೋಗಣಾಢ್ಯೇ) ಮಧ್ವದಿವಾಕರೇ ಚ (ಅವ್ಯಕ್ತರೂಪೇ ಸತಿ) ಅಂಬುಜೈಃ ಸಹ ತನ್ನಯನಾಂಬುಜಾನಿ ದ್ರಾಕ್ ಶ್ರಿಯಂ ಅತ್ಯಜನ್.

ಅರ್ಥ:— ಜಗತ್ = ಲೋಕಗಳಿಗೆ, ಪ್ರದೀಪಾಯಿತ = ದೀಪದಂತಿರುವ, ಗೋಗಣಾಢ್ಯೇ = ಕಿರಣರಾಶಿಯಿಂದ ಸಂಪನ್ನನಾದ, ದಿವಾಕರೇ = ಸೂರ್ಯನು, ಅವ್ಯಕ್ತರೂಪೇ ಸತಿ = ಅಸ್ತಮಯ ಹೊಂದಲಾಗಿ, (ಜಗತ್ಪ್ರದೀಪಾಯಿತಗೋಗಣಾಢ್ಯೇ = ಜಗತ್ತಿಗೆ ದೀಪದಂತಿರುವ ವಾಕ್ಯ ಸಮೂಹದಿಂದ ಸಂಪನ್ನರಾದ) ಮಧ್ವದಿವಾಕರೇ ಚ= ಮಧ್ವಾಚಾರ್ಯ ರೆಂಬ ಸೂರ್ಯನೂ ಕೂಡ, (ಅವ್ಯಕ್ತರೂಪೇ ಸತಿ= ಕಣ್ಮರೆಯಾಗಲಾಗಿ) ಅಂಬುಜೈಃ ಸಹ = ಕಮಲಗಳೊಡನೆ, ತನ್ನಯನಾಂಬುಜಾನಿ = ಆ ಮಧ್ವಾಚಾರ್ಯರ ಶಿಷ್ಯರ ಕಮಲಗಳಂತಿರುವ ಕಣ್ಣುಗಳು, ದ್ರಾಕ್= ಬೇಗನೇ, ಶ್ರಿಯಂ = ಕಾಂತಿಯನ್ನು, ಅತ್ಯಜನ್ = ತ್ಯಜಿಸಿದುವು.

ತಾ:—ಹಗಲು ಸೂರ್ಯನು ದೀಪದಂತೆ ಪ್ರಕಾಶಿಸುತ್ತಾ ಪ್ರಪಂಚವನ್ನು ಬೆಳಗುತ್ತಾನೆ. ಅವನು ಅಸ್ತಂಗತನಾದ ಕೂಡಲೇ ಕಮಲಗಳು ಮೊಗ್ಗಾಗುತ್ತವೆ. ಅವುಗಳ ಕಾಂತಿಯು ಕಡಿಮೆಯಾಗುತ್ತದೆ. ಜಗತ್ತಿಗೆ ಪರಾಪರತತ್ತ್ವಜ್ಞಾನಪ್ರಕಾಶವನ್ನು ಬೀರುವ ದೀಪದಂತಿರುವ ಮಾತು

Rarest Archiver

ಗಳೆಂಬ ಕಿರಣಸಮೂಹದಿಂದ ಸಂಪನ್ನರಾದ ಶ್ರೀಮಧ್ವಾಚಾರ್ಯರೂ ಸೂರ್ಯನಂತೆಯೇ ಇರುತ್ತಾರೆ. ಅವರು ತುಂಬುಪ್ರವಾಹದ ಗಂಗೆಯಲ್ಲಿ ಇಳಿದು ದಾಟಲು ಉದ್ಯುಕ್ತರಾಗಿ ಶಿಷ್ಯರ ಕಣ್ಮರೆಯಾದರು. ಸೂರ್ಯನು ಮುಳುಗಿದಾಗ ಕಮಲಗಳು ಮೊಗ್ಗಾಗಿ ಕಾಂತಿಹೀನವಾಗುವಂತೆ ಶಿಷ್ಯರ ಮುಖಗಳೂ ಬಾಡಿ ಮುದುಡಿ ಕಳೆಗುಂದಿದುವು. ಆಚಾರ್ಯರ ಶಿಷ್ಯರು ಆಚಾರ್ಯರ ಅವಸ್ಥೆ ಏನಾಯಿತೋ ಎಂದು ಆಲೋಚಿಸುತ್ತಾ, ಹೆದರಿ ನಡುಗುತ್ತಿದ್ದರು.

ವಿ:—ಪ್ರದೀಪವತ್ ಆಚರಿತಃ ಪ್ರದೀಪಾಯಿತಃ, ಜಗತಾಂ ಪ್ರದೀಪಾಯಿತಃ ಜಗತ್ಪ್ರದೀಪಾಯಿತಃ, ಗವಾಂ ಗಣಃ ಗೋಗಣಃ, ಜಗತ್ಪ್ರದೀಪಾಯಿತಶ್ಚಾಸೌ ಗೋಗಣಶ್ಚ ಜಗತ್ಪ್ರದೀಪಾಯಿತಗೋಗಣಃ, ತೇನ ಆಢ್ಯಃ ಜಗತ್ಪ್ರದೀಪಾಯಿತಗೋಗಣಾಢ್ಯಃ ತಸ್ಮಿನ್; ನ ವ್ಯಕ್ತಂ ಅವ್ಯಕ್ತಂ ಅವ್ಯಕ್ತಂ ರೂಪಂ ಯಸ್ಯ ಸಃ, ತಸ್ಮಿನ್ ; ನಯನಾನಿ ಅಂಬುಜಾನೀವ ನಯನಾಂಬುಜಾನಿ ತೈಃ |

ಕ್ರಿ:—ಅತ್ಯಜತ್ ಅತ್ಯಜತಾಂ ಅತ್ಯಜನ್ ಇತ್ಯಾದಿ, ತ್ಯಜ ಹಾನೌ ಲಙ್.

ವೃತ್ತ:-ಉಪೇಂದ್ರವಜ್ರಾ ; ಲಕ್ಷಣ— ಉಪೇಂದ್ರವಜ್ರಾ ಜತಜಾಸ್ತತೋ ಗೌ.

ಅ:—ಬಟ್ಟೆಯೂ ಒದ್ದೆಯಾಗದಂತೆ ಅನಾಯಾಸವಾಗಿ ಗಂಗೆಯು ಯನ್ನು ದಾಟಿ ಬಂದ ಆಚಾರ್ಯರನ್ನು ನೋಡಿ ಆಚೆಯ ದಡದಲ್ಲಿದ್ದ ಬ್ರಾಹ್ಮಣರೂ, ಅರಸನೂ ಆಶ್ಚರ್ಯಪಟ್ಟರು—

**ಪದಂ ಪಶೋರ್ವಾ ವಿನತಾತನೂಜ-**
**ಸ್ತೀರ್ತ್ವಾ ನದೀಂ ತಾವದದೀನಸತ್ತ್ವಃ |**
**ಅನಾರ್ದ್ರವಾಸಾಃ ಸ ಕುತೂಹಲಾದ್ರೈ-**
**ರ್ನೃದೇವಭೂದೇವಮುಖ್ಯೈರ್ವವಂದೇ ||೩೦||**

ಅ:—ಅದೀನಸತ್ತ್ವಃ ಸಃ, ವಿನತಾತನೂಜಃ ಪಶೋಃ ಪದಂ ವಾ

Rarest Archiver

ತಾವತ್ ತೀರ್ತ್ವಾ ಅನಾರ್ದ್ರವಾಸಾಃ ಕುತೂಹಲಾರ್ದ್ರೈಃ ನೃದೇವ-ಭೂದೇವಮುಖ್ಯೈಃ ವವಂದೇ |

**ಅರ್ಥ:**—ಅದೀನಸತ್ತ್ವಃ ಸಃ = ಸಂಪೂರ್ಣಬಲವುಳ್ಳ, ಆ ಮಧ್ವಾ-ಚಾರ್ಯರು, ನದೀಂ = ಗಂಗಾನದಿಯನ್ನು, ವಿನತಾತನೂಜಃ = ವಿನತೆಯ ಮಗನಾದ ಗರುಡನು, ಪಶೋಃ ಪದಂ ವಾ = ಗೋವುಮುಂತಾದ ಪ್ರಾಣಿಯ ಹೆಜ್ಜೆಯನ್ನು ಎಂಬಂತೆ, ತಾವತ್ = ಮೊದಲು, ನದೀಂ ತೀರ್ತ್ವಾ = ಗಂಗಾನದಿಯನ್ನು ದಾಟಿ, ಅನಾರ್ದ್ರವಾಸಾಃ = ಒದ್ದೆಯಾಗದ ಬಟ್ಟೆಯುಳ್ಳವರಾಗಿ, ಕುತೂಹಲಾರ್ದ್ರೈಃ = ಆಶ್ಚರ್ಯಭರಿತರಾದ, ನೃದೇವ-ಭೂದೇವಮುಖ್ಯೈಃ = ರಾಜನು ಬ್ರಾಹ್ಮಣರು ಇವರೇ ಮೊದಲಾಗಿ ಉಳ್ಳವರಿಂದ, ವವಂದೇ = ನಮಸ್ಕರಿಸಲ್ಪಟ್ಟರು.

**ವಿ:**—ತನ್ವಾಃ ಜಾಯತೇ ಇತಿ ತನೂಜಃ, ವಿನತಾಯಾಃ ತನೂಜಃ ವಿನತಾತನೂಜಃ, ನ ದೀನಂ ಅದೀನಂ, ಅದೀನಂ ಸತ್ತ್ವಂ ಯಸ್ಯ ಸಃ, ನ ಆರ್ದ್ರಂ ಅನಾರ್ದ್ರಂ, ಅನಾರ್ದ್ರಂ ವಾಸಃ ಯಸ್ಯ ಸಃ ಅನಾರ್ದ್ರವಾಸಾಃ, ಕುತೂಹಲೇನ ಆರ್ದ್ರಾಃ ಕುತೂಹಲಾರ್ದ್ರಾಃ ತೈಃ, ನೃಣಾಂ ದೇವಃ ನೃದೇವಃ, ಭುವಃ ದೇವಾಃ ಭೂದೇವಾಃ ನೃದೇವಶ್ಚ ಭೂದೇವಾಶ್ಚ ನೃದೇವಭೂದೇವಾಃ, ನೃದೇವಭೂದೇವಾಃ ಮುಖಾನಿ ಯೇಷಾಂ ತೇ ನೃದೇವಭೂದೇವಮುಖಾಃ ತೈಃ ;

**ಕ್ರಿ:**—ವವಂದೇ ವವಂದಾತೇ ವವಂದಿರೇ ಇತ್ಯಾದಿ; ವದಿ (ವಂದ್) ಅಭಿವಾದನಸ್ತುತ್ಯೋಃ ಆತ್ಮನೇ. ಕರ್ಮಣಿ ಲಿಟ್.

**ವೃತ್ತ:**—ಉಪಜಾತಿ—ಉಪೇಂದ್ರವಜ್ರಾ ಇಂದ್ರವಜ್ರಾ ವೃತ್ತಗಳ ಮಿಶ್ರಣ, ಲಕ್ಷಣ ಹಿಂದೆಯೇ ಬಂದಿದೆ.

**ಅವ:**—ಅನಂತರ ಆಚಾರ್ಯರು ಶಿಷ್ಯರನ್ನು ತೆಪ್ಪಗಳ ಮೂಲಕ ದಾಟಿಸಿದರು—

**ಭೀತೈರರಾತೇರತಿಮಾತ್ರಮತ್ರ**
**ನ ತಾರಕೈರಪ್ಯಥ ತಾರಕೈಃ ಸಃ |**

Rarest Archiver

ಸ್ವತೇಜಸಾ ವಿಸ್ಮಿತಭೂಪನುನ್ನೈಃ
ಪ್ಲವೇನ ಶಿಷ್ಯಾನ್ ನಿರತಾರಯತ್ತಾಂ ||೩೧||

ಅ:—ಅಥ ಸಃ ಅರಾತೇಃ ಅತಿಮಾತ್ರಂ ಭೀತೈಃ ನ ತಾರಕೈಃ ಅಪಿ ಸ್ವತೇಜಸಾ ವಿಸ್ಮಿತಭೂಪನುನ್ನೈಃ ತಾರಕೈಃ ಪ್ಲವೇನ ಶಿಷ್ಯಾನ್ ತಾಂ ನಿರತಾರಯತ್ |

**ಅರ್ಥ:**—ಅಥ = ರಾಜಾದಿಗಳು ನಮಸ್ಕಾರಮಾಡಿದ ತರುವಾಯ, ಸಃ = ಆ ಮಧ್ವಾಚಾರ್ಯರು, ಅತ್ರ = ಈ ಗಂಗೆಯ ದಡದಲ್ಲಿ, ಅರಾತೇಃ = ಶತ್ರುವಿನ ದೆಸೆಯಿಂದ, ಅತಿಮಾತ್ರಂ = ಬಹಳವಾಗಿ, ಭೀತೈಃ = ಹೆದರಿದ, ನತಾರಕೈಃ ಅಪಿ = ದಾಟಿಸುವವರು ಅಲ್ಲದೆ ಇದ್ದಾಗ್ಯೂ, ಸ್ವತೇಜಸಾ = ತಮ್ಮ ಸಾಮರ್ಥ್ಯದಿಂದ, ವಿಸ್ಮಿತ = ಆಶ್ಚರ್ಯಗೊಂಡ, ಭೂಪ = ರಾಜನಿಂದ, ನುನ್ನೈಃ = ಪ್ರೇರಿಸಲ್ಪಟ್ಟ, ತಾರಕೈಃ = ನದಿಯನ್ನು ದಾಟಿಸುವ ಅಂಬಿಗರಿಂದ, ಪ್ಲವೇನ = ನಾವೆಯಿಂದ, ಶಿಷ್ಯಾನ್ = ಶಿಷ್ಯರನ್ನು, ತಾಂ = ಆ ಗಂಗಾನದಿಯನ್ನು, ನಿರತಾರಯತ್ = ದಾಟಿಸಿದರು.

**ತಾ:**—ಆ ಸಮಯದಲ್ಲಿ ನಾವಿಕರು ಶತ್ರುಭಯದಿಂದ ಬಹಳವಾಗಿ ಹೆದರಿ ಯಾರನ್ನೂ ಗಂಗಾನದಿಯ ಮತ್ತೊಂದು ದಡಕ್ಕೆ ಮುಟ್ಟಿಸುತ್ತಿರಲಿಲ್ಲ. ನದಿಯನ್ನು ಆ ಕತ್ತಲೆಯ ಹೊತ್ತಿನಲ್ಲಿ ಈಜಿಕೊಂಡು ಬರುವುದಂತೂ ಎಂತಹವರಿಗೂ ಅಸಾಧ್ಯವಾಗಿತ್ತು. ಹೀಗಿದ್ದೂ ಆಚಾರ್ಯರು ನದಿಯನ್ನು ದಾಟಿಬಂದಿರುವುದು ಆಶ್ಚರ್ಯಕರವಾಗಿತ್ತು. ಹಾಗೆ ನದಿಯನ್ನು ದಾಟಿದ್ದರೂ ಆಚಾರ್ಯರ ಬಟ್ಟೆಯು ಸ್ವಲ್ಪವೂ ಒದ್ದೆಯಾಗಿರಲಿಲ್ಲ. ಇದನ್ನು ನೋಡಿ ಅಲ್ಲಿಯ ರಾಜನು ಪರಮಾಶ್ಚರ್ಯಭರಿತನಾಗಿ ಆಚಾರ್ಯರ ಶಿಷ್ಯರನ್ನು ದಾಟಿಸುವಂತೆ ನಾವಿಕರಿಗೆ ಅಪ್ಪಣೆ ಮಾಡಿದನು. ಅವರು ಕೂಡಲೇ ಆಚಾರ್ಯರ ಶಿಷ್ಯರನ್ನು ದೋಣಿಯ ಮೂಲಕ ದಾಟಿಸಿ ಈ ಕಡೆಯ ದಡಕ್ಕೆ ಕರೆದುಕೊಂಡು ಬಂದರು. ಹೀಗೆ ಆಚಾರ್ಯರ ಪ್ರಭಾವದಿಂದ ಶಿಷ್ಯರು ನದಿಯನ್ನು ದಾಟಿದರು.

**ವಿ:**—ನ ತಾರಕಾಃ ನತಾರಕಾಃ ತೈಃ, ಇಲ್ಲಿ ನಞ್ ಅಲ್ಲ, ಅದೇ

Rarest Archiver

ಅರ್ಥವುಳ್ಳ ನಶಬ್ದವು. ಆದುದರಿಂದ ನಕಾರಕ್ಕೆ ಲೋಪ ಬರುವುದಿಲ್ಲ. ಸ್ವಸ್ಯ ತೇಜಃ ಸ್ವತೇಜಃ, ತೇನ ; ವಿಸ್ಮಿತೇನ ಭೂಪೇನ ನುನ್ನಾಃ ತೈಃ.

ಕ್ರಿ:—ನಿರ್ + ಅತಾರಯತ್ ಅತಾರಯತಾಂ ಅತಾರಯನ್ ಇತ್ಯಾದಿ ನಿರ್ ಉಪಸರ್ಗ, ತೄ– ಪ್ಲವನತರಣಯೋಃ ಣಿಜಂತ ಲಙ್.

ವೃತ್ತ :—ಉಪಜಾತಿ, ಮೊದಲನೇ ಪಾದದಲ್ಲಿ ಇಂದ್ರವಜ್ರಾ ಉಳಿದ ಮೂರುಪಾದಗಳಲ್ಲಿ ಉಪೇಂದ್ರವಜ್ರಾ.

ಅವ:– ಶ್ರೀಮಧ್ವರ ಶಿಷ್ಯರು ಆಚೆಯ ದಡದಲ್ಲಿ ದೀಪಗಳನ್ನೂ ಜನರ ಸಂದಣಿಯನ್ನೂ ಕಂಡರು—

**ವಿಶಂಕಟಂ ಸ್ವಸ್ತಟಿನೀತಟಂ ತೇ**
**ದೀಪಪ್ರದೀಪ್ತಂ ಜನತಾಭಿಪೂರ್ಣಂ।**
**ಸಂಚೋದಯತ್ಪಂಡಿತಮಂಡಲಾಢ್ಯಂ**
**ನಾಥಾವಲೋಕೋತ್ಕಹೃದೋಽಭ್ಯಪಶ್ಯನ್ ॥೩೨॥**

ಅ:—ನಾಥಾವಲೋಕೋತ್ಕಹೃದಃ ತೇ ವಿಶಂಕಟಂ ದೀಪಪ್ರದೀಪ್ತಂ ಜನತಾಭಿಪೂರ್ಣಂ ಸಂಚೋದಯತ್ಪಂಡಿತಮಂಡಲಾಢ್ಯಂ ಸ್ವಸ್ತಟಿನೀತಟಂ ಅಭ್ಯಪಶ್ಯನ್.

ಅರ್ಥ:— ನಾಥ = ತಮ್ಮ ಸ್ವಾಮಿಯಾದ ಶ್ರೀಮಧ್ವರ, ಅವಲೋಕ = ದರ್ಶನವಿಷಯದಲ್ಲಿ, ಉತ್ಕಹೃದಃ = ಉತ್ಕಂಠಿತವಾದ ಮನಸ್ಸುಳ್ಳ, ತೇ = ಆ ಶಿಷ್ಯರು, ವಿಶಂಕಟಂ = ವಿಶಾಲವಾದ, ದೀಪ-ಪ್ರದೀಪ್ತಂ=ದೀಪಗಳಿಂದ ಪ್ರಕಾಶಿತವಾದ, ಜನತಾಭಿಪೂರ್ಣಂ = ಜನ ಸಮೂಹದಿಂದ ತುಂಬಿರುವ, ಸಂಚೋದಯತ್ = (ಸಂಶಯಾಸ್ಪದವಾದ ಮತ್ತು ವಿವಾದ ಗ್ರಸ್ತವಾದ) ವಿಷಯುವನ್ನು ಕೇಳುತ್ತಿರುವ, ಪಂಡಿತ ಮಂಡಲ=ವಿದ್ವಾಂಸರ ಸಮೂಹದಿಂದ, ಆಢ್ಯಂ= ತುಂಬಿರುವ, ಸ್ವಸ್ತಟಿನೀ =ದೇವಗಂಗಾನದಿಯ, ತಟಂ= ದಡವನ್ನು, ಅಭ್ಯಪಶ್ಯನ್= ನೋಡಿದರು.

ತಾ:— ಶ್ರೀಮಧ್ವಾಚಾರ್ಯರ ಶಿಷ್ಯರು "ನಾವು ಯಾವಾಗ ನಮ್ಮ ಸ್ವಾಮಿಯಾದ ಆನಂದತೀರ್ಥರನ್ನು ನೋಡಿಯೇವು'' ಎಂದು ಉತ್ಕಂಠಿತ

Rarest Archiver

ರಾಗಿದ್ದರು. ಅವರು ಗಂಗಾನದಿಯ ಮತ್ತೊಂದು ದಡಕ್ಕೆ ಬಂದು ನೋಡಿದರು. ಅಲ್ಲಿ ವಿಶಾಲವಾದ ತೀರಪ್ರದೇಶದಲ್ಲಿ ದೀಪಗಳ ಪ್ರಕಾಶವು ಹಬ್ಬಿತ್ತು, ನೂರಾರು ಜನರು ಸೇರಿದ್ದರು, ಅನೇಕ ಪಂಡಿತರು ವಿವಾದಾಸ್ಪದ ವಾದ ವೇದಾರ್ಥ ಅಥವಾ ಮತ್ತಿತರ ವಿಷಯಗಳನ್ನು ಕೇಳುತ್ತಿದ್ದರು. ಗಂಗೆಯ ಮತ್ತೊಂದು ದಂಡೆಗೆ ಬಂದ ಆಚಾರ್ಯರ ಶಿಷ್ಯರು ಈ ಸನ್ನಿವೇಶ ವನ್ನು ಕಂಡರು.

ವಿ:—ಸ್ವಃ ತಟಿನೀ ಸ್ವಸ್ತಟಿನೀ ತಸ್ಯಾಃ ತಟಂ ತಸ್ಮಿನ್, ದೀಪ್ತೈಃ ಪ್ರದೀಪ್ತಂ ತತ್, ಜನಾನಾಂ ಸಮೂಹಃ ಜನತಾ ತಯಾ ಅಭಿಪೂರ್ಣಂ ತತ್, ಪಂಡಿತಾನಾಂ ಮಂಡಲಂ ಪಂಡಿತಮಂಡಲಂ, ಸಂಚೋದಯಚ್ಚ ತತ್ ಪಂಡಿತಮಂಡಲಂ ಚ ತೇನ ಆಢ್ಯಂ ತತ್. ನಾಥಸ್ಯ ಅವಲೋಕಃ ನಾಥಾವಲೋಕಃ ತಸ್ಮಿನ್ ಉತ್ಕಂ, ನಾಥಾವಲೋಕೋತ್ಕಂ ಹೃತ್ ಯೇಷಾಂ ತೇ.

ತಾ:—ಅಭಿ+ಅಪಶ್ಯನ್, ಅಪಶ್ಯತ್ ಅಪಶ್ಯತಾಂ ಅಪಶ್ಯನ್, ಅಭಿ ಉಪಸರ್ಗ, ದೃಶಿರ್—ಪ್ರೇಕ್ಷಣೇ ಲಙ್.

ವೃತ್ತ:— ಆದ್ಯಪಾದ ಉಪೇಂದ್ರವಜ್ರಾ, ಉಳಿದ ಮೂರು ಪಾದ ಗಳಲ್ಲಿ ಇಂದ್ರವಜ್ರಾ— ಉಪಜಾತಿ.

ಅವ:— ಆ ಪಂಡಿತರ ಸಭೆಯಲ್ಲಿ ಶ್ರೀಮಧ್ವಾಚಾರ್ಯರು ಬ್ರಹ್ಮ ದೇವರಂತೆ ಕಂಗೊಳಿಸಿದರು—

ಆಮ್ನಾಯಮಾಮ್ನಾಯವಿದಾಂ ವಿದಗ್ಧಂ
ಸಭಾವಭೇದಂ ಪ್ರವದಂತಮತ್ರ
ದೈವ್ಯಾಂ ಸಭಾಯಾಮಿವ ಪದ್ಮಯೋನಿಂ
ಪ್ರೈಕ್ಷಂತ ಸಾಕ್ಷಾತ್ಸುಖತೀರ್ಥಮೇತೇ ॥೩೩॥

ಅ:—ಏತೇ ಅತ್ರ ಆಮ್ನಾಯವಿದಾಂ (ಮಧ್ಯೇ) ವಿದಗ್ಧಂ ಸಭಾವ-ಭೇದಂ ಆಮ್ನಾಯಂ ಪ್ರವದಂತಂ, ಸುಖತೀರ್ಥಂ ದೈವ್ಯಾಂ ಸಭಾಯಾಂ ಪದ್ಮಯೋನಿಂ ಇವ ಸಾಕ್ಷಾತ್ ಪ್ರೈಕ್ಷಂತ.

Rarest Archiver

**ಅರ್ಥ:**— ಏತೇ = ಈ ಶಿಷ್ಯರು, ಅತ್ರ = ಈ ಗಂಗಾನದಿಯ ದಡದಲ್ಲಿ ನೆರೆದಿರುವ ಪಂಡಿತರ ಸಮೂಹದಲ್ಲಿ, ಆಮ್ನಾಯವಿದಾಂ (ಮಧ್ಯೇ) = ವೇದವನ್ನು ಬಲ್ಲವರ ಮಧ್ಯದಲ್ಲಿ, ವಿದಗ್ಧಂ = ಚತುರರಾದ, ಸಭಾವಭೇದಂ = ಅಭಿಪ್ರಾಯವಿಶೇಷಸಹಿತವಾಗಿ, ಆಮ್ನಾಯಂ = ವೇದವನ್ನು, ಪ್ರವದಂತಂ = ಪ್ರವಚನಮಾಡುತ್ತಿರುವ, ಸುಖತೀರ್ಥಂ = ಆನಂದತೀರ್ಥರನ್ನು, ದೈವ್ಯಾಂ ಸಭಾಯಾಂ = ದೇವತಾಸಂಬಂಧಿಯಾದ ಸಭೆಯಲ್ಲಿ, ಪದ್ಮಯೋನಿಂ ಇವ = ಬ್ರಹ್ಮದೇವರನ್ನೋಪಾದಿಯಲ್ಲಿ, ಸಾಕ್ಷಾತ್ = ಪ್ರತ್ಯಕ್ಷವಾಗಿ, ಪ್ರೈಕ್ಷಂತ = ಕಂಡರು.

**ತಾ:**—ಗಂಗಾನದಿಯ ದಡದಲ್ಲಿ ಪ್ರಚಂಡವಿದ್ವಾಂಸರ ಸಭೆಯು ಸೇರಿತ್ತು. ಅಲ್ಲಿ ವೇದವೇದಾರ್ಥತತ್ವಜ್ಞರಲ್ಲಿ ಶ್ರೇಷ್ಠರಾದ ಶ್ರೀಪೂರ್ಣಪ್ರಜ್ಞರು ಮಧ್ಯದಲ್ಲಿ ಕುಳಿತಿದ್ದರು. ಅವರು ವೇದಾರ್ಥವನ್ನು ಬೇರೆ ಬೇರೆ ರೀತಿಯಿಂದ ವಿವರಿಸುತ್ತಾ, ವೇದಗಳ ಬೇರೆ ಬೇರೆ ಅಭಿಪ್ರಾಯಗಳನ್ನು ತಿಳಿಸುತ್ತಿದ್ದರು. ದೇವತೆಗಳ ಸಭೆಯಲ್ಲಿ ಬ್ರಹ್ಮದೇವರು ವೇದಪ್ರವಚನವನ್ನು ಮಾಡುತ್ತಿರುವಂತೆ ಆ ದೃಶ್ಯವು ಕಾಣಿಸುತ್ತಿತ್ತು. ಇಂತಹ ಸನ್ನಿವೇಶದಲ್ಲಿ ಆಚಾರ್ಯರ ಶಿಷ್ಯರು ಅವರನ್ನು ನೋಡಿದರು.

**ವಿ:**—ಆಮ್ನಾಯಂ ವಿದಂತೀತಿ ಅಮ್ನಾಯವಿದಃ ತೇಷಾಂ, ಭಾವಾನಾಂ ಭೇದಾಃ, ಭಾವಭೇದೈಃ ಸಹಿತಂ ಯಸ್ಮಿನ್ ಕರ್ಮಣಿ ತದ್ಯಥಾ ಭವತಿ ತಥಾ, ದೇವಾನಾಂ ಇಯಂ ದೈವೀ ತಸ್ಯಾಂ, ಪದ್ಮಂ ಯೋನಿಃ ಯಸ್ಯ ಸಃ ತಂ.

**ಕ್ರಿ:**—ಪ್ರ + ಐಕ್ಷಂತ, ಐಕ್ಷತ ಐಕ್ಷೇತಾಂ ಐಕ್ಷಂತ ಇತ್ಯಾದಿ, ಪ್ರ ಉಪಸರ್ಗ ಈಕ್ಷ- ದರ್ಶನೇ ಲಙ್.

**ವೃತ್ತ:**—ಉಪಜಾತಿ.

**ಅವ:**—ಆಚಾರ್ಯರು ಹಸ್ತಿನಾವತಿಗೆ ಬಂದರು—

**ಪ್ರಾಪ್ತಸ್ತತೋ ಹಸ್ತಿನರಾಜಧಾನೀಂ**
**ಮಾಸಾನುವಾಸೇಹ ಸ ವಾಸಯೋಗ್ಯಾನ್ ।**

Rarest Archiver

ಮಠಾಂತರೇऽನಂತಗುಣಾಂತರಃ ಸನ್
ಏಕಾಂತದೇಶೇ ಸರಿತೋऽಸಮೀಪೇ ||೩೪||

**ಅ:**—ತತಃ ಹಸ್ತಿನರಾಜಧಾನೀಂ ಪ್ರಾಪ್ತಃ ಸಃ ಇಹ ಸರಿತಃ ಅಸಮೀಪೇ ಏಕಾಂತದೇಶೇ ಮಠಾಂತರೇ ಅನಂತಗುಣಾಂತರಃ ಸನ್ ವಾಸಯೋಗ್ಯಾನ್ ಮಾಸಾನ್ ಉವಾಸ.

**ಅರ್ಥ:**—ತತಃ=ಅನಂತರ (ಗಂಗಾನದಿಯ ದಡದಿಂದ), ಹಸ್ತಿನ-ರಾಜಧಾನೀಂ = ಹಸ್ತಿನಾವತೀ ಎಂಬ ರಾಜಧಾನಿಯನ್ನು, ಪ್ರಾಪ್ತಃ= ಸೇರಿದ, ಸಃ = ಆ ಮಧ್ವಾಚಾರ್ಯರು, ಇಹ= ಇಲ್ಲಿ, ಸರಿತಃ= ಗಂಗೆಯ, ಅಸಮೀಪೇ = ದೂರದಲ್ಲಿ, ಏಕಾಂತದೇಶೇ = ಜನರಿಲ್ಲದ ಸ್ಥಳದಲ್ಲಿ, ಮಠಾಂತರೇ = ಯಾವುದೋ ಒಂದು ಮಠದಲ್ಲಿ, ಅನಂತ= ಶ್ರೀಮನ್ನಾರಾಯಣನ, ಗುಣಾಂತರಃ ಸನ್ = ಗುಣಗಳಲ್ಲಿ ಮನಸ್ಸು ಉಳ್ಳವರಾಗಿ, ವಾಸಯೋಗ್ಯಾನ್=ಯತಿಗಳಿಗೆ ಒಂದೇ ಸ್ಥಳದಲ್ಲಿ ವಾಸಿಸಲು ಯೋಗ್ಯವಾದ, ಮಾಸಾನ್= ನಾಲ್ಕು ತಿಂಗಳ ಕಾಲದಲ್ಲಿ, ಉವಾಸ = ವಾಸಮಾಡಿದರು.

**ತಾ:**—ಅಲ್ಲಿಂದ ಶ್ರೀಮಧ್ವಾಚಾರ್ಯರು ಹಸ್ತಿನಾಪುರಕ್ಕೆ ತೆರಳಿದರು. ಅಲ್ಲಿ ಗಂಗಾನದಿಯಿಂದ ಸ್ವಲ್ಪದೂರದಲ್ಲಿಯೇ ಇರುವ ಯಾವುದೋ ಒಂದು ಮಠದಲ್ಲಿ ಶ್ರೀಮನ್ನಾರಾಯಣನನ್ನು ಅಂತರಂಗದಲ್ಲಿ ಧ್ಯಾನಿಸುತ್ತಾ ಮಳೆಗಾಲದ ನಾಲ್ಕು ತಿಂಗಳು ಚಾತುರ್ಮಾಸ್ಯವ್ರತಾನುಷ್ಠಾನಮಾಡುತ್ತಾ ವಾಸಿಸಿದರು.

**ವಿ:**—ಹಸ್ತಿನಂ ಇತಿ ರಾಜಧಾನೀ ಹಸ್ತಿನರಾಜಧಾನೀ ತಾಂ, ವಾಸಸ್ಯ ಯೋಗ್ಯಾಃ ವಾಸಯೋಗ್ಯಾಃ ತಾನ್, ಅನ್ಯಃ ಮಠಃ ಮಠಾಂತರಂ ತಸ್ಮಿನ್, ಅನಂತಸ್ಯ ಗುಣಾಃ, ಅನಂತಗುಣೇಷು ಅಂತರಂ ಯಸ್ಯ ಸಃ, ಏಕಾಂತಶ್ಚಾಸೌ ದೇಶಶ್ಚ ಏಕಾಂತದೇಶಃ ತಸ್ಮಿನ್, ನ ಸಮೀಪಂ ಅಸಮೀಪಂ ತಸ್ಮಿನ್ |

**ಕ್ರಿ:**—ಉವಾಸ ಊಷತುಃ ಊಷುಃ, ಉವಸಿಥ ಉವಸ್ಥ, ಊಷಥುಃ ಊಷ, ಉವಾಸ ಉವಸ, ಊಷಿವ ಊಷಿಮ. ವಸ ನಿವಾಸೇ ಲಿಟ್.

Rarest Archiver

ವೃತ್ತ—ಉಪಜಾತಿ.

ಅವ:—ಆಗ ಅಲ್ಲಿಗೆ ಶರೀರಧಾರಿಣಿಯಾಗಿ ಗಂಗೆಯು ಆಚಾರ್ಯರ ಸೇವೆಗೆ ಬಂದಳು—

**ಭಿತ್ವಾ ಭುವಂ ದೇವನದೀ ಜಗಾಮ**
**ಶಾಖಾವಿಶೇಷೇಣ ನಿಷೇವಿತುಂ ತಂ।**
**ವಾಣೀ ಚ ಯತ್ಪ್ರೇಷ್ಯತಯಾ ಕೃತಾರ್ಥಾ**
**ಶಿವಾದಿವಂದ್ಯಾ ನ ತದತ್ರ ಚಿತ್ರಂ ॥೩೫॥**

ಅ:—ದೇವನದೀ ತಂ ನಿಷೇವಿತುಂ ಶಾಖಾವಿಶೇಷೇಣ ಭುವಂ ಭಿತ್ವಾ ಜಗಾಮ. ಶಿವಾದಿವಂದ್ಯಾ ವಾಣೀ ಚ ಯತ್ಪ್ರೇಷ್ಯತಯಾ ಕೃತಾರ್ಥಾ ಅತ್ರ ತತ್ ಚಿತ್ರಂ ನ।

ಅ:—ದೇವನದೀ = ಗಂಗೆಯು, ತಂ = ಆ ಶ್ರೀಮಧ್ವಾಚಾರ್ಯರನ್ನು, ನಿಷೇವಿತುಂ = ಸೇವಿಸಲು, ಶಾಖಾವಿಶೇಷೇಣ = ತನ್ನ ಒಂದು ಶಾಖೆಯ ರೂಪದಿಂದ, ಭುವಂ ಭಿತ್ವಾ = ಭೂಮಿಯನ್ನು ಭೇದಿಸಿ, ಜಗಾಮ = ಬಂದಳು. ಶಿವಾದಿವಂದ್ಯಾ = ರುದ್ರಾದಿಗಳಿಂದ ನಮಸ್ಕರಿಸಿ ಸ್ತೋತ್ರ ಮಾಡಿಸಿಕೊಳ್ಳಲು ಯೋಗ್ಯಳಾದ, ವಾಣೀ ಚ = ಸರಸ್ವತಿಯೂ ಕೂಡ, ಯತ್ಪ್ರೇಷ್ಯತಯಾ = ಯಾವ ಆಚಾರ್ಯರ ದಾಸ್ಯದಿಂದ, ಕೃತಾರ್ಥಾ = ಧನ್ಯಳೋ, ಅತ್ರ = ಅಂತಹ ಈ ಶ್ರೀಮಧ್ವಾಚಾರ್ಯರಲ್ಲಿ, ತತ್ = ಆ ಗಂಗೆಯು ಸೇವಿಸಿದಳೆಂಬುದು, ನ ಚಿತ್ರಂ = ಆಶ್ಚರ್ಯವಲ್ಲ.

ತಾ:—ಗಂಗೆಯು ಶ್ರೀಮಧ್ವಾಚಾರ್ಯರನ್ನು ಅವರ ಚಾತುರ್ಮಾಸ್ಯ ವ್ರತಾನುಷ್ಠಾನಕಾಲದಲ್ಲಿ ಸೇವಿಸಲು ಬಯಸಿದಳು. ಅವಳು ಆಚಾರ್ಯರು ವಾಸಮಾಡುತ್ತಿದ್ದ ಮಠದ ಹತ್ತಿರ ಭೂಮಿಯನ್ನು ಸೀಳಿ ತನ್ನ ಒಂದು ಶಾಖೆಯ ರೂಪದಿಂದ ಬಂದು ಪ್ರತ್ಯಕ್ಷವಾಗಿಯೂ ಕಾಣಿಸಿಕೊಂಡಳು. ಗಂಗಾಜಲವೂ, ಗಂಗೆಯೂ ಅಲ್ಲಿ ಕಾಣಿಸಿಕೊಂಡರು. ಶಂಕರ ಮೊದಲಾದವರಿಂದ ಪೂಜಿತಳಾದ, ಗಂಗೆಗಿಂತ ಉತ್ತಮಳಾದ ಸರಸ್ವತಿಯೂ ಸಹ ಶ್ರೀಮಧ್ವಾಚಾರ್ಯರಿಗೆ ದಾಸಿಯಾಗಿ ತಾನು ಧನ್ಯಳೆಂದು ತಿಳಿದಿರುವಾಗ ಗಂಗೆಯು ಈ ರೀತಿ ಆಚಾರ್ಯರನ್ನು ಸೇವಿಸುವುದು ಆಶ್ಚರ್ಯವಲ್ಲ.

Rarest Archiver

ವಿ :—ದೇವಾನಾಂ ನದೀ, ಶಾಖಾಯಾಃ ವಿಶೇಷಃ ತೇನ, ಪ್ರೇಷ್ಯಾಯಾಃ ಭಾವಃ ಪ್ರೇಷ್ಯತಾ, ಯಸ್ಯ ಪ್ರೇಷ್ಯತಾ ತಯಾ, ಕೃತಃ ಅರ್ಥಃ ಯಯಾ ಸಾ, ಶಿವಃ ಆದಿಃ ಯೇಷಾಂ ತೇ, ಶಿವಾದಿಭಿಃ ವಂದ್ಯಾ ಶಿವಾದಿವಂದ್ಯಾ.

ಕ್ರಿ :—ಜಗಾಮ ಜಗ್ಮತುಃ ಜಗ್ಮುಃ ಇತ್ಯಾದಿ ಗಮ್ಲೃ ಗತೌ ಲಿಟ್.

ವೃತ್ತ— ಉಪಜಾತಿ.

ಅವ :—ಮೂರ್ತಿಮತ್ತಾಗಿ ಬಂದ ಗಂಗೆಯು ಭಕ್ತಿಪೂರ್ವಕವಾಗಿ ಆಚಾರ್ಯರಿಗೆ ನಮಸ್ಕಾರ ಮಾಡಿದಳು—

**ಗುರುಪ್ರಬರ್ಹಸ್ಯ ಪದಾರವಿಂದಂ**
**ವಿದೂರತಃ ಸಾ ಪ್ರಣನಾಮ ಮೂರ್ತಾ ।**
**ಔದಾರ್ಯಸೌಂದರ್ಯತನುಂ ತನುಂ ತಾ—**
**ಮಾಲಕ್ಷ್ಯ ಶಿಷ್ಯೈರತಿವಿಸ್ಮಿತಂ ತೈಃ ॥೩೬॥**

ಅ :—ಮೂರ್ತಾ ಸಾ ಗುರುಪ್ರಬರ್ಹಸ್ಯ ಪದಾರವಿಂದಂ ವಿದೂರತಃ ಪ್ರಣನಾಮ. ಔದಾರ್ಯಸೌಂದರ್ಯತನುಂ ತಾಂ ತನುಂ ಆಲಕ್ಷ್ಯ ತೈಃ ಶಿಷ್ಯೈಃ ಅತಿವಿಸ್ಮಿತಂ ।

**ಅರ್ಥ :**— ಮೂರ್ತಾ = ಸಾಮಾನ್ಯ ಜನರ ದೃಷ್ಟಿಗೆ ಗೋಚರವಾಗುವ ಸ್ತ್ರೀದೇಹವುಳ್ಳ, ಸಾ= ಆ ಗಂಗಾದೇವಿಯು, ಗುರುಪ್ರಬರ್ಹಸ್ಯ = ಗುರುಶ್ರೇಷ್ಠರಾದ ಶ್ರೀಮಧ್ವಾಚಾರ್ಯರ, ಪದಾರವಿಂದಂ = ಪಾದಕಮಲವನ್ನು, ವಿದೂರತಃ ಪ್ರಣನಾಮ=ಸ್ವಲ್ಪದೂರದಿಂದ ವಂದಿಸಿದಳು. ಔದಾರ್ಯಸೌಂದರ್ಯತನುಂ=ಉದಾರತೆ ಚೆಲುವು ಇವುಗಳೇ ಶರೀರವಾಗಿ ಉಳ್ಳ, ತಾಂ ತನುಂ= ಆ ಶರೀರವನ್ನು, ಆಲಕ್ಷ್ಯ=ನೋಡಿ, ತೈಃ ಶಿಷ್ಯೈಃ = ಆ ಶಿಷ್ಯರಿಂದ, ಅತಿವಿಸ್ಮಿತಂ-ತುಂಬಾ ಆಶ್ಚರ್ಯಗೊಳ್ಳೋಣವಾಯಿತು.

ತಾ :—ಸಾಮಾನ್ಯಜನರ ದೃಷ್ಟಿಗೂ ಗೋಚರವಾಗುವಂತೆ ಸ್ತ್ರೀದೇಹವನ್ನು ಧರಿಸಿ ಬಂದ ಆ ಗಂಗೆಯು ಗುರುಶ್ರೇಷ್ಠರಾದ ಶ್ರೀಮಧ್ವಾಚಾರ್ಯರನ್ನು, ಸ್ವಲ್ಪದೂರದಿಂದಲೇ ನಮಿಸಿದಳು. ಅವಳ ಶರೀರವು

Rarest Archiver

ಭಕ್ತರ ಮೇಲಿನ ಕರುಣೆ, ಉದಾರತೆ, ಚೆಲುವಿಕೆಗಳು ಆಕಾರವನ್ನು ಧರಿಸಿ ಬಂದಂತೆ ಇತ್ತು. ಅಂತಹ ಗಂಗಾಮಾತೆಯ ಶರೀರವನ್ನು ನೋಡಿ ಆಚಾರ್ಯರ ಶಿಷ್ಯರೆಲ್ಲರೂ ಆಶ್ಚರ್ಯಪಟ್ಟರು.

**ವಿ:**—ಗುರೂಣಾಂ ಪ್ರಬರ್ಹಃ ಗುರುಪ್ರಬರ್ಹಃ, ತಸ್ಯ; ಪದಂ ಅರವಿಂದಂ ಇವ, ತತ್. ಉದಾರಾಯಾಃ ಭಾವಃ ಔದಾರ್ಯಂ, ಸುಂದರ್ಯಾಃ ಭಾವಃ ಸೌಂದರ್ಯಂ, ಔದಾರ್ಯಂ ಚ ಸೌಂದರ್ಯಂ ಚ ಔದಾರ್ಯಸೌಂದರ್ಯೇ, ತೇ ಏವ ತನುಃ ಯಸ್ಯಾಃ ಸಾ ತಾಂ ।

**ಕ್ರಿ:**—ಪ್ರ + ನನಾಮ ನೇಮತುಃ ನೇಮುಃ; ನೇಮಿಥ ನನಂಥ ನೇಮಥುಃ ನೇಮ; ನನಾಮ ನನಮ ನೇಮಿವ ನೇಮಿಮ. ಣಮ (ನಮ್) ಪ್ರಹ್ವತ್ವೇ ಶಬ್ದೇ ಚ ಪರ. ಲಿಟ್.

**ವೃತ್ತ:**— ಪೂರ್ವಾರ್ಧದಲ್ಲಿ ಉಪೇಂದ್ರವಜ್ರಾ, ಉತ್ತರಾರ್ಧದಲ್ಲಿ ಇಂದ್ರವಜ್ರಾ—ಇವುಗಳ ಮಿಶ್ರಣ ಉಪ-ಜಾತಿ.

**ಅವ:**—ಆಚಾರ್ಯರು ಕಾಶಿಗೆ ಹೋದಾಗ ಅಲ್ಲಿ ತಮ್ಮ ಭೀಮಬಲ ವನ್ನು ತೋರಿಸಿ ತಾನು ಪೂರ್ವಭೀಮನೆಂದು ಸೂಚಿಸಿದರು—

**ತೇನೋಪಯಾತೇನ ಕದಾಚನಾಥ**
**ವಾರಾಣಸೀಂ ಪಾಪನಿವಾರಣೇನ ।**
**ಅವಾದಿ ವಾಣೀ ಬಲಿನಃ ಸ್ವಶಿಷ್ಯಾನ್**
**ವಿಲೋಕ್ಯ ಲೀಲಾವಸರೇಽವಲಿಪ್ತಾನ್** ॥೩೭॥

**ಅ:**—ಅಥ ವಾರಾಣಸೀಂ ಉಪಯಾತೇನ ಪಾಪನಿವಾರಣೇನ ತೇನ ಕದಾಚನ ಲೀಲಾವಸರೇ ಅವಲಿಪ್ತಾನ್ ಬಲಿನಃ ಸ್ವಶಿಷ್ಯಾನ್ ಅವಲೋಕ್ಯ ವಾಣೀ ಅವಾದಿ.

**ಅರ್ಥ :**— ಅಥ = ಚಾತುರ್ಮಾಸ್ಯಸಮಾಪ್ತಿಯಾದ ಮೇಲೆ, ವಾರಾಣಸೀಂ ಉಪಯಾತೇನ = ಕಾಶೀಕ್ಷೇತ್ರಕ್ಕೆ ಬಂದಿದ್ದ, ಪಾಪ-ನಿವಾರಣೇನ ತೇನ = ಪಾಪಪರಿಹಾರಕರಾದ ಆ ಶ್ರೀಮಧ್ವಾಚಾರ್ಯರಿಂದ ಲೀಲಾವಸರೇ = ವಿಹಾರದ ಸಮಯದಲ್ಲಿ, ಅವಲಿಪ್ತಾನ್ = ಅಹಂಕಾರ

Rarest Archiver

ಪಟ್ಟೆದ್ದ, ಬಲಿನಃ ಸ್ವಶಿಷ್ಯಾನ್ = ಬಲಿಷ್ಠರಾದ ತಮ್ಮ ಶಿಷ್ಯರನ್ನು, ವಿಲೋಕ್ಯ = ನೋಡಿ, ವಾಣೀ ಅವಾದಿ = ಮಾತು ಹೇಳಲ್ಪಟ್ಟಿತು.

ತಾ:— ಶ್ರೀಮಧ್ವಾಚಾರ್ಯರು ತಮ್ಮ ದರ್ಶನ, ಸಂಭಾಷಣ, ಸೇವಾದಿಗಳಿಂದ ಸಮಸ್ತಪಾಪನಿವಾರಕರು. ದೇಹ, ಬುದ್ಧಿಗಳೆರಡರಲ್ಲಿಯೂ ಅಸಾಧಾರಣವಾದ ಸಾಮರ್ಥ್ಯದಿಂದ ಕೂಡಿದವರು. ಅವರು ಹಸ್ತಿನಾಪುರದಲ್ಲಿ ಚಾತುರ್ಮಾಸ್ಯವನ್ನು ಮುಗಿಸಿದ ಮೇಲೆ ತಮ್ಮ ಶಿಷ್ಯರ ಜತೆಗೆ ಕಾಶಿಗೆ ಹೋದರು. ಅವರೆಲ್ಲರೂ ಬಲಶಾಲಿಗಳಾದ ಯುವಕರು. ಅಲ್ಲಿ ಒಂದಾನೊಂದು ದಿನ ವಿಹಾರದ ಸಮಯದಲ್ಲಿ ವಿನೋದದಿಂದ ಬಲಾಬಲ ವಿಚಾರವನ್ನು ಮಾಡುತ್ತಾ ಇರುವಾಗ ಆ ಶಿಷ್ಯರು— 'ತಾವು ಯುವಕರು, ಆಚಾರ್ಯರಿಗಿಂತಲೂ ಹೆಚ್ಚು ಬಲ ಮತ್ತು ದಕ್ಷತೆಯುಳ್ಳವರು' ಎಂದು ಅಹಂಕಾರತೋರಿಸಿದರು. ಅವರ ಬಲದರ್ಪವನ್ನು ಕಂಡು ಆಚಾರ್ಯರು ಇಂತೆಂದರು.

ವಿ:—ಪಾಪಾನಾಂ ನಿವಾರಣಂ ಯೇನ ಸಃ, ತೇನ; ಬಲಂ ಏಷಾಂ ಅಸ್ತೀತಿ ಬಲಿನಃ ತಾನ್; ಲೀಲಾಯಾಃ ಅವಸರಃ ತಸ್ಮಿನ್;

ಕ್ರಿ:—ಅವಾದಿ ಅವಾದಿಷಾತಾಂ ಅವಾದಿಷತ, ಅವಾದಿಷ್ಠಾಃ ಅವಾದಿಷಾಥಾಂ ಅವಾದಿಧ್ವಂ, ಅವಾದಿಷಿ ಅವಾದಿಷ್ವಹಿ ಅವಾದಿಷ್ಮಹಿ. ವದ ವ್ಯಕ್ತಾಯಾಂ ವಾಚಿ ಕರ್ಮಣಿ ಲುಙ್.

ವೃತ್ತ- ಉಪಜಾತಿ.

ಅವ :—ಬಲದ ವಿಷಯದಲ್ಲಿ ಅಹಂಕಾರದಿಂದ ಕೂಡಿದ ಶಿಷ್ಯರನ್ನು ಕುರಿತು ಆಚಾರ್ಯರು ಆಡಿದ ಮಾತು—

ನಿಯುದ್ಧಸಿದ್ಧ್ಯೈ ಯುಗಪದ್ಧಿ ವೀರಂ
ಮನ್ಯಾ ಭವಂತೋಽಭಿಪತಂತು ಮಾಂ ದ್ರಾಕ್ ।
ಸಮಸ್ತಶಕ್ತಿಂ ನ ಯುನಕ್ತಿ ಯಃ ಸ್ವಾ
ಮತ್ರಾಸ್ಮದಾಜ್ಞಾಂ ಸ ನಿರಾಕರೋತಿ ॥೩೮॥

ಅ :—ಹೇ ವೀರಂಮನ್ಯಾಃ ಭವಂತಃ ಯುಗಪತ್ ಹಿ ನಿಯುದ್ಧ-

Rarest Archiver

ಸಿದ್ಧ್ಯೈ ದ್ರಾಕ್ ಮಾಂ ಅಭಿಪತಂತು. ಅತ್ರ ಸ್ವಾಂ ಸಮಸ್ತಶಕ್ತಿಂ ಯಃ ನ ಯುನಕ್ತಿ ಸಃ ಅಸ್ಮದಾಜ್ಞಾಂ ನಿರಾಕರೋತಿ.

ಅರ್ಥ :—ಹೇ ವೀರಂಮನ್ಯಾಃ = ಎಲೈ ನಾವೇ ಸಮರ್ಥರೆಂದು ತಿಳಿದುಕೊಂಡಿರುವವರೇ ! ಭವಂತಃ = ನೀವು, ಯುಗಪತ್ ಹಿ = ಒಂದೇ ಸಮಯದಲ್ಲಿಯೇ (ಒಟ್ಟಿಗೆಯೇ), ನಿಯುದ್ಧ-ಸಿದ್ಧ್ಯೈ = ಬಾಹುಯುದ್ಧ ನಡೆಸುವುದಕ್ಕಾಗಿ, ದ್ರಾಕ್ = ಕೂಡಲೇ, ಮಾಂ = ನನ್ನನ್ನು, ಅಭಿಪತಂತು = ಎದುರಿಸಿರಿ. ಅತ್ರ = ಈ ಮಲ್ಲಯುದ್ಧದಲ್ಲಿ, ಸ್ವಾಂ = ತನ್ನದಾದ, ಸಮಸ್ತಶಕ್ತಿಂ = ಪೂರ್ಣಸಾಮರ್ಥ್ಯವನ್ನು, ಯಃ = ಯಾವನು, ನ ಯುನಕ್ತಿ = ವಿನಿಯೋಗಿಸುವುದಿಲ್ಲವೋ, ಸಃ = ಅವನು, ಅಸ್ಮದಾಜ್ಞಾಂ = ನಮ್ಮ ಅಪ್ಪಣೆಯನ್ನು, ನಿರಾಕರೋತಿ = ಮೀರಿದವನಾಗುತ್ತಾನೆ.

ತಾ : — ನಮ್ಮ ಪ್ರೀತಿಯ ಶಿಷ್ಯರೇ ! ನಾವೇ ಬಲಶಾಲಿಗಳು ನಮ್ಮಷ್ಟು ಬಲ ನಮ್ಮ ಆಚಾರ್ಯರಿಗೂ ಇಲ್ಲವೆಂದು ನೀವೆಲ್ಲರೂ ಅಹಂಕಾರಪಡುತ್ತಿದ್ದೀರಿ. ಆದುದರಿಂದ ಬಲಾಬಲನಿರ್ಣಯಕ್ಕಾಗಿ ಒಂದು ಪರೀಕ್ಷೆಯನ್ನು ಏರ್ಪಡಿಸೋಣ, ನೀವೆಲ್ಲರೂ ಸೇರಿ ನನ್ನೊಡನೆ ಜಟ್ಟಿಕಾಳಗ ಕ್ಕಾಗಿ ಸಿದ್ಧರಾಗಿ ಬನ್ನಿರಿ, ಎಲ್ಲರೂ ಒಂದೇ ಬಾರಿ ನನ್ನನ್ನು ಎದುರಿಸಿ ನನ್ನ ಜೊತೆಗೆ ಮಲ್ಲಯುದ್ಧಮಾಡಿರಿ. ಈ ಮಲ್ಲಯುದ್ಧದಲ್ಲಿ ನೀವೆಲ್ಲರೂ ಸಂಪೂರ್ಣಶಕ್ತಿಯನ್ನು ಉಪಯೋಗಿಸಬೇಕು. ಇದು ನನ್ನ ಅಪ್ಪಣೆ. ನನ್ನ ಮೇಲಿನ ದಾಕ್ಷಿಣ್ಯದಿಂದ ಯಾವನಾದರೊಬ್ಬನು ತನ್ನ ಶಕ್ತಿಯನ್ನು ಪೂರ್ತಿಯಾಗಿ ಉಪಯೋಗಿಸದಿದ್ದರೆ ಅವನು ನನ್ನ ಅಪ್ಪಣೆಯನ್ನು ಮೀರಿದ ಪಾಪಕ್ಕೆ ಗುರಿಯಾಗುತ್ತಾನೆ. ಇದು ನನ್ನ ಆಣೆ. (ಎಂದು ಆಚಾರ್ಯರು ಶಿಷ್ಯರನ್ನು ಮಲ್ಲಯುದ್ಧಕ್ಕೆ ಕರೆದರು).

ವಿ:—ನಿಯುದ್ಧಸ್ಯ ಸಿದ್ಧಿಃ ನಿಯುದ್ಧಸಿದ್ಧಿಃ ತಸ್ಯೈ, ಆತ್ಮನಃ ವೀರಾನ್ ಮನ್ಯಂತೇ ಇತಿ ವೀರಂಮನ್ಯಾಃ ತಾನ್, ಸಮಸ್ತಾ ಚ ಸಾ ಶಕ್ತಿಶ್ಚ ಸಮಸ್ತಶಕ್ತಿಃ ತಾಂ, ಅಸ್ಮಾಕಂ ಆಜ್ಞಾ ಅಸ್ಮದಾಜ್ಞಾ ತಾಂ,

ಕ್ರಿ :—ಅಭಿ+ಪತಂತು, ಪತತು ಪತತಾತ್, ಪತತಾಂ ಪತಂತು ಇತ್ಯಾದಿ, ಅಭಿ ಉಪಸರ್ಗ, ಪತ್ಲೃ-ಗತೌ, ಲೋಟ್. ನಿ+ಯುನಕ್ತಿ,

Rarest Archive

ಯುಂಕ್ತಃ ಯುಂಜಂತಿ, ಯುನಕ್ಷಿ ಯುಂಕ್ಥಃ ಯುಂಕ್ಥ, ಯುನಜ್ಮಿ ಯುಂಜ್ವಃ ಯುಂಜ್ಮಃ, ಯುಜಿರ್ ಯೋಗೇ ಲಟ್. ನಿರ್ + ಆ + ಕರೋತಿ ಕುರುತಃ ಕುರ್ವಂತಿ ಇತ್ಯಾದಿ, ಡುಕೃ ಞ್ (ಕೃ) ಕರಣೇ ಲಟ್.

ಅವ :—ಆಚಾರ್ಯರ ಅಮಾನುಷ ಬಲವನ್ನು ವರ್ಣಿಸುತ್ತಾರೆ—

**ಇತೀರಯನ್ ಪಂಚದಶೈಷ ಯೂನಃ**
**ಪ್ರಾಪ್ತಾನ್ ಪ್ರಯುದ್ಧಾನ್ ಯುಗಪನ್ನಿಪಾತ್ಯ**
**ಉತ್ಥೀಯತಾಂ ಯಸ್ಯ ಸಮರ್ಥತಾ ಸ್ಯಾ-**
**ದಿತಿ ಬ್ರುವಾಣಃ ಶನಕೈರ್ಜಹಾಸ ||೩೯||**

ಅ :—ಇತಿ ಈರಯನ್ ಯುಗಪತ್ ಪ್ರಾಪ್ತಾನ್ ಪ್ರಯುದ್ಧಾನ್ ಪಂಚದಶ ಯೂನಃ (ಯುಗಪತ್) ನಿಪಾತ್ಯ 'ಯಸ್ಯ ಸಮರ್ಥತಾ ಸ್ಯಾತ್ ತೇನ ಉತ್ಥೀಯತಾಂ' ಇತಿ ಬ್ರುವಾಣಃ ಶನಕೈಃ ಜಹಾಸ |

**ಅರ್ಥ:**—ಏಷಃ= ಈ ಶ್ರೀಮಧ್ವಾಚಾರ್ಯರು, ಇತಿ= ಈ ರೀತಿಯಾಗಿ, ಈರಯನ್ ಸನ್= ಹೇಳುತ್ತಾ, ಯುಗಪತ್= ಒಂದೇ ಬಾರಿ, ಪ್ರಾಪ್ತಾನ್= ಮೇಲೇರಿ ಬಂದ, ಪ್ರಯುದ್ಧಾನ್= ಚೆನ್ನಾಗಿ ಮಲ್ಲಯುದ್ಧ ಮಾಡುವ, ಪಂಚದಶ ಯೂನಃ = ಹದಿನೈದುಮಂದಿ ಯುವಕರಾದ ಶಿಷ್ಯರನ್ನು, ಯುಗಪತ್ = ಒಂದೇ ಬಾರಿ, ನಿಪಾತ್ಯ= ಕೆಡವಿ, ಯಸ್ಯ ಸಮರ್ಥತಾ ಸ್ಯಾತ್ = ಯಾವನಿಗೆ ಸಾಮರ್ಥ್ಯವಿದ್ದೀತೋ, (ತೇನ= ಅವನಿಂದ) ಉತ್ಥೀಯತಾಂ= ಮೇಲಕ್ಕೆ ಏಳಲ್ಪಡಲಿ, ಇತಿ ಬ್ರುವಾಣಃ= ಹೀಗೆಂದು ಹೇಳುತ್ತಾ, ಶನಕೈಃ= ಮೆಲ್ಲನೆ, (ಅಶನಕೈಃ= ಗಟ್ಟಿಯಾಗಿ) ಜಹಾಸ= ನಕ್ಕರು.

ತಾ :—ಆಚಾರ್ಯರು ಹೀಗೆ ಹೇಳಿದ ಕೂಡಲೇ ಹದಿನೈದು ಮಂದಿ ಶಿಷ್ಯರು, ಒಂದೇಸಲ ಆಚಾರ್ಯರನ್ನು ಎದುರಿಸಿ ಕುಸ್ತಿಯಾಡಿದರು. ಶ್ರೀಮಧ್ವಾಚಾರ್ಯರು ಕೂಡಲೇ ಅವರನ್ನೆಲ್ಲಾ ಒಟ್ಟಿಗೇ ನೆಲಕ್ಕೆ ಕೆಡವಿದರು. 'ನಿಮ್ಮಲ್ಲಿ ಸಾಮರ್ಥ್ಯವಿದ್ದವರು ಮೇಲಕ್ಕೇಳಿರಿ' ಹೀಗೆ ಹೇಳಿ ಒಂದು ಬಾರಿ ಮೆಲ್ಲನೆ ಮತ್ತೊಂದು ಬಾರಿ ಗಟ್ಟಿಯಾಗಿ ನಕ್ಕರು. (ಪ್ರಯುದ್ಧಾನ್ ಎಂದು ಹೇಳಿದ್ದರಿಂದ ಸ್ವಲ್ಪಶಕ್ತಿಯನ್ನೇ ಉಪಯೋಗಿಸಿ

Rarest Archiver

ಮಲ್ಲಯುದ್ಧವಾಡಿದರೆ ಆಚಾರ್ಯರ ಆಜ್ಞೆಯನ್ನು ಉಲ್ಲಂಘಿಸಿದ ದೋಷ ಬರುವುದೆಂದು ಶಿಷ್ಯರು ಸರ್ವಶಕ್ತಿಯಿಂದ ಮಲ್ಲಯುದ್ಧವಾಡಿದರೆಂದು ತಿಳಿದುಬರುತ್ತದೆ.)

ವಿ:— ಪಂಚಾಧಿಕಾ ದಶ ಪಂಚದಶ; ಸಮರ್ಥಸ್ಯ ಭಾವಃ ಸಮರ್ಥತಾ, (ನ ಶನಕೈಃ ಅಶನಕೈಃ)

ಕ್ರಿ:—ಉತ್ಥೀಯತಾಂ, ಉದ್ ಉಪಸರ್ಗ, ಷ್ಠಾ ಗತಿನಿವೃತ್ತೌ (ಸ್ಥಾ) ಅಕ. ಭಾವೇ ಪ್ರಯೋಗ. ಲೋಟ್. ಎಲ್ಲಾ ಪುರುಷವಚನಗಳಲ್ಲಿ ಇಲ್ಲಿ ಒಂದೇ ರೂಪ. ಜಹಾಸ ಜಹಸತುಃ ಜಹಸುಃ, ಜಹಸಿಥ ಜಹಸಥುಃ ಜಹಸ, ಜಹಾಸ ಜಹಸ, ಜಹಸಿವ ಜಹಸಿಮ. ಹಸೇ (ಹಸ್) ಹಸನೇ ಅಕ. ಲಿಟ್. ಸ್ಯಾತ್ ಸ್ಯಾತಾಂ ಸ್ಯುಃ, ಅಸ ಭುವಿ. ಅಕ. ಲೋಟ್.

ಅವ:—ಆಗ ಶಿಷ್ಯರು ಹೇಳಿದ ಮಾತು—

ಸೌಮೇರವಂ ಗೌರವಮಾವಹಂತಿ
ತವಾಂಗಮಂಗಾಂಗುಲಯಶ್ಚ ನೋಽಂಗೇ ।
ಪುರಾ ವಿನಶ್ಯಾಮ ಇತೋ ದಯಾಲೋ
ಸ್ವಾಮಿನ್ ವಿಮುಂಚೇತ್ಯವದಂಸ್ತದಾ ತೇ ॥೪೦॥

ಅ:—ತದಾ ತೇ ಅಂಗ! ತವ ಅಂಗಂ ಅಂಗುಲಯಶ್ಚ ನಃ ಅಂಗೇ ಸೌಮೇರವಂ ಗೌರವಂ ಆವಹಂತಿ, ಇತಃ ವಿನಶ್ಯಾಮಃ ಪುರಾ, ದಯಾಲೋ ಸ್ವಾಮಿನ್ ವಿಮುಂಚ ಇತಿ ಅವದನ್ ।

ಅರ್ಥ:—ತದಾ = ಆಗ, ತೇ = ಆ ಶಿಷ್ಯರು ಅಂಗ! = (ನಮ್ಮ ಪ್ರೀತಿ ಗೌರವವಿಷಯರಾದ) ಆಚಾರ್ಯರೇ! ತವ ಅಂಗಂ = ನಿಮ್ಮ ಶರೀರವು, ಅಂಗುಲಯಶ್ಚ = ಬೆರಳುಗಳೂ, ನಃ ಅಂಗೇ = ನಮ್ಮ ಮೈಯ ಮೇಲೆ, ಸೌಮೇರವಂ = ಮೇರುಪರ್ವತಕ್ಕೆ ಸಮಾನವಾದ, ಗೌರವಂ = ಭಾರವನ್ನು, ಆವಹಂತಿ = ಉಂಟುಮಾಡುತ್ತವೆ. ಇತಃ = ಇದರಿಂದ, (ವಯಂ = ನಾವು) ವಿನಶ್ಯಾಮಃ ಪುರಾ = ಸಾಯುವೆವು, ದಯಾಲೋ ಸ್ವಾಮಿನ್ = ಕರುಣಾಶಾಲಿಗಳಾದ ಪ್ರಭುಗಳಾದ ಆಚಾರ್ಯರೇ! ವಿಮುಂಚ = ಬಿಡಿರಿ. ಇತಿ ಅವದನ್ = ಹೀಗೆಂದು ಹೇಳಿದರು.

Rarest Archives

ತಾ :— ಆಚಾರ್ಯರು ಹೀಗೆ ಹೇಳಿ ನಕ್ಕಾಗ ಆ ಶಿಷ್ಯರು ಹೀಗೆಂದರು- ಆಚಾರ್ಯರೇ ! ತಾವು ನಮ್ಮ ಶರೀರದ ಮೇಲೆ ನಿಮ್ಮ ಶರೀರದ- ಮತ್ತು ಬೆರಳುಗಳ ಭಾರವನ್ನು ಹಾಕಿದ್ದೀರಿ. ಇವುಗಳಲ್ಲಿ ಒಂದೊಂದೂ ನಮ್ಮ ಮೈಮೇಲೆ ಮೇರುಪರ್ವತದಷ್ಟು ಭಾರವನ್ನುಂಟು ಮಾಡುತ್ತಿದೆ. ಇವುಗಳ ಸ್ಪರ್ಶವನ್ನು ಸಹಿಸಲು ನಮಗೆ ಸಾಧ್ಯವಿಲ್ಲ. ಅಯ್ಯೋ ! ನಾವು ನಿಜವಾಗಿಯೂ ಸತ್ತೇ ಹೋಗುವೆವು. ಸ್ವಾಮಿ ! ತಾವು ದಯಾಪೂರ್ಣರು, ದಯವಿಟ್ಟು ನಮ್ಮನ್ನು ಬಿಡಿರಿ; ಎಂದು ಗಟ್ಟಿಯಾಗಿ ಕಿರುಚಿಕೊಂಡರು.

ವಿ: —ಸುಮೇರೋಃ ಇದಂ ಸೌಮೇರವಂ, ಗುರೋಃ ಭಾವಃ ಗೌರವಂ ;

ಕ್ರಿ:—ವಹತಿ ವಹತಃ ವಹಂತಿ, ವಹ ಪ್ರಾಪಣೇ ಆಜ್ ಉಪಸರ್ಗ, ಲಟ್, ವಿ+ನಶ್ಯಾಮಃ, ನಶ್ಯತಿ ನಶ್ಯತಃ ನಶ್ಯಂತಿ, ನಶ್ಯಸಿ ನಶ್ಯಥಃ ನಶ್ಯಥ, ನಶ್ಯಾಮಿ ನಶ್ಯಾವಃ ನಶ್ಯಾಮಃ ; ವಿ ಉಪ. ಣಶ ಅದರ್ಶನೇ, 'ನಶ್' ಲಟ್. ವಿ+ಮುಂಚ, ಮುಂಚತು ಮುಂಚತಾತ್ ಮುಂಚತಾಂ ಮುಂಚಂತು, ಮುಂಚ ಮುಂಚತಾತ್ ಮುಂಚತಂ ಮುಂಚತ, ಮುಂಚಾನಿ ಮುಂಚಾವ ಮುಂಚಾಮ. ವಿ ಉಪಸರ್ಗ – ಮುಚ್ಲೃ ಮೋಕ್ಷಣೇ ಲೋಟ್. ಅವದತ್ ಅವದತಾಂ ಅವದನ್ ಇತ್ಯಾದಿ ವದ ವ್ಯಕ್ತಾಯಾಂ ವಾಚಿ ಭೂತೇ ಲಙ್.

ಅವ :—ಆಗ ಆಚಾರ್ಯರು ಏನು ಮಾಡಿದರು ? ಶಿಷ್ಯರ ಮನಸ್ಸಿನಲ್ಲಿ ಯಾವ ಭಾವನೆಗಳು ಮೂಡಿದುವು ? —

**ತೇನಾಥ ಮುಕ್ತೈರತಿವಿಸ್ಮಯಸ್ತೈ-**
**ರವಾಪ್ಯನಾಲೋಚ್ಯ ಹಿ ತತ್ಸ್ವರೂಪಂ ।**
**ಯದ್ಭ್ರೂವಿಜೃಂಭೇಣ ಸಶಂಭುಶಕ್ರಂ**
**ಜಗತ್ಸಮಸ್ತಂ ನಿಯತಂ ನಿಕಾಮಂ ॥೪೧॥**

ಅ:—ಅಥ ತೇನ ಮುಕ್ತೈಃ ತೈಃ ತತ್ಸ್ವರೂಪಂ ಅನಾಲೋಚ

Rarest Archiver

ಹಿ ಅತಿವಿಸ್ಮಯಃ ಅವಾಪಿ, ಯದ್ಭ್ರೂವಿಜೃಂಭೇಣ ಸಶಂಭುಶಕ್ರಂ ಸಮಸ್ತಂ ಜಗತ್ ನಿಕಾಮಂ ನಿಯತಂ ||

**ಅರ್ಥ :**—ಅಥ=ಶಿಷ್ಯರು ಪ್ರಾರ್ಥನೆ ಮಾಡಿದ ಅನಂತರ, ತೇನ ಮುಕ್ತೈಃ=ಆ ಶ್ರೀಮಧ್ವಾಚಾರ್ಯರಿಂದ ಬಿಡಲ್ಪಟ್ಟ, ತೈಃ=ಆ ಶಿಷ್ಯರಿಂದ ಯದ್ಭ್ರೂವಿಜೃಂಭೇಣ = ಯಾವ ಶ್ರೀಮಧ್ವರ ಹುಬ್ಬಿನ ವಿಲಾಸದಿಂದ, ಸಶಂಭುಶಕ್ರಂ=ಶಂಕರ ಮತ್ತು ದೇವೇಂದ್ರರಿಂದ ಸಹಿತವಾದ, ಸಮಸ್ತಂ ಜಗತ್=ಸಕಲಪ್ರಪಂಚವೂ, ನಿಕಾಮಂ=ಸ್ವೇಚ್ಛೆಯಿಂದ, ನಿಯತಂ= ಪ್ರೇರಿಸಲ್ಪಟಿದೆಯೋ, ತತ್ಸ್ವರೂಪಂ ಅನಾಲೋಚ್ಯ ಹಿ=ಆ ಮಧ್ವರ ಸ್ವರೂಪವನ್ನು ಆಲೋಚಿಸದೆಯೇ, ಅತಿವಿಸ್ಮಯಃ ಅವಾಪಿ = ಅತಿಶಯ ವಾದ ಆಶ್ಚರ್ಯವು ಹೊಂದಲ್ಪಟ್ಟಿತು.

**ತಾ :**—ದಯಾಳುಗಳಾದ ಆಚಾರ್ಯರೇ! ನಮ್ಮನ್ನು ಪ್ರಾಣಸಹಿತಬಿಡಿರಿ. ನಿಮ್ಮ ಅಂಗಗಳನ್ನು ಮತ್ತು ಬೆರಳುಗಳನ್ನು ನಮ್ಮ ಮೇಲಿನಿಂದ ತೆಗೆಯಿರಿ ಎಂದು ಶಿಷ್ಯರು ಪ್ರಾರ್ಥನೆಮಾಡಿದ ಅನಂತರ ಕೂಡಲೇ ಆಚಾರ್ಯರು ಅವರನ್ನು ಬಿಟ್ಟು ಬಿಟ್ಟರು. ಶಿಷ್ಯರು ಶ್ರೀಮಧ್ವರ ಆ ಸಾಮರ್ಥ್ಯವನ್ನು ಸರಿಯಾಗಿ ತಿಳಿಯದೆ ಇರುವುದರಿಂದಲೇ ಅತ್ಯಂತ ಆಶ್ಚರ್ಯಪಟ್ಟರು. ವಾಸ್ತವವಾಗಿ ಆ ಮಧ್ವರು ತಮ್ಮ ಹುಬ್ಬುಗಳ ವಿಲಾಸಮಾತ್ರದಿಂದಲೇ ರುದ್ರ, ಇಂದ್ರಾದಿ ಸಹಿತವಾದ ಸಮಸ್ತಪ್ರಪಂಚವನ್ನು ಲಕ್ಷ್ಮೀನಾರಾಯಣರ ಅಧೀನತೆಯಲ್ಲಿದ್ದು ತನ್ನ ಇಚ್ಛೆಯಂತೆ ಪ್ರೇರಿಸಲು ಸಮರ್ಥರು. ಆದರೆ ಈ ವಿಷಯವನ್ನು ತಿಳಿಯದೇ ಇದ್ದ ಪ್ರಯುಕ್ತವಾಗಿಯೇ ಅವರೆಲ್ಲರೂ ಇದು ಬಹಳ ದೊಡ್ಡಮಹಿಮೆ ಎಂದು ಆಶ್ಚರ್ಯಪಟ್ಟರು. ವಾಸ್ತವವಾಗಿ ಇದ ಕ್ಕಿಂತಲೂ ಹೆಚ್ಚಿನ, ಅಮಿತಮಹಿಮೆಯು ಆಚಾರ್ಯರಲ್ಲಿ ಇದೆ ಎಂದು ಭಾವ.

**ವಿ :**—ಅತಿಶಯಿತಃ ವಿಸ್ಮಯಃ ಅತಿವಿಸ್ಮಯಃ, ತಸ್ಯ ಸ್ವರೂಪಂ ತತ್ಸ್ವರೂಪಂ, ತತ್, ಯಸ್ಯ ಭ್ರುವೌ ಯದ್ಭ್ರುವೌ, ಯದ್ಭ್ರುವೋಃ ವಿಜೃಂಭಃ ಯದ್ಭ್ರೂವಿಜೃಂಭಃ ತೇನ, ಶಂಭುಶ್ಚ ಶಕ್ರಶ್ಚ ಶಂಭುಶಕ್ರೌ ತಾಭ್ಯಾಂ ಸಹ ವರ್ತತೇ ಇತಿ ಸಶಂಭುಶಕ್ರಂ.

Rarest Archiver

**ಕ್ರಿ:**—ಅವ+ಆಪಿ ಆಪ್ಸಾತಾಂ ಆಪ್ಸತ, ಆಪ್ಥಾಃ ಆಪ್ಸಾಥಾಂ ಆಬ್ಧ್ವಂ, ಆಪ್ಸಿ ಆಪ್ಸ್ವಹಿ ಆಪ್ಸ್ಮಹಿ. ಅವ ಉಪಸರ್ಗ ಆಪ್ಲೃ (ಆಪ್) ವ್ಯಾಪ್ತೌ, ಕರ್ಮಣಿ ಲುಙ್.

**ಅವ :**—ಇಂದ್ರಪುರಿ ಎಂಬ ವಾದಿಯ ಜತೆಗೆ ವಿವಾದ ಮಾಡುವಾಗ ನಡೆದ ಆಚಾರ್ಯರ ಮತ್ತೊಂದು ಮಹಿಮೆ.

**ಸದಾಕ್ಷ್ಯಮಾಕ್ಷಿಪ್ತಸಮಸ್ತಪಕ್ಷಕೋ**
**ಯತಿಃ ಪ್ರಭುಂ ಕೋಽಪ್ಯಮರಾವತೀಪದಃ ।**
**ಜಿಗೀಷಯಾ ಜ್ಞಾನಸಹಾಯಕರ್ಮಣಃ**
**ಪ್ರಸಾಧ್ಯತಾಂ ಸಾಧನತೇತ್ಯುದಾಹರತ್ ॥೪೨॥**

**ಅ :**—ಸದಾಕ್ಷ್ಯಂ ಆಕ್ಷಿಪ್ತಸಮಸ್ತಪಕ್ಷಕಃ ಅಮರಾವತೀಪದಃ ಕೋಽಪಿ ಯತಿಃ ಜಿಗೀಷಯಾ ಪ್ರಭುಂ ಜ್ಞಾನಸಹಾಯಕರ್ಮಣಃ ಸಾಧನತಾ ಪ್ರಸಾಧ್ಯತಾಂ ಇತಿ ಉದಾಹರತ್.

**ಅರ್ಥ:**—ಸದಾಕ್ಷ್ಯಂ=ಕುಶಲತೆಯಿಂದ ಸಹಿತವಾಗಿ, ಆಕ್ಷಿಪ್ತ= ಖಂಡಿಸಲ್ಪಟ್ಟ, ಸಮಸ್ತಪಕ್ಷಕಃ=ಎಲ್ಲಾ ಸಿದ್ಧಾಂತಗಳುಳ್ಳ, ಅಮರಾವತೀ ಪದಃ=ಅಮರೇಂದ್ರಪುರೀ (ಇಂದ್ರಪುರೀ) ಎಂಬ ಹೆಸರುಳ್ಳ, ಕೋಽಪಿ ಯತಿಃ=ಯಾವನೋ ಒಬ್ಬ ಸಂನ್ಯಾಸಿಯು, ಜಿಗೀಷಯಾ=ಜಯಿಸುವ ಇಚ್ಛೆಯಿಂದ, ಪ್ರಭುಂ=ಶ್ರೀಮಧ್ವಾಚಾರ್ಯರನ್ನು ಕುರಿತು, ಜ್ಞಾನ ಸಹಾಯಕರ್ಮಣಃ = ಜ್ಞಾನವು ಸಹಾಯವಾಗಿವುಳ್ಳ ಕರ್ಮಕ್ಕೆ, ಸಾಧನತಾ=ಪರಮಪುರುಷಾರ್ಥವಾದ ಮೋಕ್ಷವನ್ನು ಕುರಿತು ಅತಿಶಯಿತ ವಾದ ಕಾರಣತ್ವವು, ಪ್ರಸಾಧ್ಯತಾಂ = ಸಮರ್ಥಿಸಲ್ಪಡಲಿ, ಇತಿ= ಹೀಗೆಂದು, ಉದಾಹರತ್=ಹೇಳಿದನು.

**ತಾ:**—ಅಮರೇಂದ್ರಪುರಿ (ಇಂದ್ರಪುರಿ) ಎಂಬ ಹೆಸರಿನ ಮಾಯಾವಾದಿ ಸಂನ್ಯಾಸಿಯೊಬ್ಬನು ಆಗಿನ ಕಾಲದ ಎಲ್ಲಾ ಸಿದ್ಧಾಂತಗಳನ್ನು ಬಹಳ ಕುಶಲತೆಯಿಂದ ಖಂಡಿಸಿದ್ದನು. ಇಂತಹವನು ಒಂದು ದಿನ ಆಚಾರ್ಯರನ್ನು ಭೇಟಿಯಾಗಿ ಅವರ ಜತೆಗೆ ವಾದಮಾಡಿ ಖಂಡಿಸಲು ಬಯಸಿ ಅವರ ಬಳಿಗೆ

Rarest Archiver

ಬಂದನು. ಆಚಾರ್ಯರಿಗೂ ಅಮರೇಂದ್ರಪುರಿಗೂ ವಾದವು ಪ್ರಾರಂಭ ವಾಯಿತು. ಆಚಾರ್ಯರು ಪ್ರತಿವಾದವನ್ನು ಮಂಡಿಸುತ್ತಾ ಪ್ರಸಂಗವಶಾತ್ ಹೀಗೆ ಹೇಳಿದರು – ಜ್ಞಾನಿಯು ಮಾಡಿದ ಕರ್ಮವೇ ಅಕ್ಷಯವಾದ ಮೋಕ್ಷ ವೆಂಬ ಪುರುಷಾರ್ಥಕ್ಕೆ ಸಾಧನವಾಗುತ್ತದೆ. ಅಜ್ಞಾನಿಯು ಮಾಡುವ ಕರ್ಮವು ಬಂಧಕವು. ಹೀಗೆ ಮೋಕ್ಷಕ್ಕೆ ಜ್ಞಾನದ ಸಹಾಯವುಳ್ಳ ಕರ್ಮವೂ ಸಾಧನವಾಗುತ್ತದೆ ಎಂದರು. ಆಚಾರ್ಯರ ಈ ಮಾತನ್ನು ಕೇಳಿ ಆ ಸಂನ್ಯಾಸಿಯು ಜ್ಞಾನದ ಸಹಾಯವುಳ್ಳ ಕರ್ಮಕ್ಕೆ ಮೋಕ್ಷಸಾಧನತ್ವವು ಹೇಗೆಂದು ಸಮರ್ಥಿಸಿ ಸಾಧಿಸಿ ತೋರಿಸಿರಿ ಎಂದು ಹೇಳಿದನು.

**ವಿ:**—ದಕ್ಷಸ್ಯ ಭಾವಃ ದಾಕ್ಷ್ಯಂ ದಾಕ್ಷ್ಯೇಣ ಸಹಿತಂ ಯಸ್ಮಿನ್ ಕರ್ಮಣಿ ತದ್ಯಥಾ ಭವತಿ ತಥಾ ಸದಾಕ್ಷ್ಯಂ, ಸಮಸ್ತಾನಾಂ ಪಕ್ಷಾಃ (ಸಮಸ್ತಾಶ್ಚ ತೇ ಪಕ್ಷಾಶ್ಚ) ಆಕ್ಷಿಪ್ತಾಃ ಸಮಸ್ತಪಕ್ಷಾಃ ಯೇನ ಸಃ ಆಕ್ಷಿಪ್ತ-ಸಮಸ್ತಪಕ್ಷಕಃ, ಬಹುವ್ರೀಹಿಯಲ್ಲಿ ಕಪ್ರತ್ಯಯ, ಅಮರಾವತೀ ಇತಿ ಪದಂ ಯಸ್ಯ ಸಃ, ಜೇತುಂ ಇಚ್ಛಾ ಜಿಗೀಷಾ ತಯಾ, ಜ್ಞಾನಂ ಸಹಾಯಃ ಯಸ್ಯ ತತ್, ಜ್ಞಾನಸಹಾಯಂ ಚ ತತ್ ಕರ್ಮ ಚ ತಸ್ಯ, ಸಾಧನಸ್ಯ ಭಾವಃ ಸಾಧನತಾ.

**ಕ್ರಿ:**—ಪ್ರ + ಸಾಧ್ಯತಾಂ ಸಾಧ್ಯೇತಾಂ ಸಾಧ್ಯಂತಾಂ ಇತ್ಯಾದಿ ರಾಧ–ಸಾಧ ಸಂಸಿದ್ಧೌ ಕರ್ಮಣಿ ಲೋಟ್. ಉದ್ + ಆ + ಅಹರತ್ ಅಹರತಾಂ ಅಹರನ್ ಇತ್ಯಾದಿ ಹೃಞ್–ಹರಣೇ, ಲಙ್.

**ವೃತ್ತ:**—ವಂಶಸ್ಥ, ಲಕ್ಷಣ–ಜತೌ ತು ವಂಶಸ್ಥಮುದೀರಿತಂ ಜರೌ.

**ಅವ:**—ಆಚಾರ್ಯರು ಇಂದ್ರಪುರಿಯನ್ನು ವಾದದಲ್ಲಿ ಗೆದ್ದರು–

**ಸಂಸಾಧಿತಾರ್ಥೇ ಭಗವತ್ಯಯುಕ್ತಿವಿತ್**
**ಪಪ್ರಚ್ಛ ಸ ಜ್ಞಾನಪದಾರ್ಥಮುಗ್ರಧೀಃ |**
**ಜ್ಞಾತಃ ಸ ತೇ ಜ್ಞಾನ್ಯಸಿ ಚೇನ್ನ ಚೇನ್ನ ಸ**
**ಪ್ರಶ್ನೋ ಘಟೇತೇತಿ ನಿರಾಕೃತೈಷ ತಂ** ||೪೩||

**ಅ:**—ಭಗವತಿ ಸಂಸಾಧಿತಾರ್ಥೇ ಸತಿ ಅಯುಕ್ತಿವಿತ್ ಉಗ್ರಧೀಃ

Rarest Archiver

ಸಃ ಜ್ಞಾನಪದಾರ್ಥಂ ಪಪ್ರಚ್ಛ. 'ತ್ವಂ ಜ್ಞಾನೀ ಅಸಿ ಚೇತ್ ಸಃ ತೇ ಜ್ಞಾತಃ ನ ಚೇತ್ ಸಃ ಪ್ರಶ್ನಃ ನ ಘಟೇತ' ಇತಿ ಏಷಃ ತಂ ನಿರಾಕೃತ |

**ಅರ್ಥ:** —ಭಗವತಿ=ಷಡ್ಗುಣೈಶ್ವರ್ಯ ಸಂಪನ್ನರಾದ ಶ್ರೀಮಧ್ವಾಚಾರ್ಯರು, ಸಂಸಾಧಿತಾರ್ಥೇ ಸತಿ=ವಿಷಯವನ್ನು ಚೆನ್ನಾಗಿ ಸಮರ್ಥಿಸಿರಲಾಗಿ (ಚೆನ್ನಾಗಿಸಾಧಿಸಲ್ಪಟ್ಟ ವಿಷಯವುಳ್ಳವರು ಆಗಿರಲಾಗಿ) ಅಯುಕ್ತಿವಿತ್=ಖಂಡಿಸಲು ಯುಕ್ತಿಯನ್ನು ಅರಿಯದ, ಉಗ್ರಧೀಃ ಸಃ=ಕ್ರೂರವಾದ ಬುದ್ಧಿಯುಳ್ಳ ಆ ಸಂನ್ಯಾಸಿಯು, ಜ್ಞಾನಪದಾರ್ಥಂ=ಜ್ಞಾನವೆಂಬ ಪದದ ಅರ್ಥವನ್ನು, ಪಪ್ರಚ್ಛ=ಕೇಳಿದನು. ಏಷಃ=ಈ ಮಧ್ವಾಚಾರ್ಯರು, (ತ್ವಂ) ಜ್ಞಾನೀ ಅಸಿ ಚೇತ್=(ನೀನು) ಜ್ಞಾನವುಳ್ಳವನು ಆಗಿದ್ದರೆ, ಸಃ ತೇ ಜ್ಞಾತಃ = ಆ ಜ್ಞಾನಪದಾರ್ಥವು ನಿನಗೆ (ನಿನ್ನಿಂದ) ತಿಳಿಯಲ್ಪಟ್ಟಿದೆ. ನ ಚೇತ್=ಇಲ್ಲವಾದರೆ (ನೀನು ಜ್ಞಾನಿಯಲ್ಲದಿದ್ದರೆ, ನಿನಗೆ ಜ್ಞಾನಪದಾರ್ಥವು ತಿಳಿದಿಲ್ಲವಾದರೆ) ಸಃ ಪ್ರಶ್ನಃ=ಜ್ಞಾನವೆಂದರೆ ಏನೆಂಬ ಪ್ರಶ್ನೆಯು, ನ ಘಟೇತ=ಕೂಡಲಾರದು.

**ತಾ:**— ಶ್ರೀಮಧ್ವಾಚಾರ್ಯರು ಜ್ಞಾನಸಹಿತವಾದ ಕರ್ಮವು ಮೋಕ್ಷಸಾಧಕವೆಂಬ ವಿಷಯವನ್ನು ಚೆನ್ನಾಗಿ ಸಮರ್ಥಿಸಿದರು. ಅವರ ಮಾತನ್ನು ಖಂಡಿಸಲು ಅಮರೇಂದ್ರಪುರಿಗೆ ಯುಕ್ತಿಯು ಹೊಳೆಯಲಿಲ್ಲ. ಒರಟುಬುದ್ಧಿಯ ಆ ಸಂನ್ಯಾಸಿಯು 'ಜ್ಞಾನವೆಂದರೇನು?' ಎಂದು ಆಚಾರ್ಯರನ್ನು ಕೇಳಿದನು. "ಜ್ಞಾನವೆಂದರೆ ಏನೆಂದು ಕೇಳುವ ನೀನು ಜ್ಞಾನವುಳ್ಳವನೋ ಅಲ್ಲವೋ? ನೀನು ಜ್ಞಾನವುಳ್ಳವನಾದರೆ ಜ್ಞಾನವೆಂದರೆ ಏನೆಂದು ನಿನಗೆ ತಿಳಿದೇ ಇದೆ. ಹೀಗಿದ್ದರೂ ಜ್ಞಾನವೆಂದರೆ ಏನೆಂದುಕೇಳುವ ನೀನು ಹುಚ್ಚನೆಂದಾಗುತ್ತದೆ. ನಿನಗೆ ಜ್ಞಾನವೆಂದರೆ ಏನೆಂದು ತಿಳಿದಿಲ್ಲವಾದರೆ ಶಬ್ದ ಮತ್ತು ಅರ್ಥಗಳನ್ನು ಸರಿಯಾಗಿ ತಿಳಿಯುವ ಸಾಮರ್ಥ್ಯವಿಲ್ಲದ ನೀನು ಜ್ಞಾನವೆಂದರೆ ಏನೆಂದು ಪ್ರಶ್ನೆಯನ್ನು ಹೇಗೆ ಮಾಡಿದೆ? ಆ ಪ್ರಶ್ನೆಮಾಡಿದುದೇ ಸರಿಹೊಂದುವುದಿಲ್ಲ." ಎಂದು ಹೇಳುತ್ತಾ ಆಚಾರ್ಯರು ಆ ಯತಿಯನ್ನು ಖಂಡಿಸಿದರು.

**ವಿ:** — ಸಮ್ಯಕ್ ಸಾಧಿತಃ ಸಂಸಾಧಿತಃ ಸಂಸಾಧಿತಃ ಅರ್ಥಃ ಯೇನ

Rarest Archiver

ಸಃ ಸಂಸಾಧಿತಾರ್ಥಃ ತಸ್ಮಿನ್, ಭಗಂ ಅಸ್ಯ ಅಸ್ತೀತಿ ಭಗವಾನ್ ತಸ್ಮಿನ್, ಯುಕ್ತಿಂ ವೇತ್ತೀತಿ ಯುಕ್ತಿವಿತ್ ನ ಯುಕ್ತಿವಿತ್ ಅಯುಕ್ತಿವಿತ್, ಜ್ಞಾನಂ ಇತಿ ಪದಂ ಜ್ಞಾನಪದಂ, ಜ್ಞಾನಪದಸ್ಯ ಅರ್ಥಃ ಜ್ಞಾನಪದಾರ್ಥಃ ತಂ, ಉಗ್ರಾ ಧೀಃ ಯಸ್ಯ ಸಃ ಉಗ್ರಧೀಃ, ಜ್ಞಾನಂ ಅಸ್ಯ ಅಸ್ತೀತಿ ಜ್ಞಾನೀ ;

ಕ್ರಿ:—ಪಪ್ರಚ್ಛ ಪಪ್ರಚ್ಛತುಃ ಪಪ್ರಚ್ಛುಃ ಇತ್ಯಾದಿ, ಪ್ರಚ್ಛ ಜ್ಞೀಪ್ಸಾಯಾಂ ಲಿಟ್. ಘಟೇತ ಘಟೇಯಾತಾಂ ಘಟೇರನ್ ಇತ್ಯಾದಿ, ಘಟ ಚೇಷ್ಟಾಯಾಂ ವಿಧಿಲಿಙ್. ನಿರ್ ಆ ಅಕೃತ ಅಕೃಷಾತಾಂ ಅಕೃಷತ, ಅಕೃಥಾಃ ಅಕೃಷಾಥಾಂ ಅಕೃಢ್ವಂ, ಅಕೃಷಿ ಅಕೃಷ್ವಹಿ ಅಕೃಷ್ಮಹಿ. ಡುಕೃಞ್ ಕರಣೇ, ಆತ್ಮನೇ. ಲುಙ್.

ವೃತ್ತ:—ಇಂದ್ರವಂಶಾ, ಲಕ್ಷಣ-ಸ್ಯಾದಿಂದ್ರವಂಶಾ ತತಜೈರ-ಸಂಯುತೈಃ ||

ಅವ:—ಇದೇ ರೀತಿಯಲ್ಲಿ ಶ್ರೀಮಧ್ವಾಚಾರ್ಯರು ಅನೇಕ ಸಭೆಗಳಲ್ಲಿ ಜಯಶಾಲಿಗಳಾದರು—

**ವಿತತತಮತಮೋಽಂತಂ ಸಾಧಯಂತ್ಯಾ ನಿತಾಂತಂ**
**ಸದಸಿ ಸದಸಿ ರೇಜೇ ವ್ಯಾಖ್ಯಯಾ ವ್ಯಾಸಶಿಷ್ಯಃ |**
**ಸಕಲಸಮಯಿಹಸ್ತಾಂಭೋಜಬಂಧಾಭಿನಂದೀ**
**ಶರದಿ ಶರದಿ ಚಂದ್ರಶ್ಚಂದ್ರಿಕಾಸಂಪದೇವ ||೪೪||**

ಅ: ವ್ಯಾಸಶಿಷ್ಯಃ ಸದಸಿ ಸದಸಿ ವಿತತತಮತಮೋಽಂತಂ ನಿತಾಂತಂ ಸಾಧಯಂತ್ಯಾ ವ್ಯಾಖ್ಯಯಾ ಚಂದ್ರಃ ಶರದಿ ಶರದಿ (ವಿತತತಮತಮೋಽಂತಂ ಸಾಧಯಂತ್ಯಾ) ಚಂದ್ರಿಕಾಸಂಪದಾ ಇವ ಸಕಲಸಮಯಿಹಸ್ತಾಂಭೋಜಬಂಧಾಭಿನಂದೀ ರೇಜೇ |

ತಾ:—ವ್ಯಾಸಶಿಷ್ಯಃ = ವೇದವ್ಯಾಸರ ಶಿಷ್ಯರಾದ ಶ್ರೀಮಧ್ವಾಚಾರ್ಯರು, ಸದಸಿ-ಸದಸಿ = ಎಲ್ಲಾ ಸಭೆಯಲ್ಲಿಯೂ, ವಿತತತಮ = ಅತ್ಯಂತವಿಸ್ತೃತವಾದ, ತಮಃ = ಅಜ್ಞಾನದ, ಅಂತಂ = ನಾಶವನ್ನು, ಸಾಧಯಂತ್ಯಾ = ಉಂಟುಮಾಡುತ್ತಿರುವ, ವ್ಯಾಖ್ಯಯಾ = ವೇದಾರ್ಥಗಳ ವಿವರಣರೂಪವಾದ ಪ್ರವಚನದಿಂದ, ಚಂದ್ರಃ = ಚಂದ್ರನು, ಶರದಿ =

Rarest Archiver

ಶರದಿ = ಪ್ರತಿಯೊಂದು ಶರತ್ಕಾಲದಲ್ಲಿಯೂ, (ವಿತತತಮತಮೋಽಂತಂ ಸಾಧಯಂತ್ಯಾ = ಎಲ್ಲಾ ಕಡೆ ಹರಡಿರುವ ಕತ್ತಲೆಗೆ ನಾಶವನ್ನು ಸಾಧಿಸುವ) ಚಂದ್ರಿಕಾಸಂಪದಾ ಇವ = ಬೆಳದಿಂಗಳಿನ ಸಮೃದ್ಧಿಯಿಂದಲೋ ಎಂಬಂತೆ, ಸಕಲಸಮಯಿ = ಸಮಸ್ತರಾದ ಸಿದ್ಧಾಂತವನ್ನು ಅರಿತ ವಿದ್ವಾಂಸರ, ಹಸ್ತಾಂಭೋಜಬಂಧ=ಕೈಗಳೆಂಬ ಕಮಲಗಳ ಮುಗಿಯುವಿಕೆಯನ್ನು, (ಕಮಲದಂತಹ ಕೈಗಳ ಅಂಜಲಿಬಂಧವನ್ನು), ಅಭಿನಂದೀ (ಸನ್) = ಅಭಿನಂದಿಸುವವರಾಗಿ, ರೇಜೇ = ವಿರಾಜಿಸಿದರು.

**ತಾ:**—ಚಂದ್ರನು ಪ್ರತಿಯೊಂದು ಶರತ್ಕಾಲದಲ್ಲಿಯೂ, ರಾತ್ರಿಯಲ್ಲಿ ಉದಯಿಸಿ ತನ್ನ ಬೆಳದಿಂಗಳಿನಿಂದ ಕತ್ತಲೆಯನ್ನು ನಾಶಮಾಡಿ, ಕಮಲಗಳನ್ನು ಮೊಗ್ಗನ್ನಾಗಿ ಮಾಡಿ ತನ್ನ ಉದಯವಾದ ಕೂಡಲೇ ಅವುಗಳಿಂದ ಕೈಮುಗಿಸಿಕೊಂಡು, ಅವುಗಳನ್ನು ಅಭಿನಂದಿಸುವಂತೆ ಕಾಣಿಸುತ್ತಾನೆ; ಹಾಗೆ ವಿರಾಜಿಸುತ್ತಾ ಇರುತ್ತಾನೆ. ಹಾಗೆಯೇ ವೇದವ್ಯಾಸರ ಶಿಷ್ಯರಾದ ಶ್ರೀಮಧ್ವಾಚಾರ್ಯರು ಪ್ರತಿಯೊಂದು ಸಭೆಯಲ್ಲಿಯೂ ಪ್ರತಿವಾದಿಗಳನ್ನು ನಿರುತ್ತರರನ್ನಾಗಿ ಮಾಡುತ್ತಿದ್ದರು. ಸಾತ್ತ್ವಿಕಜನರ ಅಜ್ಞಾನವೆಂಬ ತಮಸ್ಸನ್ನು ನಾಶಮಾಡಿ, ಆಯಾ ಸಿದ್ಧಾಂತವನ್ನರಿತ ಎಲ್ಲಾ ವಿದ್ವಾಂಸರಿಂದ ಕೈಮುಗಿಸಿಕೊಂಡು ಅವರನ್ನು ಅಭಿನಂದಿಸುತ್ತಾ ವಿರಾಜಿಸಿದರು.

**ವಿ:**— ಅತ್ಯಂತಂ ವಿತತಂ ವಿತತತಮಂ, ತಚ್ಚ ತತ್ ತಮಶ್ಚ ವಿತತತಮತಮಃ, ತಸ್ಯ ಅಂತಃ ವಿತತತಮತಮೋಽಂತಃ ತಂ; ವ್ಯಾಸಸ್ಯ ಶಿಷ್ಯಃ ವ್ಯಾಸಶಿಷ್ಯಃ, ಸಮಯಃ ಏಷಾಂ ಅಸ್ತೀತಿ ಸಮಯಿನಃ, ಸಕಲಾಶ್ಚ ತೇ ಸಮಯಿನಶ್ಚ ಸಕಲಸಮಯಿನಃ, ಹಸ್ತಾಃ ಅಂಭೋಜಾನೀವ, ಸಕಲಸಮಯಿನಾಂ ಹಸ್ತಾಂಭೋಜಾನಿ, ತೇಷಾಂ ಬಂಧಃ ಸಕಲಸಮಯಿಹಸ್ತಾಂಭೋಜಬಂಧಃ ತಂ ಅಭಿನಂದತೀತಿ ಸಕಲಸಮಯಿಹಸ್ತಾಂಭೋಜಬಂಧಾಭಿನಂದೀ; ಚಂದ್ರಿಕಾಯಾಃ ಸಂಪತ್ ತಯಾ;

**ಕ್ರಿ:**—ರೇಜೇ ರೇಜಾತೇ ರೇಜಿರೇ ಇತ್ಯಾದಿ ರಾಜೃ ದೀಪ್ತೌ ಆತ್ಮನೇ. ಲಿಟ್.

Rarest Archiver

ವೃತ್ತ :— ಮಾಲಿನೀ, ಲಕ್ಷಣ — ನನಮಯಯಯುತೇಯಂ ಮಾಲಿನೀ ಭೋಗಿಲೋಕೈಃ

ಅವ: — ಆಚಾರ್ಯರ ವ್ಯಾಖ್ಯೆಯು (ಪ್ರವಚನವು) ಯಾವ ವಿಷಯ ವನ್ನು ಪ್ರಕಾಶಗೊಳಿಸುತ್ತಿದ್ದಿತು—

**ಜನನಂ ಸಮಯೇ ಸಮಯೇ ಜಗತಃ**
**ಪ್ರಥಿತೇ ಸಮಯೇ ಸಮಯೇದಮಿಂತೇ ।**
**ಸನಿರಾಸಮಯೇऽಸಮಯೇ ಸ್ಥಿತಿಯುಕ್**
**ಸ್ವವಭಾಸಮಯೇऽಸಮಯೇಷ್ಟಧಿಯಾ** ||೪೩||

**ಪದಚ್ಛೇದ:**— ಸಮಯಾ ಇದಂ ಇತೇ ಸನಿರಾಸಂ ಅಯೇ ಅಸಮಯೇ ಸ್ಥಿತಿಯುಕ್ ಸ್ವವಭಾಸಮಯೇ ಅಸಮಯಾ ಇಷ್ಟಧಿಯಾ.

ಅ:—ಸಮಯೇ ಪ್ರಥಿತೇ ಇದಂ ಸಮಯಾ ಇತೇ ಅಸಮಯೇ ಸ್ವವಭಾಸಮಯೇ ಅಯೇ ಅಸಮಯಾ ಇಷ್ಟಧಿಯಾ ಸಮಯೇ ಸಮಯೇ ಸನಿರಾಸಂ ಸ್ಥಿತಿಯುಕ್ ಜಗತಃ ಜನನಂ (ವರ್ತತೇ) ಸಾ ವ್ಯಾಖ್ಯಾ ಇತ್ಯಾದೀನ್ ಪರಮಾನ್ ಅರ್ಥಾನ್ ಪ್ರಕಾಶಯಾಮಾಸ.

ಅ :—ಸಮಯೇ = ವೇದಾಂತಶಾಸ್ತ್ರದಲ್ಲಿ, ಪ್ರಥಿತೇ = ಸರ್ವಶಬ್ದ ವಾಚ್ಯನೆಂದು ಪ್ರಸಿದ್ಧನಾದ, ಇದಂಸಮಯಾ ಇತೇ= ಈ ಜೀವಸಮೂಹದ ಹತ್ತಿರದಲ್ಲಿರುವ (ಪ್ರಾಪ್ತನಾದ) ಅಸಮಯೇ= ಕಾಲಸಂಬಂಧವಾದ ವಿಕಾರ ವಿಲ್ಲದಿರುವ (ಉತ್ಪತ್ತಿನಾಶವಿಲ್ಲದ) ಸು + ಅವಭಾಸಮಯೇ = ಶುದ್ಧವಾದ ಜ್ಞಾನವೇ ಸ್ವರೂಪವಾಗಿ ಉಳ್ಳ, ಅಯೇ = ಭಾಗ್ಯರೂಪನಾದ ಪರಬ್ರಹ್ಮ ನಲ್ಲಿರುವ, ಅಸಮಯಾ ಇಷ್ಟಧಿಯಾ = ಅಸದೃಶವಾದ (ಎಣೆಇಲ್ಲದಿರುವ) ಸ್ವೇಚ್ಛಾವಿಷಯಕವಾದ ಬುದ್ಧಿಯಿಂದ, ಸಮಯೇ ಸಮಯೇ = ಆಯಾ ಕಾಲದಲ್ಲಿ, ಜಗತಃ = ಪ್ರಪಂಚದ, ಸನಿರಾಸಂ = ಸಂಹಾರದಿಂದ ಕೂಡಿದ, ಸ್ಥಿತಿಯುಕ್= ರಕ್ಷಣಸಹಿತವಾದ, ಜನನಂ = ಸೃಷ್ಟಿಯು (ವರ್ತತೇ = ಇದೆ, ಆಗುತ್ತಿದೆ.)

ತಾ :—ಪರಬ್ರಹ್ಮನಾದ ನಾರಾಯಣನು ಸರ್ವಶಬ್ದವಾಚ್ಯನೆಂದು

Rarest Archive

ಪ್ರಸಿದ್ಧನಾಗಿದ್ದಾನೆ. ಅವನು ಇತರ ವಾದಿಗಳು ಹೇಳುವಂತೆ ಅವಾಚ್ಯನಲ್ಲ. ಅವನು ಅನಂತಾನಂತಜೀವರ ಅತ್ಯಂತಸಮೀಪದಲ್ಲಿ ಒಳಗೂ ಹೊರಗೂ ವ್ಯಾಪ್ತನಾಗಿದ್ದಾನೆ. ಅವನು ಜೀವಾಭಿನ್ನನಲ್ಲ. ಅವನಿಗೂ ಅತ್ಯಂತ ಭಿನ್ನಸ್ವರೂಪರಾದ ಭಿನ್ನಕರ್ಮವುಳ್ಳ ಅನಂತ ಜೀವರಿಗೂ ಅಭೇದವು ಉಂಟಾಗಲು ಸಾಧ್ಯವೇ ಇಲ್ಲ. ಅವನಿಗೆ ಕಾಲಕೃತವಾದ ಮುಪ್ಪು ಸಾವು ಮುಂತಾದ ವಿಕಾರಗಳಿಲ್ಲ. ಅವನಲ್ಲಿ ಯಾವ ಬದಲಾವಣೆಯೂ ಇಲ್ಲ. ಅವನು ನಿತ್ಯನು, ಸ್ವಚ್ಛಜ್ಞಾನಸ್ವರೂಪನು. ಅವನು ಮಾಯಾಯುಕ್ತನಾದ ಶಬಲಬ್ರಹ್ಮನಲ್ಲ. ಅವನು ಶುಭಸ್ವರೂಪನು, ಭಾಗ್ಯಸ್ವರೂಪನು ಅವನೇ ನಾರಾಯಣನೆಂಬ ಪರಬ್ರಹ್ಮನು. ಅವನಲ್ಲಿ ಇತರರಲ್ಲಿ ಯಾರಲ್ಲಿಯೂ ಇಲ್ಲ ದಿರುವ ತನ್ನ ಇಚ್ಛಾವಿಷಯಕವಾದ ಬುದ್ಧಿಯಿದೆ. ಅಂದರೆ ಅವನ ಬುದ್ಧಿಯೇ ಇಚ್ಛಾರೂಪವು, ಇಚ್ಛೆಯೇ ಬುದ್ಧಿರೂಪವು, ಇಂತಹ ಇಚ್ಛಾತ್ಮಕ ವಾದ ಬುದ್ಧಿಯನ್ನೇ ಮಾಯಾ ಎಂದು ಹೇಳುತ್ತಾರೆ. ಅದು ಅವನ ಅಧೀನ ವಾಗಿ, ಅವನ ಸ್ವರೂಪವೇ ಆಗಿದೆ. ವಿಶೇಷ ಬಲದಿಂದ ಅಲ್ಲಿ ಭೇದವ್ಯವಹಾರ ವಿದೆ. ಅವನಿಗಿಂತ ಭಿನ್ನವಾದ ಅವನಿಗೆ ಬಂಧಕವಾದ ಮಾಯೆ ಎಂಬುದಿಲ್ಲ. ಅವನ ಇಚ್ಛೆಯೇ ಮಾಯೆಯು. ಇಂತಹ ತನ್ನ ಇಚ್ಛಾತ್ಮಕವಾದ ಮಾಯೆ ಯಿಂದ ಪರಮಾತ್ಮನು ಆಯಾಕಾಲದಲ್ಲಿ ಪ್ರಪಂಚದ ಸೃಷ್ಟಿ ಸ್ಥಿತಿ ಸಂಹಾರ ಗಳನ್ನು ಮಾಡುತ್ತಾನೆ. ಮಾಯಾವಾದಿಗಳು ಹೇಳುವ ಮಾಯೆಯಿಂದ ಈ ಕಾರ್ಯಗಳು ಆಗುವುದಿಲ್ಲ. (ಆಚಾರ್ಯರ ಪ್ರವಚನವು ಇವೇ ಮೊದಲಾದ ಶ್ರೇಷ್ಠವಾದ ವಿಷಯಗಳನ್ನು ಭಕ್ತರಿಗೆ ಪ್ರಕಾಶಗೊಳಿಸಿತು).

ವಿ :—ನಿರಾಸೇನ ಸಹ ವರ್ತತೇ ಇತಿ ಸನಿರಾಸಂ (ಜನನಂ) ನ ವಿದ್ಯತೇ ಸಮಯಃ ಯಸ್ಯ ಸಃ ಅಸಮಯಃ ತಸ್ಮಿನ್, ಸ್ಥಿತ್ಯಾ ಯುಜ್ಯತೇ ಇತಿ ಸ್ಥಿತಿಯುಕ್ (ಜನನಂ) (ಯುಕ್-ಯುಜೀ ಯುಂಜಿ) ಶೋಭನಶ್ಚಾಸೌ ಅವಭಾಸಶ್ಚ ಸ್ವವಭಾಸಃ ಸ್ವವಭಾಸ ಏವ ಸ್ವವಭಾಸಮಯಃ ತಸ್ಮಿನ್, ನ ವಿದ್ಯತೇ ಸಮಾ ಯಸ್ಯಾಃ ಸಾ ಅಸಮಾ ತಯಾ, ಇಷ್ಟಸ್ಯ (ಇಚ್ಛಾ-ಯಾಃ) ಧೀಃ ಇಷ್ಟಧೀಃ ತಯಾ| (ಕ್ರಿಯಾಪದವಿಲ್ಲ).

**ವೃತ್ತ :—**ತೋಟಕ. **ಲಕ್ಷಣ**–ಇಹ ತೋಟಕಮಂಬುಧಿಸೈಃ ಕಥಿತಂ.

Rarest Archiver

ಅವ :—ಶ್ರೀಮಧ್ವಾಚಾರ್ಯರ ವ್ಯಾಖ್ಯಾನವನ್ನೇ ವಿವರಿಸುತ್ತಾರೆ–

ವರ್ತಸ್ವಾಧ್ಯಧಿ ಸರ್ವಂ ದೀವ್ಯೇದಂ
ಸೋಽನಿಶಂ ಸ್ವತಂತ್ರೋ ವಿಷ್ಣುಃ ।
ಉಜ್ಜಾಸಯ ದುಷ್ಟಾನಾಂ ಸಂಸ್ಕುರು
ಸಾಧೂನ್ ಗುಣಾಭಿಪೂರ್ಣೋಽಪ್ಯಗುಣಃ ॥೪೬॥

ಅ :—ಸ್ವತಂತ್ರಃ ಸಃ ವಿಷ್ಣುಃ ಸರ್ವಂ ಅಧಿ ಅಧಿ ವರ್ತಸ್ವ। ಇದಂ ಅನಿಶಂ ದೀವ್ಯ। ದುಷ್ಟಾನಾಂ ಉಜ್ಜಾಸಯ। ಸಾಧೂನ್ ಸಂಸ್ಕುರು। ಗುಣಾಭಿಪೂರ್ಣಃ ಅಪಿ ಅಗುಣಃ।

ಅರ್ಥ:—ಸ್ವತಂತ್ರಃ ಸಃ=ಸ್ವಾಧೀನನಾದ ಆ ನಾರಾಯಣನು, ಸರ್ವಂ ಅಧಿ ಅಧಿ=ಸಮಸ್ತಪ್ರಪಂಚದ ಎಲ್ಲಾ ಪ್ರಾಣಿಗಳ ಅತ್ಯಂತ ಹತ್ತಿರದಲ್ಲಿ (ಹೃದಯದಲ್ಲಿ) ವರ್ತಸ್ವ=ಇದ್ದಾನೆ. ಇದಂ=ಈ ಪ್ರಪಂಚ ದಿಂದ, ಅನಿಶಂ=ಯಾವಾಗಲೂ, ದೀವ್ಯ=ಆಟವಾಡುತ್ತಾನೆ. ದುಷ್ಟಾನಾಂ =ಕೆಟ್ಟ ಅಸುರರನ್ನು, ಉಜ್ಜಾಸಯ=ಕೊಲ್ಲುತ್ತಾನೆ. (ನರಕದಲ್ಲಿ ದುಃಖ ಪಡಿಸಿ ನರಳಿಸುತ್ತಾನೆ.) ಸಾಧೂನ್=ಮೋಕ್ಷಯೋಗ್ಯರಾದ ಸಜ್ಜನರನ್ನು, ಸಂಸ್ಕುರು=ಸಂಸ್ಕರಿಸುತ್ತಾನೆ. (ದೋಷವಿಲ್ಲದವರನ್ನಾಗಿ ಮಾಡುತ್ತಾನೆ.) ಗುಣಾಭಿಪೂರ್ಣಃ ಅಪಿ=ಆನಂದಾದಿಗುಣಗಳಿಂದ ಪರಿಪೂರ್ಣನಾಗಿದ್ದರೂ, ಅಗುಣಃ=ಗುಣವಿಲ್ಲದವನು (ಪ್ರಾಕೃತವಾದ ಸತ್ತ್ವರಜಸ್ತಮೋಗುಣ ರಹಿತನಾಗಿದ್ದಾನೆ.)

ತಾ :—ಶ್ರೀಮನ್ನಾರಾಯಣನು ಸ್ವತಂತ್ರನು. ಅವನು ಪ್ರಪಂಚದ ಎಲ್ಲಾ ಚೇತನರಲ್ಲಿಯೂ ಅಚೇತನಗಳಲ್ಲಿಯೂ ಒಳಗೂ ಹೊರಗೂ ನೆಲಸಿ ದ್ದಾನೆ. ಚೇತನಾಚೇತನಪ್ರಪಂಚದ ಅತ್ಯಂತಸಮೀಪದಲ್ಲಿಯೇ ಇದ್ದು ಅವುಗಳಿಗಿಂತ ಉತ್ತಮನಾಗಿದ್ದಾನೆಯೇ ಹೊರತು ಅಭಿನ್ನನಾಗಿಲ್ಲ. ಏಕೆಂದರೆ ಅವನು ನಿರಂತರವಾಗಿಯೂ ಪ್ರಪಂಚದ ಸೃಷ್ಟಿಮುಂತಾದ್ದನ್ನು ಮಾಡುತ್ತಾ, ಆಟವಾಡುತ್ತಾ ಇರುತ್ತಾನೆ, ಆನಂದಪೂರ್ಣನಾಗಿರುತ್ತಾನೆ ಎಂದು ಶ್ರುತಿ ಗಳು ಸಾರುತ್ತವೆ. ಅವನು ಚೇತನಪ್ರಪಂಚದಲ್ಲಿ ಮೋಕ್ಷಯೋಗ್ಯರಾದ ಸಮಸ್ತಜೀವರನ್ನು ಸಂಸ್ಕರಿಸಿ, ಶುದ್ಧಗೊ[illegible] ಅವರಿಗೆ ಮುಕ್ತಿಯನ್ನು

Rarest Archiver

ಕೊಟ್ಟು ಅಲ್ಲಿಯೂ ಸಲಹುತ್ತಾನೆ. ಅವನು ಶುದ್ಧಾನಂದಾದಿ ಸಮಸ್ತಕಲ್ಯಾಣ ಗುಣಪರಿಪೂರ್ಣನಾಗಿದ್ದರೂ ಅಗುಣನು. ಪ್ರಾಕೃತವಾದ ಸತ್ತ್ವ ರಜಸ್ಸು ತಮಸ್ಸು ಎಂಬ ಮೂರುಗುಣಗಳಿಲ್ಲದವನು. ಹೀಗೆ ಶ್ರೀಪತಿಯು ಸಮಸ್ತ ಪ್ರಪಂಚವಿಲಕ್ಷಣನಾಗಿ ಸರ್ವೋತ್ತಮನಾಗಿ ಇರುತ್ತಾನೆ.

ವಿ :—ಗುಣೈಃ ಅಭಿಪೂರ್ಣಃ, ಸರ್ವಂ ಅಧ್ಯಧಿ ಎಂಬಲ್ಲಿ ಉಭಸರ್ವ-ತಸೋಃ ಕಾರ್ಯಾ ಎಂಬ ವಾರ್ತಿಕದಿಂದ ಸರ್ವಶಬ್ದಕ್ಕೆ ದ್ವಿತೀಯಾವಿಭಕ್ತಿ-ನ ವಿದ್ಯಂತೇ ಗುಣಾಃ ಯಸ್ಯ ಸಃ, ವರ್ತಸ್ವ, ದೀವ್ಯ, ಉಜ್ಝಾಸಯ ಸಂಸ್ಕುರು ಎಂಬಲ್ಲಿ ಭೂತಕಾಲದ ಲಿಟ್‌ನ ಅರ್ಥದಲ್ಲಿ ಲೋಟ್ ಮಧ್ಯಮ ಪುರುಷ ಏಕವಚನವು ಬಂದಿದೆ.

**ವೃತ್ತ** :—ಇಲ್ಲಿ ಆರ್ಯಾಗೀತಿವೃತ್ತ—**ಲಕ್ಷಣ**—ಆರ್ಯಾಪೂರ್ವಾರ್ಧಂ ಯದಿ ಗುರುಣೈಕೇನಾಧಿಕೇನ ನಿಧನೇ ಯುಕ್ತಂ | ಇತರತ್ತದ್ವನ್ನಿಖಿಲಂದಲಂ ಯದೀಯಮುದಿತೇಯಮಾರ್ಯಾ ಗೀತಿಃ ||

**ಅವ:**—ಆಚಾರ್ಯರ ಪ್ರವಚನವು ಏನನ್ನೆಲ್ಲಾ ಪ್ರಕಟಗೊಳಿಸಿತು—

**ಅಸಮೋತ್ತಮೋ ಮತೋಽಸೌ ಶ್ರಿಯಃ**
**ಪತಿರ್ವಿಶ್ವತೋ ವಿಭಿನ್ನಾತ್ಮಾ |**
**ಪರಮಾನ್ ಪ್ರಕಾಮಮರ್ಥಾನ್**
**ಪ್ರಕಾಶಯಾಮಾಸ ಸೇತ್ಯಾದೀನ್** ||೪೭||

ಅ:—ಸಾ 'ಅಸೌ ಶ್ರಿಯಃ ಪತಿಃ ಅಸಮೋತ್ತಮಃ ವಿಶ್ವತಃ ವಿಭಿನ್ನಾತ್ಮಾ ಮತಃ' ಇತ್ಯಾದೀನ್ ಪರಮಾನ್ ಅರ್ಥಾನ್ ಪ್ರಕಾಮಂ ಪ್ರಕಾಶಯಾಮಾಸ |

**ಅರ್ಥ:**—ಸಾ = ಆಚಾರ್ಯರ ಆ ವ್ಯಾಖ್ಯಾನವು (ಪ್ರವಚನವು) ಅಸೌ ಶ್ರಿಯಃ ಪತಿಃ = ಇಂತಹ, ಲಕ್ಷ್ಮೀದೇವಿಯ ಸ್ವಾಮಿಯಾದ ನಾರಾಯಣನು, ಅಸಮೋತ್ತಮಃ = ಸಮರೂ ಅಧಿಕರೂ ಇಲ್ಲದವನು, ವಿಶ್ವತಃ = ಸಮಸ್ತಪ್ರಪಂಚಕ್ಕಿಂತ, ವಿಭಿನ್ನಾತ್ಮಾ = ಅತ್ಯಂತಭಿನ್ನವಾದ ಸ್ವರೂಪವುಳ್ಳವನು, (ಇತಿ = ಎಂದು) ಮತಃ = ತಿಳಿಯಲ್ಪಟ್ಟಿದ್ದಾನೆ,

Rarest Archiver

ಇತ್ಯಾದೀನ್ = ಇವೇ ಮೊದಲಾಗಿ ಉಳ್ಳ, ಪರಮಾನ್ ಅರ್ಥಾನ್ = ಶ್ರೇಷ್ಠವಾದ ಪ್ರಮೇಯಗಳನ್ನು, ಪ್ರಕಾಮಂ ಪ್ರಕಾಶಯಾಮಾಸ = ಬಹಳ ವಾಗಿ ಚೆನ್ನಾಗಿ ಸ್ಪಷ್ಟಗೊಳಿಸಿತು.

**ತಾ:**—'ಈ ಲಕ್ಷ್ಮೀಪತಿಯಾದ ನಾರಾಯಣನಿಗೆ ಸಮರೂ ಇಲ್ಲ, ಉತ್ತಮರೂ ಇಲ್ಲ. ಅವನು ಚೇತನಾಚೇತನಾತ್ಮಕಪ್ರಪಂಚಕ್ಕಿಂತ ಅತ್ಯಂತಭಿನ್ನನು ಎಂದು ಶ್ರುತಿಸ್ಮೃತಿ ಪುರಾಣಾದಿಗಳಿಂದ ತಿಳಿದು ಬರುತ್ತದೆ.' ಇವೇ ಮೊದಲಾದ ಪ್ರಮೇಯಗಳನ್ನು ಶ್ರೀಮಧ್ವಾಚಾರ್ಯರು ವೇದವ್ಯಾಖ್ಯಾನಮಾಡುತ್ತಾ ಚೆನ್ನಾಗಿ ವಿವರಿಸಿದರು.

**ವಿ:**—ಸಮಶ್ಚ ಉತ್ತಮಶ್ಚ ಸಮೋತ್ತಮೌ, ನ ವಿದ್ಯೇತೇ ಸಮೋತ್ತಮೌ ಯಸ್ಯ ಸಃ ಅಸಮೋತ್ತಮಃ, ವಿಭಿನ್ನಃ ಆತ್ಮಾ ಯಸ್ಯ ಸಃ ವಿಭಿನ್ನಾತ್ಮಾ.

**ಕ್ರಿ:**—ಪ್ರ + ಕಾಶಯಾಮಾಸ ಕಾಶಯಾಮಾಸತುಃ ಕಾಶಯಾಮಾಸುಃ ಇತ್ಯಾದಿ, ಕಾಶೃ ದೀಪ್ತೌ ಣಿಜಂತ, ಪ್ರ ಉಪಸರ್ಗ ಲಿಟ್.

**ವೃತ್ತ:**—ಚಪಲಾರ್ಯಾ, ಲಕ್ಷಣ—ಉಭಯಾರ್ಧಯೋರ್ಜಕಾರೌ ದ್ವಿತೀಯತುರ್ಯೌ ಗಮಧ್ಯಗೌ ಯಸ್ಯಾಃ । ಚಪಲೇತಿ ನಾಮ ತಸ್ಯಾಃ ಪ್ರಕೀರ್ತಿತಂ ನಾಗರಾಜೇನ ॥

**ಅವ:**—ಆಚಾರ್ಯರ ವ್ಯಾಖ್ಯಾನದ ವೈಶಿಷ್ಟ್ಯವನ್ನು ಮತ್ತೂ ವಿವರಿಸುತ್ತಾರೆ —

**ಸಮಾನಯಾ ಯಾನಮಾಸ ಮಾಯಯಾ ತತಯಾಯಮಾ ।**
**ನಯಾಸನಾ ನಾಸ ಯಾ ನ ಯಾತನಾಲಲನಾತಯಾ ॥೪೮॥**

**ಪದಚ್ಛೇದ:**—ಸಮಾನಯಾ ಯಾ ಅನಮಾ ಆಸ ಮಾಯಯಾ ತತಯಾ ಆಯಮಾ ನಯಾಸನಾ ನ ಆಸ ಯಾ ನ ಯಾತನಾ ಅಲಲನಾ ಅತಯಾ.

**ಅ:**—ಯಾ ಸಮಾನಯಾ ತತಯಾ ಮಾಯಯಾ ಅನಮಾ ಆಸ. ಆಯಮಾ ಯಾ ನಯಾಸನಾ ನ ಆಸ (ಇತಿ) ನ, ಅತಯಾ ಅಲಲನಾ ಯಾತನಾ ಭವತಿ ।

Rarest Archive

**ಅರ್ಥ :—** ಯಾ = ಯಾವ ಶ್ರೀಮಧ್ವಾಚಾರ್ಯರ ವ್ಯಾಖ್ಯೆಯು (ಪ್ರವಚನವು) ಸಮಾನಯಾ = ಪ್ರಮಾಣಾಭಾಸದಿಂದ ಸಹಿತವಾದ, ತತಯಾ = ವ್ಯಾಪ್ತವಾದ, ಮಾಯಯಾ = ಮಾಯೆಯಿಂದ, ಅನಮಾ = ಖಂಡಿಸಲು ಅಶಕ್ಯವು, ಅಸ = ಆಯಿತೋ, ಅಯಮಾ = ಎಣೆಯಿಲ್ಲದ, ಯಾ = ಯಾವ ವ್ಯಾಖ್ಯಾನವು, ನಯಾಸನಾ = ನ್ಯಾಯದ ಆಶ್ರಯ ವುಳ್ಳದ್ದು, ನ ಅಸ (ಇತಿ) ನ = ಆಗಲಿಲ್ಲವೆಂದು ಇಲ್ಲವೊ, ಅತಯಾ = ಈ ಆಚಾರ್ಯರ ವ್ಯಾಖ್ಯೆಗೆ ವಿರುದ್ಧವಾದ ಮಾಯಾವಾದಿ ವ್ಯಾಖ್ಯೆಯಿಂದ, ಅಲಲನಾ = ವಿಲಾಸವಿಲ್ಲದ (ಸುಖವಿಲ್ಲದ), ಯಾತನಾ = ನರಕಪೀಡೆಯು, ಭವತಿ = ಆಗುತ್ತದೆ.

**ತಾ:—** 'ಇಂದ್ರೋ ಮಾಯಾಭಿಃ ಪುರುರೂಪ ಈಯತೇ' ಪರಮೇಶ್ವರನು ತನ್ನ ಮಾಯೆಗಳಿಂದ ತಾನೇ ಅನೇಕ ಜೀವರೂಪವುಳ್ಳವ ನಾಗಿ ತಿಳಿಯಲ್ಪಡುತ್ತಾನೆ 'ಮಾಯಾಮಾತ್ರಮಿದಂ ದ್ವೈತಂ ಅದ್ವೈತಂ ಪರಮಾರ್ಥತಃ' ಈ ಭೇದಪ್ರಪಂಚವೆಲ್ಲವೂ ಕೇವಲ ಮಾಯಾಸ್ವರೂಪ ವಾದುದು, ಪರಮಾರ್ಥವಾಗಿ ಅದ್ವೈತವು ಅಂದರೆ ಜೀವೇಶ್ವರರ ಅಭೇದವು ಒಂದೇ ಇರುತ್ತದೆ. ಇತ್ಯಾದಿಪ್ರಮಾಣಗಳಿಂದ ತಿಳಿದು ಬರುವ ಮಾಯೆ ಯಿಂದ ಈ ಜಗತ್ತು ಇದ್ದಂತೆ ಕಾಣಿಸುತ್ತಿದೆ. ಪಾರಮಾರ್ಥಿಕವಾಗಿ ಜಗತ್ತೆಂಬುದು ಇಲ್ಲವೇ ಇಲ್ಲ—ಎಂದು ಅದ್ವೈತಿಗಳ ವಾದವು. ಆದರೆ ಈ ಈ ವಾಕ್ಯಗಳಿಂದ ಅದ್ವೈತಿಗಳು ಹೇಳುವ ಮಾಯೆಯು ಸಿದ್ಧಿಸುವುದಿಲ್ಲ. ಇವೆಲ್ಲವೂ ಪ್ರಮಾಣಾಭಾಸಗಳು. ಇವುಗಳಿಂದ ಮಾಯೆಯನ್ನು ಸಾಧಿಸಲು ಬರುವುದಿಲ್ಲ. ಈ ವಾಕ್ಯಗಳಿಗೆ ಯಥಾರ್ಥವಾದ ಬೇರೆ ಅರ್ಥವೇ ಇದೆ.

ಈ ಪ್ರಮಾಣಗಳಲ್ಲಿರುವ ಮಾಯಾಶಬ್ದಕ್ಕೆ **'ಮಾಯೇತಿ ಭಗವತ್-ಪ್ರಜ್ಞಾ'** ಎಂಬ ಪ್ರಮಾಣಾನುಸಾರವಾಗಿ ಪರಮಾತ್ಮನ ಪ್ರಜ್ಞೆ ಅಂದರೆ ಸ್ವರೂಪವಾದ ಜ್ಞಾನ ಎಂದು ಅರ್ಥ. ಈ ಸಮಸ್ತಭೇದಪ್ರಪಂಚವು ಪರಮಾತ್ಮನ ಸ್ವರೂಪಪ್ರಜ್ಞೆಯಿಂದ, ತಿಳಿಯಲ್ಪಟ್ಟಿದೆ ಮತ್ತು ರಕ್ಷಿತವಾಗಿದೆ. ಆದುದರಿಂದ ಅದ್ವೈತಿಗಳು ಹೇಳುವ ಅನಿರ್ವಚನೀಯವಾದ ಮಾಯೆಯು ವಂಧ್ಯಾಕುಮಾರಿಯಂತೆ (ಬಂಜೆಯ ಮಗಳಂತೆ) ಅತ್ಯಂತ, ಅಪ್ರಸಿದ್ಧ

Rarest Archiver

ವಾಯಿತು. ಅದ್ವೈತಿಗಳು ಪ್ರಮಾಣಾಭಾಸದಿಂದ ಮಾಯೆಯನ್ನು ಸಾಧಿಸಿ ಅದು ಸರ್ವತ್ರವ್ಯಾಪ್ತವಾಗಿದೆಯೆಂದೂ ಅದರಿಂದ ಪ್ರಪಂಚಮಿಥ್ಯಾತ್ವವು ಸಿದ್ಧಿಸುತ್ತದೆಯೆಂದೂ ಹೇಳುತ್ತಾರೆ. ಆದರೆ ಹಿಂದೆ ಹೇಳಿದಂತೆ ಆ ಮಾಯೆಯು ಪ್ರಮಾಣಸಿದ್ಧವಲ್ಲ. ಮತ್ತು ಆ ಮಾಯಾವಾದದಿಂದ ದ್ವೈತ ವಾದ (ಭೇದವಾದ)ವನ್ನು ಖಂಡಿಸಲೂ ಸಾಧ್ಯವಾಗುವುದಿಲ್ಲ. ಮಾಯಾ ವಾದಿಗಳು ದ್ವೈತಿಗಳು ಹೇಳುವ ಭೇದವನ್ನು ಹೀಗೆ ಖಂಡಿಸುತ್ತಾರೆ— ಪರಮಾತ್ಮನ ಆನಂದಾದಿಗುಣಗಳಿಗೂ ಪರಮಾತ್ಮನಿಗೂ ಭೇದವಿದೆಯೇ? ಅಭೇದವಿದೆಯೇ? ಭೇದಾಭೇದವಿದೆಯೇ? ಭೇದವಿದೆಯೆಂದಾದರೆ, ಆ ಭೇದಕ್ಕೂ ಗುಣಗುಣ್ಯಾದಿಗಳಿಗೂ ಭೇದವನ್ನು ಹೇಳಬೇಕಾಗುತ್ತದೆ. ಹೀಗೆಯೇ ಅಲ್ಲಿಯೂ ಭೇದವನ್ನು ಹೇಳಿದಾಗ ಭೇದಪರಂಪರೆಯನ್ನು ಹೇಳಬೇಕಾಗುತ್ತದೆ, ಆಗ ಅನವಸ್ಥಾದೋಷವು ಬರುತ್ತದೆ. ಗುಣಗುಣ್ಯಾದಿ ಗಳಿಗೆ ಅಭೇದವನ್ನು ಹೇಳಿದರೆ ಗುಣವು ಒಂದೇ ಉಳಿಯುತ್ತದೆ, ಅಥವಾ ಗುಣಿ (ಗುಣಉಳ್ಳದ್ದು) ಒಂದೇ ಉಳಿಯುತ್ತದೆ. ಭೇದಾಭೇದಪಕ್ಷದಲ್ಲಿ ಹಿಂದಿನ ಎರಡು ಪಕ್ಷಗಳಿಗೆ ಹೇಳಿದ ದೋಷವೂ ಬರುತ್ತದೆ, ಮತ್ತು ಪರಸ್ಪರ ವಿರುದ್ಧವಾದ ಭೇದಾಭೇದವನ್ನು ಹೇಳಿದಾಗ 'ಅಹಂ ಮೂಕಃ' ಎಂಬಂತೆ ಸ್ವವ್ಯಾಹತಿಯು ಬರುತ್ತದೆ. '**ಇಂದ್ರೋ ಮಾಯಾಭಿಃ ಪುರುರೂಪ- ಈಯತೇ**' ಇತ್ಯಾದಿಗಳಿಂದ ಸಮಸ್ತಭೇದಪ್ರಪಂಚವೂ ಮಾಯಾಮಯವು, ವಾಸ್ತವವಲ್ಲ ಎಂದು ತಿಳಿದುಬರುತ್ತದೆ" —ಈ ರೀತಿ ಸತ್ಯವಾದ ಭೇದವನ್ನು ಪ್ರಪಂಚಮಿಥ್ಯಾತ್ವವಾದಿಗಳು ಅಲ್ಲಗಳೆಯುತ್ತಾರೆ. ಆದರೆ ಇವೆಲ್ಲಾ ಪ್ರಮಾಣಾಭಾಸಗಳು, ಇವುಗಳಿಂದ ತೋರಿಬರುವ ವ್ಯಾಪ್ತವಾದ ಮಾಯೆ ಯಿಂದ ಆಚಾರ್ಯರ 'ಪರಮಸಿದ್ಧಾಂತ'ವ್ಯಾಖ್ಯೆಯನ್ನು ತಲೆತಗ್ಗಿಸಲಾಗು ವುದಿಲ್ಲ. ಗುಣ ಮತ್ತು ಗುಣಿ ಮುಂತಾದ ಪದಾರ್ಥಗಳು ವಾಸ್ತವವೆಂದೂ ಅವುಗಳಿಗೆ ಭೇದವೂ ಪಾರಮಾರ್ಥಿಕವೆಂದೂ ಒಪ್ಪಿದರೆ ಯಾವ ದೋಷವೂ ಬರುವುದಿಲ್ಲ. ಗುಣಗುಣ್ಯಾದಿಗಳಿಗೆ ಭೇದವಿದೆಯೋ ಅಭೇದವಿದೆಯೋ ಇತ್ಯಾದಿ ವಿಕಲ್ಪಗಳಿಗೂ ಅನವಸ್ಥಾದಿದೋಷಗಳಿಗೂ ಅವಕಾಶವಿಲ್ಲ. ಯಾವದ್‌ದ್ರವ್ಯ ಭಾವಿಯಾದ (ದ್ರವ್ಯವು ಇರುವವರೆಗೂ ಇರುವ) ಗುಣಗಳಿಗೂ ಗುಣಿಗೂ ನಾವು ಅಭೇದವನ್ನೇ ಒಪ್ಪುತ್ತೇವೆ. ಆ ಪಕ್ಷದಲ್ಲಿ ಗುಣ ಗುಣಿ ಎರಡರಲ್ಲಿ

Rarest Archiver

ಒಂದೇ ಉಳಿಯಬೇಕಾಗುತ್ತದೆ ಎಂಬ ಆಕ್ಷೇಪವು ಬಂದಿದೆ. ಇದು ಗುಣಿ= ಗುಣವುಳ್ಳದ್ದು, ಇದು ಇದರ ಗುಣ, ಇದು ಅವಯವಿ, ಇದು ಅದರ ಅವಯವ ಇತ್ಯಾದಿಭೇದವ್ಯವಹಾರವು ಭೇದದ ಪ್ರತಿನಿಧಿಯಾದ ವಿಶೇಷ ಎಂಬ ಪದಾರ್ಥದಿಂದ ನಿರ್ವಾಹವಾಗುತ್ತದೆ. ಯಾವದ್ದ್ರವ್ಯಭಾವಿ (ಅಂದರೆ ವಸ್ತುವು ಇರುವವರೆಗೆ ಇರುವ) ಗುಣಗಳಿಗೆ ಅತ್ಯಂತಾಭೇದವನ್ನೂ, ಅಯಾವದ್ದ್ರವ್ಯಭಾವಿ (ವಸ್ತುವು ಇರುವಾಗಲೇ ನಾಶವಾಗುವ) ಗುಣಗಳಿಗೆ ಭೇದಾಭೇದವನ್ನೂ ಒಪ್ಪಿದರೆ ಯಾವ ದೋಷವೂ ಬರುವುದಿಲ್ಲ. ಒಟ್ಟಿನಲ್ಲಿ ಮಾಯಾವಾದಿಗಳಿಗೆ ಅಭಿಮತವಾದ ಸದಸದ್ವಿಲಕ್ಷಣರೂಪವಾದ ಮಾಯೆಯು ಸಿದ್ಧಿಸುವುದಿಲ್ಲ. ಆಚಾರ್ಯರ ವ್ಯಾಖ್ಯಾನವು ಅಸಾಧಾರಣ ಮತ್ತು ಅಸದೃಶವಾದುದು. ಅದಕ್ಕೆ ಎಣೆಯೇ ಇಲ್ಲ. ಅವರ ವ್ಯಾಖ್ಯಾನಕ್ಕೆ ಅಷ್ಟಾಂಗಸಹಿತವಾದ ಯುಕ್ತಿಗಳೇ ಪ್ರಬಲವಾದ ಆಧಾರವಾಗಿವೆ.

**ವಿಷಯಃ ತದ್ವಿಚಾರಶ್ಚ ಹೇತೂದಾಹೃತಿಸಂಶಯಾಃ |**
**ಪಕ್ಷೌ ಪ್ರಯೋಜನಂ ಚೈವ ನಯೋಽಷ್ಟಾಂಗಃ ಪ್ರಕೀರ್ತಿತಃ ||**

1) ವಿಷಯ, 2) ವಿಷಯವಿಚಾರ, 3) ಹೇತು (ಕಾರಣ), 4) ಉದಾಹರಣ, 5) ಸಂಶಯ, 6) ಪೂರ್ವಪಕ್ಷ (ವಿಷಯವನ್ನು ಸಾಧಿಸಲು ಉಪಯುಕ್ತವಾದ ಸ್ಥಳ, 7) ದೃಷ್ಟಾಂತದ ಸ್ಥಳ (ಉತ್ತರಪಕ್ಷ) 8) ಸಾಧಿಸಿದ್ದರ ಪ್ರಯೋಜನ ಈ ಎಂಟು ಅಂಗಗಳಿಂದ ಕೂಡಿದ ಯುಕ್ತಿಯನ್ನು ಆಶ್ರಯಿಸಿಯೇ ಆಚಾರ್ಯರ ವ್ಯಾಖ್ಯಾನವು ಪ್ರವೃತ್ತವಾಗಿದೆ. ಇಂತಹ ಪರಮೋಚ್ಚವಾದ ಆಚಾರ್ಯರ ವ್ಯಾಖ್ಯಾನಕ್ಕೆ ವಿರುದ್ಧವಾದ ಮಾಯಾವಾದವ್ಯಾಖ್ಯಾನವನ್ನು ಅವಲಂಬಿಸಿ ಅದರ ಶ್ರವಣಾದಿಗಳನ್ನು ಮಾಡಿದರೆ, ಯಾವ ವಿಲಾಸ, ಸುಖ, ಸಮೃದ್ಧಿ ಇಲ್ಲದ **'ಅಂಧತಮಸ'** ಎಂಬ ನಿತ್ಯ ನರಕಪ್ರಾಪ್ತಿಯಾಗಿ ಅಲ್ಲಿ ಶಾಶ್ವತದುಃಖಭೋಗವೇ ಉಂಟಾಗುತ್ತದೆ.

(ತಯಾ = ಮಾಯಾವಾದಿಗಳಿಂದ ಅಂಗೀಕೃತವಾದ ಮಾಯೆಯಿಂದ **ಅಲಲನಾ ಯಾತನಾ ಭವತಿ** = ಸುಖರಹಿತವಾದ ತೀವ್ರವಾದ ನರಕ ಯಾತನೆಯುಂಟಾಗುತ್ತದೆ. ಮಾಯಾವಾದಿಗಳ ಮಾಯೆಯನ್ನು ಅಂಗೀಕರಿಸಿದರೆ ಅಂಧತಮಸದಲ್ಲಿ ಬಹಳವಾದ ದುಃಖವುಂಟಾಗುತ್ತದೆ.)

Rarest Archive

ಮೇಲ್ನೋಟಕ್ಕೆ ಬಲವತ್ತಾಗಿ ಕಂಡುಬಂದರೂ ಪ್ರಮಾಣಾಭಾಸದ ಮೇಲೆ ನಿಂತಿರುವ, ಪ್ರಳಯಕಾಲದ ಕತ್ತಲೆಯಂತೆ ಎಲ್ಲೆಡೆಯಲ್ಲಿಯೂ ವ್ಯಾಪಿಸಿರುವ ಅದ್ವೈತಶಾಸ್ತ್ರರೂಪವಾದ ಮಾಯೆಯಿಂದಲೂ ಶ್ರೀಹರಿಗೆ ಸಂಪೂರ್ಣವಾಗಿ ಅಭಿಮತವಾದ ಶ್ರೀಮಧ್ವಾಚಾರ್ಯರ ವ್ಯಾಖ್ಯಾನವನ್ನು ಖಂಡಿಸಲು ಸಾಧ್ಯವಿಲ್ಲ, ಆನಂದತೀರ್ಥರ ವ್ಯಾಖ್ಯಾನಕ್ಕೆ ಸರಿದೂಗುವ ವ್ಯಾಖ್ಯಾನವೇ ಇಲ್ಲ. ಉತ್ತಮನ್ಯಾಯದಿಂದ ಕೂಡಿದ ಇದಕ್ಕೆ ವಿರುದ್ಧ ವಾದ ಅದ್ವೈತಶಾಸ್ತ್ರಾನುಸರಣದಿಂದ ಅತ್ಯಂತ ದುಃಖಕರವಾದ ನಿತ್ಯ ನರಕಪೀಡೆಯುಂಟಾಗುತ್ತದೆ' ಎಂದು ಪರಮತಾತ್ಪರ್ಯವು.

**ವಿ:**— ಮಾನ್ಯೈಃ ಸಹ ವರ್ತತೇ ಇತಿ ಸಮಾನಾ ತಯಾ, ನ ವಿದ್ಯತೇ ನಮಃ ನಮನಂ (ಬಗ್ಗುವಿಕೆ, ಸೋಲು) ಯಸ್ಯಾಃ ಸಾ ಅನಮಾ, ನ ವಿದ್ಯತೇ ಯಮಂ (ದ್ವಂದ್ವಂ ದ್ವಿತಯಂ ಯಮಂ ಯಮಲಂ –ಹಲ ಕೋಶ ಎರಡನೆಯದು) ಯಸ್ಯಾಃ ಸಾ ಅಯಮಾ, [ಅಥವಾ ನ ವಿದ್ಯತೇ ಯಮಃ (ಯಮಃ ಯಮನಂ ಪ್ರತಿಬಂಧಃ = ತಡೆ) ಯಸ್ಯಾಃ ಸಾ] ನಯಃ ಆಸನಂ ಯಸ್ಯಾಃ ಸಾ ನಯಾಸನಾ, ನ ವಿದ್ಯತೇ ಲಲನಂ ಯಯಾ ಸಾ ಅಲಲನಾ, ನ ಸಾ ಅಸಾ, (ಅಸಾ ಅತೇ ಅತಾಃ ಇತ್ಯಾದಿ ರೂಪಗಳು) ತಯಾ, ಅತಯಾ |

**ಕ್ರಿ:**— ಆಸ ಎಂಬುದು ತಿಙಂತಪ್ರತಿರೂಪಕ ಅವ್ಯಯ (ತಿಙಂತ-ದಂತೆ ಕಾಣಿಸುವ ತಿಙಂತವಲ್ಲದ ಅವ್ಯಯಶಬ್ದ).

**ಅಲಂಕಾರ**-ಇಲ್ಲಿ ನಾಲ್ಕು ಪಾದಗಳಲ್ಲಿ ಒಂದೊಂದು ಪಾದವನ್ನು ಹಿಂದು ಮುಂದಾಗಿ ಓದಿದರೂ ವ್ಯತ್ಯಾಸಬರುವುದಿಲ್ಲ. ರಂಗನಗರಂ, ಜಂಬೀರಬೀಜಂ, ಎಂಬಂತೆ **ಸ ಮಾ ನ ಯಾ ಯಾ ನ ಮಾ ಸ** = **ಸಮಾನಯಾಯಾನ ಮಾಸ** ಎಂದೇ ಕೊನೆಯಿಂದ ಹಿಂದೆ ಓದಿದಾಗಲೂ ಶ್ಲೋಕ ಪಾದವು ಇರುತ್ತದೆ. ಇದು ಒಂದು ರೀತಿಯ ಯಮಕ ಎಂಬ ಶಬ್ದಾಲಂಕಾರ. ಇದನ್ನು ಸರ್ವತೋಭದ್ರ ಎಂದೂ ಹೇಳುತ್ತಾರೆ.

**ವೃತ್ತ :**— ಯುಗ್ಮವಿಪುಲಾ, –**ಲಕ್ಷಣ**–ಯಸ್ಯಾಂ ಲಃ ಸಪ್ತಮೋ-ಯುಗ್ಮೇ ಸಾ ಯುಗ್ಮ ವಿಪುಲಾ ಮತಾ.

Rarest Archiver

**ಅವ:**— ಶ್ರೀಮತ್‌ಆನಂದತೀರ್ಥರು ಕುರುಕ್ಷೇತ್ರಕ್ಕೆ ಬಂದು ತನ್ನ ಮಹಿಮೆಯನ್ನು ತೋರಿದರು—

**ಪ್ರಾಜ್ಞೋ ರಾಜ್ಞಾಂ ತ್ರಿದಿವಪದವೀಂ**
**ಕೌರವಂ ಕ್ಷೇತ್ರಮಾಪ್ತಃ**
**ಸಸ್ಮಾರಾಥ ಸ್ವವಿಹೃತಿಪತದ್ಧಸ್ತಿಯುದ್ಧೋತ್ಸವಾನಾಂ ।**
**ಸತ್ಯಾತ್ಮಾದ್ಯೈರಿಹ ಪರಿವೃತೋ ಭಾವಿಮಾರೀಚದೃಗ್ಭಿಃ**
**ವಿಸ್ಮೇರೈಃ ಸ್ವೈರ್ನಿಜನೃಪತನೂಹೇತಿದೃಷ್ಟ್ಯಾತಿತುಷ್ಟೈಃ॥೪೯॥**

**ಅ:**—ಅಥ ರಾಜ್ಞಾಂ ತ್ರಿದಿವಪದವೀಂ ಕೌರವಂ ಕ್ಷೇತ್ರಂ ಆಪ್ತಃ ನಿಜನೃಪತನೂಹೇತಿದೃಷ್ಟ್ಯಾ ಅತಿತುಷ್ಟೈಃ ವಿಸ್ಮೇರೈಃ ಭಾವಿಮಾರೀಚ-ದೃಗ್ಭಿಃ ಸತ್ಯಾತ್ಮಾದ್ಯೈಃ ಪರಿವೃತಃ ಪ್ರಾಜ್ಞಃ ಇಹ ಸ್ವ-ವಿಹೃತಿ ಪತದ್ಧಸ್ತಿಯುದ್ಧೋತ್ಸವಾನಾಂ ಸಸ್ಮಾರ ।

**ಅರ್ಥ :**—ಅಥ = ಅನಂತರ, ರಾಜ್ಞಾಂ=ಮಹಾಭಾರತಯುದ್ಧದಲ್ಲಿ ಪ್ರಾಣ ತೊರೆದ ಕ್ಷತ್ರಿಯರಾಜರ, ತ್ರಿದಿವಪದವೀಂ = ಸ್ವರ್ಗಪ್ರಾಪ್ತಿಗೆ ದಾರಿಯಂತಿರುವ, ಕೌರವಂ ಕ್ಷೇತ್ರಂ=ಕುರು ಎಂಬ ರಾಜನು ನಿರ್ಮಿಸಿದ ಪವಿತ್ರಸ್ಥಳವನ್ನು, (ಕುರುಕ್ಷೇತ್ರವನ್ನು), ಆಪ್ತಃ=ತಲುಪಿದ, ನಿಜ= ತನ್ನ, ನೃಪತನೂ=ರಾಜನಾದ ಭೀಮಸೇನನ ಶರೀರಸಂಬಂಧಿಯಾದ, ಹೇತಿ=ಆಯುಧವಾದ ಗದೆಯ, ದೃಷ್ಟ್ಯಾ = ದರ್ಶನದಿಂದ, ಅತಿತುಷ್ಟೈಃ = ಬಹಳ ಸಂತೋಷಪಟ್ಟ, ವಿಸ್ಮೇರೈಃ = ಬೆರಗಾದ, ಭಾವಿ = ಮುಂದೆ ಬರಲಿರುವ, ಮಾರೀಚ = ಮಾರೀಚನನ್ನು ದೃಗ್ಭಿಃ = ನೋಡಿದ, ಸತ್ಯಾತ್ಮಾದ್ಯೈಃ=ಸತ್ಯತೀರ್ಥರೇ ಮೊದಲಾಗಿ-ಉಳ್ಳ, ಸ್ವೈಃ=ತನ್ನವರಿಂದ (ಶಿಷ್ಯರಿಂದ), ಪರಿವೃತಃ = ಸುತ್ತುವರಿಯಲ್ಪಟ್ಟ, ಪ್ರಾಜ್ಞಃ= ಶ್ರೀಪೂರ್ಣಪ್ರಜ್ಞಾಚಾರ್ಯರು, ಇಹ= ಈ ಕುರುಕ್ಷೇತ್ರದಲ್ಲಿ, ಸ್ವವಿಹೃತಿ= ತನ್ನ ಕ್ರೀಡಾಮಾತ್ರದಿಂದ, ಪತತ್=ಸತ್ತುಬಿದ್ದ, ಹಸ್ತಿ=ಆನೆಗಳೊಡನೆ, ನಡೆದಿದ್ದ, ಯುದ್ಧೋತ್ಸವಾನಾಂ = ಯುದ್ಧವೆಂಬ ಉತ್ಸವಗಳನ್ನು (ಸಂತೋಷಕರವಾದ ವ್ಯಾಪಾರಗಳನ್ನು), ಸಸ್ಮಾರ=ಸ್ಮರಿಸಿದರು.

**ತಾ:**—ಶ್ರೀಮಧ್ವಾಚಾರ್ಯರು ಹಿಂದೆ ಹೇಳಿದಂತೆ ಶಾಸ್ತ್ರಪ್ರವಚನ

Rarest Archiver

ಮಾಡುತ್ತಾ ಇದ್ದರು. ಇದೇ ಸಂದರ್ಭದಲ್ಲಿ ಸಂಚಾರಮಾಡುತ್ತಾ ಹಿಂದೆ ಮಹಾಭಾರತಯುದ್ಧದಲ್ಲಿ ಸಾವಿರಾರು ಮಂದಿ ಕ್ಷತ್ರಿಯರು ಯುದ್ಧಮಾಡಿ ಸ್ವರ್ಗಪಡೆಯಲು ಕಾರಣವಾದ ಕುರುಕ್ಷೇತ್ರವೆಂಬ ಸ್ಥಳಕ್ಕೆ ಬಂದರು. ಅಲ್ಲಿ ಹಿಂದೆ ತಾನು ಆಟದಂತೆ ಯುದ್ಧ ನಡೆಸುತ್ತಿದ್ದಾಗ ಆನೆಗಳು ತನ್ನ ಪರಾಕ್ರಮದ ಎದುರು ನಿಲ್ಲಲಾರದೆ ಬಿದ್ದು ಹೋಗುತ್ತಿದ್ದ ಘಟನೆಗಳನ್ನು ಸ್ಮರಿಸಿದರು. ಅಲ್ಲಿ ತಪಸ್ಸುಮಾಡುತ್ತಿದ್ದ ಯಾವನೋ ಒಬ್ಬನನ್ನು ನೋಡಿ ಸತ್ಯತೀರ್ಥರೇ ಮೊದಲಾದ ಶಿಷ್ಯರು ಇವನು ಮಹಾಮಹಿಮನು' ಎಂದರು. ಆಗ ಆಚಾರ್ಯರು 'ಇವನು ಮಹಾಡಾಂಭಿಕನು, ಮುಂದಿನ ಕಲ್ಪದಲ್ಲಿ ಇವನೇ ಮಾರೀಚನಾಗುವನು' ಎಂದರು. ಆಚಾರ್ಯರು ಮಹಾಭಾರತಯುದ್ಧ ನಡೆದ ಸ್ಥಳದಲ್ಲಿಯೇ ಒಂದು ಪ್ರದೇಶದಲ್ಲಿ ಭೂಮಿ ಯನ್ನು ಅಗೆಸಿ ತನ್ನ ಭೀಮಾವತಾರದ ಗದೆಯನ್ನು ತೋರಿಸಿದರು. ಆಚಾರ್ಯರ ಈ ತ್ರಿಕಾಲಜ್ಞಾನ ಮತ್ತು ಮಹಾಮಹಿಮೆಗಳನ್ನು ನೋಡಿ ಶಿಷ್ಯರೆಲ್ಲರೂ, ಬೆರಗಾದರು, ಸಂತೋಷಪಟ್ಟರು.

**ವಿಶೇಷಾಂಶ :**— ಯೋಧೋಽತ್ರ ರಾಜಾಹಮಿತೀರಿತೋಽಮುನಾ —
ತವಾಯುಧಂ ಕ್ವೇತಿ ಜಗಾದ ಸತ್ಯವಾಕ್ ।
ಖಾತೇಽಮುನೋಕ್ತೇ ಕುತಲೇ ಮಹಾಗದಾಂ
ದೃಷ್ಟ್ವಾ ಚ ವಾಚಂ ಶ್ರದಧುರ್ಗುರುಂ ಹಿ ತೇ ॥
ತಪಸ್ವಿವತ್ ಸ್ಥಿತಂ ಡಾಂಭಂ ದೃಷ್ಟ್ವಾ ಮಾರೀಚಮಭ್ಯಧಾತ್ ।
ಮಧ್ವಃ ಪರೀಕ್ಷಯಾ ಚೈನಂ ತೇ ವಿಷ್ಣುದ್ವೇಷಿಣಂ ವಿದುಃ ॥

**ಭಾವಪ್ರಕಾಶಿಕಾದಲ್ಲಿ** ಹೇಳಿರುವ ಪರಂಪರಾಗತವಾದ ಈ ಶ್ಲೋಕ ಗಳಿಂದ, ಆಚಾರ್ಯರು ತನ್ನ ಗದೆಯನ್ನು ತೋರಿಸಿದರೆಂದೂ, ತಪಸ್ವಿ ಯಂತೆ ಕಾಣುತ್ತಿದ್ದ ಒಬ್ಬ ಡಾಂಭಿಕನನ್ನು ಇವನು ಮುಂದೆ, ಮಾರೀಚ ನಾಗುವವನು ಎಂದು ಹೇಳಿದರೆಂದೂ ತಿಳಿದು ಬರುತ್ತದೆ.

ವಿ :—ತ್ರಿದಿವಸ್ಯ ಪದವೀ ತಾಂ, ಕುರೋಃ ಇದಂ ಕೌರವಂ ತತ್, ಸ್ವಸ್ಯ ವಿಹೃತಿಃ, ಸ್ವವಿಹೃತ್ಯಾ ಪತಂತಃ, ಸ್ವವಿಹೃತಿಪತಂತಶ್ಚತೇ ಹಸ್ತಿನಶ್ಚ, ಸ್ವವಿಹೃತಿಪದದ್ಧಸ್ತಿಭಿಃ ಯುದ್ಧಾನಿ, ಸ್ವವಿಹೃತಿಪತದ್ಧಸ್ತಿಯುದ್ಧಾನ್ಯೇವ

Rarest Archiver

ಉತ್ಸವಾಃ ತೇಷಾಂ, ಸತ್ಯಾತ್ಮಾ ಆದ್ಯಃ ಯೇಷಾಂ ತೇ ತೈಃ; ಭಾವೀ ಚಾಸೌ ಮಾರೀಚಶ್ಚ ಭಾವಿಮಾರೀಚಂ ಪಶ್ಯಂತೀತಿ ಮಾರೀಚದೃಶಃ ತೈಃ, ನೃಪಸ್ಯ ತನೂಃ, ನಿಜಾ ಚ ಸಾ ನೃಪತನೂಶ್ಚ, ನಿಜನೃಪತನ್ವಾಃ ಹೇತಿಃ, ನಿಜನೃಪತನೂಹೇತೇಃ ದೃಷ್ಟಿಃ ತಯಾ, ಅತ್ಯಂತಂ ತುಷ್ಟಾಃ ತೈಃ ||

**ಕ್ರಿ**:—ಸಸ್ಮಾರ ಸಸ್ಮರತುಃ ಸಸ್ಮರುಃ ಇತ್ಯಾದಿ. ಸ್ಮೃ ಚಿಂತಾಯಾಂ ಪರ. ಲಿಟ್.

**ವೃತ್ತ**:— ಮಂದಾಕ್ರಾಂತಾ — ಲಕ್ಷಣ–ಮಂದಾಕ್ರಾಂತಾ ಜಲಧಿ ಷಡಗ್ಯೈಃ ಮ್ಭೌ ನತೌ ತಾದ್ ಗುರೂ ಚೇತ್.

**ಅವ**:—ಆಚಾರ್ಯರು ಹೃಷೀಕೇಶಕ್ಕೆ ಹೋದಾಗ ರುದ್ರದೇವರು ಅವರನ್ನು ಸತ್ಕರಿಸಿದರು—

**ವಿಪ್ರಾತ್ಮೇಶಃ ಕ್ಷಣಾರ್ಥಂ ಕೃತನತಿರಸಿತಶ್ರೀರ್ಹೃಷೀಕೇಶದೇಶೇ**
**ಸ್ಪಷ್ಟಂ ದೃಷ್ಟೋಽಪ್ಯದೃಷ್ಟಃ ಸಪದಿ ವಿಹಿತವಾನ್**
**ವಿಸ್ಮಯಂ ದೇಹಭಾಜಾಮ್ |**
**ಸ್ವಸ್ನೇ ಸ್ವಪ್ರೇರಿತಾನ್ಯಸ್ಥಲಗನಿಜನರೋಪಾಹೃತೈರ್ಭಕ್ಷ್ಯಭೋಜ್ಯೈಃ**
**ಪ್ರಾಜ್ಯೈಃ ಪ್ರಾಭೋಜಯತ್ ಸ್ವಂ ಗುರುಮಖಿಲಗುರುಂ**
**ವೇದಯನ್ ವೇದಬಂಧುಂ ||೩೦||**

**ಅ**:— ಹೃಷೀಕೇಶದೇಶೇ ವಿಪ್ರಾತ್ಮಾ ಕ್ಷಣಾರ್ಥಂ ಕೃತನತಿಃ ಅಸಿತಶ್ರೀಃ ಈಶಃ ಸ್ಪಷ್ಟಂ ದೃಷ್ಟೋಽಪಿ ಅದೃಷ್ಟಃ (ಸನ್) ದೇಹಭಾಜಾಂ ವಿಸ್ಮಯಂ ವಿಹಿತವಾನ್‌ಸನ್ ಸ್ವಸ್ನೇ ಸ್ವಪ್ರೇರಿತಾನ್ಯಸ್ಥಲಗನಿಜನರೋ- ಪಾಹೃತೈಃ ಭಕ್ಷ್ಯಭೋಜ್ಯೈಃ ಅಖಿಲಗುರುಂ ವೇದಬಂಧುಂ ಸ್ವಂ ಗುರುಂ ವೇದಯನ್ ತಂ ಪ್ರಾಭೋಜಯತ್ |

**ಅರ್ಥ**:—ಹೃಷೀಕೇಶದೇಶೇ = ಹೃಷೀಕೇಶಕ್ಷೇತ್ರದಲ್ಲಿ, ವಿಪ್ರಾತ್ಮಾ = ಬ್ರಾಹ್ಮಣನ ದೇಹವುಳ್ಳ, ಕ್ಷಣಾರ್ಥಂ = ಭಿಕ್ಷೆಯ ಆಮಂತ್ರಣಕ್ಕೋಸ್ಕರ, ಕೃತನತಿಃ = ನಮಸ್ಕಾರಮಾಡಿರುವ, ಅಸಿತಶ್ರೀಃ = ಬಿಳಿಯ ದೇಹಕಾಂತಿಯುಳ್ಳ, ಈಶಃ = ಮಹಾರುದ್ರದೇವರು, ಸ್ಪಷ್ಟಂ ದೃಷ್ಟಃ ಅಪಿ = ಚೆನ್ನಾಗಿ

ನೋಡಲ್ಪಟ್ಟರೂ, ಸಪದಿ ಅದೃಷ್ಟಃ = ಕೂಡಲೇ ಅದೃಶ್ಯನಾಗಿ, ದೇಹಭಾಜಾಂ = (ಅಲ್ಲಿದ್ದ) ಎಲ್ಲಾ ಮಾನವರಿಗೂ, ವಿಸ್ಮಯಂ ವಿಹಿತವಾನ್ ಸನ್ = ಆಶ್ಚರ್ಯವನ್ನು ಉಂಟುಮಾಡಿದವನಾಗಿ, ಸ್ವಪ್ನೇ = ಸ್ವಪ್ನದಲ್ಲಿ, ಸ್ವಪ್ರೇರಿತ = ತನ್ನಿಂದ ಪ್ರೇರಿತನಾದ, ಅನ್ಯಸ್ಥಲಗ = ಮತ್ತೊಂದು ಶಿವಕ್ಷೇತ್ರದಲ್ಲಿರುವ, ನಿಜನರ = ಶಿವಕ್ಷೇತ್ರಾಧಿಕಾರಿಯಾದ ತನ್ನ ಭಕ್ತನಿಂದ, ಉಪಾಹೃತೈಃ = ತರಲ್ಪಟ್ಟ, ಪ್ರಾಜ್ಯೈಃ = ಹೆಚ್ಚಾದ, ಭಕ್ಷ್ಯಭೋಜ್ಯೈಃ = ಭಕ್ಷ್ಯಗಳು ಮತ್ತು ಭೋಜನಪದಾರ್ಥಗಳಿಂದ, ಅಖಿಲಗುರುಂ = ಸಮಸ್ತ ಲೋಕಗಳಿಗೂ ಗುರುವಾದ, ವೇದಬಂಧುಂ = ವೇದರಕ್ಷಕರಾದ, ಶ್ರೀಮಧ್ವಾಚಾರ್ಯರನ್ನು, ಸ್ವಂ ಗುರುಂ = ತನ್ನ ಗುರುವನ್ನಾಗಿಯೂ, ವೇದಯನ್ = ತಿಳಿಸುತ್ತಾ, (ತಂ = ಅವರನ್ನು) ಪ್ರಾಭೋಜಯತ್ = ಭೋಜನಮಾಡಿಸಿದರು.

ತಾ:- ಆಚಾರ್ಯರು ಒಂದಾನೊಂದು ದಿನ ಶ್ರೀಹೃಷೀಕೇಶಕ್ಷೇತ್ರದಲ್ಲಿ ತಂಗಿದ್ದರು. ಆ ದಿನ ಶುಭ್ರವರ್ಣದ ಶ್ರೀಮಹಾರುದ್ರದೇವರು ಬ್ರಾಹ್ಮಣ ರೂಪವನ್ನು ತಾಳಿ ಎಲ್ಲಾ ಜನರೂ ನೋಡುತ್ತಿರುವಾಗಲೇ ಶ್ರೀಮಧ್ವಾಚಾರ್ಯರ ಹತ್ತಿರ ಬಂದು ನಮಸ್ಕರಿಸಿ 'ಪರಮಪೂಜ್ಯರಾದ ನನ್ನ ತಂದೆಯಾದ ಜಗದ್ಗುರುವಾದ ಪವಮಾನರೇ ! ನಾನು ನಾಳೆಯ ದಿನ ಭಿಕ್ಷೆಗಾಗಿ ತಮ್ಮನ್ನು ಆಹ್ವಾನಿಸಲು ಬಂದಿದ್ದೇನೆ. ದಯವಿಟ್ಟು ನಾನು ಕೊಡುವ ಭಿಕ್ಷೆಯನ್ನು ಸ್ವೀಕರಿಸಿ ಅನುಗ್ರಹಿಸಬೇಕು' ಎಂದು ಪ್ರಾರ್ಥಿಸಿ ಎಲ್ಲರೂ ನೋಡುತ್ತಿದ್ದಂತೆಯೇ ಅದೃಶ್ಯರಾದರು. ಎಲ್ಲಾ ಜನರೂ ಆಶ್ಚರ್ಯಪಟ್ಟರು. ಅನಂತರ ಆ ಮಹಾದೇವರು ಮತ್ತೊಂದು ಶಿವಕ್ಷೇತ್ರದಲ್ಲಿದ್ದ ತನ್ನ ಭಕ್ತನಾದ ಕ್ಷೇತ್ರಾಧಿಕಾರಿಗೆ ಸ್ವಪ್ನದಲ್ಲಿ ತನ್ನ ನಿಜರೂಪದಿಂದ ಕಾಣಿಸಿಕೊಂಡು, 'ಈ ಮುಖ್ಯಪ್ರಾಣಾವತಾರರಾದ ಶ್ರೀಮಧ್ವಾಚಾರ್ಯರು ಸಮಸ್ತ ಸಾತ್ತ್ವಿಕಜೀವರಿಗೂ ಗುರುಗಳು, ವೇದಗಳ ನಿಜವಾದ ಅರ್ಥಗಳನ್ನು ವಿವರಿಸುವುದರಿಂದ ವೇದರಕ್ಷಕರು, ವೇದಸಿಂಧುಗಳಾದ ಇವರು ವೇದಬಂಧುಗಳು, ಎಲೈ ನನ್ನ ಭಕ್ತನೇ ! ಇಂತಹ ಆಚಾರ್ಯರು ಇಲ್ಲಿಯೇ ಹತ್ತಿರದಲ್ಲಿ ಹೃಷಿಕೇಶದಲ್ಲಿ ತಂಗಿದ್ದಾರೆ. ಅವರಿಗೆ ಸರಿಯಾಗಿ

Rarest Archiver

ಭಿಕ್ಷಾಪ್ರದಾನ ಮಾಡಿ ಪೂಜಿಸು' ಎಂದು ಅಪ್ಪಣೆ ಮಾಡಿದನು, ಪ್ರೇರಿಸಿದನು. ಆ ಭಕ್ತನು ಮಹೇಶ್ವರನ ಆಜ್ಞೆಯಂತೆ ಎಲ್ಲಾ ವಿಧವಾದ ಉತ್ತಮವಾದ ಭಕ್ಷ್ಯಭೋಜ್ಯಗಳನ್ನು ಸಿದ್ಧಗೊಳಿಸಿ, ಹೃಷೀಕೇಶಕ್ಷೇತ್ರಕ್ಕೆ ತಂದು, ಆಚಾರ್ಯರಿಗೆ ಸಮರ್ಪಿಸಿ ಅವರಿಗೆ ಭೋಜನಮಾಡಿಸಿದನು.

**ವಿಶೇಷಾಂಶ:**—ತತೋಽಯಮಾಯಾತಿ ತಮರ್ಚಯೇತಿ ಸ್ಥಾನಾಧಿಕಾರೀ ಜಟಿನಂ ತ್ರಿಶೂಲಿನಂ। ಸ್ವಪ್ನೇ ಬ್ರುವಾಣಂ ತ್ರಿರವೇಕ್ಷ್ಯ ದೂರತಃ ಪ್ರಾಯಾದುದಂತಂ ಚ ಜಗಾದ ವಿಸ್ಮಿತಃ॥ **ಭಾವಪ್ರಕಾಶಿಕಾ**-(ತತ= ತಾತ=ತಂದೆ. ಪ್ರೀತಿಯಿಂದ ಹೇಳುವಾಗ ತಾತ ಎಂಬ ಪದವನ್ನು ತತಎಂದಿದ್ದಾರೆ) "ನನ್ನ ಪ್ರೀತಿಯ ತಂದೆಯು ಇಲ್ಲಿಗೆ ಬಂದಿದ್ದಾರೆ. ಅವರನ್ನು ಪೂಜಿಸು ಎಂದು ಶಿವಕ್ಷೇತ್ರಾಧಿಕಾರಿಗೆ ಜಟಾಧಾರಿಯಾದ, ತ್ರಿಶೂಲಧರನಾದ ಶಂಕರನು ಸ್ವಪ್ನದಲ್ಲಿ ಮೂರು ಬಾರಿ ಹೇಳಿದನು. ಆ ಶಿವಕ್ಷೇತ್ರಾಧಿಕಾರಿಯು ಹಾಗೆಯೇ ಮಾಡಿದನು. ವಿಸ್ಮಿತನಾಗಿ ಎಲ್ಲರಿಗೂ ಆ ಸಮಾಚಾರವನ್ನು ಹೇಳಿದನು."

**ವಿ :**—ವಿಪ್ರಸ್ಯ ಆತ್ಮಾ ಯಸ್ಯ ಸಃ, ಕ್ಷಣಾಯ ಇತಿ ಕ್ಷಣಾರ್ಥಂ, ಕೃತಾ ನತಿಃ ಯೇನ ಸಃ, ನ ಶಿತಿಃ ಅಶಿತಿಃ, ಅಶಿತಿಃ ಶ್ರೀಃ ಯಸ್ಯ ಸಃ, ಹೃಷೀಕೇಶ ಇತಿ ದೇಶಃ ತಸ್ಮಿನ್, ನ ದೃಷ್ಟಃ ಅದೃಷ್ಟಃ, ದೇಹಂ ಭಜಂತೀತಿ ದೇಹಭಾಜಃ ತೇಷಾಂ, ಸ್ವೇನ ಪ್ರೇರಿತಃ, ಸ್ವಪ್ರೇರಿತಃ, ಅನ್ಯಚ್ಚ ತತ್ ಸ್ಥಲಂ ಚ, ಅನ್ಯಸ್ಥಲಂ, ತತ್ ಗಚ್ಛತೀತಿ ಅನ್ಯಸ್ಥಲಗಃ, ನಿಜಶ್ಚಾಸೌ ನರಶ್ಚ, ನಿಜನರಃ, ಅನ್ಯಸ್ಥಲಗಶ್ಚಾಸೌ ನಿಜನರಶ್ಚ, ಅನ್ಯಸ್ಥಲಗನಿಜನರಃ, ಸ್ವಪ್ರೇರಿತಶ್ಚಾಸೌ ಅನ್ಯಸ್ಥಲಗನಿಜನರಶ್ಚ ತೇನ ಉಪಾಹೃತಾನಿ ತೈಃ, ಭಕ್ಷ್ಯಾಣಿ ಚ ಭೋಜ್ಯಾನಿ ಚ ತೈಃ, ಅಖಿಲಾನಾಂ ಗುರುಃ. ತಂ, ವೇದಾನಾಂ ಬಂಧುಃ ತಂ,

**ಕ್ರಿ :**—ಪ್ರ+ಅಭೋಜಯತ್ ಅಭೋಜಯತಾಂ ಅಭೋಜಯನ್-ಇತ್ಯಾದಿ. ಭುಜ ಪಾಲನಾಭ್ಯವಹಾರಯೋಃ ಣಿಜಂತ ಲಙ್. ಪ್ರ ಉಪಸರ್ಗ.

**ವೃತ್ತ :**—ಸ್ರಗ್ಧರಾ, ಲಕ್ಷಣ—ಮ್ರಭ್ನೈರ್ಯಾನಾಂ ತ್ರಯೇಣ ತ್ರಿಮುನಿಯತಿಯುತಾ ಸ್ರಗ್ಧರಾ ಕೀರ್ತಿತೇಯಂ.

Rarest Archives

**ಅವ:—ಆಚಾರ್ಯರು ಇಷುಪಾತ ಎಂಬ ಕ್ಷೇತ್ರಕ್ಕೆ ಬಂದಾಗ ತೋರಿದ ಮಹಿಮೆ—**

**ಅವಾಪ್ತವಾನ್ ಪುನರಿಷುಪಾತಮಸ್ಮರದ್ರಮಾಪತಿಂ ಸ**
**ಪರಶುರಾಮಮಾದರಾತ್ ।**
**ಸ ರಾಜಕೇಲ್ಯುರುಕದಲೀಸಹಸ್ರಕಂ**
**ತದಾದದತ್ತ್ಯವಸಿತಿದತ್ತಮುತ್ತಮಂ ॥೫೧॥**

**ಅ:—**ಸಃ ಪುನಃ ಇಷುಪಾತಂ ಅವಾಪ್ತವಾನ್ ಸನ್ ರಮಾಪತಿಂ ಪರಶುರಾಮಂ ಆದರಾತ್ ಅಸ್ಮರತ್, ತದಾ ಸಃ ಅತ್ತ್ಯವಸಿತಿದತ್ತಂ ಉತ್ತಮಂ ರಾಜಕೇಲ್ಯುರುಕದಲೀಸಹಸ್ರಕಂ ಆದತ್ ।

**ಅರ್ಥ :—**ಸಃ = ಆ ಶ್ರೀಮಧ್ವಾಚಾರ್ಯರು, ಪುನಃ = ಅನಂತರ, ಇಷುಪಾತಂ = ಇಷುಪಾತವೆಂಬ ಕ್ಷೇತ್ರವನ್ನು, ಅವಾಪ್ತವಾನ್ (ಸನ್) = ಹೊಂದಿದವರಾಗಿ, ರಮಾಪತಿಂ ಪರಶುರಾಮಂ = ಇಷುಪಾತಕ್ಷೇತ್ರ ಸ್ವಾಮಿಯಾದ ಲಕ್ಷ್ಮೀಪತಿಯಾದ ಶ್ರೀಪರಶುರಾಮದೇವರನ್ನು, ಆದರಾತ್ = ಭಕ್ತಿಯಿಂದ, ಅಸ್ಮರತ್ = ಸ್ಮರಿಸಿದರು. ಸಃ = ಅವರು, ತದಾ = ಆ ಕ್ಷೇತ್ರದಲ್ಲಿರುವಾಗ, ಅತ್ತ್ಯವಸಿತಿ = ಭೋಜನದ ಕೊನೆಯಲ್ಲಿ, (ಪಾ. ಅಭ್ಯವಹೃತಿ = ಭೋಜನಕ್ಕಾಗಿ) ದತ್ತಂ = ಕೊಡಲ್ಪಟ್ಟ, ಉತ್ತಮಂ = ಶ್ರೇಷ್ಠವಾದ, (ತುಂಬಾರುಚಿಯಾದ) ರಾಜಕೇಲಿ = ರಾಜಬಾಳೆ ಎಂಬ, ಉರು = ದೊಡ್ಡದಾದ, ಕದಲೀಸಹಸ್ರಕಂ = ಸಾವಿರಬಾಳೆಹಣ್ಣುಗಳನ್ನು, (ರಾಜ = ಅಲ್ಲಿಯ ರಾಜನಿಂದ, ಕೇಲಿ = ವಿನೋದಕ್ಕಾಗಿ ಕೊಡಲ್ಪಟ್ಟ ಉರುಕದಲೀಸಹಸ್ರಕಂ = ದೊಡ್ಡದಾದ ಸಾವಿರಬಾಳೆಹಣ್ಣುಗಳನ್ನು) ಆದತ್ = ತಿಂದರು.

**ತಾ :—**ಅಲ್ಲಿಂದ ಶ್ರೀಮಧ್ವಾಚಾರ್ಯರು ಇಷುಪಾತವೆಂಬ ಕ್ಷೇತ್ರಕ್ಕೆ ಬಂದರು. ಅಲ್ಲಿಯ ಕ್ಷೇತ್ರಾಧಿಪತಿಯಾದ ಶ್ರೀಪರಶುರಾಮದೇವರನ್ನು ಅವರು ಭಕ್ತಿಯಿಂದ ಸ್ಮರಿಸಿ ವಂದಿಸಿದರು. ಅಲ್ಲಿ ಅವರು ಒಂದು ದಿನ ಭೋಜನದ ಕೊನೆಯಲ್ಲಿ ಅಲ್ಲಿಯ ರಾಜನು ಇವರ ಭೋಜನಶಕ್ತಿಯನ್ನು

Rarest Archiver

ಪರೀಕ್ಷಿಸಬೇಕೆಂದು ವಿನೋದಕ್ಕಾಗಿ ಊಟದ ಕೊನೆಯಲ್ಲಿ ತಂದುಕೊಟ್ಟ ಒಂದುಸಾವಿರ ರಾಜಬಾಳೆಹಣ್ಣುಗಳನ್ನು ಅನಾಯಾಸವಾಗಿ ತಿಂದರು.

**ವಿ:**—ರಮಾಯಾಃ ಪತಿಃ ರಮಾಪತಿಃ ತಂ, ಉರವಶ್ಚ ತಾಃ ಕದಲ್ಯಶ್ಚ ಉರುಕದಲ್ಯಃ, ಸಹಸ್ರಾಣಾಂ ಸಮೂಹಃ ಸಹಸ್ರಕಂ, ರಾಜಕೇಲ್ಯಃ ಇತಿ ಉರುಕದಲ್ಯಃ ರಾಜಕೇಲ್ಯುರುಕದಲ್ಯಃ ರಾಜಕೇಲ್ಯುರುಕದಲೀನಾಂ ಸಹಸ್ರಕಂ ರಾಜಕೇಲ್ಯುರುಕದಲೀಸಹಸ್ರಕಂ, (ಅಥವಾ ರಾಜ್ಞಾ ಕೇಲ್ಯಾ ದತ್ತಂ ಉರುಕದಲೀಸಹಸ್ರಕಂ) ಅತ್ತೇಃ ಅವಸಿತಿಃ ಅತ್ತ್ಯವಸಿತಿಃ, ಅತ್ತ್ಯವಸಿತೌ ದತ್ತಂ ಅತ್ತ್ಯವಸಿತಿದತ್ತಂ;

**ಕ್ರಿ:**—ಆದತ್ ಆತ್ತಾಂ ಆದನ್, ಆದಃ ಆತ್ತಂ ಆತ್ತ, ಆದಂ ಆದ್ವ ಆದ್ಮ; ಅದ ಭಕ್ಷಣೇ to eat. ಸಕ. ಪರ. ಲಙ್.

**ವೃತ್ತ:**—ರುಚಿರಾ, ಲಕ್ಷಣ—ಜಭೌ ಸಜೌ ಗ್ವಿತಿ ರುಚಿರಾ ಚತುರ್ಗ್ರಹೈಃ

**ಅವ:**— ಶ್ರೀಮಧ್ವರು ಗೋವೆಗೆ ಬಂದಾಗ ತೋರಿದ ಮಹಿಮೆ-

**ಸ ಶಂಕರಪದದ್ವಿಜೋಪಹೃತಮಾಪ್ಯ ಗೋವಾಖ್ಯಗಾಂ**<br>**ಗರಿಷ್ಠ ಕದಲೀಲಸದ್ದಶಶತೀ ಚತುಷ್ಕಂ ಚರನ್ ।**<br>**ಪಯಃ ಕಲಶಪಂಚಕತ್ರಿಕಯುಗಾಭಿಪೂರ್ಣಂ ಪಪಾ-**<br>**ವದೃಷ್ಟಗತಿರಪ್ಯಭೂನ್ನೃಪನೃಮಂಡಲ್ಯೈರುದ್ಯತೈಃ ॥೫೨॥**

**ಅ:**—ಸಃ ಗೋವಾಖ್ಯಗಾಂ ಆಪ್ಯ, ಶಂಕರಪದದ್ವಿಜೋಪಹೃತಂ ಗರಿಷ್ಠಕದಲೀಲಸದ್ದಶಶತೀಚತುಷ್ಕಂ ಚರನ್, ಕಲಶಪಂಚಕತ್ರಿಕಯುಗಾಭಿಪೂರ್ಣಂ, ಪಯಃ ಪಪೌ, ಉದ್ಯತೈಃ ನೃಪನೃಮಂಡಲ್ಯೈಃ ಅದೃಷ್ಟಗತಿಃ ಅಪಿ ಅಭೂತ್ ।

**ಅರ್ಥ:**—ಸಃ=ಆ ಶ್ರೀಮಧ್ವಾಚಾರ್ಯರು, ಗೋವಾಖ್ಯಗಾಂ=ಗೋವಾ ಎಂಬ ಪ್ರಾಂತವನ್ನು, ಅವಾಪ್ಯ=ತಲುಪಿ, ಶಂಕರಪದದ್ವಿಜ=ಶಂಕರನೆಂಬ ಹೆಸರುಳ್ಳ ಬ್ರಾಹ್ಮಣನಿಂದ, ಉಪಹೃತಂ=ಕಾಣಿಕೆಯಾಗಿ ಕೊಡಲ್ಪಟ್ಟ, ಗರಿಷ್ಠ=ದೊಡ್ಡದಾದ, ಕದಲೀ=ಬಾಳೆಹಣ್ಣಿನ, ಲಸತ್=

Rarest Archiver

ರುಚಿಕರವಾದ ರಸದಿಂದ ಪ್ರಕಾಶಮಾನವಾದ, ದಶಶತೀ = ಸಾವಿರದ, ಚತುಷ್ಕಂ ನಾಲ್ಕನ್ನು (ನಾಲ್ಕುಸಾವಿರಬಾಳೆಹಣ್ಣುಗಳನ್ನು) ಚರನ್ = ತಿನ್ನುವವರಾಗಿ, ಕಲಶಪಂಚಕ = ಕೊಡಗಳ ಐದರ, ತ್ರಿಕ = ಮೂರರ, ಯುಗ = ಎರಡರಿಂದ, ($5 \times 3 \times 2 = 30$ ಮೂವತ್ತುಕೊಡಗಳಲ್ಲಿ) ಅಭಿಪೂರ್ಣಂ = ತುಂಬಿದ, ಪಯಃ ಪಪೌ = ಹಾಲನ್ನು ಕುಡಿದರು. ಉದ್ಯತೈಃ = ತಡೆಯಲು ಸಿದ್ಧರಾಗಿರುವ, (ಶಸ್ತ್ರಾಸ್ತ್ರಸನ್ನದ್ಧರಾದ) ನೃಪಸ್ಯ = ರಾಜಭಟರ, ಮಂಡಲೈಃ = ಸಮೂಹಗಳಿಂದ, ಅದೃಷ್ಟಗತಿಃ ಅಪಿ = ನೋಡಲ್ಪಡದ ಗಮನವುಳ್ಳವರೂ, ಅಭೂತ್ = ಆದರು.

ತಾ :— ಶ್ರೀಮಧ್ವಾಚಾರ್ಯರು, ಅನಂತರ ಗೋವಾಪ್ರಾಂತಕ್ಕೆ ಹೋದರು. ಅಲ್ಲಿ ಶಂಕರನೆಂಬ ಬ್ರಾಹ್ಮಣನು ಅವರಿಗೆ ದೊಡ್ಡದಾಗಿಯೂ ರುಚಿಕರವಾಗಿಯೂ ಇರುವ ಪಕ್ವವಾದ ಒಳ್ಳೆಯ ನಾಲ್ಕುಸಾವಿರ ಬಾಳೆ ಹಣ್ಣುಗಳನ್ನು ಸಮರ್ಪಿಸಿದನು. ಆಚಾರ್ಯರು ಅವುಗಳನ್ನೆಲ್ಲಾ ತಿಂದು ಮುಗಿಸಿ ಮೂವತ್ತುಕೊಡಗಳಲ್ಲಿ ತುಂಬಿದ್ದ ಹಾಲನ್ನೆಲ್ಲಾ ಕುಡಿದರು. ಆಚಾರ್ಯರ ಈ ಅಮಾನುಷಸಾಮರ್ಥ್ಯವನ್ನು ನೋಡಿ ಆಶ್ಚರ್ಯಪಟ್ಟ ಆ ದೇಶದ ರಾಜನು ತನ್ನ ದೇಶದ ರಕ್ಷಣೆಗಾಗಿ ಅವರನ್ನು ತನ್ನದೇಶದಲ್ಲಿಯೇ ಇರಿಸಿಕೊಳ್ಳಬೇಕೆಂದು ಅಭಿಪ್ರಾಯಪಟ್ಟನು. ಆಚಾರ್ಯರು ಒಪ್ಪದಿರಲು ರಾಜನು ಅವರನ್ನು ಎಲ್ಲಿಯೂ ಹೋಗದಂತೆ ತಡೆಯಲು ತನ್ನ ಸೇವಕರಿಗೆ ಆಜ್ಞೆಮಾಡಿದನು. ರಾಜಭಟರು ಆಚಾರ್ಯರನ್ನು ತಡೆಯಲು ಸಿದ್ಧರಾಗಿ ನಿಂತಿದ್ದಾಗಲೇ ಅವರು ತಮ್ಮ ಯೋಗಪ್ರಭಾವದಿಂದ ಯಾರಿಗೂ ಕಾಣಿಸ ದಂತೆ ಅಲ್ಲಿಂದ ಅದೃಶ್ಯರಾಗಿ ಹೊರಟುಹೋದರು.

**ಪ್ರಮಾಣ** – ದೇವ್ಯೈಃ ಸಮಂ ರಹಸಿ ದೇವಗೃಹೇ ಪ್ರವೃತ್ತೋ
ರಾಜ್ಞಾ ಕವಾಟವಿವೃತೌ ಪ್ರಸಭೋದಿತೋಽಸೌ |
ಊಚೇಽಧುನಾ ವ್ರಜಸಿ ಚೇದಿಹ ನಶ್ಯಸೀತಿ
ರಾಜಾಽಥ ವಿಸ್ಮಿತಮನಾ ವ್ಯವೃಣೋತ್ ಕವಾಟಮ್ || ೧ ||

ರಕ್ತೇಕ್ಷಣಂ ಪುರುಷಸಿಂಹಮವೇಕ್ಷಮಾಣಃ
ಸದ್ಯೋಽಭಯಾನ್ನಿಜಪುರೋಹಿತಮಾಹ್ವಯತ್ ಸಃ ||

Rarest Archiver

ಕ್ಷಂತವ್ಯಮಿತ್ಯಸಕೃದಾನಮತಿ ದ್ವಿಜೇಂದ್ರೇ
ಷಣ್ಮಾಸಮಾಯುರದದಾನ್ನೃಪತೇರ್ದಯಾಲುಃ ||೨||

ರಾಜ್ಞಾರ್ಥಿತೋ ನಿವಸತಾವಖಿಲಾಂಶ್ಚ ಶಿಷ್ಯಾನ್
ಪ್ರಸ್ಥಾಪ್ಯ ವಾಯುವದಗಾದಖಿಲೈರದೃಷ್ಟಃ
ಷಷ್ಠೇಽಥ ಮಾಸಿ ಪರಚಕ್ರಪರಾಕ್ರಮೇಣ
ರಾಜಾ ಸರಾಜ್ಯನಗರೋ ವಿವಶೋ ನನಾಶ ||೩|| (ಭಾ.ಪ್ರ.)

ಗೋವಾದೇಶದ ರಾಜನು ಆಚಾರ್ಯರ ಅದ್ಭುತಮಹಿಮೆಯನ್ನು ಕಂಡು ವಿಸ್ಮಿತನಾಗಿ ಆಚಾರ್ಯರನ್ನು ತನ್ನ ದೇಶದ ರಕ್ಷಣೆಗಾಗಿ ಅಲ್ಲಿಯೇ ಇರಬೇಕೆಂದು ಕೇಳಿಕೊಂಡನು. ಆಚಾರ್ಯರು ಒಪ್ಪದಿದ್ದರೂ ರಾಜನು ಆಚಾರ್ಯರನ್ನು ಅಲ್ಲಿಯ ಒಂದು ದೇವಾಲಯದಲ್ಲಿ ದಿಗ್ಬಂಧನದಲ್ಲಿರಿಸಿದನು. ಆಚಾರ್ಯರು ದೇವಾಲಯದ ಗರ್ಭಗೃಹದಲ್ಲಿ ಬಾಗಿಲು ಹಾಕಿಕೊಂಡು ರಹಸ್ಯದಲ್ಲಿ ದೇವತೆಗಳ ಜತೆಗೆ ವ್ಯವಹರಿಸುತ್ತಿದ್ದರು. ರಾಜನು ಶಂಕಿತನಾಗಿ ಅಲ್ಲಿಗೆ ಬಂದು ಬಾಗಿಲು ತೆರೆಯಬೇಕೆಂದು ಬಲಾತ್ಕರಿಸಿದನು. ಆಚಾರ್ಯರು – 'ರಾಜನೇ! ನೀನು ಅನ್ಯಾಯ ಪ್ರವೃತ್ತನಾಗಿದ್ದೀ. ನೀನು ಇಲ್ಲಿಂದ ಹೋದಕೂಡಲೇ ಸತ್ತುಹೋಗುತ್ತೀ' ಎಂದು ಶಪಿಸಿ ಬಾಗಿಲು ತೆರೆದರು. ಕೆಂಪಾದ ಕಣ್ಣಿನಿಂದ ನೋಡುತ್ತಾ ಸಿಂಹದಂತೆ ಭಯಂಕರ-ಗಂಭೀರರಾಗಿ ಕಾಣಿಸುತ್ತಿದ್ದ ಆಚಾರ್ಯರನ್ನು ನೋಡಿ ರಾಜನು ಹೆದರಿ ಅವರನ್ನು ಸಮಾಧಾನಪಡಿಸಲು ತನ್ನ ಪುರೋಹಿತರನ್ನು ಕರೆಸಿದನು. ಪುರೋಹಿತನು ಬಂದು ರಾಜನ ಅಪರಾಧವನ್ನು ಕ್ಷಮಿಸಬೇಕೆಂದು ಪ್ರಾರ್ಥಿಸುತ್ತಾ ಅನೇಕಬಾರಿ ಆಚಾರ್ಯರ ಪಾದಗಳಿಗೆ ಎರಗಿ ಬೇಡಿಕೊಂಡನು. ಆಚಾರ್ಯರು ದಯೆಯಿಂದ ಆ ರಾಜನಿಗೆ ಆರುತಿಂಗಳು ಆಯುಸ್ಸನ್ನು ಕೊಟ್ಟರು. ರಾಜನು ಆಚಾರ್ಯರನ್ನು ಅಲ್ಲಿಯೇ ನಿರ್ಬಂಧಿಸಿದರೂ, ಆಚಾರ್ಯರು ಶಿಷ್ಯರನ್ನು ಉಪಾಯದಿಂದ ಕಳುಹಿಸಿದರು. ಯಾರಿಗೂ ಈ ವಿಷಯವು ತಿಳಿಯಲಿಲ್ಲ. ಆಚಾರ್ಯರು ಒಬ್ಬರೇ ಅಲ್ಲಿದ್ದು ಶಿಷ್ಯರು ಹೊರಟುಹೋದ ಸ್ವಲ್ಪಸಮಯದಲ್ಲಿಯೇ ರಾಜಭಟರು ಹತ್ತು ದಿಕ್ಕುಗಳಲ್ಲಿಯೂ ಕಾವಲಿದ್ದು ನೋಡುತ್ತಿರುವಾಗಲೇ ತಾವು ವಾಯುರೂಪ

Rarest Archiver

ದಿಂದ ಅದೃಶ್ಯರಾದರು. 'ಮುಂದೆ ಆರನೇ ತಿಂಗಳಿನಲ್ಲಿ ಶತ್ರುರಾಜರ ಧಾಳಿಯಿಂದ ಆ ರಾಜನೂ, ಅವನ ರಾಜ್ಯವೂ ನಗರವೂ ನಾಶವಾದುವು.' (ವಿಸ್ತಾರವಾಗಿ ಹೇಳಬೇಕಾದ ಈ ಘಟನೆಗಳನ್ನು ಕವಿಗಳು ಒಂದು ಶ್ಲೋಕ ದಲ್ಲಿಯೇ ಸಂಕ್ಷಿಪ್ತವಾಗಿ ಮುಗಿಸಿದ್ದಾರೆ.)

**ವಿ:**—ಶಂಕರ ಇತಿ ಪದಂ ಯಸ್ಯ ಸಃ, ಶಂಕರಪದಶ್ಚ ಅಸೌ ದ್ವಿಜಶ್ಚ, ಶಂಕರಪದದ್ವಿಜೇನ ಉಪಹೃತಂ, ಶಂಕರಪದದ್ವಿಜೋಪಹೃತಂ ತತ್, ಗೋವಾ ಇತಿ ಆಖ್ಯಾ ಯಸ್ಯಾಃ ಸಾ, ಗೋವಾಖ್ಯಾ ಚ ಸಾ ಗೌಶ್ಚ ತಾಂ, ಅತಿಶಯೇನ ಗುರವಃ, ಗರಿಷ್ಠಾಶ್ಚ ತಾಃ ಕದಲ್ಯಶ್ಚ, ಗರಿಷ್ಠಕದಲ್ಯಃ, ದಶಾನಾಂ ಸಮಾಹಾರಃ ದಶಶತೀ, ಗರಿಷ್ಠಕದಲೀನಾಂ ಲಸಂತೀಚ ಸಾ ದಶಶತೀ ಚ ಗರಿಷ್ಠಕದಲೀಲಸದ್ದಶಶತೀ, ಚತುರ್ಣಾಂ ಸಮೂಹಃ ಚತುಷ್ಕಂ, ಗರಿಷ್ಠ....ಶತ್ಯಾಃ ಚತುಷ್ಕಂ, ತತ್ ; ಪಂಚಾನಾಂ ಸಮೂಹಃ ಪಂಚಕಂ, ತ್ರಯಾಣಾಂ ಸಮೂಹಃ ತ್ರಿಕಂ, ಪಂಚಕಸ್ಯ ತ್ರಿಕಂ ಪಂಚಕ-ತ್ರಿಕಂ, ಪಂಚಕತ್ರಿಕಸ್ಯ ಯುಗಂ ಪಂಚಕತ್ರಿಕಯುಗಂ, ಕಲಶಾನಾಂ ಪಂಚಕತ್ರಿಕಯುಗಂ ಕಲಶಪಂಚಕತ್ರಿಕಯುಗಂ, ತಸ್ಮಿನ್ ಅಭಿಪೂರ್ಣಂ ತತ್; ನ ದೃಷ್ಟಾ, ಅದೃಷ್ಟಾ ಗತಿಃ ಯಸ್ಯ ಸಃ ; ನೃಪಸ್ಯ ನರಃ ನೃಪನರಃ, ನೃಪನೄಣಾಂ ಮಂಡಲಾನಿ ತೈಃ ||

**ಕ್ರಿ:**—ಪಪೌ ಪಪತುಃ ಪಪುಃ ಇತ್ಯಾದಿ ಪಾ ಪಾನೇ ಪರ. ಲಿಟ್.

**ವೃತ್ತ :**—ಪೃಥ್ವೀ, ಲಕ್ಷಣ-ಜಸೌ ಜಸಯಲಾ ವಸುಗ್ರಹಯತಿಶ್ಚ ಪೃಥ್ವೀ ಗುರುಃ

**ಅವ:**—ಆಚಾರ್ಯರ ಮತ್ತೊಂದು ಮಹಿಮೆಯನ್ನು ಕೇಳಿರಿ—

**ಅಯಮೇವ ಗೋವಿಷಯತೋಽಪಿ**
**ಕುತ್ರಚಿತ್ ಸದಸಿ ಜನತಾರ್ಥಿತೋ ಜವಾತ್ ।**
**ಪುಷ್ಪಮುತ ಫಲಮಹೋ ವಿದಧೇ**
**ಜನಸುಪ್ತಿದ್ಗಾನುಪಮಗಾನಸಂಪದಾ ||೫೩||**

**ಅ:**—ಅಯಮೇವ ಗೋವಿಷಯತಃ ಅಪಿ ಕುತ್ರಚಿತ್ ಸದಸಿ

ಜನತಾರ್ಥಿತಃ ಜನಸುಪ್ತಿದಾನುಪಮಗಾನಸಂಪದಾ ಜವಾತ್ ಪುಷ್ಪಂ ಉತ ಫಲಂ ವಿದಧೇ ಅಹೋ !

**ಅರ್ಥ:**—ಅಯಂ ಏವ = ಈ ಮಧ್ವಾಚಾರ್ಯರೇ, ಗೋವಿಷಯತಃ ಅಪಿ = ಪಶುಪೆ (ಬಜಪೆ) ಎಂಬ ಹಳ್ಳಿಯಲ್ಲಿ, ಕುತ್ರಚಿತ್ = ಯಾವುದೋ ಒಂದು, ಸದಸಿ = ಸಭೆಯಲ್ಲಿ, ಜನತಾ = ಜನರಸಮೂಹದಿಂದ, ಅರ್ಥಿತಃ ಸನ್ = ಪ್ರಾರ್ಥಿಸಲ್ಪಟ್ಟವರಾಗಿ, ಜನಸುಪ್ತಿದ = ಜನರಿಗೆ ನಿದ್ದೆಯನ್ನುಂಟು ಮಾಡುವ, ಅನುಪಮ = ಅಸದೃಶವಾದ, ಗಾನಸಂಪದಾ = ಸಂಗೀತದ ಸಮೃದ್ಧಿಯಿಂದ, ಜವಾತ್ = ಶೀಘ್ರವಾಗಿ, ಪುಷ್ಪಂ = ಹೂವನ್ನು, ಉತ = ಮತ್ತು, ಫಲಂ = ಹಣ್ಣನ್ನು, ವಿದಧೇ = ಉಂಟುಮಾಡಿದರು.

**ತಾ:**—ಪಶುಪೆ ಎಂಬ ಹಳ್ಳಿಯಲ್ಲಿ ಆಚಾರ್ಯರು ತಂಗಿದ್ದರು. ಅಲ್ಲಿ ಭಿಕ್ಷಾಸ್ವೀಕಾರಾನಂತರದಲ್ಲಿ ಊರಿನ ಸದ್ಗೃಹಸ್ಥರೆಲ್ಲರೂ ಆಚಾರ್ಯರ ಬಳಿಯಲ್ಲಿಯೇ ಬಂದು ಸಭೆಸೇರಿದರು. ನಮ್ಮಲ್ಲಿ ಸರಿಯಾದ ಮಳೆ ಇಲ್ಲದ್ದರಿಂದ ಅಡಿಕೆ ತೆಂಗು ಮುಂತಾದ ಗಿಡಗಳಲ್ಲಿ ಕಾಲಕ್ಕೆ ಸರಿಯಾಗಿ ಪುಷ್ಪಫಲಗಳು ಉಂಟಾಗುತ್ತಿಲ್ಲ. ತಾವು ಅನುಗ್ರಹಿಸಬೇಕೆಂದು ಅವರು ಪ್ರಾರ್ಥಿಸಿದರು. ಆಗ ಆಚಾರ್ಯರು ದಿವ್ಯವಾದ ಸಂಗೀತವನ್ನು ಹಾಡಿ ಜನರಿಗೆ ನಿದ್ದೆ ಬರುವಂತೆ ಮಾಡಿದರು. ಜನರು ಎಚ್ಚತ್ತು ನೋಡುವಾಗ ಅಲ್ಲಿಯ ಮರಗಿಡಗಳಲ್ಲೆಲ್ಲಾ ಸಮೃದ್ಧಿಯಾಗಿ ಹೂವು ಕಾಯಿ ಹಣ್ಣುಗಳು ಕಾಣಿಸುತ್ತಿದ್ದುವು. (ಆಚಾರ್ಯರು ಹೀಗೆ ದೇವತೆಗಳ ಸಂಗೀತವಿದ್ಯೆಯನ್ನು ಬಲ್ಲವರಾಗಿದ್ದರು. ಈ ಸಂದರ್ಭದಲ್ಲಿ ಆಚಾರ್ಯರು ಒಂದು ಸಂಗೀತ ಗ್ರಂಥವನ್ನು ರಚಿಸಿದ್ದರೆಂದು ಕಂಡುಬರುತ್ತಿದೆ.)

ದಿವ್ಯಗೇಯವಿದಗ್ಧೋಽಸೌ ಸರ್ವಜ್ಞ ಇತಿ ಯಾಚಿತಃ |
ವಿದ್ವದ್ಭಿರತ್ರ ಕೃತವಾನ್ ಗಾನಶಾಸ್ತ್ರಂ ಸುದುರ್ಲಭಂ || (ಭ್ರಾ.ಪ್ರ.)

**ವಿ:**—ಜನಾನಾಂ ಸಮೂಹಃ ಜನತಾ, ತಯಾ ಅರ್ಥಿತಃ ಜನತಾರ್ಥಿತಃ, ಸುಪ್ತಿಂ ದದಾತಿ ಇತಿ ಸುಪ್ತಿದಾ, ನ ವಿದ್ಯತೇ ಉಪಮಾ ಯಸ್ಯಾಃ ಸಾ, ಗಾನಸ್ಯ ಸಂಪತ್, ಅನುಪಮಾ ಚ ಸಾ ಗಾನಸಂಪಚ್ಚ,

Rarest Archiver

ಜನಸುಪ್ತಿದಾ ಚ ಸಾ ಅನುಪಮಗಾನಸಂಪಚ್ಚ ಜನಸುಪ್ತಿದಾನುಪಮ ಗಾನಸಂಪತ್ ತಯಾ ।

ಕ್ರಿ:—ವಿ-ದಧೇ ದಧಾತೇ ದಧಿರೇ ಇತ್ಯಾದಿ ಡುಧಾಞ್ ಧಾರಣ-ಪೋಷಣಯೋಃ ಆತ್ಮ. ಸಕ. ಲಿಟ್.

ವೃತ್ತ:—ಉದ್ಗತಾ, ಲಕ್ಷಣ-ಚರಮಯೋಃ ಸಜಸಜಗಾ ದ್ವಿತೀಯೇ ನಸಜಗಾಸ್ತೃತೀಯೇ ಭನಜಲಗಾಶ್ಚೇದುದ್ಗತಾ ।

ಅವ:—ಇಂತಹ ಆಚಾರ್ಯರ ಮಹಿಮೆಯನ್ನು ಚಕ್ರಬಂಧಶ್ಲೋಕದಿಂದ ವರ್ಣಿಸುತ್ತಾರೆ—

**ಧನ್ಯೋಽಮಹ್ಯತ ನಾಕಿನಾಮಹಿತಹೃದ್ಬಾಣಃ ಸಮೋಽಜಸ್ಯ ಯೋ**
**ಮಧ್ವೋ ಧ್ವಸ್ತದುರಾಗಮೋಽಗ್ರ್ಯಹಿಮಗುಶ್ರೀಃ**
**ಕಾಮಮಾಯೊವಿಹೃತ್ ।**
**ವಿಷ್ಣುಂ ವಿಶ್ವಜಯಪ್ರದಂ ಸ ಹಿ ನಮನ್**
**ಸೇವ್ಯಂ ಸುಸೌಖ್ಯಂ ಮುದಾ**
**ದಾಕ್ಷ್ಯಾಚ್ಛ್ರೀಧರಮಾಮಯಾದಿವಿರಹೀ**
**ಯೋಗೀ ಸುಹೃತ್ ಸರ್ವದಾ ॥ ೩೪ ॥**

ಅ:—ಧನ್ಯಃ ನಾಕಿನಾಂ ಅಹಿತಹೃದ್ಬಾಣಃ ಅಜಸ್ಯ ಸಮಃ ಧ್ವಸ್ತ-ದುರಾಗಮಃ ಅಗ್ರ್ಯಹಿಮಗುಶ್ರೀಃ ವಿಶ್ವಜಯಪ್ರದಂ ಸೇವ್ಯಂ ಸುಸೌಖ್ಯಂ ಶ್ರೀಧರಂ ವಿಷ್ಣುಂ ಮುದಾ ದಾಕ್ಷ್ಯಾತ್ ನಮನ್ ಆಮಯಾದಿವಿರಹೀ ಯೋಗೀ ಸರ್ವದಾ ಸುಹೃತ್ ಕಾಮಂ ಆಯಾವಿಹೃತ್ ಯಃ ಮಧ್ವಃ ಸಃ ಅಮಹ್ಯತ ಹಿ.

ಅರ್ಥ:—ಧನ್ಯಃ = ಅಪೇಕ್ಷಾರಹಿತರಾದ ಮತ್ತು ಗುಣಪೂರ್ಣರಾದ, ನಾಕಿನಾಂ = ದೇವತೆಗಳ, ಅಹಿತ = ಶತ್ರುಗಳಾದ ದೈತ್ಯರ, ಹೃದ್‌ಬಾಣಃ = ಎದೆಗಳಿಗೆ ಬಾಣಸಮಾನರಾದ, ಅಜಸ್ಯ ಸಮಃ = ಬ್ರಹ್ಮದೇವರಿಗೆ ಸಮಾನರಾದ, ಧ್ವಸ್ತದುರಾಗಮಃ = ದುಷ್ಟಸಿದ್ಧಾಂತಗಳನ್ನು ಖಂಡಿಸಿರುವ, ಅಗ್ರ್ಯಹಿಮಗು = ಶ್ರೇಷ್ಠನಾದ ಹುಣ್ಣಿಮೆಯ ಚಂದ್ರನಂತೆ, ಶ್ರೀಃ = ಕಾಂತಿ

Rarest Archive

ಯುಳ್ಳ, ವಿಶ್ವಜಯಪ್ರದಂ = ಸಕಲಸಾತ್ತ್ವಿಕಭಕ್ತರಿಗೂ ಜಯವನ್ನು ಕೊಡುವ, ಸೇವ್ಯಂ = ಭಜಿಸಲು ಯೋಗ್ಯನೂ, ಸುಸೌಖ್ಯಂ = ಉತ್ತಮವಾದ ಆನಂದ ಉಳ್ಳವನೂ ಆದ, ಶ್ರೀಧರಂ ವಿಷ್ಣುಂ = ಲಕ್ಷ್ಮಿಯನ್ನು ಧರಿಸಿರುವ ಶ್ರೀಮನ್ನಾರಾಯಣನನ್ನು, ಮುದಾ = ಸಂತೋಷದಿಂದ, ದಾಕ್ಷ್ಯಾತ್ = ಸಾಷ್ಟಾಂಗ ನಮಸ್ಕಾರಾದಿಚತುರತೆಯಿಂದ (ನಿರಂತರ ಚುರುಕುತನದಿಂದ) ನಮನ್ = ನಮಸ್ಕರಿಸುತ್ತಾ ಇರುವ, ಆಮಯಾದಿ-ವಿರಹೀ = ರೋಗಾದ್ಯುಪದ್ರವರಹಿತರಾದ, ಯೋಗೀ = ಧ್ಯಾನನಿರತರಾದ, ಸರ್ವದಾ ಸುಹೃತ್ = ಯಾವಾಗಲೂ ವಿಷ್ಣುವಿಗೆ ಮಿತ್ರರಾದ (ಭಕ್ತರಾದ) (ಭಕ್ತರಿಗೆ ಅನಿಮಿತ್ತೋಪಕಾರಿಗಳಾದ) ಆಯಾಮಿಹೃತ್ = ವಿಶಾಲವಾದ ಹೃದಯವುಳ್ಳ (ಸರ್ವಜ್ಞರಾದ), ಯಃ (ಅಸ್ತಿ) = ಯಾವ ಶ್ರೀಮಧ್ವಾಚಾರ್ಯರು ಇದ್ದಾರೋ, ಸಃ = ಅವರು, ಅಮುಹ್ಯತ ಹಿ = ಪೂಜಿಸಲ್ಪಟ್ಟರೆಂಬುದು ಯುಕ್ತವಾಗಿದೆ. (ಪ್ರಸಿದ್ಧವಾಗಿದೆ.)

ತಾ:—ಶ್ರೀಮಧ್ವಾಚಾರ್ಯರು ಯಾವ ಅಪೇಕ್ಷೆಯೂ ಇಲ್ಲದವರು, ಆದುದರಿಂದಲೇ ತನಗೆ ಯೋಗ್ಯವಾದ ಜ್ಞಾನಾದಿಗುಣಗಳಿಂದ ತುಂಬಿದವರು. ಅವರು ದೇವಶತ್ರುಗಳಾದ ದೈತ್ಯರನ್ನು ವಿಷ್ಣುವಿನ ಬಾಣದಂತೆ ಖಂಡಿಸುವವರು. 'ಅವಿಶೇಷೋ ಬ್ರಹ್ಮವಾಯ್ವೋಃ' ಎಂಬ ಪ್ರಮಾಣಾನುಸಾರವಾಗಿ ಚತುರ್ಮುಖಬ್ರಹ್ಮನಿಗೆ ಸಮಾನರು. ನಿರಂತರವಾಗಿ ದುರ್ವಾದಿಗಳ ಅಪಸಿದ್ಧಾಂತವನ್ನು ಖಂಡಿಸುವವರು. ಪೂರ್ಣಚಂದ್ರನಂತೆ ಪ್ರಸನ್ನತೆಯಿಂದ ಕೂಡಿದವರು. ತನಗೆ ಯೋಗ್ಯವಾದ ಜ್ಞಾನಾದಿಗಳನ್ನು ಪೂರ್ಣವಾಗಿ ಪಡೆದವರು. ತನ್ನ ಏಕಾಂತಭಕ್ತರಿಗೆ ನಿರಂತರ ಜಯಪ್ರದನೂ, ಭಕ್ತಪ್ರಿಯನೂ, ಭಕ್ತರಿಂದ ಸೇವ್ಯನೂ, ನಿರತಿಶಯ ಆನಂದಪೂರ್ಣನೂ, ಲಕ್ಷ್ಮೀಪತಿಯೂ ಆದ ಶ್ರೀಮನ್ನಾರಾಯಣನನ್ನು ಆಚಾರ್ಯರು ಸ್ವಲ್ಪವೂ ಆಲಸ್ಯವಿಲ್ಲದೆ ನಿರಂತರವಾಗಿ ಸಾಷ್ಟಾಂಗ ನಮಸ್ಕಾರಾದಿಗಳಿಂದ ಸೇವಿಸುತ್ತಾರೆ. ಅವರು ಯಾವ ರೋಗಾದಿಗಳ ಲವಮಾತ್ರವಾದ ಉಪದ್ರವಕ್ಕೂ ಒಳಗಾಗುವುದಿಲ್ಲ. ನಿರಂತರವಾಗಿ ಹರಿಧ್ಯಾನಾಸಕ್ತರಾಗಿರುತ್ತಾರೆ. ಆದುದರಿಂದಲೇ ಹರಿಗೆ ಅವರು ಅತ್ಯಂತ

Rarest Archiver

ಪ್ರಿಯರು. ಅಂತಹ ಶ್ರೀಮಧ್ವಗುರುಗಳನ್ನು ಎಲ್ಲಾ ಕಡೆಗಳಲ್ಲಿಯೂ ಸಾತ್ತ್ವಿಕರಾದ ಭಕ್ತರು ಪೂಜಿಸಿದರು.

ವಿ:—ನಾಕಃ ಏಷಾಂ ಅಸ್ತೀತಿ ನಾಕಿನಃ (ಸ್ವರ್ಗಾಧಿಪತಿಗಳಾದ ದೇವತೆಗಳು) ಅಹಿತಾನಾಂ ಹೃತ್, ಅಹಿತಹೃತ್ ಅಹಿತಹೃದಃ ಬಾಣಃ, ಧ್ವಸ್ತಾಃ ದುರಾಗಮಾಃ ಯೇನ ಸಃ, ಹಿಮಾಃ ಗಾವಃ ಯಸ್ಯ ಸಃ, ಅಗ್ರ್ಯಶ್ಚಾಸೌ ಹಿಮಗುಶ್ಚ ಅಗ್ರ್ಯಹಿಮಗುಃ, ಅಗ್ರ್ಯಹಿಮಗೋಃ ಶ್ರೀರಿವ ಶ್ರೀಃ ಯಸ್ಯ ಸಃ ಅಗ್ರ್ಯಹಿಮಗುಶ್ರೀಃ, ಆಯಾಮಃ ಅಸ್ಯ ಅಸ್ತೀತಿ ಆಯಾಮಿ, ಆಯಾಮಿ ಹೃತ್ ಯಸ್ಯ ಸಃ ಆಯಾಮಿಹೃತ್, ಜಯಂ ಪ್ರದದಾತೀತಿ ಜಯಪ್ರದಃ, ವಿಶ್ವಸ್ಯ ಜಯಪ್ರದಃ ತಂ, ಸೇವಿತುಂ ಯೋಗ್ಯಃ ಸೇವ್ಯಃ ತಂ, ಸುಖಮೇವ ಸೌಖ್ಯಂ, ಸು ಶೋಭನಂ ಸೌಖ್ಯಂ ಯಸ್ಯ ಸಃ ತಂ, ದಕ್ಷಸ್ಯ ಭಾವಃ ದಾಕ್ಷ್ಯಂ ತಸ್ಮಾತ್, ಧರತೀತಿ ಧರಃ ಶ್ರಿಯಃ ಧರಃ ಶ್ರೀಧರಃ ತಂ, ಆಮಯಃ ಆದಿಃ ಯಸ್ಯ ಸಃ ಆಮಯಾದಿಃ ಆಮಯಾದೇಃ ವಿರಹಃ, ಸಃ ಅಸ್ಯ ಅಸ್ತೀತಿ ಆಮಯಾದಿವಿರಹೀ, ಯೋಗಃ ಅಸ್ಯ ಅಸ್ತೀತಿ, ಯೋಗೀ. ಸು ಶೋಭನಂ ಹೃತ್ ಯಸ್ಯ ಸಃ ಸುಹೃತ್ ||

ಕ್ರಿ:—ಅಮುಹ್ಯತ ಅಮುಹ್ಯೇತಾಂ ಅಮುಹ್ಯಂತ ಇತ್ಯಾದಿ ಮಹ ಪೂಜಾಯಾಂ ಕರ್ಮಣಿ ಲಙ್.

ವೃತ್ತ :—ಶಾರ್ದೂಲವಿಕ್ರೀಡಿತ ; ಲಕ್ಷಣ—ಸೂರ್ಯಾಶ್ವೈರ್ಮ-ಸಜಾಸ್ತತಾಃ ಸಗುರವಃ ಶಾರ್ದೂಲವಿಕ್ರೀಡಿತಂ.

ಅವ :—ಆಚಾರ್ಯರ ಅದ್ಭುತಮಹಿಮೆಗಳನ್ನೂ, ಅವುಗಳನ್ನು ಹೇಳುವವರಿಗೆ ಮತ್ತು ಸ್ಮರಿಸುವವರಿಗೆ ಲಭಿಸುವ ಫಲವನ್ನೂ ವರ್ಣಿಸುತ್ತಾ ಆಚಾರ್ಯರ ಶಿಷ್ಯರು ವರ್ಣನೆಯನ್ನು ಸಮಾಪ್ತಿಗೊಳಿಸುತ್ತಿದ್ದಾರೆ-

**ಇತಿ ಭುವನ ವಿಭೂಷಣಸ್ಯ ಭೂಯಾಂ-**
**ಸ್ಯವಿಗಣಿತಾನಿ ಕೃತಾಂತರಾಣಿ ಹಂತ |**
**ಶ್ರವಣಮನನಕೀರ್ತನೈರಭೀಷ್ಟಂ**
**ಪ್ರತಿದದತೀತ್ಯಮರಾಃ ಪ್ರಕೀರ್ತಯಂತಿ || ೫೫ ||**

Rarest Archiver

ಅ :— ಭುವನವಿಭೂಷಣಸ್ಯ ಇತಿ ಭೂಯಾಂಸಿ ಅವಿಗಣಿತಾನಿ ಕೃತಾಂತರಾಣಿ ಶ್ರವಣಮನನಕೀರ್ತನೈಃ ಅಭೀಷ್ಟಂ ಪ್ರತಿದದತಿ ಇತಿ ಅಮರಾಃ ಪ್ರಕೀರ್ತಯಂತಿ ಹಂತ !

ಅರ್ಥ :— ಭುವನವಿಭೂಷಣಸ್ಯ = ಎಲ್ಲಾ ಲೋಕಗಳಿಗೂ ಅಲಂಕಾರಸ್ವರೂಪರಾದ, ಶ್ರೀಮಧ್ವಾಚಾರ್ಯರ, ಇತಿ= ಈ ರೀತಿಯ, ಭೂಯಾಂಸಿ= ಅತ್ಯಂತಬಹಳವಾದ, ಅವಿಗಣಿತಾನಿ= ಎಣಿಸಲ್ಪಡದಿರುವ, ಕೃತಾಂತರಾಣಿ= ಇತರ ಅನೇಕಕಾರ್ಯಗಳೂ, ಶ್ರವಣಮನನಕೀರ್ತನೈಃ =ಕೇಳುವುದು, ಚಿಂತಿಸುವುದು, ಹೇಳುವುದು ಇವುಗಳಿಂದ, ಅಭೀಷ್ಟಂ =ಇಷ್ಟಾರ್ಥವನ್ನು, ಪ್ರತಿದದತಿ = ಕೊಡುತ್ತವೆ, ಇತಿ= ಹೀಗೆಂದು, ಅಮರಾಃ=ದೇವತೆಗಳು, ಪ್ರಕೀರ್ತಯಂತಿ = ಹೇಳುತ್ತಾರೆ; ಹಂತ= ಸಂತೋಷವು.

ತಾ:—ಹೀಗೆ 'ಭುವನಾದ್ಭುತಮಧ್ವಚೇಷ್ಟಿತಂ' (ಸರ್ಗ ೧೦ ಶ್ಲೋ. ೨) ಎಂಬ ಶ್ಲೋಕದಲ್ಲಿ ಆಚಾರ್ಯರ ಲೋಕವಿಸ್ಮಯಕರಗಳಾದ ಚರಿತ್ರೆಗಳನ್ನು ದೇವತೆಗಳ ಆಯುಸ್ಸನ್ನು ಪಡೆದರೂ ನಾವು ವರ್ಣಿಸಲಾರೆವು. ಆದರೂ ಕುತೂಹಲಿಗಳಾದ ಭಕ್ತರಿಗೆ ಸ್ವಲ್ಪಮಟ್ಟಿಗೆ ವರ್ಣಿಸುತ್ತೇವೆ– ಎಂದು ಹೇಳುತ್ತಾ ಆಚಾರ್ಯರ ಶಿಷ್ಯನು 'ಕ್ವಚಿದೀಶ್ವರದೇವಮೇಷಭೂಪಂ' (ಸರ್ಗ ೧೦ ಶ್ಲೋಕ. ೪) ಎಂಬಲ್ಲಿಂದ ಇದುವರೆಗೆ ಆಚಾರ್ಯರ ಚರಿತ್ರೆಗಳನ್ನು ವರ್ಣಿಸಿ, ಕೇಳುವವರಿಗೆ ತುಂಬಾ ಆನಂದವನ್ನುಂಟುಮಾಡಿದನು. ಈಗ ಅದನ್ನು ಉಪಸಂಹಾರಮಾಡುತ್ತಿದ್ದಾನೆ— 'ಸಕಲಲೋಕಗಳಿಗೆ ಅಲಂಕಾರಸ್ವರೂಪರಾದ ಶ್ರೀಮಧ್ವಾಚಾರ್ಯರು ಅಸಂಖ್ಯವಾದ ಅದ್ಭುತ ಕಾರ್ಯಗಳನ್ನು ಮಾಡಿದ್ದಾರೆ. ಅವುಗಳನ್ನು ಕೇಳಿ ಚಿಂತಿಸಿ, ಇತರರಿಗೆ ಹೇಳುವ ಭಕ್ತರಿಗೂ ಸಮಸ್ತ ಅಭೀಷ್ಟಗಳು ಕೈಗೂಡುತ್ತವೆ. ಎಂದು ದೇವತೆಗಳೇ ಹೇಳುತ್ತಾರೆ.'

ವಿ:—ಭುವನಾನಾಂ ವಿಭೂಷಣಂ ತಸ್ಯ, ನ ವಿಗಣಿತಾನಿ ಅವಿಗಣಿತಾನಿ, ಅನ್ಯಾನಿ ಕೃತಾನಿ ಕೃತಾಂತರಾಣಿ, ಶ್ರವಣಂ ಚ ಮನನಂ ಚ ಕೀರ್ತನಂ ಚ ಶ್ರವಣಮನನಕೀರ್ತನಾನಿ ತೈಃ ;

Rarest Archiver

**ಕ್ರಿ:**—ಪ್ರತಿ+ದದತಿ, ದದಾತಿ ದತ್ತಃ ದದತಿ, ದದಾಸಿ ದತ್ಥಃ ದತ್ಥ, ದದಾಮಿ ದದ್ವಃ ದದ್ಮಃ; ಪ್ರತಿ ಉಪಸರ್ಗ, ಡುದಾಞ್ (ದಾ) ದಾನೇ. ಪರ. ಸಕ. ಲಟ್; ಪ್ರಕೀರ್ತಯಂತಿ, ಕೀರ್ತಯತಿ ಕೀರ್ತಯತಃ ಕೀರ್ತಯಂತಿ ಇತ್ಯಾದಿ, ಕೃತ (ಕೀರ್ತ್) ಸಂಶಬ್ದನೇ. ಸಕ. ಲಟ್.

**ವೃತ್ತ :**— ವೃತ್ತ–ಪುಷ್ಪಿತಾಗ್ರಾ, ಲಕ್ಷಣ-ಅಯುಜಿ ನಯುಗ-ರೇಫತೋ ಯಕಾರೋ ಯುಜಿ ಚ ನಜೌ ಜರಗಾಶ್ಚ ಪುಷ್ಪಿತಾಗ್ರಾ.

**ಅವ :**—ಶ್ರೀಪೂರ್ಣಪ್ರಜ್ಞರ ಶಿಷ್ಯನು ತನ್ನ ಮಾತನ್ನು ಮುಗಿಸಿದನು – ಎಂದು ಹೇಳುತ್ತಾ ಕವಿಗಳು ಮಹಿಮಕಥನದ ಉಪಸಂಹಾರ ಮಾಡುತ್ತಿದ್ದಾರೆ—

**ಇತಿ ವಿವಿಧಗೋಧಾರಾವಾರ್ಯೈರ್ವಿಶಾರದವಾರಿದೋ**
**ಹರಿಪದರತೋ ವಿದ್ಯಾವಿದ್ಯುತ್ಪ್ರದೀಪಿತದಿಙ್ಮುಖಃ ।**
**ಭವಭಯಮಹಾಘರ್ಮೋತ್ತಪ್ತಂ ಸದಂಘ್ರಿಪಮಂಡಲಂ**
**ಸಫಲಸುಮನಃಸಾಂದ್ರಾನಂದಂ ವ್ಯಧಾದವಿಪಲ್ಲವಂ ॥೫೬॥**

**ಅ:**—ಹರಿಪದರತಃ ವಿದ್ಯಾವಿದ್ಯುತ್‌ಪ್ರದೀಪಿತದಿಙ್ಮುಖಃ ವಿಶಾರದ-ವಾರಿದಃ ಭವಭಯಮಹಾಘರ್ಮೋತ್ತಪ್ತಂ ಸದಂಘ್ರಿಪಮಂಡಲಂ ಇತಿ ವಿವಿಧಗೋಧಾರಾವಾರ್ಯೈಃ ಸಫಲಸುಮನಃಸಾಂದ್ರಾನಂದಂ ಅವಿಪಲ್ಲವಂ ವ್ಯಧಾತ್ ।

**ಅರ್ಥ :**— ಹರಿಪದರತಃ = ಶ್ರೀಮನ್ಮಹಾವಿಷ್ಣುವಿನ ಪಾದಗಳಲ್ಲಿ (ಆಕಾಶದಲ್ಲಿ) ಆಸಕ್ತನಾದ, (ನೆಲಸಿರುವ, ಓಡಾಡುತ್ತಿರುವ) ವಿದ್ಯಾ-ವಿದ್ಯುತ್ಪ್ರದೀಪಿತದಿಙ್ಮುಖಃ = ವಿದ್ಯೆಯೆಂಬ ಮಿಂಚಿನಿಂದ ಬೆಳಗಿಸಲ್ಪಟ್ಟ ದಿಕ್ಕುಗಳ ಪ್ರದೇಶಗಳುಳ್ಳ, ವಿಶಾರದವಾರಿದಃ = ಜ್ಞಾನಿಗಳಾದ ಶ್ರೀಮಧ್ವಾಚಾರ್ಯರೆಂಬ ಮೋಡವು, ಭವಭಯಮಹಾಘರ್ಮೋತ್ತಪ್ತಂ = ಸಂಸಾರದ ದೆಸೆಯಿಂದ ಹೆದರಿಕೆಯೆಂಬ, ಅತಿಹೆಚ್ಚಾದ ಬೇಗೆಯಿಂದ ವ್ಯಥೆಗೊಂಡಿರುವ, ಸದಂಘ್ರಿಪಮಂಡಲಂ = ಸಜ್ಜನರೆಂಬ ವೃಕ್ಷಗಳ ಸಮೂಹವನ್ನು, ಇತಿ = ಈ ರೀತಿ, ವಿವಿಧಗೋಧಾರಾವಾರ್ಯೈಃ = ನಾನಾರೀತಿಯ ಮಾತುಗಳೆಂಬ

Rarest Archives

ನೀರಿನ ಧಾರೆಗಳ ಸಮೂಹಗಳಿಂದ, (ಸಂತೋಷಗೊಳಿಸಿ,) ಸಫಲಸುಮನಃ ಸಾಂದ್ರಾನಂದಂ = ಜ್ಞಾನವಿಶೇಷ ಮತ್ತು ಒಳ್ಳೆಯ ಮನಸ್ಸು ಇವುಗಳೆಂಬ ಹಣ್ಣು ಮತ್ತು ಹೂವುಗಳಿಂದ ಸಹಿತವಾದುದನ್ನಾಗಿಯೂ, ಅವಿಪಲ್ಲವಂ = ವಿಪತ್ತಿನಲೇಶವಿಲ್ಲದ್ದನ್ನಾಗಿಯೂ(ಚಿಗುರಿಲೆಯ ಅಭಾವವಿಲ್ಲದ್ದನ್ನಾಗಿಯೂ) ವ್ಯಧಾತ್ = ಮಾಡಿತು.

**ತಾ:**—ನೀರು ತುಂಬಿದ ಮಳೆಗರೆಯುವ ಮೋಡವು ಆಕಾಶದಲ್ಲಿ ಎಲ್ಲಾಕಡೆ ಹರಡಿರುತ್ತದೆ. ಮಿಂಚಿನಿಂದ ಎಲ್ಲಾ ದಿಕ್ಕುಗಳನ್ನೂ ಪ್ರಕಾಶಗೊಳಿಸುತ್ತದೆ. ಬಿಸಿಲಿನಿಂದ ಬೆಂದು ಹೋದ ಮರಗಳನ್ನು ತಂಪಾದ ನೀರಿನಿಂದ ತಣಿಸಿ ಅವುಗಳಲ್ಲಿ ಚಿಗುರು ಹೂವು ಹಣ್ಣುಗಳು ಉಂಟಾಗುವಂತೆ ಮಾಡುತ್ತದೆ. ಹಾಗೆಯೇ ವಿಷ್ಣುಪಾದಧ್ಯಾನಾಸಕ್ತರಾದ, ವಿದ್ಯೆಯೆಂಬ ಮಿಂಚುಗಳಿಂದ ದಶದಿಕ್ಕುಗಳನ್ನೂ ಪ್ರಕಾಶಗೊಳಿಸಿದ ವಿದ್ವಾಂಸರಾದ ಶ್ರೀಮಧ್ವಾಚಾರ್ಯರು ಹಿಂದೆ ಹೇಳಿರುವಂತೆ ಸಜ್ಜನರಿಗೆ ಆಶ್ಚರ್ಯ ಮತ್ತು ಆನಂದವನ್ನುಂಟುಮಾಡುವ ಮಾತುಗಳನ್ನಾಡಿದರು. ಅದರಿಂದ ಸಂಸಾರದ ಬೇಗೆಯಿಂದ ಬೆಂದ ಸಜ್ಜನರಿಗೆ ತುಂಬಾ ಆನಂದ ಉಂಟಾಯಿತು. ಅವರ ಮನಸ್ಸು ಪ್ರಸನ್ನವಾಯಿತು. ಅವರ ವಿಪತ್ತುಗಳೆಲ್ಲಾ ನೀಗಿದುವು. ಶ್ರೀಮಧ್ವರೆಂಬ ಜ್ಞಾನಧಾರಾಧರನು (ಮೇಘವು) ಇಂತಹ ಅದ್ಭುತವಾದ ಕಾರ್ಯವನ್ನು ಮಾಡಿತು.

**ವಿ:**—ಗವಾಂ ಧಾರಾಃ ಗೋಧಾರಾಃ ಗೋಧಾರಾಣಾಂ ವಾರಾಃ ಗೋಧಾರಾವಾರಾಃ, ವಿವಿಧಾಶ್ಚ ತೇ ಗೋಧಾರಾವಾರಾಶ್ಚ ವಿವಿಧ-ಗೋಧಾರಾವಾರಾಃ ತೈಃ, (ಅಥವಾ, ವಿವಿಧಾಶ್ಚ ತಾಃ ಗಾವಶ್ಚ ವಿವಿಧಗಾವಃ ವಿವಿಧಗವಾಂ ಧಾರಾಃ ವಿವಿಧಗೋಧಾರಾಃ ವಿವಿಧಗೋಧಾರಾಣಾಂ ವಾರಾಃ ವಿವಿಧಗೋಧಾರಾವಾರಾಃ ತೈಃ) ಹರೇಃ ಪದೇ ಹರಿಪದೇ ಹರಿಪದಯೋಃ ರತಃ, (ಮೇಘ-ಪಕ್ಷೇ-ಹರೇಃ ಪದಂ ಹರಿಪದಂ ತಸ್ಮಿನ್ ರತಃ) ವಿದ್ಯಾಃ ಏವ ವಿದ್ಯುತಃ ವಿದ್ಯಾವಿದ್ಯುತಃ ದಿಶಾಂ ಮುಖಾನಿ ದಿಙ್ಮುಖಾನಿ, ವಿದ್ಯಾ-ವಿದ್ಯುದ್ಭಿಃ ಪ್ರದೀಪಿತಾನಿ ದಿಙ್ಮುಖಾನಿ ಯಸ್ಯ ಸಃ (ಮೇಘಪಕ್ಷೇ- ವಿದ್ಯಾ ಇವ ವಿದ್ಯುತಃ, ತಾಭಿಃ ಪ್ರದೀಪಿತಾನಿ ದಿಙ್ಮುಖಾನಿ ಯಸ್ಯ ಸಃ) ಭವಾತ್

Rarest Archiver

ಭಯಂ ಭವಭಯಂ ಮಹಾಂಶ್ಚ ಅಸೌ ಘರ್ಮಶ್ಚ ಮಹಾಘರ್ಮಃ, ಭವಭಯಮೇವ ಮಹಾಘರ್ಮಃ, ತೇನ ಉತ್ತಪ್ತಂ ತತ್; ಅಂಘ್ರಿಭಿಃ ಪಿಬಂತೀತಿ ಅಂಘ್ರಿಪಾಃ ಸಂತಃ ಏವ ಅಂಘ್ರಿಪಾಃ (ಮೋಘಪಕ್ಷೇ – ಸಂತಶ್ಚ ತೇ ಅಂಘ್ರಿಪಾಶ್ಚ) ಸದಂಘ್ರಿಪಾಣಾಂ ಮಂಡಲಂ ತತ್, ಶೋಭನಂ ಚ ತತ್ ಮನಶ್ಚ ಸುಮನಃ, ಫಲಂ ಚ ಸುಮನಶ್ಚ ಫಲಸುಮನಸೀ ತಾಭ್ಯಾಂ ಸಹಿತಂ ಸಫಲಸುಮನಃ, ಅಥವಾ ಫಲೇನ ಸಹಿತಂ ಸಫಲಂ, ಸಫಲಂ ಸುಮನಃ ಯಸ್ಯ ತತ್ ಸಫಲಸುಮನಃ, ಸಾಂದ್ರಃ ಆನಂದಃ ಯಸ್ಯ ತತ್, ಸಫಲಸುಮನಶ್ಚ ತತ್ ಸಾಂದ್ರಾನಂದಂ ಚ ಸಫಲಸುಮನಃಸಾಂದ್ರಾನಂದಂ ತತ್, (ವೃಕ್ಷಪಕ್ಷೇ – ಫಲಾನಿ ಚ ಸುಮನಸಶ್ಚ ಫಲಸುಮನಸಃ ಫಲಸುಮನೋಭಿಃ ಸಹ ವರ್ತತೇ ಇತಿ ಸಫಲಸುಮನಃ ಉಳಿದುದು ಹಿಂದಿನಂತೆ) ವಿಪದಃ ಲವಃ ವಿಪಲ್ಲವಃ ನ ವಿದ್ಯತೇ ವಿಪಲ್ಲವಃ ಯಸ್ಯ ತತ್, (ವೃಕ್ಷಪಕ್ಷೇ– ವಿಗತಾಃ ಪಲ್ಲವಾಃ ಯಸ್ಯ ತತ್, ವಿಪಲ್ಲವಂ, ನ ವಿಪಲ್ಲವಂ ಅವಿಪಲ್ಲವಂ)

**ಕಿ:**—ವಿ+ಅಧಾತ್ ಅಧಾತಾಂ ಅಧುಃ ಇತ್ಯಾದಿ ಧಾ (ಡುಧಾಞ್) ಧಾರಣಪೋಷಣಯೋಃ ಲುಙ್.

ವೃತ್ತ:— ಹರಿಣೀ–ಲಕ್ಷಣ-ರಸಯುಗಹಯೈಃ ನ್ಸೌ ಮ್ರೌ ಸ್ಲೌ ಗೋ ಯದಾ ಹರಿಣೀ ತದಾ.

ಇಲ್ಲಿಗೆ ಶ್ರೀಮತ್ಕವಿಕುಲತಿಲಕಶ್ರೀಮನ್ನಾರಾಯಣ ಪಂಡಿತರಿಂದ ರಚಿತವಾದ ಶ್ರೀಮತ್ಸುಮಧ್ವವಿಜಯಮಹಾಕಾವ್ಯದ **ಹತ್ತನೆಯ ಸರ್ಗದ** ಕನ್ನಡ ಭಾಷಾನುವಾದವು ಸಮಾಪ್ತವಾಯಿತು.

---

Rarest Archiver

# ಶ್ರೀಸುಮಧ್ವವಿಜಯ ಮಹಾಕಾವ್ಯಂ

## ಹನ್ನೊಂದನೆಯ ಸರ್ಗದ ಕಥಾಸಾರಾಂಶ

ಒಂದಾನೊಂದು ದಿನ ಶ್ರೀಮಧ್ವಾಚಾರ್ಯರು ಉಡುಪಿಯಲ್ಲಿ ರಾತ್ರಿಯ ವೇಳೆ ಶಿಷ್ಯರಿಗೆ ಪಾಠಹೇಳುತ್ತಿದ್ದರು. ಆಗ ಶೇಷದೇವರು ಆಕಾಶದಲ್ಲಿ ನಿಂತು ಸನಕಾದಿಮುನಿಗಳೊಡನೆ ಆಚಾರ್ಯರ ಪ್ರವಚನವನ್ನು ಕೇಳಿ ಹೊರಟು ಹೋದರು. ಚಂದ್ರನಿಲ್ಲದ ರಾತ್ರಿಯಲ್ಲಿ ಶೇಷದೇವರ ಪ್ರಕಾಶವನ್ನು ಕೆಲವರು ಬೆಳದಿಂಗಳೆಂದು ಭ್ರಮಿಸಿದರು. ಶೇಷದೇವರು ಹೊರಟುಹೋದ ಮೇಲೆ ಬೆಳದಿಂಗಳಿನಂತಹ ಪ್ರಕಾಶವು ಮಾಯವಾಯಿತು. ಶಿಷ್ಯರು ಇದೇನೆಂದು ಕೇಳಿದಾಗ ಆಚಾರ್ಯರು 'ಅಗೋ, ಆ ತೇಜೋ ಮಂಡಲದ ಕಡೆಗೆ ನೋಡಿರಿ, ಶೇಷದೇವರು ಸನಕಾದಿಗಳ ಜೊತೆಗೆ ನಮ್ಮ ವ್ಯಾಖ್ಯಾನವನ್ನು ಕೇಳಲು ಬಂದಿದ್ದು ಈಗ ಹೋಗುತ್ತಿದ್ದಾರೆ' ಎಂದು ಹೇಳಿ ಶಿಷ್ಯರಿಗೆ ಶೇಷಾದಿಗಳನ್ನು ಸ್ವಲ್ಪತೋರಿಸಿದರು.

ಶೇಷದೇವರು ತಮ್ಮ ಲೋಕಕ್ಕೆ ಹೋದ ಮೇಲೆ, ಸನಕಾದಿಗಳು ಅವರ ಹತ್ತಿರ ಬಂದು ವಂದಿಸಿ 'ಮಧ್ವಶಾಸ್ತ್ರವನ್ನು ಓದುವ ಜನರಿಗೆ ಏನು ಫಲದೊರೆಯುತ್ತದೆ, ಹೇಳಿ' ಎಂದರು. ಆದಿಶೇಷರು ವಿಸ್ತಾರವಾಗಿ ಮಧ್ವಶಾಸ್ತ್ರಾಭ್ಯಾಸದ ಫಲವನ್ನು ವಿವರಿಸಿದರು.

ಮಧ್ವಸಿದ್ಧಾಂತವನ್ನು ಓದಿ ಅರ್ಥ ಮಾಡಿಕೊಂಡವರಿಗೆ ಮೋಕ್ಷವೇ ಮುಖ್ಯಫಲವೆಂದು ಶುಕಾಚಾರ್ಯರು ಸರಸ್ವತಿ ಮುಂತಾದವರು ಹೇಳಿದ್ದಾರೆ. ಸ್ವರ್ಗಾದಿಫಲಗಳು ಈ ಶಾಸ್ತ್ರಾಭ್ಯಾಸದಿಂದ ಲಭ್ಯವಾಗಬಹುದಾದರೂ ಅವು ಅಮುಖ್ಯವಾಗಿವೆ. ಕೃಷಿಕನಿಗೆ ಭತ್ತ ಅಕ್ಕಿಗಳೇ ಮುಖ್ಯ ಫಲವಲ್ಲದೆ ಹುಲ್ಲು ಹೊಟ್ಟು ಮುಂತಾದುವುಗಳು ಫಲವಲ್ಲವಷ್ಟೇ ! ಮುಖ್ಯ ಪ್ರಾಣಾಂಶರಾದ ಶ್ರೀಮಧ್ವಾಚಾರ್ಯರು ರಚಿಸಿದ ಈ ಶಾಸ್ತ್ರವನ್ನು ಸೇವಿಸುವವರಿಗೆ ಶ್ರೀಮನ್ನಾರಾಯಣನು ತನ್ನ ವೈಕುಂಠವೆಂಬ ನಿತ್ಯ ಸ್ಥಾನವನ್ನೇ ಕೊಡುತ್ತಾನೆ. ವೈಕುಂಠಲೋಕದಲ್ಲಿ ಉಪಮಾನವೇ ಇಲ್ಲದ ಶ್ರೀಹರಿಯ ಪಟ್ಟಣವು ಪ್ರಕಾಶಮಾನವಾಗಿದೆ. ಅಲ್ಲಿ ಪದ್ಮರಾಗ ಮಣಿ

ಗಳಿಂದ ರಚಿತವಾಗಿ ಸುಧಾಲೇಪನದಿಂದ ಹೊರಗೆ ಬಿಳಿಯಾಗಿ ಕಾಣಿಸುತ್ತಾ ಇರುವ ಸೌಧಗಳು ನನ್ನ ಶರೀರದಲ್ಲಿ ಮಲಗಿರುವ ಉದಯಿಸುವ ಸೂರ್ಯ ನಂತೆ ಬಣ್ಣವುಳ್ಳ ವಿಷ್ಣುವನ್ನು ಹೋಲುತ್ತವೆ. ಆ ಮನೆಗಳ ಮಹಡಿ ಯಲ್ಲಿಟ್ಟಿರುವ ಹಕ್ಕಿಗಳ ಗೊಂಬೆಗಳು ಜೀವವಿದ್ದ ಹಕ್ಕಿಗಳಂತೆ ತೋರುತ್ತವೆ. ಅಲ್ಲಿ ಮನೆಗಳ ಒಳಗೆ ನಾನಾಬಣ್ಣದ ಮೇಲ್ಕಟ್ಟುಗಳಲ್ಲಿ ಜೋಲಾಡುವ ರತ್ನ ಮಾಲೆಗಳು ಹೊರಸೂಸುವ ಕಾಂತಿಧಾರೆಗಳಂತೆ ಕಾಣಿಸುತ್ತಿವೆ. ಇಂತಹ ಸಂಪತ್ತು ವೈಕುಂಠದಲ್ಲಿ ಅಸಂಭವವೆಂದು ಸಂದೇಹಪಡಲು ಅವಕಾಶವಿಲ್ಲ. ಲೋಕೋತ್ತರಸುಂದರಿಯಾದ ಸಕಲವಸ್ತುಗಳಿಗೆ ಅಭಿಮಾನಿಯಾದ ಲಕ್ಷ್ಮಿಯೇ ಮೋಕ್ಷದಲ್ಲಿ ಸರ್ವವಸ್ತುಸ್ವರೂಪಳಾದುದರಿಂದ ಆ ವಸ್ತುಗಳು ಅದ್ಭುತಸುಂದರವಾಗಿವೆಯೆಂಬುದು ಆಶ್ಚರ್ಯವಲ್ಲ. ಮುಕ್ತರು ಎಷ್ಟು ತುಂಬಿದರೂ ಶ್ರೀಹರಿಯ ಮಹಿಮೆಯಿಂದ ಅಲ್ಲಿ ಇಕ್ಕಟ್ಟಿಲ್ಲ. ಮುಕ್ತರ ಮನೆಗಳ ಮಧ್ಯದಲ್ಲಿ ಶ್ರೀಪರಮಾತ್ಮನ ಮನೆಯು ನಕ್ಷತ್ರಮಂಡಲಗಳ ಗುಂಪಿನ ಮಧ್ಯದಲ್ಲಿರುವ ಚಂದ್ರಮಂಡಲದಂತೆ ಪ್ರಕಾಶಿಸುತ್ತದೆ. ಸಹಸ್ರಾರು ದಾಸಿಯರಿದ್ದರೂ ಅಲ್ಲಿ ಲಕ್ಷ್ಮೀದೇವಿಯೇ ಹರಿಯ ಸೇವಿಕೆ ಯಾಗಿದ್ದಾಳೆ. ಲಕ್ಷ್ಮಿದೇವಿಯ ಜೊತೆಗೆ ಶ್ರೀಮನ್ನಾರಾಯಣನು ಶೇಷ ತಲ್ಪದಲ್ಲಿ ಪವಡಿಸಿ ಅವಳಿಗೆ ವಿಶೇಷವಾದ ಆನಂದಾನುಭವವನ್ನು ಉಂಟು ಮಾಡುತ್ತಾನೆ. 'ಶ್ರೀಹರಿಯ ಗುಣಗಳನ್ನು ರಮಾದೇವಿಯೂ ಪೂರ್ತಿ ಯಾಗಿ ವರ್ಣಿಸಲಾರಳು, ಮುಕ್ತಬ್ರಹ್ಮಾದಿಗಳಿಗೂ ಶ್ರೀಹರಿಯು ತನ್ನ ದರ್ಶನಮಾತ್ರದಿಂದ ಆನಂದವನ್ನೀಯುತ್ತಾನೆ. ಸಾರೂಪ್ಯ ಸಾಮೀಪ್ಯ ಸಾಲೋಕ್ಯ ಮೋಕ್ಷಗಳನ್ನು ಪಡೆದ ಮುಕ್ತರು ಅಲ್ಲಿ ಯಾವ ದುಃಖವೂ ಇಲ್ಲದೆ ಶ್ರೀಹರಿಯ ಅನುಗ್ರಹದಿಂದ ಅಭಿವ್ಯಕ್ತವಾದ ಸ್ವರೂಪಾನಂದವನ್ನು ಅನುಭವಿಸುತ್ತಾ ಇರುತ್ತಾರೆ. ಅಲ್ಲಿ ಮುಕ್ತರೆಲ್ಲರೂ ತಾರತಮ್ಯದಿಂದ ಆನಂದಾನುಭವವನ್ನು ಮಾಡುತ್ತಿದ್ದರೂ ಅವರಲ್ಲಿ ಪರಸ್ಪರ ದ್ವೇಷಾ ಸೂಯಾದಿಗಳು ಹುಟ್ಟುವುದಿಲ್ಲ. ಮುಕ್ತರು ನಿತ್ಯತರುಣರು. ಅಲ್ಲಿ ಸ್ತ್ರೀಸಮಾಗಮಸುಖವೂ ಇದೆ. ಅಲ್ಲಿ ಮುಕ್ತತರುಣಿಯರು ತಮ್ಮ ತಮ್ಮ ಪತಿಗಳಾದ ಮುಕ್ತತರುಣರನ್ನು ಹಿಂಬಾಲಿಸುತ್ತಾ ಹದಿನಾರುವರ್ಷದ ತರುಣಿಯರಂತೆ ಕಾಣಿಸುತ್ತಾರೆ. ಅವರೆಲ್ಲರೂ ವಿಮಾನಗಳ ಮೂಲಕ

Rarest Archiver

ಸಂಚರಿಸಿ, ವಿಮಾನದಿಂದ ಇಳಿಯುತ್ತಾರೆ. ಭಂಗಾರದ ಬಳೆಗಳುಳ್ಳ ಚಿಗುರಿನಂತಹ ಕೈಗಳು ಕುಂಭಕುಚಗಳ ಮೇಲೆ ಲಂಬಿಸಿರುವ ಹಾರಗಳು. ಕೈಯಲ್ಲಿ ತಾವರೆಯ ಹೂವು. ಒಡ್ಯಾಣದ ಗೆಜ್ಜೆಗಳೂ ಕಾಲ್ಗೆಜ್ಜೆಗಳೂ ಸದ್ದು ಮಾಡುತ್ತಾ ನಮ್ಮ ಒಡತಿಯ ಮುಖದ ಅಂದವನ್ನು ನೋಡಿರೆಂದು ಹೇಳುವಂತೆ ಕಾಣಿಸುತ್ತವೆ. ಆ ಮುಕ್ತತರುಣಿಯರು ತಮ್ಮ ಪ್ರಿಯರು ತಮಗಾಗಿ ಕಾದುನಿಂತಿರುವಾಗ, ಬೇಗನೆ ನಡೆಯಲಾರದೆ ಇರುವುದರಿಂದ ಆಯಾಸದಿಂದ ಹೇಗಾದರೂ ಬಂದು ತಮ್ಮ ಪ್ರಿಯರ ಭುಜ ಕೈಗಳನ್ನು ಅವಲಂಬಿಸಿ ಪ್ರಮದವನವನ್ನು ಪ್ರವೇಶಿಸುತ್ತಾರೆ. ಪುಷ್ಪೋದ್ಯಾನದಲ್ಲಿ ತಂಪಾದ ಸುವಾಸನೆಯಾದ ಮಂದಮಾರುತವು ಹೂವುಗಳ ಪರಾಗ ಭಾರವನ್ನು ಹೊತ್ತು ಸಂಚರಿಸುತ್ತದೆ. ಅಲ್ಲಿ ವಸಂತ ಮುಂತಾದ ಆರು ಋತುಗಳಲ್ಲಿ ಆಗುವ ಫಲಪುಷ್ಪಗಳು ಯಾವಾಗಲೂ ಇರುತ್ತವೆ. ವಸಂತ ಋತುವಿನಲ್ಲಿ ಮಲ್ಲಿಗೆ ಸಂಪಿಗೆ ಮುಂತಾದ ಹೂವುಗಳು ಅರಳಿರುತ್ತವೆ. ದುಂಬಿಗಳು ಇಂಪಾದ ಝೇಂಕಾರ ಧ್ವನಿಯನ್ನು ಮಾಡುತ್ತಾ ಇರುತ್ತವೆ. ಗ್ರೀಷ್ಮಋತುವಿನಲ್ಲಿ ನವಮಲ್ಲಿಕಾ ಎಂಬ ಒಂದುಬಗೆಯ ಮಲ್ಲಿಗೆ ಹೂವನ್ನು ಮುಕ್ತತರುಣನು ತನ್ನಪ್ರಿಯತಮೆಯ ಎದುರಾಗಿ ನಿಂತು ಅವಳ ಮುಡಿಗೆ ತಾನೇ ಮುಡಿಸುತ್ತಾನೆ. ವರ್ಷಋತುವಿನಲ್ಲಿ ಮುಕ್ತವಾದ ನವಿಲುಗಳ ಕುಣಿತವು ನಯನಮನೋಹರವಾಗಿರುತ್ತದೆ. ಶರದೃತುವಿನಲ್ಲಿ ಅರಳಿದ ತಾವರೆಗಳ ಜತೆಗೆ ಹಂಸಗಳ ಸರಸವು, ಗಿಳಿಗಳ ಇಂಪಾದಧ್ವನಿಯೂ ಮನಸ್ಸನ್ನು ಮುದಗೊಳಿಸುತ್ತವೆ. ಹೇಮಂತಶಿಶಿರಗಳಲ್ಲಿ ಹಿಮದ ರಾಶಿಯು ಸ್ಫಟಿಕದ ಬೆಟ್ಟದಂತೆ ಕಂಗೊಳಿಸುತ್ತಿರುವಾಗ ಕುಂದದ ಹೂವು ಗಳು ಅಂದವಾಗಿ ಅರಳಿರುತ್ತವೆ. ಪ್ರಾಕೃತವಾದ ನಮ್ಮಲೋಕಗಳಲ್ಲಿರು ವಂತೆ ಅಲ್ಲಿ ಎಲ್ಲಾ ಋತುಗಳಲ್ಲಿಯೂ ದೋಷಗಳು ಸ್ವಲ್ಪವೂ ಇರುವುದಿಲ್ಲ, ಅವುಗಳು ಮುಕ್ತರಿಗೆ ಅನುಕೂಲವಾಗಿಯೇ ಇರುತ್ತವೆ. ಮುಕ್ತರು ವಿಧಿನಿಷೇಧಾತೀತರಾದರೂ ಅಲ್ಲಿರುವ ತಾವು ಅನುಭವಿಸುವ ಎಲ್ಲವನ್ನೂ ದೇವರಿಗೆ ಸಮರ್ಪಿಸಿ ಅನುಭವಿಸುತ್ತಾರೆ. ಇದು ಅವರ ಸ್ವಭಾವವೇ ಆಗಿರುತ್ತದೆ. ಮುಕ್ತರು ಶೃಂಗಾರಗಾನ ಮಾಡುತ್ತಾರೆ, ಆದರೆ ಅದು ಲೌಕಿಕ ಶೃಂಗಾರಕ್ಕೆ ಸಂಬಂಧಪಟ್ಟಿರುವುದಿಲ್ಲ, ಪರಮಾತ್ಮನ ಅಲೌಕಿಕವಾದ

ಅದ್ಭುತ ಮಹಿಮೆಗಳ ವರ್ಣನರೂಪವಾಗಿರುತ್ತದೆ. ಅಲ್ಲಿರುವ ಎಲ್ಲ ಮುಕ್ತ ದಂಪತಿಗಳೂ ಪರಸ್ಪರ ಒಬ್ಬರು ಇನ್ನೊಬ್ಬರನ್ನು ಆನಂದ ಪಡಿಸುತ್ತಲೇ ಇರುತ್ತಾರೆ. ಇಲ್ಲಿ ವಿರಸವೆಂಬುದೇ ಇರುವುದಿಲ್ಲ. ಅಲ್ಲಿ ದಂಪತಿಗಳ ಅಪ್ರಾಕೃತವಾದ ಸಂಭೋಗವೂ ಇರುತ್ತದೆ. ಜಲವಿಹಾರವಿದೆ. ನಾನಾವಿಧ ವಾದ ಅಲಂಕಾರಗಳಿಂದ, ವಸ್ತ್ರಗಳಿಂದ ಮುಕ್ತರು ಅಲಂಕರಿಸಿಕೊಳ್ಳು ತ್ತಾರೆ. ಅಪ್ರಾಕೃತವಾದ ಸುವರ್ಣಪಾತ್ರೆಗಳಿಂದ ಅಮೃತಪಾನ ಮಾಡು ತ್ತಾರೆ. ಹಂಸತೂಲಿಕಾತಲ್ಪವನ್ನು ಹಾಸಿರುವ ಮಂಚದಲ್ಲಿ ವಿಹರಿಸುತ್ತಾರೆ. ವೈಕುಂಠದಲ್ಲಿ ಯಾವ ದೋಷವೂ ಇಲ್ಲದಿರುವುದರಿಂದ ಅಲ್ಲಿಯ ಯಾವ ವಿಹಾರವೂ ಆಯಾಸ, ಬೆವರು, ದುರ್ವಾಸನೆ, ಬೇಸರ ಮುಂತಾದ ದೋಷಗಳ ಲೇಶದಿಂದಲೂ ಕೂಡಿರುವುದಿಲ್ಲ. ಮುಕ್ತದಂಪತಿಗಳ ಸುರತ ಕ್ರೀಡೆಯನ್ನು ವೇದವೂ ಪ್ರಶಂಸಿಸುತ್ತದೆ. ಅಪರೋಕ್ಷಜ್ಞಾನಿಗಳಾದ ಋಷಿಗಳೂ ಶ್ಲಾಘಿಸುತ್ತಾರೆ. ಎಲ್ಲದಕ್ಕಿಂತಲೂ ಮಿಗಿಲಾದ ಸುಖವು ಅಲ್ಲಿ ಪರಮಾತ್ಮನ ನಿತ್ಯಮುಕ್ತಸ್ವರೂಪದ ದರ್ಶನದಿಂದ ಆಗುತ್ತದೆ. ಅಮೂಲ್ಯ ವಾದ ಕಿರೀಟವನ್ನು ಧರಿಸಿ ಕುಟಿಲಕುಂತಲಗಳಿಂದ ಶೋಭಿಸುವ ಹಣೆಯಲ್ಲಿ ತಿಲಕದಿಂದ ಶೋಭಿಸುವ ಹರಿಯ ಮುಖವು, ಕಿವಿಗಳಲ್ಲಿ ಝಗಮಗಿಸುವ ಮಕರಕುಂಡಲಗಳಿಂದ ಮಂಗಳ ನೀರಾಜನವನ್ನು ಸ್ವೀಕರಿಸುತ್ತದೆ. ಅನಂತಚಂದ್ರಕೋಟಿಯನ್ನು ಮೀರಿಸುವ ಮುಖ, ಚಂದದ ಕೆಂದುಟಿ, ಕಿರುನಗೆ, ಅಸದೃಶವಾದ ಕಡೆಗಣ್ಣುಗಳ ಕುಡಿನೋಟ ಇವುಗಳಿಂದ ಭಕ್ತರನ್ನು ಶ್ರೀಹರಿಯು ಆನಂದಗೊಳಿಸುತ್ತಾನೆ. ಶಂಖದಂತಹ ಕತ್ತು ಮುತ್ತಿನ ಸರದಲ್ಲಿ ಎದೆಯಲ್ಲಿ ಶೋಭಿಸುವ ಕೌಸ್ತುಭಮಣಿ, ತೋಳುಗಳಲ್ಲಿ ತೋಳ್ಬಂದಿಗಳು, ಭಂಗಾರದ ನವರತ್ನದ ಕಂಕಣಗಳು, ಉಂಗುರಗಳು, ಕೈಗಳಲ್ಲಿ ಸುದರ್ಶನ, ಪಾಂಚಜನ್ಯ, ಕೌಮೋದಕೀ, ಕಮಲ, ಶಾಂರ್ಗವೆಂಬ ಬಿಲ್ಲು, ಇವುಗಳೆಲ್ಲಾ ಶೋಭೆಯನ್ನುಂಟುಮಾಡುತ್ತಿವೆ. ಇವೆಲ್ಲಾ ಅಪ್ರಾಕೃತ ಮತ್ತು ಭಗವಂತನ ಸ್ವರೂಪಭೂತವಾದುವುಗಳು. ಪುಷ್ಟವಾದ ತೋಳು ಗಳು, ಎದೆಯಲ್ಲಿ ಲಕ್ಷ್ಮೀದೇವಿ, ಹೊಟ್ಟೆಯಲ್ಲಿ ಹದಿನಾಲ್ಕು ಲೋಕಗಳು, ಹೊಕ್ಕಳ ತಾವರೆಯಲ್ಲಿ ವೇದಗಾನಮಾಡುತ್ತಿರುವ, ಮುಕ್ತನಾದ ಚತುರ್ಮುಖನು, ಪೀತಾಂಬರವು, ಆನೆಯ ಸೊಂಡಿಲಿನಂತಹ ತೊಡೆಗಳು

Rarest Archiver

ರತ್ನಗನ್ನಡಿಯಂತಹ ಮೊಣಕಾಲು, ಕ್ರಮವಾಗಿ ದುಂಡಗಿರುವ ಕಣಕಾಲು, ಕಾಲ್ಕಡಗಗಳು, ಹವಳದಂತಹ ಕಾಲಿನ ಉಗುರುಸಾಲುಗಳು ಚಕ್ರ ಪದ್ಮ ಧ್ವಜಾಂಕುಶಾದಿ ರೇಖೆಗಳಿಂದ ಶೋಭಿಸುವ ಕಾಲುಗಳ ತಳಗಳು, ಸಮಸ್ತ ಸಾತ್ತ್ವಿಕಮುಕ್ತಜೀವರನ್ನು ಪವಿತ್ರೀಕರಿಸುವ ಅಪ್ರಾಕೃತವಾದ ಪಾದ ಧೂಳಿಗಳು ಇವುಗಳಿಂದ ಕೂಡಿರುವ ಪರಮಾತ್ಮನ ಸುಂದರ ಅಪ್ರಾಕೃತ ಅಲೌಕಿಕ ಅದ್ಭುತಸ್ವರೂಪವು ಮನುಷ್ಯೋತ್ತಮರಿಂದ ಆರಂಭಿಸಿ ಬ್ರಹ್ಮ ದೇವರವರೆಗೆ ಅಧಿಕಾರಿಗಳ ಜ್ಞಾನ ಭಕ್ತಿ ವೈರಾಗ್ಯಾದಿಗಳ ತಾರತಮ್ಯಾನು ಸಾರವಾಗಿ ಗೋಚರಿಸುತ್ತದೆ. ಅವರಿಗೆ ಅಲೌಕಿಕವಾದ ಆನಂದವನ್ನುಂಟು ಮಾಡುತ್ತದೆ. ಹರಿಯ ಕೆಲವು ರೂಪಗಳು ಉದಿಸುವ ಸೂರ್ಯನಂತೆ, ಮತ್ತೆ ಕೆಲವು ಚಿನ್ನದಬಣ್ಣದವುಗಳು, ಮುತ್ತಿನಸರದಂತೆ ಬಿಳಿದಾದ ರೂಪಗಳು, ಇಂದ್ರನೀಲಮಣಿಯ ಕಾಂತಿಯ ರೂಪಗಳು ಹೀಗೆ ಅನಂತ ವರ್ಣದ ಅನಂತರೂಪಗಳು ಅನಂತ ಮುಕ್ತರಿಗೆ ನಿರಂತರವಾಗಿ ಕಾಣಿಸುತ್ತಾ ಅವರನ್ನು ಸ್ವರೂಪಾನಂದಸಾಗರದ ತರಂಗಗಳಲ್ಲಿ ತೇಲಾಡಿಸುತ್ತಾ ಇರುತ್ತವೆ. ಸಮಸ್ತಲೋಕಗಳಲ್ಲಿಯೂ ಅನಂತಕೋಟಿಬ್ರಹ್ಮಾಂಡ ಗಳಲ್ಲಿಯೂ ಆಶ್ಚರ್ಯಕರವಾದ ವಸ್ತುಗಳಲ್ಲಿ ಅತ್ಯಂತ ಆಶ್ಚರ್ಯಕರವಾದ ಉತ್ತಮೋತ್ತಮವಾದ ಭಗವಂತನ ಇಂತಹ ಅನಂತಾದ್ಭುತರೂಪಗಳು ಮುಕ್ತವೈಕುಂಠಸ್ಥಾನದಲ್ಲಿ ಮುಕ್ತಭಕ್ತರಿಗೆ ಗೋಚರಿಸುತ್ತವೆ.

ಅಲ್ಲಿ ಸಿದ್ಧಸ್ವರೂಪರಾಗಿರುವ ಮುಕ್ತರಿಗೆ ಯಜ್ಞ ಪ್ರವಚನಗಾನಗಳು, ಇವೆ. ಅವೆಲ್ಲಾ ಸಾಧನಗಳಲ್ಲ; ಆನಂದದ ಅಭಿವ್ಯಕ್ತಿರೂಪವಾಗಿವೆ. ಮುಕ್ತ ವೈಕುಂಠದ ವೈಭವವನ್ನು ಅಮುಕ್ತರಾದ ಕುಂಠಿತಬುದ್ಧಿಯ ಇಲ್ಲಿಯ ಮನುಜರಿಗೆ ಬಾಯಿಯಿಂದ ಹೇಳಲೂ ಬರಲಾರದು. ಮನಸ್ಸಿನಿಂದ ಆಲೋಚಿಸಲೂ ಬರಲಾರದು. ಅಲ್ಲಿರುವ ನಿತ್ಯ ಮುಕ್ತಳಾದ ಲಕ್ಷ್ಮೀ, ಹಾಗೆಯೇ ಬ್ರಹ್ಮ, ಗರುಡ, ಶೇಷ, ಇಂದ್ರಾದಿಗಳೇ ಅವರವರ ಯೋಗ್ಯ ತಾನುಸಾರವಾಗಿ ಅಲ್ಲಿಯೇ ತಿಳಿದು, ಅಲ್ಲಿಯೇ ಬಣ್ಣಿಸಿ, ಆನಂದಿಸುತ್ತಾರೆ. ಅಲ್ಲಿ ಬಯಸಿದ ಅಪ್ರಾಕೃತ ವಸ್ತುಗಳೆಲ್ಲವೂ ಕೂಡಲೇ ಎದುರಿಗೆ ಸಿದ್ಧ ವಾಗುತ್ತವೆ. ಅವುಗಳಿಂದ ಮುಕ್ತರಿಗೆ ಸ್ವರೂಪಾನಂದದ ಅಭಿವ್ಯಕ್ತಿ

Rarest Archiver

ಯಾಗುತ್ತದೆ. ಇಂತಹ ಮುಕ್ತಿಯನ್ನು ವೇದಗಳೂ ವರ್ಣಿಸುತ್ತವೆ. ಸಂಕಲ್ಪ ಮಾತ್ರದಿಂದ ಸಕಲೈಶ್ವರ್ಯಗಳೂ ಒದಗುವ ಮೋಕ್ಷೈಶ್ವರ್ಯಕ್ಕಿಂತ ಅಧಿಕವಾದುದು ಯಾವುದಿದೆ? ಇದು ವೇದವೇದಾಂತಾದಿಸಕಲಸಚ್ಛಾಸ್ತ್ರಗಳಲ್ಲಿ ಪ್ರತಿಪಾದಿತವಾಗಿದೆ. ಇದಕ್ಕಾಗಿ ಮಹಾನಂದತೀರ್ಥರ ಬ್ರಹ್ಮಸೂತ್ರಭಾಷ್ಯದ ಶ್ರವಣ ಮನನ ಪ್ರವಚನರೂಪವಾದ ಉಪಾಸನೆಯನ್ನು ನಿರಂತರವಾಗಿ ಮಾಡುತ್ತಿರಬೇಕು. ಅಂತಹ ಅಧಿಕಾರಿಗಳಿಗೆ ಪರಮಾತ್ಮನು ಇಂತಹ ಮೋಕ್ಷವನ್ನು ಅನುಗ್ರಹಿಸುತ್ತಾನೆ." ಹೀಗೆ ಶೇಷದೇವರು ಭಾಷ್ಯ ಶ್ರವಣದ ಫಲವನ್ನು ಸನಕಾದಿಯೋಗಿಗಳಿಗೆ ಹೇಳಿದರು.

**ಅವತರಣಿಕಾ:** ಆಚಾರ್ಯರ ಭಾಷ್ಯಪ್ರವಚನವನ್ನು ಶೇಷದೇವರು ಬಂದು ಕೇಳಿದರು—

**ಪ್ರಚುರಾಂತರಪ್ರವಚನಂ ಫಣಿರಾ-**
**ಡುಪಶುಶ್ರುವಾನ್ ಸಸನಕಾದಿಮುನಿಃ ।**
**ಗಗನೇಽಲ್ಪದೃಷ್ಟವಪುರತ್ರಜನ್ಯೈ**
**ಸ್ತ್ವರಿತಂ ನಿಲೀನರುಚಿರಾಪಪದಮ್ ॥ ೧ ॥**

**ಅ:**—ಸಸನಕಾದಿಮುನಿಃ, ಗಗನೇ ಪ್ರಚುರಾಂತರ ಪ್ರವಚನಂ, ಉಪಶುಶ್ರುವಾನ್, ಫಣಿರಾಟ್, ಅತ್ರ, ಜನ್ಯೈಃ ಅಲ್ಪದೃಷ್ಟವಪುಃ (ಸನ್), ತ್ವರಿತಂ, ನಿಲೀನರುಚಿಃ, ಪದಮ್ ಆಪ.

**ಅರ್ಥ:**—ಅತ್ರ = ಈ ರಜತಪೀಠಪುರದಲ್ಲಿರುವ, ಜನ್ಯೈಃ = ಜನರಿಂದ, ಗಗನೇ = ಆಕಾಶದಲ್ಲಿ, ಅಲ್ಪ = ಸ್ವಲ್ಪವಾಗಿ, ದೃಷ್ಟವಪುಃ = ನೋಡಲ್ಪಟ್ಟ ಶರೀರವುಳ್ಳ, ಸಸನಕಾದಿಮುನಿಃ = ಸನಕಾದಿಮುನಿಗಳಿಂದ ಸಹಿತರಾದ, ಫಣಿರಾಟ್ = ಶೇಷದೇವರು, ಪ್ರಚುರಾಂತರ = ಪೂರ್ಣಪ್ರಜ್ಞರ, ಪ್ರವಚನಂ = ಶಾಸ್ತ್ರೋಪನ್ಯಾಸವನ್ನು, ಉಪಶುಶ್ರುವಾನ್ ಸನ್ = ಕೇಳಿದವರಾಗಿ, ತ್ವರಿತಂ = ಶೀಘ್ರವಾಗಿ, ನಿಲೀನರುಚಿಃ (ಸನ್) (ಜನರ) ಕಣ್ಮರೆಯಾದ ಕಾಂತಿಯುಳ್ಳವರಾಗಿ, ಪದಂ ಆಪ = ತನ್ನ ಲೋಕವನ್ನು ಸೇರಿದರು.

Rarest Archiver

**ತಾ:**—ಒಂದಾನೊಂದು ದಿನ ರಾತ್ರಿ ಶ್ರೀಪೂರ್ಣಪ್ರಜ್ಞರು ರಜತ ಪೀಠಪುರದಲ್ಲಿ ಶಿಷ್ಯರಿಗೆ ಬ್ರಹ್ಮಸೂತ್ರಭಾಷ್ಯದ ಪ್ರವಚನವನ್ನು ಮಾಡು ತ್ತಿದ್ದರು. ಆಗ ಮಹಾಶೇಷದೇವರು ಸನಕಾದಿಮುನಿಗಳೊಡನೆ ಅಲ್ಲಿಗೆ ಬಂದರು. ಅವರು ಆಕಾಶದಲ್ಲಿಯೇ ನಿಂತು ಆಚಾರ್ಯರ ಪ್ರವಚನವನ್ನು ಕೇಳುತ್ತಿದ್ದರು. ಭೂಮಿಯಲ್ಲಿರುವ ಜನರಿಗೆ ಆ ಶೇಷದೇವರ ಶರೀರವು ಸ್ವಲ್ಪಮಾತ್ರ ಕಂಡಿತು. ಅಷ್ಟರಲ್ಲಿ ಅವರು ಅಲ್ಲಿಂದ ಶೀಘ್ರವಾಗಿ ಹೊರಟು ಹೋದರು. ಅವರ ಕಾಂತಿಯೂ ಕಣ್ಮರೆಯಾಯಿತು. ಅವರು ತನ್ನ ಲೋಕವನ್ನು ಸೇರಿದರು ಎಂದು ಭಾವ.

ಈ ವಿಷಯಲ್ಲಿ ಒಂದು ಐತಿಹ್ಯವಿದೆ. "ಒಂದು ದಿನ ರಾತ್ರಿ ಚಂದ್ರ ನಿಲ್ಲದ ಕಗ್ಗತ್ತಲೆಯಲ್ಲಿ ಬೆಳಕುಕಾಣಿಸಿತು. ಆಗ ಜನರು ಇದು ಆಕಸ್ಮಿಕ ವಾದ ಚಂದ್ರನ ಬೆಳದಿಂಗಳೆಂದು ಭ್ರಾಂತಿಪಟ್ಟರು. ಶ್ರೀಮಧ್ವರು ಇದು ಶೇಷದೇವರ ಕಾಂತಿಯೆಂದು ಜನರಿಗೆ ತಿಳಿಸಿ ಅವರು ಹೋಗುತ್ತಿರು ವುದನ್ನು ಜನರಿಗೆ ತೋರಿಸಿದರು" ಎಂಬ ವಿಷಯುವನ್ನು ಭಾವಪ್ರಕಾಶಿ ಕಾದಲ್ಲಿ ಈ ರೀತಿ ಹೇಳಿದ್ದಾರೆ. "ವಿಚಂದ್ರಾಯಾಂ ಕ್ಷಪಾಯಾಂ ತು ಚಂದ್ರಿಕಾಭ್ರಮಿಣೋ ಜನಾಃ | ಶೇಷಸ್ಯ ತೇಜಸ್ಯಥ ತಂ ಯಾಂತಂ ಮಧ್ವೋ ಹ್ಯದರ್ಶಯತ್ ||

**ವಿ:**—ಪ್ರಚುರಂ ಅಂತರಂ ಯಸ್ಯ ಸಃ, ಪ್ರಚುರಾಂತರಸ್ಯ ಪ್ರವಚನಂ ಪ್ರಚುರಾಂತರಪ್ರವಚನಂ ತತ್, ಫಣಾಃ ಏಷಾಂ ಸಂತೀತಿ ಫಣಿನಃ, ತೇಷಾಂ ರಾಟ್, ಉಪಶುಶ್ರುವಾನ್-ಶುಶ್ರುವಾಂಸೌ-ಶುಶ್ರುವಾಂಸಃ-ಶುಶ್ರುವಸ್ ಸಾಂತ; ಸನಕಃ ಆದಿಃ ಯೇಷಾಂ ತೇ, ಸನಕಾದಯುಶ್ಚ ತೇ ಮುನಯುಶ್ಚ ಸನಕಾದಿಮುನಯುಃ, ತೈಃ ಸಹಿತಃ ಸಸನಕಾದಿಮುನಿಃ, ಅಲ್ಪಂ ಯಥಾ ಭವತಿ ತಥಾ ದೃಷ್ಟಂ ವಪುಃ ಯಸ್ಯ ಸಃ, ನಿಲೀನಾ ರುಚಿಃ ಯುಸ್ಯ ಸಃ,

**ಕ್ರಿ:**—ಆಪ ಆಪತುಃ ಆಪುಃ ಇತ್ಯಾದಿ ಆಪ್ಲೃ (ಆಪ್) ವ್ಯಾಪ್ತೌ ಲಿಟ್.

Rarest Archiver

**ವೃತ್ತ:**—ಪ್ರಮಿತಾಕ್ಷರಾ–ಲಕ್ಷಣ–ಪ್ರಮಿತಾಕ್ಷರಾ ಸಜಸಸೈರುದಿತಾ (೭೪ನೆಯ ಪದ್ಯದ ವರೆಗೆ)

**ಅವ:**— ತನ್ನ ಲೋಕಕ್ಕೆ ಹೋದ ಮೇಲೆ ಶೇಷದೇವರನ್ನು ಸನಕಾದಿಗಳು ಪ್ರಶ್ನಿಸುತ್ತಾರೆ—

**ಅತಿಚಿತ್ರಧಾಮ್ನಿ ನಿಜಧಾಮ್ನಿ ರತಂ**
**ಸಸಹಸ್ರಮಸ್ತಕಮನಂತಮಮುಂ ।**
**ಮುನಯೋಽಭಿವಾದ್ಯ ವಿನಯಾಭರಣಾಃ**
**ವ (ಪ)ರಮನ್ವಯುಂಜತ ತದರ್ಥಮಿಮಂ** ॥ ೨ ॥

**ಅ:**— ವಿನಯಾಭರಣಾಃ ಮುನಯಃ ಅತಿಚಿತ್ರಧಾಮ್ನಿ ನಿಜಧಾಮ್ನಿ ರತಂ ಸಸಹಸ್ರಮಸ್ತಕಂ ಅಮುಂ ಅನಂತಂ ಅಭಿವಾದ್ಯ ವರಂ ಇಮಂ ತದರ್ಥಮ್ ಅನ್ವಯುಂಜತ.

**ಅರ್ಥ :**—ವಿನಯಾಭರಣಾಃ=ವಿಧೇಯತೆ ಎಂಬ ಅಲಂಕಾರವುಳ್ಳ, ಮುನಯಃ = ತಪಸ್ವಿಗಳು, ಅತಿಚಿತ್ರಧಾಮ್ನಿ = ಅತ್ಯಂತ ಆಶ್ಚರ್ಯಕರ ವಾದ ಕಾಂತಿ ಮತ್ತು ತೇಜಸ್ಸುಳ್ಳ, ನಿಜಧಾಮ್ನಿ = ತನ್ನ ಭವನದಲ್ಲಿ, ರತಂ = ಇರುವ, ಸಸಹಸ್ರಮಸ್ತಕಂ = ಸಾವಿರತಲೆಗಳಿಂದ ಕೂಡಿರುವ, ಅಮುಂ ಅನಂತಂ = ಈ ಶೇಷದೇವರನ್ನು, ಅಭಿವಾದ್ಯ = ನಮಸ್ಕರಿಸಿ, ವರಂ = ಶ್ರೇಷ್ಠವಾದ, ಇಮಂ = ಈ ಮುಂದೆಹೇಳುವ, ತದರ್ಥಂ = ಆ ಮಧ್ವಶಾಸ್ತ್ರದ ಪ್ರಮೇಯವನ್ನು, (ಇಮಂ = ಈ ಶೇಷದೇವರನ್ನು ಕುರಿತು) ಅನ್ವಯುಂಜತ = ಕೇಳಿದರು.

**ತಾ:**—ಶೇಷದೇವರು ಆಚಾರ್ಯರ ಪ್ರವಚನವನ್ನು ಕೇಳಿ ತನ್ನ ವಿಚಿತ್ರಕಾಂತಿಸಂಪನ್ನವಾದ ಭವನಕ್ಕೆ ಹೋಗಿ ಕುಳಿತರು. ಸಹಸ್ರಶಿರಸ್ಸುಗಳ ಫಣಾರತ್ನಗಳಿಂದ ಬೆಳಗುತ್ತಿರುವ ಅವರ ಬಳಿಗೆ ಸನಕಾದಿ ಮುನಿಗಳು ಹೋಗಿ ವಿನಯದಿಂದ ವಂದಿಸಿ, ಶ್ರೀಮಧ್ವಶಾಸ್ತ್ರದ ಪ್ರಮೇಯವನ್ನು ತಮಗೆ ತಿಳಿಸುವಂತೆ ಕೇಳಿಕೊಂಡರು.

**ವಿ:**—ಅತಿಚಿತ್ರಂ ಧಾಮ ಯಸ್ಯ ತತ್ ಅತಿಚಿತ್ರಧಾಮ (ಧಾಮನ್

Rarest Archiver

ಶಬ್ದ ನಪುಂ.) ತಸ್ಮಿನ್, ಸಹಸ್ರಂ ಚ ತಾನಿ ಮಸ್ತಕಾನಿ ಚ, ಸಹಸ್ರಮಸ್ತಕೈಃ ಸಹ ವರ್ತತೇ ಇತಿ ಸಸಹಸ್ರಮಸ್ತಕಃ ತಂ, ವಿನಯಃ ಆಭರಣಂ ಯೇಷಾಂ ತೇ, ತಸ್ಯ ಅರ್ಥಃ ತದರ್ಥಃ ತಂ |

**ಕ್ರಿ:**—ಅನು + ಅಯುಂಜತ, ಅಯುಂಕ್ತ ಅಯುಂಜಾತಾಂ ಅಯುಂಜತ, ಅಯುಂಕ್ಥಾಃ ಅಯುಂಜಾಥಾಂ ಅಯುಂಗ್ಧ್ವಮ್, ಅಯುಂಜಿ ಅಯುಂಜ್ವಹಿ ಅಯುಂಜ್ಮಹಿ, ಯುಜಿರ್ (ಯುಜ್) ಯೋಗೇ ಲಙ್ ಅನು ಉಪಸರ್ಗ.

ಅವ:—ಅವರು ಕೇಳಿದ ಪ್ರಶ್ನೆಯನ್ನೇ ವಿವರಿಸುತ್ತಾರೆ—

**ಭಗವತ್ತಮಸ್ಯ ವಿಪುಲಪ್ರಮತೇಃ**
**ಸಮಯಂ ಮನೋಹರತಮಂ ಜಗತಿ |**
**ಮಹಿತಂ ಭವದ್ಭಿರಪಿ ಲೋಕಪತೇ**
**ಪಠತಾಂ ಮುಹುಃ ಫಲಮುದೇಷ್ಯತಿ ಕಿಮ್ || ೩ ||**

ಅ:—ಹೇ ಲೋಕಪತೇ ಜಗತಿ ಮನೋಹರತಮಂ ಭವದ್ಭಿರಪಿ ಮಹಿತಂ ಭಗವತ್ತಮಸ್ಯ ವಿಪುಲಪ್ರಮತೇಃ ಸಮಯಂ ಮುಹುಃ ಪಠತಾಂ ಕಿಂ ಫಲಂ ಉದೇಷ್ಯತಿ ?

**ಅರ್ಥ:**—ಹೇ ಲೋಕಪತೇ = ಎಲೈ ಸಮಸ್ತಲೋಕಧಾರಕರಾದ ಮಹಾಶೇಷದೇವರೇ!, ಜಗತಿ=ಪ್ರಪಂಚದಲ್ಲಿ, ಮನೋಹರತಮಂ=ಅತ್ಯಂತ ಮನೋಹರವಾದ, ಭವದ್ಭಿಃ ಅಪಿ = ನಿಮ್ಮಿಂದಲೂ, ಮಹಿತಂ = ಪೂಜಿತವಾದ, ಭಗವತ್ತಮಸ್ಯ = ಅತಿಶಯವಾದ ಐಶ್ವರ್ಯಾದಿಷಡ್ಗುಣಪೂರ್ಣರಾದ, ವಿಪುಲಪ್ರಮತೇಃ = ಶ್ರೀಪೂರ್ಣಪ್ರಜ್ಞರ, ಸಮಯಂ = ಸಿದ್ಧಾಂತವನ್ನು, ಮುಹುಃ = ಮತ್ತೂ ಮತ್ತೂ, ಪಠತಾಂ = ಅರ್ಥಜ್ಞಾನಸಹಿತವಾಗಿ ಪಠಿಸುವವರಿಗೆ, ಕಿಂ ಫಲಂ = ಯಾವ ಪ್ರಯೋಜನವು, ಉದೇಷ್ಯತಿ = ಉಂಟಾಗುವುದು ?

**ತಾ:**—ಬ್ರಹ್ಮಾಂಡಧಾರಕರಾದ ನಾಗಲೋಕದಸ್ವಾಮಿಯಾದ ಶೇಷದೇವರೇ! ಐಶ್ವರ್ಯಾದಿಷಡ್ಗುಣಗಳುಳ್ಳವರಲ್ಲಿ ಅತ್ಯಂತಶ್ರೇಷ್ಠರಾದ ಶ್ರೀಪೂರ್ಣ

Rarest Archiver

ಪ್ರಜ್ಞರ ಬ್ರಹ್ಮಸೂತ್ರಭಾಷ್ಯವುಂತಾದಶಾಸ್ತ್ರವು ಅತ್ಯಂತ ಮನೋಹರವಾದುದು. ತಾವೂ ಅದನ್ನು ಗೌರವಿಸಿದ್ದೀರಿ. ಅದರ ಅರ್ಥವನ್ನು ತಿಳಿದುಕೊಂಡು ಪಠಿಸುವ ಯೋಗ್ಯಜನರಿಗೆ ಯಾವ ಫಲವು ಲಭಿಸುವುದು ? ತಿಳಿಸಿರಿ. (ಎಂದು ಕೇಳಿದರು.)

ವಿ:—ಭಗಃ ಅಸ್ಯ ಅಸ್ತೀತಿ ಭಗವಾನ್, ಅತಿಶಯೇನ ಭಗವಾನ್ ಭಗವತ್ತಮಃ ತಸ್ಯ, ವಿಪುಲಾ ಪ್ರಮತಿಃ ಯಸ್ಯ ಸಃ ತಸ್ಯ, ಹರತೀತಿ ಹರಂ, ಮನಸಃ ಹರಂ ಮನೋಹರಂ, ಅತಿಶಯೇನ ಮನೋಹರಂ ಮನೋಹರತಮಂ, ತತ್, ಲೋಕಾನಾಂ ಪತಿಃ ಲೋಕಪತಿಃ ತಸ್ಯ ಸಂಬುದ್ಧಿಃ ಹೇ ಲೋಕಪತೇ !

ಕಿ:— ಉದ್ + ಏಷ್ಯತಿ ಏಷ್ಯತಃ ಏಷ್ಯಂತಿ ಇತ್ಯಾದಿ ; ಉದ್ ಉಪ. ಇಣ್ ಗತೌ ಲೃಟ್.

ಅವ :— ಶಾಸ್ತ್ರಾಭ್ಯಾಸವನ್ನು ಮಾಡುವವರಿಗೆ ಫಲಜ್ಞಾನದಿಂದ ಆಗುವ ಪ್ರಯೋಜನವೇನು ?—

**ಅಧಿಕಾರಿಣಾಂ ಫಲಮಲಂ ವಿದುಷಾಂ**
**ಭವತಿ ಪ್ರವೃತ್ತಿರತಿವೀರ್ಯವತೀ ।**
**ಇತಿ ತತ್ಫಲಂ ಸಫಲಸಂಕಥನೋ**
**ಭಗವಾನ್ ಪ್ರಪಂಚಯತು ಭೂರಿದಯಃ ॥ ೪ ॥**

ಅ :—ಫಲಂ ಅಲಂ ವಿದುಷಾಂ ಅಧಿಕಾರಿಣಾಂ ಪ್ರವೃತ್ತಿಃ ಅತಿವೀರ್ಯವತೀ ಭವತಿ, ಇತಿ ಸಫಲಸಂಕಥನಃ ಭೂರಿದಯಃ ಭಗವಾನ್ ತತ್ ಫಲಂ ಪ್ರಪಂಚಯತು.

ಅರ್ಥ:—ಫಲಂ = ಪ್ರಯೋಜನವನ್ನು, ಅಲಂ ವಿದುಷಾಂ= ಚೆನ್ನಾಗಿ ತಿಳಿದಿರುವ, ಅಧಿಕಾರಿಣಾಂ= ಯೋಗ್ಯತೆಯುಳ್ಳವರ, ಪ್ರವೃತ್ತಿಃ = ಶಾಸ್ತ್ರಶ್ರವಣಾದಿಪ್ರಯತ್ನವು, ಅತಿವೀರ್ಯವತೀ ಭವತಿ = ಅತಿಶಯವಾದ ಸಾಮರ್ಥ್ಯವುಳ್ಳದ್ದಾಗುತ್ತದೆ ; ಇತಿ= ಈ ಕಾರಣದಿಂದ, ಸಫಲ ಸಂಕಥನಃ= ಪ್ರಯೋಜನ ಸಹಿತವಾದ ಪ್ರವಚನವುಳ್ಳ, ಭೂರಿದಯಃ=

Rarest Archiver

ಹೆಚ್ಚಾದ ಕರುಣೆಯುಳ್ಳ, ಭಗವಾನ್ = ಪೂಜ್ಯರಾದ ನೀವು, ತತ್ಫಲಂ = ಶಾಸ್ತ್ರಶ್ರವಣದ ಆ ಪ್ರಯೋಜನವನ್ನು, ಪ್ರಪಂಚಯತು = ವಿಸ್ತರಿಸಿ ಹೇಳಿರಿ.

ತಾ:— ಶ್ರೀಮಧ್ವಾಚಾರ್ಯರ ಶಾಸ್ತ್ರವನ್ನು ಕೇಳುವ ಮತ್ತು ಫಲವನ್ನು ಪಡೆಯುವ ಯೋಗ್ಯತೆಯುಳ್ಳ ಸಜ್ಜೀವರು ಅದರ ಪ್ರಯೋಜನವನ್ನು ಚೆನ್ನಾಗಿ ತಿಳಿದು ಶಾಸ್ತ್ರಾಭ್ಯಾಸದಲ್ಲಿ ತೊಡಗಿದರೆ ಅವರ ಪ್ರಯತ್ನವು ಹೆಚ್ಚು ಸಾಮರ್ಥ್ಯದಿಂದ ಕೂಡಿರುತ್ತದೆ. ಅವರಿಗೆ ಬೇಗನೆ ಅತಿಶಯವಾದ ಫಲವೂ ದೊರಕುತ್ತದೆ. ತಾವು ಹೆಚ್ಚು ಕರುಣಾಶಾಲಿಗಳು. ತಮ್ಮ ಪ್ರವಚನವು ಫಲವನ್ನು ವಿಸ್ತರಿಸಿ ನಮಗೆ ತಿಳಿಸುವಂತಾಗಲಿ. ಪೂಜ್ಯರಾದ ನೀವು ಮಧ್ವಶಾಸ್ತ್ರದ ಪ್ರವಚನಾಭ್ಯಾಸದ ಪ್ರಯೋಜನವನ್ನು ವಿವರಿಸಿ ತಿಳಿಸಬೇಕು. ಎಂದು ಸನಕಾದಿಗಳು ಕೇಳಿದರು.

ವಿ:—ಅಧಿಕಾರಾಃ ಏಷಾಂ ಸಂತೀತಿ ಅಧಿಕಾರಿಣಃ ತೇಷಾಂ, ಅತಿವೀರ್ಯಂ ಅಸ್ಯಾಃ ಅಸ್ತೀತಿ ಅತಿವೀರ್ಯವತೀ, ತಸ್ಯ ಫಲಂ ತತ್ಫಲಂ, ತತ್, ಫಲೇನ ಸಹಿತಂ ಸಫಲಂ, ಸಫಲಂ ಸಂಕಥನಂ ಯಸ್ಯ ಸಃ, ಭೂರಿಃ ದಯಾ ಯಸ್ಯ ಸಃ.

ಕಿ:—ಪ್ರ + ಪಂಚಯತು ಪಂಚಯತಾತ್ ಪಂಚಯತಾಂ ಪಂಚಯಂತು ಇತ್ಯಾದಿ ಪಚಿ ವಿಸ್ತಾರೇ ೧೦ನೇ ಗಣ. ಪ್ರ. ಉಪ. ಲೋಟ್.

ಅವ:— ಶೇಷದೇವರು ಉತ್ತರವನ್ನು ಹೇಳಿದರು

ಇತಿ ತೈರುದೀರಿತಮುದಾರಮತಿ
ರ್ವಚನಂ ನಿಶಮ್ಯ ಸ ಜಗಾದ ಗಿರಂ ।
ಶೃಣುತಾದರೇಣ ಮಹನೀಯತಮಂ
ಮಹನೀಯಪಾದಸಮಯಸ್ಯ ಫಲಂ ॥೫॥

ಅ:— ಉದಾರಮತಿಃ ಸಃ ತೈಃ ಉದೀರಿತಂ ವಚನಂ ನಿಶಮ್ಯ ಮಹನೀಯಪಾದಸಮಯಸ್ಯ ಮಹನೀಯತಮಂ ಫಲಂ ಆದರೇಣ ಶೃಣುತ ಇತಿ ಗಿರಂ ಜಗಾದ.

Rarest Archiver

ಅರ್ಥ :—ಉದಾರಮತಿಃ ಸಃ = ಅತಿಶಯವಾದಜ್ಞಾನವುಳ್ಳ ಆ ಶೇಷ ದೇವರು, ತೈಃ ಉದೀರಿತಂ = ಆ ಸನಕಾದಿಗಳಿಂದ ಹೇಳಲ್ಪಟ್ಟ, ವಚನಂ = ಮಾತನ್ನು, ನಿಶಮ್ಯ = ಕೇಳಿ, ಮಹನೀಯಪಾದಸಮಯಸ್ಯ = ಪೂಜ್ಯ ಸ್ವರೂಪರಾದ ಶ್ರೀಮಧ್ವಾಚಾರ್ಯರ ಶಾಸ್ತ್ರದ, ಮಹನೀಯತಮಂ ಫಲಂ = ಅತ್ಯಂತಪೂಜ್ಯವಾದ ಫಲವನ್ನು, ಆದರೇಣ = ಭಕ್ತಿಯಿಂದ, ಶೃಣುತ = ಕೇಳಿರಿ, ಇತಿ ಗಿರಂ = ಹೀಗೆಂಬ ಮಾತನ್ನು, ಜಗಾದ = ಹೇಳಿದರು.

ತಾ :—ಅತಿಶ್ರೇಷ್ಠವಾದ ಬುದ್ಧಿಯುಳ್ಳ ಆ ಶೇಷದೇವರು ಆ ಮುನಿಗಳ ಮಾತನ್ನು ಕೇಳಿ 'ಅತ್ಯಂತಪೂಜ್ಯರಾದ ಶ್ರೀಮಧ್ವಾಚಾರ್ಯರ ಶಾಸ್ತ್ರದ, ಅತ್ಯಂತಗೌರವಾರ್ಹವಾದ ಫಲವನ್ನು ಕೇಳಿರಿ' ಎಂದು ಹೇಳ ಲಾರಂಭಿಸಿದರು.

ವಿ:—ಉದಾರಾ ಮತಿಃ ಯಸ್ಯ ಸಃ, ಮಹಯಿತುಂ ಯೋಗ್ಯಂ ಮಹನೀಯಂ, ಅತಿಶಯೇನ ಮಹನೀಯಂ ಮಹನೀಯತಮಂ ತತ್, ಮಹಯಿತುಂ ಯೋಗ್ಯಃ ಮಹನೀಯಃ ಮಹನೀಯಃ ಪಾದಃ ಯಸ್ಯ ಸಃ, ಮಹನೀಯಪಾದಸ್ಯ ಸಮಯಃ ಮಹನೀಯಪಾದಸಮಯಃ ತಸ್ಯ;

ಕ್ರಿ:—ಜಗಾದ ಜಗದತುಃ ಜಗದುಃ ಇತ್ಯಾದಿ; ಗದ ವ್ಯಕ್ತಾಯಾಂ ವಾಚಿ ಲಿಟ್, ಶೃಣುತ, ಶೃಣೋತು ಶೃಣುತಾತ್ ಶೃಣುತಾಂ ಶೃಣ್ವಂತು, ಶೃಣು ಶೃಣುತಾತ್ ಶೃಣುತಂ ಶೃಣುತ; ಶೃಣವಾನಿ ಶೃಣವಾವ ಶೃಣವಾಮ. ಶ್ರುಶ್ರವಣೇ ಲೋಟ್. (ಗಮನಿಸಿರಿ. ಈ ಧಾತುವು ಲಟ್, ಲೋಟ್, ಲಙ್, ವಿಧಿಲಿಙ್‌ಗಳಲ್ಲಿ 'ಶೃ' ಎಂದಾಗುತ್ತದೆ. 'ಶ್ರು' ಅಲ್ಲ. ಪಾ.ಸೂ. 'ಶ್ರುವಃ ಶೃ ಚ.')

ಅವ :—ಶ್ರೀಮಧ್ವಶಾಸ್ತ್ರಾಭ್ಯಾಸದ ಮುಖ್ಯಫಲವು ಯಾವುದು ?

**ತ್ರಿದಿವಾದಿ ಲಭ್ಯಮಪಿ ನಾಸ್ಯ ಫಲಂ**
**ಕಥಿತಂ ಕೃಷೇರಿವ ಪಲಾಲಕುಲಂ।**
**ಸ್ವಫಲಂ ತು ಮುಕ್ತಿಪದಮುಕ್ತಿಪದಂ**
**ಶುಕಶಾರದಾದಿಪರಮಾರ್ಥವಿದಾಂ** ||೬||

ಅ :—ತ್ರಿದಿವಾದಿ ಲಭ್ಯಮಪಿ ಕೃಷೇಃ ಪಲಾಲಕುಲಂ ಇವ ಅಸ್ಯ ಫಲಂ ನ ಕಥಿತಂ. ಸ್ವಫಲಂ ತು ಶುಕಶಾರದಾದಿಪರಮಾರ್ಥವಿದಾಂ ಉಕ್ತಿಪದಂ ಮುಕ್ತಿಪದಂ ||

ಅರ್ಥ:—ತ್ರಿದಿವಾದಿ = ಸ್ವರ್ಗಮೊದಲಾದುದು, ಲಭ್ಯಂ ಅಪಿ= (ಈ ಮಧ್ವಶಾಸ್ತ್ರಾಭ್ಯಾಸದಿಂದ) ಸುಲಭವಾಗಿ ಸಿಕ್ಕುವುದಾದರೂ, ಕೃಷೇಃ =ಬೇಸಾಯಕ್ಕೆ, ಪಲಾಲಕುಲಂ ಇವ = ಜೊಳ್ಳುಕಾಳಿನಂತೆ, ಅಸ್ಯ= ಈ ಮಧ್ವಶಾಸ್ತ್ರಕ್ಕೆ, ಫಲಂ = ಮುಖ್ಯಪ್ರಯೋಜನವಾಗಿ, ನ ಕಥಿತಂ = ಹೇಳಲ್ಪಟ್ಟಿಲ್ಲ. ಸ್ವಫಲಂ ತು=ಮುಖ್ಯಫಲವಾದರೋ, ಶುಕ, ಶಾರದಾ-ಆದಿ=ಶುಕಮುನಿಗಳು, ಸರಸ್ವತೀದೇವಿ ಮೊದಲಾಗಿ ಉಳ್ಳ, ಪರಮಾರ್ಥ ವಿದಾಂ = ಪರತತ್ತ್ವನಾದ ಶ್ರೀಹರಿಯನ್ನು ತಿಳಿದವರ, ಉಕ್ತಿಪದಂ= ಪ್ರಶಂಸೆಗೆ ವಿಷಯವಾದ, ಮುಕ್ತಿಪದಂ=ಮೋಕ್ಷಸ್ಥಾನವು.

ತಾ :—ಬೇಸಾಯ ಮಾಡಿದ ರೈತನಿಗೆ ಭತ್ತ ಮೊದಲಾದುದೇ ಮುಖ್ಯಫಲವು. ಜೊಳ್ಳುಕಾಳು, ಹೊಟ್ಟು ಮುಂತಾದುದು ಮುಖ್ಯ ಫಲವಲ್ಲ. ಹಾಗೆಯೇ ಈ ಮಧ್ವಶಾಸ್ತ್ರಾಭ್ಯಾಸದಿಂದ ಸ್ವರ್ಗ ಮೊದಲಾದ ಫಲವು ಸುಲಭವಾಗಿ ಸಿಗುವುದಾದರೂ ಅದು ಈ ಶ್ರೇಷ್ಠತಮವಾದ ಶಾಸ್ತ್ರಾಭ್ಯಾಸದ ಮುಖ್ಯಫಲವಲ್ಲ. ಪರಮತತ್ತ್ವರೂಪನಾದ ಶ್ರೀಹರಿಯನ್ನು ಅರಿತ ದಿವ್ಯ ಅಪರೋಕ್ಷಜ್ಞಾನಿಗಳಾದ ಶುಕಮುನಿಗಳು, ಸರಸ್ವತೀದೇವಿ ಮುಂತಾದ ಮಹನೀಯರು ಮುಖ್ಯಫಲವೆಂದು ಹೊಗಳಿರುವ ಮಹಾಮೋಕ್ಷವೇ ಆನಂದತೀರ್ಥರ ಶಾಸ್ತ್ರಾಭ್ಯಾಸದ ಫಲ ವಾಗಿದೆ. (ನ ವರ್ತತೇ ಯತ್ರ ರಜಸ್ತಮಸ್ತಯೋಃ ಸತ್ತ್ವಂ ಚ ಮಿಶ್ರಂ ನ ಚ ಕಾಲವಿಕ್ರಮಃ| ನ ಯತ್ರ ಮಾಯಾ ಕಿಮುತಾಪರೇ ಹರೇರನು-ವ್ರತಾ ಯತ್ರ ಸುರಾಸುರಾರ್ಚಿತಾಃ|| ಎಂದು ಭಾಗವತದಲ್ಲಿ ಶುಕೋ-ಕ್ತಿಯು, 'ಧಾನಾಪೂಪಾ ಮಾಂಸಹ್ರದಾಃ ಸದಾ ಪಾಯಸಕರ್ದಮಾಃ' ಇದು ಭಾಗವತದಲ್ಲಿ ಸರಸ್ವತೀದೇವಿಯ ವಚನವು.)

ವಿ:—ತ್ರಿದಿವಃ ಆದಿಃ ಯಸ್ಯ ಸಃ ; ಲಬ್ಧುಂ ಯೋಗ್ಯಂ ಲಭ್ಯಂ,

Rarest Archiver

ಪಲಾಲಾನಾಂ ಕುಲಂ, ಸ್ವಂ ಚ ತತ್ ಫಲಂ ಚ, (ಸ್ವಸ್ಯ ಫಲಂ) ಸ್ವಫಲಂ. ಉಕ್ತೇಃ ಪದಂ ; ಮುಕ್ತೇಃ ಪದಂ ;

ಅವ :— ವೈಷ್ಣವರಾಗಿ ಶ್ರೀಮಧ್ವಶಾಸ್ತ್ರವನ್ನು ಸೇವಿಸುವವರಿಗೆ ಮಾತ್ರವೇ ಮೋಕ್ಷವು ಲಭ್ಯವಾಗಿದೆ—

ಪರಮಾಗಮಾರ್ಥವರಶಾಸ್ತ್ರಮಿದಂ
ಭಜತಾಮಮಾನವಕಲಾರಚಿತಂ ।
ವ್ರಜತಾಮಹೋ ಪರಮವೈಷ್ಣವತಾಂ
ರತಯೇ ಸ್ವಲೋಕಮಜಿತೋ ದಿಶತಿ ॥೭॥

ಅ:—ಅಜಿತಃ ಅಮಾನವಕಲಾರಚಿತಂ ಇದಂ ಪರಮಾಗಮಾರ್ಥ-ವರಶಾಸ್ತ್ರಂ ಭಜತಾಂ ಪರಮವೈಷ್ಣವತಾಂ ವ್ರಜತಾಂ ರತಯೇ ಸ್ವಲೋಕಂ ದಿಶತಿ ಅಹೋ ।

ಅರ್ಥ :— ಅಜಿತಃ = ಶ್ರೀಮನ್ನಾರಾಯಣನು, ಅಮಾನವ-ಕಲಾರಚಿತಂ = ಮಾನವರಲ್ಲದ ಮುಖ್ಯಪ್ರಾಣನ ಅಂಶರಾದ ಶ್ರೀಮಧ್ವಾಚಾರ್ಯರಿಂದ ವಿರಚಿತವಾದ, ಇದಂ ಪರಮಾಗಮಾರ್ಥವರಶಾಸ್ತ್ರಂ= ಈ, ಉತ್ತಮ ವೇದದ ಅರ್ಥವಾದ ಉತ್ತಮಶಾಸ್ತ್ರವನ್ನು, ಭಜತಾಂ= ಶ್ರವಣಮನನಧ್ಯಾನಗಳಿಂದ ಸೇವಿಸುವವರಿಗೆ, ಪರಮವೈಷ್ಣವತಾಂ= ಮುಖ್ಯವಾದ ವಿಷ್ಣುಭಕ್ತತ್ವವನ್ನು, ವ್ರಜತಾಂ= ಹೊಂದುವ ಸಜ್ಜನರಿಗೆ, ರತಯೇ= ಸ್ವರೂಪಸುಖಾನುಭವಕ್ಕಾಗಿ, ಸ್ವಲೋಕಂ= ತನ್ನಲೋಕವನ್ನು (ಮುಕ್ತವೈಕುಂಠವನ್ನು) ದಿಶತಿ= ಕೊಡುತ್ತಾನೆ. ಅಹೋ= ಆಶ್ಚರ್ಯವು.

ತಾ:—ಶ್ರೀಮಧ್ವಾಚಾರ್ಯರು ಮಾನವರಲ್ಲ. ಅವರು ಅಮಾನವರಾದ ಜೀವೋತ್ತಮಮುಖ್ಯಪ್ರಾಣಾವತಾರರು. ಅವರು ರಚಿಸಿರುವ ಉತ್ತಮವಾದ ವೇದಾರ್ಥವನ್ನು ನಿರ್ಣಯಿಸುವ ಉತ್ತಮ ಶಾಸ್ತ್ರವನ್ನು ಶ್ರವಣ, ಪಾರಾಯಣ, ಅರ್ಥದ ಚಿಂತನ, ಪರಮಾತ್ಮನ ಉಪಾಸನ ಮೊದಲಾದ ರೀತಿಯಿಂದ ಸೇವಿಸುವವರಿಗೆ, ಶ್ರೇಷ್ಠವಿಷ್ಣುಭಕ್ತರಾದವರಿಗೆ ಶ್ರೀಮನ್ನಾರಾಯಣನು ತನ್ನ ಮುಕ್ತವೈಕುಂಠಸ್ಥಾನವನ್ನೇ ಕೊಡುತ್ತಾನೆ.

Rarest Archiver

ಅಲ್ಲಿ ಮುಕ್ತರು ತಮ್ಮ ಸ್ವರೂಪಾನಂದಾನುಭವವನ್ನು ಮಾಡುತ್ತಾ ಅನಂತ ಕಾಲದವರೆಗೂ ಇರುತ್ತಾರೆ. ಇಂತಹ ಶ್ರೀಮಧ್ವಶಾಸ್ತ್ರದ ಮಹಿಮೆಯು ಅತ್ಯಂತ ಆಶ್ಚರ್ಯಕರವಾಗಿದೆ.

**ವಿ:**—ನ ಮಾನವಃ ಅಮಾನವಃ, ತಸ್ಯ ಕಲಾ ಯಸ್ಯ ಸಃ ಅಮಾನವಕಲೇನ ಆರಚಿತಂ, ತತ್; ಪರಮಾಶ್ಚ ತೇ ಆಗಮಾಶ್ಚ, ಪರಮಾಗಮಾನಾಂ ಅರ್ಥಾಃ ಯಸ್ಮಿನ್ ತತ್, ಪರಮಾಗಮಾರ್ಥಂ ಚ ತತ್ ವರಂ ಚ ತತ್ ಶಾಸ್ತ್ರಂ ಚ ಪರಮಾರ್ಥವರಶಾಸ್ತ್ರಂ ; ವಿಷ್ಣುಃ ಭಕ್ತಿಃ ಏಷಾಂ ವೈಷ್ಣವಾಃ, ಪರಮಾಶ್ಚತೇ ವೈಷ್ಣವಾಶ್ಚ, ಪರಮವೈಷ್ಣವಾನಾಂ ಭಾವಃ ತಾಂ, ಸ್ವಸ್ಯ ಲೋಕಃ ತಂ,

**ಕ್ರಿ:**—ದಿಶತಿ ದಿಶತಃ ದಿಶಂತಿ ಇತ್ಯಾದಿ ದಿಶ ಅತಿಸರ್ಜನೇ ಲಟ್.

**ಅವ :**—ವೈಕುಂಠಲೋಕದ ಅತಿಶಯವೇನು ?

**ನನು ತತ್ರ ವಿಶ್ವವಿಭವೈಕಪದಂ**<br>**ಪರಿ (ಪ್ರತಿ) ಭಾತಿ ಪೂರ್ಣಪುರುಷಸ್ಯ ಪುರೀ ।**<br>**ಉಪಲಭ್ಯತೇ ಯದುಪಮಾನಪದಂ**<br>**ಪ್ರತಿಬಿಂಬಮೇವ ಮಣಿವಪ್ರಗತಂ ॥೮॥**

**ಅ :**—ತತ್ರ ವಿಶ್ವವಿಭವೈಕಪದಂ ಪೂರ್ಣಪುರುಷಸ್ಯ ಪುರೀ ಪರಿಭಾತಿ ನನು ! ಮಣಿವಪ್ರಗತಂ ಪ್ರತಿಬಿಂಬಂ ಏವ ಯದುಪಮಾನಪದಂ ಉಪಲಭ್ಯತೇ.

**ಅರ್ಥ:**—ತತ್ರ = ಆ ವೈಕುಂಠಲೋಕದಲ್ಲಿ, ವಿಶ್ವವಿಭವ = ಎಲ್ಲಾ ವಿಧವಾದ ಐಶ್ವರ್ಯಕ್ಕೆ, ಏಕಪದಂ = ಮುಖ್ಯ ಆಶ್ರಯವಾದ, ಪೂರ್ಣ-ಪುರುಷಸ್ಯ ಪುರೀ = ಪೂರ್ಣನಾದ ಪುರುಷಶಬ್ದವಾಚ್ಯನಾದ ಶ್ರೀಹರಿಯ ಪಟ್ಟಣವು, ಪರಿಭಾತಿ ನನು = ಪ್ರಕಾಶಿಸುತ್ತಿದೆಯಷ್ಟೆ! ಮಣಿವಪ್ರಗತಂ = ರತ್ನಮಯಪ್ರಾಕಾರದಲ್ಲಿರುವ, ಪ್ರತಿಬಿಂಬಂ ಏವ = ಪ್ರತಿಬಿಂಬವೇ, ಯದುಪಮಾನಪದಂ = ಯಾವ ವೈಕುಂಠಪುರಿಯ ಉಪಮಾನಸ್ಥಾನವಾಗಿ, ಉಪಲಭ್ಯತೇ = ಹೊಂದಲ್ಪಡುತ್ತದೆ.

Rarest Archiver

ತಾ:-ಆ ವೈಕುಂಠಲೋಕದಲ್ಲಿರುವ ಶ್ರೀಮನ್ನಾರಾಯಣನ ಪಟ್ಟಣದಲ್ಲಿ ಸಮಸ್ತ ಐಶ್ವರ್ಯಗಳೂ ನೆಲಸಿರುವುವು. ಪ್ರಕಾಶಮಾನವಾದ ಆ ನಗರಿಗೆ ಸರಿದೂಗುವ ಮತ್ತೊಂದು ಪುರವೇ ಇಲ್ಲ. ಆದುದರಿಂದ ರತ್ನ ನಿರ್ಮಿತವಾದ ಆ ನಗರಿಯ ಕೋಟೆಯ ಗೋಡೆಯಲ್ಲಿ ಪ್ರತಿಬಿಂಬಿತವಾದ ಆ ನಗರಿಯನ್ನೇ ಅದಕ್ಕೆ ಉಪಮಾನವಾಗಿ ಕೊಡಬೇಕಾಗಿದೆ. ಇಂತಹ ಪುರವನ್ನು ಹೊಂದಿರುವುದೇ ವೈಕುಂಠಲೋಕದ ಅತಿಶಯವು.

ವಿ:—ವಿಶ್ವೇ ಚ ತೇ ವಿಭವಾಶ್ಚ ವಿಶ್ವವಿಭವಾನಾಂ ಏಕಂ ಚ ತತ್ ಪದಂ ಚ, ಪೂರ್ಣಶ್ಚಾಸೌ ಪುರುಷಶ್ಚ, ತಸ್ಯ, ಯಸ್ಯಾಃ ಉಪಮಾನಸ್ಯ ಪದಂ, ಮಣ್ಯಾತ್ಮಕಃ ವಪ್ರಃ ಮಣಿವಪ್ರಃ ತಸ್ಮಿನ್ ಗತಂ.

ಕ್ರಿ:— ಪ್ರತಿ+ಭಾತಿ ಭಾತಃ ಭಾಂತಿ, ಭಾ ದೀಪ್ತೌ : ಉಪ+ ಲಭ್ಯತೇ ಲಭ್ಯೇತೇ ಲಭ್ಯಂತೇ ಇತ್ಯಾದಿ, ಡುಲಭಷ್ (ಲಭ್) ಪ್ರಾಪ್ತೌ ಕರ್ಮಣಿ ಲಟ್. ಉಪ. ಉಪಸರ್ಗ.

ಅವ:—ವೈಕುಂಠನಗರಿಯ ಮನೆಗಳು ಹೇಗಿವೆ ?

**ಸಿತಸೌಧಸಂತತಿರುಚಾ ಸ್ಫುರಿತಾ**
**ಪರಿತೋಽರುಣಾಶ್ಮಗೃಹಪಂಕ್ತಿರುಚಿಃ ।**
**ಇಹ ಮಚ್ಛರೀರವಲಯೇ ಲಸಿತಾ-**
**ಮನುಯಾತಿ ಮೂರ್ತಿಮಸುರಾಸುಹೃತಃ ॥೯॥**

ಅ:—ಪರಿತಃ ಸಿತಸೌಧಸಂತತಿರುಚಾ ಸ್ಫುರಿತಾ ಅರುಣಾಶ್ಮಗೃಹ-ಪಂಕ್ತಿರುಚಿಃ ಇಹ ಮಚ್ಛರೀರವಲಯೇ ಲಸಿತಾಂ ಅಸುರಾಸುಹೃತಃ ಮೂರ್ತಿಂ ಅನುಯಾತಿ.

ಅರ್ಥ:—ಪರಿತಃ = ಸುತ್ತಲೂ, ಸಿತಸೌಧ = ಬೆಳ್ಳಗಿರುವ ಸುಧಾಮಯವಾದ ಭವನಗಳ, ಸಂತತಿ = ಸಾಲುಗಳ, ರುಚಾ = ಕಾಂತಿಯಿಂದ, ಸ್ಫುರಿತಾ = ಪ್ರಕಾಶಿಸುತ್ತಿರುವ, ಅರುಣಾಶ್ಮಗೃಹ = ಕೆಂಪುರತ್ನಗಳಿಂದ ನಿರ್ಮಿತವಾದ ಒಳಕೊಠಡಿಗಳ, ಪಂಕ್ತಿರುಚಿಃ = ಸಾಲುಗಳ ಕಾಂತಿಯು, ಇಹ ಮಚ್ಛರೀರವಲಯೇ = ಈ ಕ್ಷೀರಸಮುದ್ರದಲ್ಲಿ, ನನ್ನ ಶರೀರದ

Rarest Archives

ಸುತ್ತಿನಲ್ಲಿ, ಲಸಿತಾಂ=ಕಂಗೊಳಿಸುತ್ತಿರುವ, ಅಸುರಾಸುಹೃತಃ= ದೈತ್ಯರ ಪ್ರಾಣಸಂಹಾರಕನಾದ ಶ್ರೀಹರಿಯ, ಮೂರ್ತಿಂ = ಶರೀರವನ್ನು, ಅನುಯಾತಿ=ಹೋಲುತ್ತದೆ.

ತಾ:—ಆ ವೈಕುಂಠನಗರಿಯಲ್ಲಿ ಅಪ್ರಾಕೃತಸುಧಾಮಯವಾದ ಅರಮನೆಗಳ ಸಾಲುಗಳು ನನ್ನ ಬಿಳಿಯಾದ ದೇಹದ ಸುರುಳಿಗಳಂತೆ ಕಂಗೊಳಿಸುತ್ತವೆ. ಈ ಭವನಗಳ ಒಳಭಾಗದ ಕೊಠಡಿಗಳು ಕೆಂಪುರತ್ನ ಗಳಿಂದ ನಿರ್ಮಿತವಾಗಿವೆ. ಈ ಸನ್ನಿವೇಶವನ್ನು ನೋಡಿದಾಗ ನನ್ನ ಬಿಳಿಯಾದ ಶರೀರದ ಮೇಲೆ ಪವಡಿಸಿದ ಶ್ರೀಹರಿಯು ಉದಿಸುವ ಸೂರ್ಯ ನಂತಹ ಕಾಂತಿಯುಳ್ಳ ಮೂರ್ತಿಯು ಇಲ್ಲಿ ಕ್ಷೀರಸಮುದ್ರದಲ್ಲಿ ಕಂಗೊಳಿಸು ತ್ತಿರುವ ದೃಶ್ಯವು ನಮ್ಮ ಕಣ್ಣೆದುರು ನಿಲ್ಲುತ್ತದೆ.

ವಿ:—ಸಿತಾಶ್ಚ ತೇ ಸೌಧಾಶ್ಚ, ಸಿತಸೌಧಾನಾಂ ಸಂತತಿಃ, ಸಿತ-ಸೌಧಸಂತತೇಃ ರುಕ್ ಸಿತಸೌಧಸಂತತಿರುಕ್ ತಯಾ, ಅರುಣಾಶ್ಚತೇ ಅಶ್ಮಾನಶ್ಚ, ಅರುಣಾಶ್ಮಮಯಾನಿ ಚ ತಾನಿ ಗೃಹಾಣಿ ಚ ಅರುಣಾಶ್ಮ-ಗೃಹಾಣಿ, ತೇಷಾಂ ಪಂಕ್ತಿಃ, ತಸ್ಯಾಃ (...ಪಂಕ್ತೇಃ) ರುಕ್ ತಯಾ, ಮಮ ಶರೀರಂ, ಮಚ್ಛರೀರಸ್ಯ ವಲಯಃ ತಸ್ಮಿನ್, ಅಸುರಾಣಾಂ ಅಸೂನ್ ಹೃತವಾನ್ ಇತಿ ಅಸುರಾಸುಹೃತ್ ತಸ್ಯ |

ಕ್ರಿ:—ಅನು+ಯಾತಿ ಯಾತಃ ಯಾಂತಿ ಇತ್ಯಾದಿ ಯಾ ಪ್ರಾಪಣೇ ಲಟ್. ಅನು. ಉಪಸರ್ಗ.

ಅವ:—ಆ ಭವನಗಳ ಮೇಲ್ಛಾವಣಿಗಳನ್ನು ವರ್ಣಿಸುತ್ತಾರೆ—

**ಶಬಲಾ ವಲೀಕಘಟಿತಸ್ಫಟಿಕ**
**ದ್ಯುತಿಭಿರ್ಹರಿನ್ಮಣಿಮಯೀ ವಲಭೀ |**
**ಪ್ರತಿಸದ್ಮ ಭಾತಿ ಯಮುನಾಮಿಲಿತಾ**
**ಸಿತಸಾರಸೈಂಧವಪಯೋಭಿರಿವ ||೧೦||**

ಅ:— ವಲೀಕಘಟಿತಸ್ಫಟಿಕದ್ಯುತಿಭಿಃ ಶಬಲಾ ಹರಿನ್ಮಣಿಮಯೀ ವಲಭೀ ಪ್ರತಿಸದ್ಮ ಸಿತಸೌರಸೈಂಧವಪಯೋಭಿಃ ಮಿಲಿತಾ ಯಮುನಾ ಇವ ಭಾತಿ |

Rarest Archiver

ಅ.ಅ. :—ವಲೀಕ = ಮನೆಯ ಸೂರಿನಲ್ಲಿ (ಛಾವಣಿಯ ತುದಿಯಲ್ಲಿ) ಘಟಿತ = ಖಚಿತವಾದ, ಸ್ಫಟಿಕ = (ಬಿಳಿ ಬಣ್ಣದ) ಸ್ಫಟಿಕಮಣಿಗಳ, ದ್ಯುತಿಭಿಃ = ಕಾಂತಿಗಳಿಂದ, ಶಬಲಾ = ಮಿಶ್ರಿತವಾದ, ಹರಿನ್ಮಣಿಮಯೀ = ಪಚ್ಚೆಮಣಿಯ, ವಲಭೀ = ಛಾವಣಿಯು, ಪ್ರತಿಸದ್ಮ = ಪ್ರತಿಯೊಂದು ಮನೆಯಲ್ಲಿಯೂ, ಸಿತ = ಬೆಳ್ಳಗಿರುವ, ಸೌರಸೈಂಧವ = ಗಂಗೆಯ, ಪಯೋಭಿಃ ಮಿಲಿತಾ = ನೀರಿನಿಂದ ಸೇರಿದ, ಯಮುನಾ ಇವ = ಯಮುನಾ ನದಿಯಂತೆ, ಭಾತಿ = ಶೋಭಿಸುತ್ತದೆ.

ತಾ:— ಆ ವೈಕುಂಠಲೋಕದಲ್ಲಿ ಪ್ರತಿಯೊಂದು ಮನೆಯ ಮೇಲ್ಛಾವಣಿಯನ್ನು ಪಚ್ಚೆಮಣಿಯಿಂದ ರಚಿಸಿದ್ದಾರೆ. ಆ ಛಾವಣಿಯ ತುದಿಯ ಸೂರುಗಳಲ್ಲಿ ಸ್ಫಟಿಕಮಣಿಗಳನ್ನು ಜೋಡಿಸಿರುತ್ತಾರೆ. ಬಿಳಿಯ ದಾದ ಸ್ಫಟಿಕಮಣಿಗಳಕಾಂತಿಯೂ, ಇಂದ್ರನೀಲಮಣಿಯಂತಹ ಪಚ್ಚೆಮಣಿಗಳ ಕಾಂತಿಯೂ ಸೇರಿ ಗಂಗಾಯಮುನಾಸಂಗಮವಾದಂತೆ ಶೋಭಿಸುತ್ತದೆ.

ವಿ :— ಸ್ಫಟಿಕಾನಾಂ ದ್ಯುತಯಃ, ವಲೀಕೇ ಘಟಿತಾಃ, ವಲೀಕಘಟಿತಾಶ್ಚ ತಾಃ ಸ್ಫಟಿಕದ್ಯುತಯಶ್ಚ ವಲೀಕಘಟಿತಸ್ಫಟಿಕದ್ಯುತಯಃ ತಾಭಿಃ ಸದ್ಮನಿ ಸದ್ಮನಿ ಇತಿ ಪ್ರತಿಸದ್ಮ, ಸುರಸಿಂಧೋಃ ಇಮಾನಿ ಸೌರ-ಸೈಂಧವಾನಿ, ತಾನಿ ಚ ತಾನಿ ಪಯಾಂಸಿ ಚ ಸೌರಸೈಂಧವಪಯಾಂಸಿ ತಾಭಿಃ|| '**ಸುರ-ಸಿಂಧು**' ಎಂಬ ಎರಡು ಪದಗಳಿಗೂ 'ಹೃದ್‌ಭಗಸಿಂಧ್ವಂತೇ ಪೂರ್ವಪದಸ್ಯಚ' ಎಂದು ವೃದ್ಧಿ.

ಕ್ರಿ :—ಭಾತಿ ಭಾತಃ ಭಾಂತಿ ಇತ್ಯಾದಿ. ಭಾ ದೀಪ್ತೌ ಲಟ್.

ಅವ :—ಆ ಮನೆಗಳ ಮೇಲ್ಮಹಡಿಗಳಲ್ಲಿಟ್ಟಿರುವ ಹಕ್ಕಿಗಳ ಗೊಂಬೆಗಳು ಹೇಗಿವೆ ?

ಯದಿ ನಾಭವಿಷ್ಯದಿಹ ವಿಭ್ರಮಂತಾ
ನಿಯಮೋ ಜನಸ್ಯ ನಿಲಯಾವಲಿಷು।
ವಿಕಟಾ ವಿಟಂಕಕೃತಪತ್ರಿತತಿಃ
ಕೃತಕೇತ್ಯವೈಕ್ಷ್ಯತ ಕಥಂಚನ ನೋ ||೧೧||

**ಅ:**—ಇಹ ಜನಸ್ಯ ವಿಭ್ರಮತಾನಿಯಮಃ ನ ಅಭವಿಷ್ಯತ್ ಯದಿ ನಿಲಯಾವಲಿಷು ವಿಟಂಕಕೃತಪತ್ರಿತತಿಃ ಕೃತಕಾ ಇತಿ ಕಥಂಚನ ನೋ ಅನ್ವೈಕ್ಷ್ಯತ |

**ಅರ್ಥ:**—ಇಹ = ಈ ವೈಕುಂಠಲೋಕದಲ್ಲಿ, ಜನಸ್ಯ = ಮುಕ್ತ ಜೀವರಿಗೆ ವಿಭ್ರಮತಾನಿಯಮಃ = ಭ್ರಾಂತಿ ಇಲ್ಲದಿರುವಿಕೆ ಎಂಬ ನಿಯಮವು, ನ ಅಭವಿಷ್ಯತ್ ಯದಿ = ಇಲ್ಲದೆ ಇದ್ದಿದ್ದರೆ, ನಿಲಯಾವಲಿಷು = ಮನೆಗಳ ಸಾಲುಗಳಲ್ಲಿ, ವಿಕಟಾ = ನಾನಾಕಾರದ, (ಮನೋಹರವಾದ) ವಿಟಂಕ = ಗೂಡುಗಳಲ್ಲಿ, ಕೃತ = ಮಾಡಲ್ಪಟ್ಟ, ಪತ್ರಿತತಿಃ = ಹಕ್ಕಿಗಳ ಸಮೂಹವು, ಕೃತಕಾ ಇತಿ = ಕೃತ್ರಿಮವೆಂದು, ಕಥಂಚನ = ಯಾವ ರೀತಿಯಿಂದಲೂ, ನೋ ಅನ್ವೈಕ್ಷ್ಯತ = ನೋಡಲ್ಪಡುತ್ತಿರಲಿಲ್ಲ.

**ತಾ :**—ಮುಕ್ತಿಯನ್ನು ಹೊಂದಿದ ಜೀವರಿಗೆ ಭ್ರಾಂತಿಯು ಇಲ್ಲವೇ ಇಲ್ಲ ಎಂಬ ನಿಯಮವಿದೆ. ಹೀಗಿಲ್ಲದಿದ್ದರೆ ಅಲ್ಲಿರುವ ಮನೆಗಳ ಸಾಲುಗಳಲ್ಲಿ ಮಹಡಿಯ ಹತ್ತಿರದಲ್ಲಿ ಗೂಡುಗಳಿಂತಿರುವ ಹಲಿಗೆಗಳಲ್ಲಿ ಶಿಲ್ಪಿಗಳು ಸುಂದರವಾಗಿ ನಿರ್ಮಿಸಿ ಇಟ್ಟಿರುವ ಹಕ್ಕಿಗಳ ಗೊಂಬೆಗಳ ಸಮೂಹವು ಕೃತಕವೆಂದು ಯಾವ ರೀತಿಯಿಂದಲೂ ತೋರಲು ಸಾಧ್ಯವಿರಲಿಲ್ಲ. ಅವು ಜೀವವುಳ್ಳ ಹಕ್ಕಿಗಳೆಂದೇ ಭ್ರಾಂತಿಯು ಬರಬೇಕಾಗಿತ್ತು. ಆದರೆ ಅಲ್ಲಿ ಭ್ರಾಂತಿಯೇ ಇಲ್ಲದ್ದರಿಂದ ಅವುಗಳು ಕೃತಕ ಹಕ್ಕಿಗಳೆಂದೇ ಎಲ್ಲರೂ ತಿಳಿದಿರುತ್ತಾರೆ. (ಆ ಗೊಂಬೆಗಳನ್ನು ಜೀವಂತವಾಗಿರುವಂತೆಯೇ ನಿರ್ಮಿಸಿದ್ದಾರೆ.)

**ವಿ :**—ವಿಗತಃ ಭ್ರಮಃ ಯೇಷಾಂ ತೇ ವಿಭ್ರಮಾಃ, ತೇಷಾಂ ಭಾವಃ ವಿಭ್ರಮತಾ, ವಿಭ್ರಮತಾಯಾಃ ನಿಯಮಃ, ನಿಲಯಾನಾಂ ಆವಲಯಃ ತಾಸು, ವಿಟಂಕೇ ಕೃತಾ, ಪತ್ರಿಣಾಂ ತತಿಃ, ವಿಟಂಕಕೃತಾ ಚ ಸಾ ಪತ್ರಿತತಿಶ್ಚ ;

**ಕ್ರಿ:**— ಅಭವಿಷ್ಯತ್ ಅಭವಿಷ್ಯತಾಂ ಅಭವಿಷ್ಯನ್, ಅಭವಿಷ್ಯಃ ಅಭವಿಷ್ಯತಂ ಅಭವಿಷ್ಯತ, ಅಭವಿಷ್ಯಂ ಅಭವಿಷ್ಯಾವ ಅಭವಿಷ್ಯಾಮ.

Rarest Archiver

ಭೂ ಸತ್ತಾಯಾಂ ಲೃಜ್. ಅವ+ಐಕ್ಷ್ಯತ ಐಕ್ಷ್ಯೇತಾಂ ಐಕ್ಷ್ಯಂತ, ಐಕ್ಷ್ಯಥಾಃ ಐಕ್ಷ್ಯೇಥಾಂ ಐಕ್ಷ್ಯಧ್ವಂ, ಐಕ್ಷ್ಯೇ ಐಕ್ಷ್ಯಾವಹಿ ಐಕ್ಷ್ಯಾಮಹಿ. ಅವ. ಉಪ. ಈಕ್ಷ ದರ್ಶನೇ ಕರ್ಮಣಿ ಲಙ್.

ಅವ :—ಅಲ್ಲಿ ಭವನಗಳ ಒಳಗೆ ಇರುವ ಮೇಲ್ಕಟ್ಟುಗಳು ಹೇಗಿವೆ?

**ವಿವಿಧಸ್ತುಲೋಪಗತಚಿತ್ರಪಟೀ**
**ಸುವಿತಾನಲಂಬಿಮಣಿದಾಮಗಣಃ ।**
**ಶರಣಾಂತರೇಷ್ವಧಿಕಪೂರಣತಃ**
**ಪ್ರಚಕಾಸ್ತಿ ವಿಭ್ರಮ ಇವಾವಗಲನ್ ॥೧೨॥**

ಅ :— ವಿವಿಧಃ ತುಲೋಪಗತಚಿತ್ರಪಟೀಸುವಿತಾನಲಂಬಿಮಣಿ-ದಾಮಗಣಃ ಶರಣಾಂತರೇಷು ಅಧಿಕಪೂರಣತಃ ಅವಗಲನ್ ವಿಭ್ರಮ ಇವ ಪ್ರಚಕಾಸ್ತಿ.

**ಅರ್ಥ** :—ವಿವಿಧಃ=ನಾನಾಪ್ರಕಾರವಾದ, ತುಲೋಪಗತ=ದೂಲಗಳಲ್ಲಿ (ತೊಲೆಗಳಲ್ಲಿ) ಕಟ್ಟಿರುವ, ಚಿತ್ರಪಟೀ=ವಿಚಿತ್ರವಾದ ಒಟ್ಟಿಗಳ, ಸುವಿತಾನ=ಮೇಲ್ಕಟ್ಟುಗಳಿಂದ, ಲಂಬಿ=ಜೋಲಾಡುವ, ಮಣಿದಾಮ-ಗಣಃ=ರತ್ನಸರಗಳ ಸಮೂಹವು, ಶರಣಾಂತರೇಷು=ಮನೆಗಳ ಒಳಭಾಗಗಳಲ್ಲಿ, ಅಧಿಕಪೂರಣತಃ= ತುಂಬಿ ಹೆಚ್ಚಾದುದರಿಂದ, ಅವಗಲನ್= ಸೋರುತ್ತಿರುವ, ವಿಭ್ರಮಃ ಇವ = ಕಾಂತಿಯಂತೆ, ಪ್ರಚಕಾಸ್ತಿ= ಶೋಭಿಸುತ್ತದೆ.

ತಾ :— ಆ ವೈಕುಂಠದಲ್ಲಿ ಮನೆಯ ಕಂಭಗಳ ಮೇಲ್ಭಾಗದಲ್ಲಿ ಆಧಾರವಾದ ಉತ್ತರ ತೊಲೆಗಳು (ಅಡ್ಡವಾದ ದಪ್ಪತೊಲೆಗಳು) ಮೇಲ್ಭಾಗದ ತೊಲೆಗಳೂ ಇವೆ. ಇವುಗಳಲ್ಲಿ ಕಟ್ಟಿದ ನಾನಾಬಣ್ಣದ ಮೇಲ್ಕಟ್ಟುಗಳಲ್ಲಿ ರತ್ನಮಾಲೆಗಳನ್ನು ಜೋಲಾಡಿಸಿದ್ದಾರೆ. ಇವುಗಳು ಮನೆಯ ತುಂಬಾ ತುಂಬಿದ ಕಾಂತಿಯು ಹಿಡಿಸದಿರುವುದರಿಂದ ಕೆಳಗೆ ಸ್ರುರಿಯುತ್ತದೆಯೋ ಎಂಬಂತೆ ತೋರುತ್ತಿವೆ.

Rarest Archiver

ವಿ :—ತುಲಾಸು ಉಪಗತಾ ತುಲೋಪಗತಾ, ಚಿತ್ರಾ ಚ ಸಾ ಪಟೀ ಚ ಚಿತ್ರಪಟೀ, ತುಲೋಪಗತಾ ಚ ಸಾ ಚಿತ್ರಪಟೀ ಚ ತುಲೋಪಗತ ಚಿತ್ರಪಟೀ, ತುಲೋಪಗತಚಿತ್ರಪಟ್ಯಾತ್ಮಕಂ ಚ ತತ್ ಸು (ಶೋಭನಂ) ವಿತಾನಂ, ತತ್ರ ಲಂಬೀ, ಮಣೀನಾಂ ದಾಮಾನಿ ಮಣಿದಾಮಾನಿ, ಮಣಿದಾಮ್ನಾಂ ಗಣಃ ಮಣಿದಾಮಗಣಃ, ತುಲೋ.... ಲಂಬೀ ಚಾಸೌ ಮಣಿದಾಮಗಣಶ್ಚ, ಶರಣಾನಾಂ ಅಂತರಾಣಿ ತೇಷು, ಅಧಿಕಂ ಚ ತತ್ ಪೂರಣಂ ಚ, ಅಧಿಕಪೂರಣಾತ್ ಇತಿ ಅಧಿಕಪೂರಣತಃ |

ಕ್ರಿ :—ಪ್ರ + ಚಕಾಸ್ತಿ ಚಕಾಸ್ತಃ ಚಕಾಸತಿ, ಚಕಾಸ್ಸಿ ಚಕಾಸ್ಥಃ ಚಕಾಸ್ಥ ಚಕಾಸ್ಮಿ ಚಕಾಸ್ವಃ ಚಕಾಸ್ಮಃ ಚಕಾಸೃ ದೀಪ್ತೌ. ಅಕ. ಲಟ್.

ಅವ:—ಇಂತಹ ವೈಭವವು ವೈಕುಂಠದಲ್ಲಿರುವುದು ಅಸಂಭಾವಿತ ವೆನ್ನಬಾರದು ; ಏಕೆಂದರೆ—

**ವಿಮಲಾಕೃತಿಃ ಪ್ರಕೃತಿರೇವ ಮಹಾ-**
**ಮಣಿಹೇಮಮಯ್ಯಖಿಲವಸ್ತುಮಯೀ |**
**ಇಹ ಸಂಭವೇತ್ ಸಕಲಕಾಂತಿರಸಃ**
**ಕಥಿತೋಽಧಿಕೋಕ್ತಿಭಿರತಃ ಕವಿಭಿಃ ||೧೩||**

ಅ:—ಇಹ ವಿಮಲಾಕೃತಿಃ ಪ್ರಕೃತಿರೇವ ಮಹಾಮಣಿಹೇಮಮಯೀ ಅಖಿಲವಸ್ತುಮಯೀ. ಅತಃ ಕವಿಭಿಃ ಅಧಿಕೋಕ್ತಿಭಿಃ ಕಥಿತಃ ಸಕಲ ಕಾಂತಿರಸಃ ಸಂಭವೇತ್.

ಅರ್ಥ:—ಇಹ = ಈ ವೈಕುಂಠಲೋಕದಲ್ಲಿ, ವಿಮಲಾಕೃತಿಃ = ನಿರ್ದೋಷಸ್ವರೂಪಳಾದ, ಪ್ರಕೃತಿಃ ಏವ = ಲಕ್ಷ್ಮೀದೇವಿಯೇ, ಮಹಾಮಣಿ = ಉತ್ತಮರತ್ನಗಳು, ಹೇಮಮಯೀ = ಚಿನ್ನ, ಇವುಗಳ ಸ್ವರೂಪಉಳ್ಳವಳಾಗಿ, ಅಖಿಲವಸ್ತುಮಯೀ = ಎಲ್ಲಾ ಪದಾರ್ಥ ಸ್ವರೂಪಳು. ಅತಃ = ಈ ಕಾರಣದಿಂದ, ಕವಿಭಿಃ = ಕವಿಗಳಿಂದ, ಅಧಿಕೋಕ್ತಿಭಿಃ = ಅತಿಶಯೋಕ್ತಿಗಳಿಂದ, ಕಥಿತಃ = ಹೇಳಲ್ಪಟ್ಟ, ಸಕಲ ಕಾಂತಿರಸಃ = ಎಲ್ಲಾ ಶೋಭಾತಿಶಯವು ಸಂಭವೇತ್ = ಇದ್ದೇ ಇರುತ್ತದೆ.

Rarest Archiver

ತಾ :—ಈ ವೈಕುಂಠಲೋಕದಲ್ಲಿ ನಿತ್ಯನಿರ್ದೋಷಸ್ವರೂಪಳಾದ ಲಕ್ಷ್ಮೀದೇವಿಯೇ ರತ್ನ, ಭಂಗಾರ ಮುಂತಾದ ಸ್ವರೂಪವನ್ನು ತಾಳಿ, ಎಲ್ಲಾ ವಸ್ತುಸ್ವರೂಪಳಾಗಿರುತ್ತಾಳೆ. ಆದುದರಿಂದ ಮೋಕ್ಷದಲ್ಲಿ ಈ ಈ ಎಲ್ಲಾ ಕಾಂತಿಯು ಅತಿಶಯವು ಕೂಡುತ್ತದೆ. ಆದುದರಿಂದಲೇ ಜ್ಞಾನಿಗಳು ಎಲ್ಲಾ ಲೋಕಗಳಿಗಿಂತಲೂ ಮಿಗಿಲಾಗಿ ಈ ವೈಕುಂಠವನ್ನು ಅದ್ಭುತವಾದುದೆಂದು ವರ್ಣಿಸುತ್ತಾರೆ. ಲೋಕೋತ್ತರಸುಂದರಿಯಾದ ಸಕಲವಸ್ತುಗಳ ಅಭಿಮಾನಿನಿಯಾದ ಲಕ್ಷ್ಮೀದೇವಿಯೇ ಮೋಕ್ಷದಲ್ಲಿ ಸಕಲವಸ್ತುಸ್ವರೂಪಳಾದುದರಿಂದ ಅಲ್ಲಿಯ ಸಮಸ್ತವಸ್ತುಗಳೂ ಅದ್ಭುತ ಸುಂದರಗಳೆಂಬ ವಿಷಯದಲ್ಲಿ ಆಶ್ಚರ್ಯವಿಲ್ಲ.

ವಿ:—ವಿಮಲಾ ಆಕೃತಿಃ ಯಸ್ಯಾಃ ಸಾ, ಮಣಯಶ್ಚ ಹೇಮಾನಿ ಚ ಮಣಿಹೇಮಾನಿ, ಮಹಾಂತಿ ಚ ತಾನಿ ಮಣಿಹೇಮಾನಿ ಚ, ಮಹಾ-ಮಣಿಹೇಮಸ್ವರೂಪಾ ಮಹಾಮಣಿಹೇಮಮಯೀ, ಕಾಂತೀನಾಂ ರಸಃ ಕಾಂತಿರಸಃ ಸಕಲಶ್ಚಾಸೌ ಕಾಂತಿರಸಶ್ಚ ಅಧಿಕಾಶ್ಚ ತಾಃ ಉಕ್ತಯಶ್ಚ ಅಧಿಕೋಕ್ತಯಃ ತಾಭಿಃ |

ಕ್ರಿ :–ಸಂ+ಭವೇತ್ ಭವೇತಾಂ ಭವೇಯುಃ ಇತ್ಯಾದಿ ಭೂಧಾತು, ವಿಧಿಲಿಙ್.

ಅವ:—ಮುಕ್ತರು ಎಷ್ಟು ತುಂಬಿದರೂ ವೈಕುಂಠದಲ್ಲಿ ಜನ ಸಂಮರ್ದವಿಲ್ಲ.

**ತದನಾದಿಕಾಲಮಿತಮುಕ್ತಿರತೇ-**
**ರಗಣಯ್ಯಶಂಭುಮುಖಸಂಘತತೇಃ |**
**ನಗರ್ಯೈರ್ಮಹಾಪುರಮಸಂಹತಿಮ-**
**ಲ್ಲಸತಿ ಪ್ರಭೋರಯಮಹೋ ಮಹಿಮಾ ||೧೪||**

ಅ :—ಅನಾದಿಕಾಲಂ ಇತಮುಕ್ತಿರತೇಃ ಅಗಣಯ್ಯಶಂಭುಮುಖ-ಸಂಘತತೇಃ ನಗರ್ಯೈಃ ಅಸಂಹತಿಮತ್ ತತ್ ಮಹಾಪುರಂ ಲಸತಿ, ಪ್ರಭೋಃ ಅಯಂ ಮಹಿಮಾ ಅಹೋ.

Rarest Archive

(1) No congestion — No population problem.



**ಅರ್ಥ :—** ಅನಾದಿಕಾಲಂ = ಬಹಳಕಾಲದಿಂದ, ಇತ = ಹೊಂದಲ್ಪಟ್ಟ, ಮುಕ್ತಿ = ಮೋಕ್ಷದ, ರತೇಃ = ಸುಖವುಳ್ಳ, ಅಗಣಯ್ಯ = ಎಣಿಕೆ ಮಾಡಲು ಸಾಧ್ಯವಿಲ್ಲದ, ಶಂಭುಮುಖ = ಬ್ರಹ್ಮ ಮೊದಲಾದ ದೇವತೆಗಳ, ಸಂಘ = ಗುಂಪಿನ, ತತೇಃ = ಸಮೂಹದ, ನಗರ್ಯೈಃ = ಪಟ್ಟಣ ಗಳಿಂದ, ಅಸಂಹತಿಮತ್ = ಇಕ್ಕಟ್ಟು ಇಲ್ಲದ, ತತ್ ಮಹಾಪುರಂ = ಆ ದೊಡ್ಡ ವೈಕುಂಠಪುರವು, ಲಸತಿ = ಪ್ರಕಾಶಿಸುತ್ತದೆ. ಪ್ರಭೋಃ = ಶ್ರೀಮನ್ನಾರಾಯಣನ, ಅಯಂ ಮಹಿಮಾ = ಈ ಮಹಿಮೆಯು, ಅಹೋ = ಆಶ್ಚರ್ಯಕರವಾಗಿದೆ. (1)

**ತಾ :—** ಆ ಮಹಾವೈಕುಂಠನಗರವು ಅನಾದಿಕಾಲದಿಂದ ಮೋಕ್ಷ-ಸುಖವನ್ನು ಅನುಭವಿಸುತ್ತಲಿರುವ ಚತುರ್ಮುಖಬ್ರಹ್ಮನೇ ಮೊದಲಾದ ಎಣಿಸಲಸಾಧ್ಯವಾದ ಮುಕ್ತಜೀವರ ವಾಸಸ್ಥಾನವಾಗಿದೆ. ಇಂತಹ ಜೀವರ ಸಮುದಾಯದ ಪಟ್ಟಣಗಳು ಆ ಲೋಕದಲ್ಲಿ ಅಸಂಖ್ಯ ವಾಗಿವೆ. ಹೀಗಿದ್ದರೂ ಆ ಲೋಕವು ಇಕ್ಕಟ್ಟಿಲ್ಲದೆ ವಿಶಾಲವಾಗಿ ಪ್ರಕಾಶಿಸುತ್ತಿದೆ. ಹೀಗೆ ಅಪರಿಮಿತಮುಕ್ತಬ್ರಹ್ಮಾದಿಸಮುದಾಯ, ಆ ಸಮುದಾಯಗಳ ಅನಂತವಾದ ನಗರಗಳು ಇವುಗಳಿಂದ ತುಂಬಿದ್ದರೂ ಅಲ್ಲಿ ಸಂಮರ್ದವಿಲ್ಲದಿರುವುದು ಸಮರ್ಥನಾದ ಆ ವಿಷ್ಣುವಿನ ಮಹಿಮೆಯೇ ಸರಿ. ಇದು ಅತ್ಯಂತ ಆಶ್ಚರ್ಯಕರವಾಗಿದೆ.

**ವಿ:—** ಅನಾದಿಶ್ಚಾಸೌ ಕಾಲಶ್ಚ ತಂ. ಸೂ–'ಕಾಲಾಧ್ವನೋರ ತ್ಯಂತಸಂಯೋಗೇ' ಎಂಬ ಸೂತ್ರದಿಂದ ಸಪ್ತಮ್ಯರ್ಥದಲ್ಲಿ ದ್ವಿತೀಯಾ. ಇತಾ ಮುಕ್ತೇಃ ರತಿಃ ಯಯಾ ಸಾ, ತಸ್ಯಾಃ. ಗಣಯಿತುಂ ಅಶಕ್ಯಾ ಅಗಣಯ್ಯಾ, ಶಂಭುಃ ಮುಖಂ ಯೇಷಾಂ ತೇ ಶಂಭುಮುಖಾಃ ತೇಷಾಂ ಸಂಘಃ ಶಂಭುಮುಖಸಂಘಸ್ಯ ತತಿಃ, ಅಗಣಯ್ಯಾ ಚ ಸಾ ಶಂಭುಮುಖ ಸಂಘತತಿಶ್ಚ ಅಗಣಯ್ಯಶಂಭುಮುಖಸಂಘತತಿಃ ತಸ್ಯಾಃ, ಶಂಭು = ಬ್ರಹ್ಮ ದೇವರು. ಶಂಭೂ ಬ್ರಹ್ಮತ್ರಿಲೋಚನೌ. ಕೋಶ. ನ ಸಂಹತಿಃ ಅಸಂಹತಿಃ ಸಾ ಅಸ್ಯ ಅಸ್ತೀತಿ. ಮಹಚ್ಚ ತತ್ ಪುರಂ ಚ ಮಹಾಪುರಂ.

**ಕ್ರಿ:—** ಲಸತಿ ಲಸತಃ ಲಸಂತಿ ಇತ್ಯಾದಿ, ಲಸ-ದೀಪ್ತೌ ಲಟ್.

Rarest Archiver

ಅವ :—ಮುಕ್ತಜೀವರ ಭವನಗಳ ಮಧ್ಯದಲ್ಲಿರುವ ಹರಿಮಂದಿರವು ಹೀಗೆ ಶೋಭಿಸುತ್ತದೆ.

**ಭವನಂ ವಿಭಾತಿ ಭುವನೈಕಪತೇ-**
**ರ್ಭುವನತ್ರಯಾದ್ಭುತಗು(ಗ)ಣಾತಿಶಯಿ ।**
**ವರಮಂದಿರಪ್ರಕರಮಧ್ಯಗತಂ**
**ದ್ವಿಜಮಂಡಲಸ್ಥ ಶಶಿಮಂಡಲವತ್ ॥೧೫॥**

ಅ:— ಭುವನತ್ರಯಾದ್ಭುತಗುಣಾತಿಶಯಿ, ವರಮಂದಿರಪ್ರಕರ-ಮಧ್ಯಗತಂ, ಭುವನೈಕಪತೇಃ ಭವನಂ, ದ್ವಿಜಮಂಡಲಸ್ಥ ಶಶಿಮಂಡಲವತ್, ವಿಭಾತಿ.

ಅರ್ಥ :— ಭುವನತ್ರಯ = ಮೂರು ಲೋಕಗಳಲ್ಲಿ, ಅದ್ಭುತ = ಆಶ್ಚರ್ಯಕರವಾದ (ವಸ್ತುಗಳ) ಗು(ಗ)ಣಾತಿಶಯಿ = ಗುಣಗಳನ್ನು ಮೀರಿರುವ, (ಆಶ್ಚರ್ಯದ ಸಮೂಹವನ್ನು ಮೀರಿರುವ), ವರಮಂದಿರ ಪ್ರಕರ = ಉತ್ತಮವಾದ ಮನೆಗಳ ಸಮೂಹದ, ಮಧ್ಯಗತಂ = ನಡುವೆ ಇರುವ, ಭುವನೈಕಪತೇಃ = ಲೋಕಗಳಿಗೆ ಮುಖ್ಯಸ್ವಾಮಿಯಾದ ನಾರಾಯಣನ, ಭವನಂ = ಮನೆಯು, ದ್ವಿಜಮಂಡಲಸ್ಥ = ನಕ್ಷತ್ರಗಳ ಸಮೂಹದಲ್ಲಿರುವ, ಶಶಿಮಂಡಲವತ್ = ಚಂದ್ರಮಂಡಲದಂತೆ, ವಿಭಾತಿ = ಪ್ರಕಾಶಿಸುತ್ತದೆ.

ತಾ:-ಮೂರು ಲೋಕದಲ್ಲಿರುವ ಆಶ್ಚರ್ಯಕರವಾದ ವಸ್ತುಗಳ ಸಮೂಹಗಳನ್ನೂ ಅವುಗಳ ಅತಿಶಯವಾದ ಗುಣಗಳನ್ನೂ ಮೀರಿರುವ, ಬ್ರಹ್ಮಾದಿದೇವತೆಗಳ ಸುಂದರವಾದ ಮನೆಗಳ ಮಧ್ಯದಲ್ಲಿ ಸಮಸ್ತಲೋಕ ಗಳಿಗೂ ಮುಖ್ಯಸ್ವಾಮಿಯಾದ ಶ್ರೀಹರಿಯ ಮನೆಯು ನಕ್ಷತ್ರಮಂಡಲಗಳ ಮಧ್ಯದಲ್ಲಿರುವ ಚಂದ್ರಮಂಡಲದಂತೆ ಪ್ರಕಾಶಿಸುತ್ತದೆ.

ವಿ :—ಏಕಶ್ಚಾಸೌ ಪತಿಶ್ಚ, ಭುವನಾನಾಂ ಏಕಪತಿಃ ತಸ್ಯ. ಭುವನಾನಾಂ ತ್ರಯಂ, ಭುವನತ್ರಯೇ ಅದ್ಭುತಾನಾಂ ಗಣಾಃ (ಅದ್ಭುತಾಃ-ಗುಣಾಃ); ಭುವನತ್ರಯಾದ್ಭುತಗಣಾನ್ (ಗುಣಾನ್) ಅತಿಶೇತೇ ಇತಿ.

Rarest Archiver

ವರಾಣಿ ಚ ತಾನಿ ಮಂದಿರಾಣಿ ಚ, ತೇಷಾಂ ಪ್ರಕರಃ, ತಸ್ಯ ಮಧ್ಯೇ ಗತಂ. ದ್ವಿಜಾನಾಂ ಮಂಡಲಂ ತಸ್ಮಿನ್ ತಿಷ್ಠತೀತಿ ದ್ವಿಜಮಂಡಲಸ್ಥಂ. ಶಶಿನಃ ಮಂಡಲಂ ಶಶಿಮಂಡಲಂ, ದ್ವಿಜಮಂಡಲಸ್ಥಂ ಚ ತತ್ ಶಶಿಮಂಡಲಂ ಚ, ತೇನ ತುಲ್ಯಂ.

ಕ್ರಿ :—ವಿ + ಭಾತಿ, ಭಾತಿ ಭಾತಃ ಭಾಂತಿ ಇತ್ಯಾದಿ. ಭಾ–ದೀಪ್ತೌ ಲಟ್.

ಅವ:—ಭಗವಂತನ ಮನೆಯ ಗುಣವು ಹೀಗಿದೆ.

**ಸ್ವಯಮಿಂದಿರೈವ ಪತಿಮಾನಕರೀ**
**ಗೃಹಕರ್ಮ ಯತ್ರ ಕುರುತೇ ಸುತರಾಂ ।**
**ಅಪಿ ಕಿಂಕರೀದಶಶತೀಮಹಿತಾ**
**ಶ್ರಿಯಮತ್ರ ವರ್ಣಯತಿ ವೇಶ್ಮನಿ ಕಃ ॥೧೬॥**

ಅ: – ಯತ್ರ ಪತಿಮಾನಕರೀ ಇಂದಿರಾ ಕಿಂಕರೀದಶಶತೀಮಹಿತಾ ಅಪಿ ಸ್ವಯಂ ಏವ ಸುತರಾಂ ಗೃಹಕರ್ಮ ಕುರುತೇ. ಅತ್ರ ವೇಶ್ಮನಿ ಶ್ರಿಯಂ ಕಃ ವರ್ಣಯತಿ ?

ಅರ್ಥ :—ಯತ್ರ = ಯಾವ ಹರಿಮಂದಿರದಲ್ಲಿ, ಪತಿಮಾನಕರೀ = ಪತಿಯನ್ನು ಸನ್ಮಾನಿಸುವ, ಇಂದಿರಾ = ಲಕ್ಷ್ಮಿಯು, ಕಿಂಕರೀ = ದಾಸಿಯರ, ದಶಶತೀ = ಸಾವಿರದಿಂದ, ಮಹಿತಾ ಅಪಿ = ಪೂಜಿಸಲ್ಪಟ್ಟವಳಾಗಿದ್ದರೂ, ಸ್ವಯಂ ಏವ = ತಾನಾಗಿಯೇ, ಸುತರಾಂ = ಅತಿಶಯವಾಗಿ, ಗೃಹಕರ್ಮ ಕುರುತೇ = ಮನೆಕೆಲಸವನ್ನು ಮಾಡುತ್ತಾಳೆ. ಅತ್ರ ವೇಶ್ಮನಿ = ಈ ಮನೆಯಲ್ಲಿರುವ, ಶ್ರಿಯಂ = ಶೋಭೆಯನ್ನು (ಸಂಪತ್ತನ್ನು), ಕಃ ವರ್ಣಯತಿ ? = ಯಾವನು ವರ್ಣಿಸಬಲ್ಲನು ?

ತಾ:— ಪರಮಾತ್ಮನ ಭವನದಲ್ಲಿ ಲಕ್ಷ್ಮೀದೇವಿಯೇ ತನ್ನ ಪತಿಗೆ ಅತಿಶಯವಾದ ಗೌರವವನ್ನು ಸೂಚಿಸುತ್ತಾ, ತನಗೆ ಸಾವಿರಾರು ಮಂದಿ ದಾಸಿಯರಿದ್ದರೂ ತಾನೇ ತನ್ನ ಮನೆಯನ್ನು ಶುದ್ಧಿಮಾಡುವುದು, ಅಲಂಕರಿಸುವುದು ಪತಿಸೇವಾ ಮೊದಲಾದ ಕೆಲಸವನ್ನು ಮಾಡುತ್ತಾಳೆ.

Rarest Archiver

ಇಂತಹ ಮನೆಯಲ್ಲಿರುವ ಸಂಪತ್ತನ್ನೂ ಶೋಭೆಯನ್ನೂ ಅಲ್ಲಿರುವ ಲಕ್ಷ್ಮೀದೇವಿಯನ್ನೂ ಯಾವನು ವರ್ಣಿಸಬಲ್ಲನು? ತಾನು ಎಷ್ಟು ಪರಿವಾರ ಮತ್ತು ಸಂಪತ್ತುಳ್ಳವಳಾದರೂ ಪತಿವ್ರತೆಯು ಪತಿಸೇವೆಯನ್ನು ತಾನೇ ಮಾಡಬೇಕು. ಲಕ್ಷ್ಮೀಕಟಾಕ್ಷವಿದ್ದಲ್ಲಿ ಸಂಪತ್ತೂ ಕಾಂತಿಯೂ ಹೆಚ್ಚುತ್ತದೆ. ಸಾಕ್ಷಾತ್ ಲಕ್ಷ್ಮಿಯೇ ಹರಿಸೇವೆಯನ್ನು ಮಾಡುತ್ತಿರುವಾಗ ವೈಕುಂಠದ ಸಂಪತ್ತನ್ನೂ, ಶೋಭೆಯನ್ನೂ, ಅಲ್ಲಿ ಕೆಲಸಮಾಡುವ ಲಕ್ಷ್ಮಿಯನ್ನೂ ಯಾವನಿಗೆ ವರ್ಣಿಸಲು ಸಾಧ್ಯ?

ವಿ:—ಪತ್ಯುಃ ಮಾನಂ ಕರೋತೀತಿ ಪತಿಮಾನಕರೀ, ಗೃಹಸ್ಯ ಕರ್ಮ ತತ್. ದಶಾನಾಂ ಶತಾನಾಂ ಸಮಾಹಾರಃ ದಶಶತೀ, ದಶಶತ್ಯಾ ಮಹಿತಾ.

ಕ್ರಿ:—ಕುರುತೇ ಕುರ್ವಾತೇ ಕುರ್ವತೇ, ಡುಕೃಞ್-ಕರಣೇ, ಆತ್ಮ, ಲಟ್, ವರ್ಣಯತಿ ವರ್ಣಯತಃ ವರ್ಣಯಂತಿ; ವರ್ಣ ವರ್ಣಕ್ರಿಯಾ ವಿಸ್ತಾರ ಗುಣವಚನೇಷು, ಲಟ್.

ಅವ:—ವೈಕುಂಠದಲ್ಲಿ ನಡೆಯುವ ಪರಮಾತ್ಮನ ವಿಲಾಸವನ್ನು, ವರ್ಣಿಸುತ್ತಾರೆ.

**ಕಮಲಾಪತಿಃ ಕಮಲಯಾಮಲಯಾ**
**ಕಮನೀಯಯಾ ಕಮಲಲೋಚನಯಾ ।**
**ಅಮೃತಾಹಿರಾಜಮೃದುಭೋಗಗತಃ**
**ಸ್ವರತೋಽಪಿ ತತ್ರ ರಮತೇ ಪರಮಃ ॥೧೭॥**

ಅ:-ಪರಮಃ, ಕಮಲಾಪತಿಃ, ಸ್ವರತಃ, ಅಪಿ, ತತ್ರ, ಅಮೃತಾಹಿರಾಜಮೃದುಭೋಗಗತಃ, ಅಮಲಯಾ, ಕಮನೀಯಯಾ, ಕಮಲಲೋಚನಯಾ, ಕಮಲಯಾ ರಮತೇ.

ಅರ್ಥ:—ಪರಮಃ=ಸರ್ವೋತ್ತಮನಾದ, ಕಮಲಾಪತಿಃ = ಲಕ್ಷ್ಮೀಪತಿಯಾದ ನಾರಾಯಣನು, ಸ್ವರತಃ ಅಪಿ= ತನ್ನಲ್ಲೇ ತಾನು ವಿಹರಿಸುವವನಾದರೂ, ತತ್ರ=ತನ್ನ ಭವನದಲ್ಲಿ, ಅಮೃತ = ಮುಕ್ತನಾದ, ಅಹಿರಾಜ=ಶೇಷದೇವರ, ಮೃದುಭೋಗಗತಃ=ಕೋಮಲವಾದ ದೇಹದ

Rarest Archive

ಮೇಲೆ ಮಲಗಿದವನಾಗಿ, ಅಮಲಯಾ = ದೋಷವಿಲ್ಲದ, ಕಮನೀಯಯಾ ಮನೋಹರಳಾದ, ಕಮಲಲೋಚನಯಾ=ತಾವರೆಯಂತಹ ಕಣ್ಣುಗಳುಳ್ಳ, ಕಮಲಯಾ = ಲಕ್ಷ್ಮೀದೇವಿಯಿಂದ, ರಮತೇ= ವಿಹರಿಸುತ್ತಾನೆ.

ತಾ :—ಪೂರ್ಣಕಾಮನಾದ ಆ ಲಕ್ಷ್ಮೀಪತಿಯು ತನ್ನ ವಿಹಾರಕ್ಕೆ ಮತ್ತೊಬ್ಬರ ಅಪೇಕ್ಷೆಇಲ್ಲದವನು ಆಗಿದ್ದರೂ ಅವನು ಮುಕ್ತರಾದ ಶೇಷದೇವರ ಮೃದುವಾದ ದೇಹದಲ್ಲಿ ಮಲಗಿದವನಾಗಿ ದೋಷವಿಲ್ಲದವಳೂ, ಅತ್ಯಂತಮನೋಹರಳೂ, ತಾವರೆಯಂತಹ ಕಣ್ಣುಗಳುಳ್ಳವಳೂ ಆದ ಲಕ್ಷ್ಮೀದೇವಿಯಿಂದ ಕೂಡಿಕೊಂಡು ವಿಹರಿಸುತ್ತಾನೆ. ಸರ್ವೋತ್ತಮನಾದ ಲಕ್ಷ್ಮೀರಮಣನ ಯಾವ ಭೋಗಕ್ಕೂ ಪರಾಪೇಕ್ಷೆಯಿಲ್ಲ. ಆದರೂ ಅವನು ಲಕ್ಷ್ಮೀದೇವಿಗೆ ನಿರಂತರವಾದ ಆನಂದಾನುಭವವನ್ನು ಉಂಟು ಮಾಡುತ್ತಾನೆ.

ವಿ :—ಕಮಲಾಯಾಃ ಪತಿಃ, ನ ವಿದ್ಯತೇ ಮಲಃ ಯಸ್ಯಾಃ ಸಾ ತಯಾ. ಕಮಲೇ ಇವ ಲೋಚನೇ ಯಸ್ಯಾಃ ಸಾ ತಯಾ. ಅಹೀನಾಂ ರಾಜಾ ಅಹಿರಾಜಃ, ಅಮೃತಶ್ಚಾಸೌ ಅಹಿರಾಜಶ್ಚ ಅಮೃತಾಹಿರಾಜಃ, ಮೃದುಶ್ಚಾಸೌ ಭೋಗಶ್ಚ ಮೃದುಭೋಗಃ, ಅಮೃತಾಹಿರಾಜಸ್ಯ ಮೃದುಭೋಗಃ, ಅಮೃತಾಹಿರಾಜಮೃದುಭೋಗಂ ಗತಃ. ಸ್ವಸ್ಮಿನ್ ರತಃ ಸ್ವರತಃ.

ಕ್ರಿ :— ರಮತೇ ರಮೇತೇ ರಮಂತೇ ಇತ್ಯಾದಿ. ರಮು-ಕ್ರೀಡಾಯಾಂ ಲಟ್.

ಅವ :—ಪರಮಾತ್ಮನನ್ನು ಸ್ಮರಿಸುವ ರೀತಿಯನ್ನು ಶೇಷದೇವರು ಸನಕಾದಿಗಳಿಗೆ ಉಪದೇಶಿಸುತ್ತಾರೆ.

**ತರುಣಪ್ರಭಾಕರಸಹಸ್ರರುಚಂ**
**ಕನಕಾಂಬರಂ ಮಣಿಮಯಾಭರಣಮ್ ।**
**ಹಸಿತಾನನೇಂದುಮರವಿಂದದೃಶಂ**
**ತಮರೀಂದ್ರಧಾರಿಣಮನುಸ್ಮರತ ॥೧೮॥**

Rarest Archiver

ಅ :— ತರುಣಪ್ರಭಾಕರಸಹಸ್ರರುಚಂ, ಕನಕಾಂಬರಂ, ಮಣಿಮಯಾಭರಣಂ, ಹಸಿತಾನನೇಂದುಂ, ಅರವಿಂದದೃಶಂ, ಅರೀಂದ್ರಧಾರಿಣಂ, ತಂ, (ಯೂಯಂ), ಅನುಸ್ಮರತ.

ಅ. ಅ:—ತರುಣ = ಎಳೆಯ (ಆಗತಾನೇ ಉದಯಿಸಿದ), ಪ್ರಭಾಕರಸಹಸ್ರ = ಸಾವಿರಸೂರ್ಯರ, ರುಚಂ = ಕಾಂತಿಯುಳ್ಳ, ಕನಕಾಂಬರಂ = ಬಂಗಾರದಂತಹ ಬಟ್ಟೆಯುಳ್ಳ, ಮಣಿಮಯ = ರತ್ನಖಚಿತವಾದ, ಆಭರಣಂ = ಆಭರಣಗಳುಳ್ಳ, ಹಸಿತಾನನೇಂದುಂ = ನಗುವಿನಿಂದ ಕೂಡಿದ ಚಂದ್ರನಂತಿರುವ ಮುಖವುಳ್ಳ, ಅರವಿಂದದೃಶಂ = ಕಮಲದಂತೆ ಕಣ್ಣುಗಳುಳ್ಳ, ಅರೀಂದ್ರಧಾರಿಣಂ = ಶ್ರೇಷ್ಠವಾದ ಚಕ್ರವನ್ನು ಹಿಡಿದಿರುವ, ತಂ = ಆ ನಾರಾಯಣನನ್ನು, (ಯೂಯಂ = ನೀವು) ಅನುಸ್ಮರತ = ಧ್ಯಾನಿಸಿರಿ.

ತಾ:— ಆ ನಾರಾಯಣನು ಹೊಸದಾಗಿ ಉದಯಿಸುತ್ತಿರುವ ಸಾವಿರಾರು ಸೂರ್ಯರಂತೆ ಕಾಂತಿಯುಳ್ಳವನು, ಸುವರ್ಣಮಯವಾದ ಕಸ್ತುರಿಯ ವಸ್ತ್ರವನ್ನು ಉಟ್ಟಿದ್ದಾನೆ, ರತ್ನಮಯವಾದ ಆಭರಣಗಳನ್ನು ಧರಿಸಿದ್ದಾನೆ, ಕಿರುನಗೆಯ ಚಂದ್ರನಂತಹ ಮುಖವುಳ್ಳವನಾಗಿದ್ದಾನೆ, ತಾವರೆಯಂತಹ ಕಣ್ಣುಗಳುಳ್ಳವನು. ಆಯುಧಶ್ರೇಷ್ಠವಾದ ಚಕ್ರವನ್ನು ಧರಿಸಿರುವವನೂ ಆದ ಅಂತಹ ಆ ಪರಮಾತ್ಮನನ್ನು ನೀವು ಧ್ಯಾನಿಸಿರಿ.

ವಿ:—ತರುಣಾಶ್ಚ ತೇ ಪ್ರಭಾಕರಾಶ್ಚ, ತೇಷಾಂ ಸಹಸ್ರಂ, ತಸ್ಯ ರುಗಿವ ರುಕ್ ಯಸ್ಯ ತಾದೃಶಂ. ಕನಕವತ್ ಅಂಬರಂ ಯಸ್ಯ ತಂ. ಮಣಿಮಯಾನಿ ಆಭರಣಾನಿ ಯಸ್ಯ ತಂ, ಆನನಂ ಇಂದುರಿವ ಹಸಿತಃ ಆನನೇಂದುಃ ಯಸ್ಯ ತಂ. ಅರವಿಂದೇ ಇವ ದೃಶೌ ಯಸ್ಯ ತಾದೃಶಂ. ಅರೀಣಾಂ ಇಂದ್ರಃ, ಅರೀಂದ್ರಂ ಧಾರಯತೀತಿ ಅರೀಂದ್ರಧಾರೀ ತಂ.

ಕ್ರಿ:—ಅನು + ಸ್ಮರತ, ಸ್ಮರತು - ಸ್ಮರತಾತ್ ಸ್ಮರತಾಂ ಸ್ಮರಂತು, ಸ್ಮರ-ಸ್ಮರತಾತ್ ಸ್ಮರತಂ ಸ್ಮರತ ಇತ್ಯಾದಿ. ಸ್ಮೃ-ಚಿಂತಾಯಾಂ ಲೋಟ್.

ಅವ :—ಶ್ರೀಹರಿಯ ಗುಣಗಳನ್ನು ವರ್ಣಿಸಲು ಸಾಧ್ಯವಿಲ್ಲ.

Rarest Archiver

**ಗಣಯೇದ್ರಮಾಸ್ಯ ನ ಗುಣಾನಖಿಲಾಂ-**
**ಶ್ಚತುರಾನನಶ್ಚತುರವಾಗಪಿ ನೋ ।**
**ನ ವಯಂ ಸಹಸ್ರವದನಾ ಅಪಿ ತಾ**
**ನಪರೋದಿತಾನತಿವದೇಮ ಪುನಃ ॥೧೯॥**

**ಅ :**— ರಮಾ, ಅಸ್ಯ ಅಖಿಲಾನ್ ಗುಣಾನ್ ನ ಗಣಯೇತ್, ಚತುರವಾಕ್ ಚತುರಾನನಃ ಅಪಿ ನೋ, ಸಹಸ್ರವದನಾಃ ವಯಂ ಅಪಿ ನ, ಪುನಃ ಅಪರೋದಿತಾನ್ ಅತಿವದೇಮ.

**ಅರ್ಥ :**— ರಮಾ = ಲಕ್ಷ್ಮೀದೇವಿಯು, ಅಸ್ಯ - ಈ ನಾರಾಯಣನ, ಅಖಿಲಾನ್ = ಎಲ್ಲ, ಗುಣಾನ್ = ಗುಣಗಳನ್ನು, ನ ಗಣಯೇತ್ = ಎಣಿಸಲಾರಳು, ಚತುರವಾಕ್ = ನಿಪುಣವಾದ ಮಾತುಳ್ಳ, ಚತುರಾನನಃ ಅಪಿ = ಬ್ರಹ್ಮದೇವರೂ ಕೂಡ, ನೋ (ಗಣಯೇತ್) = ಎಣಿಸಲಾರನು. ಸಹಸ್ರವದನಾಃ = ಸಾವಿರ ಮುಖಗಳುಳ್ಳ, ವಯಂ ಅಪಿ = ನಾವು ಕೂಡ, ನ (ಗಣಯೇಮ) = ಎಣಿಸಲಾರೆವು. ಪುನಃ = ಆದರೆ, ಅಪರೋದಿತಾನ್ = ಶುಕಾಚಾರ್ಯರೇ ಮೊದಲಾದ ಭಕ್ತರಿಂದ ಭಾಗವತಾದಿಗ್ರಂಥಗಳಲ್ಲಿ ಹೇಳಲ್ಪಟ್ಟ, ತಾನ್ = ಆ ಗುಣಗಳನ್ನು, ಅತಿವದೇಮ = ಹೆಚ್ಚಾಗಿ ಹೇಳಿಯೇವು.

**ತಾ :**—ಲಕ್ಷ್ಮೀದೇವಿಯೂ ಕೂಡ ಈ ಪರಮಾತ್ಮನ ಸಮಸ್ತ ಗುಣಗಳನ್ನೂ ಎಣಿಸಲಾರಳು. ಚಮತ್ಕಾರಪೂರ್ಣವಾದ ಮಾತನ್ನಾಡುವ ಬ್ರಹ್ಮದೇವರೂ ಕೂಡ ಹರಿಯ ಗುಣಗಳನ್ನು ಎಣಿಸಲಾರರು. ಸಹಸ್ರ ಮುಖಗಳುಳ್ಳ ನಾವೂ ಕೂಡ ಹರಿಗುಣಗಳನ್ನು, ಎಣಿಸಲಾರೆವು. ಆದರೂ ಶುಕಮುನಿಗಳೇ ಮೊದಲಾದವರು ವರ್ಣಿಸಿದ್ದಕ್ಕಿಂತ ಹೆಚ್ಚಾಗಿ ವರ್ಣಿಸಿ ಹೇಳಬಲ್ಲೆವು. ಬೇರೆಯವರಿಗಿಂತ ಹೆಚ್ಚಾಗಿ ಹೇಳಬಲ್ಲೆವಾದುದರಿಂದ ನೀವು ನನ್ನ ಮಾತನ್ನು ಆದರದಿಂದ ಕೇಳಿರಿ.

**ವಿ:**—ಚತ್ವಾರಿ ಆನನಾನಿ ಯಸ್ಯ ಸಃ, ಚತುರಾ ವಾಕ್ ಯಸ್ಯ ಸಃ. ಸಹಸ್ರಂ ವದನಾನಿ ಯೇಷಾಂ ತೇ. ಅಪರೈಃ ಉದಿತಾಃ ತಾನ್.

Rarest Archiver

ಕ್ರಿ :— ಗಣಯೇತ್ ಗಣಯೇತಾಂ ಗಣಯೇಯುಃ, ಗಣಯೇಃ ಗಣಯೇತಂ ಗಣಯೇತ, ಗಣಯೇಯವ್ ಗಣಯೇವ ಗಣಯೇಮ. ಗಣ-ಸಂಖ್ಯಾನೇ ವಿಧಿಲಿಙ್. ಅತಿ+ವದೇಮ, ವದೇತ್ ವದೇತಾಂ ವದೇಯುಃ, ವದೇಃ ವದೇತಂ ವದೇತ, ವದೇಯಂ, ವದೇವ, ವದೇಮ. ವದ-ವ್ಯಕ್ತಾಯಾಂ ವಾಚಿ, ವಿಧಿಲಿಙ್ ಅತಿಉಪ.

ಅವ:-ಮುಕ್ತಬ್ರಹ್ಮಾದಿಗಳಿಗೂ ಶ್ರೀಹರಿಯು ತನ್ನ ದರ್ಶನಮಾತ್ರ ದಿಂದ ಆನಂದವನ್ನೀಯುತ್ತಾನೆ.

**ವಿಧಯೋ ವಿಹಂಗಪತಯೋऽಗಣಿತಾ**
**ರಮಣೀಯುತಾಶ್ಚ ಫಣಿಪೇಂದ್ರಮುಖಾಃ ।**
**ಪರಯೋಗಭೂರಿಸುಖಭೋಗಮಿತಾ**
**ಅವಲೋಕ್ಯ ತಂ ದಧತಿ ಮೋದರಸಮ್ ॥೨೦॥**

ಅ:— ಪರಯೋಗಭೂರಿಸುಖಭೋಗಂ ಇತಾಃ ಅಗಣಿತಾಃ ವಿಧಯಃ ವಿಹಂಗಪತಯಃ ಫಣಿಪೇಂದ್ರಮುಖಾಶ್ಚ ರಮಣೀಯುತಾಃ ತಂ ಅವಲೋಕ್ಯ ಮೋದರಸಂ ದಧತಿ ।

ಅರ್ಥ :—ಪರಯೋಗ=ಪರಮಾತ್ಮನಲ್ಲಿ ಮನಸ್ಸನ್ನು ಇಡುವುದ ರಿಂದ (ಶ್ರೀಹರಿಯ ಧ್ಯಾನದಿಂದ) ಭೂರಿಸುಖಭೋಗಂ = ಅತಿಶಯವಾದ ಸುಖಾನುಭವವನ್ನು, ಇತಾಃ = ಹೊಂದಿದ, ಅಗಣಿತಾಃ=ಲೆಕ್ಕವಿಲ್ಲದ, ವಿಧಯಃ = ಬ್ರಹ್ಮದೇವರುಗಳು, ವಿಹಂಗಪತಯಃ = ಗರುಡರು, ಫಣಿಪೇಂದ್ರ-ಮುಖಾಶ್ಚ = ಶೇಷದೇವರು, ಇಂದ್ರಮೊದಲಾದದೇವತೆ ಗಳೂ, ರಮಣೀ-ಯುತಾಃ=ಪ್ರಿಯತಮೆಯರಿಂದ ಕೂಡಿದವರಾಗಿ, ತಂ ಅವಲೋಕ್ಯ=ಆ ಶ್ರೀಹರಿಯನ್ನು ನೋಡಿ, ಮೋದರಸಂ ದಧತಿ = ಅತಿಶಯವಾದ ಸ್ವರೂಪಾನಂದವನ್ನು ಹೊಂದುತ್ತಾರೆ.

ತಾ:- ವೈಕುಂಠದಲ್ಲಿ ಅಸಂಖ್ಯರಾದ ಮುಕ್ತಚತುರ್ಮುಖಬ್ರಹ್ಮರು, ಗರುಡದೇವರು, ಶೇಷದೇವರು, ಇಂದ್ರದೇವರು ಮೊದಲಾದ ಸಮಸ್ತ ದೇವತೆಗಳೂ ತಮ್ಮ ತಮ್ಮ ಸ್ವರೂಪಪತ್ನಿಯೊರಡನೆ ಮುಕ್ತಿಯಲ್ಲಿಯೂ

Rarest Archiver

ಶ್ರೀಹರಿಯನ್ನು ಧ್ಯಾನಿಸುತ್ತಾ, ಅವನನ್ನು ನಿರಂತರನೋಡುತ್ತಾ, ಅವನೊಡನೆಸೇರಿ ಇರುತ್ತಾ ಸಂಪೂರ್ಣವಾದ ಸ್ವರೂಪಸುಖವನ್ನು ಅನುಭವಿಸುತ್ತಾ ಇರುತ್ತಾರೆ. ಅವರವರ ಸ್ವರೂಪಕ್ಕೆ ಯೋಗ್ಯವಾದ, ಅವರ ಆನಂದಾತಿಶಯಕ್ಕೆ ಪಾರವೇ ಇಲ್ಲ. ಪರಯೋಗವೆಂದರೆ ಪರಮಾತ್ಮನನ್ನು ಹೊಂದುವುದು, ಪರಮಾತ್ಮನಿಂದ ಕೂಡಿಕೊಂಡಿರುವುದು ಎಂದು ಅರ್ಥ. ಇದರಿಂದ ಸಾಯುಜ್ಯಮೋಕ್ಷವನ್ನು ವರ್ಣಿಸಿದಂತಾಯಿತು. ಸ್ವರೂಪಾನಂದವನ್ನು ಅನುಭವಿಸುವವರೂ ಶ್ರೀಹರಿಯ ದರ್ಶನದಿಂದ ಆನಂದಪಡುತ್ತಾರೆಂದ ಮೇಲೆ ಆ ಪರಮಾತ್ಮನ ಗುಣಾತಿಶಯಗಳು ಎಷ್ಟೆಂದು ಹೇಳಲು ಸಾಧ್ಯವಿಲ್ಲ ಎಂದು ಅಭಿಪ್ರಾಯ.

**ವಿ:**—ವಿಹಂಗಾನಾಂ ಪತಯಃ, ನ ಗಣಿತಾಃ ಅಗಣಿತಾಃ, ರಮಣೀಭಿಃ ಯುತಾಃ, ಫಣಿನಃ ಪಾಂತೀತಿ ಪಣಿಪಾಃ, ಫಣಿಪಾಶ್ಚ ಇಂದ್ರಾಶ್ಚ ಪಣಿಪೇಂದ್ರಾಃ, ಫಣಿಪೇಂದ್ರಾಃ ಮುಖಾನಿ ಯೇಷಾಂ ತೇ ಫಣಿಪೇಂದ್ರಮುಖಾಃ, ತೈಃ ಸಹಿತಾಃ ಸಫಣಿಪೇಂದ್ರಮುಖಾಃ, ಪರೇ ಯೋಗಃ ಪರಯೋಗಃ, ಭೂರಿ ಚ ತತ್ ಸುಖಂ ಚ ಭೂರಿಸುಖಂ, ಪರಯೋಗೇನ ಭೂರಿಸುಖಂ ಪರಯೋಗಭೂರಿಸುಖಂ ತತ್, ಮೋದಸ್ಯ ರಸಃ ತಂ. |

**ಕ್ರಿ:**—ದಧತಿ, ದಧಾತಿ ಧತ್ತಃ ದಧತಿ ಇತ್ಯಾದಿ. ಡು(ಧಾ)ಞ್ ಧಾರಣಪೋಷಣಯೋಃ ಲಟ್.

**ಅವ:**— ಸಾರೂಪ್ಯಮೋಕ್ಷದ ವರ್ಣನೆ—

**ಸಚತುರ್ಭುಜಾ ವನಜಪತ್ರದೃಶೋ**
**ವರವೇಷಿಣೋsತ್ರ ಸಪಿಶಂಗಪಟಾಃ |**
**ಅರುಣಪ್ರಭಾಶ್ಚ ತರುಣಾಭ್ರರುಚೋ**
**ವಿಚರಂತಿ ನಾಥರುಚಯಃ ಪುರುಷಾಃ** ||೨೧||

**ಅ:**—ಅತ್ರ ಸಚತುರ್ಭುಜಾಃ ವನಜಪತ್ರದೃಶಃ ವರವೇಷಿಣಃ ಸಪಿಶಂಗಪಟಾಃ ಅರುಣಪ್ರಭಾಃ ಚ ತರುಣಾಭ್ರರುಚಃ ನಾಥರುಚಯಃ ಪುರುಷಾಃ ಚರಂತಿ.

Rarest Archiver

**ಅರ್ಥ** :—ಅತ್ರ = ಈ ವೈಕುಂಠಲೋಕದಲ್ಲಿ, ಸಚತುರ್ಭುಜಾಃ = ನಾಲ್ಕು ಬಾಹುಗಳಿಂದ ಸಹಿತರಾದ, ವನಜಪತ್ರದೃಶಃ = ಕಮಲದ ದಳದಂತೆ ಕಣ್ಣುಗಳುಳ್ಳ, ವರವೇಷಿಣಃ = ಉತ್ತಮವಾದ ಆಭರಣಗಳುಳ್ಳ, ಸಪಿಶಂಗಪಟಾಃ = ಪೀತಾಂಬರಧಾರಿಗಳಾದ, ಅರುಣಪ್ರಭಾಃ = ನಸುಗೆಂಪಾದ ಕಾಂತಿಯುಳ್ಳ, ಚ = ಮತ್ತು, ತರುಣಾಭ್ರರುಚಃ ಕಾರ್ಮೋಡದಂತಹ ಕಾಂತಿಯುಳ್ಳ, ನಾಥರುಚಯಃ = ತಮ್ಮ ಸ್ವಾಮಿಯಾದ ಶ್ರೀಹರಿಯಂತೆ ಕಾಂತಿಯುಕ್ತರಾದ, ಪುರುಷಾಃ = ಮುಕ್ತಜೀವರು, ವಿಚರಂತಿ = ಸಂಚರಿಸುತ್ತಾರೆ.

**ತಾ**:— ಈ ವೈಕುಂಠದಲ್ಲಿ ಮುಕ್ತಜೀವರು ಭಗವಂತನಂತೆ ಚತುರ್ಬಾಹುಗಳಾಗಿ, ಕಮಲದಳದಂತಹ ಕಣ್ಣುಗಳುಳ್ಳವರಾಗಿ, ಉತ್ತಮವಾದ ಆಭರಣಗಳನ್ನೂ ಪೀತಾಂಬರವನ್ನೂ ಧರಿಸಿ, ಉದಿಸುವ ಸೂರ್ಯನಂತಹ ಕಾಂತಿಯುಳ್ಳವರಾಗಿರುತ್ತಾರೆ. ಕೆಲವರು ನೀರಿನಿಂದ ತುಂಬಿದ ಹೊಸ ಮೋಡದಂತಹ ಮೈಬಣ್ಣವುಳ್ಳವರೂ ಆಗಿರುತ್ತಾರೆ; ಈ ರೀತಿಯಲ್ಲಿ ತಮ್ಮ ಸ್ವಾಮಿಯ ಕಾಂತಿಯಂತಹ ಕಾಂತಿಯುಳ್ಳವರಾಗಿ ಸಾರೂಪ್ಯಮೋಕ್ಷವನ್ನು ಪಡೆದು ಅಲ್ಲಿ ಸಂಚರಿಸುತ್ತಾರೆ. ಪರಮಾತ್ಮನೂ ನಾಲ್ಕುತೋಳುಗಳುಳ್ಳವನು, ಪುಂಡರೀಕಾಕ್ಷನು, ಸರ್ವಾಭರಣಭೂಷಿತನು, ಪೀತಾಂಬರಧಾರಿಯು, ಉದಿಸುವ ಸೂರ್ಯನಂತೆ ಅರುಣವರ್ಣನು; ನೀಲಮೇಘಶ್ಯಾಮಲನು ಮುಕ್ತರೂ ಇಂತಹ ಭಗವಂತನ ಸಾರೂಪ್ಯವನ್ನು ಕೆಲವಂಶದಲ್ಲಿ ಹೊಂದಿರುತ್ತಾರೆ. (ಸರ್ವಪ್ರಕಾರಗಳಿಂದಲೂ, ಭಗವಂತನಸಾಮ್ಯ ಅಥವಾ ಐಶ್ವರ್ಯವನ್ನು ಮುಕ್ತರೂ ಹೊಂದುವುದಿಲ್ಲ.)

**ವಿ**:—ಚತ್ವಾರಶ್ಚ ತೇ ಭುಜಾಶ್ಚ ಚತುರ್ಭುಜಾಃ ಚತುರ್ಭುಜೈಃ ಸಹಿತಾಃ, ವನೇ ಜಾಯತ ಇತಿ ವನಜಂ, ವನಜಸ್ಯ ಪತ್ರಂ, ವನಜಪತ್ರವತ್ ದೃಶೌ ಯೇಷಾಂ ತೇ, ವರಾಃ ವೇಷಾಃ ಏಷಾಂ ಸಂತೀತಿ, ಪಿಶಂಗಾಶ್ಚ ತೇ ಪಟಾಶ್ಚ, ಪಿಶಂಗಪಟೈಃ ಸಹ ವರ್ತಂತೇ ಇತಿ ಸಪಿಶಂಗಪಟಾಃ, ಅರುಣಾ (ಅರುಣಸ್ಯೇವ) ಪ್ರಭಾ ಯೇಷಾಂ ತೇ, ತರುಣಾನಿ ಚ ತಾನಿ ಅಭ್ರಾಣಿ ಚ ತರುಣಾಭ್ರಾಣಾಂ ರುಕ್ ಇವ ರುಕ್ ಯೇಷಾಂ ತೇ, ನಾಥಸ್ಯ ರುಚಿರಿವ ರುಚಿಃ ಯೇಷಾಂ ತೇ;

Rarest Archives

ಕ್ರಿ:— ವಿ + ಚರಂತಿ, ಚರತಿ ಚರತಃ ಚರಂತಿ ಚರ ಗತಿಭಕ್ಷಣ. ಯೋಃ ಲಟ್ ಪರಸ್ಮೈ;

**ಅವ :— ಸಾಮೀಪ್ಯ-ಸಾಲೋಕ್ಯ ಮೋಕ್ಷಗಳ ವರ್ಣನ—**

**ಭಗವತ್ಸಮೀಪಮುಪಯಾತವತಾಂ**
**ಪ್ರಮುದೋ ನ ಕೇವಲಮಲಬ್ಧತುಲಃ ।**
**ಅಪಿ ತಸ್ಯ ಲೋಕಮತಿಲೋಕಗುಣಂ**
**ಭಜತಾಂ ಸುದುರ್ಲಭಮಭೂರಿಶುಭೈಃ ॥೨೨॥**

ಅ :— ಕೇವಲಂ ಭಗವತ್ಸಮೀಪಂ ಉಪಯಾತವತಾಂ ಪ್ರಮುದಃ ಅಲಬ್ಧತುಲಃ ನ; ಅಭೂರಿಶುಭೈಃ ಸುದುರ್ಲಭಂ ಅತಿಲೋಕಗುಣಂ ತಸ್ಯ ಲೋಕಂ ಭಜತಾಂ ಅಪಿ ಅಲಬ್ಧತುಲಃ ।

**ಅರ್ಥ:**—ಕೇವಲಂ = ಮುಖ್ಯವಾಗಿ, ಭಗವತ್ಸಮೀಪಂ = ಶ್ರೀಹರಿಯ ಸಮೀಪವನ್ನು, ಉಪಯಾತವತಾಂ = ಹೊಂದಿದವರ, ಪ್ರಮುದಃ = ಸಂತೋಷವು, ಅಲಬ್ಧತುಲಃ ನ = ಹೊಂದಲ್ಪಡದ ಸಾಮ್ಯವುಳ್ಳದ್ದು ಅಲ್ಲ; ಅಭೂರಿಶುಭೈಃ = ಹೆಚ್ಚಿನ ಪುಣ್ಯವಿಲ್ಲದವರಿಂದ, ಸುದುರ್ಲಭಂ = ಅತ್ಯಂತವಾಗಿಯೂ ಹೊಂದಲು ಅಶಕ್ಯವಾದ, ಅತಿಲೋಕಗುಣಂ = ಬ್ರಹ್ಮಾದಿಸಕಲಲೋಕಗಳ ಗುಣಗಳನ್ನು ಮೀರಿದ, ತಸ್ಯ = ಆ ನಾರಾಯಣನ, ಲೋಕಂ = ವೈಕುಂಠಲೋಕವನ್ನು, ಭಜತಾಂ (ಪ್ರಮುದಃ) ಅಪಿ=ಸೇವಿಸುವವರ ಆನಂದವೂ, ಅಲಬ್ಧತುಲಃ ಸಾಮ್ಯವಿಲ್ಲದ್ದು.

**ತಾ:**—ಭಗವಂತನ ಸಮೀಪದಲ್ಲಿರುವುದು ಸಾಮೀಪ್ಯಮೋಕ್ಷವು. ಇದನ್ನು ಪಡೆದವರ ಆನಂದವು ಮಾತ್ರವೇ ಅಸದೃಶವೆಂದಲ್ಲ. ಸತ್ಯ ಲೋಕವೇ ಮೊದಲಾದ ಎಲ್ಲಾ ಲೋಕಗಳ ಗುಣಗಳನ್ನೂ ಮೀರಿದ, ಹೆಚ್ಚಿನ ಪುಣ್ಯವಿಲ್ಲದವರಿಗೆ ದುರ್ಲಭವಾದ ಆ ವೈಕುಂಠಲೋಕವನ್ನು ಹೊಂದಿದ ಸಾಲೋಕ್ಯಮುಕ್ತರ ಆನಂದವೂ ಅಸದೃಶವೇ ಆಗಿರುತ್ತದೆ. (ಸಾರೂಪ್ಯ = ದೇವರ ಸಮಾನರೂಪವನ್ನು ಹೊಂದುವುದು. ಸಾಮೀಪ್ಯ = ದೇವರ ಸಮೀಪದಲ್ಲಿ ನಿತ್ಯದಲ್ಲಿಯೂ ಇರುವುದು, ಸಾಲೋಕ್ಯ =

Rarest Archiver

ದೇವರ ವೈಕುಂಠಲೋಕದಲ್ಲಿರುವುದು. ಈ ಮೂರು ಮೋಕ್ಷಗಳಲ್ಲಿಯೂ ಅವರವರ ಯೋಗ್ಯತಾನುಸಾರ ಅನುಭವಿಸುವ ಆನಂದವು ಸಂಪೂರ್ಣವೇ ಆಗಿರುತ್ತದೆ. ದೊಡ್ಡಭಾಂಡದಲ್ಲಿ ತುಂಬಿದ ನೀರೂ ಪೂರ್ಣವೇ, ಚಿಕ್ಕ ತಂಬಿಗೆಯಲ್ಲಿ ತುಂಬಿದ ನೀರೂ ಪೂರ್ಣವೇ).

ವಿ:—ಭಗವತಃ ಸಮೀಪಂ ಭಗವತ್ಸಮೀಪಂ ತತ್, ನ ಲಬ್ಧಾ ಅಲಬ್ಧಾ, ಅಲಬ್ಧಾ ತುಲಾ ಯಸ್ಯ ಸಃ, ಲೋಕಾನಾಂ ಗುಣಾಃ, ಲೋಕಗುಣಾನ್ ಅತಿಕ್ರಾಂತಃ ತಂ, ಸು ಅತಿಶಯೇನ ದುಃಖೇನ ಲಬ್ಧುಂ ಶಕ್ಯಂ ಸುದುರ್ಲಭಂ, ಭೂರಿ ಶುಭಂ ಯೇಷಾಂ, ಭೂರಿಶುಭಾಃ ನ ಭವಂತೀತಿ ಅಭೂರಿಶುಭಾಃ ತೈಃ |

ಅವ :—ಮೋಕ್ಷದಲ್ಲಿ ಯಾವ ದುಃಖವೂ ಇಲ್ಲ.

ನ ಭವಂತಿ ಯತ್ರ ಮೃತಿಜನ್ಮಜರಾಃ
ತ್ರಿವಿಧಂ ಭಯಂ ಕಿಮುತ ದುಃಖಗಣಃ |
ಅಪರಂ ಚ ಕಿಂಚಿದಶುಭಂ ನ ಭವೇ-
ನ್ನ ಗುಣಾದಿ ತತ್ಪ್ರಭವಮೂಲಮಪಿ ||೨೩||

ಅ:—ಯತ್ರ ಮೃತಿಜನ್ಮಜರಾಃ ನ ಭವಂತಿ. ತ್ರಿವಿಧಂ ಭಯಂ ನ (ಭವತಿ) ದುಃಖಗಣಃ ನ(ಭವತಿಇತಿ) ಕಿಮುತ? ಅಪರಂ ಕಿಂಚಿತ್ ಅಶುಭಂ ಚ ನ ಭವೇತ್. ತತ್ಪ್ರಭವಮೂಲಂ ಗುಣಾದಿ ಅಪಿ ನ (ಭವತಿ).

ಅರ್ಥ :—ಯತ್ರ = ಯಾವ ವೈಕುಂಠಲೋಕದಲ್ಲಿ, ಮೃತಿ ಜನ್ಮ ಜರಾಃ = ಮರಣ, ಹುಟ್ಟು, ಮುಪ್ಪುಗಳು, ನ ಭವಂತಿ = ಇರುವುದಿಲ್ಲ. ತ್ರಿವಿಧಂ ಭಯಂ = ಆಧ್ಯಾತ್ಮಿಕ, ಆದಿಭೌತಿಕ, ಆಧಿದೈವಿಕವೆಂಬ ಮೂರು ವಿಧವಾದ, ಭಯಂ ನ(ಭವತಿ) = ಹೆದರಿಕೆಯು ಇರುವುದಿಲ್ಲ. ದುಃಖಗಣಃ = ಬೇರೆ ವಿಧವಾದ ದುಃಖಗಳ ಸಮೂಹವು, ನ (ಭವತಿ ಇತಿ) ಕಿಮುತ = ಇರುವುದಿಲ್ಲವೆಂದು ಏನು ಹೇಳತಕ್ಕದ್ದು? ಅಪರಂ = ಬೇರೆಯಾದ, ಕಿಂಚಿತ್ = ಯಾವುದಾದರೂ, ಅಶುಭಂ ಚ = ಅಮಂಗಳವೂ, ನ ಭವೇತ್ ಇರುವುದೇ ಇಲ್ಲ. ತತ್ಪ್ರಭವ = ಆ ಮರಣಾದಿಗಳ ಉತ್ಪತ್ತಿಗೆ, ಮೂಲಂ

Rarest Archiver

=ಕಾರಣವಾದ, ಗುಣಾದಿ ಅಪಿ=ಸತ್ತ್ವ, ರಜಸ್ಸು, ತಮಸ್ಸು ಎಂಬ ಗುಣಗಳೂ, ದುರದೃಷ್ಟವಿಶೇಷ ಮಾತ್ಸರ್ಯ ಮುಂತಾದುದೂ ಕೂಡ, ನ (ಭವತಿ) = ಇರುವುದಿಲ್ಲ.

**ತಾ:**— ವೈಕುಂಠದಲ್ಲಿರುವವರಿಗೆ, ಸಾವು ಹುಟ್ಟು ಮುಪ್ಪುಗಳು ಇರುವುದಿಲ್ಲ. ಆಧ್ಯಾತ್ಮಿಕ, ಆಧಿದೈವಿಕ ಆಧಿಭೌತಿಕವೆಂಬ ತಾಪತ್ರಯದ ಭಯವೂ ಇಲ್ಲ. ಉಳಿದ ಯಾವ ದುಃಖಗಳೂ ಇಲ್ಲವೆಂದು ಹೇಳತಕ್ಕದ್ದೇನಿದೆ? ದುಃಖಾದಿಗಳಿಗೆ ಕಾರಣವಾದ ಮಾತ್ಸರ್ಯಾದಿ ದೋಷಗಳೂ, ಎಲ್ಲಾ ದುಃಖಗಳಿಗೂ ಮೂಲಕಾರಣವಾದ ಸತ್ತ್ವಾದಿ ಗುಣಗಳೂ, ದುರದೃಷ್ಟವಿಶೇಷಗಳೂ ಅಲ್ಲಿಲ್ಲ. ನಿರ್ದೋಷವಾದ ಆ ಲೋಕದಲ್ಲಿರುವ ನಿರ್ದೋಷರಾದ ಮುಕ್ತರ ಆನಂದಕ್ಕೆ ಸರಿಯಾದ ಬೇರೆ ಆನಂದವೇ ಇಲ್ಲ.

**ವಿ:**— ಮೃತಿಶ್ಚ ಜನ್ಮ ಚ ಜರಾ ಚ ಮೃತಿಜನ್ಮಜರಾಃ, ತಿಸ್ರಃ ವಿಧಾಃ ಯಸ್ಯ ತತ್, ದುಃಖಾನಾಂ ಗಣಃ ; ಗುಣಾಃ ಆದಯಃ ಯಸ್ಯ ತತ್, ತಸ್ಯ ಪ್ರಭವಃ ತತ್ಪ್ರಭವಃ ತಸ್ಯ ಮೂಲಂ.

**ಕ್ರಿ :**—ಭವತಿ, ಭೂಸತ್ತಾಯಾಂ ಲಟ್, ಭವೇತ್-ವಿಧಿಲಿಙ್.

**ಅವ:**– ಮುಕ್ತಿಯಲ್ಲಿ ತಾರತಮ್ಯದಿಂದ ಆನಂದಾನುಭವವಿದ್ದರೂ ಪರಸ್ಪರದ್ವೇಷಾಸೂಯೆಗಳಿಲ್ಲ.

**ಅನುಭೂಯತೇ ಸುಖಮನಂತಸಖ್ಯೈಃ**
**ಸಕಲೈರಲಂಮತಿಪದಂ ಸತತಂ ।**
**ಅಪಿ ತಾರತಮ್ಯಸಹಿತೈಃ ಸ್ವಗುರು–**
**ಪ್ರವಣೈಃ ಪರಸ್ಪರಮುರುಪ್ರಣಯೈಃ** ॥೨೪॥

**ಅ:**—ತಾರತಮ್ಯಸಹಿತೈಃ ಅಪಿ ಪರಸ್ಪರಂ ಉರುಪ್ರಣಯೈಃ ಸ್ವಗುರುಪ್ರವಣೈಃ, ಅನಂತಸಖ್ಯೈಃ, ಸಕಲೈಃ, ಸತತಂ, ಅಲಂಮತಿಪದಂ ಸುಖಂ ಅನುಭೂಯತೇ ।

**ಅರ್ಥ :**— ತಾರತಮ್ಯಸಹಿತೈಃ ಅಪಿ = ತರತಮಭಾವದಿಂದ ಕೂಡಿದ್ದರೂ, ಪರಸ್ಪರಂ=ಅನ್ಯೋನ್ಯವಾಗಿ, ಉರುಪ್ರಣಯೈಃ=ಹೆಚ್ಚು

Rarest Archiver

ಸ್ನೇಹವುಳ್ಳ, ಸ್ವಗುರು = ತಮಗಿಂತ ದೊಡ್ಡವರಲ್ಲಿ, ಪ್ರವಣೈಃ = ಭಕ್ತಿಯುಳ್ಳ, ಅನಂತಸಖೈಃ = ಶ್ರೀಮನ್ನಾರಾಯಣನ ಮಿತ್ರರಾದ ಸಕಲೈಃ = ಎಲ್ಲ ಮುಕ್ತರಿಂದಲೂ, ಅಲಂಮತಿಪದಂ = ಸಾಕು (ಪೂರ್ಣ) ಎಂಬ ಬುದ್ಧಿಗೆ ವಿಷಯವಾದ, ಸುಖಂ = ಸ್ವರೂಪಾನಂದವು, ಅನುಭೂಯತೇ = ಅನುಭವಿಸಲ್ಪಡುತ್ತದೆ.

ತಾ:—ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯಗಳೆಂಬ ನಾಲ್ಕುವಿಧವಾದ ಮೋಕ್ಷವನ್ನು ಪಡೆದ ಮುಕ್ತರು ಶ್ರೀಹರಿಗೆ ಮಿತ್ರರಾಗಿ ತಮ್ಮ ಗುರುಗಳಲ್ಲಿ ಭಕ್ತಿನಮ್ರರಾಗಿ ತಾರತಮ್ಯದಿಂದ ತಮ್ಮ ಯೋಗ್ಯತಾನು ಸಾರವಾಗಿ ಆನಂದವನ್ನು ಅನುಭವಿಸುತ್ತಿದ್ದರೂ ಪರಸ್ಪರ ಅತ್ಯಂತ ಸ್ನೇಹವುಳ್ಳವರಾಗಿ ನಿತ್ಯದಲ್ಲಿಯೂ ತಮತಮಗೆ ಕ್ಲೃಪ್ತವಾದ ತೃಪ್ತಿಕರ ವಾದ ಆನಂದವನ್ನು ಅನುಭವಿಸುತ್ತಾ ಇರುತ್ತಾರೆ.

ವಿ:—ಅನಂತಸ್ಯ ಸಖಾಯಃ ಅನಂತಸಖಾಃ, ಅನಂತಸಖಿನ್ + ಟಚ್ 'ರಾಜಾಹಃಸಖಿಭ್ಯಃಟಚ್' ಎಂಬ ಸೂತ್ರದಿಂದ ಟಚ್. ಅಲಂ ಇತಿ ಮತೇಃ ಪದಂ, ತರತಮ ಇತ್ಯಸ್ಯ ಭಾವಃ ತಾರತಮ್ಯಂ, ತೇನ ಸಹಿತಾಃ ತಾರತಮ್ಯಸಹಿತಾಃ ತೈಃ, ಸ್ವೇಷಾಂ ಗುರವಃ ಸ್ವಗುರವಃ, ಸ್ವಗುರುಷು ಪ್ರವಣಾಃ ಸ್ವಗುರುಪ್ರವಣಾಃ ತೈಃ, ಉರುಃ ಪ್ರಣಯಃ ಯೇಷಾಂ ತೇ ಉರುಪ್ರಣಯಾಃ ತೈಃ ;

ಕ್ರಿ:—ಅನು + ಭೂಯತೇ-ಭೂಯೇತೇ-ಭೂಯಂತೇ ಇತ್ಯಾದಿ ಭೂ ಸತ್ತಾಯಾಂ ಅನು ಉಪ. ಸಕ. ಲಟ್.

ಅವ:— ವೈಕುಂಠದಲ್ಲಿ ಮುಕ್ತಪುರುಷರು ಏನು ಮಾಡುತ್ತಾರೆ?

**ಅತಿಸುಂದರಾಃ ಸುರಭಯಃ ಪುರುಷಾಃ**
**ಹರಿಚಂದನೇನ ನವಚಂದ್ರರುಚಾ ।**
**ಚಲಚಾರುಚಾಮರಧರಾನುಚರಾಃ**
**ವಿಚರಂತಿ ನಿತ್ಯತರುಣಾ ಇಹ ತೇ ॥ ೨೫॥**

ಅ:—ಅತಿಸುಂದರಾಃ ನವಚಂದ್ರರುಚಾ ಹರಿಚಂದನೇನ ಸುರಭಯಃ

Rarest Archiver

ಚಲಚಾರುಚಾಮರಧರಾನುಚರಾಃ ನಿತ್ಯತರುಣಾಃ ತೇ ಪುರುಷಾಃ ಇಹ ವಿಚರಂತಿ |

**ಅರ್ಥ:**— ಅತಿಸುಂದರಾಃ = ಅತ್ಯಂತಸುರೂಪರಾದ, ನವಚಂದ್ರ = ಹೊಸದಾದ (ಬಾಲ)ಚಂದ್ರನಂತಹ, ರುಚಾ = ಕಾಂತಿಯುಳ್ಳ. ಹರಿಚಂದನೇನ = ಅಗರುಗಂಧದಿಂದ, ಸುರಭಯಃ = ಪರಿಮಳಭರಿತರಾದ, ಚಲಚಾರು = ಚಲಿಸುವ ಮನೋಹರವಾದ, ಚಾಮರ = ಚಾಮರವನ್ನು, ಧರ = ಹಿಡಿದಿರುವ, ಅನುಚರಾಃ = ಸೇವಕರುಳ್ಳ, ನಿತ್ಯತರುಣಾಃ = ನಿತ್ಯದಲ್ಲಿಯೂ ಯೌವನವುಳ್ಳ, ತೇ ಪುರುಷಾಃ = ಆಮುಕ್ತಜೀವರು, ವಿಚರಂತಿ = ಸಂಚರಿಸುತ್ತಾರೆ.

**ತಾ:**—ಮುಕ್ತಪುರುಷರು ಅತ್ಯಂತಸುಂದರರು, ಉದಯಿಸುತ್ತಿರುವ ಬಾಲಚಂದ್ರನಂತಹ ಕಾಂತಿಯುಳ್ಳ ಅಗರುಗಂಧದಿಂದ ಪರಿಮಳಭರಿತರಾಗಿರುತ್ತಾರೆ. ನಿತ್ಯದಲ್ಲಿಯೂ ಯೌವ್ವನಪೂರ್ಣರಾದ ಅವರು ತಮ್ಮ ತಮ್ಮ ಸೇವಕರು ಚಾಮರವನ್ನು ಬೀಸುತ್ತಿರುವಾಗ ಈ ಮುಕ್ತವೈಕುಂಠಲೋಕದಲ್ಲಿ ಸಂಚರಿಸುತ್ತಾ ಇರುತ್ತಾರೆ. ನಿತ್ಯತರುಣರು ಎಂದು ಹೇಳಿದ್ದರಿಂದ ಅಲ್ಲಿ ಮುಪ್ಪು ರೋಗ ಮುಂತಾದ ದೋಷಗಳಿಲ್ಲವೆಂದೂ, ಮುಕ್ತರ ಇಂತಹ ದಿವ್ಯಾಕಾರವನ್ನು ವರ್ಣಿಸಿದ್ದರಿಂದ, ನಿರಾಕಾರನಾದ ಪರಮಾತ್ಮನಲ್ಲಿ ಐಕ್ಯಹೊಂದುವುದು ಮೋಕ್ಷವಲ್ಲವೆಂದೂ ಸೂಚಿತವಾಯಿತು. ಜೀವರು ತಮ್ಮ ಸ್ವರೂಪಾನಂದವನ್ನು ಅನುಭವಿಸುವುದೇ ಮೋಕ್ಷವೆಂದೂ ಸೂಚಿತವಾಯಿತು.

**ವಿ:**—ನವಶ್ಚಾಸೌ ಚಂದ್ರಶ್ಚ ನವಚಂದ್ರಃ, ನವಚಂದ್ರಸ್ಯ ರುಗಿವ ರುಕ್ ಯಸ್ಯ ತತ್ ತೇನ, ಚಾರೂಣಿ ಚ ತಾನಿ ಚಾಮರಾಣಿ ಚ, ಚಲಾನಿ ಚ ತಾನಿ ಚಾರುಚಾಮರಾಣಿ ಚ ಚಲಚಾರುಚಾಮರಾಣಿ, ಧರಂತೀತಿ ಧರಾಃ, ಚಲಚಾರುಚಾಮರಾಣಾಂ ಧರಾಃ, ಚಲಚಾರುಚಾಮರಧರಾಃ, ತೇ ಅನುಚರಾಃ ಯೇಷಾಂ ತೇ.

**ಕ್ರಿ:** ವಿ + ಚರಂತಿ, ಚರತಿ ಚರತಃ ಚರಂತಿ, ಚರ ಗತಿಭಕ್ಷಣಯೋಃ ಲಟ್ |

Rarest Archiver

ಅವ :—ಮೋಕ್ಷದಲ್ಲಿ ಏನೇನು ಸುಖವಿದೆ?

**ಸವಿಲಾಸಲಾಸ್ಯಪರಿತುಷ್ಟದೃಶೋ**
**ಮೃದುಗೀತವಾದ್ಯಮುದಿತಶ್ರವಣಾಃ ।**
**ಅನುರಂಜಯಂತಿ ನವಕಂಜದೃಶೋ**
**ರಮಣಾ ಅಮೀ ಸ್ವರಮಣೀಸ್ತರುಣೀಃ ॥೨೬॥**

**ಅ:** ಸವಿಲಾಸ್ಯಪರಿತುಷ್ಟದೃಶಃ ಮೃದುಗೀತವಾದ್ಯಮುದಿತ ಶ್ರವಣಾಃ ಅಮೀ ರಮಣಾಃ ನವಕಂಜದೃಶಃ ತರುಣೀಃ ಸ್ವರಮಣೀಃ ಅನುರಂಜಯಂತಿ ।

**ಅರ್ಥ** :—ಸವಿಲಾಸ = ಹಾವಭಾವದಿಂದ ಸಹಿತವಾದ, ಲಾಸ್ಯ = ಕುಣಿತದಿಂದ, ಪರಿತುಷ್ಟ = ಸಂತೋಷಪಟ್ಟಿರುವ, ದೃಶಃ = ಕಣ್ಣುಗಳುಳ್ಳ, ಮೃದು = ಇಂಪಾದ, ಗೀತ = ಹಾಡು, ವಾದ್ಯ = ವಾದ್ಯ ಇವುಗಳಿಂದ, ಮುದಿತಶ್ರವಣಾಃ = ಸಂತೋಷಗೊಂಡ ಕಿವಿಗಳುಳ್ಳ, ಅಮೀ = ಈ, ರಮಣಾಃ = ಗಂಡಂದಿರು, ನವ = ಹೊಸದಾದ, ಕಂಜ = ತಾವರೆಯಂತಹ, ದೃಶಃ = ಕಣ್ಣುಗಳುಳ್ಳ, ತರುಣೀಃ = ಯುವತಿಯರಾದ, ಸ್ವರಮಣೀಃ = ತಮ್ಮ ಹೆಂಡತಿಯರನ್ನು, ಅನುರಂಜಯಂತಿ = ತಮ್ಮಲ್ಲಿ ಅನುರಾಗ ಉಳ್ಳವರನ್ನಾಗಿ ಮಾಡುತ್ತಾರೆ.

**ತಾ:**—ಆ ವೈಕುಂಠದಲ್ಲಿ ಮುಕ್ತತರುಣರು ತಮ್ಮ ಪ್ರಾಣಕಾಂತೆಯರ ವಿಲಾಸದಿಂದ ಕೂಡಿದ ಕೋಮಲನರ್ತನಗಳನ್ನು ಅರಳಿದ ಕಣ್ಣುಗಳಿಂದ ಕಂಡು ಬಹಳ ಸಂತೋಷಪಡುತ್ತಾರೆ. ಕಿವಿಗೆ ಇಂಪಾದಗಾನವನ್ನೂ ಮದ್ದಲೆಮೊದಲಾದ ವಾದ್ಯಗಳ ಧ್ವನಿಯನ್ನೂ ಕೇಳಿ ಆನಂದಪಡುತ್ತಾರೆ.

**ವಿ:**—ವಿಲಾಸೇನ ಸಹಿತಂ ಸವಿಲಾಸಂ, ಸವಿಲಾಸಂ ಚ ತತ್ ಲಾಸ್ಯಂ ಚ, ಸವಿಲಾಸಲಾಸ್ಯೇನ ಪರಿತುಷ್ಟಾಃ ದೃಶಃ ಯೇಷಾಂ ತೇ ಸವಿಲಾಸಲಾಸ್ಯಪರಿತುಷ್ಟದೃಶಃ; ಮೃದು ಚ ತತ್ ಗೀತಂ ಚ, ಮೃದು ಗೀತಂ ಚ ವಾದ್ಯಂ ಚ, ಮೃದುಗೀತವಾದ್ಯಾಭ್ಯಾಂ ಮುದಿತಾನಿ ಶ್ರವಣಾನಿ ಯೇಷಾಂ ತೇ, ನವಂ ಚ ತತ್ ಕಂಜಂ ಚ ನವಕಂಜಂ,

Rarest Archiver

ನವಕಂಜವತ್ ದೃಶಃ ಯಾಸಾಂ ತಾಃ ನವಕಂಜದೃಶಃ (ಪ್ರ.) ತಾಃ (ದ್ವಿ: ಅಂತಹವರನ್ನು) ಸ್ವೇಷಾಂ ರಮಣ್ಯಃ, ತಾಃ

ಕ್ರಿ:—ಅನು + ರಂಜಯಂತಿ, ರಂಜಯತಿ ರಂಜಯತಃ ರಂಜಯಂತಿ –ಇತ್ಯಾದಿ ಅನು ಉಪ. ರಂಜ ರಾಗೇ ಣಿಜಂತಾತ್ ಲಟ್.

ಅವ:— ಮುಕ್ತಪುರುಷರನ್ನು ವರ್ಣಿಸಿ ಮುಕ್ತಸ್ತ್ರೀಯರನ್ನು ವರ್ಣಿಸುತ್ತಾರೆ–

**ಪರಿಣಾಯಕಾನುಪವನಾಭಿಮುಖಾ-**
**ನನುನಿಸ್ಸರಂತಿ ಹರಿಣೀನಯನಾಃ ।**
**ವಿಮಲಾದ್ವಿಮಾನವಲಯಾಚ್ಛನಕೈಃ**
**ಶಶಿಮಂಡಲಾದಿವ ರುಚೋ ರುಚಿರಾಃ ॥೨೭॥**

ಅ :—ಹರಿಣೀನಯನಾಃ ಉಪವನಾಭಿಮುಖಾನ್ ಪರಿಣಾಯಕಾನ್ ಅನು ವಿಮಲಾತ್ ವಿಮಾನವಲಯಾತ್ ಶಶಿಮಂಡಲಾತ್ ರುಚಿರಾಃ ರುಚಃ ಇವ ಶನಕೈಃ ನಿಸ್ಸರಂತಿ ।

ಅರ್ಥ :— ಹರಿಣೀನಯನಾಃ = ಹೆಣ್ಣುಜಿಂಕೆಯ ಕಣ್ಣುಗಳಂತೆ ಕಣ್ಣುಗಳುಳ್ಳ ಆ ಮುಕ್ತತರುಣಿಯರು, ಉಪವನಾಭಿಮುಖಾನ್= ಉದ್ಯಾನವನಕ್ಕೆ ಹೋಗಲು ಉದ್ಯುಕ್ತರಾದ, ಪರಿಣಾಯಕಾನ್ = ತಮ್ಮ ಗಂಡಂದಿರನ್ನು, ಅನು = ಅನುಸರಿಸಿ, ವಿಮಲಾತ್ ವಿಮಾನವಲಯಾತ್ = ನಿರ್ಮಲವಾದ ವಿಮಾನಗಳ ಸಮೂಹದ ದೆಸೆಯಿಂದ, ಶಶಿಮಂಡಲಾತ್= ಚಂದ್ರಮಂಡಲದ ದೆಸೆಯಿಂದ, ರುಚಿರಾಃ ರುಚಃ ಇವ= ಮನೋಹರವಾದ ಕಾಂತಿಗಳಂತೆ, ಶನಕೈಃ = ಮೆಲ್ಲನೆ, ನಿಸ್ಸರಂತಿ = ಹೊರಡುತ್ತಾರೆ.

ತಾ:—ಚಂದ್ರಮಂಡಲದಿಂದ ಮನೋಹರವಾದ ಕಾಂತಿಗಳು ಹೊರಹೊಮ್ಮುವಂತೆ, ಹೆಣ್ಣುಜಿಂಕೆಯ ಕಣ್ಣಿನಂತಹ ಕಣ್ಣುಗಳುಳ್ಳ ಮುಕ್ತ ಸುಂದರಿಯರು ತಮ್ಮ ಪತಿಗಳು ಉಪವನಕ್ಕೆ ಹೊರಡಲು ಉದ್ಯುಕ್ತರಾದಾಗ ನಿರ್ಮಲವಾದ ವಿಮಾನಗಳಿಂದ ಇಳಿದು ಮೆಲ್ಲನೆ ನಡೆಯುತ್ತಾ ಅವರನ್ನು ಹಿಂಬಾಲಿಸುತ್ತಾರೆ. ಮೆಲ್ಲನೆ ಹೊರಡುತ್ತಾರೆ ಎಂದು ಹೇಳಿದುದರಿಂದ

Rarest Archiver

ಮಂದಗಮನೆಯರೆಂದಂತೆ ಆಯಿತು. ವಿಮಾನಗಳು ಚಂದ್ರನಂತಿವೆ ಯೆಂದೂ ತರುಣಿಯರು ಚಂದ್ರನ ಕಾಂತಿಯಂತೆ ಇದ್ದಾರೆಂದೂ ತಿಳಿಸಿ ದಂತಾಯಿತು.

ವಿ:—ಉಪವನಂ (ಪ್ರತಿ) ಅಭಿಮುಖಾಃ ಉಪವನಾಭಿಮುಖಾಃ ತಾನ್, ಹರಿಣೀನಾಂ ನಯನವತ್ ನಯನೇ ಯಾಸಾಂ ತಾಃ ಹರಿಣೀ-ನಯನಾಃ, ವಿಮಾನಾನಾಂ ವಲಯಃ ವಿಮಾನವಲಯಃ ತಸ್ಮಾತ್ ಶಶಿನಃ ಮಂಡಲಂ ಶಶಿಮಂಡಲಂ ತಸ್ಮಾತ್ ;

ಕ್ರಿ :—ಅನು+ನಿಸ್+ಸರಂತಿ, ಸರತಿ ಸರತಃ ಸರಂತಿ ಇತ್ಯಾದಿ ಸೃ ಗತೌ ಲಟ್,

ಅವ:—ಮುಕ್ತತರುಣರನ್ನು ಹಿಂಬಾಲಿಸುವ ಮುಕ್ತತರುಣಿಯರನ್ನು ವರ್ಣಿಸುತ್ತಾರೆ—

**ಅರುಣಾಶ್ಮವರ್ಣತನವಸ್ತ್ವನವಃ**
**ಶುಭಹಾರಸನ್ನಿಭರುಚೋऽತ್ರ ಪರಾಃ ।**
**ಹರಿ ನೀಲನೀಲರುಚೋऽತ್ರಪರಾಃ**
**ಪ್ರಕಟೀಭವಂತಿ ವಿವಿಧಾಭರಣಾಃ ॥೨೮॥**

ಅ :—ಅತ್ರ ಅರುಣಾಶ್ಮವರ್ಣತನವಃ, ಪರಾಃ ಶುಭಹಾರ-ಸನ್ನಿಭರುಚಃ ಅಪರಾಃ ಹರಿನೀಲನೀಲರುಚಃ ಅಪಿ ವಿವಿಧಾಭರಣಾಃ ತನವಃ ಪ್ರಕಟೀಭವಂತಿ.

ಅರ್ಥ :—ಅತ್ರ = ಈ ವೈಕುಂಠಲೋಕದಲ್ಲಿ, (ಕತಿಚನ ಮುಕ್ತ ತರುಣ್ಯಃ = ಕೆಲವು ಮಂದಿ ಮುಕ್ತತರುಣಿಯರು) ಅರುಣಾಶ್ಮವರ್ಣ = ಪದ್ಮರಾಗಮಣಿಯ ಬಣ್ಣವುಳ್ಳ, ತನವಃ = ಶರೀರವುಳ್ಳವರು, ಪರಾಃ = ಬೇರೆ ಕೆಲವರು, ಶುಭಹಾರ = ಮನೋಹರವಾದ ಮುತ್ತಿನಸರಕ್ಕೆ, ಸನ್ನಿಭ = ಸದೃಶವಾದ, ರುಚಃ = ಕಾಂತಿಯುಳ್ಳವರು, ಅಪರಾಃ = ಮತ್ತೆ ಕೆಲವರು, ಹರಿನೀಲ = ಇಂದ್ರನೀಲಮಣಿಯಂತೆ, ನೀಲರುಚಃ = ಕಪ್ಪಾದ ಕಾಂತಿ ಯುಳ್ಳವರು, ಅಪಿ = ಮತ್ತು, (ಎಲ್ಲರೂ) ವಿವಿಧಾಭರಣಾಃ = ನಾನಾ

Rarest Archive

ಬಗೆಯ ಒಡವೆಗಳುಳ್ಳವರು; ತನವಃ = ಇಂತಹ ಕೃಶಾಂಗಿಯರು, ಪ್ರಕಟೀಭವಂತಿ = ವಿಮಾನದಿಂದ ಪ್ರಕಟವಾಗುತ್ತಾರೆ ;

ತಾ :—ಆ ವೈಕುಂಠಲೋಕದಲ್ಲಿ ಕೆಲವು ಕೃಶಾಂಗಿಯರು ಪದ್ಮರಾಗದಂತಹ ಮೈಬಣ್ಣವುಳ್ಳವರು, ಮತ್ತೆಕೆಲವರು ಸುಂದರವಾದ ಮುತ್ತಿನ ಸರದಂತಹ ಮೈಬಣ್ಣವುಳ್ಳವರು. ಕೆಲವರು ನೀಲರತ್ನದಂತಹ ಕಾಂತಿಯುಳ್ಳವರು. ಅನೇಕಬಗೆಯ ಆಭರಣಗಳಿಂದ ಅಲಂಕೃತರಾದ ಇಂತಹ ಅಲೌಕಿಕಸುಂದರಿಯರು ವಿಮಾನಗಳಿಂದ ಹೊರಗೆ ಬರುತ್ತಾರೆ; ಪ್ರಕಟವಾಗುತ್ತಾರೆ. ಪ್ರಕಾಶಿಸುತ್ತಾರೆ.

ವಿ:—ಅರುಣಾಶ್ಚ ತೇ ಅಶ್ಮಾನಶ್ಚ ಅರುಣಾಶ್ಮಾನಃ, ಅರುಣಾಶ್ಮವತ್‌ವರ್ಣಃ ಯಾಸಾಂ ತಾಃ ಅರುಣಾಶ್ಮವರ್ಣಾಃ ತಾದೃಶ್ಯಃ ತನವಃ ಯಾಸಾಂ ತಾಃ, ಶುಭಾಶ್ಚ ತೇ ಹಾರಾಶ್ಚ, ಶುಭಹಾರಾಃ ಶುಭಹಾರೈಃ ಸದೃಶೀ ಶುಭಹಾರಸನ್ನಿಭಾ, ಶುಭಹಾರಸನ್ನಿಭಾ ರುಕ್ ಯಾಸಾಂ ತಾಃ, ಹರಿನೀಲವತ್ ನೀಲಾ ರುಚಿಃ ಯಾಸಾಂ ತಾಃ ಹರಿನೀಲನೀಲರುಚಯಃ, ವಿವಿಧಾನಿ ಆಭರಣಾನಿ ಯಾಸಾಂ ತಾಃ ವಿವಿಧಾಭರಣಾಃ.

ಕ್ರಿ:—ಅಪ್ರಕಟಾಃ ಪ್ರಕಟಾಃ ಸಂಪದ್ಯಮಾನಾಃ ಭವಂತಿ ಪ್ರಕಟೀಭವಂತಿ, ಭೂ ಸತ್ತಾಯಾಂ ಲಟ್. 'ಕೃಭ್ವಸ್ತಿಯೋಗೇ ಸಂಪದ್ಯಕರ್ತರಿ ಚ್ವಿಃ' ಎಂಬ ಸೂತ್ರದಿಂದ ಅಭೂತತದ್ಭಾವದಲ್ಲಿ ಚ್ವಿಪ್ರತ್ಯಯ.

ಅವ :—ಮತ್ತೂ ಆ ಮುಕ್ತತರುಣಿಯರನ್ನು ವರ್ಣಿಸುತ್ತಾರೆ-

**ಸುಚಿರದ್ಯುತೀರ್ದಧತಿ ಸೂಕ್ಷ್ಮತರಂ**
**ಸ್ವಯಮಪ್ಯಂಬರಂ ಚ ಖಲು ಬಿಭ್ರತಿ ಯಾಃ ।**
**ಶುಕನಿಸ್ಸ್ವನಾ ಧ್ರುವಮಿಮಾ ಅಪರಾಃ**
**ಸುಪಯೋಧರಾ ಜಲಾಧರಾವಲಯಃ ॥೨೯॥**

ಅ:—ಯಾಃ ಸುಚಿರದ್ಯುತೀಃ ದಧತಿ, ಸ್ವಯಂ ಸೂಕ್ಷ್ಮತರಂ ಅಂಬರಂ ಚ ಬಿಭ್ರತಿ, ಶುಕನಿಸ್ಸ್ವನಾಃ ಸುಪಯೋಧರಾಃ ಇಮಾಃ ಧ್ರುವಂ ಅಪರಾಃ ಜಲಧರಾವಲಯಃ ಖಲು.

Rarest Archiver

**ಅರ್ಥ** :— ಯಾಃ = ಯಾವ ತರುಣಿಯರು, ಸುಚಿರದ್ಯುತೀಃ = ಬಹಳಕಾಲವಿರುವ (ಸ್ಥಿರವಾದ) ಕಾಂತಿಗಳನ್ನು, ದಧತಿ = ಹೊಂದಿದ್ದಾರೋ, ಸ್ವಯಂ=ಸ್ವತಹ (ತಾವೇ), ಸೂಕ್ಷ್ಮತರಂ = ಅತ್ಯಂತತೆಳುವಾದ (ಸೂಕ್ಷ್ಮವಾದ), ಅಂಬರಂ ಚ = ವಸ್ತ್ರವನ್ನೂ (ಆಕಾಶವನ್ನೂ), ಬಿಭ್ರತಿ= ಧರಿಸಿದ್ದಾರೋ, ಶುಕನಿಸ್ಸ್ವನಾಃ = ಗಿಣಿಯಂತಹ ಧ್ವನಿಯುಳ್ಳ, ಸುಪಯೋಧರಾಃ = ಸುಂದರವಾದಸ್ತನಗಳುಳ್ಳ, (ಉತ್ತಮವಾದ ಮೋಡಗಳುಳ್ಳ), ಇಮಾಃ = ಈ ಮುಕ್ತತರುಣಿಯರು, ಧ್ರುವಂ = ನಿಶ್ಚಯವಾಗಿಯೂ, ಅಪರಾಃ = ಬೇರೆಯಾದ (ವಿಲಕ್ಷಣವಾದ), ಜಲಧರಾವಲಯಃ ಖಲು = ಹದಿನಾರುವರ್ಷವಯಸ್ಸಿನ 'ಜಲಧರಾವಳಿ' ಎಂಬ ಸುಂದರಿಯರಷ್ಟೆ !

**ತಾ** :—ಜಲಧರಾವಳಿಗಳು ಎಂದರೆ ಮೇಘಮಾಲಿಗಳು ಚಂಚಲವಾದ ಕಾಂತಿಗಳನ್ನು ಹೊಂದಿರುತ್ತವೆ. ವೈಕುಂಠದಲ್ಲಿರುವ **'ಹದಿನಾರುವರ್ಷದ ಜಲಧರಾವಳಿ'** ಎಂಬ ಹೆಸರಿನ ಮುಕ್ತತರುಣಿಯರು ಸ್ಥಿರವಾದ ಕಾಂತಿ ಲಾವಣ್ಯಗಳಿಂದ ಕಂಗೊಳಿಸುತ್ತಾರೆ. ಅತಿಸೂಕ್ಷ್ಮವಾದ ಅಂಬರ (ಆಕಾಶ)ವೇ ಜಲಧರಾವಳಿಗಳನ್ನು (ಮೇಘಮಾಲಿಗಳನ್ನು) ಧರಿಸುತ್ತದೆ. ಈ ಜಲಧರಾವಳಿ ತರುಣಿಯರು ಅತಿಸೂಕ್ಷ್ಮವಾದ ಅಂಬರವನ್ನೇ ತಾವು ಧರಿಸುತ್ತಾರೆ ಉಡುತ್ತಾರೆ. (ಅಂಬರ = ಆಕಾಶ, ಒಟ್ಟೆ) ಆಕಾಶದ ಜಲಧರಾವಳಿಗಳ ಧ್ವನಿಯು ಕರ್ಣಕಠೋರವಾದುದು. ಈ ಜಲಧರಾವಳಿ ಎಂಬ ಮುಕ್ತತರುಣಿಯರು ಗಿಣಿಯಂತೆ ಕಿವಿಗಿಂಪಾದ ಮಾತನ್ನಾಡುವವರು. ಇಷ್ಟೆಲ್ಲಾ ಭೇದವಿದ್ದರೂ ತರುಣಿಯರೂ ಜಲಧರಾವಳಿ (ಮೇಘಪಂಕ್ತಿ) ಗಳಂತೆ ಸುಪಯೋಧರೆಯರು; ಮೇಘಪಂಕ್ತಿಯು ಒಳ್ಳೆಯ ಮೋಡಗಳುಳ್ಳದ್ದು, ಈ ಸುಂದರಿಯರು ಉತ್ತಮವಾದ ಸ್ತನಗಳುಳ್ಳವರು. ಮೇಘಗಳು ಉತ್ತಮವಾದ ನೀರನ್ನು ಹೊತ್ತಿರುವುದರಿಂದ ಪಯೋಧರಗಳು. ಸ್ತನಗಳು ಹಾಲನ್ನು ಹೊಂದಿರುವುದರಿಂದ ಪಯೋಧರಗಳು ಹೀಗೆ ಪಯೋಧರತ್ವಗುಣವೊಂದರಿಂದ ಮಾತ್ರ ಜಲಧರಾವಳಗಳಿಂತಿದ್ದು, ಇತರ ಗುಣಗಳ ವ್ಯತ್ಯಾಸದಿಂದ ಪ್ರಸಿದ್ಧ ಜಲಧರಾವಳಿಗಿಂತ ಭಿನ್ನರಾದ ಈ

Rarest Archiver

ಜಲಧರಾವಳಿಗಳು (೧೬ ವರುಷದ ಯುವತಿಯರು) ವಿಮಾನಗಳಿಂದ ಹೊರಹೊರಟರು. ಎಂದು ಭಾವ.

**ವಿ :—** ಸುಚಿರಾಶ್ಚ ತಾಃ ದ್ಯುತಯಶ್ಚ ಸುಚಿರದ್ಯುತಯಃ ತಾಃ, ಅತಿಶಯೇನ ಸೂಕ್ಷ್ಮಂ ಸೂಕ್ಷ್ಮತರಂ, ಶುಕವತ್ ನಿಸ್ಸ್ವನಃ ಯಾಸಾಂ ತಾಃ ಶುಕನಿಸ್ಸ್ವನಾಃ, (ತರುಣೀಪಕ್ಷೇ) ಸು ಶೋಭನೌ ಪಯೋಧರೌ ಯಾಸಾಂ ತಾಃ ಸುಪಯೋಧರಾಃ ಮೇಘಪಕ್ಷೇ–ಧರಂತೀತಿ ಧರಾಃ ಸು ಪಯಸಾಂ ಧರಾಃ ಸುಪಯೋಧರಾಃ, ಧರಂತೀತಿ ಧರಾಃ ಜಲಾನಾಂ ಧರಾಃ ಜಲಧರಾಃ ಜಲಧರಾಣಾಂ ಆವಲಯಃ ಜಲಧರಾವಲಯಃ |

**ಕ್ರಿ :—**ದಧತಿ, ದಧಾತಿ ಧತ್ತಃ ದಧತಿ, ದಧಾಸಿ ಧತ್ಥಃ ಧತ್ಥ, ದಧಾಮಿ ದಧ್ವಃ ದಧ್ಮಃ, ಡುಧಾಞ್ (ಧಾ)ಧಾರಣಪೋಷಣಯೋಃ ಲಟ್. ಬಿಭ್ರತಿ, ಬಿಭರ್ತಿ ಬಿಭೃತಃ ಬಿಭ್ರತಿ, ಬಿಭರ್ಷಿ ಬಿಭೃಥಃ ಬಿಭೃಥ, ಬಿಭರ್ಮಿ ಬಿಭೃವಃ ಬಿಭೃಮಃ, ಡುಭೃಞ್ (ಭೃ) ಧಾರಣ ಪೋಷಣಯೋಃ ಲಟ್.

**ಸಮತೀತವಿದ್ರುಮಭುವಾಂ ಸುದೃಶಾಂ**
**ಪದಪಲ್ಲವಾಗ್ರ್ಯನಖರಕ್ತರುಚೀಃ |**
**ಪರಭಾಗತಃ ಸ್ಫಟಿಕಕುಟ್ಟಿಮಭೂಃ**
**ಪ್ರಕಟೀಕರೋತಿ ನ ಪುರಾ ಪ್ರಕಟಾಃ ||೩೦||**

**ಅ :—**ಸ್ಫಟಿಕಕುಟ್ಟಿಮಭೂಃ ಸಮತೀತವಿದ್ರುಮಭುವಾಂ ಸುದೃಶಾಂ ಪುರಾ ನ ಪ್ರಕಟಾಃ ಪದಪಲ್ಲವಾಗ್ರ್ಯನಖರಕ್ತರುಚೀಃ ಪರಭಾಗತಃ ಪ್ರಕಟೀಕರೋತಿ |

**ಅರ್ಥ :—**ಸ್ಫಟಿಕಕುಟ್ಟಿಮಭೂಃ = ಸ್ಫಟಿಕಮಣಿಮಯವಾದ ಸ್ಥಳ ಪ್ರದೇಶವು, ಸಮತೀತ = ದಾಟಿದ, ವಿದ್ರುಮಭುವಾಂ = ಹವಳದ ನೆಲವುಳ್ಳ, ಸುದೃಶಾಂ = ತರುಣಿಯರ, ಪುರಾ ನ ಪ್ರಕಟಾಃ = ಮೊದಲು ಸ್ಪಷ್ಟವಾಗದಿರುವ, ಪದಪಲ್ಲವ = ಚಿಗುರಿನಂತಿರುವ ಪಾದಗಳ, ಅಗ್ರ್ಯ = ಶ್ರೇಷ್ಠವಾದ, ನಖ = ಉಗುರುಗಳ, ರಕ್ತರುಚೀಃ = ಕೆಂಪಾದ ಕಾಂತಿ

Rarest Archiver

ಗಳನ್ನು, ಪರಭಾಗತಃ = ಬೇರೆಬಣ್ಣದ ಸಂಬಂಧದಿಂದ, ಪ್ರಕಟೀಕರೋತಿ = ಸ್ಪಷ್ಟಪಡಿಸುತ್ತದೆ.

ತಾ:—ಆ ವೈಕುಂಠದಲ್ಲಿ ಹವಳದ ಪ್ರದೇಶಗಳನ್ನು ತರುಣಿಯರು ದಾಟಿ ಬರುತ್ತಾರೆ. ಅವರ ಶ್ರೇಷ್ಠವಾದ ಚಿಗುರಿನಂತೆ ಕೆಂಪಾದ ಕಾಲಿನ ಉಗುರುಗಳ ಕೆಂಪಾದ ಕಾಂತಿಗಳು, ಹಿಂದೆ ಪ್ರಕಟವಾಗದಿದ್ದರೂ ಅವರು ಸ್ಫಟಿಕಮಣಿಮಯವಾದ ಪ್ರದೇಶಗಳಲ್ಲಿ ನಡೆದು ಬರುವಾಗ ಬೇರೆ ಬಣ್ಣದ ಸಂಬಂಧದಿಂದ ಚೆನ್ನಾಗಿ ಪ್ರಕಟವಾಗುತ್ತವೆ. ಆ ತರುಣಿಯರ ಪಾದನಖ ಕಾಂತಿಗಳು ಕೆಂಪಾದ ಹವಳದ ಕಾಂತಿಯಲ್ಲಿ ಸ್ಪಷ್ಟವಾಗಿ ಪ್ರಕಟ ವಾಗಿರಲಿಲ್ಲ. ಬಿಳಿದಾದ ಸ್ಫಟಿಕಸ್ಥಳದಲ್ಲಿ ಸ್ಪಷ್ಟವಾಗಿ ಪ್ರಕಾಶಿಸಿದುವು. ತರುಣಿಯರ ಪಾದಗಳು ಎಳೆಚಿಗುರುಗಳಂತಿವೆ. ಉಗುರುಗಳು ಕೆಂಪಾಗಿವೆ ಎಂದು ಅಭಿಪ್ರಾಯ.

ವಿ :—ಸಮತೀತಾಃ ವಿದ್ರುಮಾಣಾಂ ಭುವಃ ಯಾಭಿಃ ತಾಃ ಸಮತೀತವಿದ್ರುಮಭುವಃ ತಾಸಾಂ, ಸು ಶೋಭನೌ ದೃಶೌ ಯಾಸಾಂ ತಾಃ ಸುದೃಶಃ ತಾಸಾಂ, ಪದಾನಿ ಪಲ್ಲವಾ ಇವ ಪದಪಲ್ಲವಾಃ, ಅಗ್ರ್ಯಾಶ್ಚ ತೇ ನಖಾಶ್ಚ, ಪದಪಲ್ಲವಾನಾಂ ಅಗ್ರ್ಯನಖಾಃ ಪದಪಲ್ಲವಾಗ್ರ್ಯನಖಾಃ, ಪದಪಲ್ಲವಾಗ್ರ್ಯನಖಾನಾಂ ರುಚಯಃ ತಾಃ ಪದಪಲ್ಲವಾಗ್ರ್ಯನಖರುಚೀಃ, ಪರಸ್ಯ ಭಾಗಃ ಪರಭಾಗಃ, ಪರಭಾಗಾತ್ ಇತಿ ಪರಭಾಗತಃ, ಸ್ಫಟಿಕೇನ ಕುಟ್ಟಿಮಾ ಸ್ಫಟಿಕಕುಟ್ಟಿಮಾ, ಸಾ ಚ ಸಾ ಭೂಶ್ಚ ಸ್ಫಟಿಕಕುಟ್ಟಿಮಭೂಃ.

ಕ್ರಿ :—ಅಪ್ರಕಟಾಃ ಪ್ರಕಟಾಃ ಸಂಪದ್ಯಮಾನಾಃ ಕರೋತಿ ಪ್ರಕಟೀ ಕರೋತಿ, -ಕುರುತಃ -ಕುರ್ವಂತಿ ಇತ್ಯಾದಿ, ಚ್ವಿಪ್ರತ್ಯಯಾಂತ ಪ್ರಕಟೀ ಶಬ್ದಪೂರ್ವಕ ಕೃಧಾತು. ಲಟ್.

ಹರಿಣೀದೃಶಾಂ ಸುವಸನಾನಿ ಬೃಹತ್–
ಸುನಿತಂಬಬಿಂಬರುಚಿರೋರುಚಾ ।
ಶಬಲದ್ಯುತೀನಿ ಮದನಸ್ಯ ಜಗ
ಜ್ಜಯವೈಜಯಂತ್ಯ ಇತಿ ನಿಶ್ಚಿನುಮಃ ॥೩೦॥

ಅ :— ಬೃಹತ್ಸುನಿತಂಬಬಿಂಬರುಚಿರೋರುರುಚಾ ಶಬಲದ್ಯುತೀನಿ ಹರಿಣೀದೃಶಾಂ ಸುವಸನಾನಿ ಮದನಸ್ಯ ಜಗಜ್ಜಯವೈಜಯಂತ್ಯಃ ಇತಿ ನಿಶ್ಚಿನುಮಃ ।

**ಅರ್ಥ :**— ಬೃಹತ್ = ದೊಡ್ಡದಾದ, ಸುನಿತಂಬಬಿಂಬ = ಸುಂದರವಾದ ಸೊಂಟದ ಹಿಂಭಾಗದ, ರುಚಿರ = ಮನೋಹರವಾದ, ಉರುರುಚಾ = ಅಧಿಕವಾದ ಕಾಂತಿಯಿಂದ, ಶಬಲ = ಮಿಶ್ರವಾದ, ಹರಿಣೀದೃಶಾಂ = ಜಿಂಕೆಯಂತಹ ಕಣ್ಣುಗಳುಳ್ಳ ಸುಂದರಿಯರ, ಸುವಸನಾನಿ = ಒಳ್ಳೆಯ ಸೀರೆಗಳು, ಮದನಸ್ಯ = ಮನ್ಮಥನ, ಜಗತ್ = ಪ್ರಪಂಚದ ಕಾಮಿಗಳ, ಜಯವೈಜಯಂತ್ಯಃ ಇತಿ = ಜಯಸೂಚಕವಾದ ಬಾವುಟಗಳೆಂದು, ನಿಶ್ಚಿನುಮಃ = ನಿಶ್ಚಯಿಸುತ್ತೇವೆ.

**ತಾ:** —ಹೆಣ್ಣು ಜಿಂಕೆಯಂತಹ ಕಣ್ಣುಗಳುಳ್ಳ ಸುಂದರಿಯರ ಉಬ್ಬಿದ ಹಿಂಭಾಗದ ಕಾಂತಿಯಿಂದ ಮಿಶ್ರವಾದ ಸೀರೆಗಳು ತಮ್ಮ ಕಾಂತಿಯಿಂದ ಜಗತ್ತಿನ ಕಾಮಿಸಮುದಾಯವನ್ನೇ ಜಯಿಸಲು ಮನ್ಮಥನು ಹಾರಿಸಿದ ಪತಾಕೆಗಳೆಂದು ನಾವು ನಿಶ್ಚಯಿಸುತ್ತೇವೆ. ಸುಂದರಿಯರ ಸುಂದರವಾದ ಮತ್ತು ಪುಷ್ಟವಾದ ಸೊಂಟದ ಕೆಳಗಿನ ಪೃಷ್ಠಭಾಗದಲ್ಲಿ ಉಟ್ಟಿರುವ ಸೀರೆಗಳ ಬಾವುಟದಂತಹ ಹಾರಾಟವನ್ನು ಕಂಡ ಯುವಕರ ಹೃದಯದಲ್ಲಿ ಕಾಮನು ನರ್ತಿಸಲಾರಂಭಿಸುತ್ತಾನೆ ಎಂದು ಭಾವ.

**ವಿ:** —ಹರಿಣೀನಾಂ ದೃಶಃ ಇವ ದೃಶಃ ಯಾಸಾಂ ತಾಃ ಹರಿಣೀದೃಶಃ ತಾಸಾಂ, ಸು ಶೋಭನಾನಿ ಚ ತಾನಿ ವಸನಾನಿ ಚ ಸುವಸನಾನಿ, ನಿತಂಬಯೋಃ ಬಿಂಬಂ ನಿತಂಬಬಿಂಬಂ, ಸು ಶೋಭನಂ ಚ ತತ್ ಬೃಹಚ್ಚ ತತ್ ನಿತಂಬಬಿಂಬಂ ಚ ಬೃಹತ್ಸುನಿತಂಬಬಿಂಬಂ ತಸ್ಯ ರುಚಿರಾ ಚ ಸಾ ಉರ್ವೀ ಚ ಸಾ ರುಕ್ ಚ ಬೃಹತ್ಸುನಿತಂಬರುಚಿರೋರುರುಕ್ ತಯಾ, ಶಬಲಾ ದ್ಯುತಿಃ ಯೇಷಾಂ ತಾನಿ, ಜಗತಃ ಜಯಃ ಜಗಜ್ಜಯಃ ತಸ್ಯ ವೈಜಯಂತ್ಯಃ ।

**ಕ್ರಿ:** —ನಿಸ್ + ಚಿನುಮಃ, ಚಿನೋತಿ ಚಿನುತಃ ಚಿನ್ವಂತಿ, ಚಿನೋಷಿ

Rarest Archiver

ಚಿನುಥಃ ಚಿನುಥ ; ಚಿನೋಮಿ ಚಿನುವಃ ಚಿನ್ವಃ, ಚಿನುಮಃ ಚಿನ್ಮಃ ನಿಸ್ ಉಪ. ಚಿಞ್ ಚಯನೇ ಲಟ್ ।

**ಅವ :—** ಇನ್ನು ಮುಂದೆ ೩೨ನೆಯ ಶ್ಲೋಕದಿಂದ ೩೫ನೇಯ ಶ್ಲೋಕದವರೆಗೆ ಕುಲಕಕಾವ್ಯದಿಂದ ಮುಕ್ತರಾದ ವೈಕುಂಠಸುಂದರಿಯರನ್ನು ವರ್ಣಿಸುತ್ತಾರೆ—

**ಕರಪಲ್ಲವೈಸ್ತರಲಿತೈರ್ಲಲಿತೈ**
**ರಸಕೃತ್ಕ್ವಣತ್ಕನಕಕಂಕಣಕೈಃ ।**
**ನವರೋಮರಾಜಿವಲಿವಲ್ಗುಮೃದು**
**ಪ್ರತನೂದರೈರತಿಮನಾಕ್ತರಲೈಃ** ॥೩೨॥

**ಅ :—** ತರಲಿತೈಃ ಲಲಿತೈಃ ಅಸಕೃತ್ಕ್ವಣತ್ಕನಕಕಂಕಣಕೈಃ ಕರಪಲ್ಲವೈಃ ಅತಿಮನಾಕ್ ತರಲೈಃ ನವರೋಮರಾಜಿವಲಿವಲ್ಗುಮೃದು-ಪ್ರತನೂದರೈಃ (ಉಪಲಕ್ಷಿತಾಸು ತಾಸು ನಾರೀಷು ಪ್ರಗತಾಸು ಸತೀಷು ಇಮಂ ತನುವಿಲಾಸಂ ಅನುವೀಕ್ಷಿತುಂ ಗದಿತಾ ಇವ ತರುಣಾಃ ನಿವೃತ್ತ-ಮುಖಾ ಭವಂತಿ ಪುರಾ ಎಂದು-೩೫ನೆಯ ಶ್ಲೋಕದೊಡನೆ ಏಕಾನ್ವಯವು.)

**ಅರ್ಥ :—** ತರಲಿತೈಃ = ಚಂಚಲವಾದ, ಲಲಿತೈಃ = ಕೋಮಲವಾದ, ಅಸಕೃತ್ = ಅನೇಕಬಾರಿ, ಕ್ವಣತ್ = ಶಬ್ದಮಾಡುತ್ತಿರುವ, ಕನಕ = ಚಿನ್ನದ, ಕಂಕಣಕೈಃ = ಬಳೆಗಳುಳ್ಳ, ಕರಪಲ್ಲವೈಃ = ಚಿಗುರಿನಂತಹ ಕೈಗಳುಳ್ಳ, ಅತಿಮನಾಕ್ = ಬಹಳಸ್ವಲ್ಪ, ತರಲೈಃ = ಅಲ್ಲಾಡುತ್ತಿರುವ, ನವರೋಮರಾಜಿ = ನೂತನವಾದ ರೋಮಗಳ ಸಾಲುಗಳು, ವಲಿ = ತ್ರಿವಳಿಯು ಇವುಗಳಿಂದ, ವಲ್ಗುಮೃದುಪ್ರತನೂದರೈಃ = ಮನೋಹರವಾದ ಮೃದುವಾದ ಮತ್ತು ಬಹಳ ಸಣ್ಣದಾದ ಹೊಟ್ಟೆಗಳಿಂದ ಕೂಡಿದ, (ಆ ಮುಕ್ತತರುಣಿಯರು, ಮುಂದಕ್ಕೆ ಹೊರಟಾಗ ದೇಹದ ಈ ವಿಲಾಸವನ್ನು ನೋಡಲು ಹೇಳಲ್ಪಟ್ಟವರಂತೆ ತರುಣರು ತಿರುಗಿಸಿದ ಮುಖವುಳ್ಳವರಾಗುತ್ತಾರೆ.)

**ತಾ :—** ವೈಕುಂಠದಲ್ಲಿರುವ ಮುಕ್ತತರುಣಿಯರ ಮೃದುವಾದ

Rarest Archiver

ಕೈಗಳು ಶಬ್ದಮಾಡುವ ಚಿನ್ನದ ಬಳೆಗಳಿಂದ ಕೂಡಿವೆ. ಅವುಗಳು ಹಾವಭಾವದಿಂದ ಚಲಿಸುತ್ತಾ ಇರುತ್ತವೆ. ಅವರ ಉದರಗಳು ನಡಿಗೆಯಿಂದ ಸ್ವಲ್ಪ ಅಲ್ಲಾಡುತ್ತಿವೆ. ಮೃದುವಾದ ಮತ್ತು ಬಹಳ ಸಣ್ಣದಾಗಿರುವ ಸುಂದರವಾದ ಉದರಗಳಲ್ಲಿ ಹೊಸ ರೋಮಗಳು ಮತ್ತು ತ್ರಿವಳಿಗಳಿವೆ. (ತ್ರಿವಲಿ=ನಾಭಿಯ ಹತ್ತಿರವಿರುವ ಮಡಿಕೆಗಳು) ಇವು ಬಹಳ ಸುಂದರವಾಗಿ ಒಪ್ಪುತ್ತಿವೆ. ಇಂತಹ ಸುಂದರಿಯರು ಹಿಂಭಾಗದಲ್ಲಿ ಬರುತ್ತಿರುವಾಗ ಈ ವಿಲಾಸವನ್ನು ನೋಡಿರಿ ಎಂದು ಹೇಳಲ್ಪಟ್ಟವರಂತೆ ಯುಕ್ತ ತರುಣರು ಹಿಂತಿರುಗಿ ನೋಡುತ್ತಾರೆ.

**ವಿ:**—ಕರಾಃ ಪಲ್ಲವಾಃ ಇವ ಕರಪಲ್ಲವಾಃ ತೈಃ, ಅಸಕೃತ್ ಕ್ವಣಂತಿ ಕನಕಮಯಕಂಕಣಾನಿ **ಯೇಷಾಂ ತೇ** ಅಸಕೃತ್-ಕಂಕಣಕಾಃ ತೈಃ, ನವಾಶ್ಚತಾಃ ರೋಮ್ಣಾಂ ರಾಜಯಶ್ಚ ನವರೋಮರಾಜಯಃ, ನವರೋಮರಾಜಯಶ್ಚ ವಲಯಶ್ಚ ನವರೋಮರಾಜಿವಲಯಃ, -ವಲಿಭಿಃ ವಲ್ಗೂನಿ ಮೃದೂನಿ ಪ್ರತನೂನಿ ಚ ತಾನಿ ಉದರಾಣಿ ಚ ತೈಃ.

**ಕುಚಕುಂಭಪೂರ್ಣತರಕಾಂತಿಸುಧಾ-**
**ರಸಶೇಷಬಿಂದುವಿಸರಚ್ಛವಿಭಿಃ ।**
**ವರಹಾರರಾಜಿಭಿರುತಾನುಪದಂ**
**ಪ್ರತಿಲೋಡಿತಾಭಿರಶನೈರುರಸಿ ॥೩೩॥**

**ಅ:**— ಕುಚಕುಂಭಪೂರ್ಣತರಕಾಂತಿಸುಧಾರಸಶೇಷಬಿಂದುವಿಸರಚ್ಛವಿಭಿಃ ಉತ ಅನುಪದಂ ಉರಸಿ ಪ್ರತಿಲೋಡಿತಾಭಿಃ ವರಹಾರರಾಜಿಭಿಃ (ಉಪಲಕ್ಷಿತಾಸು ತಾಸು ನಾರೀಷು ಪ್ರಗತಾಸು ಸತೀಷು ತರುಣಾಃ ನಿವೃತ್ತಮುಖಾಃ ಭವಂತಿ ಪುರಾ)

**ಅರ್ಥ:**- ಕುಚಕುಂಭ=ಗುಂಡಗಾದ ಕಲಶಗಳಂತಿರುವ ಸ್ತನಗಳಲ್ಲಿ, ಪೂರ್ಣತರಕಾಂತಿ=ಅತ್ಯಂತವಾಗಿ ತುಂಬಿದ ಕಾಂತಿಗಳೆಂಬ, ಸುಧಾರಸಶೇಷ=ಅಮೃತರಸದ ಹೆಚ್ಚಿನಭಾಗದ, ಬಿಂದು=ಹನಿಗಳ, ವಿಸರ=ಸಮೂಹದ, ಛವಿಭಿಃ=ಕಾಂತಿಯಂತಹ ಕಾಂತಿಗಳುಳ್ಳ, ಉತ=ಮತ್ತು, ಅನುಪದಂ=ಹೆಜ್ಜೆಹೆಜ್ಜೆಯಲ್ಲಿಯೂ, ಉರಸಿ = ಎದೆಯಲ್ಲಿ ಅಶನೈಃ = ವೇಗವಾಗಿ,

Rarest Archiver

ಪ್ರತಿಲೋಡಿತಾಭಿಃ = ಅತ್ತ ಇತ್ತ ಮತ್ತು ಎತ್ತರಕ್ಕೆ ಚಿಮ್ಮುತ್ತಿರುವ, ವರಹಾರರಾಜಿಭಿಃ = ಉತ್ತಮವಾದ ಮುತ್ತಿನ ಸರಗಳಿಂದಲೂ (ಕೂಡಿದ ಮುಕ್ತತರುಣಿಯರು ಹೋಗುತ್ತಿರುವಾಗ ಮುಕ್ತತರುಣರು ಹಿಂತಿರುಗಿ ನೋಡುತ್ತಾರೆ.)

**ವಿ:**—ಕುಚಾ ಕುಂಭಾಃ ಇವ ಕುಚಕುಂಭಾಃ, ಸುಧಾ ಏವ ರಸಃ ಸುಧಾರಸಃ, ಕಾಂತಿರೇವ ಸುಧಾರಸಃ ಕಾಂತಿಸುಧಾರಸಃ, ಪೂರ್ಣತರ ಶ್ಚಾಸೌ ಕಾಂತಿಸುಧಾರಸಶ್ಚ ಪೂರ್ಣತರಕಾಂತಿಸುಧಾರಸಃ ಕುಚ-ಕುಂಭೇಷು ಪೂರ್ಣತರ ಕಾಂತಿಸುಧಾರಸಸ್ಯ ಶೇಷಃ, ಕುಚ... ಶೇಷಃ, ತಸ್ಯ ಶೇಷಃ, ತಸ್ಯ ಬಿಂದವಃ, ಕುಚ ಬಿಂದೂನಾಂ ಛವಿರಿವ ಛವಿಃ ಯಾಸಾಂ ತಾಃ ಕುಚ....ಚ್ಛವಯಃ, ತಾಭಿಃ, ವರಾಶ್ಚ ತೇ ಹಾರಾಶ್ಚ ವರಹಾರಾಃ ತೇಷಾಂ ರಾಜಯಃ ತಾಭಿಃ, ನ ಶನೈಃ ಅಶನೈಃ ।

**ಅಪಿ ಲೀಲಯಾ ಕುವಲಯೋಲ್ಲಸಿತೈ-**
**ರಪರೈಃ ಕರೈಃ ಸಹಚರೀನಿಹಿತೈಃ ।**
**ವದನೈಃ ಶುಚಿಸ್ಮಿತಕಟಾಕ್ಷರಸೈ-**
**ಶ್ಚಲಕುಂಡಲೋಲ್ಲಸಿತಗಂಡಯುಗೈಃ ॥೩೪॥**

**ಅ:** – ಲೀಲಯಾ ಕುವಯೋಲ್ಲಸಿತೈಃ ಕರೈಃ ಸಹಚರೀನಿಹಿತೈಃ ಅಪರೈಃ (ಕರೈಃ) ಶುಚಿಸ್ಮಿತಕಟಾಕ್ಷರಸೈಃ ಚಲಕುಂಡಲೋಲ್ಲಸಿತಗಂಡ-ಯುಗೈಃ ವದನೈಃ ಅಪಿ,

**ಅರ್ಥ :**—ಲೀಲಯಾ = ವಿಲಾಸದಿಂದ (ವಿನೋದದಿಂದ) ಕುವಲಯ ಉಲ್ಲಸಿತೈಃ = ಕನ್ನೈದಿಲ್ಲೆಹೂವುಗಳಿಂದ ಪ್ರಕಾಶಿತವಾದ, ಕರೈಃ = ಒಲಗೈ ಗಳಿಂದ, ಸಹಚರೀನಿಹಿತೈಃ = ಗೆಳತಿಯ ಮೇಲೆ (ಸಖಿಯ ಹೆಗಲಿನ ಮೇಲೆ) ಇಟ್ಟಿರುವ, ಅಪರೈಃ = ಬಲಗೈಗಳಿಂದ, (ಕೂಡಿದ) ಶುಚಿ-ಸ್ಮಿತ = ನಿರ್ಮಲ ವಾದ ಮಂದಹಾಸ, ಕಟಾಕ್ಷರಸೈಃ = ಶ್ರೇಷ್ಠವಾದ ಕಡೆಗಣ್ಣಿನ ನೋಟ ಇವುಗಳುಳ್ಳ, ಚಲಕುಂಡಲ = ಚಂಚಲವಾದ ಕರ್ಣಾಭರಣಗಳಿಂದ, ಉಲ್ಲಸಿತಗಂಡಯುಗೈಃ ಕಾಂತಿಯುಕ್ತವಾದ ಎರಡು ಕೆನ್ನೆಗಳುಳ್ಳ, ವದನೈಃ ಅಪಿ = ಮುಖಗಳಿಂದಲೂ ಕೂಡಿರುವ ;

Rarest Archiver

ತಾ:—ಆ ಮುಕ್ತತರುಣಿಯರು ವಿನೋದಕ್ಕಾಗಿ ಬಲಗೈಯಲ್ಲಿ ಅರಳಿದ ಕಮಲವನ್ನು ಹಿಡಿದುಕೊಂಡು, ಎಡಗೈಯನ್ನು ಸಖಿಯ ಹೆಗಲಿನ ಮೇಲಿಟ್ಟುಕೊಂಡು, ನಿರ್ಮಲವಾದ ಮಂದಹಾಸ, ಶ್ರೇಷ್ಠವಾದ ಓರೆಗಣ್ಣಿನ ನೋಟ ಇವುಗಳ ಚಮತ್ಕಾರದಿಂದ ಕೂಡಿದ, ಚಂಚಲವಾದ ಕರ್ಣಾಭರಣಗಳಿಂದ ಕಂಗೊಳಿಸುವ ಕಪೋಲಗಳಿಂದ ಪ್ರಕಾಶಿತವಾದ ಮುಖಗಳಿಂದ ಬೆಳಗುತ್ತಾ ಇರುತ್ತಾರೆ.

ವಿ:—ಕುವಲಯೈಃ ಉಲ್ಲಸಿತಾಃ ಕುವಲಯೋಲ್ಲಸಿತಾಃ ತೈಃ, ಸಹಚರೀಷು ನಿಹಿತಾಃ ಸಚರೀನಿಹಿತಾಃ ತೈಃ, ಕಟಾಕ್ಷಸ್ಯ ರಸಾಃ ಕಟಾಕ್ಷರಸಾಃ, ಶುಚೀನಿ ಸ್ಮಿತಾನಿ ಕಟಾಕ್ಷರಸಾಶ್ಚ ಯೇಷಾಂ ತಾನಿ-ಶುಚಿಸ್ಮಿತಕಟಾಕ್ಷರಸಾನಿ ತೈಃ, ಚಲಾನಿ ಚ ತಾನಿ ಕುಂಡಲಾನಿ ಚ ಚಲಕುಂಡಲಾನಿ, ಗಂಡಯೋಃ ಯುಗಾನಿ ಗಂಡಯುಗಾನಿ, ಚಲಕುಂಡಲೈಃ ಉಲ್ಲಸಿತಾನಿ ಗಂಡಯುಗಾನಿ ಯೇಷಾಂ ತಾನಿ ಚಲಕುಂಡಲೋಲ್ಲಸಿತಗಂಡಯುಗಾನಿ ತೈಃ ||

ಪ್ರಗತಾಸು ತಾಸು ರಣಿತೈರಶನಾ
ಮಣಿನೂಪುರೈರಿವ ಪುರಾ (ತದಾ) ಗದಿತಾಃ |
ಅನುವೀಕ್ಷಿತುಂ ತನುವಿಲಾಸಮಿಮಂ
ತರುಣಾ ಭವಂತ್ಯಥ ನಿವೃತ್ತಮುಖಾಃ || ೩೫ ||

ಅ:— ಅಥ ತಾಸು ಪ್ರಗತಾಸು ರಣಿತೈ ರಶನಾಮಣಿನೂಪುರೈಃ ಇಮಂ ತನುವಿಲಾಸಂ ಅನುವೀಕ್ಷಿತುಂ ಗದಿತಾಃ ಇವ ತರುಣಾಃ ನಿವೃತ್ತಮುಖಾಃ ಪುರಾ (ತದಾ) ಭವಂತಿ ||

ಅರ್ಥ:—ಅಥ= ವಿಮಾನದಿಂದ ಇಳಿದ ಮೇಲೆ, ತಾಸು= ಹಿಂದೆ ತಿಳಿಸಿದ ಆ ಮುಕ್ತಸುಂದರಿಯರು, ಪ್ರಗತಾಸು= ಹೊರಟಾಗ, ರಣಿತೈಃ= ಕುಲುಕುಲು ಸದ್ದುಮಾಡುವ, ರಶನಾ = ಡಾಬು, ಮಣಿನೂಪುರೈಃ= ರತ್ನಖಚಿತವಾದ ಕಾಲ್ಗೆಜ್ಜೆ ಇವುಗಳಿಂದ, ಇಮಂ ತನುವಿಲಾಸಂ= ಈ ದೇಹವಿಲಾಸವನ್ನು, ಅನುವೀಕ್ಷಿತುಂ= ನೋಡುವುದಕ್ಕೆ, ಗದಿತಾಃ ಇವ=

Rarest Archiver

ಹೇಳಲ್ಪಟ್ಟವರಂತೆ, ತರುಣಾಃ=ಮುಕ್ತಸುಂದರರು, ನಿವೃತ್ತಮುಖಾಃ= ಹಿಂದಿರುಗಿದ ಮುಖವುಳ್ಳವರಾಗಿ, ಪುರಾ (ತದಾ) ಭವಂತಿ=ಆದರು (ಆಗ ಆಗುತ್ತಾರೆ).

**ತಾ:**—ಇಂತಹ ಮುಕ್ತಸುಂದರಿಯರು ವಿಮಾನದಿಂದ ಇಳಿದು ಮುಂದಕ್ಕೆ ಹೊರಟರು. ಆಗ ಅವರ ಡಾಬು, ಕಾಲ್ಗೆಜ್ಜೆಗಳು ಗಲ್ ಗಲ್ ಎಂದು ಶಬ್ದಮಾಡಿದುವು. ಆ ಶಬ್ದಗಳಿಂದ ಆ ಆಭರಣಗಳು ಮುಂದೆ ಹೋಗುತ್ತಿರುವ ತರುಣರಿಗೆ 'ನೀವು ಹಿಂದಿರುಗಿ ಈ ಮುಕ್ತಸುಂದರಿಯರ ದೇಹದ ಹಾವಭಾವಗಳನ್ನು ನೋಡಿರಿ' ಎಂದು ಹೇಳುತ್ತವೆಯೋ ಎಂಬಂತಿದ್ದುವು. ಇದರಿಂದಾಗಿ ಆ ತರುಣರು ಹಿಂದಿರುಗಿ ನೋಡಿದರು. ಆ ಮುಕ್ತತರುಣಿಯರ ನಡಿಗೆ ಮುಂತಾದುವುಗಳು ಅಷ್ಟು ಆಕರ್ಷಕ ವಾಗಿದ್ದುವು.

**ವಿ:**—ಮಣಿಮಯಾಃ ನೂಪುರಾಃ ಮಣಿನೂಪುರಾಃ, ರಶನಾಶ್ಚ ಮಣಿನೂಪುರಾಶ್ಚ ರಶನಾಮಣಿನೂಪುರಾಃ ತೈಃ, ತನೋಃ ವಿಲಾಸಃ ತನು-ವಿಲಾಸಃ ತಂ, ನಿವೃತ್ತಂ ಮುಖಂ ಯೇಷಾಂ ತೇ ;

**ಅನುಪಾಲಿತಾಃ ಸ್ವದಯಿತೈರ್ದಯಿತಾಃ**
**ಕಥಮಪ್ಯುಪೇತ್ಯ ಕುಚಭಾರನತಾಃ ।**
**ಶನಕೈಃ ಪುನಸ್ತದವಲಂಬಬಲಾತ್**
**ಕಿಲ ತಾ ವಿಶಂತಿ ಪರಮೋಪವನಂ** ||೩೬||

**ಅ:**—ಸ್ವದಯಿತೈಃ ಅನುಪಾಲಿತಾಃ ಕುಚಭಾರನತಾಃ ತಾಃ ದಯಿತಾಃ ಕಥಂ ಅಪಿ ಉಪೇತ್ಯ ಪುನಃ ತದವಲಂಬಬಲಾತ್ ಶನಕೈಃ ಪರಮೋಪವನಂ ವಿಶಂತಿ ಕಿಲ.

**ಅರ್ಥ:**— ಸ್ವದಯಿತೈಃ = ತಮ್ಮ ತಮ್ಮ ಮುಕ್ತಪತಿಯಿಂದ, ಅನುಪಾಲಿತಾಃ = ನಿರೀಕ್ಷಿಸಲ್ಪಟ್ಟಿರುವ, ಕುಚಭಾರನತಾಃ = ಸ್ತನಗಳ ಭಾರದಿಂದ ಬಾಗಿದ, ತಾಃ ದಯಿತಾಃ=ಆ ಮುಕ್ತರ ಪ್ರಿಯಪತ್ನಿಯರು, ಕಥಂ ಅಪಿ=ಹೇಗೋ, ಉಪೇತ್ಯ ಸಮೀಪಿಸಿ, ಪುನಃ=ಮರಳಿಯೂ,

Rarest Archive

ತದವಲಂಬಬಲಾತ್ = ಆ ತಮ್ಮ ಪತಿಯ ಆಶ್ರಯಬಲದಿಂದ, ಶನಕೈಃ = ಮೆಲ್ಲನೆ, ಪರಮೋಪವನಂ = ಉತ್ತಮವಾದ ಉದ್ಯಾನವನ್ನು, ವಿಶಂತಿ ಕಿಲ = ಪ್ರವೇಶಿಸುತ್ತಾರಷ್ಟೆ.

ತಾ:—ಆ ತರುಣಿಯರು ತಮ್ಮ ದೊಡ್ಡಸ್ತನಗಳ ಭಾರದಿಂದ ಬಗ್ಗಿದಂತಿದ್ದು ತಮ್ಮ ತಮ್ಮ ಪತಿಯನ್ನು ಅನುಸರಿಸಿ ಬೇಗನೆ ನಡೆಯಲು ಅಶಕ್ತರಾಗಿ ಮೆಲ್ಲನೆ ಹಿಂದಿನಿಂದ ಬರುತ್ತಿದ್ದರು. ಅವರು ತಮ್ಮ ಹತ್ತಿರ ಬರುವತನಕ ತಮ್ಮನ್ನೇ ನಿರೀಕ್ಷಿಸುತ್ತಿರುವ ತರುಣರ ಸಮೀಪಕ್ಕೆ ಆ ತರುಣಿಯರು ಹೇಗೋ ಬಹಳ ಆಯಾಸದಿಂದ ಬಂದು ಮುಟ್ಟಿದರು. ಅನಂತರ ಆ ತರುಣಿಯರು ತರುಣರ ಕೈಯನ್ನು ಅವಲಂಬಿಸಿ ಉತ್ತಮವಾದ ಉದ್ಯಾನವನವನ್ನು ಕುರಿತು ಮೆಲ್ಲನೆ ಹೊಕ್ಕರಂತೆ. (ಮುಕ್ತ ತರುಣಿಯರಿಗೆ ದೇಹಾಯಾಸವು ವಾಸ್ತವವಾಗಿ ಇಲ್ಲ. ಹಾಗಿದ್ದರೂ, 'ಸ್ತನಭಾರದಿಂದ ಬೇಗನೆ ನಡೆಯಲಾಗಲಿಲ್ಲ'ವೆಂದು ಕವಿಗಳು ವರ್ಣಿಸಿದ್ದಾರೆ. ಕವಿಗಳು ಶೃಂಗಾರಾನುಭಾವಕ್ಕಾಗಿ ಸುಂದರಿಯರನ್ನು ಶೈಲಸ್ತನಿ, ಕುಂಭಸ್ತನಿ ಎಂದು ವರ್ಣಿಸುತ್ತಾರೆ. ಇದರಿಂದ ವಿಲಾಸಿಗಳು ಹಂಸಗಮನೆಯರಾದ ವಿಲಾಸಿನಿಯರೊಡನೆ ಹೂದೋಟಗಳಲ್ಲಿ ಸಂಚರಿಸುವ ವಿಲಾಸವನ್ನು ವರ್ಣಿಸಿದ್ದಂತಾಯಿತು.)

ವಿ:–ಸ್ವಾಸಾಂ ದಯಿತಾಃ ತೈಃ, ಕುಚಾನಾಂ ಭಾರಾಃ ಕುಚಭಾರಾಃ, ತೈಃ ನತಾಃ ಕುಚಭಾರನತಾಃ, ತೇಷಾಂ ಅವಲಂಬಃ ತದವಲಂಬಃ ತದವಲಂಬಸ್ಯ ಬಲಂ ತದವಲಂಬಬಲಂ ತಸ್ಮಾತ್, ಪರಮಂ ಚ ತತ್ ಉಪವನಂ ಚ ಪರಮೋಪವನಂ ತತ್ |

ಕ್ರಿ :—ವಿಶಂತಿ, ವಿಶತಿ ವಿಶತಃ ವಿಶಂತಿ ಇತ್ಯಾದಿ, ವಿಶ ಪ್ರವೇಶನೇ ಲಟ್.

ಹಸಿತಪ್ರಸೂನನಿಕರೋರುಭರ-
ಪ್ರಣಮತ್ಸುವರ್ಣಮಣಿಸರ್ವತರೂನ್ ।
ಉಪಗೂಹಯನ್ನಮೃತಸಿಂಧುಸಖಃ
ಪವನೋ ನ ಕಸ್ಯ ಸುಖಮೇಧಯತಿ ||೩೭||

ಅ:— ಹಸಿತಪ್ರಸೂನನಿಕರೋರುಭರಪ್ರಣಮತ್ಸುವರ್ಣಮಣಿ-ಸರ್ವ ತರೂನ್ ಉಪಗೂಹಯನ್ ಅಮೃತಸಿಂಧುಸಖಃ ಪವನಃ ಕಸ್ಯ ಸುಖಂ ನ ಏಧಯತಿ ?

ಅರ್ಥ:—ಹಸಿತಪ್ರಸೂನ = ಅರಳಿದ ಹೂವು ಮತ್ತು ಹಣ್ಣುಗಳ, ನಿಕರ = ಸಮೂಹದ, ಉರುಭರ = ಹೆಚ್ಚಾದ ಭಾರದಿಂದ, ಪ್ರಣಮತ್ = ಬಾಗಿದ, ಸುವರ್ಣಮಣಿ = ಭಂಗಾರ ಮತ್ತು ರತ್ನಮಯವಾದ, ಸರ್ವ-ತರೂನ್ = ಎಲ್ಲಾ ಮರಗಳನ್ನು, ಉಪಗೂಹಯನ್ = ಆಲಿಂಗಿಸುತ್ತಿರುವ, ಅಮೃತಸಿಂಧುಸಖಃ = ಅಮೃತ ಸಮುದ್ರಗಳಿಗೆ ಸ್ನೇಹಿತನಾದ, ಪವನಃ = ವಾಯುವು, ಕಸ್ಯ = ಯಾರಿಗೆ, ಸುಖಂ ನ ಏಧಯತಿ = ಆನಂದವನ್ನು ಹೆಚ್ಚಿಸುವುದಿಲ್ಲ ?

ತಾ :—ಆ ವೈಕುಂಠಲೋಕದ ಉದ್ಯಾನವನದಲ್ಲಿ ಸುವರ್ಣರತ್ನ ಮಯವಾದ ವೃಕ್ಷಗಳಿವೆ. ಅರಳಿದ ಹೂವುಗಳು ಮತ್ತು ಮಾಗಿದ ಫಲ ಗಳಿಂದ ಬಾಗಿದ ಆ ವೃಕ್ಷಗಳನ್ನು ಅಪ್ಪಿಕೊಂಡು, ಅರ ಮತ್ತು ಣ್ಯ ಎಂಬ ಅಮೃತ ಸಮುದ್ರಗಳಮೇಲೆ ಬೀಸಿ ಇತ್ತ ಬರುತ್ತಿರುವ ಅಲ್ಲಿಯ ಮುಕ್ತ ಪವನನು ಯಾರಿಗೆ ತಾನೇ ಆನಂದವನ್ನುಂಟು ಮಾಡುವುದಿಲ್ಲ ?

ವಿ:—ಹಸಿತಾನಿ ಚ ತಾನಿ ಪ್ರಸೂನಾನಿ ಚ ಹಸಿತಪ್ರಸೂನಾನಿ, ತೇಷಾಂ ನಿಕರಃ, ಉರುಶ್ಚಾಸೌ ಭರಶ್ಚ ಉರುಭರಃ ಹಸಿತಪ್ರಸೂನ-ನಿಕರಸ್ಯ ಉರುಭರಃ, ಹಸಿತಪ್ರಸೂನನಿಕರೋರುಭರೇಣ ಪ್ರಣಮಂತಃ, ಸುವರ್ಣಾನಿ ಚ ಮಣಯಶ್ಚ ಸುವರ್ಣಮಣಯಃ, ಸರ್ವೇ ಚ ತೇ ತರವಶ್ಚ ಸರ್ವತರವಃ ಸುವರ್ಣಮಣಿಮಯಾಶ್ಚ ತೇ ಸರ್ವತರವಶ್ಚ ಸುವರ್ಣಮಣಿಸರ್ವತರವಃ, ಹಸಿತಪ್ರಸೂನನಿಕರೋರುಭರಪ್ರಣಮಂತಶ್ಚ ತೇ ಸುವರ್ಣಮಣಿಸರ್ವತರವಶ್ಚ ಹಸಿತ... ತರವಃ ತಾನ್; ಅಮೃತ-ಮಯೌ ಚ ತೌ ಸಿಂಧೂ ಚ ಅಮೃತಸಿಂಧೂ, ತಯೋಃ ಸಖಾ ಅಮೃತ-ಸಿಂಧುಸಖಃ |

ಕ್ರಿ :—ಏಧಯತಿ ಏಧಯತಃ ಇತ್ಯಾದಿ ಏಧವೃದ್ಧೌ ಣಿಜಂತ ಲಟ್.

Rarest Archiver

ಅವ :—ವೈಕುಂಠಲೋಕದ ಉದ್ಯಾನವನವೇ ನಿಜವಾದ ನಂದನವನವೆಂದು ಹೇಳುತ್ತಾರೆ.

**ಉಪಚಾರನಂದನಮಿದಂ ದ್ಯುವನಂ**
**ನಿಯಮೇನ ನಂದಯತಿ ಯನ್ನ ಜನಂ ।**
**ಪರಮೇವ ನಂದನಮುಪೇಂದ್ರವನಂ**
**ಸಕಲಂ ಸದಾ ಯದಭಿನಂದಯತಿ** ॥೩೮॥

ಅ :—ಯತ್ ಜನಂ ನಿಯಮೇನ ನ ನಂದಯತಿ ತತ್ ಇದಂ ದ್ಯುವನಂ ಉಪಚಾರನಂದನಂ । ಯತ್ ಸದಾ ಸಕಲಾನ್ ಅಭಿನಂದಯತಿ ತತ್ ಪರಂ ಉಪೇಂದ್ರವನಂ ಏವ ನಂದನಂ ।

ಅರ್ಥ:—ಯತ್=ಯಾವ ಇಂದ್ರನ ನಂದನವನವು, ಜನಂ=ಜನರನ್ನು, ನಿಯಮೇನ=ನಿಶ್ಚಯವಾಗಿ (ಎಡೆಬಿಡದೆ), ನ ನಂದಯತಿ=ಸಂತೋಷಪಡಿಸುವುದಿಲ್ಲವೋ, ತತ್ ಇದಂ ದ್ಯುವನಂ=ಅಂತಹ ಸ್ವರ್ಗಲೋಕದ ಈ ವನವು, ಉಪಚಾರನಂದನಂ=ಉಪಚಾರಕ್ಕೆ (ಮೇಲ್ನೋಟಕ್ಕೆ) ನಂದನವನವು ; ಯತ್=ಯಾವ ಮುಕ್ತಲೋಕದ ಉದ್ಯಾನವನವು, ಸದಾ=ಯಾವಾಗಲೂ, ಸಕಲಾನ್=ಎಲ್ಲರನ್ನೂ, ಅಭಿನಂದಯತಿ=ಆನಂದಪಡಿಸುತ್ತದೆಯೋ, ತತ್=ಅದೇ, ಪರಂ=ಉತ್ತಮವಾದ, ಉಪೇಂದ್ರವನಂ ಏವ=ವಿಷ್ಣುಲೋಕದ ವನವೇ, ನಂದನಂ (ಭವತಿ)=ನಿಜವಾದ ನಂದನವನವಾಗಿರುತ್ತದೆ.

ತಾ :—ಶೇಷದೇವರು ಹೇಳುತ್ತಾರೆ—ಸನಕಾದಿಗಳಿರಾ ! ಸ್ವರ್ಗಲೋಕದ ಇಂದ್ರನ ಉದ್ಯಾನವನ್ನು ನಂದನವೆಂದು ಎಲ್ಲರೂ ಹೊಗಳುತ್ತಾರೆ. ಆದರೆ ಯಾವಾಗಲೂ ಎಡೆಬಿಡದೆ ಎಲ್ಲರನ್ನು ಅದು ಆನಂದಪಡಿಸುವುದಿಲ್ಲ. ಆದುದರಿಂದ 'ನಂದಯಿತುಂ ಶೀಲಂ ಅಸ್ಯ' ಸಂತೋಷಪಡಿಸುವ ಸ್ವಭಾವ ಉಳ್ಳದ್ದು ಎಂಬ ಅರ್ಥದಲ್ಲಿ ಆ ನಂದನವನವು ನಿಜವಾಗಿ ನಂದನವಲ್ಲ. ಔಪಚಾರಿಕವಾಗಿ ಅದನ್ನು ನಂದನವೆಂದು ಹೇಳಬಹುದು. ಆದರೆ ತನ್ನಲ್ಲಿಗೆ ಬರುವ ಸಕಲಮುಕ್ತರನ್ನೂ ಅನಂತಕಾಲದವರೆಗೆ ಆನಂದಪಡಿಸುವ ಉಪೇಂದ್ರನ ವನವೇ ನಿಜವಾದ ನಂದನವನವು.

Rarest Archiver

ವಿ:—ಉಪಚಾರೇಣ ನಂದನಂ ಉಪಚಾರನಂದನಂ, ದಿವಃ ವನಂ ದ್ಯುವನಂ, ಉಪೇಂದ್ರಸ್ಯ ವನಂ ಉಪೇಂದ್ರವನಂ ||

ಕ್ರಿ:—ನಂದಯತಿ ನಂದಯತಃ ನಂದಯಂತಿ ಇತ್ಯಾದಿ ; ಟುನದಿ (ನಂದ್) ಸಮೃದ್ಧೌ ಣಿಜಂತ (ಅಭಿ ಉ.ಪ.) ಲಟ್ ಪ್ರ.ಪು.ಏ.

**ವರಪಾರಿಭದ್ರಕಸುಕಲ್ಪತರು-**
**ವ್ರಜಪಾರಿಜಾತಹರಿಚಂದನವತ್ ।**
**ಸಹಿತಂ ಸಮಾದಿಪದತಾನನಗೈಃ**
**ಪರಿಭೂಷಯಂತಿ ತದಹೋ ಋತವಃ** ||೩೯||

ಅ:— ಋತವಃ ವರಪಾರಿಭದ್ರಕಸುಕಲ್ಪತರುವ್ರಜಪಾರಿಜಾತಹರಿ ಚಂದನವತ್ ಸಮಾದಿಪದತಾನನಗೈಃ ಸಹಿತಂ ತತ್ ಪರಿಭೂಷಯಂತಿ ಅಹೋ |

ಅರ್ಥ:—ಋತವಃ = ವಸಂತಾದಿಋತುಗಳು, ವರ = ಉತ್ತಮವಾದ ಪಾರಿಭದ್ರಕ = ಪಾರಿಭದ್ರಕವೆಂಬ ಹೆಸರಿನ ಮಂದಾರ, ಸುಕಲ್ಪತರುವ್ರಜ = ಒಳ್ಳೆಯ ಕಲ್ಪವೃಕ್ಷಗಳ ಸಮೂಹ, ಪಾರಿಜಾತ = ಪಾರಿಜಾತವೃಕ್ಷ, ಹರಿಚಂದನವತ್ = ಹರಿಚಂದನ ವೃಕ್ಷ ಇವುಗಳುಳ್ಳ, ಸಮಾದಿಪದ = 'ಸಂ' ಎಂಬ ಪದವು ಆದಿಪದವಾಗಿ ಉಳ್ಳ, ತಾನನಗೈಃ = ತಾನವೃಕ್ಷ (ಸಂತಾನ ವೃಕ್ಷ)ಗಳಿಂದ, ಸಹಿತಂ = ಕೂಡಿದ, ತತ್ = ಆ ಮುಕ್ತನಂದನವನ್ನು, ಪರಿಭೂಷಯಂತಿ = ಅಲಂಕರಿಸುತ್ತವೆ. ಅಹೋ = ಆಶ್ಚರ್ಯ.

ಕ್ರಿ:— ಪರಿ + ಭೂಷಯತಿ ಭೂಷಯತಃ ಭೂಷಯಂತಿ ಇತ್ಯಾದಿ ಭೂಷ ಅಲಂಕಾರೇ–ಲಟ್.

ವಿ:—ವರಾಶ್ಚ ತೇ ಪಾರಿಭದ್ರಕಾಶ್ಚ ವರಪಾರಿಭದ್ರಕಾಃ ಶೋಭನಾಶ್ಚ ತೇ ಕಲ್ಪತರವಶ್ಚ ಸುಕಲ್ಪತರವಃ, ವರಪಾರಿಭದ್ರಕಾಶ್ಚ ತೇ ಸುಕಲ್ಪತರವಶ್ಚ ವರಪಾರಿಭದ್ರಕಸುಕಲ್ಪತರವಃ, ವರ... ತರೂಣಾಂ ವ್ರಜಃ, ವರ ... ವ್ರಜಶ್ಚ ಪಾರಿಜಾತಾಶ್ಚ ಹರಿಚಂದನಾಶ್ಚ ವರಪಾರಿ ಹರಿ ಚಂದನಾಃ, ತೇ ಅಸ್ಮಿನ್ ಸಂತೀತಿ ವರ....ಚಂದನವತ್ ; ಸಂ ಆದಿಪದಂ

Rarest Archiver

ಯೇಷಾಂ ತೇ ಸಮಾದಿಪದಾಃ ಸಮಾದಿಪದಾಶ್ಚ ತೇ ತಾನಾಶ್ಚ ಸಮಾದಿ-ಪದತಾನಾಃ, ಸಮಾದಿಪದತಾನಾಶ್ಚ ತೇ ನಗಾಶ್ಚ ಸಮಾ.. ನಗಾಃ ತೈಃ ;

ಅವ:—ವಿಲಾಸಿಗಳ ಭೋಗಕ್ಕೆ ಅನುಕೂಲವಾದ ವಸಂತಋತುವು ವೈಕುಂಠದಲ್ಲಿ ಹೀಗಿದೆ—

ಸ್ಮಿತಮಾಧವೀಕುಸುಮರಮ್ಯತರೌ
ನವಚಂಪಕಾದಿಕುಸುಮೋಲ್ಲಸಿತೌ ।
ಮಧುಮಾಧವೌ ಮಧುಪಗೀರ್ಮಧುರೌ
ಮಧುಜಿತ್ಪ್ರಿಯಾನ್ ಪ್ರಮುದಮಾನಯತಃ ॥೪೦॥

ಅ :— ಸ್ಮಿತಮಾಧವೀಕುಸುಮರಮ್ಯತರೌ ನವಚಂಪಕಾದಿಕುಸು-ಮೋಲ್ಲಸಿತೌ ಮಧುಪಗೀರ್ಮಧುರೌ ಮಧುಮಾಧವೌ ಮಧುಜಿತ್-ಪ್ರಿಯಾನ್ ಪ್ರಮುದಂ ಆನಯತಃ ।

ಅರ್ಥ :— ಸ್ಮಿತ = ಅರಳಿದ, ಮಾಧವೀಕುಸುಮ = ಮಾಧವೀ ಹೂವುಗಳಿಂದ, ರಮ್ಯತರೌ = ಅತಿಶಯವಾಗಿ ಸುಂದರವಾದ, ನವ= ಹೊಸದಾದ, ಚಂಪಕ= ಸಂಪಿಗೆಯೇ, ಆದಿ= ಮೊದಲಾದ, ಕುಸುಮ = ಹೂವುಗಳಿಂದ, ಉಲ್ಲಸಿತೌ= ಶೋಭಿತವಾದ, ಮಧುಪ= ದುಂಬಿಗಳ, ಗೀಃ = ಸ್ವರಗಳಿಂದ, ಮಧುರೌ= ಮನೋಹರಗಳಾದ, ಮಧುಮಾಧವೌ = ಚೈತ್ರವೈಶಾಖಮಾಸಗಳು, ಮಧುಜಿತ್ಪ್ರಿಯಾನ್ = ಶ್ರೀಮನ್ನಾ-ರಾಯಣನ ಪ್ರೀತಿವಿಷಯರಾದ ಭಕ್ತರನ್ನು, ಪ್ರಮುದಂ= ಸಂತೋಷವನ್ನು ಆನಯತಃ = ಹೊಂದಿಸುತ್ತವೆ.

ತಾ :—ಚೈತ್ರವೈಶಾಖಮಾಸಗಳ ವಸಂತಋತುವಿನಲ್ಲಿ ವೈಕುಂಠದ ಉದ್ಯಾನದಲ್ಲಿ ಮಲ್ಲಿಗೆಹೂಗಳು ಅರಳಿರುತ್ತವೆ, ಹೊಸದಾದ ಸಂಪಿಗೆ ಮುಂತಾದ ಇನ್ನೂ ಅನೇಕ ಹೂವುಗಳಿಂದ ಆ ಉದ್ಯಾನವು ಅತ್ಯಂತ ಮನೋಹರವಾಗಿರುತ್ತದೆ. ಈ ವಸಂತಋತುವಿನಲ್ಲಿ ಸಂತಸದಿಂದ ದುಂಬಿಗಳು ಝೇಂಕರಿಸುತ್ತಾ ಇರುತ್ತವೆ. ಇಂತಹ ಋತುವು ಶ್ರೀಹರಿಯ

Rarest Archiver

ಭಕ್ತರಾದ ವಿಲಾಸಿಗಳನ್ನು ಆನಂದಗೊಳಿಸುತ್ತದೆ. (ಇಲ್ಲಿ ಮನ್ಮಥನ ಬಾಣಗಳಾದ ಹೂವುಗಳು, ವಿಲಾಸಿಗಳ ಮನಸ್ಸನ್ನು ಕೆಣಕುವ ದುಂಬಿಗಳ ಗಾನ-ಇವುಗಳನ್ನು ವರ್ಣಿಸಿರುತ್ತಾರೆ.)

ವಿ:—ಮಾಧವ್ಯಾಃ ಕುಸುಮಾನಿ ಮಾಧವೀಕುಸುಮಾನಿ, ಸ್ಮಿತಾನಿ ಚ ತಾನಿ ಮಾಧವೀಕುಸುಮಾನಿ ಚ ಸ್ಮಿತಮಾಧವೀಕುಸುಮಾನಿ, ಅತಿಶಯೇನ ರಮ್ಯೌ ರಮ್ಯತರೌ ಸ್ಮಿತಮಾಧವೀಕುಸುಮೈಃ ರಮ್ಯತರೌ ಸ್ಮಿತ....ತರೌ ; ಚಂಪಕಂ ಆದಿ ಯೇಷಾಂ ತಾನಿ ಚಂಪಕಾದೀನಿ ನವಾನಿ ಚ ತಾನಿ ಚಂಪಕಾದೀನಿಚ ನವಚಂಪಕಾದೀನಿ, ನವಚಂಪಕಾದೀನಿ ಚ ತಾನಿ ಕುಸುಮಾನಿಚ ನವಚಂಪಕಾದಿಕುಸುಮಾನಿ ನವಚಂಪಕಾದಿ ಕುಸುಮೈಃ ಉಲ್ಲಸಿತೌ ನವಚಂಪಕಾದಿಕುಸುಮೋಲ್ಲಸಿತೌ,ಮಧುಶ್ಚ ಮಾಧವಶ್ಚ ಮಧುಮಾಧವೌ; ಮಧು ಪಿಬಂತೀತಿ ಮಧುಪಾಃ ಮಧುಪಾನಾಂ ಗಿರಃ ಮಧುಪಗಿರಃ ಮಧುಪಗೀರ್ಭಿಃ ಮಧುರೌ ಮಧುಪಗೀರ್ಮಧುರೌ, ಮಧುಂ ಜಯತೀತಿ ಮಧುಜಿತ್, ಮಧುಜಿತಃ ಪ್ರಿಯಾಃ ಮಧುಜಿತ್ ಪ್ರಿಯಾಃ ತಾನ್ ;

ಕ್ರಿ:—ಆ+ನಯತಃ, ನಯತಿ ನಯತಃ ನಯಂತಿ ಇತ್ಯಾದಿ. ಣೀಞ್ (ನೀ) ಪ್ರಾಪಣೇ ಲಟ್—

ಅವ :—ವೈಕುಂಠದಲ್ಲಿ ಗ್ರೀಷ್ಮ ಋತುವಿನ ಭೋಗಗಳು-ಹೀಗಿವೆ

**ನವಮಲ್ಲಿಕಾಸ್ರಜಮಭೀಷ್ಟತಮಃ**
**ಶುಚಿಸಂಭವಾಂ ಪ್ರಣಯಿನೀಶಿರಸಿ ।**
**ಕಲಯನ್ ಸ್ವಯಂ ನ ಕುಶಲೇತಿ ಕಿಲ**
**ಪ್ರತಿಘಟ್ಟಯತ್ಯುರುಕುಚಾವುರಸಾ** ||೪೧||

ಅ :—ಅಭೀಷ್ಟತಮಃ ಶುಚಿಸಂಭವಾಂ ನವಮಲ್ಲಿಕಾಸ್ರಜಂ ನ ಕುಶಲಾ ಇತಿ ಕಿಲ ಸ್ವಯಂ ಪ್ರಣಿಯಿನೀಶಿರಸಿ ಕಲಯನ್ ಉರಸಾ ಉರುಕುಚೌ ಪ್ರತಿಘಟ್ಟಯತಿ ।

Rarest Archiver

**ಅರ್ಥ** :—ಅಭೀಷ್ಟತಮಃ=ಅತ್ಯಂತಪ್ರಿಯನಾದ ಪತಿಯು, ಶುಚಿಸಂಭವಾಂ=ಜ್ಯೇಷ್ಠಮಾಸದಲ್ಲಿ ಉತ್ಪನ್ನವಾದ, ನವಮಲ್ಲಿಕಾಸ್ರಜಂ=ಹೊಸಮಲ್ಲಿಗೆಹೂವಿನ ಮಾಲೆಯನ್ನು, ನ ಕುಶಲಾ ಇತಿ ಕಿಲ=(ನೀನು ಹೂವಿನ ಮಾಲೆಯನ್ನು ಮುಡಿಯಲು) ಸಮರ್ಥಳಲ್ಲ ಎಂಬಂತೆ, ಸ್ವಯಂ=ಸ್ವತಃ, ಪ್ರಣಯಿನೀಶಿರಸಿ=ಪ್ರೇಯಸಿಯ ತಲೆಯಲ್ಲಿ, ಕಲಯನ್=ಮುಡಿಸುತ್ತಾ, ಉರಸಾ=ಎದೆಯಿಂದ, ಉರುಕುಚೌ=ದೊಡ್ಡಸ್ತನಗಳನ್ನು, ಪ್ರತಿಘಟ್ಟಯತಿ=ಘಟ್ಟಿಸುತ್ತಾನೆ. (ಆಲಿಂಗಿಸುತ್ತಾನೆ.)

**ತಾ** :—ಆ ಉದ್ಯಾನವನದಲ್ಲಿ ಪ್ರಿಯೆಯು ಗ್ರೀಷ್ಮಋತುವಿನಲ್ಲಿ ಅರಳಿದ ಮಲ್ಲಿಗೆಹೂವಿನ ಮಾಲೆಯನ್ನು ತನ್ನೆರಡುಕೈಗಳನ್ನೂ ಹಿಂದೆ ತೆಗೆದುಕೊಂಡು ಹೋಗಿ ಮುಡಿಯಲು ಪ್ರಯತ್ನಿಸುತ್ತಾಳೆ. ಆಗ ಪ್ರಿಯತಮನು ಪ್ರಿಯಳೇ, ನಿನಗೆ ಹಿಂದೆ ಇರುವ ಮುಡಿಯಲ್ಲಿ ಮಾಲೆಯನ್ನು ಮುಡಿಯಲು ಕಾಣಿಸದು, ತಿಳಿಯದು-ನಾನೇ ಮುಡಿಸುತ್ತೇನೆಂದು ಅವಳ ಎದುರುನಿಂತು ಅವಳ ಮುಡಿಯಲ್ಲಿ ಹೂಮಾಲೆಯನ್ನು ಮುಡಿಸುವ ನೆವದಿಂದ, ಅವಳ ದೊಡ್ಡಸ್ತನಗಳನ್ನು ತನ್ನ ಎದೆಯಿಂದ ಘಟ್ಟಿಸುತ್ತಾನೆ-ಅವಳನ್ನು ಬಿಗಿಯಾಗಿ ಅಪ್ಪಿಕೊಳ್ಳುತ್ತಾನೆ.

**ವಿ**:—ಮಲ್ಲಿಕಾನಾಂ ಸ್ರಕ್ ಮಲ್ಲಿಕಾಸ್ರಕ್, ನವಾ ಚ ಸಾ ಮಲ್ಲಿಕಾಸ್ರಕ್ ಚ ನವಮಲ್ಲಿಕಾಸ್ರಕ್ ತಾಂ, ಅತಿಶಯೇನ ಅಭೀಷ್ಟಃ ಅಭೀಷ್ಟತಮಃ | ಶುಚೌ ಸಂಭವಃ ಯಸ್ಯಾಃ ಸಾ ಶುಚಿಸಂಭವಾ ತಾಂ, ಪ್ರಣಯಃ ಅಸ್ಯಾಃ ಅಸ್ತೀತಿ ಪ್ರಣಯಿನೀ, ತಸ್ಯಾಃ ಶಿರಃ ಪ್ರಣಯಿನೀಶಿರಃ ತಸ್ಮಿನ್ | ಉರೂ ಚ ತೌ ಕುಚೌ ಚ ಉರುಕುಚೌ ತೌ |

**ಕ್ರಿ** :—ಘಟ್ಟಯತಿ ಘಟ್ಟಯತಃ ಘಟ್ಟಯಂತಿ ಇತ್ಯಾದಿ, ಘಟ್ಟ ಚಲನೇ ಲಟ್ ಪ್ರತಿ ಉಪ.

**ಅವ** :—ಮಳೆಗಾಲದ ಗುಣವನ್ನು ವರ್ಣಿಸುತ್ತಾರೆ—

**ಮಧುರಸ್ವರಾಸ್ತತಪತತ್ರತತಿ-**
**ಪ್ರಕಟಾಂತಪಂಕ್ತಿಧೃತನೇತ್ರರುಚಃ |**

Rarest Archiver

ಶಿಖಿನೋऽನುಯಾಂತಿ ಹಿ ಸಹಸ್ರದೃಶಂ
ಜಲದರ್ತುಲಕ್ಷ್ಮನಿಜನೃತ್ತಮಹೇ ॥೪೨॥

ಅ: — ಮಧುರಸ್ವರಾಃ ತತಪತತ್ರತತಿಪ್ರಕಟಾಂತಪಂಕ್ತಿಧೃತನೇತ್ರರುಚಃ ಶಿಖಿನಃ ಜಲದರ್ತುಲಕ್ಷ್ಮನಿಜನೃತ್ತಮಹೇ ಸಹಸ್ರದೃಶಂ ಅನುಯಾಂತಿ ಹಿ.

**ಅರ್ಥ :**— ಮಧುರಸ್ವರಾಃ = ಇಂಪಾದ ಧ್ವನಿಯುಳ್ಳ, ತತ.... ರುಚಃ, ತತ = ಹರಡಿದ, ಪತತ್ರ = ರೆಕ್ಕೆಗಳ, ತತಿ = ಸಮೂಹಗಳಲ್ಲಿ, ಪ್ರಕಟ = ಸ್ಪಷ್ಟವಾಗಿ ಕಾಣುವ, ಅಂತ = ಗರಿಗಳ ಕೊನೆಗಳಲ್ಲಿರುವ ವರ್ತುಲಾಕಾರಗಳ, ಪಂಕ್ತಿ = ಸಾಲುಗಳಲ್ಲಿ, ಧೃತ = ಧರಿಸಲ್ಪಟ್ಟ, ನೇತ್ರರುಚಃ = ಕಣ್ಣುಗಳ ಕಾಂತಿಗಳುಳ್ಳ, ಶಿಖಿನಃ = ನವಿಲುಗಳು, ಜಲದರ್ತು = ವರ್ಷಾಕಾಲದ, ಲಕ್ಷ್ಮ = ಚಿಹ್ನೆಯಾಗಿರುವ, ನಿಜ = ತಮ್ಮ, ನೃತ್ತಮಹೇ = ನರ್ತನವೆಂಬ ಉತ್ಸವದಲ್ಲಿ, ಸಹಸ್ರದೃಶಂ = ಇಂದ್ರನನ್ನು, ಅನುಯಾಂತಿ ಹಿ = ಹೋಲುತ್ತವೆಯಷ್ಟೆ.

**ತಾ:**—ಆ ವೈಕುಂಠದಲ್ಲಿ ಕಿವಿಗಿಂಪಾದ ಧ್ವನಿಯುಳ್ಳ ಮುಕ್ತವಾದ ನವಿಲುಗಳು ವರ್ಷಋತುವಿನ ಚಿಹ್ನೆಯಾದ ತಮ್ಮ ನರ್ತನ ಕ್ರೀಡೆಯನ್ನು ಮಾಡಲಾರಂಭಿಸುತ್ತವೆ. ಆಗ ಅವುಗಳು ತಮ್ಮ ಹಿಂಭಾಗದ ಗರಿಗಳನ್ನು ಎತ್ತರಿಸಿ ಸಾಲಾಗಿ ಅರಳಿಸುತ್ತವೆ. ಆ ಗರಿಗಳ ತುದಿಯಲ್ಲಿ ಕಣ್ಣಿನಂತಹ ಚಿಹ್ನೆಗಳಿವೆ. ಆಗ ಆ ಗರಿಗಳು ಸಾವಿರಕಣ್ಣಿನ ದೇವೇಂದ್ರನ ಕಣ್ಣುಗಳನ್ನು ಅನುಕರಿಸುತ್ತವೆ. ಗರಿಗಳ ತುದಿಗಳಲ್ಲಿ ಕಾಣುವ ಕಣ್ಣುಗಳಿಂದ ನವಿಲುಗಳು ಸಹಸ್ರಾಕ್ಷನಾದ (ಸಾವಿರಕಣ್ಣುಗಳುಳ್ಳ) ದೇವೇಂದ್ರನಂತೆ ತೋರಿದುವು. ಎಂದು ಭಾವ. ನವಿಲುಗಳು ಮಳೆಗಾಲದಲ್ಲಿ ಮೋಡಗಳನ್ನು ಕಂಡು, ಗುಡುಗಿನ ಸದ್ದನ್ನು ಕೇಳಿ ಕುಣಿಯಲಾರಂಭಿಸುತ್ತವೆ. ಇದು ವರ್ಷ ಋತುವಿನ ಒಂದು ಗುಣ.

ವಿ: —ಮಧುರಃ ಸ್ವರಃ ಯೇಷಾಂ ತೇ ಮಧುರಸ್ವರಾಃ, ತತಾನಿ ಚ ತಾನಿ ಪತತ್ರಾಣಿ ಚ ತತಪತತ್ರಾಣಿ, ತತಪತತ್ರಾಣಾಂ ತತಯಃ

Rarest Archiver

ತತಪತತ್ರತತಿಷು ಪ್ರಕಟಾಶ್ಚ ತೇ ಅಂತಾಶ್ಚ, ತತಪತತ್ರತತಿಪ್ರಕಟಾಂತಾನಾಂ ಪಂಕ್ತಯಃ ತತಪತತ್ರತತಿಪ್ರಕಟಾಂತಪಂಕ್ತಯಃ, ತತ.... ಪಂಕ್ತಿಷು ಧೃತಾಃ ನೇತ್ರಾಣಾಂ ರುಚಯಃ ಯೈಃ ತೇ ತತ.... ರುಚಃ, ಶಿಖಾ ಏಷಾಂ ಅಸ್ತೀತಿ ಶಿಖಿನಃ, 'ಶಿಖಾವಲಃ ಶಿಖೀ ಕೇಕೀ'-ಅಮರ. ಸಹಸ್ರಂ ದೃಶಃ ಯಸ್ಯ ಸಃ ಸಹಸ್ರದೃಕ್ ತಂ, 'ಆಖಂಡಲಃ ಸಹಸ್ರಾಕ್ಷಃ'-ಅಮರ. ಜಲಂ ದದಾತೀತಿ ಜಲದಃ ಜಲದಶ್ಚಾಸೌ ಋತುಶ್ಚ ಜಲದರ್ತುಃ ಜಲದರ್ತೋಃ ಲಕ್ಷ್ಮ ಜಲದುರ್ತುಲಕ್ಷ್ಮ, ನಿಜಂ ಚ ತತ್ ನೃತ್ತಂ ಚ ನಿಜನೃತ್ತಂ ನಿಜನೃತ್ತಂ ಚಾಸೌ ಮಹಶ್ಚ, ಜಲದರ್ತುಲಕ್ಷ್ಮ ಚ ಅಸೌ ನಿಜನೃತ್ತಮಹಶ್ಚ ಜಲದ....ಮಹಃ ತಸ್ಮಿನ್ ।

**ಕ್ರಿ:**—ಅನು+ಯಾಂತಿ, ಯಾತಿ ಯಾತಃ ಯಾಂತಿ ಇತ್ಯಾದಿ, ಯಾ ಪ್ರಾಪಣೇ ಅನು. ಉಪ. ಲಟ್.

**ಅವ :**— ವೈಕುಂಠದಲ್ಲಿ ಶರದೃತು - (ಆಶ್ವಿಜಕಾರ್ತಿಕಮಾಸಗಳು) ಹೀಗಿದೆ—

**ಶರದೋಲ್ಲಸತ್ಕುವಲಯೇಕ್ಷಣಯಾ**
**ವಿಕಚಾರವಿಂದರುಚಿರಾನನಯಾ ।**
**ಪ್ರಿಯಯಾ ಚ ಶೋಭನಶುಕಸ್ವನಯಾ**
**ರಮತೇ ಜನೋ ಮುಖರಹಂಸಕಯಾ** ॥೪೩॥

**ಅ:**—ಜನಃ ಉಲ್ಲಸತ್ಕುವಲಯೇಕ್ಷಣಯಾ, ವಿಕಚಾರವಿಂದ-ರುಚಿರಾನನಯಾ, ಶೋಭನಶುಕಸ್ವನಯಾ ಮುಖರಹಂಸಕಯಾ ಶರದಾ ಪ್ರಿಯಯಾ ಚ ರಮತೇ.

**ಅರ್ಥ :**—ಜನಃ=ಮುಕ್ತಜೀವನು, ಉಲ್ಲಸತ್=ಅರಳಿಶೋಭಿಸುತ್ತಿರುವ, ಕುವಲಯೇಕ್ಷಣಯಾ = ಕನ್ನೈದಿಲೆಹೂವೆಂಬ ಕಣ್ಣುಗಳುಳ್ಳ (ಅರಳಿರುವ ಕನ್ನೈದಿಲೆಹೂವಿನಂತಹ ಕಣ್ಣುಗಳುಳ್ಳ.) ವಿಕಚಾರವಿಂದ-ರುಚಿರಾನನಯಾ = ಅರಳಿರುವ ಕಮಲವೆಂಬ ಮನೋಹರವಾದ ಮುಖವುಳ್ಳ, (ಅರಳಿರುವ ಕಮಲದಂತೆ ಮನೋಹರವಾದ ಮುಖವುಳ್ಳ)

Rarest Archiver

ಶೋಭನಶುಕಸ್ವನಯಾ = ಗಿಳಿಗಳ ಇಂಪಾದ ಧ್ವನಿಯುಳ್ಳ, (ಗಿಳಿಯ ಸ್ವರದಂತೆ ಇಂಪಾದ ಸ್ವರವುಳ್ಳ) ಮುಖರಹಂಸಕಯಾ = ಸದ್ದು ಮಾಡುತ್ತಿರುವ ಹಂಸಗಳುಳ್ಳ (ಸದ್ದು ಮಾಡುತ್ತಿರುವ ಕಾಲ್ಗೆಜ್ಜೆಯುಳ್ಳ) ಶರದಾ ಚ=ಶರತ್ಕಾಲದಿಂದಲೂ ಮತ್ತು, ಪ್ರಿಯಯಾ (ಸಹ)=ಪ್ರೇಯಸಿಯಿಂದಲೂ (ಕೂಡಿಕೊಂಡು) ರಮತೇ=ವಿಹರಿಸುತ್ತಾನೆ.

**ತಾ:**—ಆ ವೈಕುಂಠದಲ್ಲಿ ಮುಕ್ತರಾದ ವಿಲಾಸಿಜೀವರು ಅರಳಿದ ಕನ್ನೈದಿಲೆಗಳೆಂಬ ಕಣ್ಣುಗಳಿಂದ ಕೂಡಿದ, ಅರಳಿದ ತಾವರೆಗಳೆಂಬ ಸುಂದರಮುಖವುಳ್ಳ, ಇಂಪಾದ ಗಿಳಿಗಳ ಶಬ್ದಗಳೆಂಬ ಮಾತುಗಳುಳ್ಳ, ಧ್ವನಿಮಾಡುತ್ತಿರುವ ಹಂಸಪಕ್ಷಿಗಳುಳ್ಳ ಶರದೃತುವಿನಿಂದ ಸಂತೋಷಪಟ್ಟು, ಅರಳಿದ ಕನ್ನೈದಿಲೆಯಂತಹ ಕಣ್ಣುಗಳುಳ್ಳ, ಅರಳಿದ ತಾವರೆಯಂತಹ ಮುಖವುಳ್ಳ, ಗಿಳಿಯ ಮಾತಿನಂತಹ ಮಾತುಗಳುಳ್ಳ, ಶಬ್ದಮಾಡುವ ಪೈಜಣಿಗಳುಳ್ಳ, ತಮ್ಮ ಕಾಂತೆಯರೊಡನೆ ವಿಹರಿಸುತ್ತಾರೆ.

**ವಿ:**—ಉಲ್ಲಸಂತಿ ಕುವಲಯಾನ್ಯೇವ ಈಕ್ಷಣಾನಿ ಯಸ್ಯಾಃ ಸಾ ಉಲ್ಲಸತ್ಕುವಲಯೇಕ್ಷಣಾ (ಉಲ್ಲಸತ್ಕುವಲಯವತ್ ಈಕ್ಷಣಂ ಯಸ್ಯಾಃ ಸಾ) ತಯಾ, ವಿಕಚಾನಿ ಚ ತಾನಿ ಅರವಿಂದಾನಿ ಚ ವಿಕಚಾರವಿಂದಾನಿ ವಿಕಚಾರವಿಂದಾನ್ಯೇವ ರುಚಿರಂ ಆನನಂ ಯಸ್ಯಾಃಸಾ (ವಿಕಚಾರವಿಂದವತ್ ರುಚಿರಂ ಆನನಂ ಯಸ್ಯಾಃ ಸಾ) ತಯಾ, ಶುಕಾನಾಂ ಸ್ವನಃ ಶುಕಸ್ವನಃ, ಶೋಭನಃ ಶುಕಸ್ವನ ಏವ ಸ್ವನಃ ಯಸ್ಯಾಃ ಸಾ (ಶೋಭನಃ ಶುಕಸ್ವನ ಇವ ಸ್ವನಃ ಯಸ್ಯಾಃ ಸಾ) ತಯಾ, ಮುಖರಾಃ ಹಂಸಾಃ ಯಸ್ಯಾಂ ಸಾ (ಮುಖರಃ ಹಂಸಕಃ ಯಸ್ಯಾಃ ಸಾ) ತಯಾ- ಹಂಸಕ=ಕಾಲ್ಗೆಜ್ಜೆ ; ಹಂಸಕಃ ಪಾದಕಟಕಃ-ಅಮರ.

**ಕ್ರಿ:**—ರಮತೇ ರಮೇತೇ ರಮಂತೇ, ರಮಸೇ ರಮೇಥೇ ರಮಧ್ವೇ, ರಮೇ ರಮಾವಹೇ ರಮಾಮಹೇ ; ರಮು ಕ್ರೀಡಾಯಾಂ ಆತ್ಮನೇ. ಲಟ್.

**ಅವ:**—ಹೇಮಂತ ಶಿಶಿರಋತುಗಳನ್ನು ಸೇರಿಸಿ ವರ್ಣಿಸುತ್ತಾರೆ—

**ಅಭಿನಂದಯನ್ ಹಿಮಋತುಂ ಸುಸಖಾ**
**ಸ್ಫಟಿಕಾಚಲಚ್ಛಲಹಿಮಾಧಿಕೃತಂ ।**

Rarest Archiver

**ಫಲಿನೀಕುಲಂ ಕುಸುಮಯಞ್ಶಿಶಿರೋ**
**ಹಸತೀವ ಫುಲ್ಲನವಕುಂದರುಚಾ ||೪೪||**

**ಅ :—** ಸ್ಫಟಿಕಾಚಲಚ್ಛಲಹಿಮಾಧಿಕೃತಂ ಹಿಮಋತುಂ ಅಭಿನಂದಯನ್ ಸುಸಖಾ ಫಲಿನೀಕುಲಂ ಕುಸುಮಯನ್ ಶಿಶಿರಃ ಫುಲ್ಲನವಕುಂದರುಚಾ ಹಸತೀವ |

**ಅರ್ಥ:—**ಸ್ಫಟಿಕಾಚಲಚ್ಛಲ = ಸ್ಫಟಿಕದ ಪರ್ವತವೆಂಬ ನೆಪದಿಂದ, ಹಿಮಾಧಿಕೃತಂ = ಹಿಮದಿಂದ ವ್ಯಾಪ್ತವಾದ, ಹಿಮಋತುಂ = ಹೇಮಂತ ಋತುವನ್ನು, ಅಭಿನಂದಯನ್ = ಸಂತೋಷಗೊಳಿಸುತ್ತಿರುವ, ಸುಸಖಾ = ಒಳ್ಳೆಯ ಸ್ನೇಹಿತನಾದ, ಫಲಿನೀಕುಲಂ = ಬೆಣ್ಣೆಬಿದುರುಸೊಪ್ಪಿನ ಪೊದೆಯನ್ನು, ಕುಸುಮಯನ್ = ಹೂಬಿಡುವಂತೆ ಮಾಡುತ್ತಿರುವ, ಶಿಶಿರಃ = ಶಿಶಿರಋತುವು, ಫುಲ್ಲ = ಅರಳಿದ, ನವ = ಹೊಸದಾದ, ಕುಂದರುಚಾ = ಮಾಗಿ ಮಲ್ಲಿಗೆಯ ಕಾಂತಿಯಿಂದ, ಹಸತೀವ = ನಗುತ್ತಿರುವಂತೆ ಇದೆ.

**ತಾ :—**ಸ್ಫಟಿಕದ ಪರ್ವತದಂತಿರುವ ಮಂಜಿನಿಂದ ವ್ಯಾಪ್ತವಾದ ಹೇಮಂತಋತುವನ್ನು ಆನಂದಪಡಿಸುತ್ತಾ, ಆ ಹೇಮಂತಋತುವಿನ ಮಿತ್ರನಾದ ಶಿಶಿರಋತುವು ಬೆಣ್ಣೆಬಿದುರುಸೊಪ್ಪಿನ ಗಿಡಗಳಲ್ಲಿ ಹೂವನ್ನು ಉಂಟುಮಾಡುತ್ತದೆ. ಅದು ಅರಳಿದ ಮಾಗಿಮಲ್ಲಿಗೆ ಹೂವುಗಳಿಂದ ವಿರಾಜಿಸುತ್ತಾ ನಗುವಂತೆ ತೋರುತ್ತದೆ.

**ವಿ:—**ಹಿಮಶ್ಚಾಸೌ ಋತುಶ್ಚ ತಂ, ಶೋಭನಶ್ಚಾಸೌ ಸಖಾ ಚ ಸುಸಖಾ, 'ನ ಪೂಜನಾತ್' ಎಂದು ಸಮಾಸಾಂತಪ್ರತ್ಯಯನಿಷೇಧ. ಸ್ಫಟಿಕಮಯಶ್ಚಾಸೌ ಅಚಲಶ್ಚ, ಸ್ಫಟಿಕಾಚಲಸ್ಯ ಛಲಂ, ಸ್ಫಟಿಕಾಚಲಚ್ಛಲೇನ ಹಿಮೇನ ಅಧಿಕೃತಃ ಸ್ಫಟಿಕಾ....ಧಿಕೃತಃ ತಂ, ಫಲಿನ್ಯಾಃ ಕುಲಂ ಇತಿ, ಫುಲ್ಲಾನಿ ಚ ತಾನಿ ನವಾನಿ ಚ ತಾನಿ ಕುಂದಾನಿ ಚ, ಫುಲ್ಲನವಕುಂದಾನಾಂ ರುಕ್ ತಯಾ ;

**ಕ್ರಿ:—**ಹಸತಿ ಹಸತಃ ಹಸಂತಿ ಇತ್ಯಾದಿ ಹಸೇ ಹಸನೇ ಲಟ್.

Rarest Archiver

ಅವ:—ಸಂಸಾರದಲ್ಲಿರುವಂತೆ ವೈಕುಂಠದಲ್ಲಿ ಎಲ್ಲಾ ಋತುಗಳಿದ್ದರೂ ಆಯಾ ಋತುಗಳ ದೋಷಗಳಿಲ್ಲ—

ಹಿಮಶೀತವರ್ಷಪರಿತಾಪಪುರ-
ಸ್ಸರದೋಷಮೂಲಮಿಹ ನರ್ತುಗಣಃ |
ಪ್ರಿಯಮೇವ ಸಾಧಯತಿ ನಿತ್ಯಮಹೋ
ಸ ವಿಮುಕ್ತಿಮಾನಿತಿ ವಿಮುಕ್ತಿಮತಾಂ ||೪೫||

ಅ:—ಇಹ ಋತುಗಣಃ ಹಿಮಶೀತವರ್ಷಪರಿತಾಪಪುರಸ್ಸರದೋಷ-ಮೂಲಂ ನ. ವಿಮುಕ್ತಿಮತಾಂ ನಿತ್ಯಂ ಪ್ರಿಯಂ ಏವ ಸಾಧಯತಿ ; ಇತಿ ಸಃ ವಿಮುಕ್ತಿಮಾನ್ ಅಹೋ.

ಅರ್ಥ:—ಇಹ = ಈ ವೈಕುಂಠಲೋಕದಲ್ಲಿ ಋತುಗಣಃ = ವಸಂತ ಮೊದಲಾದ ಋತುಗಳ ಸಮೂಹವು, ಹಿಮ = ಮಂಜು, ಶೀತ = ಥಂಡಿ, ವರ್ಷ = ಮಳೆ, ಪರಿತಾಪ = ಬಿಸಿಲಿನ ಬೇಗೆ, ಪುರಸ್ಸರ = ಇವೇ ಮೊದಲಾಗಿ ಉಳ್ಳ, ದೋಷ = ದೋಷಗಳಿಗೆ, ಮೂಲಂ ನ = ಕಾರಣವಾದುದಲ್ಲ. ವಿಮುಕ್ತಿಮತಾಂ = ಮುಕ್ತರಿಗೆ, ನಿತ್ಯಂ = ಯಾವಾಗಲೂ, ಪ್ರಿಯಂ ಏವ = ಸುಖವನ್ನೇ, ಸಾಧಯತಿ = ಉಂಟುಮಾಡುತ್ತದೆ. ಇತಿ = ಈ ಕಾರಣದಿಂದ, ಸಃ = ಆ ಋತುಸಮೂಹವು, ವಿಮುಕ್ತಿಮಾನ್ = ದೋಷವಿಲ್ಲದ್ದರಿಂದ ಮೋಕ್ಷವುಳ್ಳದ್ದು, ಅಹೋ = ಆಶ್ಚರ್ಯವು.

ತಾ:—ಈ ವೈಕುಂಠದಲ್ಲಿ ವಸಂತಾದಿಋತುಗಳ ಸಮೂಹದಲ್ಲಿ ಮುಕ್ತರಿಗೆ ಬಿಸಿಲಿನಿಂದಾಗುವ ತಾಪ (ಸೆಖೆ) ಮಳೆಗಾಲದ ಮಳೆಯ ತೊಂದರೆ, ಚಳಿಗಾಲದ ಮಂಜು, ಶೀತ ಮುಂತಾದ ದೋಷಗಳು ಯಾವುದೂ ಇರುವುದಿಲ್ಲ. ಆ ಲೋಕದಲ್ಲಿ ಎಲ್ಲಾ ಋತುಗಳೂ ಮುಕ್ತರಿಗೆ ಸೌಖ್ಯವನ್ನೇ ಉಂಟುಮಾಡುವುವು. ಹೀಗೆ ದೋಷವಿಲ್ಲದ್ದರಿಂದ ಆ ಋತುಗಳು ಮುಕ್ತಿಯನ್ನೇ ಪಡೆದಿವೆ ಎಂದು ಪ್ರಮಾಣಸಿದ್ಧವಾಗಿದೆ. ಹೀಗೆ ವೈಕುಂಠ ಲೋಕವು ಆಶ್ಚರ್ಯಕರವಾದುದು.

ವಿ:—ಹಿಮಂ ಚ ಶೀತಂ ಚ ವರ್ಷಂ ಚ ಪರಿತಾಪಶ್ಚ ಹಿಮಶೀತ-

Rarest Archiver

ವರ್ಷಪರಿತಾಪಾಃ ತ ಏವ ಪುರಸ್ಸರಾ ಯೇಷಾಂ ತೇ ಹಿಮ....ಪುರಸ್ಸರಾಃ, ತೇ ಚ ತೇ ದೋಷಾಶ್ಚ, ತೇಷಾಂ ಮೂಲಂ ಹಿಮ....ಮೂಲಂ, ಋತೂನಾಂ ಗಣಃ ಋತುಗಣಃ, ವಿಮುಕ್ತಿಃ ಅಸ್ಯ ಅಸ್ತೀತಿ ವಿಮುಕ್ತಿಮಾನ್, ವಿಮುಕ್ತಿಃ ಏಷಾಂ ಅಸ್ತೀತಿ ವಿಮುಕ್ತಿಮಂತಃ ತೇಷಾಂ.

ಕ್ರಿ :—ಸಾಧಯತಿ ಸಾಧಯತಃ ಸಾಧಯಂತಿ ಇತ್ಯಾದಿ. ಸಾಧ ಸಂಸಿದ್ಧೌ ಸ್ವಾರ್ಥಿಕಣಿಜಂತ ಲಟ್.

ಅವ :—ಮುಕ್ತರೂ ದೇವರಿಗೆ ನೈವೇದ್ಯವನ್ನು ಮಾಡುತ್ತಾರೆ—

ಅಮೃತಸ್ರಗುತ್ತಮಫಲಪ್ರಸವಾ-
ನಮೃತಾಯ ತತ್ರ ಜನತಾರ್ಪಯತಿ ।
ಉಪಭೋಕ್ತುಮಪ್ಯವಿಧಿಬಂಧವಶಾ
ಪ್ರಕೃತಿಂ ಪ್ರಯಾತಿ ಸಕಲೋಽಪಿ ಸದಾ ॥೪೬॥

ಅ :—ತತ್ರ ಜನತಾ ಅವಿಧಿಬಂಧವಶಾ ಅಪಿ ಉಪಭೋಕ್ತುಂ ಅಮೃತಸ್ರಗುತ್ತಮಫಲಪ್ರಸವಾನ್ ಅಮೃತಾಯ ಅರ್ಪಯತಿ । ಸಕಲಃ ಅಪಿ ಸದಾ ಪ್ರಕೃತಿಂ ಪ್ರಯಾತಿ ।

ಅರ್ಥ:—ತತ್ರ = ಆ ವೈಕುಂಠಲೋಕದಲ್ಲಿ, ಜನತಾ = ಮುಕ್ತಜೀವ ಸಮೂಹವು, ಅವಿಧಿಬಂಧವಶಾ ಅಪಿ = ವೇದ ಮತ್ತು ಸ್ಮೃತಿಗಳಲ್ಲಿ ವಿಹಿತ ವಾದ ನಿಯಮಗಳಿಗೆ (ಕಟ್ಟುಪಾಡಿಗೆ) ಅಧೀನವಲ್ಲದಿದ್ದಾಗ್ಯೂ, ಉಪ-ಭೋಕ್ತುಂ = ಅನುಭವಿಸುವುದಕ್ಕಾಗಿ, ಅಮೃತ = ಅಮೃತವು, ಸ್ರಕ್ = ಹೂಮಾಲೆ, ಉತ್ತಮಫಲ = ಉತ್ತಮವಾದ ಹಣ್ಣು, ಪ್ರಸವಾನ್ = ಹೂವು ಇವುಗಳನ್ನು, ಅಮೃತಾಯ = ಅನಾದಿಮುಕ್ತನಾದ ಶ್ರೀಹರಿಗೆ, ಅರ್ಪಯತಿ = ಸಮರ್ಪಿಸುತ್ತದೆ. ಸಕಲಃ ಅಪಿ = ಎಲ್ಲರೂ, ಸದಾ = ಯಾವಾಗಲೂ, ಪ್ರಕೃತಿಂ = ತಮ್ಮ ಸ್ವಭಾವವನ್ನು, ಪ್ರಯಾತಿ = ಹೊಂದುತ್ತಾರೆ.

ತಾ:—ಆ ವೈಕುಂಠದಲ್ಲಿ ಮುಕ್ತಜೀವಸಮೂಹವು ಶ್ರುತಿಸ್ಮೃತಿಗಳಲ್ಲಿ ಹೇಳಿರುವ ವಿಧಿನಿಷೇಧಗಳಿಗೆ ಅಧೀನವಲ್ಲ. ಆದರೂ ಮುಕ್ತರು ತಾವು

Rarest Archiver

ಸ್ವೀಕರಿಸುವ ಅಮೃತ, ಹೂವಿನಮಾಲೆ, ಉತ್ತಮವಾದ ಹಣ್ಣುಗಳು, ಇವುಗಳನ್ನು ನಿತ್ಯಮುಕ್ತನಾದ ಪರಮಾತ್ಮನಿಗೆ ಮೊದಲು ಅರ್ಪಿಸಿ ಅನಂತರ ತಾವು ಸ್ವೀಕರಿಸುತ್ತಾರೆ. ಹೀಗೆ ಪರಮಪುರುಷನಿಗೆ ಮೊದಲು ಸಮರ್ಪಿಸಿ ಅನಂತರ ತಾವು ಅನುಭವಿಸುವುದು ಮುಕ್ತರಿಗೆ ಯುಕ್ತವೇ ಆಗಿದೆ. ಏಕೆಂದರೆ ಸಮಸ್ತಜನರೂ ತಮ್ಮ ಸ್ವಭಾವವನ್ನೇ ಅನುಸರಿಸುತ್ತಾರೆ; ಯಾರಿಗೂ ಸ್ವಭಾವದಿಂದ ಬಂದ ಕೆಲಸವನ್ನು ಬಿಡಲು ಅಸಾಧ್ಯವಾದುದರಿಂದ, ಮುಕ್ತರಾಗುವುದಕ್ಕೆ ಮೊದಲು ಮಾಡಿದಂತೆ ಆಗಲೂ ಶ್ರೀಹರಿಗೆ ಸಮರ್ಪಿಸಿಯೇ ಅವರು ಆಯಾ ವಸ್ತುಗಳನ್ನು ಉಪಯೋಗಿಸುತ್ತಾರೆ.

ವಿ:— ಉತ್ತಮಾನಿ ಚ ತಾನಿ ಫಲಾನಿ ಚ, ಅಮೃತಂ ಚ ಸ್ರಕ್ ಚ, ಉತ್ತಮಫಲಾನಿ ಚ ಪ್ರಸವಾಶ್ಚ, ಅಮೃತ....ಪ್ರಸವಾಃ ತಾನ್, ಜನಾನಾಂ ಸಮೂಹಃ ಜನತಾ, ವಿಧೇಃ ಬಂಧಃ ವಿಧಿಬಂಧಃ, ವಿಧಿಬಂಧಸ್ಯ ವಶಾಃ ವಿಧಿಬಂಧವಶಾಃ ನ ವಿಧಿಬಂಧವಶಾಃ ಅವಿಧಿಬಂಧವಶಾಃ.

ಕ್ರಿ :—ಅರ್ಪಯತಿ ಋ ಗತೌ ಣಿಜಂತ ಲಟ್. ಪ್ರ+ಯಾತಿ ಯಾ ಪ್ರಾಪಣೇ ಲಟ್.

**ಪ್ರಮುದಾತಿರೇಕಮುಪಯಾತವತಾ**
**ಪ್ರಮದಾಗಣೇನ ಚರತೋಪವನೇ ।**
**ಉಪಗೀಯತೇ ಸ್ಮ ಮಧುರಂ ಮಧುಜಿ-**
**ಚ್ಚರಿತಂ ಸಕಾಂತತತಿನಾ ಸತತಂ ॥೪೭॥**

ಅ:— ಪ್ರಮುದಾತಿರೇಕಂ ಉಪಯಾತವತಾ ಉಪವನೇ ಚರತಾ ಸಕಾಂತತತಿನಾ ಪ್ರಮದಾಗಣೇನ ಸತತಂ ಮಧುಜಿಚ್ಚರಿತಂ ಮಧುರಂ ಉಪಗೀಯತೇ ಸ್ಮ ।

ಅರ್ಥ:—ಪ್ರಮುದಾತಿರೇಕಂ = ಅತಿಶಯಸಂತೋಷವನ್ನು, ಉಪಯಾತವತಾ = ಹೊಂದಿದ, ಉಪವನೇ = ಉದ್ಯಾನವನದಲ್ಲಿ, ಚರತಾ = ಸಂಚರಿಸುತ್ತಿರುವ, ಸಕಾಂತತತಿನಾ = ಪ್ರಿಯರ ಸಮೂಹದಿಂದ ಕೂಡಿದ,

Rarest Archiver

ಪ್ರಮದಾಗಣೇನ = ಹೆಂಗಸರ ಸಮೂಹದಿಂದ, ಸತತಂ = ಯಾವಾಗಲೂ, ಮಧುಜಿತ್ = ಶ್ರೀಹರಿಯ, ಚರಿತಂ = ಚರಿತ್ರೆಯು, ಮಧುರಂ = ಇಂಪಾಗಿ ಉಪಗೀಯತೇ ಸ್ಮ = ಹಾಡಲ್ಪಡುತ್ತದೆ.

ತಾ:—ಆ ಮುಕ್ತತರುಣಿಯರ ಸಮೂಹಗಳು ತಮ್ಮ ಪ್ರಿಯತಮರಿಂದ ಒಡಗೂಡಿ ಅತಿಶಯವಾದ ಆನಂದವನ್ನು ಅನುಭವಿಸುತ್ತಾ ಆ ಉದ್ಯಾನವನದಲ್ಲಿ ಸಂಚರಿಸುತ್ತಾ ನಿತ್ಯದಲ್ಲಿಯೂ, ಮನೋಹರವಾದ ಶ್ರೀಹರಿಯ ಚರಿತ್ರೆಯನ್ನು ಗಾನಮಾಡುತ್ತಾ ಇರುತ್ತಾರೆ. ಮುಕ್ತರ ವಿಲಾಸದ ಸಂಗೀತವೂ ಹರಿಮಹಿಮೆಯನ್ನು ಒಳಗೊಂಡಿದೆಯೇ ಹೊರತು, ಲೌಕಿಕಶೃಂಗಾರಕ್ಕೆ ಸಂಬಂಧಪಟ್ಟಿರುವುದಿಲ್ಲ ಎಂದು ಭಾವ.

ವಿ:—ಪ್ರಮದಸ್ಯ ಅತಿರೇಕಃ ಪ್ರಮದಾತಿರೇಕಃ ತಂ, ಪ್ರಮದಾನಾಂ-ಗಣಃ ಪ್ರಮದಾಗಣಃ ತೇನ, ಮಧುಂ ಜಯತೀತಿ ಮಧುಜಿತ್, ತಸ್ಯ ಚರಿತಂ ಮಧುಜಿಚ್ಚರಿತಂ ತತ್, ಕಾಂತಾನಾಂ ತತಿಃ ಕಾಂತತತಿಃ, ಕಾಂತ-ತತ್ಯಾ ಸಹ ವರ್ತತೇ ಇತಿ ಸಕಾಂತತತಿಃ ತೇನ ;

ಕ್ರಿ:—ಉಪ + ಗೀಯತೇ, ಗೀಯೇತೇ ಗೀಯಂತೇ, ಇತ್ಯಾದಿ. ಗೈ ಶಬ್ದೇ ಕರ್ಮಣಿ ಲಟ್ ಉಪ-ಉಪಸರ್ಗ. ಸ್ಮ ಶಬ್ದದ ಯೋಗದಿಂದ 'ಲಟ್‌ಸ್ಮೇ' ಎಂಬ ಸೂತ್ರದಿಂದ ಭೂತಕಾಲದ ಅರ್ಥ.

ಲಲನಾ ಲಲಂತ್ಯಭಿವರಂ ಪ್ರವರಾ
ಲಲಿತಾ ಲುನಂತಿ ಕುಸುಮಾನಿ ಪರಾಃ ।
ಇತರಾಃ ಸ್ರಜೋ ವಿರಚಯಂತಿ ಪತೀ-
ನನುರಂಜಯಂತಿ ನ ತು ಕಾಶ್ಚನ ನೋ ॥೪೮॥

ಅ: —ಪ್ರವರಾಃ ಲಲನಾಃ ಅಭಿವರಂ ಲಲಂತಿ. ಲಲಿತಾಃ ಪರಾಃ ಕುಸುಮಾನಿ ಲುನಂತಿ. ಇತರಾಃ ಸ್ರಜಃ ವಿರಚಯಂತಿ. ಕಾಶ್ಚನ ಪತೀನ್ ನ ಅನುರಂಜಯಂತೀತಿ ನೋ ।

ಅರ್ಥ :—ಪ್ರವರಾಃ ಲಲನಾಃ = ಉತ್ತಮರಾದ ಯುವತಿಯರು,

Rarest Archiver

ಅಭಿವರಂ = ತಮ್ಮ ಪ್ರಿಯರ ಮುಂದೆ, ಲಲಂತಿ = ಕುಣಿಯುತ್ತಾರೆ; ಲಲಿತಾಃ = ಅತ್ಯಂತಕೋಮಲಾಂಗಿಯರಾದ, ಪರಾಃ = ಬೇರೆ ಕೆಲವು ಲಲನೆಯರು, ಕುಸುಮಾನಿ ಲುನಂತಿ = ಹೂವುಗಳನ್ನು ಕೊಯ್ಯುತ್ತಾರೆ (ಬಿಡಿಸುತ್ತಾರೆ) ಇತರಾಃ ಸ್ರಜಃ ವಿರಚಯಂತಿ = ಮತ್ತೆ ಕೆಲವರು ಮಾಲೆಗಳನ್ನು ಕಟ್ಟುತ್ತಾರೆ. ಕಾಶ್ಚನ = ಯಾರೂ, ಪತೀನ್ = ಗಂಡಂದಿರನ್ನು, ನ ಅನುರಂಜಯಂತೀತಿ ನೋ = ಸಂತೋಷಗೊಳಿಸುವುದಿಲ್ಲವೆಂದಿಲ್ಲ.

**ತಾ:**—ಆ ವೈಕುಂಠಲೋಕದಲ್ಲಿರುವ ಕೆಲವು ಲಲನಾಮಣಿಗಳು ತಮ್ಮ ಗಂಡಂದಿರ ಮುಂದೆ ಕುಣಿಯುತ್ತಾರೆ. ಮತ್ತೆ ಕೆಲವು ಕೋಮಲಾಂಗಿಯರು ಹೂವುಗಳನ್ನು ಬಿಡಿಸುತ್ತಾರೆ. ಇನ್ನು ಕೆಲವರು ಹೂವಿನ ಸರಗಳನ್ನು ರಚಿಸುತ್ತಾರೆ. ಹೀಗೆ ಎಲ್ಲರೂ ತಮ್ಮ ಗಂಡಂದಿರನ್ನು ಸಂತೋಷಪಡಿಸುತ್ತಾರೆ.

**ವಿ:**—ವರಂ ಆಭಿಮುಖ್ಯೇನ ಅಭಿವರಂ; 'ಲಕ್ಷಣೇನಾಭಿಪ್ರತೀ ಆಭಿಮುಖ್ಯೇ' ಎಂಬ ಸೂತ್ರದಿಂದ ಅವ್ಯಯೀಭಾವ;

**ಕ್ರಿ:**—ಲಲತಿ ಲಲತಃ ಲಲಂತಿ ಇತ್ಯಾದಿ ಲಲ ವಿಲಾಸೇ ಲಟ್. ಲುನಾತಿ ಲುನೀತಃ ಲುನಂತಿ, ಲುನಾಸಿ ಲುನೀಥಃ ಲುನೀಥ, ಲುನಾಮಿ ಲುನೀವಃ ಲುನೀಮಃ; ಲೂಞ್ ಛೇದನೇ ಪ್ರ.ಬ. ಲಟ್. ವಿ + ರಚಯಂತಿ, ರಚಯತಿ ರಚಯತಃ ರಚಯಂತಿ, ಇತ್ಯಾದಿ. ರಚ ಪ್ರತಿಯತ್ನೇ ಚುರಾದಿ ಲಟ್. ಅನು + ರಂಜಯಂತಿ, ರಂಜಯತಿ ರಂಜಯತಃ ರಂಜಯಂತಿ ಇತ್ಯಾದಿ ರಂಜ ರಾಗೇ ಣಿಜಂತ ಲಟ್.

**ಅವ:**—ಇದುವರೆಗೆ ಬಾಹ್ಯವಿಹಾರವನ್ನು ವರ್ಣಿಸಿ, ಇನ್ನು ಮುಂದೆ ಸಂಭೋಗಶೃಂಗಾರವನ್ನು ವರ್ಣಿಸುತ್ತಾರೆ—

**ವನಲೀಲಯಾ ವಿವಿಧಯಾ ಮುದಿತಾ-**
**ಸ್ತರುಣಾ ಘನಸ್ತನನತಾಸ್ತರುಣೀಃ ।**
**ಸುಲತಾಲಯೇಷು ಪರಿರಭ್ಯ ರತಿಂ**
**ವದನಾರವಿಂದಮಧುಪಾ ದಧತಿ** ||೪೯||

**ಅ:** ವಿವಿಧಯಾ ವನಲೀಲಯಾ ಮುದಿತಾಃ ತರುಣಾಃ ಸುಲತಾಲಯೇಷು ಘನಸ್ತನನತಾಃ ತರುಣೀಃ ಪರಿರಭ್ಯ, ವದನಾರವಿಂದಮಧುಪಾಃ ರತಿಂ ದಧತಿ |

**ಅರ್ಥ :**—ವಿವಿಧಯಾ ವನಲೀಲಯಾ = ನಾನಾಬಗೆಯ ಉದ್ಯಾನ ಕ್ರೀಡೆಯಿಂದ, ಮುದಿತಾಃ=ಸಂತೋಷಪಟ್ಟಿರುವ, ತರುಣಾಃ=ಯುವಕರು, ಸುಲತಾಲಯೇಷು = ಮನೋಹರವಾದ ಬಳ್ಳಿಮನೆಗಳಲ್ಲಿ, ಘನಸ್ತನನತಾಃ = ಘಟ್ಟಿಯಾಗಿರುವ ಸ್ತನಗಳಿಂದ ಬಗ್ಗಿರುವ, ತರುಣೀಃ = ಯುವತಿಯರನ್ನು, ಪರಿರಭ್ಯ = ಆಲಿಂಗಿಸಿ, ವದನಾರವಿಂದ = ಮುಖವೆಂಬ ತಾವರೆ ಹೂವಿನ, ಮಧುಪಾಃ = ಮಕರಂದವನ್ನು ಪಾನಮಾಡುವವರಾಗಿ, ರತಿಂ ದಧತಿ = ರತಿಕ್ರೀಡೆಯನ್ನು ಮಾಡುತ್ತಾರೆ.

**ತಾ:**—ಮುಕ್ತತರುಣರು ತರುಣಿಯರೊಡನೆ ನಾನಾವಿಧವಾದ ವನವಿಹಾರವನ್ನು ಮಾಡಿ ಸಂತೋಷಪಡುತ್ತಾರೆ. ಅನಂತರ ಅವರು ಸುಂದರವಾದ ಲತಾಗೃಹಗಳಲ್ಲಿ ಉಬ್ಬಿದಸ್ತನಗಳಿಂದ ಬಗ್ಗಿದ ತಮ್ಮ ತರುಣಿಯರನ್ನು ಗಾಢವಾಗಿ ಆಲಿಂಗಿಸಿ ಅವರ ಮುಖಕ್ಕೆ ಮುದ್ದಿಡುತ್ತಾ ಸುರತ ಕ್ರೀಡೆಯಲ್ಲಿ ಆಸಕ್ತರಾಗುತ್ತಾರೆ.

**ವಿ:**—ವನೇಷು ಲೀಲಾ ವನಲೀಲಾ ತಯಾ, ಘನೌ ಚ ತೌ ಸ್ತನೌ ಚ, ಘನಸ್ತನಾಭ್ಯಾಂ ನತಾಃ ತಾಃ, ಶೋಭನಾಶ್ಚ ತೇ ಲತಾನಾಂ ಆಲಯಾಶ್ಚ ಸುಲತಾಲಯಾಃ ತೇಷು, ವದನಾನ್ಯೇವ ಅರವಿಂದಾನಿ ವದನಾರವಿಂದಾನಿ, ವದನಾರವಿಂದಾನಾಂ ಮಧು ಪಿಬಂತೀತಿ ವದನಾ.... ಪಾಃ |

**ಕ್ರಿ:**—ದಧತಿ, ದಧಾತಿ ಧತ್ತಃ ದಧತಿ ಇತ್ಯಾದಿ. ಡು(ಧಾ)ಞ್ ಧಾರಣಪೋಷಣಯೋಃ ಪ್ರ. ಬ.

**ಅವ:**—ಜಲಕ್ರೀಡೆಯನ್ನು ವರ್ಣಿಸುತ್ತಾರೆ—

**ರಸಿಕಾಃ ಸುಧಾಪ್ಸು ಸರಸೀಷು ತತೋ**
**ರುತನೂಪುರಾನುಕೃತಸಾರಸಕಾಃ |**

Rarest Archiver

**ವಿಹರಂತಿ ಸಾಕಮುವಗಾಹ್ಯ ಧವೈ-**
**ರ್ಜಲಮು(ಂಡು)ಡ್ಡುಕೋತ್ಸವಹಸದ್ವದನಾಃ ||೫೦||**

ಅ :—ತತಃ ರುತನೂಪುರಾನುಕೃತಸಾರಸಕಾಃ ರಸಿಕಾಃ ಧವೈಃ ಸಾಕಂ ಸುಧಾಪ್ಸು ಸರಸೀಷು ಅವಗಾಹ್ಯ ಜಲಮುಡ್ಡುಕೋತ್ಸವ-ಹಸದ್ವದನಾಃ ವಿಹರಂತಿ.

**ಅರ್ಥ :**— ತತಃ = ಅನಂತರ, ರುತ = ಶಬ್ದ ಮಾಡುತ್ತಿರುವ, ನೂಪುರ = ಕಾಲ್ಗೆಜ್ಜೆಯಿಂದ, ಅನುಕೃತ = ಅನುಕರಿಸಲ್ಪಟ್ಟ (ಹೋಲಿಕೆಯನ್ನು ಹೊಂದಿದ,) ಸಾರಸಕಾಃ = ನೀರುಕೋಳಿಗಳುಳ್ಳ, ರಸಿಕಾಃ = ವಿಲಾಸಿನಿಯರು, ಧವೈಃ ಸಾಕಂ = ಗಂಡಂದಿರೊಡನೆ, ಸುಧಾಪ್ಸು = ಅಮೃತಮಯವಾದ ನೀರುಳ್ಳ, ಸರಸೀಷು = ಸರೋವರಗಳಲ್ಲಿ, ಅವಗಾಹ್ಯ = ಇಳಿದು, ಮುಳುಗಿ, ಜಲಮಡ್ಡುಕ = ನೀರೆಂಬ ಮದ್ದಲೆಯ, ಉತ್ಸವ = ಬಾರಿಸುವ ಸಂತೋಷಕರವಾದ ವ್ಯಾಪಾರದಿಂದ, ಹಸದ್ವದನಾಃ = ನಗುಮುಖವುಳ್ಳವರಾಗಿ, ವಿಹರಂತಿ = ವಿಹರಿಸುತ್ತಾರೆ.

**ತಾ:**—ಉದ್ಯಾನಕ್ರೀಡೆ ಮುಗಿದ ತರುವಾಯ ನೀರುಕೋಳಿಗಳಂತೆ ಧ್ವನಿಮಾಡುವ ಕಾಲ್ಗೆಜ್ಜೆಗಳನ್ನು ಧರಿಸಿರುವ ವಿಲಾಸಿನಿಯರಾದ ತರುಣಿಯರು ಅಮೃತಮಯವಾದ ನೀರಿನ ಕೊಳಗಳಲ್ಲಿ, ಇಳಿಯುವರು. ಅಲ್ಲಿ ತಮ್ಮ ಗಂಡಂದಿರೊಡನೆ ನೀರಿನಲ್ಲಿ ಮುಳುಗಿ ಏಳುತ್ತಾ, ಕೈಗಳಿಂದ ನೀರನ್ನು ಹೊಡೆದು ಮದ್ದಲೆಯಂತೆ ಬಾರಿಸುತ್ತಾ ನಗುಮುಖದಿಂದ ವಿಹರಿಸುತ್ತಾರೆ, (ಇಲ್ಲಿ ಮಹಾಕಾವ್ಯದಲ್ಲಿ ಬರಬೇಕಾದ ಜಲಕ್ರೀಡಾ ವರ್ಣನೆಯನ್ನು ಮಾಡಿದ್ದಾಯಿತು.)

**ವಿ:**—ಸುಧಾಮಯ್ಯಃ ಆಪಃ ಯಾಸು ತಾಃ ಸುಧಾಪಃ, ತಾಸು ; ಇಲ್ಲಿ 'ಋಕ್‌ಪೂರಬ್‌ಧೂಃ ಪಥಾಂ ಅ ಅನಕ್ಷೇ' ಎಂಬ ಸೂತ್ರದಿಂದ ಅ ಪ್ರತ್ಯಯ ಬರಬೇಕಿದ್ದರೂ. 'ಸಮಾಸಾಂತೋ ವಿಧಿರನಿತ್ಯಃ' ಎಂಬ ವಚನಾನುಸಾರ, ಆ ಪ್ರತ್ಯಯಬಂದಿಲ್ಲ. ಆದುದರಿಂದ ಇದು ಸಾಧು ಪ್ರಯೋಗವೇ ಆಗಿದೆ. ರುತೈಃ ಅನುಕೃತಾಃ ಸಾರಸಕಾಃ ಯಾಭಿಸ್ತಾಃ

Rarest Archiver

ಶಿತನೂಪುರಾನುಕೃಪಸಾರಸಕಾಃ, ಜಲೇಷು ಮಡ್ಡುಕಃ ಜಲಮಡ್ಡುಕಃ, ಸ ಇತಿ ಉತ್ಸವಃ ಜಲಮಡ್ಡುಕೋತ್ಸವಃ, ತಸ್ಮಿನ್ ಹಸಂತಿ ವದನಾನಿ ಯಾಸಾಂ ತಾಃ ಜಲ ದನಾಃ । ಮಂಡುಕ ಎಂಬ ಪಾಠದಲ್ಲಿಯೂ ಇದೇ ಅರ್ಥ.

ಕ್ರಿ :— ವಿ+ಹರಂತಿ, ಹರತಿ ಹರತಃ ಹರಂತಿ, ಹೃಞ್ ಹರಣೇ. ಲಟ್.

ಅವ:—ಜಲಕ್ರೀಡೆಯ ಅನಂತರದ ವಿಹಾರವನ್ನು ವರ್ಣಿಸುತ್ತಾರೆ–

**ವಿವಿಧಾ ವಿಧಾಯ ವಿಹೃತೀಃ ಸಲಿಲೇ**
**ವಿಕಟೇಷು ವಿದ್ರುಮತಟೇಷು ಗತಾಃ ।**
**ಸುರಭಿಂ ಸುವರ್ಣಮಥವರ್ಣಕಮಾ–**
**ದದತೇ ಸಖೀಕರಗತಂ ಮಹಿಲಾಃ ॥೫೧॥**

ಅ :—ಮಹಿಲಾಃ ಸಲಿಲೇ ವಿವಿಧಾಃ ವಿಹೃತೀಃ ವಿಧಾಯ ಅಥ ವಿಕಟೇಷು ವಿದ್ರುಮತಟೇಷು ಗತಾಃ ಸಖೀಕರಗತಂ ಸುರಭಿಂ ಸುವರ್ಣಂ ವರ್ಣಕಂ ಆದದತೇ ॥

ಅರ್ಥ :—ಮಹಿಲಾಃ=ಮುಕ್ತ ನಾರಿಯರು, ಸಲಿಲೇ=ನೀರಿನಲ್ಲಿ. ವಿವಿಧಾಃ ವಿಹೃತೀಃ ವಿಧಾಯ=ನಾನಾರೀತಿಯ ವಿಹಾರಗಳನ್ನು ಮಾಡಿ, ಅಥ=ಅನಂತರ, ವಿಕಟೇಷು=ವಿಶಾಲವಾದ, ವಿದ್ರುಮತಟೇಷು ಗತಾಃ= ಹವಳದ ದಡಗಳಲ್ಲಿ ಸೇರಿದವರಾಗಿ, ಸಖೀಕರಗತಂ=ಗೆಳತಿಯರ ಕೈಗಳಲ್ಲಿರುವ, ಸುರಭಿಂ=ಸುವಾಸನೆಯುಳ್ಳ, ಸುವರ್ಣಂ=ಒಳ್ಳೆ ಬಣ್ಣದ, ವರ್ಣಕಂ =ಚಂದನಾದಿಲೇಪನದ್ರವ್ಯವನ್ನು, ಆದದತೇ=ತೆಗೆದುಕೊಳ್ಳುತ್ತಾರೆ.

ತಾ:— ಮುಕ್ತತರುಣಿಯರು ಹೀಗೆ ನೀರಿನಲ್ಲಿ ಬಗೆ ಬಗೆಯ ಆಟಗಳನ್ನು ಆಡುತ್ತಾರೆ. ಅನಂತರ ಅಲ್ಲಿಂದ ಮೇಲಕ್ಕೆ ಬಂದು ಹವಳಗಳಿಂದ ಖಚಿತವಾದ ದಡಗಳಲ್ಲಿ ನಿಲ್ಲುತ್ತಾರೆ. ಅಲ್ಲಿ ಸಖಿಯರು ತಂದುಕೊಟ್ಟ ಒಳ್ಳೆಯ ಬಣ್ಣದ ಸುವಾಸನೆಯಾದ ಲೇಪನದ್ರವ್ಯಗಳನ್ನು ತೆಗೆದುಕೊಂಡು ಮೈಗೆ ಹಚ್ಚಿಕೊಳ್ಳುತ್ತಾರೆ.

Rarest Archiver

① Matching colours



**ವಿ:**—ವಿದ್ರುಮಾಣಾಂ ತಟಾನಿ ವಿದ್ರುಮತಟಾನಿ ತೇಷು, ಸಖೀನಾಂ ಕರೇ ಗತಃ ಸಖೀಕರಗತಃ, ವರ್ಣಕಃ=ಚಂದನಾದಿ ವಿಲೇಪನ ದ್ರವ್ಯ, ವರ್ಣಕಶ್ಚಾರಣೇಽಸ್ತ್ರೀ ತು ಚಂದನೇ ಚ ವಿಲೇಪನೇ ಮೇದಿನೀ.

**ಕ್ರಿ:**—ಆದದತೇ, ದತ್ತೇ ದದಾತೇ ದದತೇ, ದತ್ಸೇ ದದಾಥೇ ದಧ್ವೇ, ದದ್ವೇ ದದ್ವಹೇ ದದ್ಮಹೇ, ಡು(ದಾಞ್) ದಾನೇ. ಆತ್ಮನೇ. ಲಟ್.

**ಅವ:**—ಆ ತರುಣಿಯರ ಅಲಂಕಾರರೀತಿಯನ್ನು ವರ್ಣಿಸುತ್ತಾರೆ—

**ಜಘನಾಂಶುಕೈರವಯವಾಭರಣೈಃ**
**ಕುಚಕುಂಕುಮೈಶ್ಚ ಕಚಮಾಲ್ಯವರೈಃ ।**
**ನಯನಾಂಜನೈರಪಿ ಮಿಥೋಽಬ್ಜದೃಶಾಂ**
**ಘಟಿತೈರಲಂಕೃತಿರಲಂಕ್ರಿಯತೇ** ॥೩೨॥

**ಅ:**—ಮಿಥಃ ಘಟಿತೈಃ ಅಬ್ಜದೃಶಾಂ ಜಘನಾಂಶುಕೈಃ ಅವಯವಾ-ಭರಣೈಃ ಕುಚಕುಂಕುಮೈಃ ಕಚಮಾಲ್ಯವರೈಃ ಚ ನಯನಾಂಜನೈರಪಿ ಅಲಂಕೃತಿಃ ಅಲಂ ಕ್ರಿಯತೇ ॥

**ಅರ್ಥ:**—ಮಿಥಃ ಘಟಿತೈಃ=ಪರಸ್ಪರ ಸಂಬದ್ಧವಾದ (ಹೊಂದಾಣಿಕೆಯುಳ್ಳ), ಅಬ್ಜದೃಶಾಂ=ಮುಕ್ತ ರಮಣಿಯರ, ಜಘನಾಂಶುಕೈಃ=ಕಟಿಯ (ಸೊಂಟದ) ಮುಂಭಾಗ ಮತ್ತು ಸೀರೆಗಳಿಂದಲೂ, ಅವಯವ-ಆಭರಣೈಃ = ಅವಯವಗಳಿಂದಲೂ ಆಭರಣಗಳಿಂದಲೂ, ಕುಚ-ಕುಂಕು-ಮೈಃ=ಸ್ತನಗಳು ಮತ್ತು ಕುಂಕುಮಗಳಿಂದಲೂ, ಕಚಮಾಲ್ಯವರೈಃ=ತುರುಬುಗಳಿಂದಲೂ, ದಿವ್ಯಪುಷ್ಪಮಾಲೆಗಳಿಂದಲೂ, ನಯನಾಂಜನೈಃ ಅಪಿ=ಕಣ್ಣುಗಳಿಂದಲೂ ಕಾಡಿಗೆಗಳಿಂದಲೂ, ಅಲಂಕೃತಿಃ=ಅಲಂಕರಿಸುವಿಕೆಯು, ಅಲಂಕ್ರಿಯತೇ=ಚೆನ್ನಾಗಿ ಮಾಡಲ್ಪಡುತ್ತದೆ.

**ತಾ:**— ವೈಕುಂಠಲೋಕದಲ್ಲಿರುವ ಸುಂದರ ಮುಕ್ತತರುಣಿಯರು ಧರಿಸಿರುವ ದಿವ್ಯವಸ್ತ್ರಗಳಿಂದ ಅವರ ಸೊಂಟದ ಮುಂಭಾಗಕ್ಕೂ, (ಜಘನಕ್ಕೂ) ಜಘನದಿಂದ ಅವರ ದಿವ್ಯವಸ್ತ್ರಗಳಿಗೂ, ಒಡವೆಗಳಿಂದ ಹಸ್ತ

Rarest Archiver

ಪಾದಕಂಠಾದಿ ಅವಯವಗಳಿಗೂ, ಹಸ್ತಾದಿ ಅವಯವಗಳಿಂದ ಅಲಂಕಾರಗಳಿಗೂ, ಕುಂಕುಮಕೇಸರಿಯ ಗಂಧಲೇಪನದಿಂದ ಸ್ತನಗಳಿಗೂ, ಸ್ತನಗಳಿಂದ ಸುಗಂಧಲೇಪನಕ್ಕೂ, ದಿವ್ಯಪುಷ್ಪಮಾಲೆಯಿಂದ ತುರುಬಿಗೂ, ತುರುಬಿನಿಂದ ಮುಕ್ತಪುಷ್ಪಮಾಲೆಗೂ, ಕಾಡಿಗೆಯಿಂದ ಕಣ್ಣುಗಳಿಗೂ, ಕಣ್ಣುಗಳಿಂದ ಕಾಡಿಗೆಗೂ, ಪರಸ್ಪರ ಅಲಂಕಾರವು ಉಂಟಾಗಿದೆ. ಅವರ ಜಘನಾದಿಗಳಿಗೂ ಧರಿಸಿರುವ ಸೀರೆ ಮುಂತಾದುವುಗಳಿಗೂ ಅತ್ಯಂತ ಹೊಂದಾಣಿಕೆಯಿದ್ದು, ಅವು ಅತ್ಯಂತ ಉತ್ತಮವಾಗಿರುವುವು. ಎಂದು ಭಾವ.

ವಿ :—ಜಘನಾನಿ ಚ ಅಂಶುಕಾನಿ ಚ ಜಘನಾಂಶುಕಾನಿ ತೈಃ, ಅವಯವಾಶ್ಚ ಆಭರಣಾನಿ ಚ ಅವಯವಾಭರಣಾನಿ ತೈಃ, ಕುಚಾಶ್ಚ ಕುಂಕುಮಾನಿ ಚ ಕುಚಕುಂಕುಮಾನಿ ತೈಃ, ಮಾಲ್ಯೇಷು ವರಾಣಿ ಮಾಲ್ಯವರಾಣಿ, ಕಚಾಶ್ಚ ಮಾಲ್ಯವರಾಣಿ ಚ ತೈಃ, ನಯನಾನಿ ಚ ಅಂಜನಾನಿ ಚ ನಯನಾಂಜನಾನಿ ತೈಃ, ಅಬ್ಜವತ್ ದೃಶೌ ಯಾಸಾಂ ತಾಃ ಅಬ್ಜದೃಶಃ ತಾಸಾಂ;

ಕ್ರಿ:—ಕ್ರಿಯತೇ ಕ್ರಿಯೇತೇ ಕ್ರಿಯಂತೇ ಇತ್ಯಾದಿ ಡುಕೃಞ್ ಕರಣೇ 'ಕೃ'ಧಾತು ಕರ್ಮಣಿ ಲಟ್.

**ತನುಮಧ್ಯಮಾ ನಿಜಗೃಹಾಣಿ ಗತಾಃ**
**ಸಮಮಾತ್ಮನಾಮಸುಸಮೈರಸಮೈಃ ।**
**ಅಮೃತಂ ಪಿಬಂತ್ಯಸುಲಭಂ ಭವಿಭಿ-**
**ಶ್ಚಷಕೈರ್ಮಹಾರಜತರತ್ನಮಯೈಃ ॥೩೩॥**

ಅ :—ನಿಜಗೃಹಾಣಿ ಗತಾಃ ತನುಮಧ್ಯಮಾಃ ಅಸಮೈಃ ಆತ್ಮನಾಂ ಅಸುಸಮೈಃ ಸಮಂ ಮಹಾರಜತರತ್ನಮಯೈಃ ಚಷಕೈಃ ಭವಿಭಿಃ ಅಸುಲಭಂ ಅಮೃತಂ ಪಿಬಂತಿ ।

**ಅರ್ಥ** :—ನಿಜಗೃಹಾಣಿ = ತಮ್ಮ ಮನೆಗಳನ್ನು ಕುರಿತು, ಗತಾಃ = ಹೋಗಿರುವ, ತನುಮಧ್ಯಮಾಃ = ಕೃಶವಾದ ನಡುವುಳ್ಳ ಮುಕ್ತ

Rarest Archiver

ತರುಣಿಯರು, ಅಸಮೈಃ= ತಮಗೆ ಸಮಾನರಲ್ಲದ (ತಮಗಿಂತ ಉತ್ತಮರಾದ), ಆತ್ಮನಾಂ ಅಸುಸಮೈಃ= ತಮ್ಮ ಪ್ರಾಣಕ್ಕೆ ಸಮರಾದ ಪ್ರಿಯರಿಂದ ಸಮಂ= ಕೂಡಿಕೊಂಡು, ಮಹಾರಜತ-ರತ್ನಮಯೈಃ= ಚಿನ್ನ ಮತ್ತು ರತ್ನಗಳಿಂದ ನಿರ್ಮಿತವಾದ, ಚಷಕೈಃ = ಕುಡಿಯುವ ಪಾತ್ರೆಗಳಿಂದ, ಭವಿಭಿಃ = ಸಂಸಾರಿಗಳಿಂದ, ಅಸುಲಭಂ = ಹೊಂದಲು ಸಾಧ್ಯವಿಲ್ಲದ, ಅಮೃತಂ ಪಿಬಂತಿ= ಅಮೃತವನ್ನು ಕುಡಿಯುತ್ತಾರೆ.

**ತಾ:**—ಕೃಶವಾದ ನಡುವುಳ್ಳ ಆ ಮುಕ್ತತರುಣಿಯರು, ತಮಗಿಂತ ಉತ್ತಮರಾಗಿ ತಮಗೆ ಪೂಜ್ಯರಾದ ತಮ್ಮ ಪ್ರಾಣಕ್ಕೆ ಸಮಾನರಾದ ಪತಿಗಳಿಂದ ಕೂಡಿಕೊಂಡು ರತ್ನ ಖಚಿತವಾದ ಚಿನ್ನದ ಬಟ್ಟಲುಗಳಿಂದ ಸಂಸಾರಿಗಳಿಗೆ ದೊರಕಲಾರದ ಅಮೃತವನ್ನು, ಕುಡಿಯುತ್ತಾರೆ. ಇದರಿಂದ ಮಹಾಕಾವ್ಯದಲ್ಲಿ ವರ್ಣಿಸಬೇಕಾದ ಮಧುಪಾನವನ್ನು ವರ್ಣಿಸಿದಂತಾಯಿತು.

**ವಿ:**—ತನು ಮಧ್ಯಮಂ ಯಾಸಾಂ ತಾಃ, ಮಧ್ಯಮಂ= ಸೊಂಟ, ಮಧ್ಯಮಂ ಚಾವಲಗ್ನಂ ಚ–**ಅಮರ.** ನಿಜಾನಿ ಚ ತಾನಿ ಗೃಹಾಣಿ ಚ ನಿಜಗೃಹಾಣಿ ತಾನಿ, ಅಸುಭಿಃ ಸಮಾಃ ಅಸುಸಮಾಃ ತೈಃ, ನ ಸಮಾಃ ಅಸಮಾಃ ತೈಃ, ಸುಖೇನ ಲಬ್ಧುಂ ಶಕ್ಯಂ ಸುಲಭಂ ನ ಸುಲಭಂ ಅಸುಲಭಂ, ಭವಃ ಏಷಾಂ ಅಸ್ತೀತಿ ಭವಿನಃ ತೈಃ, ಚಷಕ= ಕುಡಿಯುವ ಪಾತ್ರೆ, ಚಷಕೋಽಸ್ತ್ರೀ ಪಾನಪಾತ್ರಂ–**ಅಮರ;** ಮಹಾರಜತಂ ಚ ರತ್ನಾನಿ ಚ, ಮಹಾರಜತರತ್ನಾತ್ಮಕಾನಿ ಮಹಾರಜತರತ್ನಮಯಾನಿ ತೈಃ, ಮಹಾರಜತಂ= ಚಿನ್ನ, ಚಾಮೀಕರಂ ಜಾತರೂಪಂ ಮಹಾರಜತಕಾಂಚನೇ–**ಅಮರ.**

**ಕ್ರಿ:**—ಪಿಬತಿ ಪಿಬತಃ ಪಿಬಂತಿ, ಪಾ ಪಾನೇ ಲಟ್.

**ಅವ:**—ಮಹಾಕಾವ್ಯಾಂಗಸಂಭೋಗಶೃಂಗಾರವನ್ನು ವರ್ಣಿಸುತ್ತಾರೆ

**ಮೃದುಕಮ್ರಶಯ್ಯಮನುರಾಗವತಾಂ**
**ಮಣಿಮಂಚಮಂಚಿತದೃಶೋಽವಸರೇ ।**

Rarest Archiver

**ಅಪಿ (ಪತಿ)ಚೋದಿತಾ ಅಧಿರುಹಂತಿ ಶನೈಃ**
**ವಿನಯೋ ಹಿ ಭೂಷಯತಿ ಸರ್ವರಸಂ** ||೫೪||

**ಅ:**—ಅಂಚಿತದೃಶಃ ಅನುರಾಗವತಾಂ ಮೃದುಕಮ್ರಶಯ್ಯಂ ಮಣಿಮಂಚಂ ಅವಸರೇ ಅಪಿ (ಪತಿ) ಚೋದಿತಾಃ ಶನೈಃ ಅಧಿರುಹಂತಿ. ಹಿ ವಿನಯಃ ಸರ್ವರಸಂ ಭೂಷಯತಿ |

**ಅರ್ಥ:**—ಅಂಚಿತದೃಶಃ = ಕಾಡಿಗೆಯಿಂದ ಅಲಂಕರಿಸಲ್ಪಟ್ಟ ಕಣ್ಣುಗಳುಳ್ಳ ಸುಂದರಿಯರು, ಅನುರಾಗವತಾಂ = ಪ್ರೀತಿಯುಳ್ಳ ಗಂಡಂದಿರ, ಮೃದುಕಮ್ರಶಯ್ಯಂ = ಮೃದುವಾದ ಮನೋಹರವಾದ ಹಾಸಿಗೆಯುಳ್ಳ, ಮಣಿಮಂಚಂ = ರತ್ನದ ಮಂಚವನ್ನು, ಅವಸರೇ ಅಪಿ = ಸಮಯವು ಒದಗಿದರೂ, (ಪತಿ)ಚೋದಿತಾಃ = ಗಂಡಂದಿರಿಂದ ಪ್ರೇರಿಸಲ್ಪಟ್ಟವರಾಗಿ, ಶನೈಃ = ಮೆಲ್ಲನೆ, ಅಧಿರುಹಂತಿ = ಹತ್ತುತ್ತಾರೆ. ಹಿ = ಯಾವ ಕಾರಣದಿಂದ, ವಿನಯಃ = ವಿಧೇಯತೆಯು, ಸರ್ವರಸಂ = ಶೃಂಗಾರಾದಿ ಎಲ್ಲಾ ರಸವನ್ನು, ಭೂಷಯತಿ = ಅಲಂಕರಿಸುತ್ತದೆ.

**ತಾ:**— ಕಾಡಿಗೆಯಿಂದ ಕಣ್ಣುಗಳನ್ನು ಅಲಂಕರಿಸಿ ಕೊಂಡಿರುವ ಆ ತರುಣಿಯರು ಅತಿಸ್ನೇಹವುಳ್ಳ ಪತಿಗಳ ಕೋಮಲವೂ ಮನೋಹರವೂ ಆದ ಹಾಸಿಗೆಯುಳ್ಳ ರತ್ನಮಯವಾದ ಮಂಚವನ್ನು, ಪತಿಸಮಾಗಮದ ಸಮಯವು ಬಂದೊದಗಿದಾಗಲೂ, ಪತಿಗಳು ಪ್ರೇರಿಸಿದರೂ ಮೆಲ್ಲಗೆ ಏರುತ್ತಾರೆ. ಹೀಗೆ ಅವರು ನಾಚಿಕೆಯಿಂದ ಮೆಲ್ಲನೆ ಮಂಚವನ್ನೇರುವುದು ಅತ್ಯಂತಯುಕ್ತವೇ ಸರಿ. ಏಕೆಂದರೆ ವಿನಯಗುಣವು ಎಲ್ಲಾ ಶೃಂಗಾರಾದಿ ರಸವನ್ನು ಅಲಂಕರಿಸುತ್ತದೆ. ಎಲ್ಲರಿಗೂ ವಿನಯಗುಣವು ಅತ್ಯಾವಶ್ಯಕ. ಅದರಲ್ಲಿಯೂ ಶೃಂಗಾರಾದಿರಸಗಳುಳ್ಳ ವಿಲಾಸವತಿಯರಿಗೆ ವಿನಯಗುಣವು, ಅತ್ಯಾವಶ್ಯಕ ಮತ್ತು ಉತ್ತಮ ಅಲಂಕಾರವು.

**ವಿ:**—ಮೃದ್ವೀ ಕಮ್ರಾ ಶಯ್ಯಾ ಯಸ್ಮಿನ್ ಸಃ ಮೃದುಕಮ್ರಶಯ್ಯಃ ತಂ, ಅನುರಾಗಃ ಏಷಾಂ ಅಸ್ತೀತಿ ಅನುರಾಗವಂತಃ ತೇಷಾಂ, ಮಣಿಮಯಶ್ಚಾಸೌ ಮಂಚಶ್ಚ ಮಣಿಮಂಚಃ ತಂ, ಅಂಚಿತಾಃ ದೃಶಃ ಯಾಸಾಂ ತಾಃ, ಪತಿಭಿಃ ಚೋದಿತಾಃ, ಸರ್ವಶ್ಚಾಸೌ ರಸಶ್ಚ ಸರ್ವರಸಃ ತಂ.

Rarest Archiver

ಕ್ರಿ:— ಅಧಿರುಹಂತಿ, ರುಹತಿ ರುಹತಃ ರುಹಂತಿ ಇತ್ಯಾದಿ, ರುಹ ಬೀಜಜನ್ಮನಿ ಪ್ರಾದುರ್ಭಾವೇ ಚ, ಲಟ್ ; ಈ ಧಾತುವು ಭ್ವಾದಿ ಶಬ್‌ವಿಕರಣವಾದುದರಿಂದ ರೋಹತಿ ರೋಹತಃ ಇತ್ಯಾದಿರೂಪಗಳಿರಬೇಕು. ಆದರೂ ಛಾಂದಸವಾಗಿ 'ಶ'ವಿಕರಣ ಬಂದು ಹೀಗೆ ರೂಪವಾಗಿದೆ ಎಂದು ತಿಳಿಯುಬೇಕು. ಇದೇ ಗ್ರಂಥಕಾರರು ತಮ್ಮ ಮಣಿಮಂಜರಿಯಲ್ಲಿ-'ನತ್ವಾಸಾವಾರುಹತ್ ತರುಂ' ಎಂದು ಪ್ರಯೋಗಿಸಿದ್ದಾರೆ.. ಅನುಯತ್ ಪೂರ್ವಾ ಅರುಹತ್ ಸನಾಜುವಃ ಬಳಿತ್ಥಾಸೂಕ್ತ. ಭೂಷಯತಿ ಭೂಷಯತಃ ಭೂಷಯಂತಿ ಇತ್ಯಾದಿ ಭೂಷ ಅಲಂಕಾರೇ ಲಟ್.

ಅವ:—ಮುಕ್ತತರುಣ ತರುಣಿಯರ ಸುರತ ವಿಹಾರವನ್ನು ವರ್ಣಿಸುತ್ತಾರೆ—

**ಅಭಿಕಾಂತಮುನ್ನಮಿತಕಾಂತಕುಚಾ**
**ಕಿಲ ಬಧ್ನತೀ ಸಕುಸುಮಾಂ ಕಬರೀಂ ।**
**ಸುಮುಖೀ ಸುಲಕ್ಷ್ಯಭುಜಮೂಲವಲಿಃ**
**ಪರಿರಭ್ಯತೇ ಪ್ರಣಯಿನಾತಿರಸಾತ್** ॥೫೫॥

ಅ:—ಅಭಿಕಾಂತಂ ಉನ್ನಮಿತಕಾಂತಕುಚಾ ಸಕುಸುಮಾಂ ಕಬರೀಂ ಬಧ್ನತೀ ಕಿಲ ಸುಲಕ್ಷ್ಯಭುಜಮೂಲವಲಿಃ ಸುಮುಖೀ ಪ್ರಣಯಿನಾ ಅತಿರಸಾತ್ ಪರಿರಭ್ಯತೇ ।

ಅರ್ಥ:—ಅಭಿಕಾಂತಂ = ಪ್ರಿಯನ ಅಭಿಮುಖವಾಗಿ, ಉನ್ನಮಿತ ಕಾಂತಕುಚಾ = ಮೇಲಕ್ಕೆತ್ತಿದ ಮನೋಹರವಾದ ಸ್ತನಗಳುಳ್ಳ, ಸಕುಸುಮಾಂ = ಹೂವುಗಳ ಸಹಿತವಾದ, ಕಬರೀಂ = ತುರುಬನ್ನು, ಬಧ್ನತೀ ಕಿಲ = ಕಟ್ಟಿಕೊಳ್ಳುತ್ತಿರುವವಳೋ (ಎಂಬಂತಿರುವ), ಸುಲಕ್ಷ್ಯ ಭುಜಮೂಲವಲಿಃ = ಚೆನ್ನಾಗಿ ಕಾಣುವ ಕಂಕುಳಲ್ಲಿರುವ ಮಡಿಕೆಗಳುಳ್ಳ, ಸುಮುಖೀ = ಸುಂದರಿಯಾದ ಮುಕ್ತತರುಣಿಯು, ಪರಿರಭ್ಯತೇ = ಅಪ್ಪಿಕೊಳ್ಳಲ್ಪಡುತ್ತಾಳೆ.

ತಾ:—ಒಬ್ಬ ಸುಂದರಯುವತಿಯು ಹೂವಿನಿಂದ ಕೂಡಿದ ತನ್ನ

Rarest Archive

ತುರುಬನ್ನು (ತಲೆಗೂದಲಗಂಟನ್ನು) ಕಟ್ಟುವ ನೆವದಿಂದ ತನ್ನ ಸ್ತನಗಳನ್ನು ಮೇಲ್ಮುಖವಾಗಿ ಮಾಡಿಕೊಂಡು ನಿಂತಿದ್ದಳು. ಆಗ ಅವಳ ಕಂಕುಳಿನ ಅಡಿಯ ನೆರಿಗೆಗಳು ಚೆನ್ನಾಗಿ ಕಾಣಿಸಿದುವು. ಆಗ ಪತಿಯು ಅತಿಪ್ರೀತಿಯಿಂದ ಅವಳನ್ನು ಆಲಿಂಗಿಸುತ್ತಾನೆ. ತರುಣಿಗೆ ತನ್ನ ತುರುಬನ್ನು ಕಟ್ಟುವುದರಲ್ಲಿ ತಾತ್ಪರ್ಯವಿಲ್ಲ. ತನ್ನ ಕಂಕುಳನ್ನು, ಮೇಲ್ಮುಖವಾದ ಸ್ತನಗಳನ್ನು ತೋರಿಸಬೇಕೆಂಬ ಅಭಿಲಾಷೆ ಇದ್ದಿತು. ಎಂದು ಭಾವ.

**ವಿ:**—ಕಾಂತಂ ಅಭಿ ಅಭಿಕಾಂತಂ, ಉನ್ನಮಿತೌ ಕಾಂತೌ ಕುಚೌ ಯಸ್ಯಾಃ ಸಾ, ಕುಸುಮೈಃ ಸಹಿತಾ ಸಕುಸುಮಾ ತಾಂ, ಶೋಭನಂ ಮುಖಂ ಯಸ್ಯಾಃ ಸಾ ಸುಮುಖೀ, ಸುಲಕ್ಷ್ಮಾ ಭುಜಯೋಃ ಮೂಲೇ ವಲಿಃ ಯಸ್ಯಾಃ ಸಾ ಸುಲಕ್ಷ್ಮಭುಜಮೂಲವಲಿಃ; ಪ್ರಣಯಃ ಅಸ್ಯ ಅಸ್ತೀತಿ ಪ್ರಣಯೀ ತೇನ.

**ಕ್ರಿ:**—ಪರಿ + ರಭ್ಯತೇ ರಭ್ಯೇತೇ ರಭ್ಯಂತೇ, ರಭ ರಾಭಸ್ಯೇ ಕರ್ಮಣಿ ಆತ್ಮನೇ ಲಟ್.

**ಪೃಥುವೃತ್ತತುಂಗಕಠಿನೋರಸಿಜ**
**ದ್ವಯವಾರಿತಾಯತನಿಜಾಂತರಯೋಃ ।**
**ಭುಜಯೋರ್ಯುಗೇನ ರಮಣೋ ರಮಣೀಂ**
**ಪರಿರಭ್ಯ ಕೋಽತ್ರ ರಮಯೇನ್ನ ಸುಖೀ ॥೫೬॥**

**ಅ:**—ಅತ್ರ ಸುಖೀ ಕಃ ರಮಣಃ ಪೃಥುವೃತ್ತತುಂಗಕಠಿನೋರಸಿಜದ್ವಯವಾರಿತಾಯತನಿಜಾಂತರಯೋಃ ಭುಜಯೋಃ ಯುಗೇನ ಪರಿರಭ್ಯ ರಮಣೀಂ ನ ಸುಖಯೇತ್ ?

**ಅರ್ಥ:**—ಅತ್ರ = ಈ ವೈಕುಂಠಲೋಕದಲ್ಲಿ, ಸುಖೀ = ಆನಂದಪೂರ್ಣನಾದ, ಕಃ ರಮಣಃ = ಯಾವ ಪತಿಯು, ಪೃಥುವೃತ್ತತುಂಗಕಠಿನ = ದಪ್ಪವಾದ ಗುಂಡಗಿರುವ ಎತ್ತರವಾದ ಘಟ್ಟಿಯಾದ, ಉರಸಿಜದ್ವಯ = ಸ್ತನಗಳ ಎರಡರಿಂದ, ವಾರಿತ = ತಡೆಯಲ್ಪಟ್ಟ, ಆಯತ = ವಿಶಾಲವಾದ, ನಿಜಾಂತರಯೋಃ = ತಮ್ಮ (ತೋಳುಗಳ) ಮಧ್ಯಭಾಗವುಳ್ಳ, ಭುಜಯೋಃ

Rarest Archiver

=ತೋಳುಗಳ, ಯುಗೇನ = ಎರಡರಿಂದ, ಪರಿರಭ್ಯ = ಆಲಿಂಗಿಸಿ, ರಮಣೀಂ = ಸುಂದರಿಯನ್ನು, ನ ಸುಖಯೇತ್ = ಆನಂದಗೊಳಿಸ ಲಾರನು ?

ತಾ:— ಈ ವೈಕುಂಠದಲ್ಲಿ ಸ್ವರೂಪಸುಖವನ್ನು ಅನುಭವಿಸುವ ಯಾವ ಮುಕ್ತಪ್ರಿಯತಮನು ದೊಡ್ಡದಾಗಿ ದುಂಡಗಿರುವ ಉನ್ನತವೂ ಕಠಿನವೂ ಆದ ಮುಕ್ತತರುಣಿಯ ಎರಡುಸ್ತನಗಳಿಂದ, ವಿಸ್ತಾರವಾದ ತನ್ನತೋಳುಗಳ ಮಧ್ಯವು (ಎದೆಯು) ತಡೆಯಲ್ಪಡುವಂತೆ ಪ್ರಿಯತಮೆ ಯನ್ನು ಅಪ್ಪಿಕೊಂಡು ಸಂತೋಷಪಡಿಸುವುದಿಲ್ಲ ? ಮುಕ್ತತರುಣಿಯರ ವೃತ್ತಕುಚಗಳು ವಿಸ್ತಾರವಾದ ಪತಿಯ ವಕ್ಷಃಸ್ಥಳವನ್ನು ಪೂರ್ತಿಯಾಗಿ ಆಕ್ರಮಿಸುತ್ತವೆ ಎಂದು ಹೇಳಿದ್ದರಿಂದ ಮುಕ್ತದಂಪತಿಗಳ ದಿವ್ಯತಾರುಣ್ಯವು ವರ್ಣಿತವಾಯಿತು.

ವಿ:—ಉರಸಿ ಜಾಯೇತೇ ಇತಿ ಉರಸಿಜೌ, ಪೃಥೂ ಚ ವೃತ್ತೌ ಚ ತುಂಗೌ ಚ ಕಠಿನೌ ಚ ತೌ ಉರಸಿಜೌ ಚ ಪೃಥು.... ಸಿಜೌ, ತಯೋಃ ದ್ವಯಂ, ತೇನ ವಾರಿತಂ ಆಯತಂ ನಿಜಂ ಅಂತರಂ ಯಯೋಃ ತೌ ಪೃಥು....ತರೌ, ತಯೋಃ, ಸುಖಂ ಅಸ್ಯ ಅಸ್ತೀತಿ ಸುಖೀ ;

ಕ್ರಿ:—ರಮಯೇತ್ ರಮಯೇತಾಂ ರಮಯೇಯುಃ, ರಮಯೇಃ ರಮಯೇತಂ ರಮಯೇತ, ರಮಯೇಯಂ ರಮಯೇವ ರಮಯೇಮ ರಮು ಕ್ರೀಡಾಯಾಂ ಣಿಜಂತವಿಧಿಲಿಙ್.

ಸ್ಮಿತಫುಲ್ಲಮುಲ್ಲಸಿತಚಿಲ್ಲಿ ಲಸ-
ನ್ಮಣಿಕುಂಡಲಂ ಮೃದುಕಟಾಕ್ಷಪಟು ।
ನಿಭೃತೋ ನಿರೀಕ್ಷ್ಯ ಸುಚಿರಂ ಸುತನೋಃ
ಪ್ರತಿಚುಂಬತಿ ಪ್ರಿಯತಮೋ ವದನಂ ॥೫೭॥

ಅ:—ಪ್ರಿಯತಮಃ ಸ್ಮಿತಫುಲ್ಲಂ ಉಲ್ಲಸಿತಚಿಲ್ಲಿ, ಲಸನ್ಮಣಿಕುಂಡಲಂ ಮೃದುಕಟಾಕ್ಷಪಟು ಸುತನೋಃ ವದನಂ ನಿಭೃತಃ ಸುಚಿರಂ ನಿರೀಕ್ಷ್ಯ ಪ್ರತಿಚುಂಬತಿ.

Rarest Archiver

**ಅರ್ಥ:**—ಪ್ರಿಯತಮಃ = ರಮಣನು, ಸ್ಮಿತಫುಲ್ಲಂ = ಮಂದಹಾಸದಿಂದ ಅರಳಿದ, ಉಲ್ಲಸಿತಚಿಲ್ಲಿ = ಪ್ರಕಾಶಿಸುವ ಕೆನ್ನೆಗಳುಳ್ಳ, ಲಸನ್ಮಣಿಕುಂಡಲಂ = ಹೊಳೆಯುವ ರತ್ನಮಯವಾದ ಕುಂಡಲಗಳುಳ್ಳ, ಮೃದುಕಟಾಕ್ಷ = ಮೃದುವಾದ ಕಡೆಗಣ್ಣಿನ ನೋಟದಿಂದ, ಪಟು = ಚತುರವಾದ, ಸುತನೋಃ = ಸುಂದರಿಯ, ವದನಂ = ಮುಖವನ್ನು ನಿಭೃತಃ = ಏಕಾಗ್ರಚಿತ್ತವುಳ್ಳವನಾಗಿ, ಸುಚಿರಂ = ಬಹಳಹೊತ್ತು, ನಿರೀಕ್ಷ್ಯ = ನೋಡಿ, ಪ್ರತಿಚುಂಬತಿ = ಮುದ್ದಿಸುತ್ತಾನೆ.

**ತಾ:**— ಕಿರುನಗೆಯಿಂದ ಅರಳಿದ ಕಪೋಲಗಳಿಂದ ಮುಕ್ತ ಸುಂದರಿಯ ಮುಖವು ಕಂಗೊಳಿಸುತ್ತಿತ್ತು ಮತ್ತು ರತ್ನದ ಓಲೆಗಳಿಂದ ಮನೋಹರವಾಗಿತ್ತು. ಸುಂದರಾಂಗಿಯ, ಕೋಮಲವಾದ ಕಟಾಕ್ಷಗಳಿಂದ ಸುಂದರವಾದ ಇಂತಹ ಮುಖವನ್ನು ಅತ್ಯಂತಪ್ರಿಯನಾದ ಪತಿಯು ನೆಟ್ಟಕಣ್ಣುಗಳಿಂದ ನೋಡಿ ಅನಂತರ ಚುಂಬಿಸುತ್ತಾನೆ.

**ವಿ:**—ಸ್ಮಿತೇನ ಫುಲ್ಲಂ, ತತ್, ಉಲ್ಲಸಿತೌ ಚಿಲ್ಲೀ ಯಸ್ಮಿನ್ ತತ್, ಲಸಂತೀ ಮಣಿಕುಂಡಲೇ ಯಸ್ಮಿನ್ ತತ್, ಮೃದುಶ್ಚಾಸೌ ಕಟಾಕ್ಷಶ್ಚ ತೇನ ಪಟು ;

**ಕ್ರಿ:**—ಪ್ರತಿ + ಚುಂಬತಿ, ಚುಂಬತಃ ಚುಂಬಂತಿ, ಚುಬಿ ವಕ್ತ್ರ ಸಂಯೋಗೇ ಲಟ್.

**ನತಮುನ್ನಮಯ್ಯ ಮುಖಚಂದ್ರಮಸಂ**
**ಪರಿರಂಭಸಂಭೃತಮುದಾ ಸುದೃಶಃ।**
**ಉಪರಮ್ಯತೇ ನ ತರುಣೇನ ಚಿರಂ**
**ಮಧುರಾಧರಾಮೃತರಸಂ ಪಿಬತಾ** ||೩೮||

**ಅ:**—ಸುದೃಶಃ ಪರಿರಂಭಸಂಭೃತಮುದಾ ನತಂ ಮುಖಚಂದ್ರಮಸಂ ಉನ್ನಮಯ್ಯ ಮಧುರಾಧರಾಮೃತರಸಂ ಪಿಬತಾ ತರುಣೇನ ಚಿರಂ ನ ಉಪರಮ್ಯತೇ ।

**ಅರ್ಥ:**—ಸುದೃಶಃ = ಸುಂದರಲೋಚನೆಯಾದ ಮುಕ್ತತರುಣಿಯ;

Rarest Archiver

ಪರಿರಂಭ = ಆಲಿಂಗನದಿಂದ, ಸಂಭೃತ = ತುಂಬಿದ, ಮುದಾ = ಸಂತೋಷವುಳ್ಳ, ನತಂ = ಬಾಗಿದ, ಮುಖಚಂದ್ರಮಸಂ = ಮುಖವೆಂಬ ಚಂದ್ರನನ್ನು, ಉನ್ನಮಯ್ಯ = ಮೇಲಕ್ಕೆತ್ತಿ, ಮಧುರ = ಸಿಹಿಯಾದ (ಆನಂದಕರವಾದ) ಅಧರಾಮೃತ = ತುಟಿಯ ಅಮೃತದ, ರಸಂ = ಸಾರವನ್ನು, ಪಿಬತಾ = ಕುಡಿಯುತ್ತಿರುವ, ತರುಣೇನ = ಮುಕ್ತಯುವಕನಿಂದ, ಚಿರಂ = ಬಹಳ ಹೊತ್ತು, ನ ಉಪರಮ್ಯತೇ = ಸುಮ್ಮನಿರೋಣವಾಗುವುದಿಲ್ಲ.

ತಾ :—ಸುಂದರಲೋಚನೆಯಾದ ಮುಕ್ತತರುಣಿಯನ್ನು ಆಲಿಂಗಿಸಿ ಆನಂದ ಪೂರ್ಣನಾದ ಮುಕ್ತತರುಣನು, ನಾಚಿಕೆಯಿಂದ ತಗ್ಗಿಬಗ್ಗಿರುವ ಅವಳ ಸುಂದರಚಂದಿರಮುಖವನ್ನು ಮೇಲಕ್ಕೆತ್ತಿ ಬಹಳ ಹೊತ್ತು ಚುಂಬಿಸುತ್ತಲೇ ಇರುವನು, ಸುಮ್ಮನಾಗುವುದೇ ಇಲ್ಲ.

ವಿ:—ಮುಖಮೇವ ಚಂದ್ರಮಾಃ ಮುಖಚಂದ್ರಮಾಃ ತಂ, ಪರಿರಂಭೇಣ ಸಂಭೃತಾ ಮುತ್ ಯಸ್ಯ ಸಃ ಪರಿರಂಭಸಂಭೃತಮುತ್ ತೇನ; ಶೋಭನೇ ದೃಶೌ ಯಸ್ಯಾಃ ಸಾ ಸುದೃಕ್ ತಸ್ಯಾಃ। ಅಮೃತಸ್ಯ ರಸಃ ಅಮೃತರಸಃ ಅಧರೇ ಅಮೃತರಸಃ ಅಧರಾಮೃತರಸಃ, ಮಧುರಶ್ಚಾಸೌ ಅಧರಾಮೃತರಸಶ್ಚ ಮಧುರಾಧರಾಮೃತರಸಃ ತಂ;

ಕ್ರಿ:—ಉಪ + ರಮ್ಯತೇ ಉಪ: ಉಪಸರ್ಗ. ರಮು ಕ್ರೀಡಾಯಾಂ ಭಾವೇ ಲಟ್.

ಸುರತೋತ್ಸವೋತ್ಸುಕತಯಾ ತ್ವರಯನ್
ಕರಪಲ್ಲವಂ ನಿವಸನಗ್ರಹಣೇ।
ಕರರುದ್ಧಮಾಯತದೃಶಃ ಸಹಸಾ
ತ್ವರಯತ್ಯಥ ದ್ವಿಗುಣಮಿಷ್ಟತಮಃ ॥೫೯॥

ಅ :—ಇಷ್ಟತಮಃ ಸುರತೋತ್ಸವೋತ್ಸುಕತಯಾ ನಿವಸನಗ್ರಹಣೇ ತ್ವರಯನ್ ಆಯತದೃಶಃ ಕರರುದ್ಧಂ ಕರಪಲ್ಲವಂ ಅಥ ಸಹಸಾ ದ್ವಿಗುಣಂ ತ್ವರಯತಿ.

ಅರ್ಥ:—ಇಷ್ಟತಮಃ = ಅತ್ಯಂತಪ್ರೀತಿವಿಷಯನಾದ ವಲ್ಲಭನು,

ಸುರತೋತ್ಸವೋತ್ಸುಕತಯಾ = ರತಿಕ್ರೀಡೆಯಲ್ಲಿ ಉತ್ಕಂಠೆಯುಳ್ಳವನಾದುದರಿಂದ, ನಿವಸನಗ್ರಹಣೇ = ಉಟ್ಟಿರುವ ಬಟ್ಟೆಯನ್ನು ಬಿಡಿಸುವುದಕ್ಕಾಗಿ ಹಿಡಿದುಕೊಳ್ಳುವುದರಲ್ಲಿ, ತ್ವರಯನ್ = ಅವಸರಿಸುತ್ತಾ, ಆಯತದೃಶಃ = ವಿಶಾಲವಾದ ಕಣ್ಣುಗಳುಳ್ಳ ಪ್ರಿಯೆಯು, ಕರರುದ್ಧಂ = ಕೈಯಿಂದ ತಡೆಯಲ್ಪಟ್ಟ, ಕರಪಲ್ಲವಂ = ತನ್ನ ಚಿಗುರೆಲೆಯಂತಹ ಕೈಯನ್ನು, ಅಥ = ಅನಂತರ, ಸಹಸಾ = ಕೂಡಲೇ, ದ್ವಿಗುಣಂ = ಇಮ್ಮಡಿಯಾಗಿ, ತ್ವರಯತಿ = ಅವಸರಿಸುತ್ತಾನೆ.

**ತಾ:**—ಪ್ರಿಯನು ಪ್ರೇಯಸಿಯ ಮುಖವನ್ನು ಚುಂಬಿಸಿದ ತರುವಾಯ ರತಿಕ್ರೀಡೆಯನ್ನು ಮಾಡಲು ಉತ್ಸುಕನಾಗುವನು. ಅವನು ವಿಶಾಲಾಕ್ಷಿಯಾದ ಪ್ರಿಯೆಯ ನಿತಂಬದಿಂದ ಬಟ್ಟೆಯನ್ನು ತನ್ನ ಕೈಯಿಂದ ಸರಿಸಲು ಉದ್ಯುಕ್ತನಾಗುವನು, ಅದಕ್ಕಾಗಿ ಅವಸರಮಾಡುವನು. ಆಗ ಪ್ರಿಯೆಯು ತನ್ನ ಕೈಯಿಂದ ಪ್ರಿಯನ ಕೈಯನ್ನು ತಡೆಯುವಳು. ಅಷ್ಟರಲ್ಲಿ ಅವನು ಬಟ್ಟೆಯನ್ನು ಸರಿಸಲು ಇಮ್ಮಡಿವೇಗದಿಂದ ಮುಂದುವರಿಯುವನು.

**ವಿ:**—ಸುರತಂ ಇತಿ ಉತ್ಸವಃ ಸುರತೋತ್ಸವಃ, ಸುರತೋತ್ಸವೇ ಉತ್ಸುಕಃ ಸುರತೋತ್ಸವೋತ್ಸುಕಃ ತಸ್ಯ ಭಾವಃ ಸುರತೋತ್ಸವೋತ್ಸುಕತಾ ತಯಾ, ಕರಃ ಪಲ್ಲವ ಇವ ಕರಪಲ್ಲವಃ ತಂ, ನಿವಸನಸ್ಯ ಗ್ರಹಣಂ ನಿವಸನಗ್ರಹಣಂ ತಸ್ಮಿನ್, ಕರೇಣ ರುದ್ಧಃ ತಂ, ಆಯತೇ ದೃಶೌ ಯಸ್ಯಾಃ ಸಾ ಆಯತದೃಕ್ ತಸ್ಯಾಃ, ದ್ವೌ ಗುಣೌ ಯಸ್ಮಿನ್ ಕರ್ಮಣಿ ತದ್ಯಥಾ ಭವತಿ ತಥಾ ದ್ವಿಗುಣಂ, ಅತಿಶಯೇನ ಇಷ್ಟಃ ಇಷ್ಟತಮಃ ||

**ಕ್ರಿ:**—ತ್ವರಯತಿ ತ್ವರಯತಃ ತ್ವರಯಂತಿ ಇತ್ಯಾದಿ. ಞಿತ್ವರಾ ಸಂಭ್ರಮೇ ಣಿಜಂತಲಟ್.

**ರಭಸಾವಪಾತಿತಪೃಥೂರಸಿಜಃ**
**ಪರಿರಭ್ಯ ತತ್ಕ್ಷಣವಿಯೂತತರಃ ।**
**ಮಣಿತಾದಿಸೌರತವಿತಾನಪಟೂ**
**ರಮಯತ್ಯಮೂನ್ ಯುವತಿಸಂಘ ಉತ ||೬೦||**

Rarest Archiver

**ಅ:—** ರಭಸಾವಪಾತಿತಪೃಥೂರಸಿಜಃ, ತತ್ಕ್ಷಣವಿಯಾತತರಃ ಮಣಿತಾದಿಸೌರತವಿತಾನಪಟುಃ ಯುವತಿಸಂಘಃ ಉತ ಅಮೂನ್ ಪರಿರಭ್ಯ ರಮಯತಿ |

**ಅರ್ಥ:—**ರಭಸ = ವೇಗದಿಂದ, ಅವಪಾತಿತ = ಕೆಳಮುಖವಾಗಿ ಬೀಳಿಸಲ್ಪಟ್ಟ, ಪೃಥೂರಸಿಜಃ = ದೊಡ್ಡಕುಚಗಳುಳ್ಳ, ತತ್ಕ್ಷಣ=ಆ ರತಕ್ರೀಡಾಸಮಯದಲ್ಲಿ, ವಿಯಾತತರಃ=ಅತ್ಯಂತ ದಿಟ್ಟವಾದ, ಮಣಿತಾದಿ =ಮಣಿತವೆಂಬ ರತಿಕ್ರೀಡೆಯ ಧ್ವನಿಯೇ ಮೊದಲಾಗಿ ಉಳ್ಳ, ಸೌರತ= ಸುರತಕ್ರೀಡೆಯ, ವಿತಾನ = ವಿಸ್ತಾರದಲ್ಲಿ, ಪಟುಃ = ಚತುರವಾದ, ಯುವತಿಸಂಘಃ ಉತ=ಮುಕ್ತತರುಣಿಯರ ಸಮೂಹವೂ, ಅಮೂನ್ =ಈ ಪ್ರಿಯರನ್ನು, ಪರಿರಭ್ಯ = ಆಲಿಂಗಿಸಿ, ರಮಯತಿ = ಸಂತೋಷ ಪಡಿಸುತ್ತದೆ. (ವಿಹಾರ ಮಾಡಿಸುತ್ತದೆ.)

**ತಾ :—**ಆ ಮುಕ್ತತರುಣಿಯರು ವೇಗದಿಂದ ಕೆಳಮುಖವಾಗಿ ತಮ್ಮ ಸ್ಥೂಲವಾದ ಸ್ತನಗಳನ್ನು ಪ್ರಿಯತಮರ ವಕ್ಷಃಸ್ಥಳಗಳಲ್ಲಿ ಒತ್ತಿ ಇಟ್ಟು ಅಪ್ಪಿಕೊಳ್ಳುತ್ತಾರೆ. ಸುರತಕಾಲದಲ್ಲಿ ಹೆಚ್ಚಾದ ದಿಟ್ಟತನದಿಂದ ಮಣಿತ ಮೊದಲಾದ ಧ್ವನಿವಿಶೇಷದಿಂದ ಕೂಡಿದ ಸುರತಕ್ರೀಡೆಯಲ್ಲಿ ಚಾತುರ್ಯ ವನ್ನು ತೋರಿಸುತ್ತಾ ಮುಕ್ತತರುಣರನ್ನು ಆನಂದ ಪಡಿಸುತ್ತಾರೆ. ಮಣಿತ=ರತಿಕಾಲದಲ್ಲಿ ಕಂಠದಿಂದ ಬರುವ ಒಂದುವಿಧವಾದ ಮಧುರ-ಸ್ವರವು. (ಇಲ್ಲಿ ಕೆಳಗೆ ತರುಣನೂ ಮೇಲೆ ತರುಣಿಯೂ ಇದ್ದು ನಡೆಸುವ ಪುರುಷಾಯಿತವೆಂಬ ಸುರತಕ್ರೀಡೆಯನ್ನು ವರ್ಣಿಸಿದ್ದಾರೆ. ಪುರುಷಾಯಿತ= ತರುಣಿಯು ತರುಣನಂತೆ ನಡೆಸುವ ರತಿಕ್ರೀಡೆಯು.)

**ವಿ:—**ರಭಸೇನ ಅವಪಾತಿತೌ ಪೃಥೂ ಉರಸಿಜೌ ಯೇನ ಸಃ, ಅತಿಶಯೇನ ವಿಯಾತಃ ವಿಯಾತತರಃ ತತ್ಕ್ಷಣಂ ವಿಯಾತತರಃ, ಸುರತಸ್ಯೇದಂ ಸೌರತಸ್ಯ ವಿತಾನಃ, ಮಣಿತಂ ಆದಿಃಯಸ್ಯಸಃ, ಮಣಿತಾ ದಿಶ್ಚಾಸೌ ಸೌರತವಿತಾನಶ್ಚ,ಮಣಿತಾದಿಸೌರತವಿತಾನೇ ಪಟುಃ, ಮಣಿತಾದಿ ಸೌರತವಿತಾನಪಟುಃ+ರಮಯತಿ ಎಂಬಲ್ಲಿ ಶ್ಲೋಕದಲ್ಲಿ ವಿಸರ್ಗವು ಸ್ ಆಗಿ, ಅದು ರ್ ಆಗಿ ಪಟುರ್+ರಮಯತಿ ಎಂದಿರುವಾಗ ಹಿಂದಿನ ರೇಫ

Rarest Archive

ಲೋಪ, ಲುಪ್ತರೇಫದ ಹಿಂದಿನ ಉಕಾರಕ್ಕೆ ದೀರ್ಘ–ಸೂ:–'ಢ್ರಲೋಪೇ ಪೂರ್ವಸ್ಯ ದೀರ್ಘೋಽಣಃ' ಯುವತೀನಾಂ ಸಂಘಃ ಯುವತಿಸಂಘಃ |

ಕ್ರಿ :—ರಮಯತಿ ರಮಯತಃ ರಮಯಂತಿ ಇತ್ಯಾದಿ ರಮು ಕ್ರೀಡಾಯಾಂ ಣಿಜಂತ ಲಟ್.

**ಅತಿಲೌಕಿಕಾನ್ ರಮಯತೋ ರಮಣಾನ್**
**ರಮಯಂತ್ಯಲೌಕಿಕಗುಣಾ ಲಲನಾಃ |**
**ಅನುರೂಪರೂಪಮತಿಲೋಕಸುಖಂ**
**ತದಲೌಕಿಕಂ ನಿಧುವನಂ ಲಸತಿ ||೬೧||**

ಅ :—ಅಲೌಕಿಕಗುಣಾಃ ಲಲನಾಃ ಅತಿಲೌಕಿಕಾನ್ ರಮಯತಃ ರಮಣಾನ್ ರಮಯಂತಿ. ಅನುರೂಪರೂಪಂ ಅತಿಲೋಕಸುಖಂ ಅಲೌಕಿಕಂ ತತ್ ನಿಧುವನಂ ಲಸತಿ |

ಅರ್ಥ:- ಅಲೌಕಿಕಗುಣಾಃ ಲಲನಾಃ = ಲೋಕ ವಿಲಕ್ಷಣವಾದ ಗುಣಗಳುಳ್ಳ ಮುಕ್ತಸುಂದರಿಯರು, ಅತಿಲೌಕಿಕಾನ್ = ಲೋಕವನ್ನು ಮೀರಿದ ಸ್ವಭಾವವುಳ್ಳ, ರಮಯತಃ ರಮಣಾನ್ = ಸಂತೋಷಪಡಿಸುತ್ತಿರುವ ಮುಕ್ತರಾದ ಪತಿಗಳನ್ನು, ರಮಯಂತಿ = ಆನಂದಗೊಳಿಸುತ್ತಾರೆ. ಅನು-ರೂಪರೂಪಂ = ಪರಸ್ಪರ ಅನುಗುಣವಾದರೂಪವುಳ್ಳ, ಅತಿಲೋಕಸುಖಂ = ಇತರಲೋಕಗಳ ಸುಖವನ್ನು ಮೀರಿದ ಸುಖವುಳ್ಳ, ಅಲೌಕಿಕಂ = ಲೋಕ ವಿಲಕ್ಷಣವಾದ, ತತ್ ನಿಧುವನಂ = ಆ ರತಿಕ್ರೀಡೆಯು, ಲಸತಿ = ಪ್ರಕಾಶಿಸುತ್ತಿದೆ.

ತಾ:—ಇತರ ಯಾವಲೋಕಗಳಲ್ಲಿಯೂ ಇಲ್ಲದ ವಿಶೇಷವಾದ ಆನಂದಗುಣವುಳ್ಳ ಮುಕ್ತಲಲನೆಯರು ಇತರಲೋಕವಿಲಕ್ಷಣವಾದ ರೀತಿಯಿಂದ ತಮ್ಮನ್ನು ಆನಂದಪಡಿಸುವ ಮುಕ್ತತರುಣರನ್ನು ಆನಂದ ಪಡಿಸುತ್ತಾರೆ. ಆ ವೈಕುಂಠದ ರತಿಕ್ರೀಡೆಯು ಪರಸ್ಪರ ಅನುಕೂಲವಾದುದು. ಸ್ವರ್ಗಾದಿಲೋಕದ ಸುಖಕ್ಕಿಂತ ಮಿಗಿಲಾದ ಸುಖವನ್ನು ಕೊಡತಕ್ಕದ್ದು ಆಗಿದೆ. ಹೀಗೆ ಇತರಲೋಕ ವಿಲಕ್ಷಣವಾಗಿ ಅದು ಕಂಗೊಳಿಸುತ್ತದೆ.

Rarest Archiver

ವಿ:—ಲೌಕಿಕಾನ್ ಅತಿಕ್ರಾಂತಾಃ ಅತಿಲೌಕಿಕಾಃ ತಾನ್, ಅಲೌಕಿಕಾಃ ಗುಣಾಃ ಯಾಸಾಂ ತಾಃ ಅಲೌಕಿಕಗುಣಾಃ, ಅನುರೂಪಂ ರೂಪಂ ಯಸ್ಯ ತತ್, ಲೋಕಾನ್ ಅತಿಕ್ರಾಂತಂ ಅತಿಲೋಕಂ, ಅತಿಲೋಕಂ ಸುಖಂ ಯಸ್ಮಿನ್ ತತ್, ನ ಲೌಕಿಕಂ ಅಲೌಕಿಕಂ.

ಕ್ರಿ:—ಲಸತಿ, ಲಸ ದೀಪ್ತೌ ಲಟ್.

ಅವ:—ಇಂತಹ ಕ್ರೀಡೆಗಳಿಂದ ಅಲ್ಲಿ ಶ್ರಮ ಮೊದಲಾದದೋಷ ಗಳಿಲ್ಲ—

**ನ ರತಿಃ ಶ್ರಮಾದಿಖಚಿತಾ ನಿಯಮಾದ್**
**ವಿರಹವ್ಯಥಾಪಿ ನ ವಧೂವರಯೋಃ ।**
**ಪ್ರತಿಕಾಮಿನೀಪ್ರಣಯತಃ ಕಲಹೋ**
**ನ ಸಮಸ್ತದೋಷರಹಿತೇ ಹಿ ಪದೇ ॥೬೨॥**

ಅ:—ಸಮಸ್ತದೋಷರಹಿತೇ ಪದೇ ರತಿಃ ಶ್ರಮಾದಿಖಚಿತಾ ನಿಯಮಾತ್ ನ, ವಧೂವರಯೋಃ ವಿರಹವ್ಯಥಾ ಅಪಿ ನ, ಪ್ರತಿಕಾಮಿನೀ ಪ್ರಣಯತಃ ಕಲಹಃ ನ ಹಿ.

ಅರ್ಥ:—ಸಮಸ್ತದೋಷರಹಿತೇ = ಎಲ್ಲಾ ದೋಷಗಳಿಂದ ಮುಕ್ತವಾದ, ಪದೇ = ಮುಕ್ತವೈಕುಂಠಲೋಕದಲ್ಲಿ, ರತಿಃ = ಸುರತಕ್ರೀಡೆಯು, ಶ್ರಮಾದಿಖಚಿತಾ = ಆಯಾಸ, ಬೆವರು ಮುಂತಾದುವುಗಳಿಂದ ಕೂಡಿದುದು. ನಿಯಾಮಾತ್ ನ = ಯಾವವಿಧದಿಂದಲೂ ಅಲ್ಲ. ವಧೂವರಯೋಃ = ದಂಪತಿಗಳಿಗೆ, ವಿರಹವ್ಯಥಾ ಅಪಿ = ಅಗಲಿಕೆಯ ಚಿಂತೆಯೂ, ನ = ಇಲ್ಲ, ಪ್ರತಿಕಾಮಿನೀಪ್ರಣಯತಃ = ಸವತಿಯ(ಲ್ಲಿ) ಅನುರಾಗದಿಂದ, ಕಲಹಃ ನ ಹಿ = ಜಗಳವು ಇಲ್ಲ.

ತಾ:—ಆ ವೈಕುಂಠಲೋಕದಲ್ಲಿ ಯಾವ ದೋಷವೂ ಇಲ್ಲ, ಅಲ್ಲಿ ನಡೆಯುವ ಮುಕ್ತದಂಪತಿಗಳ ರತಿಕ್ರೀಡೆಯಲ್ಲಿ ಬಳಲಿಕೆ, ದುರ್ವಾಸನೆ, ಬೆವರು ಮೊದಲಾದ ದೋಷವಿಲ್ಲ, ವಧೂವರರಿಗೆ ಅಗಲಿಕೆಯ ದುಃಖವೂ

Rarest Archiver

ಇಲ್ಲ. ಪ್ರಿಯನು ಸಪತಿಯಲ್ಲಿ ಅಥವಾ ಅನ್ಯಕಾಮಿನಿಯಲ್ಲಿ ವಿಹರಿಸುವನೋ ಎಂಬ ಸಂಶಯ, ಆದರಿಂದ ಉಂಟಾಗುವ ಜಗಳ ಯಾವುದೂ ಇಲ್ಲ. ಅಲ್ಲಿ ಸ್ವರೂಪದಾಂಪತ್ಯ ಸ್ವರೂಪಾನಾಂದಾವಿರ್ಭಾವಾತ್ಮಕವಾದ ಕ್ರೀಡೆಯು ಇರುತ್ತದೆ.

ವಿ:—ಶ್ರಮಃ ಆದಿಃ ಯೇಷಾಂ ತೇ, ಶ್ರಮಾದಿಭಿಃ ಖಚಿತಾ, ವಿರಹೇಣ ವ್ಯಥಾ, ವಧೂಶ್ಚ ವರಶ್ಚ ವಧೂವರೌ ತಯೋಃ, ಪ್ರತಿಕಾಮಿನ್ಯಾಂ ಪ್ರಣಯಃ, ಪ್ರತಿಕಾಮಿನೀಪ್ರಣಯಾತ್ ಇತಿ, ಸಮಸ್ತಾಶ್ಚ ತೇ ದೋಷಾಶ್ಚ ಸಮಸ್ತದೋಷೈಃ ರಹಿತಂ, ತಸ್ಮಿನ್ ||

**ಸುಖಸಂವಿದಾತ್ಮಕತಯಾ ವಪುಷಾಂ**
**ಸುರಭಿತ್ವಮೇವ ಬಹಿರಂತರಪಿ।**
**ಹರಿಧಾಮ್ನಿ ದಂಪತಿಗಣಸ್ಯ ತತೋ**
**ನನು ಮಾನ್ಯತೇಽಪಿ ಮುನಿಭಿಃ ಸುರತಂ ||೬೩||**

ಅ :—ಹರಿಧಾಮ್ನಿ ದಂಪತಿಗಣಸ್ಯ ಸುಖಸಂವಿದಾತ್ಮಕತಯಾ ಬಹಿಃ ಅಂತಃ ಅಪಿ ಸುರಭಿತ್ವಂ ಏವ. ತತಃ ಸುರತಂ ಮುನಿಭಿಃ ಅಪಿ ಮಾನ್ಯತೇ ನನು.

ಅರ್ಥ:— ಹರಿಧಾಮ್ನಿ = ಮುಕ್ತವೈಕುಂಠಲೋಕದಲ್ಲಿ, ದಂಪತಿಗಣಸ್ಯ = ಮುಕ್ತದಂಪತಿಸಮೂಹದ, ವಪುಷಾಂ = ಶರೀರಗಳಿಗೆ, ಸುಖಸಂವಿದಾತ್ಮಕತಯಾ = ಆನಂದ, ಜ್ಞಾನ ಸ್ವರೂಪವುಳ್ಳತನದಿಂದ, ಬಹಿಃ ಅಂತಃ ಅಪಿ = ಒಳಗೂ ಹೊರಗೂ, ಸುರಭಿತ್ವಂ ಏವ = (ಅಸ್ತಿ) ಸುವಾಸನೆಯೇ ಇರುತ್ತದೆ. ತತಃ = ಆದುದರಿಂದ, ಸುರತಂ = ವೈಕುಂಠ ಲೋಕದ ರತಿಕ್ರೀಡೆಯು, ಮುನಿಭಿಃ ಅಪಿ = ಜ್ಞಾನಿಗಳಾದ ಬ್ರಹ್ಮಾದಿಗಳಿಂದಲೂ, ಮಾನ್ಯತೇ ನನು = ಗೌರವಿಸಲ್ಪಡುತ್ತದೆಯಷ್ಟೆ ;

ತಾ:—ಆ ವೈಕುಂಠಲೋಕದಲ್ಲಿ ದಂಪತಿಗಳ ದೇಹಗಳು, ಆನಂದ ಜ್ಞಾನಸ್ವರೂಪಗಳು, ದೇಹಗಳು ಒಳಗೂ ಹೊರಗೂ ಸುವಾಸನಾಭರಿತವಾಗಿರುತ್ತವೆ. ಜ್ಞಾನ-ಆನಂದಾತ್ಮಕವಾದ ಅಪ್ರಾಕೃತಪರಿಮಳವೇ ಅವರ

Rarest Archiver

ದೇಹವು. ಆದುದರಿಂದ ಮುಕ್ತರಾದ ದಂಪತಿಗಳ ವಿಹಾರವನ್ನು ಬ್ರಹ್ಮಾದಿ ಜ್ಞಾನಿಶ್ರೇಷ್ಠರೂ ಹೊಗಳುತ್ತಾರೆ, ಗೌರವಿಸುತ್ತಾರೆ. (ಸಂಸಾರದಲ್ಲಿಯೂ) ಅದರ ವರ್ಣನೆಯನ್ನು ಆನಂದದಿಂದ ಕೇಳುತ್ತಾರೆ.

ವಿ:—ಸುಖಂ ಚ ಸಂವಿತ್ ಚ ಸುಖಸಂವಿದೌ, ತೇ ಆತ್ಮಾ ಯೇಷಾಂ ತಾನಿ ಸುಖಸಂವಿದಾತ್ಮಕಾನಿ (ವಪೂಂಷಿ) ತೇಷಾಂ ಭಾವಃ ಸುಖಸಂವಿದಾತ್ಮಕತಾ, ತಯಾ, ಸುರಭೀಣಾಂ ಭಾವಃ ಸುರಭಿತ್ವಂ, ಹರೇಃ ಧಾಮ ಹರಿಧಾಮ (ನ್) ತಸ್ಮಿನ್ ; ದಂಪತ್ಯೋಃ ಗಣಃ ತಸ್ಯ ;

ಕ್ರಿ:—ಮಾನ್ಯತೇ ಮಾನ್ಯೇತೇ ಮಾನ್ಯಂತೇ, ಮಾನ ಪೂಜಾಯಾಂ ಕರ್ಮಣಿ ಲಟ್. (ಮುನಯಃ ಅಪಿ ಸುರತಂ ಮಾನಯಂತಿ.)

**ಅವ:**— ಅಪ್ರಾಕೃತವಾದ ಮುಕ್ತರ ದಾಂಪತ್ಯಸುಖಕ್ಕಿಂತಲೂ ಮಿಗಿಲಾದ ಮತ್ತೊಂದು ಸುಖವಿದೆ—

**ಶೃಣುತಾಪ್ಯಲೋಕವಿಷಯಂ ವಿಷಯಂ**
**ಸಕಲಸ್ಯ ಮುಕ್ತನಿಕರಸ್ಯ ದೃಶಾಂ।**
**ವಪುರಿಂದಿರಾಪತಿರಮಂದರಸಂ**
**ನನು ಸುಂದರಂ ಪ್ರಕಟಯತ್ಯನಿಶಂ ||೬೪||**

ಅ:—ಅಲೋಕವಿಷಯಂ ಸಕಲಸ್ಯ ಮುಕ್ತನಿಕರಸ್ಯ ದೃಶಾಂ ವಿಷಯಂ ಅಪಿ ಶೃಣುತ| ಇಂದಿರಾಪತಿಃ ಅಮಂದರಸಂ ಸುಂದರಂ ವಪುಃ ಅನಿಶಂ ಪ್ರಕಟಯತಿ ನನು.

**ಅರ್ಥ:**— ಅಲೋಕವಿಷಯಂ = ಇತರಲೋಕದವರ ಕಣ್ಣಿಗೆ ಕಾಣದ, ಸಕಲಸ್ಯ ಮುಕ್ತನಿಕರಸ್ಯ = ಎಲ್ಲಾ ಮುಕ್ತರಸಮೂಹದ, ದೃಶಾಂ = ಕಣ್ಣುಗಳಿಗೆ, ವಿಷಯಂ ಅಪಿ = ಕಾಣುವ ವಸ್ತುವನ್ನೂ, ಶೃಣುತ = ಕೇಳಿರಿ. ಇಂದಿರಾಪತಿಃ = ಶ್ರೀಮನ್ನಾರಾಯಣನು, ಅಮಂದರಸಂ = ಪರಿಪೂರ್ಣವಾದ ಶೃಂಗಾರಬಲವೀರ್ಯಾದಿಗುಣಗಳ ಸಮುದಾಯವುಳ್ಳ, ಸುಂದರಂ = ಮನೋಹರವಾದ, ವಪುಃ = ಶರೀರವನ್ನು, ಅನಿಶಂ ಪ್ರಕಟಯತಿ ನನು = ನಿರಂತರವಾಗಿ ಅವಿರ್ಭಾವಗೊಳಿಸುತ್ತಿರುವನಷ್ಟೆ !

Rarest Archive

ತಾ:—ಸಮಸ್ತಮುಕ್ತವರ್ಗದ ಕಣ್ಣುಗಳಿಗೆ ತೋರಿದರೂ ಇತರ-ಮುಕ್ತರಲ್ಲದ ಜೀವರ ಕಣ್ಣುಗಳಿಗೆ ಕಾಣದಿರುವ ಒಂದು ಅದ್ಭುತವಾದ ವಿಷಯವನ್ನು, (ವಸ್ತುವನ್ನು) ಹೇಳುತ್ತೇನೆ ಕೇಳಿರಿ (ಎಂದು ಸನಕಾದಿಗಳನ್ನು ಸಂಬೋಧಿಸಿ ಶೇಷದೇವರು ಹೇಳುತ್ತಾ, ಮುಂದೆ ಹೇಳತ್ತಾರೆ-) ಲಕ್ಷ್ಮೀಪತಿಯಾದ ನಾರಾಯಣನು ಪರಿಪೂರ್ಣವಾದ ಅಪರಿಮಿತಶೃಂಗಾರ ಬಲ ವೀರ್ಯ ಶೌರ್ಯ, ಧೈರ್ಯಔದಾರ್ಯ ಮೊದಲಾದ ಅಪ್ರಾಕೃತಾನಂತಗುಣಗಣಾತ್ಮಕವಾದ ಪರಮಸುಂದರವಾದ ತನ್ನ ಸ್ವರೂಪವನ್ನು ಮುಕ್ತಜೀವರಿಗೆ ನಿರಂತರದಲ್ಲಿಯೂ ತೋರಿಸುತ್ತಲೇ ಇರುತ್ತಾನೆ. ಇಂತಹ ಪರಮಾನಂದಾತ್ಮಕ ಪರಮಾತ್ಮ ವಸ್ತುವೇ ಮುಕ್ತರಿಗೆ ತೋರುವ ಉತ್ತಮವಸ್ತುವು.

ವಿ :—ಲೋಕಸ್ಯ ವಿಷಯಃ ಲೋಕವಿಷಯಃ ನ ಲೋಕವಿಷಯಃ ಅಲೋಕವಿಷಯಃ ತಂ, ಮುಕ್ತಾನಾಂ ನಿಕರಃ ತಸ್ಯ, ಇಂದಿರಾಯಾಃ ಪತಿಃ, ಅಮಂದಃ ರಸಃ ಯಸ್ಯ ತತ್,

ಕ್ರಿ:—ಶೃಣುತ, ಶೃಣೋತು, ಶೃಣುತಾತ್; ಶೃಣುತಾಂ ಶೃಣ್ವಂತು, ಶೃಣು ಶೃಣುತಾತ್ ಶೃಣುತಂ ಶೃಣುತ, ಶೃಣವಾನಿ ಶೃಣವಾವ ಶೃಣವಾಮ; ಶ್ರು ಶ್ರವಣೇ ಲೋಟ್ ಸೂ.—'ಶ್ರುವಃ ಶೃ ಚ' ಶ್ರುಗೆ ಶೃ ಎಂಬ ಆದೇಶ.

ಅವ :— ಆ ಪರಮಾತ್ಮನ ಸ್ವರೂಪವು ಹೀಗಿದೆ—

**ಮಣಿರಾಜಿರಾಜಿತಮಹಾಮುಕುಟಂ**
**ಶಿತಿಕಾಂತಕುಂತಲಸಹಸ್ರತಯಂ ।**
**ಅಲಿಕಾರ್ಧಚಂದ್ರವಿಲಸತ್ತಿಲಕಂ**
**ಶ್ರವಣೋಲ್ಲಸನ್ಮಕರಕುಂಡಲಯುಕ್** ॥೬೫॥

ಅ :— ಮಣಿರಾಜಿರಾಜಿತಮಹಾಮುಕುಟಂ ಶಿತಿಕಾಂತಕುಂತಲ-ಸಹಸ್ರತಯಂ, ಅಲಿಕಾರ್ಧಚಂದ್ರವಿಲಸತ್ತಿಲಕಂ ಶ್ರವಣೋಲ್ಲಸನ್ಮಕರ-ಕುಂಡಲಯುಕ್ (ವಪುಃ ಇಂದಿರಾಪತಿಃ ಅನಿಶಂ ಪ್ರಕಟಯತಿ ನನು)

Rarest Archive

ಅರ್ಥ :—ಮಣಿರಾಜಿ=ರತ್ನಗಳ ಸಾಲುಗಳಿಂದ, ರಾಜಿತ=ಪ್ರಕಾಶಗೊಳಿಸಲ್ಪಟ್ಟ, ಮಹಾಮುಕುಟಂ=ಶ್ರೇಷ್ಠವಾದ ಕಿರೀಟವುಳ್ಳ, ಶಿತಿ=ಕಪ್ಪಾದ, ಕಾಂತ=ಮನೋಹರವಾದ, ಕುಂತಲಸಹಸ್ರತಯಂ=ಅನೇಕ ಸಾವಿರ ಮುಂಗೂದಲುಳ್ಳ, ಅಲಿಕ=ಹಣೆಯೆಂಬ, ಅರ್ಧಚಂದ್ರ=ಅರ್ಧಚಂದ್ರನಲ್ಲಿ, ವಿಲಸತ್ತಿಲಕಂ=ಪ್ರಕಾಶಿಸುವ ತಿಲಕ(ನಾಮ. ಪುಂಡ್ರ)ಉಳ್ಳ, ಶ್ರವಣೋಲ್ಲಸತ್=ಕಿವಿಗಳಲ್ಲಿ ಹೊಳೆಯುತ್ತಿರುವ, ಮಕರಕುಂಡಲಯುಕ್=ಮೀನಿನ ಆಕೃತಿಯ ಕುಂಡಲಗಳಿಂದ ಕೂಡಿರುವ (ತನ್ನ ಶರೀರವನ್ನು ಶ್ರೀಹರಿಯು ತನ್ನ ಮುಕ್ತಭಕ್ತರಿಗೆ ಯಾವಾಗಲೂ ತೋರಿಸುತ್ತಿರುವನು.)

ತಾ:—ಆ ಶ್ರೀಮನ್ನಾರಾಯಣನ ಶಿರಸ್ಸಿನಲ್ಲಿ ರತ್ನಗಳ ಸಾಲುಗಳಿಂದ ವಿರಾಜಿಸುವ ಉತ್ತಮವಾದ ಕಿರೀಟವಿದೆ. ಕಪ್ಪಾದ ಮನೋಹರವಾದ ಸಾವಿರಾರು ಮುಂಗೂದಲುಗಳಿರುವುವು. ಅರ್ಧಚಂದ್ರನಂತಿರುವ ಹಣೆಯಲ್ಲಿ ಕಸ್ತೂರೀತಿಲಕವು ಶೋಭಿಸುತ್ತಿರುವುದು. ಕಿವಿಗಳಲ್ಲಿ ಮಕರಕುಂಡಲಗಳು ಶೋಭಿಸುತ್ತಿರುವುವು.

ವಿ:—ಮಣೀನಾಂ ರಾಜಿಃ, ಮಣಿರಾಜ್ಯಾ ರಾಜಿತಂ ಮಹತ್ ಮಕುಟಂ ಯಸ್ಯ ತತ್, ಸಹಸ್ರಂ ಅವಯವಾಃ ಅಸ್ಯೇತಿ ಸಹಸ್ರತಯಂ, ಶಿತೀನಾಂ ಕಾಂತಾನಾಂ ಕುಂತಲಾನಾಂ ಸಹಸ್ರತಯಂ ಯಸ್ಯ ತತ್, ಅಲಿಕಮೇವ ಅರ್ಧಚಂದ್ರಃ, ಅಲಿಕಾರ್ಧಚಂದ್ರೇ ವಿಲಸತ್ ತಿಲಕಂ ಯಸ್ಯ ತತ್, ಮಕರಾಕೃತೀಕುಂಡಲೇ ಮಕರಕುಂಡಲೇ, ಶ್ರವಣಯೋಃ ಉಲ್ಲಸಂತೀ ಚ ತೇ ಮಕರಕುಂಡಲೇ ಚ, ಶ್ರವಣೋಲ್ಲಸನ್ಮಕರಕುಂಡಲಾಭ್ಯಾಂ ಯುಜ್ಯತೇ ಇತಿ ಶ್ರವ....ಯುಕ್.

ಪರಿಪೂರ್ಣಚಂದ್ರಪರಿಹಾಸಿಮುಖಂ-
ಜಲಜಾಯತಾಕ್ಷಮರುಣೋಷ್ಠಪುಟಂ।
ಹಸಿತಾವಲೋಕಲಲಿತೈರತುಲೈ-
ರಭಿನಂದಯತ್ ಪ್ರಣತಮಾತ್ಮಜನಂ ॥೬೬॥

ಅ :— ಪರಿಪೂರ್ಣಚಂದ್ರಪರಿಹಾಸಿಮುಖಂ ಜಲಜಾಯತಾಕ್ಷಂ

ಅರುಣೋಷ್ಠಪುಟಂ ಅತುಲ್ಯೈಃ ಹಸಿತಾವಲೋಕಲಲಿತೈಃ ಪ್ರಣತಂ ಆತ್ಮ-ಜನಂ ಅಭಿನಂದಯತ್

**ಅರ್ಥ:**—ಪರಿಪೂರ್ಣಚಂದ್ರ = ಹುಣ್ಣಿಮೆಯ ಪೂರ್ಣಚಂದ್ರನನ್ನು, ಪರಿಹಾಸಿ = ಹಾಸ್ಯಮಾಡುವ, ಮುಖಂ = ಮುಖವುಳ್ಳ, ಜಲಜ = ತಾವರೆಯಂತೆ, ಆಯತಾಕ್ಷಂ = ವಿಶಾಲವಾದ ಕಣ್ಣುಗಳುಳ್ಳ, ಅರುಣ–ಕೆಂಪಾದ, ಓಷ್ಠಪುಟಂ = ತುಟಿಯ ಪ್ರಾಂತವುಳ್ಳ, ಅತುಲ್ಯೈಃ = ಅಸದೃಶವಾದ, ಹಸಿತಾವಲೋಕ = ಮಂದಸ್ಮಿತದನೋಟದ, ಲಲಿತೈಃ = ವಿಲಾಸಗಳಿಂದ, ಪ್ರಣತಂ ಆತ್ಮಜನಂ = ನಮಿಸಿದ ಭಕ್ತಜನತೆಯನ್ನು, ಅಭಿನಂದಯತ್ = ಸಂತೋಷಗೊಳಿಸುತ್ತಿರುವ, (ತನ್ನ ದೇಹವನ್ನು ಹರಿಯು ತೋರುವನು.)

**ತಾ:**—ಶ್ರೀಹರಿಯ ಮುಖವು ಪೂರ್ಣಚಂದ್ರನನ್ನು ತಿರಸ್ಕರಿಸುತ್ತಿರುವುದು. ಕಣ್ಣುಗಳು ಕಮಲದಂತೆ ವಿಶಾಲವಾಗಿರುತ್ತವೆ. ತುಟಿಗಳು ಕೆಂಪಾಗಿರುವುವು. ಇವುಗಳಿಂದ ಶೋಭಿತವಾದ ಶರೀರವು ಸ್ಮಿತಪೂರ್ಣವಾದ ನೋಟದಿಂದ ನಮಸ್ಕರಿಸುತ್ತಿರುವ ಭಕ್ತರನ್ನು ಆನಂದಗೊಳಿಸುತ್ತಿರುತ್ತದೆ.

**ವಿ:**—ಪರಿಪೂರ್ಣಶ್ಚಾಸೌ ಚಂದ್ರಶ್ಚ, ಪರಿಪೂರ್ಣಚಂದ್ರಂ ಪರಿಹಸತೀತಿ, ಪರಿಪೂರ್ಣಚಂದ್ರಪರಿಹಾಸಿ ಮುಖಂ ಯಸ್ಯ ತತ್, ಜಲಜೇ ಇವ ಆಯತೇ ಅಕ್ಷಿಣೀ ಯಸ್ಯ ತತ್; ಬಹುವ್ರೀಹಿ ಸಮಾಸದಲ್ಲಿ ಅಕ್ಷಿಶಬ್ದವು ಷಚ್ ಪ್ರತ್ಯಯ ಬಂದು ಅಕಾರಾಂತವಾಗುತ್ತದೆ. ಸ್ತ್ರೀಲಿಂಗದಲ್ಲಿ ಈಕಾರಾಂತವಾಗುತ್ತದೆ, ಜಲಜಾಯತಾಕ್ಷೀ; ಅರುಣಂ ಓಷ್ಠಯೋಃ ಪುಟಂ ಯಸ್ಯ ತತ್, ಹಸಿತೇನ ಯುಕ್ತಾ ಅವಲೋಕಾಃ ಹಸಿತಾವಲೋಕಾಃ ಹಸಿತಾವಲೋಕಾನಾಂ ಲಲಿತಾನಿ ತೈಃ, ನ ವಿದ್ಯತೇ ತುಲಾ ಯೇಷಾಂ ತಾನಿ ತೈಃ ಆತ್ಮನಃ ಜನಃ ಆತ್ಮಜನಃ ತಂ. ||

**ನವಕಂಬುಕಂಠಮಹಿಮಾಂಶುಮಹೋ**
**ಮಹಿಮೋಪಲೇಂದ್ರವರಹಾರಧರಂ |**
**ರಮಣೀಯರತ್ನಗಣವಿದ್ಧಲಸ–**
**ದ್ವಲಯಾಂಗುಲೀಯಕವರಾಂಗದವತ್ ||೬೭||**

Rarest Archiver

**ಅ:**– ನವಕಂಬುಕಂಠಂ, ಅಹಿಮಾಂಶುಮಹೋಮಹಿಮೋಪಲೇಂದ್ರ-ವರಹಾರಧರಂ ರಮಣೀಯರತ್ನಗಣವಿದ್ಧಲಸದ್ವಲಯಾಂಗುಲೀಯಕ-ವರಾಂಗದವತ್ (ವಪುಃ ಪ್ರಕಟಯತಿ)

**ಅರ್ಥ:**—ನವಕಂಬು = ನೂತನಶಂಖದಂತಹ, ಕಂಠಂ = ಕಂಠವುಳ್ಳ, ಅಹಿಮಾಂಶು = ಸೂರ್ಯನ, ಮಹಃ = ಕಾಂತಿಯಂತೆ, ಮಹಿಮ = ಕಾಂತಿಯುಳ್ಳ, ಉಪಲೇಂದ್ರ = ಕೌಸ್ತುಭಮಣಿ, ವರಹಾರ=ಉತ್ತಮವಾದ ಸರ, ಇವುಗಳನ್ನು, ಧರಂ = ಧರಿಸಿರುವ, ರಮಣೀಯರತ್ನ = ಮನೋಹರ ವಾದ ರತ್ನಗಳ, ಗಣ = ಸಮೂಹದಿಂದ, ವಿದ್ಧ = ಖಚಿತವಾದ, ಲಸದ್ವಲಯ = ಶೋಭಿಸುವ ಬಳೆ, ಅಂಗುಲೀಯಕ = ಉಂಗುರ, ವರ ಅಂಗದವತ್ = ಉತ್ತಮವಾದ ತೋಳ್ಬಳೆಯುಳ್ಳ (ಶರೀರವನ್ನು ಪ್ರಕಟ ಗೊಳಿಸುತ್ತಾನೆ.)

**ತಾ:**—ಆ ಶ್ರೀಹರಿಯ ಕಂಠವು ಶಂಖದಂತಿದೆ. ಅವನು ಸೂರ್ಯ ನಂತೆ ಹೊಳೆಯುವ ಕೌಸ್ತುಭ, ಉತ್ತಮ ಮುತ್ತಿನಸರ, ಸುಂದರವಾದ ರತ್ನಖಚಿತವಾದ ಬಳೆ, ಉಂಗುರ, ತೋಳಿನ ಅಲಂಕಾರ ಇವುಗಳನ್ನು ಧರಿಸಿರುತ್ತಾನೆ.

**ವಿ:**—ನವಶ್ಚಾಸೌ ಕಂಬುಶ್ಚ, ನವಕಂಬುವತ್ ಕಂಠಃ ಯಸ್ಯ ತತ್, ನ ಹಿಮಾಃ ಅಹಿಮಾಃ, ಅಹಿಮಾಃ ಅಂಶವಃ ಯಸ್ಯ ಸಃ, ಅಹಿಮಾಂಶೋಃ ಮಹಃ ಅಹಿಮಾಂಶುಮಹಃ, ಅಹಿಮಾಂಶುಮಹೋವತ್ ಮಹಿಮಾ ಯಸ್ಯ ಸಃ ಅಹಿಮಾಂಶುಮಹೋಮಹಿಮಾ, ಉಪಲಾನಾಂ ಇಂದ್ರಃ ಉಪಲೇಂದ್ರಃ, ಅಹಿಮಾಂಶುಮಹೋಮಹಿಮಾ ಚಾಸೌ ಉಪಲೇಂದ್ರಶ್ಚ ಅಹಿ...ಲೇಂದ್ರಃ, ವರಶ್ಚಾಸೌ ಹಾರಶ್ಚ, ವರಹಾರಃ, ಧರತೀತಿ ಧರಂ, ಅಹಿ...ಲೇಂದ್ರಶ್ಚ ವರಹಾರಶ್ಚ ಅಹಿ....ಲೇಂದ್ರವರಹಾರೌ ತಯೋಃ ಧರಂ, ರಮಣೀಯಾನಿ ಚ ತಾನಿ ರತ್ನಾನಿ ಚ, ರಮಣೀಯರತ್ನಾನಾಂ ಗಣಃ, ರಮಣೀಯರತ್ನಗಣೇನ ವಿದ್ಧಾನಿ, ಲಸಚ್ಚ ತತ್ವಲಯಂ ಚ ಲಸದ್ವ-ಲಯಂ, ವರಂ ಚ ತತ್ ಅಂಗದಂ ಚ ವರಾಂಗದಂ, ಲಸದ್ವಲಯಂ ಚ

Rarest Archiver

ಅಂಗುಲೀಯಕಂ ಚ ವರಾಂಗದಂ ಚ ಲಸದ್ವ....ವರಾಂಗದಾನಿ, ರಮ.... ವಿದ್ಧಾನಿ ಚ ತಾನಿ ಲಸದ್ವ .... ವರಾಂಗದಾನಿ, ತಾನಿ ಅಸ್ಯ ಸಂತೀತಿ ರಮಣೀಯ... ವತ್ ||

**ರವಿಚಕ್ರರುಕ್ ಪ್ರಕರಚಕ್ರಕರಂ**
**ವಿಧುಬಿಂಬಕಂಬುಮಧುರಾಂಬುರುಹಂ ।**
**ಜ್ವಲನಜ್ವಲದ್ ಗದಮುದಾರಧನುಃ**
**ಪೃಥುವೃತ್ತಹಸ್ತಮತಿತಾಮ್ರತಲಂ** ||೬೮||

**ಅ :**—ರವಿಚಕ್ರರುಕ್‌ಪ್ರಕರಚಕ್ರಕರಂ ವಿಧುಬಿಂಬಕಂಬು, ಮಧು-ರಾಂಬುರುಹಂ ಜ್ವಲನಜ್ವಲದ್ಗದಂ ಉದಾರಧನುಃ, ಪೃಥುವೃತ್ತಹಸ್ತಂ ಅತಿತಾಮ್ರತಲಂ (ವಪುಃ ಪ್ರಕಟಯತಿ)

**ಅರ್ಥ:**—ರವಿಚಕ್ರ = ಸೂರ್ಯಸಮೂಹದಂತೆ, ರುಕ್‌ಪ್ರಕರ= ಕಾಂತಿಸಮೂಹವುಳ್ಳ, ಚಕ್ರಕರಂ= ಸುದರ್ಶನಚಕ್ರವು ಕೈಯಲ್ಲಿ ಉಳ್ಳ, ವಿಧುಬಿಂಬ= ಚಂದ್ರಮಂಡಲದಂತಿರುವ, ಕಂಬು= ಶಂಖವುಳ್ಳ, ಮಧು-ರಾಂಬುರುಹಂ = ಸುಂದರವಾದ ಕಮಲವುಳ್ಳ, ಜ್ವಲನಜ್ವಲತ್= ಬೆಂಕಿಯಂತೆ ಪ್ರಕಾಶಿಸುವ, ಗದಂ = ಕೌಮೋದಕೀ ಗದೆಯುಳ್ಳ, ಉದಾರಧನುಃ=ಉತ್ಕೃಷ್ಟವಾದ ಶಾಂರ್ಗವೆಂಬ ಬಿಲ್ಲುಳ್ಳ, ಪೃಥು= ದೊಡ್ಡದಾದ (ಉದ್ದವಾದ), ವೃತ್ತ= ಗುಂಡಗಿರುವ, ಹಸ್ತಂ= ಕೈಗಳುಳ್ಳ, ಅತಿ ತಾಮ್ರತಲಂ= ಅತಿಶಯವಾಗಿ ಕೆಂಪಾದ ಅಂಗೈಉಳ್ಳ (ಸುಂದರರೂಪವನ್ನು ಮುಕ್ತರ ಎದುರು ಆವಿರ್ಭಾವಗೊಳಿಸುತ್ತಾನೆ).

**ತಾ:**—ಮುಕ್ತವೈಕುಂಠಲೋಕದಲ್ಲಿ ಶ್ರೀಹರಿಯು ಒಂದು ಕೈಯಲ್ಲಿ ಸೂರ್ಯರ ಸಮೂಹದಂತೆ ಕಾಂತಿಯುಳ್ಳ ಸುದರ್ಶನ ಚಕ್ರವನ್ನು ಧರಿಸಿರುವನು. ಇನ್ನೊಂದು ಕೈಯಲ್ಲಿ ಚಂದ್ರಮಂಡಲದಂತೆ ಬೆಳ್ಳಗಿರುವ ಪಾಂಚಜನ್ಯಶಂಖವನ್ನೂ, ಮತ್ತೊಂದು ಕೈಯಲ್ಲಿ ಸುಂದರಕಮಲವನ್ನೂ, ಇನ್ನೊಂದುಕೈಯಲ್ಲಿ ಬೆಂಕಿಯಂತೆ ವಿರಾಜಿಸುವ ಕೌಮೋದಕೀಎಂಬ ಗದೆಯನ್ನೂ, ಹೆಗಲಿನಲ್ಲಿ ಉತ್ತಮವಾದ ಶಾರ್ಙ್ಗವೆಂಬ ಬಿಲ್ಲನ್ನು

Rarest Archiver

ಧರಿಸಿರುವನು. ಅವನ ನಾಲ್ಕು ಕೈಗಳು ಉದ್ದವಾಗಿ ಗುಂಡಗೆ ಇರುವುವು. ಅಂಗೈಯು ಕೆಂಪಾಗಿರುವುದು. ಇಂತಹ ಜ್ಞಾನ ಆನಂದಾದಿಗುಣಗಣಾತ್ಮಕವಾದ ದೇಹವನ್ನು ಶ್ರೀಹರಿಯು ಮುಕ್ತಜನತೆಯ ಕಣ್ಣುಗಳಿಗೆ ತೋರುವನು. ಇದರಿಂದ ಚಕ್ರಶಂಖಪದ್ಮಗದಾಧನುಸ್ಸುಗಳಿಂದ ಕೂಡಿದ ಚತುರ್ಭುಜರೂಪವನ್ನು ಹೇಳಿದಂತಾಯಿತು.

**ವಿ:**—ರವೀಣಾಂ. ಚಕ್ರಂ, ರವಿಚಕ್ರವತ್ ರುಚಾಂ ಪ್ರಕರಃ ಯಸ್ಯ ತತ್, ರವಿ...ರಂ ಚಕ್ರಂಕರೇ ಯಸ್ಯ ತತ್, ವಿಧೋಃ ಬಿಂಬಂ ವಿಧುಬಿಂಬಂ, ವಿಧುಬಿಂಬವತ್ ಕಂಬುಃ ಯಸ್ಯ ತತ್, ಮಧುರಂ ಅಂಬುರುಹಂ ಯಸ್ಯ ತತ್, ಜ್ವಲನವತ್ ಜ್ವಲಂತೀ ಗದಾ ಯಸ್ಯ ತತ್, ಉದಾರಂ ಧನುಃ ಯಸ್ಯ ತತ್, ಪೃಥವಃ ವೃತ್ತಾಃ ಹಸ್ತಾಃ ಯಸ್ಯ ತತ್, ಅತಿತಾಮ್ರೇ ತಲೇ ಯಸ್ಯ ತತ್ ;

**ವರಪೀವರಾಂಸಮಧಿರಾಜದುರೋ-**
**ಮಣಿಮಂಟಪಾಗ್ರ್ಯವಿಲಸತ್ಕಮಲಂ ।**
**ಸಜಗದ್ದ್ವಿಸಪ್ತಕತನೂದರಕಂ**
**ಶುಭನಾಭಿಕಂಜಗತಕಾಲಿನುತಂ** ॥೬೯॥

**ಅ:** — ವರಪೀವರಾಂಸಂ ಅಧಿರಾಜದುರೋಮಣಿಮಂಟಪಾಗ್ರ್ಯ-ವಿಲಸತ್ಕಮಲಂ ಸಜಗದ್‌ದ್ವಿಸಪ್ತಕತನೂದರಕಂ ಶುಭನಾಭಿಕಂಜಗತ-ಕಾಲಿನುತಂ (ವಪುಃ ಪ್ರಕಟಯತಿ.)

**ಅರ್ಥ:**—ವರಪೀವರಾಂಸಂ=ಉತ್ತಮವಾದ ಪುಷ್ಟವಾದ ಹೆಗಲುಳ್ಳ, ಅಧಿರಾಜತ್‌ಉರಃ = ಅಧಿಕವಾಗಿ ಪ್ರಕಾಶಿಸುವ ಎದೆಯೆಂಬ, ಮಣಿಮಂಟಪಾಗ್ರ್ಯ = ರತ್ನದ ಶ್ರೇಷ್ಠವಾದ ಮಂಟಪದಲ್ಲಿ, ವಿಲಸತ್ಕಮಲಂ= ಪ್ರಕಾಶಿಸುವ ಲಕ್ಷ್ಮೀದೇವಿಯುಳ್ಳ, ಸಜಗದ್‌ದ್ವಿಸಪ್ತಕ = ಹದಿನಾಲ್ಕು ಲೋಕಗಳಿಂದ ಸಹಿತವಾದ, ತನೂದರಕಂ = ಸಣ್ಣ ಹೊಟ್ಟೆಯುಳ್ಳ, ಶುಭನಾಭಿ=ಮಂಗಳಕರವಾದ ಹೊಕ್ಕುಳಲ್ಲಿರುವ, ಕಂಜಗತ = ಕಮಲದಲ್ಲಿರುವ, ಕಾಲಿ = ಬ್ರಹ್ಮನೆಂಬ ಭ್ರಮರದಿಂದ, ನುತಂ=ಸ್ತೋತ್ರ ಮಾಡಲ್ಪಟ್ಟ (ಶರೀರವನ್ನು ಪ್ರಕಟಗೊಳಿಸುತ್ತಾನೆ.)

Rarest Archiver

**ತಾ:**-ಆ ಹರಿಯ ದೇಹವು ಉತ್ತಮವಾದ ಪುಷ್ಟವಾದ ಆನಂದಾತ್ಮಕವಾದ ಹೆಗಲುಗಳಿಂದ ಕೂಡಿದೆ. ಅವನ ಅತ್ಯಂತಪ್ರಕಾಶಮಾನವಾದ ಜ್ಞಾನಾತ್ಮಕವಾದ ಎದೆಯೆಂಬ ರತ್ನಖಚಿತಮಂಟಪದಲ್ಲಿ ಮಂಗಲದೇವತೆಯಾದ ಲಕ್ಷ್ಮೀದೇವಿಯು ವಿರಾಜಿಸುತ್ತಿರುವಳು. ಅಪ್ರಾಕೃತಜ್ಞಾನಾನಂದಪ್ರಕಾಶಾತ್ಮಕವಾದ ಸಣ್ಣ ಉದರದಲ್ಲಿ ಹದಿನಾಲ್ಕು ಲೋಕಗಳೂ ಅಡಗಿರುವುವು. ಮಂಗಳಕರವಾದ ಹೊಕ್ಕಳಲ್ಲಿರುವ ಕಮಲದಲ್ಲಿ ಬ್ರಹ್ಮದೇವರು ದುಂಬಿಯಂತೆ ಸ್ತೋತ್ರಮಾಡುತ್ತಿರುವರು. ಇಂತಹ ರೂಪವನ್ನು ಹರಿಯು ಪ್ರಕಟಗೊಳಿಸುವನು.

**ವಿ:**—ವರೌ ಪೀವರೌ ಅಂಸೌ ಯಸ್ಯ ತತ್, ಅಧಿರಾಜಚ್ಚ ತತ್ ಉರಶ್ಚ ಅಧಿರಾಜದುರಃ, ಮಂಟಪೇಷು ಅಗ್ರ್ಯಂ ಮಂಟಪಾಗ್ರ್ಯಂ, ಮಣಿಮಯಂ ಚ ತತ್ ಮಂಟಪಾಗ್ರ್ಯಂ ಚ ಮಣಿಮಂಟಪಾಗ್ರ್ಯಂ, ಅಧಿರಾಜದುರ ಏವ ಮಣಿಮಂಟಪಾಗ್ರ್ಯಂ ಅಧಿರಾಜದುರೋಮಣಿಮಂಟಪಾಗ್ರ್ಯಂ, ತಸ್ಮಿನ್ ವಿಲಸಂತೀ ಕಮಲಾ ಯಸ್ಯ ತತ್ ಅಧಿ....ಕಮಲಂ, ಸಪ್ತಾನಾಂ ಸಮೂಹಃ ಸಪ್ತಕಂ, ದ್ವಿಗುಣಿತಂ ಚ ತತ್ ಸಪ್ತಕಂ ಚ ದ್ವಿಸಪ್ತಕಂ, ಜಗತಃ ದ್ವಿಸಪ್ತಕಂ ಜಗದ್ದ್ವಿಸಪ್ತಕಂ, ಜಗದ್ದ್ವಿಸಪ್ತಕೇನ ಸಹಿತಂ ಸಜಗದ್ದ್ವಿಸಪ್ತಕಂ, ಸ....ಪ್ತಕಂ ತನು ಉದರಂ ಯಸ್ಯ ತತ್ ಸಜ ದರಕಂ, ನಾಭಿರೇವ ಕಂಜಂ ನಾಭಿಕಂಜಂ, ಶುಭಂ ಚ ತತ್ ನಾಭಿಕಂಜಂ ಚ ಶುಭನಾಭಿಕಂಜಂ, ಶುಭನಾಭಿಕಂಜೇ ಗತಶ್ಚಾಸೌ ಕಶ್ಚ (ಕಃ = ಬ್ರಹ್ಮನು) ಶುಭನಾಭಿಕಂಜಗತಕಃ ಏವ ಅಲಿಃ, ತೇನ ನುತಂ;

**ಅತಿಕಾಂತಕಾಂಚಿಪದಕಾಂತಿವಿಲಸತ್**
**ತಪನೀಯಭಂಗರುಚಿಪಿಂಗಪಟಂ ।**
**ವರಹಸ್ತಿಹಸ್ತಸದೃಶೋರುಯುಗಂ**
**ಕ್ರಮವೃತ್ತಚಾರುತರಜಂಘಮುತ** ॥೭೦॥

**ಅ:** — ಅತಿಕಾಂತಕಾಂಚಿಪದಕಾಂತಿವಿಲಸತ್ತಪನೀಯಭಂಗರುಚಿಪಿಂಗಪಟಂ ವರಹಸ್ತಿಹಸ್ತಸದೃಶೋರುಯುಗಂ ಉತ ಕ್ರಮವೃತ್ತಚಾರುತರಜಂಘಂ(ವಪುಃ = ಪ್ರಕಟಯತಿ).

Rarest Archiver

ಅರ್ಥ :—ಅತಿಕಾಂತ = ಅತ್ಯಂತಮನೋಹರವಾದ, ಕಾಂಚೀಪದ = ಡಾಬಿನ ಸ್ಥಳವಾದ ಸೊಂಟದ, ಕಾಂತಿ = ಕಾಂತಿಯಿಂದ, ವಿಲಠ್ = ಸೇರಿದ, ತಪನೀಯಭಂಗ = ಚಿನ್ನದ ತಗಡಿನ, ರುಚಿ = ಕಾಂತಿಯಂತೆ ಕಾಂತಿಯುಳ್ಳ, ಪಿಂಗಪಟಂ = ಹಳದಿಬಟ್ಟೆಯುಳ್ಳ, ವರಹಸ್ತಿಹಸ್ತ = ಶ್ರೇಷ್ಠವಾದ ಆನೆಯ ಸೊಂಡಿಲಿಗೆ, ಸದೃಶ = ಸಮಾನವಾದ, ಊರುಯುಗಂ = ಎರಡು ತೊಡೆಗಳುಳ್ಳ, ಉತ = ಮತ್ತು, ಕ್ರಮವೃತ್ತ = ಕ್ರಮವಾಗಿ ಗುಂಡಗಿರುವ, ಚಾರುತರಜಂಘಂ = ಅತ್ಯಂತಮನೋಹರವಾದ ಮೊಣಕಾಲುಗಳುಳ್ಳ, (ಶರೀರವನ್ನು ಭಕ್ತಸಮೂಹಕ್ಕೆ ಪ್ರಕಟಗೊಳಿಸುತ್ತಾನೆ.)

ತಾ:—ಆ ಶ್ರೀಮನ್ಮಹಾವಿಷ್ಣುವು ಸೊಂಟದಲ್ಲಿ ಪೀತಾಂಬರವನ್ನು ಉಟ್ಟಿರುವನು. ಆ ಪೀತಾಂಬರವು ಚಿನ್ನದ ತಗಡಿನಂತೆ ಹೊಳೆಯುತ್ತ, ಸುಂದರವಾದ ಸೊಂಟದ ಡಾಬಿನ ಕಾಂತಿಯಿಂದ ಕೂಡಿಕೊಂಡು ಮತ್ತಷ್ಟು ಚೆನ್ನಾಗಿ ಪ್ರಕಾಶಿಸುತ್ತಿರುವುದು. ತೊಡೆಗಳು ಆನೆಯ ಸೊಂಡಿಲಿನಂತೆ ಇರುವುವು. ಮನೋಹರವಾದ ಮೊಣಕಾಲುಗಳು ಕ್ರಮವಾಗಿ ಗುಂಡಗಿರುವುವು. ಇಂತಹ ತನಗಿಂತ ಅಭಿನ್ನವಾದ ಜ್ಞಾನಾನಂದಾತ್ಮಕ-ಶರೀರವನ್ನು ಭಕ್ತರ ಎದುರು ಶ್ರೀಹರಿಯು ಆವಿರ್ಭಾವಗೊಳಿಸುವನು.

ವಿ:— ಕಾಂಚ್ಯಾಃ ಪದಂ ಕಾಂಚೀಪದಂ, ಅತಿಕಾಂತಂ ಚ ತತ್ ಕಾಂತಿಪದಂ ಚ ಅತಿಕಾಂತಕಾಂಚೀಪದಂ ತಸ್ಯ ಕಾಂತಿಃ, ತಪನೀಯಸ್ಯ ಭಂಗಃ ತಪನೀಯಭಂಗಃ, ತಸ್ಯ ರುಚಿರಿವ ರುಚಿಃ ಯಸ್ಯ ಸಃ ತಪನೀಯ-ಭಂಗರುಚಿಃ, ಸಚಾಸೌ ಪಿಂಗಶ್ಚಾಸೌ ಪಟಶ್ಚ, ತಪ....ಪಟಃ, ಅತಿಕಾಂತ ....ಕಾಂತ್ಯಾ ವಿಲಸ್ ತಪ....ಪಟಃ ಯಸ್ಯ ತತ್; ವರಶ್ಚಾಸೌ ಹಸ್ತೀ ಚ, ವರಹಸ್ತಿನಃ ಹಸ್ತಃ ವರಹಸ್ತಿಹಸ್ತೇನ ಸದೃಶಂ, ಊರ್ವೋಃ ಯುಗಂ ಊರುಯುಗಂ, ವರಹಸ್ತಿಹಸ್ತಸದೃಶಂ ಊರುಯುಗಂ ಯಸ್ಯ ತತ್ ವರ....ರುಯುಗಂ, ಅತಿಶಯೇನ ಚಾರುಣೀ ಚಾರುತರೇ, ಕ್ರಮೇಣ ವೃತ್ತೇ ಚಾರುತರೇ ಜಂಘೇ ಯಸ್ಯ ತತ್;

Rarest Archive

ವರನೂಪುರಂ ಪರಮರುಕ್ಪ್ರಪದಂ
ನವವಿದ್ರುಮದ್ಯುತಿನಖಾಂಗುಲಿಮತ್ ।
ಅರಿವಾರಿಜಧ್ವಜಕಲಂಕಲಸತ್
ಪದಪಾಂಸುಪಾವಿತಜಗತ್ತ್ರಿತಯಂ ॥೭೧॥

ಅ:—ವರನೂಪುರಂ ಪರಮರುಕ್ಪ್ರಪದಂ ನವವಿದ್ರುಮದ್ಯುತಿ-ನಖಾಂಗುಲಿಮತ್ ಅರಿವಾರಿಜಧ್ವಜಕಲಂಕಲಸತ್ಪದಪಾಂಸುಪಾವಿತ-ಜಗತ್ತ್ರಿತಯಂ (ವಪುಃ ಪ್ರಕಟಯತಿ).

**ಅರ್ಥ :**—ವರನೂಪುರಂ = ಉತ್ತಮವಾದ ಕಾಲ್ಗೆಜ್ಜೆಯುಳ್ಳ, ಪರಮರುಕ್ಪ್ರಪದಂ = ಶ್ರೇಷ್ಠವಾದ ಕಾಂತಿಯುಳ್ಳ ಪಾದದ ಕೊನೆಯುಳ್ಳ, ನವವಿದ್ರುಮದ್ಯುತಿ = ಹೊಸ ಹವಳದ ಕಾಂತಿಯುಳ್ಳ, ನಖ = ಉಗುರು ಗಳುಳ್ಳ, ಅಂಗುಲಿಮತ್ = ಬೆರಳುಗಳುಳ್ಳ, ಅರಿ = ಚಕ್ರ, ವಾರಿಜ = ತಾವರೆ ಧ್ವಜ = ಪತಾಕೆ ಇವುಗಳ, ಕಲಂಕ = ಚಿಹ್ನೆಯಿಂದ, ಲಸತ್ = ಪ್ರಕಾಶ ಮಾನವಾದ, ಪದ = ಕಾಲುಗಳ, ಪಾಂಸು = ಧೂಲಿನಿಂದ, ಪಾವಿತ = ಶುದ್ಧಿಗೊಳಿಸಲ್ಪಟ್ಟ, ಜಗತ್ತ್ರಿತಯಂ = ಮೂರು ಲೋಕಗಳುಳ್ಳ, (ಶರೀರವನ್ನು ಹರಿಯು ತನ್ನ ಭಕ್ತರಿಗೆ ತೋರಿಸುತ್ತಾನೆ.)

**ತಾ :**—ಆ ಶ್ರೀಹರಿಯು ಉತ್ತಮವಾದ ಕಾಲ್ಗೆಜ್ಜೆಯನ್ನು ಧರಿಸಿರು ತ್ತಾನೆ. ಅವನ ಕಾಲುಗಳ ತುದಿಯು ಅತಿಶಯಪ್ರಕಾಶವುಳ್ಳದ್ದಾಗಿದೆ. ಬೆರಳುಗಳು ಹೊಸ ಹವಳದ ಕಾಂತಿಯ ಉಗುರುಗಳಿಂದ ಕೂಡಿವೆ. ಪಾದಗಳು ಚಕ್ರ, ಪದ್ಮ, ಧ್ವಜಗಳ ಚಿಹ್ನೆಗಳಿಂದ ವಿರಾಜಿಸುತ್ತಿವೆ. ಇಂತಹ ಪಾದಗಳಿಂದ ಸಂಚರಿಸಿ ಆ ಪರಮಾತ್ಮನು ಮೂರುಲೋಕ ಗಳಲ್ಲಿರುವ ಭಕ್ತರನ್ನು ಪವಿತ್ರಗೊಳಿಸುತ್ತಾನೆ.

**ವಿ:**—ವರೌ ನೂಪುರೌ ಯಸ್ಯ ತತ್, ಪರಮಾ ರುಕ್ ಯಯೋಃ ತೇ ಪರಮರುಚೀ, ಪರಮರುಚೀ ಪ್ರಪದೇ ಯಸ್ಯ ತತ್, ಪ್ರಪದ = ಕಾಲಿನ ತುದಿ, ಪಾದಾಗ್ರಂ ಪ್ರಪದಂ ಪಾದಃ, ಅಮರ, ನವಶ್ಚಾಸೌ ವಿದ್ರುಮಶ್ಚ ನವವಿದ್ರುಮಸ್ಯ ದ್ಯುತಿರಿವ ದ್ಯುತಿಃ ಯೇಷಾಂ ತೇ ನವವಿದ್ರುಮದ್ಯುತಯಃ,

Rarest Archiver

ನವವಿದ್ರುಮದ್ಯುತಯಃ ನಖಾಃ ಯಾಸಾಂ ತಾಃ, ನವ ನಖಾಶ್ಚ ತಾಃ ಅಂಗುಲಯಶ್ಚ, ನವ ಖಾಂಗುಲಯಃ ಅಸ್ಯ ಸಂತೀತಿ ನವ ಮತ್ (ನವವಿದ್ರುಮದ್ಯುತಿನಖಾವಲಿಮತ್ ಎಂಬ ಪಾಠದಲ್ಲಿ ನವವಿದ್ರುಮಸ್ಯ ದ್ಯುತಿರಿವ ದ್ಯುತಿಃ ಯೇಷಾಂ ತೇ ನವವಿದ್ರುಮದ್ಯುತಯಃ, ತೇ ಚ ತೇ ನಖಾಶ್ಚ ನಖಾನಾಂ ಆವಲಿಃ, ನವಖಾವಲಿಃ ಅಸ್ಯ ಅಸ್ತೀತಿ;) ಅರಿಶ್ಚ ವಾರಿಜಂ ಚ ಧ್ವಜಶ್ಚ ಅರಿವಾರಿಜಧ್ವಜಾಃ, ಧ್ವಜಾನಾಂ ಕಲಂಕಾಃ, ಕಲಂಕೈಃ ಲಸಂತೀ ಚ ತೇ ಪದೇ ಚ, ....ಪದೇ, ....ಪದಯೋಃ ಪಾಂಸವಃ, ಪಾಂಸುಭಿಃ ಪಾವಿತಂ ಜಗತಾಂ ತ್ರಿತಯಂ ಯೇನ ತತ್, (ತ್ರಯಃ ಅವಯವಾಃ ಅಸ್ಯೇತಿ ತ್ರಿತಯಂ.)

**ನಿಖಿಲಾಗಮಾವಗಮಿತೈರಮಿತೈಃ**
**ಸುಖಸಂವಿದಾದಿಭಿರನಂತಗುಣೈಃ ।**
**ಪ್ರಪದಾದಿಕಾಂತಸಕಲಾವಯವಾ**
**କೃತಿಭಿಃ ಸದೈಕ್ಯವದದೋಷಲವಂ ॥೭೨॥**

ಅ:—ನಿಖಿಲಾಗಮಾವಗಮಿತೈಃ ಅಮಿತೈಃ ಸುಖಸಂವಿದಾದಿಭಿಃ ಅನಂತಗುಣೈಃ ಪ್ರಪದಾದಿಕಾಂತಸಕಲಾವಯವಾಕೃತಿಭಿಃ ಸದಾ ಐಕ್ಯವತ್ ಅದೋಷಲವಂ (ವಪುಃ ಪ್ರಕಟಯತಿ).

**ಅರ್ಥ:**—ನಿಖಿಲಾಗಮ = ಎಲ್ಲಾ ವೇದಗಳಿಂದ, ಅವಗಮಿತೈಃ = ತಿಳಿಸಲ್ಪಟ್ಟ, ಅಮಿತೈಃ = ಅಸಂಖ್ಯವಾದ, ಸುಖ = ಆನಂದವು, ಸಂವಿತ್ = ಉತ್ತಮವಾದ ಜ್ಞಾನವು, ಇವುಗಳೇ, ಆದಿಭಿಃ = ಮೊದಲಾಗಿಉಳ್ಳ, ಪ್ರಪದಾದಿ = ಪಾದಗಳ ತುದಿಯೇ ಮೊದಲಾಗಿ ಉಳ್ಳ, ಕ-ಅಂತ=ತಲೆಯೇ ಕೊನೆಯಾಗಿಉಳ್ಳ, ಸಕಲ = ಎಲ್ಲಾ, ಅವಯವ = ಅಂಗಗಳು, ಆಕೃತಿಭಿಃ-ಸ್ವರೂಪಗಳು ಇವುಗಳಿಂದ, ಸದಾ ಐಕ್ಯವತ್ = ಯಾವಾಗಲೂ ಅಭೇದವುಳ್ಳ, ಅದೋಷಲವಂ = ದೋಷಲೇಶವೂ ಇಲ್ಲದ (ಶರೀರವನ್ನು ಇಂದಿರಾಪತಿಯು ಮುಕ್ತರ ಕಣ್ಣಿಗೆ ಗೋಚರವಾಗುವಂತೆ ಮಾಡುತ್ತಾನೆ).

**ತಾ:**—ಶ್ರೀಮನ್ನಾರಾಯಣನ ಶರೀರವು ಅನಂತವೇದಪ್ರತಿಪಾದಿತವಾದ ಮಿತಿಇಲ್ಲದ ಜ್ಞಾನಾನಂದಾದಿಗುಣಗಳಿಂದ ಅತ್ಯಂತ ಅಭೇದವನ್ನೇ

ಹೊಂದಿರುತ್ತದೆ. ಅನಂತಗುಣಗಣಾತ್ಮಕದೇಹವೇ ಶ್ರೀಹರಿಯು. ಅವನ ಕೈಕಾಲು ಮುಂತಾದ ಅವಯವಗಳಿಗೂ, ಅವನ ಸ್ವರೂಪಗಳಿಗೂ (ಅವತಾರಗಳಿಗೂ) ಅವನಿಗೂ ಯಾವ ಭೇದವೂ ಇಲ್ಲ. ಅವನ ಇಂತಹ ಗುಣಮಣಿಸ್ವರೂಪವಾದ ಈ ದೇಹದಲ್ಲಿ ಯಾವ ದೋಷವೂ ಇಲ್ಲ.

**ವಿ:**—ನಿಖಿಲಾಶ್ಚ ತೇ ಆಗಮಾಶ್ಚ, ನಿಖಿಲಾಗಮೈಃ ಅವಗಮಿತಾಃ ತೈಃ, ನ ಮಿತಾಃ ತೈಃ, ಸುಖಂ ಚ ಸಂವಿಚ್ಚ ಸುಖಸಂವಿದೌ, ತೇ ಆದೀ ಯೇಷಾಂ ತೇ ಸುಖಸಂವಿದಾದಯಃ ತೈಃ, ಅನಂತಾಶ್ಚ ತೇ ಗುಣಾಶ್ಚ ತೈಃ ಪ್ರಪದಂ ಆದಿಃ ಯೇಷಾಂ ತೇ, ಪ್ರಪದಾದಯಃ, ಕಂ ಅಂತಃ ಯೇಷಾಂ ತೇ ಕಾಂತಾಃ ಪ್ರಪದಾದಯಶ್ಚ ತೇ ಕಾಂತಾಶ್ಚ, ಪ್ರಪದಾದಿಕಾಂತಾಃ, ಸಕಲಾಶ್ಚ ತೇ ಅವಯವಾಶ್ಚ ಸಕಲಾವಯವಾಃ, ಪ್ರಪದಾದಿಕಾಂತಾಶ್ಚ ತೇ ಸಕಲಾವಯವಾಶ್ಚ, ಪ್ರಪದಾದಿ....ಯವಾಶ್ಚ ಆಕೃತಯಶ್ಚ ತಾಭಿಃ, ಏಕಸ್ಯ ಭಾವಃ ಐಕ್ಯಂ, ತತ್ ಅಸ್ಯ ಅಸ್ತೀತಿ, ದೋಷಾಣಾಂ ಲವಃ ದೋಷಲವಃ ನ ವಿದ್ಯತೇ ದೋಷಲವಃ ಯಸ್ಯ ತತ್ ಅದೋಷಲವಂ|

**ಅಧಿಕಾರಿಣಾಂ ಗುಣವಿಶೇಷವಶಾತ್**
**ದ್ವಿಪದಾದ್ಯನಂತಚರಣಾಂತತಯಾ।**
**ಅತಿಭಾಸಿತಂ ಘನಗುಣಾಪಘನೈ–**
**ರಿತರೈಶ್ಚ ತತ್ತದುಚಿತೈರುಚಿರೈಃ ॥೭೩॥**

**ಅ:**—ಅಧಿಕಾರಿಣಾಂ ಗುಣವಿಶೇಷವಶಾತ್ ದ್ವಿಪದಾದ್ಯನಂತ-ಚರಣಾಂತತಯಾ, ಚ ತತ್ತದುಚಿತೈಃ ರುಚಿರೈಃ ಇತರೈಃ ಘನಗುಣಾ-ಪಘನೈಃ ಅತಿಭಾಸಿತಂ (ವಪುಃ ಪ್ರಕಟಯತಿ).

**ಅರ್ಥ:**— ಅಧಿಕಾರಿಣಾಂ = ಭಗವಂತನ ಉಪಾಸನೆ ಮಾಡಲು ಅಧಿಕಾರವುಳ್ಳ ಮನುಷ್ಯೋತ್ತಮರವನ್ನು ಆರಂಭಿಸಿ ಬ್ರಹ್ಮನೇ ಕೊನೆಯಾಗಿಉಳ್ಳ ಜೀವರಿಗೆ, ಗುಣವಿಶೇಷವಶಾತ್ = (ಅವರವರ) ಜ್ಞಾನ ಭಕ್ತ್ಯಾದಿಗುಣಗಣಗಳ ಭೇದದಿಂದ, ದ್ವಿಪದಾದಿ = ಎರಡು ಕಾಲಿನ ರೂಪ ಮೊದಲಾಗಿಉಳ್ಳ, ಅನಂತಚರಣಾಂತತಯಾ = ಅನಂತಪಾದಗಳುಳ್ಳ ರೂಪವೇ ಕೊನೆಯಾಗಿ ಉಳ್ಳದ್ದರಿಂದ, ಚ, ಮತ್ತು = ತತ್ತದುಚಿತೈಃ =

Rarest Archiver

ಆಯಾ ಜೀವರಿಗೆ ಯೋಗ್ಯಗಳಾದ, ರುಚಿರೈಃ = ಮನೋಹರವಾದ, ಇತರೈಃ = ಬೇರೆ, ಘನಗುಣಾಪಘನೈಃ = ಜ್ಞಾನಾನಂದಾದ್ಯನಂತಗುಣಾ ಭಿನ್ನವಾದ ಅವಯವಗಳಿಂದಲೂ, ಅತಿಭಾಸಿತಂ = ಪ್ರಕಾಶಗೊಳಿಸಲ್ಪಟ್ಟ (ಶರೀರವನ್ನು ಭಕ್ತರಿಗೆ ತೋರಿಸುತ್ತಾನೆ.)

ತಾ:—ಮನುಷ್ಯೋತ್ತಮರನ್ನು ಮೊದಲ್ಗೊಂಡು ಚತುರ್ಮುಖ ಬ್ರಹ್ಮದೇವರವರೆಗೆ ಪರಮಾತ್ಮನನ್ನು ಉಪಾಸನೆಮಾಡುವ ಅಧಿಕಾರಿಗಳಲ್ಲಿ ಜ್ಞಾನಭಕ್ತಿವೈರಾಗ್ಯಾದಿಗಳಲ್ಲಿ ವಿಶೇಷರೀತಿಯ ತಾರತಮ್ಯವಿರುತ್ತದೆ. ಆ ತಾರತಮ್ಯವನ್ನು ಅನುಸರಿಸಿ ಪರಮಾತ್ಮನು ಎರಡುಕಾಲುಗಳಿಂದ ಕೂಡಿದ ಮನುಷ್ಯರಂತಹ ರೂಪದಿಂದ ಆರಂಭಿಸಿ, ಸಾವಿರ, ಹತ್ತುಸಾವಿರ, ಅನಂತ ಪಾದಗಳುಳ್ಳ ತನ್ನ ವಿರಾಡ್ರೂಪದವರೆಗಿನ ರೂಪಗಳನ್ನು ಅವರವರ ಯೋಗ್ಯತೆಗೆ ತಕ್ಕಂತೆ ತೋರಿಸುತ್ತಾನೆ. (ವಿರಾಡ್ರೂಪವನ್ನು ಉಪಾಸನೆ ಮಾಡುವ ಯೋಗ್ಯತೆ, ಅಧಿಕಾರಗಳು ಬ್ರಹ್ಮದೇವರಿಗೆ ಮಾತ್ರ ಇದೆ.) ಪರಮಾತ್ಮನ ಈ ಪ್ರತಿಯೊಂದು ರೂಪವೂ ಆಯಾ ರೂಪಗಳಿಗೆ ಯೋಗ್ಯವಾದ ಪ್ರತ್ಯೇಕವಾಗಿಯೂ ಪರಿಪೂರ್ಣವಾದ ಮನೋಹರವಾದ ಜ್ಞಾನಾ-ನಂದಸ್ವರೂಪವಾದ ಅವಯುಗಳಿಂದ ಶೋಭಿಸುತ್ತದೆ. ಮೋಕ್ಷದಲ್ಲಿ ಪರಮಾತ್ಮನು ಆಯಾ ಜೀವರ ಯೋಗ್ಯತಾನುಸಾರವಾಗಿ ಎರಡುಕಾಲುಳ್ಳ ಸ್ವರೂಪ, ನಾಲ್ಕುಕಾಲುಳ್ಳ ಸ್ವರೂಪ ಇವೇ ಮೊದಲಾಗಿ ಅನಂತಾವಯವ ಸಹಿತವಾದ ವಿರಾಡ್ರೂಪದವರೆಗಿನ ತನ್ನ ಅಪ್ರಾಕೃತ ದಿವ್ಯರೂಪವನ್ನು ನಿತ್ಯದಲ್ಲಿಯೂ ಮುಕ್ತರಿಗೆ ತೋರಿಸಿ ಅವರಿಗೆ ದಿವ್ಯಾನಂದಾವಿರ್ಭಾವವನ್ನು ಮಾಡಿಸುವನು. ಪ್ರತಿಯೊಂದು ಭಗವದ್ರೂಪವೂ ಅತ್ಯಂತಸುಂದರ, ಸಕಲಗುಣಾತ್ಮಕ, ಅಪ್ರಾಕೃತವಾಗಿದೆ. (ಅಪ್ರಾಕೃತ = ಮನುಷ್ಯಾದಿ ದೇಹಗಳು ಸತ್ತ್ವರಜಸ್ತಮೋಗುಣಾತ್ಮಕವಾದ ಪ್ರಕೃತಿವಿಕಾರಗಳಾಗಿವೆ. ಪರಮಾತ್ಮನ ದೇಹವೂ ಮುಕ್ತರ ದೇಹವೂ ಕೇವಲ ಅವಿಕಾರಜ್ಞಾನಾನಂದ-ಪ್ರಕಾಶಾತ್ಮಕವಾಗಿದೆ.)

ವಿ:—ಗುಣೇಷು ವಿಶೇಷಃ, ತಸ್ಯ ವಶಃ ತಸ್ಮಾತ್, ದ್ವೇ ಪದೇ ಯಸ್ಯ ತತ್ ದ್ವಿಪದಂ, ತತ್ ಆದಿ ಯೇಷಾಂ ತಾನಿ ದ್ವಿಪದಾದೀನಿ,

Rarest Archiver

ಅನಂತಾನಿ ಚರಣಾನಿ ಅಂತೇ ಯೇಷಾಂ ತಾನಿ ಅನಂತಚರಣಾಂತಾನಿ, ದ್ವಿಪದಾದೀನಿ ಅನಂತಚರಣಾಂತಾನಿ ಯಸ್ಯ ತತ್ ದ್ವಿಪ....ಚರಣಾಂತಂ, ತಸ್ಯ ಭಾವಃ ಣಾಂತತಾ ತಯಾ, ಘನಾಶ್ಚ ತೇ ಗುಣಾಶ್ಚ, ಘನ-ಗುಣಾತ್ಮಕಾಶ್ಚ ತೇ ಅಪಘನಾಶ್ಚ ಘನಗುಣಾಪಘನಾಃ ತೈಃ, ತಾನಿ ಚ ತಾನಿ ಚ ತತ್ತಾನಿ, ತತ್ತೇಷಾಂ ಉಚಿತಾನಿ ತೈಃ ||

**ನವಭಾನುಭಾಃ ಕನಕಕಾಂತಿ ಪರಂ**
**ವರಹಾರಹಾರಿ ಹರಿನೀಲಹರಿತ್ |**
**ಶಬಲಪ್ರಭಾದಿವಿವಿಧದ್ಯುತಿಮತ್**
**ಸುಖಬೋಧಸೌರಭಸುರೂಪಗುಣಂ** ||೭೪||

ಅ :—ನವಭಾನುಭಾಃ, ಪರಂ ಕನಕಕಾಂತಿ, ವರಹಾರಹಾರಿ, ಹರಿನೀಲಹರಿತ್, ಶಬಲಪ್ರಭಾದಿವಿವಿಧದ್ಯುತಿಮತ್ ಸುಖಬೋಧಸೌರಭಸುರೂಪಗುಣಂ (ವಪುಃ ಇಂದಿರಾಪತಿಃ ಪ್ರಕಟಯತಿ.)

**ಅರ್ಥ:**—ಒಂದುರೂಪವು, ನವಭಾನುಭಾಃ (ಸ್-ಭಾಃ ಭಾಸೀ ಭಾಸಿ) = ಉದಯಿಸುವ ಸೂರ್ಯನ ಕಾಂತಿಯಂತಹ ಕಾಂತಿಯುಳ್ಳದ್ದು, ಪರಂ = ಮತ್ತೊಂದು ರೂಪವು, ಕನಕಕಾಂತಿ = ಭಂಗಾರದಂತಹ ಕಾಂತಿಯುಳ್ಳದ್ದು, ಇನ್ನೊಂದು ರೂಪವು, ವರಹಾರಹಾರಿ = ಶ್ರೇಷ್ಠವಾದ ಮುತ್ತಿನ ಸರದಿಂದ ಶೋಭಿಸುವುದು, (ಮುತ್ತಿನ ಸರದಂತಹ ಕಾಂತಿಯುಳ್ಳದ್ದು) ಮಗದೊಂದು ರೂಪವು, ಹರಿನೀಲಹರಿತ್ = ಪಚ್ಚೆಮಣಿಯಂತೆ ನೀಲರೂಪವುಳ್ಳದ್ದು ; ಇನ್ನೊಂದು ರೂಪವು, ಶಬಲಪ್ರಭಾದಿ-ವಿವಿಧದ್ಯುತಿಮತ್ = ಆನಂದಜ್ಞಾನಪರಿಮಲಾತ್ಮಕವಾದ ಮಿಶ್ರವಾದ ಬಣ್ಣವೇ ಮೊದಲಾಗಿಉಳ್ಳ ನಾನಾಕಾಂತಿಉಳ್ಳದ್ದು, ಸುಖಬೋಧಸೌರಭ-ಸುರೂಪಗುಣಂ = ಆನಂದಜ್ಞಾನಾತ್ಮಕವಾದ ಸುವಾಸನೆರೂಪವಾದ ಒಳ್ಳೆ ಆಕೃತಿ ಮತ್ತು ಗುಣಗಳುಳ್ಳದ್ದು ; (ಇಂತಹ ರೂಪವನ್ನು ಹರಿಯು ಪ್ರಕಟಗೊಳಿಸುತ್ತಾನೆ).

**ತಾ:**—ಶ್ರೀಹರಿಯ ಒಂದುರೂಪವು ಉದಯಿಸುವ ಸೂರ್ಯನಂತಹ

Rarest Archiver

ಶೋಭೆಯುಳ್ಳದ್ದು, ಮತ್ತೊಂದು ಚಿನ್ನದಂತೆ ಹೊಳೆಯುತ್ತದೆ, ಮತ್ತೊಂದು ರೂಪವು ಉತ್ತಮವು ಮುತ್ತಿನಸರದಿಂದ ಮುದ್ದಾಗಿದೆ. ಇನ್ನೊಂದು ರೂಪವು ಪಚ್ಚೆಮಣಿಯ ಕಾಂತಿಯಿಂದ ಪೂರ್ಣವಾದುದು. ಮತ್ತೊಂದು ರೂಪವು ಮಿಶ್ರವಾದ ನಾನಾಬಣ್ಣಉಳ್ಳದ್ದು ; ಇನ್ನೊಂದು ರೂಪವು ಆನಂದಜ್ಞಾನ ಪರಿಮಳಗಳಿಂದ ಕೂಡಿದ ಆಕೃತಿ ಮತ್ತು ಗುಣ ಉಳ್ಳದ್ದು, ಇಂತಹ ರೂಪವನ್ನು ಶ್ರೀಹರಿಯು ಮುಕ್ತರ ಕಣ್ಣುಗಳಿಗೆ ಗೋಚರವಾಗುವಂತೆ ಮಾಡುವನು.

**ವಿ:** ನವಶ್ಚಾಸೌ ಭಾನುಶ್ಚ, ನವಭಾನುವತ್ ಭಾಃ ಯಸ್ಯ ತತ್, ಕನಕವತ್ ಕಾಂತಿಃ ಯಸ್ಯ ತತ್, ವರಶ್ಚಾಸೌ ಹಾರಶ್ಚ ವರಹಾರವತ್ ಹಾರಿ, ಹರಿನೀಲವತ್ ಹರಿತ್, ಶಬಲಾ ಪ್ರಭಾ ಆದಿಃ ಯಾಸಾಂ ತಾಃ, ಶಬಲಪ್ರಭಾದಯಃ ವಿವಿಧಾಃ ದ್ಯುತಯಃ ಅಸ್ಯ ಸಂತೀತಿ ಶಬಲಪ್ರಭಾದಿ ವಿವಿಧದ್ಯುತಿಮತ್ ; ಸುರೂಪಂ ಚ ಗುಣಾಶ್ಚ ಸುರೂಪಗುಣಾಃ, ಸುಖಾನಿ ಚ ಬೋಧಾಶ್ಚ ಸೌರಭಾಣಿ ಚ ಸುಖಬೋಧಸೌರಭಾಣಿ,.... ಸೌರಭಾತ್ಮಕಾಃ ಸುರೂಪಗುಣಾಃ ಯಸ್ಯ ತತ್ ; ಶೃಣುತಾಪಿ ಎಂಬ ೬೪ನೆಯ ಶ್ಲೋಕದಿಂದ ೭೪ನೆಯ ಶ್ಲೋಕದವರೆಗೆ ಏಕಾನ್ವಯ. ಇದು ಆದಿಕುಲಕ, ಐದು ಅಥವಾ ಅದಕ್ಕಿಂತ ಹೆಚ್ಚು ಶ್ಲೋಕಗಳಿಗೆ ಏಕಾನ್ವಯವಿದ್ದರೆ ಕುಲಕಕಾವ್ಯ.

**ಆಶ್ಚರ್ಯರತ್ನೇಷ್ವಧಿಕಂ ಜಗತ್ತ್ರಯೇऽ**
**ಪ್ಯಾಶ್ಚರ್ಯಮಾಶ್ಚರ್ಯಮಹೋ ಮುಹುರ್ಮುಹುಃ ।**
**ಸೌಂದರ್ಯಸಾರೈಕರಸಂ ರಮಾಪತೇ**
**ರೂಪಂ ಸಮಾನಂದಯತೀಹ ಮೋಕ್ಷಿಣಃ ||೭೫||**

ಅ:—ಜಗತ್ತ್ರಯೇ ಆಶ್ಚರ್ಯರತ್ನೇಷು ಅಪಿ ಆಶ್ಚರ್ಯಂ ಮುಹುಃ ಮುಹುಃ ಆಶ್ಚರ್ಯಂ ರಮಾಪತೇಃ ಸೌಂದರ್ಯಸಾರೈಕರಸಂ ರೂಪಂ ಇಹ ಮೋಕ್ಷಿಣಃ ಸಮಾನಂದಯತಿ ಅಹೋ.

**ಅರ್ಥ:—** ಜಗತ್ತ್ರಯೇ = ಮೂರು ಲೋಕಗಳಲ್ಲಿ, ಆಶ್ಚರ್ಯರತ್ನೇಷು ಅಪಿ = ಆಶ್ಚರ್ಯವನ್ನುಂಟುಮಾಡುವ ಉತ್ತಮವಸ್ತುಗಳಲ್ಲಿಯೂ,

Rarest Archiver

ಆಶ್ಚರ್ಯಂ = ಆಶ್ಚರ್ಯಕರವಾದ, ಮುಹುಃ ಮುಹುಃ=ಮತ್ತೂ ಮತ್ತೂ, (ನೋಡಿದಾಗ) ಆಶ್ಚರ್ಯಂ = ಅಲೌಕಾದ್ಭುತರಸಾತ್ಮಕವಾದ, ರಮಾಪತೇಃ = ರಮಾರಮಣನ, ಸೌಂದರ್ಯಸಾರ= ಸೌಂದರ್ಯದಿಂದ ಶ್ರೇಷ್ಠವಾದ ವಸ್ತುಗಳಲ್ಲಿ, ಏಕರಸಂ=ಮುಖ್ಯವಾದ ಆನಂದಸುಂದರವಾದ, ರೂಪಂ = ಆಕೃತಿಯು, ಇಹ = ಈ ಮುಕ್ತವೈಕುಂಠದಲ್ಲಿ, ಮೋಕ್ಷಿಣಃ= ಮುಕ್ತರನ್ನು ಸಮಾನಂದಯತಿ= ಸಂತೋಷಗೊಳಿಸುತ್ತದೆ, ಅಹೋ = ಆಶ್ಚರ್ಯ.

ತಾ :—ಶ್ರೀಲಕ್ಷ್ಮೀರಮಣನ ಸ್ವರೂಪವು ಮೂರುಲೋಕಗಳಲ್ಲಿರುವ ಅದ್ಭುತ ಮತ್ತು ಶ್ರೇಷ್ಠವಸ್ತುಗಳಿಗಿಂತ ಆಶ್ಚರ್ಯಕರವಾದುದು. ಎಷ್ಟು ನೋಡಿದರೂ ಮತ್ತಷ್ಟು ಆಶ್ಚರ್ಯವನ್ನುಂಟುಮಾಡುವ ಸುಂದರಾತಿಸುಂದರವಸ್ತುಗಳಲ್ಲಿ ಆನಂದಕಂದಾತ್ಮಕವಾದ ಸುಂದರವಸ್ತುವು. ಅದನ್ನು ಮೀರಿದ ಸುಂದರವಸ್ತುವು ಮತ್ತೊಂದಿಲ್ಲ. ಇಂತಹ ರೂಪವು ಮೋಕ್ಷದಲ್ಲಿ ಮುಕ್ತರನ್ನು ಆನಂದಗೊಳಿಸುವುದು.

ವಿ:—ಆಶ್ಚರ್ಯೇಷು ರತ್ನಾನಿ ತೇಷು, ತ್ರಯೋಽವಯವಾಃ ಅಸ್ಯೇತಿ ತ್ರಯಂ ಜಗತಾಂ ತ್ರಯಂ ತಸ್ಮಿನ್, ಏಕಃ ರಸಃ ಯಸ್ಯ ತತ್, ಸೌಂದರ್ಯೇಣ ಸಾರೇಷು ಏಕರಸಂ ಸೌಂದರ್ಯಸಾರೈಕರಸಂ, ರಮಾಯಾಃ ಪತಿಃ ತಸ್ಯ, ಮೋಕ್ಷಃ ಏಷಾಂ ಅಸ್ತೀತಿ ಮೋಕ್ಷಿಣಃ (-ನ್)

ಕ್ರಿ:—ಸಮ್ + ಆ + ನಂದಯತಿ ನಂದಯತಃ ಇತ್ಯಾದಿ, ಟುನದಿ (ನಂದ್) ಣಿಜಂತಲಟ್.

ವೃತ್ತ:—ಇಂದ್ರವಂಶಾ-ಸ್ಯಾದಿಂದ್ರವಂಶಾ ತತಜೈರಸಂಯುತೈಃ—

ಅವ :—ಮುಕ್ತರ ದಿನಚರಿ ಹೇಗೆ? – ಹೀಗೆ—

**ಇಜ್ಯತೇ ಯಜ್ಞಶೀಲೈಃ ಸ ಯಜ್ಞಃ**
**ಪ್ರಾಜ್ಞಮಧ್ಯೇ ಪರಃ ಪ್ರೋಚ್ಯತೇಽನ್ಯೈಃ ।**
**ಗೀಯತೇ ಗೇಯಕೀರ್ತಿಸ್ಸುಗೀತೈಃ**
**ವಿಧ್ಯಬದ್ಧೈಃ ಸದಾನಂದಸಾಂದ್ರೈಃ ||೭೬||**

Rarest Archiver

ಅ:—ಯಜ್ಞಃ ಸಃ ವಿಧ್ಯಬದ್ಧೈಃ ಸದಾ ಆನಂದಸಾಂದ್ರೈಃ ಯಜ್ಞಶೀಲೈಃ ಇಜ್ಯತೇ, ಅನ್ಯೈಃ ಪ್ರಾಜ್ಞಮಧ್ಯೇ ಪರಃ ಪ್ರೋಚ್ಯತೇ, ಗೇಯಕೀತಿಃ ಸುಗೀತೈಃ ಗೀಯತೇ ||

**ಅರ್ಥ:**–ಯಜ್ಞಃ ಸಃ = ಪೂಜ್ಯನಾದುದರಿಂದ ಯಜ್ಞನಾಮಕನಾದ ಅವನು, ವಿಧ್ಯಬದ್ಧೈಃ=ನಿಯಮಗಳಿಂದ ಕಟ್ಟಲ್ಪಡದಿರುವ, ಸದಾ ಆನಂದ-ಸಾಂದ್ರೈಃ = ಯಾವಾಗಲೂ ಆನಂದದಿಂದ ಪೂರ್ಣರಾದ, ಯಜ್ಞಶೀಲೈಃ= ಯಜ್ಞಮಾಡುವ ಸ್ವಭಾವ ಉಳ್ಳವರಿಂದ, ಇಜ್ಯತೇ=(ಯಾಗಾದಿಗಳಿಂದ) ಪೂಜಿಸಲ್ಪಡುತ್ತಾನೆ. ಅನ್ಯೈಃ = ಹಿಂದೆ ಪ್ರವಚನಮಾಡುತ್ತಿದ್ದವರಿಂದ, ಪ್ರಾಜ್ಞಮಧ್ಯೇ = ಜ್ಞಾನಿಗಳ ಮಧ್ಯದಲ್ಲಿ, ಪರಃ ಪ್ರೋಚ್ಯತೇ = ಸರ್ವೋ-ತ್ತಮನಾಗಿ, ಪುರಾಣದಿಂದ ಪ್ರವಚನಮಾಡಲ್ಪಡುತ್ತಾನೆ. ಗೇಯಕೀರ್ತಿಃ = ಗಾನಮಾಡಲು ಯೋಗ್ಯವಾದ ಕೀರ್ತಿಯುಳ್ಳ ವಿಷ್ಣುವು, ಸುಗೀತೈಃ = ಸಂಗೀತವಿದ್ಯಾನಿಧಿಗಳಿಂದ, ಗೀಯತೇ= ಹಾಡಲ್ಪಡುತ್ತಾನೆ.

**ತಾ:**—ಆ ವೈಕುಂಠದಲ್ಲಿ ಯಜ್ಞವನ್ನು ಮಾಡುವ ಸ್ವಭಾವವುಳ್ಳವರು ಯಜ್ಞನೆಂಬ ಪರಮಾತ್ಮನನ್ನು ಯಜ್ಞದಿಂದ ಪೂಜಿಸುತ್ತಾರೆ. ಪುರಾಣ ಮತ್ತು ವೇದಶಾಸ್ತ್ರಾರ್ಥವನ್ನು ಉಪದೇಶಮಾಡುವ ಸ್ವಭಾವದವರು ಅಲ್ಲಿಯೂ ಮುಕ್ತಪಂಡಿತರ ಸಭೆಯಲ್ಲಿ ಶ್ರೀಹರಿಯೇ ಸರ್ವೋತ್ತಮನೆಂಬ ತತ್ತ್ವವನ್ನು ಉಪದೇಶಿಸುತ್ತಾರೆ. ಚೆನ್ನಾಗಿ ಹಾಡುವ ಸ್ವಭಾವದವರು ಪರಮಾತ್ಮನ ಕೀರ್ತಿಯನ್ನು ಹಾಡಿ ಹೊಗಳುತ್ತಾರೆ. ಮುಕ್ತರು ತಮ್ಮ ಇಚ್ಛೆಯಂತೆ ನಡೆಯುವವರು. ಅವರಿಗೆ ವಿಧಿಬಂಧಗಳಿಲ್ಲ. ಆದರೂ ಅವರು ಮುಕ್ತಿ ಹೊಂದುವ ಮೊದಲು ನಡೆದುಕೊಂಡು ಬಂದಿರುವ ರೀತಿಯನ್ನು ಮುಕ್ತಿಯಲ್ಲಿ ಸ್ವಭಾವದಿಂದಲೇ ನಡೆಸಿಕೊಂಡು ಹೋಗುತ್ತಾರೆ. ನಿತ್ಯಾನಂದ ಪೂರ್ಣರಾದ ಅವರಿಗೆ ಈ ವ್ಯಾಪಾರಗಳಿಂದ ಯಾವ ಫಲಾಪೇಕ್ಷೆಯೂ ಇಲ್ಲ. ಆನಂದೋದ್ರೇಕದಿಂದ ಅವರು ಈ ವ್ಯಾಪಾರಗಳನ್ನು ಮಾಡುತ್ತಾ ಇರುತ್ತಾರೆ.

**ವಿ:**—ಇಜ್ಯತೇ ಇತಿ ಯಜ್ಞಃ, ಯಾತಿ ಜಾನಾತಿ ಚ ಇತಿ ಯಜ್ಞಃ ಯಜ್ಞೇಷು ಶೀಲಂ ಯೇಷಾಂ ತೇ ಯಜ್ಞಶೀಲಾಃ ತೈಃ, ಪ್ರಾಜ್ಞಾನಾಂ

Rarest Archiver

ಮುಖ್ಯಂ ಪ್ರಾಜ್ಞಮಧ್ಯಂ ತಸ್ಮಿನ್, ಗಾತುಂ ಯೋಗ್ಯಾ, ಗೇಯಾ ಕೀರ್ತಿಃ ಯಸ್ಯ ಸಃ, ಶೋಭನಂ ಗೀತಂ ಯೇಷಾಂ ತೇ ಸುಗೀತಾಃ ತೈಃ, ನ ಬದ್ಧಾಃ ಅಬದ್ಧಾಃ ತೈಃ, ಸಂಶ್ಲಾಘಾ ಆನಂದಶ್ಚ ಸದಾನಂದಃ ಸದಾನಂದೇನ ಸಾಂದ್ರಾಃ ತೈಃ |

ಕ್ರಿ:—ಇಜ್ಯತೇ ಇಜ್ಯೇತೇ ಇಜ್ಯಂತೇ ಇತ್ಯಾದಿ, ಯಜದೇವಪೂಜಾ-ಸಂಗತಿಕರಣದಾನೇಷು ಕರ್ಮಣಿ ಲಟ್, ಪ್ರ+ಉಚ್ಯತೇ ಉಚ್ಯೇತೇ ಉಚ್ಯಂತೇ ಇತ್ಯಾದಿ, ಬ್ರೂಞ್ ವ್ಯಕ್ತಾಯಾಂ ವಾಚಿ ಕರ್ಮಣಿ ಲಟ್ ಬ್ರುವೋ ವಚಿಃ ಎಂಬ ಸೂತ್ರದಿಂದ ವಚ್ ಆದೇಶ. ಗೀಯತೇ ಗೀಯೇತೇ ಗೀಯಂತೇ ಇತ್ಯಾದಿ, ಗೈ ಶಬ್ದೇ ಕರ್ಮಣಿ ಲಟ್.

ವೈಕುಂಠೇ ತೇ ಶ್ರೀವಿಶೇಷಾ ಜನಾನಾ-
ಮತ್ಯಾಶ್ಚರ್ಯಂ ಚಿತ್ತವಾಚಾಮಭೂಮಿಃ |
ವೈಕುಂಠೇತೇ ಶ್ರೀವಿಶೇಷಾಜನಾನಾ-
ಮುಕ್ತಶ್ಲಾಘ್ಯೇ ಯುಕ್ತಮೇತಾದೃಶತ್ವಂ ||೭೭||

ಅ:—ವೈಕುಂಠೇ ಜನಾನಾಂ ತೇ ಶ್ರೀವಿಶೇಷಾಃ ಅತ್ಯಾಶ್ಚರ್ಯಂ ಚಿತ್ತವಾಚಾಂ ಅಭೂಮಿಃ | ವೈಕುಂಠೇತೇ ಶ್ರೀವಿಶೇಷಾಜನಾನಾಮುಕ್ತ-ಶ್ಲಾಘ್ಯೇ ಏತಾದೃಶತ್ವಂ ಯುಕ್ತಮ್.

ಅರ್ಥ:—ವೈಕುಂಠೇ = ವೈಕುಂಠಲೋಕದಲ್ಲಿ, ಜನಾನಾಂ = ಮುಕ್ತರ, ತೇ ಶ್ರೀವಿಶೇಷಾಃ = ಆ ಕಾಂತಿವಿಶೇಷಗಳು, (ಸಂಪದ್ವಿಶೇಷಗಳು) ಅತ್ಯಾಶ್ಚರ್ಯಂ = ಅತ್ಯಂತ ಅದ್ಭುತವಾದುವು. ಚಿತ್ತವಾಚಾಂ = ಮನಸ್ಸು ಮತ್ತು ಮಾತುಗಳಿಗೆ, ಅಭೂಮಿಃ = ಗೋಚರವಲ್ಲದುವುಗಳು, ವೈಕುಂಠೇತೇ = ವೈಕುಂಠನಾಮಕನಾದ ಶ್ರೀಮನ್ನಾರಾಯಣನಿಂದ ಕೂಡಿದ, ಶ್ರೀ-ವಿ-ಶೇಷ-ಅಜ = ಲಕ್ಷ್ಮೀ, ಗರುಡ, ಶೇಷ, ಬ್ರಹ್ಮ, ನಾನಾಮುಕ್ತ = ನಾನಾ ರೀತಿಯ ಮುಕ್ತಚೇತನರು ಇವರಿಂದ, ಶ್ಲಾಘ್ಯೇ = ಹೊಗಳಲುಯೋಗ್ಯವಾದ ಈ ಲೋಕದಲ್ಲಿ, ಏತಾದೃಶತ್ವಂ = ಈ ರೀತಿಯಾಗಿರುವಿಕೆಯು, ಯುಕ್ತಂ = ಉಚಿತವಾದುದು.

Rarest Archiver

ತಾ : ಈ ಮುಕ್ತಸ್ಥಾನವಾದ ವೈಕುಂಠಲೋಕದಲ್ಲಿರುವ ಮುಕ್ತ ತರುಣತರುಣಿಯರ ಹಿಂದೆ ಹೇಳಿರುವ ಕಾಂತಿ ಮತ್ತು ಸಂಪತ್ಸಮೃದ್ಧಿ ವಿಶೇಷಗಳು ಅತ್ಯಂತ ಆಶ್ಚರ್ಯವನ್ನುಂಟುಮಾಡುತ್ತವೆ. ವಾಸ್ತವವಾಗಿ ಅವುಗಳನ್ನು ಮನಸ್ಸಿನಿಂದ ಆಲೋಚಿಸಲೂ, ಮಾತಿನಿಂದ ವರ್ಣಿಸಲೂ ಸಾಧ್ಯವಿಲ್ಲ. ಇಲ್ಲಿ ಯಾವಾಗಲೂ ಶ್ರೀಮನ್ನಾರಾಯಣನ ಸಂನಿಧಾನ ವಿರುತ್ತದೆ. ಲಕ್ಷ್ಮೀ ಮುಕ್ತಗರುಡ ಶೇಷ ಬ್ರಹ್ಮರು ಇತರ ಅಸಂಖ್ಯಾತ ಮುಕ್ತರು ಈ ಲೋಕವನ್ನು ಹೊಗಳುತ್ತಾರೆ. ಇಂತಹ ಲೋಕದಲ್ಲಿ ಹೀಗಿರುವುದು ಉಚಿತವೇ ಆಗಿದೆ.

ವಿ:—ಶ್ರಿಯಃ ವಿಶೇಷಾಃ, ಚಿತ್ರಾನಿ ಚ ವಾಚಶ್ಚ ತಾಸಾಂ, ನ ಭೂಮಿಃ ಅಭೂಮಿಃ, ವೈಕುಂಠೇನ ಇತಃ ವೈಕುಂಠೇತಃ ತಸ್ಮಿನ್, ಶ್ರೀಶ್ಚ ವಿಶ್ಚ, ಶೇಷಶ್ಚ, ಅಜಶ್ಚ ನಾನಾಮುಕ್ತಾಶ್ಚ, ....ನಾನಾಮುಕ್ತೈಃ ಶ್ಲಾಘ್ಯಃ ತಸ್ಮಿನ್, ಏತಾದೃಶಸ್ಯ ಭಾವಃ ಏತಾದೃಶತ್ವಂ |

ವೃತ್ತ:—ಶಾಲಿನೀ, ಶಾಲಿನ್ಯುಕ್ತಾ ಮ್ತೌ ತಗೌ ಗೋಽಬ್ಧಿಲೋಕೈಃ||

**ಯಂ ಯಂ ಸುಖೀ ಕಾಮಯತೇಽರ್ಥಮತ್ರ**
**ಸಂಕಲ್ಪಮಾತ್ರಾತ್ ಸಕಲೋಽಪಿ ಸ (ಸಕಲಃ ಸಸ) ಸ್ಯಾತ್ |**
**ಇತ್ಯೇವ ವೇದಾ ಅಪಿ ವೇದಯಂತಿ**
**ಮುಕ್ತಿಂ ತತಃ ಕೋ ವಿಭವಾತಿರೇಕಃ ||೭೮||**

ಅ :—ಸುಖೀ ಅತ್ರ ಯಂ ಯಂ ಅರ್ಥಂ ಕಾಮಯತೇ (ಸ) ಸಃ ಸಕಲಃ (ಅಪಿ) ಸಂಕಲ್ಪಮಾತ್ರಾತ್ ಸ್ಯಾತ್, ವೇದಾ ಅಪಿ ಇತ್ಯೇವ ವೇದಯಂತಿ, ತತಃ ವಿಭವಾತಿರೇಕಃ ಕಃ?

ಅರ್ಥ:—ಸುಖೀ = ಆನಂದಸ್ವರೂಪವುಳ್ಳ ಮುಕ್ತನು, ಅತ್ರ= ಈ ವೈಕುಂಠಲೋಕದಲ್ಲಿ, ಯಂ ಯಂ=ಯಾವ ಯಾವ, ಅರ್ಥಂ=ವಸ್ತು ವನ್ನು, ಕಾಮಯತೇ = ಅಪೇಕ್ಷಿಸುತ್ತಾನೋ, ಸ ಸಃ ಸಕಲಃ (ಅಪಿ)= ಆಯಾ ಎಲ್ಲಾ ವಸ್ತುಸಮುದಾಯವೂ, ಸಂಕಲ್ಪಮಾತ್ರಾತ್= ಮನಸ್ಸಿನ ಆಲೋಚನಾಮಾತ್ರದಿಂದಲೇ, ಸ್ಯಾತ್=ಆಗಿಯೇ ತೀರುತ್ತದೆ. ವೇದಾ

Rarest Archiver

ಅಪಿ = ವೇದಗಳೂ, ಇತ್ಯೇವ = ಹೀಗೆಯೇ, ಮುಕ್ತಿಂ = ಮುಕ್ತಿಯನ್ನು, ವೇದಯಂತಿ = ತಿಳಿಸುತ್ತವೆ. ತತಃ = ಆ ಮುಕ್ತಿಗಿಂತ, ವಿಭವಾತಿರೇಕಃ = ಐಶ್ವರ್ಯಾತಿಶಯವು, ಕಃ = ಯಾವುದು ?

ತಾ:— ಸ್ವರೂಪಾನಂದಾತ್ಮಕದೇಹವಂತನಾದ ಮುಕ್ತನು ಈ ವೈಕುಂಠದಲ್ಲಿ ಯಾವ ಯಾವ ವಿಷಯುವನ್ನು ಅಪೇಕ್ಷಿಸುತ್ತಾನೋ ಅಂತಹ ವಿಷಯುವೆಲ್ಲವೂ ಅವನ ಮನಸ್ಸಿನ ಆಲೋಚನೆಯ ಮಾತ್ರದಿಂದಲೇ ಲಭಿಸುತ್ತದೆ. ಮುಕ್ತಿಯನ್ನು ವೇದಗಳೂ ಕೂಡ ಹೀಗೆಯೇ ವರ್ಣಿಸುತ್ತವೆ. ಸಂಕಲ್ಪಮಾತ್ರದಿಂದ ಇಷ್ಟಸಿದ್ಧಿಯಾಗುವ ಮೋಕ್ಷಾನಂದಕ್ಕಿಂತ ಅಧಿಕವಾದ ಬೇರೆ ಅತಿಶಯವಾದ ಐಶ್ವರ್ಯವು ಯಾವುದಿದೆ? ಅಂತೂ ಯಾವ ದುಃಖ ಸಂಪರ್ಕವೂ ಇಲ್ಲದ ಅತ್ಯಧಿಕಸ್ವರೂಪಾನಂದಾನುಭವಾತ್ಮಕವಾದ ಈ ಮೋಕ್ಷವೇ ವೇದವೇದಾಂತಸಂಮತವು. ಇಂತಹ ಸುಖವು ಇನ್ನೆಲ್ಲಿಯೂ ಇಲ್ಲವಾದುದರಿಂದ ಯೋಗ್ಯರು ಇದನ್ನು ಪಡೆಯಲು ಯತ್ನಿಸಬೇಕು.

ವೇದಪ್ರಮಾಣ – ಸ ಯದಿ ಪಿತೃಲೋಕಕಾಮೋ ಭವತಿ ಸಂಕಲ್ಪಾ-ದೇವಅಸ್ಯ ಪಿತರಃ ಸಮುತ್ತಿಷ್ಠಂತಿ। ಇತ್ಯಾದಿ. ಮುಕ್ತನು ಪಿತೃಲೋಕ (ಪಿತೃಜನ)ವನ್ನು ಕಾಣಲು ಬಯಸಿದರೆ ಆ ಲೋಕವು ಅವನ ಸಂಕಲ್ಪ ಮಾತ್ರದಿಂದ ಅವನ ಹತ್ತಿರದಲ್ಲಿಯೇ ತೋರುತ್ತದೆ. ಇತ್ಯಾದಿ.

ವಿ:—ಸುಖಂ ಅಸ್ಯ ಅಸ್ತೀತಿ ಸುಖೀ, ಸಂಕಲ್ಪ ಏವ ಸಂಕಲ್ಪ ಮಾತ್ರಂ ತಸ್ಮಾತ್, ವಿಭವಸ್ಯ ಅತಿರೇಕಃ ವಿಭವಾತಿರೇಕಃ |

ತಾ :—ಕಾಮಯತೇ ಕಾಮಯೇತೇ ಕಾಮಯಂತೇ, ಇತ್ಯಾದಿ, ಕಮು ಕಾಂತೌ, ಲಟ್. ಸ್ಯಾತ್ ಸ್ಯಾತಾಂ ಸ್ಯುಃ ಇತ್ಯಾದಿ, ಅಸಭುವಿ ವಿಧಿಲಿಙ್. ವೇದಯತಿ ವೇದಯತಃ ವೇದಯಂತಿ ವಿದ ಜ್ಞಾನೇ ಲಟ್.

ಅವ:—ಶೇಷದೇವರು ವೈಕುಂಠವರ್ಣನೆಯನ್ನು ಮುಗಿಸುತ್ತಾರೆ—

ಮಹಾನಂದತೀರ್ಥಸ್ಯ ಯೋ ಭಾಷ್ಯಭಾವಂ
ಮನೋವಾಗ್ಭಿರಾವರ್ತಯಂತೇ ಸ್ವಶಕ್ತ್ಯಾ ।

Rarest Archiver

ಸುರಾದ್ಯಾ ನರಾಂತಾ ಮುಕುಂದಪ್ರಸಾದಾತ್
ಇಮಂ ಮೋಕ್ಷಮೇತೇ ಭಜಂತೇ ಸದೇತಿ ||೬೯||

ಇತಿ ಶ್ರೀಮತ್ಕವಿಕುಲತಿಲಕತ್ರಿವಿಕ್ರಮಪಂಡಿತಾಚಾರ್ಯಸುತ-ನಾರಾಯಣಪಂಡಿತಾಚಾರ್ಯವಿರಚಿತೇ ಶ್ರೀಮತ್ಸುಮಧ್ವವಿಜಯೇ ಮಹಾಕಾವ್ಯೇ ಆನಂದಾಂಕೇ ಏಕಾದಶಃ ಸರ್ಗಃ |

ಅ:—ಸುರಾದ್ಯಾ ನರಾಂತಾಃ ಯೇ ಮಹಾನಂದತೀರ್ಥಸ್ಯ ಭಾಷ್ಯ-ಭಾವಂ ಮನೋವಾಗ್ಭಿಃ ಸ್ವಶಕ್ತ್ಯಾ ಆವರ್ತಯಂತೇ ಏತೇ ಮುಕುಂದ ಪ್ರಸಾದಾತ್ | ಇಮಂ ಮೋಕ್ಷಂ ಸದಾ ಭಜಂತೇ (ಇತಿ ಸ ಗಿರಂ ಜಗಾದ, ಸರ್ಗ ೧೧ ಶ್ಲೋಕ ೫)

**ಅರ್ಥ :**—ಸುರಾದ್ಯಾಃ= ದೇವತೆಗಳೇ ಮೊದಲಾದ, ನರಾಂತಾಃ= ಮನುಷ್ಯರವರೆಗಿನ, ಯೇ= ಯಾವ ಅಧಿಕಾರಿಗಳು, ಮಹಾನಂದತೀರ್ಥಸ್ಯ = ಪರಮಪೂಜ್ಯರಾದ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ, ಭಾಷ್ಯಭಾವಂ= ಬ್ರಹ್ಮಸೂತ್ರಭಾಷ್ಯಾದಿಗ್ರಂಥಗಳ, ಭಾವಂ = ಅಭಿಪ್ರಾಯ ವನ್ನು, ಮನೋವಾಗ್ಭಿಃ= ಮನಸ್ಸು ಮತ್ತು ಮಾತುಗಳಿಂದ, ಸ್ವಶಕ್ತ್ಯಾ = ತಮ್ಮ ಶಕ್ತ್ಯನುಸಾರವಾಗಿ, ಆವರ್ತಯಂತೇ = ಆವೃತ್ತಿಮಾಡುತ್ತಾರೋ, ಏತೇ = ಇವರು, ಮುಕುಂದಪ್ರಸಾದಾತ್ = ಶ್ರೀಮನ್ನಾರಾಯಣನ ಅನುಗ್ರಹದಿಂದ, ಇಮಂ ಮೋಕ್ಷಂ= ಈ ಹಿಂದೆ ಹೇಳಿದ ಮೋಕ್ಷವನ್ನು, ಸದಾ ಭಜಂತೇ = ಯಾವಾಗಲೂ ಸೇವಿಸುತ್ತಾ ಇರುತ್ತಾರೆ. ಇತಿ= ಈ ರೀತಿ (ಶೇಷದೇವರು, ಸನಕಾದಿಗಳನ್ನು ಕುರಿತು ಹೇಳಿದರು. ಎಂದು ೧೧ನೆಯ ಸರ್ಗ ೫ನೆಯ ಶ್ಲೋಕದ ಜತೆಗೆ ಏಕಾನ್ವಯವು.)

**ತಾ:**—'ದೇವತೆಗಳನ್ನು ಮೊದಲ್ಗೊಂಡು ಮೋಕ್ಷಯೋಗ್ಯರಾದ ಮನುಷ್ಯೋತ್ತಮರ ಪರ್ಯಂತವಾಗಿರತಕ್ಕ, ಯಾವ ಅಧಿಕಾರಿಗಳು ಶ್ರೀಮಧ್ವಾಚಾರ್ಯರ ಬ್ರಹ್ಮಸೂತ್ರಭಾಷ್ಯಾದಿಗ್ರಂಥಗಳ, ಅಭಿಪ್ರಾಯ ವನ್ನು, ಮನಸ್ಸಿನಿಂದ ಮತ್ತು ಮಾತಿನಿಂದ ಶಕ್ತ್ಯನುಸಾರವಾಗಿ ಆವೃತ್ತಿ ಮಾಡುತ್ತಾರೋ, ಶ್ರವಣಮಾಡಿ, ಮನನಮಾಡಿ, ಪ್ರವಚನ ಮಾಡುತ್ತಾರೋ, ಅಂತಹ ಅಧಿಕಾರಿಗಳು ಶ್ರೀಹರಿಯ ಪರಮಪ್ರಸಾದದಿಂದ

Rarest Archiver

ಇಂತಹ ಮೋಕ್ಷವನ್ನು ಪಡೆದು ಯಾವಾಗಲೂ ಅದನ್ನು ಅನುಭವಿಸುತ್ತಾ ಇರುತ್ತಾರೆಂದು ಶೇಷದೇವರು ಆಚಾರ್ಯರ ಭಾಷ್ಯಾದಿಗ್ರಂಥಾಧ್ಯಯನದ ಫಲವನ್ನು ಸನಕಾದಿಯೋಗಿಗಳಿಗೆ ಹೇಳಿದರು ಎಂದು ಭಾವ. (ಶ್ರವಣ= ಗುರುಮುಖದಿಂದ ಶಾಸ್ತ್ರವನ್ನು ಕೇಳುವುದು, ಮನನ = ಕೇಳಿದ್ದನ್ನು ಮನಸ್ಸಿನಲ್ಲಿ ಮತ್ತೂ ಮತ್ತೂ ಪರಿಶೀಲಿಸುವುದು, ಆಲೋಚಿಸುವುದು, ವ್ಯಾಖ್ಯಾನ, ಪ್ರವಚನ = ಇನ್ನೊಬ್ಬರಿಗೆ ಹೇಳುವುದು, ಆವರ್ತನ = ತಿರುಗಿ ತಿರುಗಿ ಮಾಡಿದ್ದನ್ನೇ ಮಾಡುವುದು ||

**ಪ್ರಮಾಣ :– ಪೂರ್ಣಪ್ರಜ್ಞಕೃತಂ ಭಾಷ್ಯಂ**
**ಸೂತ್ರಾಣಾಂ ಪ್ರಪಠೇನ್ ಕಲೌ |**
**ಕೃತಾದಿಷು ತಪೋಯಜ್ಞದಾನಾದ್ಯೈರ್ಯತ್ಫಲಂ ಲಭೇತ್ ||**
**ಸರ್ವಾನ್ ಕಾಮಾನ್ ಇಹಾವಾಪ್ಯ**
**ಮುಕ್ತೋಽಭೀಷ್ಟಂ ಸಮಶ್ನುತೇ ||**
(ಶ್ರೀ ಭವಿಷ್ಯೋತ್ತರ ಪುರಾಣ.)

ವಿ:—ಮಹಾನ್ ಚ(ಂಶ್ಚ) ಅಸೌ ಆನಂದತೀರ್ಥಶ್ಚ ಮಹಾನಂದ-ತೀರ್ಥಃ ತಸ್ಯ, ಭಾಷ್ಯಸ್ಯ ಭಾವಃ ಭಾಷ್ಯಭಾವಃ ತಂ, ಮನಾಂಸಿ ಚ ವಾಚಶ್ಚ ಮನೋವಾಚಃ ತಾಭಿಃ, ಸ್ವೇಷಾಂ ಶಕ್ತಿಃ ತಯಾ, ಸುರಾಃ ಆದ್ಯಾಃ ಯೇಷಾಂ ತೇ, ನರಾಃ ಅಂತಾಃ ಯೇಷಾಂ ತೇ, ಮುಕುಂದಸ್ಯ ಪ್ರಸಾದಃ ಮುಕುಂದಪ್ರಸಾದಃ ತಸ್ಮಾತ್ ;

ಕ್ರಿ:— ಆ + ವರ್ತಯಂತೇ, ವೃತು ವರ್ತನೇ ಣಿಜಂತಲಟ್, ವರ್ತಯತೇ ವರ್ತಯೇತೇ, ಇತ್ಯಾದಿ. ಭಜಂತೇ, ಭಜತೇ ಭಜೇತೇ ಭಜಂತೇ ಇತ್ಯಾದಿ. ಭಜ ಸೇವಾಯಾಂ ಲಟ್ ಆತ್ಮನೇ.

ವೃತ್ತ:—ಭುಜಂಗಪ್ರಯಾತಂ–ಭವೇದ್ಯೈಶ್ಚತುರ್ಭಿಃ.

**ಇಲ್ಲಿಗೆ ಕವಿಕುಲತಿಲಕ ಶ್ರೀಮತ್ತ್ರಿವಿಕ್ರಮ ಪಂಡಿತಾಚಾರ್ಯಸುತ**
**ನಾರಾಯಣಪಂಡಿತವಿರಚಿತ**
**ಶ್ರೀಮತ್ಸುಮಧ್ವವಿಜಯದ ಅನುವಾದದಲ್ಲಿ**
**ಹನ್ನೊಂದನೆಯ ಸರ್ಗವು ಸಮಾಪ್ತವಾಯಿತು.**

Rarest Archiver

Rarest Archiver

|| ಶ್ರೀಃ ||

# ಶ್ರೀಸುಮಧ್ವವಿಜಯ ಮಹಾಕಾವ್ಯಂ

## ಹನ್ನೆರಡನೇ ಸರ್ಗದ ಕಥಾಸಾರಾಂಶ

ಶ್ರೀಮಧ್ವಾಚಾರ್ಯರು ರಜತಪೀಠಪುರದಲ್ಲಿ ತಮ್ಮ ಸಿದ್ಧಾಂತವನ್ನು ಶಾಸ್ತ್ರಪ್ರವಚನದ ಮೂಲಕ ಶಿಷ್ಯರಿಗೆ ಉಪದೇಶಿಸುತ್ತಿದ್ದರು. ಆಗ ಮಾಯಾವಾದಿಗಳು ಅಸೂಯೆಯಿಂದ ಬಹಳವಾಗಿ ವ್ಯಥೆಪಡತೊಡಗಿದರು. ಅವರೆಲ್ಲರೂ ಚೋಲದೇಶದ ಪದ್ಮತೀರ್ಥ ಮತ್ತು ಪುಂಡರೀಕಪುರಿ ಎಂಬ ಇಬ್ಬರ ನಾಯಕತ್ವದಲ್ಲಿ ಶ್ರೀಮಧ್ವಾಚಾರ್ಯರನ್ನು ವಾದದಲ್ಲಿ ಸೋಲಿಸಲು ಮಂತ್ರಾಲೋಚನೆ ಮಾಡಿದರು. ಆಗ ಒಬ್ಬ ವಾಚಾಲನು ಹೀಗೆ ವಿಷಯ ಪ್ರಸ್ತಾವನೆಯನ್ನು ಮಾಡಿದನು.

"ಶ್ರೀಶಂಕರಾಚಾರ್ಯರ ಅದ್ವೈತ ಸಿದ್ಧಾಂತವು ಅನಾದಿಕಾಲದಿಂದ ಬಂದಿರುವ ಉತ್ತಮವಾದ ಸಿದ್ಧಾಂತವಾಗಿದೆ. ಇದು ಮೇಲ್ನೋಟಕ್ಕೆ ಅಸಂಗತವಾಗಿ ಕಾಣುತ್ತದೆ. ಆದರೆ ಅಸಾಂಗತ್ಯವು ನಮ್ಮ ಶಾಸ್ತ್ರಕ್ಕೆ ಅಲಂಕಾರವೇ ಆಗಿದೆ. ಈ ಶಾಸ್ತ್ರವನ್ನು ತಿಳಿದರೆ ಬ್ರಹ್ಮನಿಗಿಂತ ಅತ್ಯಂತ ಭಿನ್ನವಾಗಿ ತೋರುವ ಈ ಸಮಸ್ತಜೀವಜಡಾತ್ಮಕಪ್ರಪಂಚವನ್ನು ಅಭಿನ್ನವೆಂದು ಸಾಧಿಸಬಹುದು. ಈ ವಿಷಯವನ್ನು ಬೇರೆ ಯಾವ ಶಾಸ್ತ್ರದಿಂದಲೂ ಸಾಧಿಸಲು ಸಾಧ್ಯವಿಲ್ಲ. ಈಗ ಕಾಣುವ ಈ ಭೇದವು ವ್ಯಾವಹಾರಿಕವು, ಪಾರಮಾರ್ಥಿಕವಾಗಿ ಯಾವ ಭೇದವೂ ಇರುವುದಿಲ್ಲ, ಕಾಣುವ ಭೇದವು ಜ್ಞಾನಾವಸ್ಥೆಯಲ್ಲಿ ಮಾಯವಾಗುವುದು. ಈ ಸಿದ್ಧಾಂತವನ್ನು ಅನುಸರಿಸಿ ಅನೇಕರು ನಿರ್ಗುಣ ಬ್ರಹ್ಮೈಕ್ಯರೂಪವಾದ ಮೋಕ್ಷವನ್ನು ಪಡೆದಿದ್ದಾರೆ. ಆದುದರಿಂದ ಈ ಸಿದ್ಧಾಂತಕ್ಕೆ ವಿರುದ್ಧವಾದ ದ್ವೈತಸಿದ್ಧಾಂತವನ್ನು ತಡೆಯಬೇಕು. ಅದನ್ನು ಮಾಡಲಾಗದಿದ್ದರೂ ಮಧ್ವಾಚಾರ್ಯರನ್ನು ತಡೆಯಬೇಕು. ಇದುವರೆಗೆ ಈ ಕಾರ್ಯವನ್ನು ಮಾಡಲು ಪದ್ಮತೀರ್ಥರೇ ಮುಂತಾದವರು ನಮ್ಮ ದುರದೃಷ್ಟದಿಂದ

Rarest Archiver

ಅಸಮರ್ಥರಾದರು. ಮುಂದಾದರೂ ಅವರೇ ಮಧ್ವಾಚಾರ್ಯರನ್ನು ಖಂಡಿಸಲು ಶಕ್ತರು. ಎಂದು ನನ್ನಭಾವನೆ. ಈ ಮಧ್ವಾಚಾರ್ಯರೂ ಅವರ ಶಿಷ್ಯರೂ ಪರಬ್ರಹ್ಮನು ಸಮಸ್ತಕಲ್ಯಾಣ ಗುಣಪರಿಪೂರ್ಣನು, ಜಗತ್ತು ಸತ್ಯ-ಇತ್ಯಾದಿ ತತ್ತ್ವಗಳನ್ನು ಬೋಧಿಸುತ್ತ ನಮ್ಮವರನ್ನೆಲ್ಲಾ ತಮ್ಮ ಕಡೆಗೆ ಸೆಳೆದು ಕೊಳ್ಳುತ್ತಿದ್ದಾರೆ. ಇದರಿಂದಾಗಿ ನಮ್ಮ ಮಾಯಾವಾದ ಮತವು ಕಣ್ಮರೆಯಾಗಿ ಹೋಗುತ್ತದೆ. ಈಗ ನಾವು ಉದಾಸೀನರಾಗ ಬಾರದು'' ಎಂದನು.

ಆಗ ಕಷ್ಟನೆಂಬ ಮಾಯಾವಾದಿಯು ಈ ರೀತಿ ಹೇಳಿದನು– "ಈ ಮಧ್ವಾಚಾರ್ಯರಿಂದ ಹೆದರುವವರು ಹೇಡಿಗಳು. ಈ ಪದ್ಮತೀರ್ಥರೇ ಮೊದಲಾದ ಮಹಾಪಂಡಿತರು ಇರುವಾಗ ನಮಗೇಕೆ ಭಯ? ಈ ಸಿದ್ಧಾಂತವನ್ನು ನಾವು ಖಂಡಿಸಲು ಆಗದಿದ್ದರೂ ಮಾಟಮಂತ್ರಶಾಸ್ತ್ರಾದಿ ಗಳಿಂದ ಪದ್ಮತೀರ್ಥರು ಇವರನ್ನು ಸೋಲಿಸಬಲ್ಲರು. ಆದರೆ ನಮ್ಮವರು ನಾನು ಮುಂದೆ ಹೇಳುವ ಕಾರ್ಯವನ್ನು ಮೊದಲು ಮಾಡಬೇಕು. ಅವರಲ್ಲಿ ಇರುವ ಅಥವಾ ಇಲ್ಲದಿರುವ ದೋಷಗಳನ್ನು ಎತ್ತಿ ಹಿಡಿದು ಎಲ್ಲಾ ಕಡೆ ಪ್ರಚಾರ ಮಾಡಬೇಕು. ಉಪಾಯದಿಂದಲೇ ಪ್ರತಿವಾದಿಗಳನ್ನು ಖಂಡಿಸ ಬೇಕು. ಪ್ರತಿಹಳ್ಳಿಗೂ ಹೋಗಿ ಮಧ್ವರ ಅನುಯಾಯಿಗಳನ್ನು ಅಲ್ಲಿ ಪ್ರವೇಶಿಸದಂತೆ ಹಳ್ಳಿಗರ ಮನವೊಲಿಸಿ ತಡೆಯಬೇಕು. ಅವರು ಪ್ರವೇಶಿಸಿದರೂ ಅವರಿಗೆ ಸಂಮಾನ ನಡೆಯದಂತೆ ಮಾಡಬೇಕು. ಯತಿಗಳ ಪುಸ್ತಕಗಳನ್ನು ಕಿತ್ತುಕೊಂಡು ದಂಡವನ್ನು ತುಂಡರಿಸಬೇಕು:"

ಇವೇ ಮೊದಲಾದ ಕಾರ್ಯಕ್ರಮಗಳನ್ನು ಅವರು ನಿರ್ಣಯಿಸಿ ಶ್ರೀಮಧ್ವರಿಗೂ ಅವರ ಶಿಷ್ಯರಿಗೂ ತೊಂದರೆ ಕೊಡಲಾರಂಭಿಸಿದರು. ತಾವು ಮಹಾನರಕಸಾಧನವನ್ನು ಸಂಪಾದಿಸಿಕೊಂಡರು.

ಮೊಟ್ಟ ಮೊದಲು ಅವರು ಪುಂಡರೀಕಪುರಿ ಎಂಬ ಸಂನ್ಯಾಸಿಯನ್ನು ಶ್ರೀಮಧ್ವಾಚಾರ್ಯರೊಡನೆ ವಾದ ಮಾಡಲು ಹುರಿದುಂಬಿಸಿದರು. ಅದರಂತೆ ಲಘುಬುದ್ಧಿಯ ಆ ಪುಂಡರೀಕಪುರಿಯು ಆಚಾರ್ಯರನ್ನು

ವಾದಕ್ಕೆ ಕರೆದನು. ಆಚಾರ್ಯರು ಅವನು ಅಲ್ಪನೆಂದು ಉದಾಸೀನ ಮಾಡದೆ ವಾದಕ್ಕಾಗಿ ಹೋದರು. ಮೊದಲು ಆಚಾರ್ಯರು ವೇದವನ್ನು ಶಾಸ್ತ್ರೀಯವಾಗಿ ಉಚ್ಚರಿಸಿ, ಅದರ ಅರ್ಥನಿರೂಪಣೆಯನ್ನು ಮಾಡ-ಲಾರಂಭಿಸಿದರು. ಅನೇಕವಿದ್ವಾಂಸರು ಈ ಪ್ರವಚನವನ್ನು ಕೇಳುತ್ತಿದ್ದರು. ದೇವತೆಗಳೂ ಆ ವೇದೋಚ್ಚಾರಣ ಮತ್ತು ವೇದಾರ್ಥನಿರೂಪಣದ ವೈಖರಿಯನ್ನು ಕೇಳಿ, ನೋಡಿ ಸಂತೋಷಪಟ್ಟರು. ಚತುರ್ಮುಖಬ್ರಹ್ಮನಂತೆ ಶೋಭಿಸುತ್ತಿರುವ ಆಚಾರ್ಯರನ್ನು ವಾದದಲ್ಲಿ ಸೋಲಿಸುವ ಮೊದಲು, ನೀವೂ ಹಾಗೆಯೇ ಮೊದಲು ವೇದಪ್ರವಚನಮಾಡಿರಿ ಎಂದು ಅಲ್ಲಿದ್ದ ಬ್ರಾಹ್ಮಣರು ಕೇಳಿದಾಗ, ಪುಂಡರೀಕಪುರಿಯು ವೇದ ಪ್ರವಚನವನ್ನು ಪ್ರಾರಂಭಿಸಿ ಒಂದು ಋಕ್ಕನ್ನು ಹೇಳಿ ಅಲ್ಲಿ ಪದವನ್ನು ಬಿಡಿಸುವಾಗಲೇ ತಪ್ಪನ್ನು ಮಾಡಿ ಹಾಸ್ಯಾಸ್ಪದನಾದನು. ವಾದದಲ್ಲಿ ಸೋತನು.

ಶ್ರೀಮಧ್ವಾಚಾರ್ಯರು ಲಿಕುಚವಂಶದ ಶಂಕರಾಚಾರ್ಯನೆಂಬ ಬ್ರಾಹ್ಮಣನಲ್ಲಿ ತನ್ನ ಗ್ರಂಥಗಳನ್ನು ರಕ್ಷಿಸಲು ಕೊಟ್ಟಿದ್ದರು. ಪದ್ಮತೀರ್ಥನೆಂಬ ಸಂನ್ಯಾಸಿಯು ಆ ಶಾಸ್ತ್ರಪುಸ್ತಕಗಳನ್ನು ಕದ್ದುಕೊಂಡು ಹೋದನು. ಆಚಾರ್ಯರು ಆ ವಾರ್ತೆಯನ್ನು ಕೇಳಿದ ಕೂಡಲೇ ಜ್ಯೇಷ್ಠಯತಿಗಳೊಡನೆ ಬೇಗನೆ ಪದ್ಮತೀರ್ಥನಿದ್ದಲ್ಲಿಗೆ, ಹೋಗಿ ವಾದದಲ್ಲಿ ಅವನನ್ನು ಗೆದ್ದು ಅಪಹಾಸ್ಯ ಮಾಡಿದರು. ಅವನ ಸಹಾಯಕ್ಕೆ ಬಂದ ಪುಂಡರೀಕಪುರಿಯನ್ನೂ ಖಂಡಿಸಿದರು.

ಆನಂತರ ಆಚಾರ್ಯರ ಶಿಷ್ಯರಾದ ಸಜ್ಜನರು ಮಾಯಾವಾದಿಗಳನ್ನು ಕುರಿತು ಇಂತೆಂದರು—

ಎಲೈ ಮಾಯಾವಾದಿಗಳೇ! ಶ್ರೀಮಧ್ವಾಚಾರ್ಯರು ತಮ್ಮ ಸಮರ್ಥವಾದ ಮಾತುಗಳಿಂದ ಬ್ರಹ್ಮಸ್ವರೂಪವನ್ನು ವಿವರಿಸುತ್ತಾ ಸೂರ್ಯನಂತೆ ರಾಜಿಸುತ್ತಿದ್ದಾರೆ. ಕಳ್ಳರಿಗೆ ಆಶ್ರಯವಾದ ಕತ್ತಲೆಯಂತಿರುವ ನಿಮಗೆ ಆಶ್ರಯವಾದ ಮಾಯೆಯು ತೊಲಗಿದೆ. ಸೂರ್ಯನು ಉದಯಿಸಿದಾಗ ಕತ್ತಲೆಯು ತೊಲಗುವಂತೆ, ಗರುಡನನ್ನು ಕಂಡಾಗ

Rarest Archiver

ಹಾವುಗಳು ಓಡಿಹೋಗುವಂತೆ ನೀವೂ ಓಡಿಹೋಗಿ ಎಲ್ಲಾದರೂ ಗುಹೆಯಲ್ಲಿ ಗುಟ್ಟಾಗಿ ಅಡಗಿಕೊಳ್ಳಿರಿ. ನಿಮ್ಮನ್ನು ಖಂಡಿಸಲು ಶ್ರೀಮಧ್ವರು ಬಂದಿದ್ದಾರೆ. ಓಡಿಹೋಗಿರಿ.' ಎಂದು ಎಚ್ಚರಿಸುವ ಮಾತನ್ನಾಡಿದರು. ಅನಂತರ ಶ್ರೀಮಧ್ವಾಚಾರ್ಯರು ಕಾವು ಎಂಬ ಆ ಹಳ್ಳಿಯಿಂದ ಹೊರಟು ಕೊ ಡಿ ಪಾ ಡಿ ಎಂಬಲ್ಲಿರುವ ದೇವಾಲಯದಲ್ಲಿ ಚಾತುರ್ಮಾಸ್ಯವ್ರತ ದೀಕ್ಷಿತರಾಗಿ ವಾಸ ಮಾಡತೊಡಗಿದರು.

ಶ್ರೀ ಗುರುಭ್ಯೋನಮಃ

## ದ್ವಾದಶಃ ಸರ್ಗಃ

ಅವ:— ಶ್ರೀಮಧ್ವಾಚಾರ್ಯರು ಸಿದ್ಧಾಂತಪ್ರವಚನವನ್ನು ಮಾಡುತ್ತಾ ವಿರಾಜಿಸುತ್ತಿದ್ದಾಗ ಮಾಯಾವಾದಿಗಳು ಕಂಗೆಟ್ಟರು—

**ತತ್ರಾನಂತಸ್ವಾಂತವೇದಾಂತಿಸಿಂಹೇ**
**ಮುಖ್ಯವ್ಯಾಖ್ಯಾನಿಸ್ವನೇ ಜೃಂಭಮಾಣೇ |**
**ಸದ್ಯೋಮಾದ್ಯದ್ವಾದಿದಂತೀಂದ್ರಭೀಮೇ**
**ಭೇಜೇ ಕ್ಷೋಭೋ ಮಾಯಿಗೋಮಾಯುಯೂಥೈಃ ||೧||**

ಅ :—ಮುಖ್ಯವ್ಯಾಖ್ಯಾನಿಸ್ವನೇ ಸದ್ಯಃ ಮಾದ್ಯದ್ವಾದಿದಂತೀಂದ್ರಭೀಮೇ ಅನಂತಸ್ವಾಂತವೇದಾಂತಿಸಿಂಹೇ ತತ್ರ ಜೃಂಭಮಾಣೇ ಮಾಯಿಗೋಮಾಯುಯೂಥೈಃ ಕ್ಷೋಭಃ ಭೇಜೇ |

ಅರ್ಥ :—ಮುಖ್ಯ = ಉತ್ತಮವಾದ, ವ್ಯಾಖ್ಯಾ = ಪ್ರವಚನರೂಪವಾದ, ನಿಸ್ವನೇ = ಗರ್ಜನರೂಪವಾದ ಧ್ವನಿಯುಳ್ಳ, ಸದ್ಯಃ = ತತ್ಕ್ಷಣದಲ್ಲಿಯೇ, ಮಾದ್ಯದ್ = ಮದಿಸಿರುವ, ವಾದಿದಂತೀಂದ್ರ = ವಾದಿಗಳೆಂಬ ಶ್ರೇಷ್ಠಗಜಗಳಿಗೆ, ಭೀಮೇ = ಭಯಂಕರರಾದ, ಅನಂತಸ್ವಾಂತ = ಶ್ರೀಮನ್ನಾರಾಯಣನಲ್ಲಿಯೇ ನೆಟ್ಟ ಅಂತಃಕರಣವುಳ್ಳ, ವೇದಾಂತಿಸಿಂಹೇ = ಸಿಂಹದಂತಿರುವ ವೇದಾಂತಿಶ್ರೇಷ್ಠರಾದ ಶ್ರೀಮಧ್ವಾಚಾರ್ಯರು, ತತ್ರ

Rarest Archiver

= ಆ ರಜತಪೀಠಪುರದಲ್ಲಿ, ಜೃಂಭಮಾಣೇ ಸತಿ = ವಿಜೃಂಭಿಸುತ್ತಿರಲು, ಮಾಯಿ = ಮಾಯಾವಾದಿಗಳೆಂಬ, ಗೋಮಾಯುಯೂಥೈಃ = ನರಿಗಳ ಹಿಂಡುಗಳಿಂದ, ಕ್ಷೋಭಃ = ಕಳವಳವು, ಭೇಜೇ = ಹೊಂದಲ್ಪಟ್ಟಿತು.

ತಾ:— 'ಉತ್ತಮವಾದ ಸಿದ್ಧಾಂತಪ್ರವಚನವೆಂಬ ಗರ್ಜನಧ್ವನಿಯುಳ್ಳ, ಮದಭರಿತರಾದ ವಾದಿಗಳೆಂಬ ಗಜಶ್ರೇಷ್ಠಗಳಿಗೆ ಪ್ರವಚನಧ್ವನಿಯನ್ನು ಕೇಳಿದಕೂಡಲೇ ಭಯವನ್ನುಂಟುಮಾಡುವ ಶ್ರೀಮಧ್ವಾಚಾರ್ಯರೆಂಬ ಸಿಂಹವು ಉಡುಪಿಕ್ಷೇತ್ರದಲ್ಲಿ ವಿಜೃಂಭಿಸುತ್ತಿರುವಾಗ ಮಾಯಾವಾದಿಗಳೆಂಬ ನರಿಗಳ ಹಿಂಡುಗಳು ಕಂಗೆಟ್ಟವು.' ಸಿಂಹವು ಗರ್ಜಿಸುತ್ತಾ ಮೆರೆಯುತ್ತಿರುವುದನ್ನು ಕಂಡು ನರಿಗಳು ಕಂಗೆಡುವಂತೆ ಮಾಯಾವಾದಿಗಳು ಶ್ರೀಮಧ್ವಾಚಾರ್ಯರು ತನ್ನ ಮತವನ್ನು ಸಾಧಿಸುತ್ತಿರುವುದನ್ನು ಕಂಡು ಕಳವಳಪಟ್ಟರು ಎಂದು ಭಾವ.

ವಿ :—ಅನಂತಂ (ಅನಂತೇ) ಸ್ವಾಂತಂ ಯಸ್ಯ ಸಃ, ವೇದಾಂತಃ ಅಸ್ಯ ಅಸ್ತೀತಿ ವೇದಾಂತೀ, ವೇದಾಂತೀ ಏವ ಸಿಂಹಃ ವೇದಾಂತಿಸಿಂಹಃ, ಅನಂತಸ್ವಾಂತ ಏವ ವೇದಾಂತಿಸಿಂಹಃ ತಸ್ಮಿನ್, ಮುಖ್ಯಾ ಚ ಸಾ ವ್ಯಾಖ್ಯಾಚ, ಮುಖ್ಯವ್ಯಾಖ್ಯಾ ಇತಿ ನಿಸ್ವನಃ ಯಸ್ಯ ಸಃ ತಸ್ಮಿನ್, ದಂತಿನಾಂ ಇಂದ್ರಾಃ ದಂತೀಂದ್ರಾಃ, ವಾದಿನಃ ಏವ ದಂತೀಂದ್ರಾಃ ಮಾದ್ಯಂತಶ್ಚ ತೇ ವಾದಿದಂತೀದ್ರಾಶ್ಚ ಮಾದ್ಯದ್ವಾದಿದಂತೀಂದ್ರಾಃ ತೇಷಾಂ ಭೀಮಃ ತಸ್ಮಿನ್, ಮಾಯಿನಃ ಏವ ಗೋಮಾಯವಃ ಮಾಯಿಗೋಮಾಯವಃ, ಮಾಯಿಗೋಮಾಯೂನಾಂ ಯೂಥಾನಿ ಮಾಯಿಗೋಮಾಯುಯೂಥಾನಿ ತೈಃ|

ಕ್ರಿ:—ಭೇಜೇ ಭೇಜಾತೇ, ಭೇಜಿರೇ, ಇತ್ಯಾದಿ, ಭಜಸೇವಾಯಾಂ ಕರ್ಮಣಿ ಲಿಟ್.

ವೃತ್ತ:—ಶಾಲಿನೀ, ಶಾಲಿನ್ಯುಕ್ತಾ ಮ್ತೌ ತಗೌ ಗೋಽಬ್ಧಿಲೋಕೈಃ.

ಅವ :—ಮನಸ್ಸಿನ ಕ್ಷೋಭೆಯಿಂದ ಮಾಯಾವಾದಿಗಳು ಏನು ಮಾಡಿದರು—

Rarest Archive

**ಸಂಭೂಯಾಮೀ ಚೋಲಜದ್ವೀಪಿಪುರ್ಯೋಃ**
**ಪಾರ್ಶ್ವೇ ಪಾಪಾ ಮಂತ್ರಯಾಮಾಸುರುಗ್ರಾಃ।**
**ಸಾಸೂಯಾ ಭೂಭೂಷಣೇ ವಾಯುದೇವೇ**
**ಮೂಢಾ ಯದ್ವದ್‌ಧಾರ್ತರಾಷ್ಟ್ರಾಂತಿಕೇ ಪ್ರಾಕ್** ॥೨॥

**ಅ:**—ಪಾಪಾಃ ಉಗ್ರಾಃ ಅಮೀ ಚೋಲಜದ್ವೀಪಿಪುರ್ಯೋಃ ಪಾರ್ಶ್ವೇ ಸಂಭೂಯ ಭೂಭೂಷಣೇ ವಾಯುದೇವೇ ಸಾಸೂಯಾಃ ಪ್ರಾಕ್ ಮೂಢಾಃ ಧಾರ್ತರಾಷ್ಟ್ರಾಂತಿಕೇ ಯದ್ವತ್ ಮಂತ್ರಯಾಮಾಸುಃ।

**ಅರ್ಥ:**—ಪಾಪಾಃ = ಪಾತಕಿಗಳಾದ, ಉಗ್ರಾಃ = ಕ್ರೂರರಾದ, ಅಮೀ = ಈ ಮಾಯಾವಾದಿಗಳು, ಚೋಲಜ = ಚೋಲದೇಶದವನಾದ ಪದ್ಮತೀರ್ಥ, ದ್ವೀಪಿಪುರ್ಯೋಃ = ಪುಂಡರೀಕಪುರಿ. ಇವರ, ಪಾರ್ಶ್ವೇ = ಸಮೀಪದಲ್ಲಿ, ಸಂಭೂಯ = ಒಟ್ಟು ಸೇರಿ, ಭೂಭೂಷಣೇ = ಲೋಕಕ್ಕೆ ಅಲಂಕಾರಪ್ರಾಯರಾದ, ವಾಯುದೇವೇ = ಮುಖ್ಯಪ್ರಾಣದೇವರ ಅವತಾರರಾದ ಶ್ರೀಮಧ್ವರಲ್ಲಿ, ಸಾಸೂಯಾಃ ಸಂತಃ = ಹೊಟ್ಟೆಕಿಚ್ಚಿನಿಂದ ಕೂಡಿದವರಾಗಿ, ಪ್ರಾಕ್ = ಹಿಂದೆ, ಮೂಢಾಃ = ಮೋಹದಿಂದ (ಅಜ್ಞಾನದಿಂದ) ಕೂಡಿದ ದೈತ್ಯರು, ಧಾರ್ತರಾಷ್ಟ್ರಾಂತಿಕೇ ಯದ್ವತ್ = ದುರ್ಯೋಧನನ ಬಳಿಯಲ್ಲಿ ಎಂಬಂತೆ, ಮಂತ್ರಯಾಮಾಸುಃ = ಆಲೋಚಿಸಿದರು.

**ತಾ:**—ಪಾಪಿಷ್ಠರೂ ಕ್ರೂರಸ್ವಭಾವದವರೂ ಆದ ಈ ಮಾಯಾವಾದಿಗಳು, ಭುವನಭೂಷಣರಾದ ಶ್ರೀಮುಖ್ಯಪ್ರಾಣಾವತಾರರಾದ, ಶ್ರೀಮಧ್ವಾಚಾರ್ಯರಲ್ಲಿ ಹೊಟ್ಟೆಕಿಚ್ಚಿನಿಂದ ಕೂಡಿದವರಾಗಿ ಚೋಳದೇಶದವನಾದ ಪದ್ಮತೀರ್ಥ ಮತ್ತು ಪುಂಡರೀಕಪುರಿ ಎಂಬಿಬ್ಬರ ಬಳಿ ಸೇರಿ ಹಿಂದೆ ಅನೇಕ ಮೂರ್ಖದೈತ್ಯರಾಜಕುಮಾರರು ದುರ್ಯೋಧನನ ಬಳಿಯಲ್ಲಿ ಹೇಗೋ ಹಾಗೇ ತಾವೆಲ್ಲ ಮುಂದೆ ಏನು ಮಾಡಬೇಕೆಂದು ಆಲೋಚನೆ ಮಾಡತೊಡಗಿದರು. 'ಯೋ ಗುಪ್ತಪಟಲೋಕ್ತ್ಯಾಯಾಂ ಭೈರವೀಚಕ್ರಸಂಗತೌ। ಸಾಂಕರ್ಯಾಂ ಪರವಿದ್ಯಾಯಾಂ ಮಹಾವಾಗ್ಮ್ಯಸತಾಂ ಗುರುಃ॥' ಎಂದು ಹೇಳಿದಂತೆ ಪದ್ಮತೀರ್ಥನು ಗುಪ್ತಪಟಲವೆಂಬ ಮಾಂತ್ರಿಕ

Rarest Archiver

ವಿದ್ಯೆಯಲ್ಲಿಯೂ, ಭೈರವೀಚಕ್ರೋಪಾಸನೆಯಲ್ಲಿಯೂ ನಿಪುಣನು. ಅದ್ವೈತಶಾಸ್ತ್ರದಲ್ಲಿಯೂ ವಾದಿಸಲು ಸಮರ್ಥನೂ, ದುರ್ಜನರ ಗುರುವೂ ಆಗಿದ್ದನು.

**ವಿ:**—ಚೋಲಜಶ್ಚ ದ್ವೀಪಿಪುರೀ ಚ ಚೋಲಜದ್ವೀಪಿಪುರ್ಯೌ, ಅಸೂಯಯಾ ಸಹಿತಾಃ ಸಾಸೂಯಾಃ, ಭುವಃ ಭೂಷಣಂ ಭೂಭೂಷಣಂ ತಸ್ಮಿನ್;

**ಕ್ರಿ:**—ಮಂತ್ರಯಾಮಾಸ–ಮಾಸತುಃ-ಮಾಸುಃ ಇತ್ಯಾದಿ, ಮತ್ರಿ ಗುಪ್ತಭಾಷಣೇ ಲಿಟ್;

**ಅವ:**—ಇವರ ಮಂತ್ರಾಲೋಚನೆಯು ಶಕುನಿಯ ಜೊತೆಗೆ ದುರ್ಯೋಧನಾದಿಗಳು ಮಾಡಿದ ಮಂತ್ರಾಲೋಚನೆಯಂತಿತ್ತು—

**ಸೌನ್ಮಾತ್ಸರ್ಯಂ ಬದ್ಧ(ಬಂಧು)ಮೂಚೇಽಶುಭಾನಾಂ–**
**ವಾಚಾಲೋಽಲಂ ಕೋಪಿ ಗಾಂ ಧಾರಕಸ್ಯ |**
**ಮಧ್ಯೇ ತೇಷಾಂ ನೀಚನೀತ್ಯಾ ಸಮಾನೋ**
**ವಾಚಾಲೋಽಲಂ ಕೋಽಪಿ ಗಾಂಧಾರಕಸ್ಯ** ||೩||

**ಪದಚ್ಛೇದ:**—ಸನ್ಮಾತ್ಸರ್ಯಂ, ಬದ್ಧಂ ಊಚೇ ಅಶುಭಾನಾಂ ವಾಚಾ ಅಲೋಲಂ, ಕೋಪಿ, ಗಾಂ, ಧಾರಕಸ್ಯ ಮಧ್ಯೇ ತೇಷಾಂ ನೀಚ-ನೀತ್ಯಾ ಸಮಾನಃ ವಾಚಾಲಃ ಅಲಂ ಕಃ ಅಪಿ ಗಾಂಧಾರಕಸ್ಯ.

**ಅ:**—ತೇಷಾಂ ಮಧ್ಯೇ ಅಲಂ ವಾಚಾಲಃ ನೀಚನೀತ್ಯಾ ಗಾಂಧಾರ-ಕಸ್ಯ ಸಮಾನಃ ಕಃ ಅಪಿ ಅಶುಭಾನಾಂ ಧಾರಕಸ್ಯ ಕೋಪಿ ಸನ್ಮಾತ್ಸರ್ಯಂ ಅಲೋಲಂ ವಾಚಾ ಬದ್ಧಂ, ಗಾಂ ಊಚೇ |

**ಅರ್ಥ:**—ತೇಷಾಂ ಮಧ್ಯೇ = ಅಲ್ಲಿ ಸೇರಿರುವ ಮಾಯಾವಾದಿಗಳ ನಡುವೆ, ಅಲಂ ವಾಚಾಲಃ = ಅತಿಶಯವಾಗಿ ನಿಂದ್ಯವಾದ ನುಡಿಯನ್ನು ಅತಿಯಾಗಿ ಆಡತಕ್ಕವನು, ನೀಚನೀತ್ಯಾ = ಕೆಟ್ಟನೀತಿಯಿಂದ, ಗಾಂಧಾರ-ಕಸ್ಯ ಸಮಾನಃ = ಶಕುನಿಯಂತಹವನು, ಕಃ ಅಪಿ=ಯಾವನೋ ಒಬ್ಬನು,

Rarest Archiver

ಅಶುಭಾನಾಂ= ದುರ್ಜನರಿಗೆ, ಧಾರಕಸ್ಯ=ಆಶ್ರಯನಾದ, ಪದ್ಮತೀರ್ಥನಿಗೆ, ಕೋಪಿ = ಕೋಪದಿಂದಕೂಡಿದ, ಸನ್ಮಾತ್ಸರ್ಯಂ = ಸಜ್ಜನರಲ್ಲಿ ಹೊಟ್ಟೆ-ಕಿಚ್ಚನ್ನು, ಅಲೋಲಂ = ಸ್ಥಿರವಾಗಿ, ವಾಚಾ = ತನ್ನ ಮಾತಿನಿಂದ, ಬದ್ಧಂ = ಉಂಟುಮಾಡುವುದಕ್ಕೆ, ಗಾಂ= ಮಾತನ್ನು, ಊಚೇ= ಹೇಳಿದನು.

ತಾ:—ಆ ವಾದಿಗಳ ಮಧ್ಯದಲ್ಲಿ ನಿಂದ್ಯವಾದ ಮಾತನ್ನು ಹರಟುವುದರಲ್ಲಿ ನಿಪುಣನೂ, ದುರ್ನೀತಿಯಲ್ಲಿ ಶಕುನಿಗೆ ಸಮಾನನೂ ಆದವನೊಬ್ಬನಿದ್ದನು. ಅವನು ದುರ್ಜನರಿಗೆ ಆಶ್ರಯನಾದ ಪದ್ಮತೀರ್ಥನಿಗೆ ಕೋಪವನ್ನೂ, ಸಜ್ಜನರಲ್ಲಿ ಮತ್ಸರವನ್ನೂ ಸ್ಥಿರವಾಗಿ ತನ್ನ ಮಾತಿನಿಂದ ಉಂಟುಮಾಡುವುದಕ್ಕಾಗಿ ಈ ಮುಂದಿನ ಮಾತನ್ನು ಹೇಳಿದನು.

ವಿ:—ಮತ್ಸರ ಏವ ಮಾತ್ಸರ್ಯಂ ಸತ್ಸು ಮಾತ್ಸರ್ಯಂ ತತ್, ಕುತ್ಸಿತಂ ಬಹು ಭಾಷತೇ ಇತಿ ವಾಚಾಲಃ, ಆಲಜಾಟಚೌ ಬಹುಭಾಷಿಣಿ (5-2-125) ಆಲಚ್ ಪ್ರತ್ಯಯ. ನ ಲೋಲಂ ಯಥಾ ತಥಾ, ನೀಚಾ ಚ ಸಾ ನೀತಿಶ್ಚ ತಯಾ ನೀಚನೀತ್ಯಾ ;

ಕ್ರಿ :—ಊಚೇ ಊಚಾತೇ ಊಚಿರೇ ಇತ್ಯಾದಿ. ಬ್ರೂಞ್ ಧಾತು ಆತ್ಮನೇ ಲಿಟ್.

**ಏಕಂ ತತ್ತ್ವಂ ವಕ್ತಿ ಮಾಯಾಮಯೀಯಂ**
**ವಾಕ್ಯೈಃ ಪ್ರಾಚ್ಯೈರಪ್ಯವಾಚ್ಯಂ ವಿಧತ್ತೇ ।**
**ಪೂರ್ವಾಪೂರ್ವಾ ಹಂತ ದೌರ್ಘಟ್ಯಭೂಷಾ**
**ಚಿತ್ರಂ ಚಿತ್ರಂ ದರ್ಶನಾಚಾರ್ಯನೀತಿಃ ॥೪॥**

ಅ:—ಪೂರ್ವಾ ಅಪೂರ್ವಾ ದೌರ್ಘಟ್ಯಭೂಷಾ ಮಾಯಾಮಯೀ ಇಯಂ ದರ್ಶನಾಚಾರ್ಯನೀತಿಃ ಚಿತ್ರಂ ಚಿತ್ರಂ ತತ್ತ್ವಂ ಏಕಂ ವಕ್ತಿ. ಪ್ರಾಚ್ಯೈಃ ವಾಕ್ಯೈಃ ಅವಾಚ್ಯಂ ಅಪಿ ವಿಧತ್ತೇ ಹಂತ !

ಅರ್ಥ:—ಪೂರ್ವಾ = ಪ್ರಾಚೀನವಾದ, ಅಪೂರ್ವಾ= ದುರ್ಲಭವಾದ, ದೌರ್ಘಟ್ಯಭೂಷಾ = ಪ್ರಮಾಣಗಳಿಂದ ಹೊಂದಿಸಲು ಅಸಾಧ್ಯ

Rarest Archiver

ವಾಗಿರುವಿಕೆಯೇ ಅಲಂಕಾರವಾಗಿ ಉಳ್ಳ, ಮಾಯಾಮಯೀ = ಮಾಯಾ ವಿಲಾಸವೇ ಮೂಲವಾಗಿ ಉಳ್ಳ, ಇಯಂ ದರ್ಶನಾಚಾರ್ಯನೀತಿಃ = ಮಾಯಾವಾದಪ್ರವರ್ತಕರಾದ ಶಂಕರಾಚಾರ್ಯರ ಈ ಶಾಸ್ತ್ರವು, ಚಿತ್ರಂ ಚಿತ್ರಂ = ಅತ್ಯಾಶ್ಚರ್ಯಕರವಾಗಿ, ತತ್ತ್ವಂ = ಪರಬ್ರಹ್ಮವಸ್ತುವನ್ನು, ಏಕಂ = ಒಂದೇ ಒಂದನ್ನಾಗಿ, ವಕ್ತಿ = (ಹೇಳಲು) ಇಚ್ಛಿಸುತ್ತದೆ. ಪ್ರಾಚ್ಯೈಃ ವಾಕ್ಯೈಃ = ಪುರಾತನವಾದ ವೇದವಚನಗಳಿಂದ, ಅವಾಚ್ಯಂ ಅಪಿ = ಹೇಳಲು ಅಸಾಧ್ಯವನ್ನಾಗಿಯೂ, ವಿಧತ್ತೇ = ಪ್ರತಿಪಾದಿಸುತ್ತದೆ. ಹಂತ = ಸಂತೋಷವು. (ಅಹಹ.)

ತಾ:—ಪುರಾತನವೂ ದುರ್ಲಭವೂ ಪರಸ್ಪರವಿರುದ್ಧಾರ್ಥವೇ ಭೂಷಣವಾಗಿ ಉಳ್ಳದ್ದೂ, ಪ್ರಪಂಚವೆಲ್ಲವೂ ಮಾಯೆಯಿಂದ ಇದ್ದಂತೆ ಕಾಣಿಸುತ್ತದೆಯೆಂದೂ ವಾಸ್ತವವಾಗಿ ಪ್ರಪಂಚವು ಇಲ್ಲವೇ ಇಲ್ಲವೆಂದೂ ಸಾಧಿಸತಕ್ಕದ್ದೂ ಆಗಿರುವ ಈ ಮಾಯಾವಾದಶಾಸ್ತ್ರವನ್ನು ಶಂಕರಾಚಾರ್ಯರು ನಿರ್ಮಿಸಿದ್ದಾರೆ. ಅವರ ನೀತಿಯು ಅತ್ಯಾಶ್ಚರ್ಯಕರ ವಾಗಿದೆ. ಅದು ಪರಬ್ರಹ್ಮವಸ್ತುವು ಒಂದೇ ಸತ್ಯ, ಅದು ಅದ್ವಿತೀಯ ನಿರ್ವಿಶೇಷವೆಂದೂ ಹೊಗಳುತ್ತದೆ. ಪುರಾತನವಾದ ಅಪೌರುಷೇಯವಾದ ವೇದವಚನಗಳಿಂದಲೂ ಬ್ರಹ್ಮವನ್ನು ಪ್ರತಿಪಾದಿಸಲು ಆಗುವುದಿಲ್ಲವೆಂದು ಹೇಳುತ್ತದೆ. ಅಹಹ ಇದೆಷ್ಟು ಸಂತೋಷಕರವಾದ ವಿಷಯವು! ಬ್ರಹ್ಮವು ಸತ್ಯ-ಜ್ಞಾನಾನಂತಸ್ವರೂಪವು ಎಂದು ಹೇಳುವ ಅದ್ವೈತಶಾಸ್ತ್ರವು ಅವನು ಅವಾಚ್ಯನು ಅವನು ಪ್ರಮಾಣಗಳಿಂದ ಹೇಳಲ್ಪಡತಕ್ಕವನಲ್ಲ ಎಂದು ಪರಸ್ಪರ ವಿರುದ್ಧವಾದವನ್ನು ಮುಂದಿಡುತ್ತದೆ. ಇದು ಕೂಡುವುದಿಲ್ಲ. ಇದೇ ದೌರ್ಘಟ್ಯವು. ಶಾಸ್ತ್ರವನ್ನು ಸ್ವೀಕರಿಸದಿರುವುದಕ್ಕೆ ಕಾರಣವಾದ ಈ ದೋಷವು ಅಲಂಕಾರವೆಂದು ಹೇಳತಕ್ಕ ನಮ್ಮ ಆಚಾರ್ಯರ ಶಾಸ್ತ್ರವು ಎಷ್ಟೊಂದು ಅದ್ಭುತವು! (ಎಂದು ಆ ಮಾಯಾವಾದಿಯು ಹೇಳುತ್ತಿದ್ದಾನೆ).

ವಿ:—ಮಾಯಾಯಾಃ ವಿಕಾರಭೂತಾ ಮಾಯಾಮಯೀ, ದರ್ಶನಸ್ಯ ಆಚಾರ್ಯಃ ದರ್ಶನಾಚಾರ್ಯಃ, ದರ್ಶನಾಚಾರ್ಯಸ್ಯ ನೀತಿಃ ದರ್ಶನಾ-ಚಾರ್ಯನೀತಿಃ, ದುರ್ಘಟಸ್ಯ ಭಾವಃ ದೌರ್ಘಟ್ಯಂ, ದೌರ್ಘಟ್ಯಂ ಭೂಷಾ

Rarest Archiver

ಯಸ್ಯಾಃ ಸಾ ದೌರ್ಘಟ್ಯಭೂಷಾ ; ವಕ್ತುಂ ಯೋಗ್ಯಂ ವಾಚ್ಯಂ ನ ವಾಚ್ಯಂ ಅವಾಚ್ಯಂ ತತ್ ;

ಕ್ರಿ:—ವಷ್ಟಿ ಉಷ್ಟಃ ಉಶಂತಿ, ವಕ್ಷಿ ಉಷ್ಠಃ ಉಷ್ಠ, ವಶ್ಮಿ ಉಶ್ವಃ ಉಶ್ಮಃ, ವಶ ಕಾಂತೌ ಲಟ್. to wish, to shine ವಿ+ಧತ್ತೆ ದಧಾತೇ, ದಧತೇ ಇತ್ಯಾದಿ ಡುಧಾಞ್ ಧಾರಣಪೋಷಣಯೋಃ ಲಟ್ ವಿ. ಉಪಸರ್ಗ ಆತ್ಮನೇ.

**ಮರ್ತ್ಯಾಮರ್ತ್ಯಾಮರ್ತ್ಯವಿದ್ವಿಟ್ಪುರೋಗಂ**
**ವಿಶ್ವಂ ದೃಶ್ಯಂ ವಿಪ್ರಚಂಡಾಲಪೂರ್ವಂ ।**
**ಭೇದಾಪೇತಂ ಭೇದಿ ಮಾನೈಃ ಸಮಾನೈಃ**
**ಸಾಧೀಯಃ ಕಃ ಸಾಧಯೇತ್ತಾಮಲಬ್ಧ್ವಾ ॥೩॥**

ಅ:– ಸಮಾನೈಃ ಮಾನೈಃ ಭೇದಿ ಮರ್ತ್ಯಾಮರ್ತ್ಯಾಮರ್ತ್ಯವಿದ್ವಿಟ್-ಪುರೋಗಂ ವಿಪ್ರಚಂಡಾಲಪೂರ್ವಂ ದೃಶ್ಯಂ ವಿಶ್ವಂ ಭೇದಾಪೇತಂ ಕಃ ತಾಮಲಬ್ಧ್ವಾ ಸಾಧಯೇತ್ ?

**ಅರ್ಥ:**—ಸಮಾನೈಃ = ಭೇದವನ್ನು ಬೋಧಿಸುವ ವೇದಾದಿ ಪ್ರಮಾಣಗಳಿಂದ, ಸಹಿತವಾದ, ಮಾನೈಃ = ಪ್ರತ್ಯಕ್ಷಾದಿ ಪ್ರಮಾಣಗಳಿಂದ, ಭೇದಿ = ಭೇದಯುಕ್ತವೆಂದು ಪ್ರಸಿದ್ಧವಾದ, ಮರ್ತ್ಯ= ಮನುಷ್ಯರು, ಅಮರ್ತ್ಯ = ದೇವತೆಗಳು, ಅಮರ್ತ್ಯವಿದ್ವಿಟ್ = ದೇವಶತ್ರುಗಳಾದ ಅಸುರರು, ಪುರೋಗಂ= ಮೊದಲಾಗಿ ಉಳ್ಳ, ವಿಪ್ರಚಂಡಾಲಪೂರ್ವಂ= ಬ್ರಾಹ್ಮಣ ಅಂತ್ಯಜ ಇವರೇ ಮೊದಲಾಗಿ ಉಳ್ಳ, ದೃಶ್ಯಂ ವಿಶ್ವಂ = ಕಣ್ಣಿಗೆ ಕಾಣುವ ಪ್ರಪಂಚವು, ಭೇದಾಪೇತಂ = ಭೇದವಿಲ್ಲದ್ದು ಎಂದು, ಕಃ= ಯಾವನು, ತಾಂ = ಆ ಶಾಂಕರಶಾಸ್ತ್ರವನ್ನು, ಅಲಬ್ಧ್ವಾ = ಪಡೆಯದೇ (ತಿಳಿಯದೆ), ಸಾಧೀಯಃ = ದೃಢವಾಗಿ, ಸಾಧಯೇತ್ = ಸಾಧಿಸಿಯಾನು ?

ತಾ :—ಮನುಷ್ಯರು ದೇವತೆಗಳು ದೈತ್ಯರು ಮೊದಲಾಗಿರುವವರು ಬ್ರಾಹ್ಮಣರು-ಮೊದಲ್ಗೊಂಡು ಚಂಡಾಲರವರೆಗೆ ಇರುವವರು ಇವರಿಂದ ಕೂಡಿರುವ ಈ ಜಗತ್ತು ಪ್ರತ್ಯಕ್ಷ ಅನುಮಾನ ಆಗಮಪ್ರಮಾಣಗಳಿಂದ

Rarest Archiver

ಅತ್ಯಂತಭಿನ್ನವೆಂದು ತಿಳಿದುಬರುತ್ತದೆ. ನಮ್ಮ ಶಂಕರಾಚಾರ್ಯರ ಅದ್ವೈತಶಾಸ್ತ್ರವನ್ನು ಓದಿ ತಿಳಿಯದೆ ಯಾವನು ತಾನೇ ಈ ಪ್ರಪಂಚದಲ್ಲಿ ಭೇದವೇ ಇಲ್ಲವೆಂದು ದೃಢವಾಗಿ ಸಾಧಿಸಬಲ್ಲನು? ಸಾಧಿಸಲಸಾಧ್ಯವಾದ ಅಭೇದವನ್ನು ಸಾಧಿಸುವ ನಮ್ಮ ಶಾಂಕರಶಾಸ್ತ್ರವು ಆಶ್ಚರ್ಯಕರವಾದುದು. ಭೇದಸಾಧಕಪ್ರಮಾಣಗಳು— ಜಗತ್ಪ್ರವಾಹಃ ಸತ್ಯೋಽಯಂ ಪಂಚಭೇದ ಸಮನ್ವಿತಃ | ಸತ್ಯಂ ಭಿದಾ ಸತ್ಯಂ ಭಿದಾ, ಪಂಚಭೇದಾ ಇಮೇ ಸತ್ಯಾಃ ಸರ್ವಾವಸ್ಥಾಸು ಸರ್ವಶಃ ||

**ವಿ:**—(ನ ಮರ್ತ್ಯಾಃ ಅಮರ್ತ್ಯಾಃ) ಮರ್ತ್ಯಾಶ್ಚ ಅಮರ್ತ್ಯಾಶ್ಚ ದೇವಾನಾಂ ವಿದ್ವಿಷಶ್ಚ ಮರ್ತ್ಯಾಮರ್ತ್ಯಾಮರ್ತ್ಯವಿದ್ವಿಷಃ, ತೇ ಪುರೋಗಾಃ ಯಸ್ಯ ತತ್, ವಿಪ್ರಾಶ್ಚ ಚಂಡಾಲಾಶ್ಚ, ವಿಪ್ರಚಂಡಾಲಾಃ ಪೂರ್ವೇ ಯಸ್ಯ ತತ್, ಭೇದಾತ್ ಅಪೇತಂ, ಭೇದಃ ಅಸ್ಯ ಅಸ್ತೀತಿ ಭೇದಿ (ನ್, ನಪುಂ.) ಮಾನೇನ ಸಹಿತಾನಿ ಸಮಾನಾನಿ, ತೈಃ;

**ಕ್ರಿ:**—ಸಾಧಯೇತ್ ಸಾಧಯೇತಾಂ ಸಾಧಯೇಯುಃ ಇತ್ಯಾದಿ ಸಾಧ ಸಂಸಿದ್ಧೌ ಣಿಜಂತ, ವಿಧಿಲಿಙ್.

**ಸತ್ಯಂ ಸತ್ಯಂ ವ್ಯಾವಹಾರ್ಯಂ ವಿಧತ್ತೇ**
**ಸರ್ವಂ ಮೋಹೇ ಸರ್ವನಿರ್ವಾಹಿಣೀ ಸಾ |**
**ಜ್ಞಾನೇ ಜಾತೇ ದಗ್ಧವಸ್ತ್ರಪ್ರತೀತಂ**
**ಪಕ್ವೇ ತಸ್ಮಿಂಸ್ತಪ್ತಲೋಹಾಪ್ತವಾರ್ವತ್** ||೬||

**ಅ:**—ಮೋಹೇ ಸತಿ ಸತ್ಯಂ ಸರ್ವಂ ವ್ಯಾವಹಾರ್ಯಂ ಸತ್ಯಂ ವಿಧತ್ತೇ ಇತಿ (ಯಸ್ಮಾತ್ ತಸ್ಮಾತ್) ಸಾ ಸರ್ವನಿರ್ವಾಹಿಣೀ. ಜ್ಞಾನೇ ಜಾತೇ ಸತಿ ದಗ್ಧವಸ್ತ್ರಪ್ರತೀತಂ ಸರ್ವಂ ತಸ್ಮಿನ್ ಪಕ್ವೇ ಸತಿ ತಪ್ತ-ಲೋಹಾಪ್ತವಾರ್ವತ್ ಭವತಿ ||

**ಅರ್ಥ:**— ಮೋಹೇ ಸತಿ=ಅಜ್ಞಾನವಿರುವಾಗ, ಸತ್ಯಂ ಸರ್ವಂ= ಎಲ್ಲಾ ಸತ್ಯವಾಗಿ ತೋರುವ ಪ್ರಪಂಚವನ್ನು, ವ್ಯಾವಹಾರ್ಯಂ ಸತ್ಯಂ= ವ್ಯವಹಾರದಲ್ಲಿರುವ ಸತ್ಯವನ್ನಾಗಿ, ವಿಧತ್ತೇ ಇತಿ=ಪ್ರತಿಪಾದಿಸುತ್ತದೆ

Rarest Archiver

ಎಂಬುದು, (ಯಸ್ಮಾತ್ = ಯಾವ ಕಾರಣದಿಂದಲೋ, ತಸ್ಮಾತ್ = ಆ ಕಾರಣದಿಂದ) ಸಾ = ಆ ಶಂಕರಾಚಾರ್ಯರ ಶಾಸ್ತ್ರವು, ಸರ್ವ-ನಿರ್ವಾಹಿಣೀ = ಸಕಲಪ್ರಮಾಣಗಳಿಗೂ ವಿಷಯಗಳನ್ನು ವ್ಯವಸ್ಥಾಪಿಸಿ ಸಮನ್ವಯಗೊಳಿಸತಕ್ಕಂತಹುದು. ಜ್ಞಾನೇ ಜಾತೇ ಸತಿ = ಶಾಸ್ತ್ರದಿಂದ ಅದ್ವೈತದ ಪರೋಕ್ಷಜ್ಞಾನವು ಉಂಟಾದಾಗ, ದಗ್ಧವಸ್ತ್ರಪ್ರತೀತಂ = ಸುಟ್ಟಬಟ್ಟೆಯಂತೆ ತಿಳಿಯಲ್ಪಟ್ಟ, ಸರ್ವಂ = ಎಲ್ಲವೂ, ತಸ್ಮಿನ್ ಪಕ್ವೇ ಸತಿ = ಆ ಪರೋಕ್ಷಜ್ಞಾನವು ಪರಿಪಾಕವನ್ನು ಹೊಂದಿದಾಗ, (ಅಪರೋಕ್ಷಾ-ಕಾರವನ್ನು ಪಡೆದಾಗ) ತಪ್ತಲೋಹಾಪ್ತವಾರ್ವತ್ = ಕಾದ ಕಬ್ಬಿಣವನ್ನು ಹೊಂದಿದ ನೀರಿನಂತೆ, (ಭವತಿ = ಆಗುತ್ತದೆ.)

ತಾ :— ಅಜ್ಞಾನಾವಸ್ಥೆಯಲ್ಲಿ ಪಾರಮಾರ್ಥಿಕಸತ್ಯವೆಂಬುದಾಗಿ ತೋರುವ ಈ ಪ್ರಪಂಚವೆಲ್ಲವೂ ವ್ಯಾವಹಾರಿಕಸತ್ಯ, ವ್ಯವಹಾರಕಾಲದಲ್ಲಿ ಮಾತ್ರ ಇರುವ ಒಂದುರೀತಿಯ ಮಿಥ್ಯಾವಸ್ತು, ಪರಮಾರ್ಥವಾಗಿ ಅದನ್ನು ಮಾಯಾವಾದಿಗಳಾದ ನಾವು ಅಸತ್ಯವೆಂದು ಹೇಳುತ್ತೇವೆ. "ನೇಹ ನಾನಾಸ್ತಿ ಕಿಂಚನ" = (ಈ ಪ್ರಪಂಚದಲ್ಲಿ ಬ್ರಹ್ಮವ್ಯತಿರಿಕ್ತವಾದ ವಸ್ತುವು ಯಾವುದೂ ಇಲ್ಲ) ಇತ್ಯಾದಿ ವಾಕ್ಯಗಳಿಂದ ಬ್ರಹ್ಮಭಿನ್ನವಾದ ಸರ್ವವಸ್ತುಗಳ ಮಿಥ್ಯಾತ್ವ-ಜ್ಞಾನವು ಉಂಟಾದಾಗ, ಪ್ರಪಂಚವು ಸುಟ್ಟಬಟ್ಟೆಯಂತೆ ಕಾಣಿಸುತ್ತದೆ. ಈ ಪ್ರಪಂಚಮಿಥ್ಯಾತ್ವಜ್ಞಾನವೂ ಐಕ್ಯಜ್ಞಾನವೂ ಪರಿಪಕ್ವವಾದಾಗ ಅಪರೋಕ್ಷಜ್ಞಾನದ ದಶೆಯನ್ನು ಹೊಂದಿದಾಗ ಕಾದ ಕಬ್ಬಿಣದ ಮೇಲೆ ಸುರಿದ ನೀರಿನಂತೆ ಜಗತ್ತು ಇಲ್ಲವೆಂದೇ ತೋರುತ್ತದೆ.) ಮಾಯಾವಾದಿಗಳು ಅಜ್ಞಾನಾ ನಾವಸ್ಥೆಯಲ್ಲಿ ಜಗತ್ತು ನಿಜವಾಗಿಯೂ ಸತ್ಯ ಎಂಬ ತಿಳುವಳಿಕೆಗೆ ವ್ಯಾವಹಾರಿಕಸತ್ಯವು ವಿಷಯವೆಂದು ಅರ್ಥ ಮಾಡುತ್ತಾರೆ. ಐಕ್ಯದ ಜ್ಞಾನವು ಮತ್ತು ಪ್ರಪಂಚದ ಮಿಥ್ಯಾತ್ವಜ್ಞಾನವು ಉಂಟಾದಾಗ ಸುಟ್ಟಬಟ್ಟೆಯಲ್ಲಿ ಹಾಸುಹೊಕ್ಕುಮಾತ್ರ ಕಾಣುವಂತೆ ಆಪಾತವಾಗಿ ಆಕಾರಮಾತ್ರ ಕಾಣುತ್ತದೆ. ಐಕ್ಯಾಪರೋಕ್ಷವು ದೃಢವಾದಾಗ ಕೆಂಪಾಗಿ ಕಾದಕಬ್ಬಿಣದ ಮೇಲೆ ನೀರು ಸುರಿದಾಗ ಅದು ಕಾಣಿಸದಿರುವಂತೆ ಜಗತ್ತು

Rarest Archives

ಕಾಣಿಸುವುದೇ ಇಲ್ಲ. ಆದು ಎಲ್ಲಾ ಕಾಲದಲ್ಲಿಯೂ ಮಿಥ್ಯಾ (ಅಸತ್ ಅನಿರ್ವಚನೀಯು, ಸದಸದ್ವಿಲಕ್ಷಣ) ಆಗಿರುತ್ತದೆ. ಹೀಗೆ ಪ್ರಪಂಚವು ಸತ್ಯ, ಮಿಥ್ಯಾ ಎಂಬ ವಚನಗಳಿಗೆ ವಿರೋಧವನ್ನು ಪರಿಹರಿಸಿ ಎಲ್ಲವನ್ನು ನಿರ್ವಹಿಸುವ ನಮ್ಮ ಅದ್ವೈತದರ್ಶನಾಚಾರ್ಯರ ನೀತಿಯು ಅತ್ಯಂತ ಆಶ್ಚರ್ಯಕರವಾಗಿದೆ. ಎಂದು ಆ ಮಾಯಾವಾದಿಯು ಹೇಳಿದನು.

ವಿ:—ನಿರ್ವಾಹಃ ಅಸ್ಯಾಃ ಅಸ್ತೀತಿ ನಿರ್ವಾಹಿಣೀ, ಸರ್ವಸ್ಯ ನಿರ್ವಾಹಿಣೀ ಸರ್ವನಿರ್ವಾಹಿಣೀ; ದಗ್ಧಂ ಚ ತತ್ ವಸ್ತ್ರಂ ಚ, ದಗ್ಧವಸ್ತ್ರವತ್ ಪ್ರತೀತಂ ದಗ್ಧವಸ್ತ್ರಪ್ರತೀತಂ, ತಪ್ತಂ ಚ ತತ್ ಲೋಹಂ ಚ, ತಪ್ತಲೋಹಂ ಆಪ್ತಂ ತಪ್ತಲೋಹಾಪ್ತಂ, ತಪ್ತಲೋಹಾಪ್ತಂ ಚ ತತ್ ವಾಶ್ಚ ತಪ್ತಲೋಪಾಪ್ತವಾಃ, .. ವಾರಾ ತುಲ್ಯಂ ತಪ್ತ.. ವಾರ್ವತ್ ||

ಕ್ರಿ:—ವಿಧತ್ತೇ, ದಧಾತೇ ದಧತೇ, ಧಾ-ಧಾತು. ಆತ್ಮನೇ.

**ಜ್ಞಾನಿಶ್ರೇಷ್ಠಶ್ರೇಷ್ಠವಿಜ್ಞಾನಿವರ್ಗೇ**
**ನೈರ್ಗುಣ್ಯಸ್ಥೇ ಸಾಂಪ್ರತಂ ನಾಥಭೂತಾಃ ।**
**ಆಕ್ರಂದಂ ಮೇ ಹಂತ ಶೃಣ್ವಂತು ಸೋಽಯಂ**
**ಹಾ ಹಾ ಮಾಯಾವಾದ ಉತ್ಸಾದಮೇತಿ ||೭||**

ಅ:-ಜ್ಞಾನಿಶ್ರೇಷ್ಠಶ್ರೇಷ್ಠವಿಜ್ಞಾನಿವರ್ಗೇ ನೈರ್ಗುಣ್ಯಸ್ಥೇ ಸಾಂಪ್ರತಂ ನಾಥಭೂತಾಃ (ಭವಂತಃ) ಮೇ ಆಕ್ರಂದಂ ಶೃಣ್ವಂತು | ಹಂತ ! ಸಃ ಅಯಂ ಮಾಯಾವಾದಃ ಉತ್ಸಾದಂ ಏತಿ ಹಾ ಹಾ.

ಅರ್ಥ:— ಜ್ಞಾನಿಶ್ರೇಷ್ಠ = ಜ್ಞಾನಿಶ್ರೇಷ್ಠನೆಂಬವನೇ, ಶ್ರೇಷ್ಠ = ಅತ್ಯುತ್ತಮನಾಗಿ ಉಳ್ಳ, ವಿಜ್ಞಾನಿವರ್ಗೇ = ಜ್ಞಾನಿಗಳ ಸಮೂಹವು, ನೈರ್ಗುಣ್ಯಸ್ಥೇ ಸತಿ ನಿರ್ಗುಣಬ್ರಹ್ಮಸ್ವರೂಪಪ್ರಾಪ್ತಿ ಎಂಬ ಮೋಕ್ಷವನ್ನು ಹೊಂದಿರಲು, ಸಾಂಪ್ರತಂ = ಈಗ, ನಾಥಭೂತಾಃ = ರಕ್ಷಕರಾದ (ಭವಂತಃ = ತಾವು) ಮೇ ಆಕ್ರಂದಂ = ನನ್ನ ಬೊಬ್ಬೆಯನ್ನು (ಕೂಗನ್ನು) ಶೃಣ್ವಂತು = ಕೇಳಿರಿ, ಹಂತ = ಅಯ್ಯೋ, ಸಃ ಅಯಂ = ಪ್ರಸಿದ್ಧವಾದ ಈ, ಮಾಯಾವಾದಃ = ಎಲ್ಲವೂ ಮಾಯಾಕಲ್ಪಿತವೆಂಬ ವಾದವು, ಉತ್ಸಾದಂ ಏತಿ = ನಾಶಹೊಂದುತ್ತಿದೆ. ಹಾ ಹಾ = ಕಷ್ಟ ಕಷ್ಟ.

Rarest Archiver

ತಾ:—ಜ್ಞಾನಿಶ್ರೇಷ್ಠನೇ ಮೊದಲಾದ ನಮ್ಮ ಹಿರಿಯ ಜ್ಞಾನಿಗಳೆಲ್ಲರೂ ನಿರ್ಗುಣಬ್ರಹ್ಮಭಾವ ಹೊಂದಿರುವ ಈ ಸಮಯದಲ್ಲಿ ನಮಗೆಲ್ಲರಿಗೂ ರಕ್ಷಕರಾಗಿರುವ ಪದ್ಮತೀರ್ಥಾದಿಗಳಾದ ನೀವೆಲ್ಲರೂ ನನ್ನ ಗೋಳನ್ನು ಕೇಳಿರಿ. ಅಯ್ಯೋ ಅಯ್ಯೋ! ಪ್ರಸಿದ್ಧವಾದ ಇಂತಹ ಮಾಯಾವಾದವು ನಾಶವಾಗಿ ಹೋಗುತ್ತಿದೆ. ಕಷ್ಟ ! ಕಷ್ಟ !

ವಿ:— ಜ್ಞಾನಿಶ್ರೇಷ್ಠಃ (ತನ್ನಾಮಕಃ ಕಶ್ಚನ ಮಾಯಾವಾದೀ) ಏವ ಶ್ರೇಷ್ಠಃ ಯಸ್ಮಿನ್ ಸಃ, ವಿಜ್ಞಾನಿನಾಂ ವರ್ಗಃ, ಜ್ಞಾನಿಶ್ರೇಷ್ಠಶ್ರೇಷ್ಠಶ್ಚಾಸೌ ವಿಜ್ಞಾನಿವರ್ಗಶ್ಚ ತಸ್ಮಿನ್, ನಿರ್ಗತಾಃ ಗುಣಾಃ ಯಸ್ಮಾತ್ತತ್ ನಿರ್ಗುಣಂ, ತಸ್ಯ ಭಾವಃ ನೈರ್ಗುಣ್ಯಂ, ತಸ್ಮಿನ್ ತಿಷ್ಠತೀತಿ ನೈರ್ಗುಣ್ಯಸ್ಥಃ ತಸ್ಮಿನ್, ಮಾಯಾಕಲ್ಪಿತಂ ಸರ್ವಂ ಇತಿ ವಾದಃ ಮಾಯಾವಾದಃ|

ಕ್ರಿ:—ಶೃಣೋತು ಶೃಣುತಾತ್ ಶೃಣುತಾಂ ಶೃಣ್ವಂತು ಇತ್ಯಾದಿ, ಶ್ರುಧಾತು-ಲೋಟ್ ಏತಿ ಇತಃ ಯಂತಿ ಇತ್ಯಾದಿ ಇಣ್ ಗತೌ ಲಟ್.

ಅವ:—ನಮ್ಮ ಶಾಸ್ತ್ರಕ್ಕೆ ನಾಶವು ಹೇಗೆ ಬರುತ್ತದೆ ಎಂಬುದನ್ನು ವಿವರಿಸುತ್ತೇನೆ. ಕೇಳಿರಿ—

**ಭ್ರಷ್ಟಾ ಭಾಟ್ಟಾ ನ ಪ್ರಭಾಕೃತ್ಪ್ರಭಾಭೂತ್**
**ತ್ರಸ್ತಾ ಮಾಹಾಯಾನಿಕಾದ್ಯಾಶ್ಚ ಯತ್ರ ।**
**ದುರ್ಗಂ ಮಾಯಾವಾದಸತ್ರಂ ದಿಧಕ್ಷು-**
**ರ್ನೋಪೇಕ್ಷ್ಯಾ ನಸ್ತತ್ತ್ವವಾದಾಗ್ನಿಜಿಹ್ವಾ ॥೮॥**

ಅ:—ಯತ್ರ ಭಾಟ್ಟಾಃ ಭ್ರಷ್ಟಾಃ, ಪ್ರಭಾಕೃತ್ಪ್ರಭಾ ನ ಅಭೂತ್, ಮಾಹಾಯಾನಿಕಾದ್ಯಾಶ್ಚ ತ್ರಸ್ತಾಃ, ತತ್ ದುರ್ಗಂ ಮಾಯಾವಾದಸತ್ರಂ ದಿಧಕ್ಷುಃ ತತ್ತ್ವವಾದಾಗ್ನಿಜಿಹ್ವಾ ನಃ ಉಪೇಕ್ಷ್ಯಾ ನ.

ಅರ್ಥ:—ಯತ್ರ = ಯಾವ ಮಾಯಾವಾದವೆಂಬ ವನದಲ್ಲಿ, ಭಾಟ್ಟಾಃ = ಕುಮಾರಿಲ ಭಟ್ಟರ ಶಾಸ್ತ್ರದಲ್ಲಿ ನಿಪುಣರಾದ ಮೀಮಾಂಸಕರು, ಭಟ್ಟರ ಶಿಷ್ಯರು, ಭ್ರಷ್ಟಾಃ = ನಿರುತ್ತರರಾದರು, ದಾರಿತಪ್ಪಿದರು; ಪ್ರಭಾಕೃತ್ಪ್ರಭಾ = ಪ್ರಭಾಕರನೆಂಬ ಮೀಮಾಂಸಕನ ಸಾಮರ್ಥ್ಯವು,

Rarest Archiver

ಸೂರ್ಯನ ಪ್ರಕಾಶವು, ನ ಅಭೂತ್ = ಇರಲಿಲ್ಲ, ಮಾಹಾಯಾನಿಕಾದ್ಯಾಃ ಚ-ಮಹಾಯಾನ-ಬೌದ್ಧಪಂಥದ ವಾದಿಗಳೂ, ದೊಡ್ಡವಾಹನವುಳ್ಳವರೂ, ತ್ರಸ್ತಾಃ = ಹೆದರಿದರೋ, ದುರ್ಗಂ = ಪ್ರವೇಶಿಸಲಾಗದ, (ತಿಳಿಯಲು ಕಷ್ಟಕರವಾದ) ಮಾಯಾವಾದಸತ್ತ್ರಂ = ಮಾಯಾವಾದವೆಂಬ ಕಾಡನ್ನು, ದಿಧಕ್ಷುಃ = ಸುಡುವ ಇಚ್ಛೆಯುಳ್ಳ, ತತ್ತ್ವವಾದಾಗ್ನಿಜಿಹ್ವಾ = ಎಲ್ಲವೂ ಸತ್ಯವೆಂದು ಬೋಧಿಸುವ ದ್ವೈತತತ್ತ್ವವಾದವೆಂಬ ಅಗ್ನಿಯ ನಾಲಿಗೆಯು, ನಃ = ನಮಗೆ, ಉಪೇಕ್ಷ್ಯಾ ನ = ಉದಾಸೀನಮಾಡಲು ಯೋಗ್ಯವಲ್ಲ.

ತಾ:—ಯಾವ ಮಾಯಾವಾದಶಾಸ್ತ್ರವೆಂಬ ಅರಣ್ಯದಲ್ಲಿ, ಭಾಟ್ಟ ಮೀಮಾಂಸಕರು ಪ್ರತ್ಯುತ್ತರ ಕೊಡಲಾರದೆ ಸೋತು ಓಡಿದರು, ಪ್ರಾಭಾಕರ ಮೀಮಾಂಸಕರ ಮತದ ಪ್ರಕಾಶವೂ ಯಾವ ಮಾಯಾವಾದದ ಮೇಲೆ ಬೀಳಲಿಲ್ಲವೋ ಅಂದರೆ ಮಾಯಾವಾದದಿಂದ ಪ್ರಾಭಾಕರರೂ ಸೋತರೋ, ಮಹಾಯಾನ ಹೀನಯಾನಪಂಥದ ಬೌದ್ಧರೂ ಕೂಡ ಯಾವ ಶಾಸ್ತ್ರದಿಂದ ಹೆದರಿದರೋ, ಅಂತಹ ತಿಳಿಯಲು ಅಸಾಧ್ಯವಾದ ಮಾಯಾವಾದವೆಂಬ ಭಯಂಕರಾರಣ್ಯವನ್ನು ತತ್ತ್ವವಾದವೆಂಬ ಅಗ್ನಿಜ್ವಾಲೆಯು ಸುಡಲು ಅಪೇಕ್ಷಿಸುತ್ತದೆ. ಅದನ್ನು ನಾವೀಗ ಉಪೇಕ್ಷಿಸಬಾರದು. ಅರಣ್ಯದಲ್ಲಿ ಪುಸ್ತಕ ಮುಂತಾದ ಹೊರೆಯನ್ನು ಹೊರಲಾರದೆ ಭಟ್ಟರ ಶಿಷ್ಯರು ಬಳಲುವಂತೆ, ಸೂರ್ಯನ ಬೆಳಕೂ ಬೀಳದಷ್ಟು ದಟ್ಟವಾದ ಅರಣ್ಯದಲ್ಲಿ, ರಥ ಗಾಡಿ ಮುಂತಾದ ಸಲಕರಣೆಯುಳ್ಳ ಮಹಾಸೈನಿಕರೂ ಕೂಡ ಸಿಕ್ಕಿಕೊಂಡರೆ ಹೆದರುವಂತೆ, ಅಂತಹ ಗೊಂಡಾರಣ್ಯವನ್ನು ಬೆಂಕಿಯ ಜ್ವಾಲೆಯು ಸುಡುವಂತೆ ದ್ವೈತತತ್ತ್ವವಾದವು ಮಾಯಾವಾದನ್ನು ಖಂಡಿಸುತ್ತದೆ. ಮಾಯಾವಾದವು ನಾಶವಾಗುತ್ತಿದೆ. ಹೀಗಿರುವಾಗ ದ್ವೈತವಾದವನ್ನು ನಾವು ಉಪೇಕ್ಷಿಸಬಾರದು.

**ವಿ:** - ಭಟ್ಟಸ್ಯ ಇಮೇ ಭಾಟ್ಟಾಃ, ಪ್ರಭಾಂ ಕರೋತಿ ಇತಿ ಪ್ರಭಾಕೃತ್, ಪ್ರಭಾಕೃತಃ ಪ್ರಭಾ ಪ್ರಭಾಕೃತ್ಪ್ರಭಾ, ಮಹಾಂತಿ ಯಾನಾನಿ ಯೇಷಾಂ ತೇ ಮಹಾಯಾನಾಃ, ತ ಏವ ಮಾಹಾಯಾನಿಕಾಃ, ಮಾಯಾವಾದ ಏವ ಸತ್ತ್ರಂ ಮಾಯಾವಾದಸತ್ತ್ರಂ ತತ್.(ಸತ್ತ್ರಂ=ಕಾಡು,

Rarest Archiver

ಸತ್ರಮಾಚ್ಛಾದನೇ ಯಜ್ಞೇ ಸದಾದಾನೇ ವನೇಽಪಿಚ – ಅಮರ) ದಗ್ಧುಂ ಇಚ್ಛುಃ ದಿಧಕ್ಷುಃ, ತತ್ತ್ವವಾದ ಏವ ಅಗ್ನಿಃ ತತ್ತ್ವವಾದಾಗ್ನಿಃ, ತತ್ತ್ವ-ವಾದಾಗ್ನೇಃ ಜಿಹ್ವಾ ;

**ಕ್ರಿಯಾ :—** ಅಭೂತ್, ಅಭೂತಾಂ ಅಭೂವನ್ ಇತ್ಯಾದಿ.

**ಯಂ ಯಂ ಪ್ರಾಪದ್ಭೂರಿಚಿತ್ತಃ ಪ್ರದೇಶಂ**
**ತಸ್ಮಾತ್ತಸ್ಮಾದಾಗತೇರಂತರಾಯಃ ।**
**ಪ್ರತ್ಯಜ್ಞಾಯಿ ವ್ಯಕ್ತಮಾರ್ಯೇಣ ಸೋಽಪಿ**
**ಪ್ರಾಪ್ನೋತ್ ಪಾರ್ಶ್ವಂ ಹಾ ವಯಂ ಭಾಗ್ಯಹೀನಾಃ ॥೯॥**

**ಅ:—** ಭೂರಿಚಿತ್ತಃ ಯಂ ಯಂ ಪ್ರದೇಶಂ ಪ್ರಾಪತ್, ಆರ್ಯೇಣ ತಸ್ಮಾತ್ ತಸ್ಮಾತ್ ಆಗತೇಃ ಅಂತರಾಯಃ ಪ್ರತ್ಯಜ್ಞಾಯಿ. ಸಃ ಅಪಿ ಪಾರ್ಶ್ವಂ ಪ್ರಾಪ್ನೋತ್. ಹಾ ! ವಯಂ ಭಾಗ್ಯಹೀನಾಃ ।

**ಅರ್ಥ :—** ಭೂರಿಚಿತ್ತಃ = ಪೂರ್ಣಪ್ರಜ್ಞರು, ಯಂ ಯಂ ಪ್ರದೇಶಂ = ಯಾವ ಯಾವ ಸ್ಥಳವನ್ನು, ಪ್ರಾಪತ್ = ಸೇರಿದರೋ, ಆರ್ಯೇಣ = ಪೂಜ್ಯರಾದ ಪದ್ಮತೀರ್ಥರಿಂದ, ತಸ್ಮಾತ್ ತಸ್ಮಾತ್ (ಪ್ರದೇಶಾತ್) = ಆಯಾಯಾ ಪ್ರದೇಶದಿಂದ, ಆಗತೇಃ = ಆಗಮನಕ್ಕೆ, ಅಂತರಾಯಃ = ವಿಘ್ನವು, ವ್ಯಕ್ತಂ = ಸ್ಪಷ್ಟವಾಗಿ, ಪ್ರತ್ಯಜ್ಞಾಯಿ = ಪ್ರತಿಜ್ಞೆಮಾಡ-ಲ್ಪಟ್ಟಿತು. ಸಃ ಅಪಿ = ಆ ಪೂರ್ಣಪ್ರಜ್ಞರೂ, ಪಾರ್ಶ್ವಂ = ಹತ್ತಿರದ ಸ್ಥಳವನ್ನು, ಪ್ರಾಪ್ನೋತ್ = ತಲುಪಿದರು ; ಹಾ = ಅಯ್ಯೋ ! ವಯಂ = ನಾವು, ಭಾಗ್ಯಹೀನಾಃ = ಅದೃಷ್ಟವಿಲ್ಲದವರು.

**ತಾ:—** ಶ್ರೀಮಧ್ವಾಚಾರ್ಯರು ಯಾವ ಯಾವ ಸ್ಥಳಕ್ಕೆ ಬಂದರೋ, ಅಲ್ಲಿಂದ ಮುಂದೆ ಅವರು ಬರದಂತೆ ತಡೆಯುವೆನೆಂದು ಪೂಜ್ಯರಾದ ಈ ಪದ್ಮತೀರ್ಥರು ಎಲ್ಲರ ಎದುರು ಪ್ರತಿಜ್ಞೆಮಾಡಿದ್ದರು. ಆದರೆ ಅವರಿಗೆ ಹಾಗೆ ಮಾಡಲಾಗಲಿಲ್ಲ. ಈಗ ಆ ಮಧ್ವಾಚಾರ್ಯರು ನಮ್ಮ ಹತ್ತಿರಕ್ಕೇ ಬಂದಿರುತ್ತಾರೆ. ಈ ಪದ್ಮತೀರ್ಥರು ಏನು ಮಾಡಿಯಾರು ? ನಾವು ಅದೃಷ್ಟಹೀನರು. ಆದ್ದರಿಂದಲೇ ಅವರಿಗೆ ಪ್ರತಿಜ್ಞೆಯನ್ನು ನೆರವೇರಿಸ

Rarest Archiver

ಲಾಗಲಿಲ್ಲ. (ಮಧ್ವಾಚಾರ್ಯರು ಬದರಿಯಿಂದ ಬಂದು ಭಾಷ್ಯವನ್ನು ನಿರ್ಮಿಸಿ ಗೋದಾವರೀತೀರದಲ್ಲಿ ಪಂಡಿತರನ್ನು ಜಯಿಸಿ ಉಡುಪಿಗೆ ಬರುವ ರೆಂಬ ವಾರ್ತೆಯನ್ನು ಕೇಳಿದಾಗ ಮಾಯಾವಾದಿಗಳು ದುಃಖಿತರಾದರು. ಆದರೆ, ಪದ್ಮತೀರ್ಥರು ಅಲ್ಲಿಂದ ಮುಂದೆ ದಕ್ಷಿಣಕ್ಕೆ ಬರುವಾಗ ತಡೆಯುತ್ತೇನೆಂದು ಪ್ರತಿಜ್ಞೆಮಾಡಿ ಮುಂದೆ ಮುಂದೆ ಬಂದಾಗಲೆಲ್ಲ ಪ್ರತಿಜ್ಞೆ ಮಾಡುತ್ತಲೇ ಇದ್ದರು. ಆಚಾರ್ಯರು ಈ ವಾದಿಗಳನ್ನು ಜಯಿಸುವುದಕ್ಕಾಗಿ ಸಮೀಪಕ್ಕೇ ಬಂದರೆಂದು ತಿಳಿದು ಮಾಯಾವಾದಿಗಳು ವ್ಯಸನಾಕ್ರಾಂತರಾಗಿದ್ದಾರೆ ಎಂದು ಅಭಿಪ್ರಾಯ.)

ವಿ:—ಭೂರಿ ಚಿತ್ತಂ ಯಸ್ಯ ಸಃ, ಭಾಗ್ಯೇನ ಹೀನಾಃ;

ಕ್ರಿ:– ಪ್ರ + ಆಪತ್ ಆಪತಾಂ ಆಪನ್ ಇತ್ಯಾದಿ, ಆಪ್ಲೃ ವ್ಯಾಪ್ತೌ ಲುಙ್. ಪ್ರತಿ + ಅಜ್ಞಾಯಿ ಅಜ್ಞಾಯಿಷಾತಾಂ ಅಜ್ಞಾಯಿಷತ, ಅಜ್ಞಾಯಿಷ್ಠಾಃ ಅಜ್ಞಾಯಿಷಾಥಾಂ ಅಜ್ಞಾಯಿಢ್ವಂ, ಅಜ್ಞಾಯಿಷಿ ಅಜ್ಞಾಯಿಷ್ವಹಿ ಅಜ್ಞಾಯಿಷ್ಮಹಿ. ಜ್ಞಾ ಅವಬೋಧನೇ ಕರ್ಮಣಿ ಲುಙ್. ಪ್ರತಿ ಉಪಸರ್ಗ. ಪ್ರ + ಆಪ್ನೋತ್ ಆಪ್ನುತಾಂ ಆಪ್ನುವನ್, ಇತ್ಯಾದಿ ಆಪ್ಲೃ ಧಾತು ಲಙ್.

ಅವ:—ಮಧ್ವರು ನಮ್ಮ ಸಮೀಪಕ್ಕೆ ಬಂದರೆ ನಮಗೇನು ಕಷ್ಟ? ಎಂದು ಕೇಳುತ್ತೀರೋ ಹೇಳುತ್ತೇನೆ, ಕೇಳಿರಿ—

**ಪ್ರಶ್ನಃ ಪೃಷ್ಟಃ ಖಂಡ್ಯತೇ ತೇನ ನೂನಂ**
**ಯುಕ್ತ್ಯಾ ಯುಕ್ತಿಂ ವಕ್ತಿ ಚಾಸಾವಖಂಡ್ಯಾಂ**
**ವಾದಿವ್ರಾತಂ ಲಜ್ಜಯೇನ್ನೋ ವಿಶೇಷಾ-**
**ದಾಕ್ಷೇಪ್ತೇತಿ ಶ್ರೂಯತೇ ಕಿಂನು ಕುರ್ಮಃ ॥೧೦॥**

ಅ:—ತೇನ (ಅಸ್ಮಾಭಿಃ) ಪೃಷ್ಟಃ ಪ್ರಶ್ನಃ ಖಂಡ್ಯತೇ ನೂನಂ. ಅಸೌ ಅಖಂಡ್ಯಾಂ ಯುಕ್ತ್ಯಾ ಯುಕ್ತಿಂ ಚ ವಕ್ತಿ. ವಾದಿವ್ರಾತಂ ಲಜ್ಜಯೇತ್. ನಃ ವಿಶೇಷಾತ್ ಆಕ್ಷೇಪ್ತಾ ಇತಿ ಶ್ರೂಯತೇ, ಕಿಂನು ಕುರ್ಮಃ?

Rarest Archiver

**ಅರ್ಥ:**—ತೇನ = ಆ ಮಧ್ವಾಚಾರ್ಯರಿಂದ, (ಅಸ್ಮಾಭಿಃ= ನಮ್ಮಿಂದ) ಪೃಷ್ಟಃ ಪ್ರಶ್ನಃ=ಆಕ್ಷೇಪರೂಪದಿಂದ ಕೇಳಲ್ಪಟ್ಟ ವಚನವು, ಖಂಡ್ಯತೇ ನೂನಂ=ಖಂಡಿಸಲ್ಪಡುತ್ತದೆ ಎಂಬುದು ನಿಶ್ಚಯ. ಅಸೌ=ಈ ಮಧ್ವಾಚಾರ್ಯರು, ಅಖಂಡ್ಯಾಂ=ಖಂಡಿಸಲು ಸಾಧ್ಯವಿಲ್ಲದ, ಯುಕ್ತಾಂ =ಯೋಗ್ಯವಾದ, ಯುಕ್ತಿಂ=ಯುಕ್ತಿಯನ್ನು, ವಕ್ತಿ=ಹೇಳುತ್ತಾರೆ. ವಾದಿವ್ರಾತಂ = ಆಕ್ಷೇಪಿಸುವ ವಾದಿಸಮೂಹವನ್ನು, ಲಜ್ಜಯೇತ್= ನಾಚಿಕೆಪಡಿಸುವರು (ಅವಮಾನಗೊಳಿಸುವರು). ನಃ = ನಮ್ಮನ್ನು, ವಿಶೇಷಾತ್=ಅಧಿಕವಾಗಿ, ಆಕ್ಷೇಪ್ತಾ ಇತಿ=ಆಕ್ಷೇಪಿಸುವರು ಎಂದು, ಶ್ರೂಯತೇ=ಕೇಳಲ್ಪಡುತ್ತದೆ, ಕಿಂ ನು ಕುರ್ಮಃ=ಏನು ಮಾಡೋಣ!

**ತಾ:**—ಆ ಮಧ್ವಾಚಾರ್ಯರು ನಾವು ಹೇಳಿದ ಆಕ್ಷೇಪಗಳನ್ನೆಲ್ಲಾ ಖಂಡಿಸುತ್ತಾರೆ. ಇದು ನಿಜವಾದ ವಿಚಾರ. ಇತರರು ಯಾರಿಂದಲೂ ನಿರಾಕರಿಸಲಾಗದ ಉಚಿತವಾದ ಯುಕ್ತಿಯನ್ನು ಹೇಳುತ್ತಾರೆ. ವಾದಿಗಳ ಸಮೂಹವನ್ನೇ ನಾಚಿಕೆ ಪಡಿಸುತ್ತಾರೆ, ಅವಮಾನಿಸುತ್ತಾರೆ. ಮಾಯಾ-ವಾದಿಗಳಾದ ನಮ್ಮನ್ನು ವಿಶೇಷವಾಗಿ ನಿರಾಕರಿಸುತ್ತಾರೆಂದು ಕೇಳಿ ಬರುತ್ತದೆ. ಈಗ ನಾವು ಏನು ಮಾಡೋಣ?

**ವಿ:**—ವಾದಿನಾಂ ವ್ರಾತಃ ತಂ; **ಕ್ರಿಯಾ** :- ಖಂಡ್ಯತೇ ಖಂಡ್ಯೇತೇ ಖಂಡ್ಯಂತೇ ಇತ್ಯಾದಿ ಖಡಿ ಭೇದನೇ ಣಿಜಂತ, ಕರ್ಮಣಿ ಲಟ್ (ಕರ್ತರಿ-ಖಂಡಯತಿ.) ವಕ್ತಿ ವಕ್ತಃ, ವಕ್ಷಿ ವಕ್ಥಃ; ವಚ್ಮಿ ವಚ್ವಃ, ವಚ ಪರಿ ಭಾಷಣೇ ಲಟ್. (ಈ ಧಾತುವಿಗೆ ಬಹುವಚನವಿಲ್ಲ ಎಂದು ಸಂಪ್ರದಾಯ). ಲಜ್ಜಯೇತ್ ಲಜ್ಜಯೇತಾಂ ಲಜ್ಜಯೇಯುಃ; ಇತ್ಯಾದಿ. ಓಲಸ್ಜೀ ವ್ರೀಡಾಯಾಂ ಣಿಜಂತ, ವಿಧಿಲಿಙ್. ಆ+ಕ್ಷೇಪ್ತಾ ಕ್ಷೇಪ್ತಾರೌ ಕ್ಷೇಪ್ತಾರಃ, ಕ್ಷೇಪ್ತಾಸಿ ಕ್ಷೇಪ್ತಾಸ್ಥಃ ಕ್ಷೇಪ್ತಾಸ್ಥ, ಕ್ಷೇಪ್ತಾಸ್ಮಿ ಕ್ಷೇಪ್ತಾಸ್ವಃ ಕ್ಷೇಪ್ತಾಸ್ಮಃ, ಕ್ಷಿಪ ಪ್ರೇರಣೇ-ಆಙ್ ಉಪಸರ್ಗ ಲುಟ್; ಕುರ್ಮಃ, ಕರೋಮಿ ಕುರ್ವಃ ಕುರ್ಮಃ ಡುಕೃಞ್ ಕರಣೇ ಲಟ್.

**ಅವ**:—ಈ ಮಧ್ವಾಚಾರ್ಯರಿಂದ ನಮಗೇನು ಕಷ್ಟವಾಯಿತು ಎಂದು ಕೇಳುತ್ತೀರೋ? ಹೇಳುತ್ತೇನೆ. ಕೇಳಿರಿ—

Rarest Archiver

**ಪ್ರಾಚ್ಯಂ ಶಾಸ್ತ್ರಂ ಯತ್ ಸಪಾದಂ ತು ಲಕ್ಷಂ**
**ವಾಕ್ಯೇನೈಕೇನಾಕ್ಷಿಪದ್ಧರ್ಷತೀರ್ಥಃ ।**
**ಇತ್ಥಂ ಪಾಂಥೈರ್ವರ್ಣಿತಂ ಶೃಣ್ವತಃ ಪ್ರಾಕ್**
**ಯುಷ್ಮಾನ್ ಪ್ರಾಪದ್ದೂಯಮಾನಂ ಮನೋ ಮೇ ॥೧೧॥**

ಅ :—ಹರ್ಷತೀರ್ಥಃ ತು ಪ್ರಾಚ್ಯಂ ಸಪಾದಂ ಲಕ್ಷಂ ಯತ್ ಶಾಸ್ತ್ರಂ ತತ್ ಏಕೇನ ವಾಕ್ಯೇನ ಆಕ್ಷಿಪತ್, ಇತ್ಥಂ ಪ್ರಾಕ್ ಪಾಂಥೈಃ ವರ್ಣಿತಂ ಶೃಣ್ವತಃ ಮೇ ಮನಃ ದೂಯಮಾನಂ ಯುಷ್ಮಾನ್ ಪ್ರಾಪತ್ ।

ಅರ್ಥ:– ಹರ್ಷತೀರ್ಥಸ್ತು = ಮಧ್ವಾಚಾರ್ಯರಾದರೋ, ಪ್ರಾಚ್ಯಂ = ಪ್ರಾಚೀನವಾದ, ಸಪಾದಂ ಲಕ್ಷಂ = ಕಾಲಂಶದಿಂದ ಕೂಡಿದ ಲಕ್ಷ ಸಂಖ್ಯೆಯು, ಯತ್ ಶಾಸ್ತ್ರಂ = ಯಾವ ಶಾಂಕರಶಾಸ್ತ್ರವು (ಅಸ್ತಿ–ಇದೆಯೋ ತತ್ = ಅದನ್ನು) ಏಕೇನ ವಾಕ್ಯೇನ = ಒಂದೇ ವಾಕ್ಯದಿಂದ, ಆಕ್ಷಿಪತ್ = ಖಂಡಿಸಿದರು, ಇತ್ಥಂ = ಈ ರೀತಿ, ಪ್ರಾಕ್ = ಹಿಂದೆ, ಪಾಂಥೈಃ = ದಾರಿ ಹೋಕರಿಂದ, ವರ್ಣಿತಂ = ಹೇಳಲ್ಪಟ್ಟಿದ್ದನ್ನು, ಶೃಣ್ವತಃ = ಕೇಳುತ್ತಿರುವ, ಮೇ ಮನಃ = ನನ್ನ ಮನಸ್ಸು, ದೂಯಮಾನಂ = ವ್ಯಥೆಪಟ್ಟದ್ದಾಗಿ, ಯುಷ್ಮಾನ್ = ನಿಮ್ಮನ್ನು, ಪ್ರಾಪತ್ = ಸೇರಿತು.

ತಾ:—ಶ್ರೀಶಂಕರಾಚಾರ್ಯರ ಶಾಸ್ತ್ರವು ಪುರಾತನವಾದುದು. ಒಂದು ಲಕ್ಷ ಇಪ್ಪತ್ತಐದು ಸಾವಿರ ಗ್ರಂಥವುಳ್ಳದ್ದು. ಇದನ್ನೆಲ್ಲ ಆಧುನಿಕರಾದ ಈ ಮಧ್ವಾಚಾರ್ಯರು ಒಂದೇ ವಾಕ್ಯದಿಂದ ನಿರಾಕರಿಸಿದರೆಂದು ದಾರಿಗರು ಆಡುವ ಮಾತನ್ನು ಕೇಳಿನನಗೆ ತುಂಬಾ ವ್ಯಥೆಯಾಯಿತು. ನನ್ನ ಮನಸ್ಸು ಈ ಮಧ್ವಾಚಾರ್ಯರನ್ನು ಜಯಿಸಲು ಪದ್ಮತೀರ್ಥರೊಬ್ಬರೇ ಸಮರ್ಥರೆಂದು ನಿಮ್ಮನ್ನೇ (ಪದ್ಮತೀರ್ಥರನ್ನೇ) ಸ್ಮರಿಸಿತು. ಪ್ರಾಚೀನವಾದ ಶಾಸ್ತ್ರವನ್ನು ಆಧುನಿಕನೊಬ್ಬನು ಒಂದೇ ಮಾತಿನಿಂದ ಖಂಡಿಸಿದನಲ್ಲಾ ಎಂಬುದೇ ನನ್ನ ಕಷ್ಟಕ್ಕೆ ಕಾರಣ. (**ಅಜ್ಞಾನಾಸಂಭವಾದೇವ ತನ್ಮತಮಖಿಲಮಪಾಕೃತಂ** ಈ ಒಂದುವಾಕ್ಯದಿಂದಲೇ ಆಚಾರ್ಯರು ಮಾಯಾವಾದವನ್ನು ಖಂಡಿಸಿದರು).

Rarest Archiver

ವಿ:—ಪಾದೇನ ಸಹಿತಂ ಸಪಾದಂ, ಹರ್ಷಃ (ಹರ್ಷಕರಂ) ತೀರ್ಥಂ ಯಸ್ಮಾತ್ ಸಃ ಹರ್ಷತೀರ್ಥಃ.

ಕ್ರಿ:—ಆ+ಅಕ್ಷಿಪತ್ ಆಕ್ಷಿಪತಾಂ ಆಕ್ಷಿಪನ್ ಇತ್ಯಾದಿ, ಕ್ಷಿಪ ಪ್ರೇರಣೇ ಪರ. ಲಜ್. ಪ್ರ+ಆಪತ್ ಆಪತಾಂ ಆಪನ್ ಇತ್ಯಾದಿ. ಆಪ್‌ಲೃ ವ್ಯಾಪ್ತೌ ಲುಜ್.

ಅವ:—ಜನರು ಆಡಿಕೊಳ್ಳುವ ವಾರ್ತೆಯನ್ನು ಕೇಳಿದಾಗ ಮಾಯಾವಾದದ ಮೂಲವೇ ಕಡಿದುಹೋದಂತೆ ಭಾಸವಾಗುತ್ತದೆ—

**ವೇದವ್ಯಾಸೋ ನ್ವೇಷ ವೇದೋ ನು ಮೂರ್ತೋ**
**ದಿವ್ಯಾ ಮೂರ್ತಿರ್ಯಸ್ಯ ಸಾ ಸುಸ್ಮಿತಸ್ಯ**
**ತದ್ದ್ರಷ್ಟೄಣಾಂ ಚೇತಿ ವಾಣೀಕೃಪಾಣೀ**
**ನೂನಂ ಮಾಯಾಪಕ್ಷಮೂಲಂ ಭಿನತ್ತಿ** ॥೧೨॥

ಅ:—ಏಷಃ ವೇದವ್ಯಾಸಃ ನು? ಮೂರ್ತಃ ವೇದಃ ನು? ಸುಸ್ಮಿತಸ್ಯ ಯಸ್ಯ ಸಾ ದಿವ್ಯಾ ಮೂರ್ತಿಃ ಇತಿ ತದ್ದ್ರಷ್ಟೄಣಾಂ ವಾಣೀಕೃಪಾಣೀ ಚ ನೂನಂ ಮಾಯಾಪಕ್ಷಮೂಲಂ ಭಿನತ್ತಿ।

ಅ:—ಏಷಃ = ಈ ಮಧ್ವಾಚಾರ್ಯರು, ವೇದವ್ಯಾಸಃ ನು?= ವೇದವ್ಯಾಸರೋ? ಮೂರ್ತಃ ವೇದಃ ನು? = ಶರೀರಧಾರಿಯಾದ ವೇದವೊ? ಸುಸ್ಮಿತಸ್ಯ ಯಸ್ಯ = ದಿವ್ಯಮಂದಹಾಸವುಳ್ಳ ಯಾವ ಶ್ರೀಮಧ್ವಾಚಾರ್ಯರಿಗೆ, ಸಾ ದಿವ್ಯಾ ಮೂರ್ತಿಃ (ಅಸ್ತಿ) = ಅಂತಹ ಲೋಕ ವಿಲಕ್ಷಣವಾದ ಶರೀರವಿದೆ, ಇತಿ = ಈ ರೀತಿಯಾಗಿ, ತದ್ದ್ರಷ್ಟೄಣಾಂ = ಆ ಮಧ್ವಾಚಾರ್ಯರನ್ನು ನೋಡಿದವರ, ವಾಣೀಕೃಪಾಣೀ ಚ = ವಚನ ವೆಂಬ ಖಡ್ಗವೂ, ನೂನಂ = ನಿಶ್ಚಯವಾಗಿಯೂ, ಮಾಯಾಪಕ್ಷಮೂಲಂ = ಮಾಯಾವಾದಸಿದ್ಧಾಂತದ ತಾಯಿಬೇರನ್ನೇ, ಭಿನತ್ತಿ = ಕತ್ತರಿಸುತ್ತದೆ.

ತಾ: 'ಮಂದಹಾಸದಿಂದ ಸುಂದರವಾದ ಆ ಮಧ್ವಾಚಾರ್ಯರ ಆಕೃತಿಯು ಲೋಕವಿಲಕ್ಷಣವಾದುದು, ಸಕಲ ಮಹಾಪುರುಷಲಕ್ಷಣಗಳಿಂದ

Rarest Archiver

ಕೂಡಿದುದು. 'ಇವರೇನು ಸಾಕ್ಷಾತ್ ವೇದವ್ಯಾಸರೋ? ಅಥವಾ ಶರೀರವನ್ನು ಧರಿಸಿ ಬಂದಿರುವ ವೇದವೋ?' ಹೀಗೆ ಅವರನ್ನು ಕಂಡಿರುವ ಜನರು ಆಡುವ ಮಾತೆಂಬ ಕತ್ತಿಯು ಮಾಯಾವಾದಮತದ ಬುಡವನ್ನೇ ಕತ್ತರಿಸುತ್ತದೆ. ಹೀಗೆ ಮಧ್ವಾಚಾರ್ಯರ ಬಗ್ಗೆ ಜನರ ಅದ್ಭುತ ಪ್ರಶಂಸೆಯು ನಮ್ಮ ಸಿದ್ಧಾಂತಕ್ಕೆ ಕುಠಾರಪ್ರಾಯವಾಗಿದೆ.

ವಿ:—ತಸ್ಯ ದ್ರಷ್ಟಾರಃ ತದ್ದ್ರಷ್ಟಾರಃ ತೇಷಾಂ, ವಾಣೀ ಏವ ಕೃಪಾಣೀ ವಾಣೀಕೃಪಾಣೀ, ಮಾಯಾವಾದಿನಃ ಪಕ್ಷಃ ಮಾಯಾಪಕ್ಷಃ, ಮಾಯಾಪಕ್ಷಸ್ಯ ಮೂಲಂ ಮಾಯಾಪಕ್ಷಮೂಲಂ ತತ್.

ಕ್ರಿ:—ಭಿನತ್ತಿ ಭಿಂತಃ ಭಿಂದಂತಿ, ಭಿನತ್ಸಿ ಭಿಂಥಃ ಭಿಂಥ, ಭಿನದ್ಮಿ ಭಿಂದ್ವಃ ಭಿಂದ್ಮಃ ಭಿದಿರ್ ದ್ವೈಧೀಕರಣೇ ಸಕ. ಲಟ್.

ಅವ:—ನಮ್ಮ ಪಕ್ಷದವರೂ ಮಧ್ವಭಾಷ್ಯವನ್ನು ಹೊಗಳುವುದು ಬಹಳ ಕಷ್ಟಕರವಾಗಿದೆ—

ಅಕ್ಲಿಷ್ಟಂ ತತ್ಸೂತ್ರಭಾಷ್ಯಂ ಬಲೀಯೋ
ಮಾನೋಪೇತಂ ಕಾ ಕ್ಷತಿರ್ನಸ್ತಥಾ ಚೇತ್ ।
ಆಸ್ಮಾಕಾಃ ಕೇಽಪ್ಯೇವಮುಕ್ತ್ವಾ ವಿಲಜ್ಜಾ
ಲಜ್ಜಾಸಿಂಧೌ ದುಸ್ಸಹೇಽಮಜ್ಜಯನ್ನಃ ॥೧೪॥

ಅ:—'ತತ್ಸೂತ್ರಭಾಷ್ಯಂ ಅಕ್ಲಿಷ್ಟಂ ಬಲಿಯೋಮಾನೋಪೇತಂ ತಥಾ ಚೇತ್ ನಃ ಕಾ ಕ್ಷತಿಃ' ಏವಂ ಉಕ್ತ್ವಾ ವಿಲಜ್ಜಾಃ ಆಸ್ಮಾಕಾಃ ಕೇಽಪಿ ದುಸ್ಸಹೇ ಲಜ್ಜಾಸಿಂಧೌ ನಃ ಅಮಜ್ಜಯನ್ ।

ಅರ್ಥ:— ತತ್ಸೂತ್ರಭಾಷ್ಯಂ = ಆ ಮಧ್ವಾಚಾರ್ಯರ ಸೂತ್ರಭಾಷ್ಯವು, ಅಕ್ಲಿಷ್ಟಂ = ಸರಳವಾದುದು, ಬಲೀಯೋಮಾನೋಪೇತಂ = ಪ್ರಬಲವಾದ ಪ್ರಮಾಣಗಳಿಂದ ಕೂಡಿರುವುದು (ಇತಿ ವದಂತಿ = ಹೀಗೆಂದು ಹೇಳುತ್ತಾರೆ.) ತಥಾ ಚೇತ್ = ಹಾಗಾದರೆ, ನಃ ಕಾ ಕ್ಷತಿಃ = ನಮಗೇನು ಹಾನಿ? ಏವಂ ಉಕ್ತ್ವಾ = ಹೀಗೆ ಹೇಳಿ, ವಿಲಜ್ಜಾಃ = ನಾಚಿಕೆ ಇಲ್ಲದ,

Rarest Archiver

ಅಸ್ಮಾಕಾಃ ಕೇಽಪಿ = ನಮ್ಮವರಾದ ಕೆಲವರೂ, ದುಸ್ಸಹೇ = ಸಹಿಸಲಾಗದ, ಲಜ್ಜಾಸಿಂಧೌ = ನಾಚಿಕೆಯೆಂಬ ಸಮುದ್ರದಲ್ಲಿ, ನಃ = ನಮ್ಮನ್ನು, ಅಮಜ್ಜಯನ್ = ಮುಳುಗಿಸಿದರು.

**ತಾ:**—'ಮಧ್ವಾಚಾರ್ಯರ ಸೂತ್ರಭಾಷ್ಯವು ಸರಳವಾದ ಮಾರ್ಗದಿಂದ ಸೂತ್ರಾರ್ಥವನ್ನು ವರ್ಣಿಸುತ್ತದೆ, ಪ್ರಬಲವಾದ ಪ್ರಮಾಣಗಳಿಂದ ಕೂಡಿದೆ. ಅದು ಹಾಗಿದ್ದರೆ ಇರಲಿ? ನಮಗೇನು ಹಾನಿ?' ಹೀಗೆ ನಮ್ಮವರೇ ಆದ ಕೆಲವರು ನುಡಿಯುತ್ತಾರೆ. ಈ ನಾಚಿಕೆಗೇಡಿಜನರು ನಮ್ಮನ್ನೆಲ್ಲ ಸಹಿಸಲಾಗದ ಲಜ್ಜಾಸಮುದ್ರದಲ್ಲಿ ಮುಳುಗಿಸಿಬಿಟ್ಟರು. ಇದೆಷ್ಟು ದುಃಖಕರವಾದ ವಿಷಯ! ನಮ್ಮವರೇ ಪರಕೀಯರನ್ನು ಹೊಗಳುವುದು ಲಜ್ಜಾಕರವಲ್ಲವೇ?

**ವಿ:**—ನ ಕ್ಲಿಷ್ಟಂ ಅಕ್ಲಿಷ್ಟಂ, ಸೂತ್ರಾಣಾಂ ಭಾಷ್ಯಂ ಸೂತ್ರಭಾಷ್ಯಂ, ತಸ್ಯ ಸೂತ್ರಭಾಷ್ಯಂ ತತ್ಸೂತ್ರಭಾಷ್ಯಂ; ಬಲೀಯಾಂಸಿ ಚ ತಾನಿ ಮಾನಾನಿ ಚ ಬಲೀಯೋಮಾನಾನಿ, ಬಲೀಯೋಮಾನೈಃ ಉಪೇತಂ ಬಲೀಯೋಮಾನೋಪೇತಂ, ಅಸ್ಮಾಕಂ ಇಮೇ ಅಸ್ಮಾಕಾಃ, ವಿಗತಾ ಲಜ್ಜಾ ಯೇಭ್ಯಃ ತೇ ವಿಲಜ್ಜಾಃ, ಲಜ್ಜಾ ಏವ ಸಿಂಧುಃ ಲಜ್ಜಾಸಿಂಧುಃ ತಸ್ಮಿನ್, ಸೋಢುಂ ಅಶಕ್ಯಃ ದುಸ್ಸಹಃ ತಸ್ಮಿನ್ ;

**ಕ್ರಿ:**—ಅಮಜ್ಜಯತ್ ಅಮಜ್ಜಯತಾಂ ಅಮಜ್ಜಯನ್ ಇತ್ಯಾದಿ, ಟುಮಸ್ಜೋ (ಮಜ್ಜ್) ಶುದ್ಧೌ, ಣಿಜಂತಾತ್ ಲಙ್ ||

**ಅವ :**—ಹಾಗೆ ಎಲ್ಲರೂ ಹೇಳಿದರೂ ನಮಗಾಗುವ ನಷ್ಟವೇನು?—ಎಂದರೆ ಹೇಳುತ್ತಾನೆ—

**ತಸ್ಯ ವ್ಯಾಪ್ತೈಃ ಶಿಷ್ಯಜಾಲೈಸ್ತು ಗೌಣೈಃ**
**ಸಂಸತ್ಸಿಂಧೌ ಶಂಖಚಕ್ರಾದಿಭೃದ್ಭಿಃ ।**
**ಮಾ ಗೃಹ್ಯೇರನ್ ವಿಶ್ವಸತ್ತ್ವಾಂತರಾಣಿ**
**ಕ್ಷೇಮಾಪ್ತ್ಯೈ ನಸ್ತತ್ರ ನೀತಿಂ ವಿಧತ್ತ ||೧೪||**

**ಅ**:—ಗೌಣ್ಯೈಃ ವ್ಯಾಪ್ತೈಃ ಶಂಖಚಕ್ರಾದಿಭೃದ್ಭಿಃ ತಸ್ಯ ಶಿಷ್ಯ-ಜಾಲೈಸ್ತು ಸಂಸತ್ಸಿಂಧೌ ವಿಶ್ವಸತ್ತ್ವಾಂತರಾಣಿ ಮಾ ಗೃಹ್ಯೇರನ್, ತತ್ರ ನಃ ಕ್ಷೇಮಾಪ್ತ್ಯೈ ನೀತಿಂ ವಿಧತ್ತ.

**ಅರ್ಥ**:—ಗೌಣ್ಯೈಃ = ಮಾಧುರ್ಯಾದಿಗುಣಗಳುಳ್ಳ, ದಾರದಿಂದ ಮಾಡಿರುವ, ವ್ಯಾಪ್ತೈಃ=ಎಲ್ಲಾ ಕಡೆಗಳಲ್ಲಿ ಹರಡಿರುವ, ಶಂಖಚಕ್ರಾದಿ-ಭೃದ್ಭಿಃ = ಶಂಖಚಕ್ರಾದಿಚಿಹ್ನೆಗಳನ್ನು ಧರಿಸಿರುವ, ಶಂಖಗಳ (ಚಿಪ್ಪುಗಳ) ಸಮೂಹವೊದಲಾದುವುಗಳನ್ನು ಹಿಡಿಯುವ, ತಸ್ಯ = ಆ ಮಧ್ವರ, ಶಿಷ್ಯ-ಜಾಲೈಸ್ತು = ಶಿಷ್ಯರೆಂಬ ಬಲೆಗಳಿಂದಲಾದರೋ, ಸಂಸತ್‌ಸಿಂಧೌ = ಸಭೆಯೆಂಬ ಸಮುದ್ರದಲ್ಲಿ, ವಿಶ್ವಸತ್ತ್ವ = ಎಲ್ಲಾ ಪ್ರಾಣಿಗಳ, ಅಂತರಾಣಿ = ಮನಸ್ಸುಗಳು, ಮಾ ಗೃಹ್ಯೇರನ್ = ಹಿಡಿಯಲ್ಪಡದಿರಲಿ. ತತ್ರ = ಆ ವಿಷಯದಲ್ಲಿ, ನಃ = ನಮ್ಮ, ಕ್ಷೇಮಾಪ್ತ್ಯೈ = ಕ್ಷೇಮದ ಪ್ರಾಪ್ತಿಗಾಗಿ, ನೀತಿಂ = ಉಪಾಯವನ್ನು, ವಿಧತ್ತ = ಮಾಡಿರಿ.

**ತಾ**:—ಒಳ್ಳೆಯ ದಾರಗಳಿಂದ ರಚಿಸಿದ ಸಮುದ್ರದಲ್ಲಿ ಹರಡಿದ ಬಲೆಗಳಿಂದ ಶಂಖದ ಹುಳ ಮುಂತಾದ ಜಲಚರಪ್ರಾಣಿಗಳನ್ನು ಸೆರೆಹಿಡಿಯುವಂತೆ, ಮಧುರವಚನಸೌಜನ್ಯಾದಿಗುಣಗಳಿಂದ ಕೂಡಿದ, ಎಲ್ಲಾ ದೇಶಗಳಲ್ಲಿಯೂ ವ್ಯಾಪಿಸಿರುವ, ಶಂಖಚಕ್ರಾದಿವೈಷ್ಣವಚಿಹ್ನೆಗಳನ್ನು ಧರಿಸಿರುವ ಆ ಮಧ್ವಾಚಾರ್ಯರ ಶಿಷ್ಯರೆಂಬ ಬಲೆಗಳು, (ಬಲೆಗಳಂತಿರುವ ಶಿಷ್ಯರು) ಸಭೆಗಳೆಂಬ ಸಮುದ್ರದಲ್ಲಿ ಎಲ್ಲಾ ಜನರ ಮನಸ್ಸುಗಳೆಂಬ ಜಲಚರಗಳನ್ನು ಸೆರೆಹಿಡಿಯದಂತೆ ಯಾವುದಾದರೂ ಒಂದು ಉಪಾಯ ವನ್ನು ನಮ್ಮ ಕ್ಷೇಮಕ್ಕಾಗಿ ಯೋಚಿಸಿರಿ.

**ವಿ**:—ಶಿಷ್ಯಾ ಏವ ಜಾಲಾನಿ ಶಿಷ್ಯಜಾಲಾನಿ ತೈಃ, ಗುಣಾನಾಂ ಇಮಾನಿ ಗೌಣಾನಿ ತೈಃ, ಸಂಸದಃ ಏವ ಸಿಂಧುಃ ಸಂಸತ್‌ಸಿಂಧುಃ ತಸ್ಮಿನ್, ಶಂಖಶ್ಚ ಚಕ್ರಂ ಚ ಶಂಖಚಕ್ರೇ, ತೇ ಆದೀ ಯೇಷಾಂ ತಾನಿ ಶಂಖ-ಚಕ್ರಾದೀನಿ, ತಾನಿ ಬಿಭ್ರತೀತಿ ಶಂಖಚಕ್ರಾದಿಭೃಂತಿ, ತೈಃ, ಶಂಖಾನಾಂ ಚಕ್ರಃ ಶಂಖಚಕ್ರಃ ಸ ಆದಿಃ ಯೇಷಾಂ ತೇ, ಶಂಖಚಕ್ರಾದಯಃ ತಾನ್

Rarest Archiver

ಬಿಭ್ರತೀತಿ ಶಂಖಚಕ್ರಾದಿಭೃಂತಿ ತ್ರೈಃ, ವಿಶ್ವಾನಿ ಚ ತಾನಿ ಸತ್ತ್ವಾನಿ ಚ ವಿಶ್ವಸತ್ತ್ವಾನಿ ವಿಶ್ವಸತ್ತ್ವಾನಾಂ ಅಂತರಾಣಿ ವಿಶ್ವಸತ್ತ್ವಾಂತರಾಣಿ, ಅನ್ಯಾನಿ ಸತ್ತ್ವಾನಿ ಸತ್ತ್ವಾಂತರಾಣಿ, ವಿಶ್ವಾನಿ ಚ ತಾನಿ, ಸತ್ತ್ವಾಂತರಾಣಿ ಚ ವಿಶ್ವಸತ್ತ್ವಾಂತರಾಣಿ; ಕ್ಷೇಮಸ್ಯ ಆಪ್ತಿಃ ಕ್ಷೇಮಾಪ್ತಿಃ ತಸ್ಯೈ;

ಕ್ರಿ:—ಗೃಹ್ಯೇತ ಗೃಹ್ಯೇಯಾತಾಂ ಗೃಹ್ಯೇರನ್ ಇತ್ಯಾದಿ; ಗ್ರಹ ಉಪಾದಾನೇ, ಕರ್ಮಣಿ ವಿಧಿಲಿಙ್ (ತಸ್ಯ ಶಿಷ್ಯಜಾಲಾನಿ ವಿಶ್ವಸತ್ತ್ವಾಂತ-ರಾಣಿ ಮಾ ಗೃಹ್ಣೀಯುಃ ಕರ್ತರಿ.) ವಿ+ಧತ್ತ, ಧೇಹಿ ಧತ್ತಾತ್ ಧತ್ತಂ ಧತ್ತ. ಡುಧಾಙ್ (ಧಾ) ಧಾರಣಪೋಷಣಯೋಃ ಲೋಟ್ ಮಧ್ಯಮ-ಪುರುಷ |

ಅವ:—ಆ ಮಧ್ವಶಿಷ್ಯರ ಜನವಶೀಕರಣಶಕ್ತಿಯನ್ನು ಕೇಳಿರಿ—

**ಗೌಣ್ಯೈಸ್ತರ್ಕೈರ್ಗೌಣವಾಕ್ಯಾಭಿಗುಪ್ತೈಃ**
**ಗೌಣೀಂ ಬುದ್ಧಿಂ ವರ್ಧಯಂತೇ ನೃಣಾಂ ತೇ**
**ಹಂಸಾನಾಂ ನೋ ವಾಗ್ವಿಘಾತಪ್ರವೀಣಾಃ**
**ಸಿಂಧುಂ ಭೂಯೋ ವಾರಿವರ್ಷೈರಿವಾಬ್ದಾಃ** ||೧೫||

ಅ:—ಹಂಸಾನಾಂ ನಃ ವಾಗ್ವಿಘಾತಪ್ರವೀಣಾಃ ತೇ ಗೌಣ-ವಾಕ್ಯಾಭಿಗುಪ್ತೈಃ ಗೌಣ್ಯೈಃ ತರ್ಕೈಃ ಭೂಯಃ ವಾರಿವರ್ಷೈಃ ಅಬ್ದಾಃ ಸಿಂಧುಂ ಇವ ನೃಣಾಂ ಗೌಣೀಂ ಬುದ್ಧಿಂ ವರ್ಧಯಂತೇ.

**ಅರ್ಥ:**—ಹಂಸಾನಾಂ ನಃ = ಸನ್ಯಾಸಿಗಳಾದ ನಮ್ಮ, ಹಂಸಗಳ, ವಾಗ್ವಿಘಾತ = ಮಾತನ್ನು (ಕೂಗನ್ನು) ತಡೆಯುವುದರಲ್ಲಿ, ಪ್ರವೀಣಾಃ = ನಿಪುಣರಾದ, ತೇ = ಆ ಮಧ್ವಾಚಾರ್ಯರ ಶಿಷ್ಯರು, ಗೌಣವಾಕ್ಯ = ಪರಬ್ರಹ್ಮನ ಗುಣಪ್ರತಿಪಾದಕ ವಾಕ್ಯಗಳಿಂದ, ಅಭಿಗುಪ್ತೈಃ = ಕಾಪಾಡ-ಲ್ಪಟ್ಟ, ಗೌಣ್ಯೈಃ = ಬ್ರಹ್ಮನಿಗೆ ಗುಣವನ್ನು ಹೇಳುವ, ತರ್ಕೈಃ = ಅನು ಮಾನಗಳಿಂದ, ಭೂಯಃ = ಬಹಳವಾಗಿ, ವಾರಿವರ್ಷೈಃ = ನೀರನ್ನು ಸುರಿಸುವುದರಿಂದ, ಅಬ್ದಾಃ = ಮೋಡಗಳು, ಸಿಂಧುಂ ಇವ = ಸಮುದ್ರ

Rarest Archiver

ವನ್ನು ಎಂಬಂತೆ, ನೃಣಾಂ=ಮನುಷ್ಯರಿಗೆ, ಗೌಣೀಂ ಬುದ್ಧಿಂ=ಪರಬ್ರಹ್ಮನ ಗುಣವಿಶಿಷ್ಟತ್ವಜ್ಞಾನವನ್ನು, ವರ್ಧಯಂತೇ = ಹೆಚ್ಚಿಸುತ್ತಾರೆ.

**ತಾ:**— ಆ ಮಧ್ವಶಿಷ್ಯರು ಪರಮಾತ್ಮನು ಸಗುಣನು, ಜ್ಞಾನ ಆನಂದ ಪ್ರಕಾಶ ಶಕ್ತಿ ಮೊದಲಾದ ಅನಂತಶುಭಗುಣಗಳುಳ್ಳವನು- ಎಂದು ಪ್ರತಿಪಾದಿಸುವ ವಾಕ್ಯಗಳ ಬೆಂಬಲವುಳ್ಳ, ಪರಮಾತ್ಮನು ಗುಣಭರಿತನೆಂದು ಸಾಧಿಸುವ ಯುಕ್ತಿಗಳಿಂದ ತಮ್ಮ ಸಿದ್ಧಾಂತವನ್ನು ಸಾಧಿಸುತ್ತಾರೆ. ಸಂನ್ಯಾಸಿಗಳಾದ ನಮ್ಮ 'ಪರಮಾತ್ಮನು ಯಾವ ಗುಣವೂ ಇಲ್ಲದವನೆಂದು' ಸಾಧಿಸುವ ವಾಕ್ಯವನ್ನು ನಿರಾಕರಿಸುತ್ತಾರೆ. ಮೋಡಗಳು ಭಾರಿ ಮಳೆ ಸುರಿಸಿ ಸಮುದ್ರವನ್ನು ಅಭಿವೃದ್ಧಿಗೊಳಿಸುವಂತೆ ಮನುಷ್ಯರಿಗೆ ಪರಮಾತ್ಮನು ಸಗುಣನು ಎಂಬ ಬುದ್ಧಿಯನ್ನು ಹೆಚ್ಚಿಸುತ್ತಾರೆ. ಮೋಡವು ಗರ್ಜನೆಯಿಂದ ಹಂಸಪಕ್ಷಿಗಳ ಸದ್ದನ್ನು ಅಡಗಿಸಿ ಮಳೆಯಿಂದ ಸಮುದ್ರದ ನೀರನ್ನು ಹೆಚ್ಚಿಸುವಂತೆ ಮಧ್ವಶಿಷ್ಯರು ಪರಬ್ರಹ್ಮನು ಸಕಲಕಲ್ಯಾಣ ಗುಣಸಂಪನ್ನನು, ಸಮಸ್ತದೋಷವಿದೂರನು ಎಂಬ ಬುದ್ಧಿಯನ್ನು ಬೆಳೆಸುತ್ತಾರೆ. ನಿರ್ಗುಣವಾದವನ್ನು ತೃಣೀಕರಿಸುತ್ತಾರೆ ಎಂದು ಭಾವ. (**ಅನಂತಗುಣಸಾಧಕವಾಕ್ಯಗಳು**—ಅಥ ಕಸ್ಮಾದುಚ್ಯತೇ ಬ್ರಹ್ಮೇತಿ ಬೃಹಂತೋ ಹ್ಯಸ್ಮಿನ್ ಗುಣಾಃ, ಮಯ್ಯನಂತಗುಣೇಽನಂತೇ ಗುಣತೋಽನಂತವಿಗ್ರಹೇ; ಕರ್ತೃತ್ವಾತ್ ಸಗುಣಂ ಬ್ರಹ್ಮ ಪುರುಷಂ ಪುರುಷರ್ಷಭ ||' ಯುಕ್ತಿ-ಬ್ರಹ್ಮ ಸಗುಣಂ ವಸ್ತುತ್ವಾತ್ ಗೋವತ್.)

**ವಿ:**—ಗುಣಾನಾಂ ಇಮೇ, ಗೌಣಾಃ ತೈಃ, ಗುಣಾನಾಂ ಇಮಾನಿ ಗೌಣಾನಿ, ಗೌಣಾನಿ ಚ ತಾನಿ ವಾಕ್ಯಾನಿ ಚ, ಗೌಣವಾಕ್ಯೈಃ ಅಭಿಗುಪ್ತಾಃ ತೈಃ; ಗುಣಸ್ಯ ಇಯಂ ಗೌಣೀ ತಾಂ, ವಾಚಾಂ ವಿಘಾತೇ ಪ್ರವೀಣಾಃ, ಭೂಯಾಂಸಿ ಚ ತಾನಿ ವಾರೀಣಿ ಚ ಭೂಯೋವಾರೀಣಿ, ಭೂಯೋವಾರೀಣಾಂ ವರ್ಷಾಣಿ ತೈಃ, ಅಪಃ ದದತೀತಿ ಅಬ್ದಾಃ ತೈಃ;

**ಕ್ರಿ:**—ವರ್ಧಯತೇ ವರ್ಧಯೇತೇ ವರ್ಧಯಂತೇ ಇತ್ಯಾದಿ. ವೃಧು ವೃದ್ಧೌ ಣಿಜಂತಾತ್ ಲಟ್.

Rarest Archiver

ಅವ :— ವಾಚಾಲನಾದ ಮಾಯಾವಾದಿಯ ಭಾಷಣ ಸಮಾಪ್ತ ವಾಯಿತು—

**ಬಾಹುಲ್ಯೇನ ಹ್ಯೇತದುಕ್ತ್ವಾ ಖಲು ದ್ರಾ-**
**ಗೇತೇ ವಿಶ್ವಂ ವ್ಯಾಪ್ನುವಂತಿ ಪ್ರಕಾಮಂ ।**
**ಅಸ್ಮಿನ್ನಸ್ಮದ್ದರ್ಶನಾಪಾಯಕಾಲೇ**
**ಯದ್ವಲ್ಲೋಕಾಪಾಯಕಾಲೇ ಲಯಾಪಃ ॥೧೬॥**

**ಅ:**—ಏತತ್ ಬಾಹುಲ್ಯೇನ ಉಕ್ತ್ವಾ ಖಲು ಹಿ. ಅಸ್ಮಿನ್ ಅಸ್ಮದ್ದರ್ಶನಾಪಾಯಕಾಲೇ ಏತೇ ದ್ರಾಕ್ ವಿಶ್ವಂ ಲೋಕಾಪಾಯಕಾಲೇ ಲಯಾಪಃ ಯದ್ವತ್ ಪ್ರಕಾಮಂ ವ್ಯಾಪ್ನುವಂತಿ ।

ಅ :—ಏತತ್= ಈ ಮಾತನ್ನು, ಬಾಹುಲ್ಯೇನ= ವಿಸ್ತಾರವಾಗಿ (ಬಹಳವಾಗಿ) ಉಕ್ತ್ವಾ ಖಲು ಹಿ= ಹೇಳಕೂಡದು. ಅಸ್ಮಿನ್ ಅಸ್ಮದ್ದರ್ಶನಾಪಾಯಕಾಲೇ= ಈ ನಮ್ಮ ಅದ್ವೈತಶಾಸ್ತ್ರದ ನಾಶದ ಸಮಯದಲ್ಲಿ, ಏತೇ= ಈ ಮಧ್ವಶಿಷ್ಯರು, ದ್ರಾಕ್= ಬೇಗನೆ, ವಿಶ್ವಂ= ಪ್ರಪಂಚವನ್ನು, ಲೋಕಾಪಾಯಕಾಲೇ= ಪ್ರಪಂಚದ ನಾಶಸಮಯದಲ್ಲಿ (ಪ್ರಳಯಕಾಲದಲ್ಲಿ) ಲಯಾಪಃ ಯದ್ವತ್= ಪ್ರಳಯದ ನೀರಿನಂತೆ, ಪ್ರಕಾಮಂ= ಸ್ವೇಚ್ಛೆಯಾಗಿ, ವ್ಯಾಪ್ನುವಂತಿ= ವ್ಯಾಪಿಸುತ್ತಿದ್ದಾರೆ.

**ತಾ:**—ಶತ್ರುಪಕ್ಷವನ್ನು ಹೊಗಳುವ ಮಾತನ್ನು, ವಿಸ್ತರಿಸಿ ಹೇಳುವುದು ಯುಕ್ತವಲ್ಲವಷ್ಟೆ!. ಪ್ರಕೃತ ನಮ್ಮ ಅದ್ವೈತಶಾಸ್ತ್ರದ ನಾಶಕಾಲದಲ್ಲಿ, ಪ್ರಳಯಕಾಲದಲ್ಲಿ ಪ್ರಳಯಜಲವು ಇಚ್ಛಾನುಸಾರವಾಗಿ, ಜಗತ್ತನ್ನೇ ವ್ಯಾಪಿಸುವಂತೆ ಈ ಮಧ್ವಶಿಷ್ಯರು ಜಗತ್ತನ್ನೇ ವ್ಯಾಪಿಸುತ್ತಾರೆ. ನಾನು ಶತ್ರುಪಕ್ಷವನ್ನು ಹೊಗಳುವುದಕ್ಕಾಗಿ ಈ ಮಾತನ್ನು ಹೇಳಿಲ್ಲ. ಆದರೆ ಅದ್ವೈತಿಗಳೂ ನಮ್ಮ ಅದ್ವೈತಮತವನ್ನು ತಿರಸ್ಕರಿಸುವಾಗ ದುಃಖವನ್ನು ತಾಳಲಾರದೆ ಈ ಮಾತನ್ನು ತಿಳಿಸಿದ್ದೇನೆ ಎಂದು ವಾಚಾಲನು ಹೇಳಿದನು.

ವಿ:—ಬಹುಲಾನಾಂ ಭಾವಃ ಬಾಹುಲ್ಯಂ ತೇನ 'ಉಕ್ತ್ವಾ ಖಲು'

Rarest Archiver

ಎಂಬಲ್ಲಿ 'ಅಲಂ ಖಲ್ವೋಃ ಪ್ರತಿಷೇಧಯೋಃ ಪ್ರಾಚಾಂ ಕ್ತ್ವಾ' ಎಂಬ ಸೂತ್ರದಿಂದ ಕ್ತ್ವಾಪ್ರತ್ಯಯ. ಅಸ್ಮಾಕಂ ದರ್ಶನಂ ಅಸ್ಮದ್ದರ್ಶನಂ, ಅಸ್ಮದ್ದರ್ಶನಸ್ಯ ಅಪಾಯಸ್ಯ ಕಾಲಃ ತಸ್ಮಿನ್; ಲೋಕಾನಾಂ ಅಪಾಯಸ್ಯ ಕಾಲಃ ತಸ್ಮಿನ್, ಲಯಸ್ಯ ಆಪಃ; ವಿ+ಆಪ್ನುವಂತಿ, ಆಪ್ನೋತಿ ಆಪ್ನುತಃ ಆಪ್ನುವಂತಿ, ಆಪ್ನೋಷಿ ಆಪ್ನುಥಃ ಆಪ್ನುಥ, ಆಪ್ನೋಮಿ ಆಪ್ನುವಃ ಆಪ್ನುಮಃ ಆಪ್ಲೃ ವ್ಯಾಪ್ತೌ ವಿ ಉಪಸರ್ಗ. ಲಟ್.

**ಅವ:**—ಈ ವಾಚಾಳನ ಮಾತನ್ನು ಕಷ್ಟನೆಂಬ ಮತ್ತೊಬ್ಬ ದುಷ್ಟನು ಹೀಯಾಳಿಸುತ್ತಾನೆ—

**ಆಕರ್ಣ್ಯೇತ್ಥಂ ತಸ್ಯ ವಾಣೀಮಥಾನ್ಯೋ**
**ಮಾನೀ ತೇಷಾಂ ಮಾನಿನಾಂ ಚಿತ್ತವೇತ್ತಾ ।**
**ಸ್ವಾನಾಂ ಚೇತೋ ನಂದಯನ್ ಮಂದಚೇತಾ**
**ಧೃಷ್ಟಾಮುಚ್ಚೈರ್ವಾಚಮಾಚಷ್ಟ ಕಷ್ಟಃ ॥೧೭॥**

**ಅ:**—ಅಥ ಇತ್ಥಂ ತಸ್ಯ ವಾಣೀಂ ಆಕರ್ಣ್ಯ ಮಾನಿನಾಂ ತೇಷಾಂ ಚಿತ್ತವೇತ್ತಾ ಮಾನೀ ಮಂದಚೇತಾಃ ಅನ್ಯಃ ಕಷ್ಟಃ ಸ್ವಾನಾಂ ಚೇತಃ ನಂದಯನ್ ಧೃಷ್ಟಾಂ ವಾಚಂ ಉಚ್ಚೈಃ ಆಚಷ್ಟ.

**ಅರ್ಥ:**—ಅಥ=ಅನಂತರ, ಇತ್ಥಂ=ಈ ರೀತಿ, ತಸ್ಯ=ಅವನ, ವಾಣೀಂ ಆಕರ್ಣ್ಯ=ಮಾತನ್ನು ಕೇಳಿ, ಮಾನಿನಾಂ ತೇಷಾಂ=ಅಹಂಕಾರಿಗಳಾದ ಆ ಪದ್ಮತೀರ್ಥಮೊದಲಾದವರ, ಚಿತ್ತವೇತ್ತಾ=ಮನಸ್ಸನ್ನು ಅರಿತ, ಮಾನೀ = ಅಹಂಕಾರಿಯಾದ, ಮಂದಚೇತಾಃ = ಅಲ್ಪಬುದ್ಧಿಯುಳ್ಳ, ಅನ್ಯಃ=ಬೇರೆಯವನಾದ, ಕಷ್ಟಃ=ಕಷ್ಟಎಂಬವನು, ಸ್ವಾನಾಂ ಚೇತಃ=ತಮ್ಮವರ ಮನಸ್ಸನ್ನು, ನಂದಯನ್=ಸಂತೋಷಗೊಳಿಸುತ್ತಾ, ಧೃಷ್ಟಾಂ=ಉದ್ಧಟತನದ, ವಾಚಂ=ಮಾತನ್ನು, ಉಚ್ಚೈಃ ಆಚಷ್ಟ= ಘಟ್ಟಿಯಾಗಿ ಹೇಳಿದನು.

**ತಾ:**—ಅನಂತರ ಅವನ ಇಂತಹ ಮಾತನ್ನು ಕೇಳಿ ಅಭಿಮಾನಿ

Rarest Archiver

ಗಳಾದ, ಪದ್ಮತೀರ್ಥಾದಿಗಳ ಹೃದಯವನ್ನರಿತ ಮಂದಬುದ್ಧಿಯ ಕಷ್ಟನೆಂಬ ಮತ್ತೊಬ್ಬ ದುಷ್ಟನು ತನ್ನವರ ಮನಸ್ಸನ್ನು ಸಂತೋಷಪಡಿಸುತ್ತಾ ದಿಟ್ಟತನದಿಂದ ಗಟ್ಟಿಯಾಗಿ ಮಾತನಾಡಿದನು.

ವಿ:—ಮಾನಃ ಅಸ್ಯ ಅಸ್ತೀತಿ ಮಾನೀ, ಮಾನಃ ಏಷಾಂ ಅಸ್ತೀತಿ ಮಾನಿನಃ ತೇಷಾಂ, ಚಿತ್ತಸ್ಯ ವೇತ್ತಾ ಚಿತ್ತವೇತ್ತಾ, ಮಂದಂ ಚೇತಃ ಯಸ್ಯ ಸಃ ;

ಕ್ರಿ:—ಆ + ಅಚಷ್ಟ ಅಚಕ್ಷಾತಾಂ ಅಚಕ್ಷತ, ಅಚಷ್ಠಾಃ ಅಚಕ್ಷಾಥಾಂ ಅಚಡ್ಢ್ವಂ, ಅಚಕ್ಷಿ ಅಚಕ್ಷ್ವಹಿ ಅಚಕ್ಷ್ಮಹಿ. ಚಕ್ಷಿಙ್ ವ್ಯಕ್ತಾಯಾಂ ವಾಚಿ. ಆತ್ಮನೇ. ಲಙ್. ಆಙ್. ಉಪಸರ್ಗ.

ಅವ :—ಆ ಮಾಯಾವಾದ್ಯಭಿಮಾನಿಯ ಮಾತನ್ನು ಕೇಳಿರಿ—

ತೇಜಃಶಂಕಾಮಾತ್ರತೋ ಯದ್ವಿಲೀನಂ
ಧಿಗ್ಭೀರೂಣಾಂ ಮಾನಸಂ ಮಾನಹೀನಂ ।
ಏಕಾಂತೇನ ಪ್ರಾಪ್ತತೇಜೋವಿಲೀನಂ
ಸ್ಥೇಯೋ ಯಸ್ಮಾದ್ ಭಾತಿ ಹೈಯಂಗವೀನಂ ||೧೮||

ಅ:—ಯತ್ ಮಾನಸಂ ತೇಜಃಶಂಕಾಮಾತ್ರತಃ ವಿಲೀನಂ ಭೀರೂಣಾಂ ಮಾನಹೀನಂ ತತ್ ಮಾನಸಂ ಧಿಕ್. ಯಸ್ಮಾತ್ ಏಕಾಂತೇನ ಪ್ರಾಪ್ತತೇಜೋವಿಲೀನಂ ಭೀರೂಣಾಂ ಮಾನಸಂ ಸ್ಥೇಯಃ ಭಾತಿ ||

ಅರ್ಥ:—ಯತ್ ಮಾನಸಂ=ಯಾವ ಮನಸ್ಸು, ತೇಜಃಶಂಕಾ-ಮಾತ್ರತಃ=ಬೆಂಕಿ ಇದೆ ಎಂಬ ಸಂದೇಹಮಾತ್ರದಿಂದಲೇ, ವಿಲೀನಂ= ಕರಗಿಹೋಗುತ್ತದೆಯೋ (ಭಯಪಡುತ್ತದೆಯೋ) ಭೀರೂಣಾಂ = ಭಯ ಶಾಲಿಗಳ (ಹೇಡಿಗಳ), ಮಾನಹೀನಂ=ಅಭಿಮಾನವಿಲ್ಲದ, ತತ್ ಮಾನಸಂ =ಆ ಮನಸ್ಸನ್ನು, ಧಿಕ್=ತಿರಸ್ಕರಿಸಬೇಕು. ಯಸ್ಮಾತ್=ಯಾವ ಹೇಡಿಗಳ ಮನಸ್ಸಿಗಿಂತ, ಏಕಾಂತೇನ = ನಿಯಮದಿಂದ (ಹತ್ತಿರದಲ್ಲಿ,

Rarest Archiver

ಅತಿಶಯವಾಗಿ), ಪ್ರಾಪ್ತತೇಜೋವಿಲೀನಂ = ಸಂಬಂಧಿಸಿದ ಬೆಂಕಿಯಿಂದ ಕರಗಿದ, ಹೈಯಂಗವೀನಂ= ಹೊಸತುಪ್ಪವು, ಸ್ಥೇಯಃ ಭಾತಿ = ಘಟ್ಟಿ ಯೆಂದು ತೋರುತ್ತದೆ.

ತಾ:—ಸಮರ್ಥರಾದ ಪ್ರತಿವಾದಿಗಳು ಇದ್ದಾರೆ ಎಂಬ ಸಂದೇಹ ಮಾತ್ರದಿಂದ ಕರಗಿಹೋಗುವ ಅಂಜುಬುರುಕಮನುಷ್ಯರ ಮಾನವಿಲ್ಲದ ಮನಸ್ಸಿಗೆ ಧಿಕ್ಕಾರ. ಆ ಪುಕ್ಕಲು ಮನಸ್ಸಿಗಿಂತ ಬೆಂಕಿಯು ಮುಟ್ಟಿದ ಮೇಲೆ ಕರಗುವ ಹೊಸಬೆಣ್ಣೆಯೇ ಧೈರ್ಯಶಾಲಿಯೆಂದು ತೋರುತ್ತದೆ. ಬೆಣ್ಣೆಯು ಬೆಂಕಿ ಮುಟ್ಟಿದ ಅನಂತರವೇ ಕರಗುತ್ತದೆ. 'ನಿನ್ನನ್ನು ಕರಗಿಸುವ ಬೆಂಕಿ ಇದೆ' ಎಂದ ಮಾತ್ರಕ್ಕೆ ಹೆದರುವುದಿಲ್ಲ. ಆದರೆ ಪುಕ್ಕರ ಮನಸ್ಸು 'ತೇಜಸ್ವಿಗಳು ನಮಗಿಂತ ಸಮರ್ಥರು ಬಂದರೆ ನಮ್ಮ ಗತಿಯೇನು' ಎಂಬ ಸಂದೇಹದಿಂದಲೇ ಕರಗಿಹೋಗುತ್ತದೆ. ಹೇಡಿಗಳು ತೇಜಸ್ವಿಗಳನ್ನು ಸ್ಮರಿಸಿದ ಕೂಡಲೇ ಓಡಲು ತಯಾರುಮಾಡುತ್ತಾರೆ ಆದುಕಾರಣ ಭೀರುಗಳ ಮನಸ್ಸಿಗಿಂತ ಬೆಣ್ಣೆಯೇ ಘಟ್ಟಿ ಎಂದು ಅಭಿಪ್ರಾಯ.

ವಿ:—ತೇಜಸಃ ಶಂಕಾ ತೇಜಃಶಂಕಾ, ತೇಜಃಶಂಕಾ ಏವ ತೇಜಃ ಶಂಕಾಮಾತ್ರಂ, ತಸ್ಮಾತ್ ಇತಿ ತೇಜಃಶಂಕಾಮಾತ್ರತಃ, ಮಾನೇನ ಹೀನಂ, 'ಮಾನಸಂ ಧಿಕ್' ಧಿಕ್‌ಶಬ್ದಯೋಗವಿದ್ದಾಗ ದ್ವಿತೀಯಾ. ಪ್ರಾಪ್ತಂ ಚ ತತ್ ತೇಜಶ್ಚ, ಪ್ರಾಪ್ತತೇಜಸಾ ವಿಲೀನಂ, ಸ್ಥೇಯಸ್, ಸ್ಥೇಯಃ ಸ್ಥೇಯಸೀ ಸ್ಥೇಯಾಂಸಿ; ಹ್ಯಃ ಗೋದೋಹೋದ್ಭವಂ ಘೃತಂ= ನಿನ್ನೆ ಹಾಲುಕರೆದು ಹೆಪ್ಪುಹಾಕಿ ಈ ದಿನ ಬೆಣ್ಣೆ ಕಡೆದು ತಯಾರುಮಾಡಿದ ತುಪ್ಪ ಹೈಯಂಗವೀನ; **ಹೈಯಂಗವೀನಂ ಸಂಜ್ಞಾಯಾಂ** ಎಂಬ ಸೂತ್ರದಿಂದ ನಿಪಾತ.

ಕ್ರಿ:—ಭಾತಿ ಭಾತಃ ಭಾಂತಿ ಇತ್ಯಾದಿ, ಭಾ ದೀಪ್ತೌ. ಲಟ್.

ಅವ:—ಈ ಪದ್ಮತೀರ್ಥರಿರುವಾಗ ನಮಗೇನು ಭಯ ಎಂದು ಆ ಕಷ್ಟನು ಹೊಗಳಿದನು—

Rarest Archives

ಯೇಷಾಂ ವಿದ್ಯಾ ಶಾಂಕರೀ ಶಂಕರೀ ನೋ
ದೇವಾದೀನಾಂ ಬಾಧ್ಯತಾಂ ಸಾಧಯಂತೀ।
ಶೌಕ್ರೀವಾಲಂ ಲಜ್ಜಯೇದ್ದೇವಪೂಜ್ಯಂ
ತೇಷಾಮೇಷಾಂ ಸನ್ನಿಧೌ ಕೋ ವಿಷಾದಃ ॥೧೯॥

ಅ:—ಯೇಷಾಂ ನಃ ಶಂಕರೀ ದೇವಾದೀನಾಂ ಬಾಧ್ಯತಾಂ ಸಾಧಯಂತೀ ಶಾಂಕರೀ ವಿದ್ಯಾ ದೇವಪೂಜ್ಯಂ ಶೌಕ್ರೀ ಇವ ಲಜ್ಜಯೇತ್, ತೇಷಾಂ ಏಷಾಂ ಸನ್ನಿಧೌ ವಿಷಾದಃ ಕಃ ?

ಅರ್ಥ :—ಯೇಷಾಂ= ಯಾವ ಪದ್ಮತೀರ್ಥಾದಿಗಳ, ನಃ ಶಂಕರೀ= ನಮಗೆ ಸುಖವನ್ನುಂಟುಮಾಡುವ, ದೇವಾದೀನಾಂ = ದೇವತೆಗಳೇ ಮೊದಲಾದವರಿಗೆ, ಬಾಧ್ಯತಾಂ = ಬಾಧಕಜ್ಞಾನವಿಷಯತ್ವವನ್ನು (ಮಿಥ್ಯಾತ್ವವನ್ನು) ಸಾಧಯಂತೀ=ಸಮರ್ಥಿಸುವ, ಶಾಂಕರೀ ವಿದ್ಯಾ= ಶಂಕರಾಚಾರ್ಯರ ವಿದ್ಯೆಯು, ದೇವಪೂಜ್ಯಂ= ಬೃಹಸ್ಪತ್ಯಾಚಾರ್ಯರನ್ನು, ಶೌಕ್ರೀ ಇವ = ಶುಕ್ರಾಚಾರ್ಯರ ಶೂನ್ಯವಿದ್ಯೆಯಂತೆ, ಲಜ್ಜಯೇತ್ = ನಾಚಿಕೆಗೊಳಿಸೀತೋ, ತೇಷಾಂ ಏಷಾಂ ಸನ್ನಿಧೌ= ಅಂತಹ ಈ ಪದ್ಮತೀರ್ಥಾದಿಗಳ ಸಾಮೀಪ್ಯದಲ್ಲಿ, ವಿಷಾದಃ ಕಃ= ವ್ಯಥೆಯು ಯಾವುದು ?

ತಾ:—ನಮಗೆಲ್ಲರಿಗೂ ಆನಂದವನ್ನುಂಟುಮಾಡುವ ಶಂಕರಾಚಾರ್ಯರ ಈ ಮಾಯಾವಾದಶಾಸ್ತ್ರವು, 'ದೇವತೆಗಳು ಮನುಷ್ಯರು ಪಶುಪಕ್ಷ್ಯಾದಿಗಳು ಇವೆಲ್ಲವೂ ಬ್ರಹ್ಮಾಪರೋಕ್ಷಜ್ಞಾನವಾದ ಕೂಡಲೇ ಮಿಥ್ಯಾ (ಸುಳ್ಳು) ಎಂದು ತೋರುವುವು' ಎಂದು ತಿಳಿಸುತ್ತದೆ. ಇದು ಶುಕ್ರಾಚಾರ್ಯರ ಮಾಂತ್ರಿಕವಿದ್ಯೆಯಂತೆ, ಬೃಹಸ್ಪತ್ಯಾಚಾರ್ಯರನ್ನು ನಾಚಿಸುತ್ತದೆ. ಹೇಗೆ ಶುಕ್ರಾಚಾರ್ಯರ ಆಭಿಚಾರಿಕವಿದ್ಯೆಯು ದೇವತೆಗಳ ಗುರುಗಳಾದ ಬೃಹಸ್ಪತ್ಯಾಚಾರ್ಯರನ್ನು ಸೋಲಿಸುತ್ತದೆಯೋ, ನಾಚಿಕೆಗೊಳಿಸುತ್ತದೆಯೋ, ಅದರಂತೆ ನಮ್ಮ ಅದ್ವೈತವಿದ್ಯೆಯೂ ದೇವತೆಗಳೇ ಮೊದಲಾದ ಸಮಸ್ತಪ್ರಪಂಚವನ್ನೂ ಮಿಥ್ಯೆಯೆಂದು ಸಾಧಿಸುತ್ತದೆ,

Rarest Archiver

ದ್ವೈತವನ್ನು ಸೋಲಿಸುತ್ತದೆ. ಅಂತಹ ವಿದ್ಯೆಯು ಪದ್ಮತೀರ್ಥಾದಿಗಳಲ್ಲಿ ಇದ್ದಮೇಲೆ ಅವರ ಸನ್ನಿಧಿಯಲ್ಲಿರುವ ನಮಗೇಕೆ ಗಾಬರಿ?

ವಿ:—ಶಂಕರಸ್ಯ ಇಯಂ ಶಾಂಕರೀ, ಶಂ ಕರೋತೀತಿ ಶಂಕರೀ, ದೇವಾಃ ಆದಯಃ ಯೇಷಾಂ ತೇ ದೇವಾದಯಃ ತೇಷಾಂ, ಬಾಧ್ಯಂತೇ ಇತಿ ಬಾಧ್ಯಾಃ, ತೇಷಾಂ ಭಾವಃ ಬಾಧ್ಯತಾ ತಾಂ, ಶುಕ್ರಸ್ಯ ಇಯಂ ಶೌಕ್ರೀ, ದೇವೈಃ ಪೂಜ್ಯಃ ದೇವಪೂಜ್ಯಃ ತಂ,

ಕ್ರಿ:—ಲಜ್ಜಯೇತ್ ಲಜ್ಜಯೇತಾಂ ಲಜ್ಜಯೇಯುಃ ಇತ್ಯಾದಿ, ಓಲಸ್ಜೀ (ಲಜ್ಜ್) ವ್ರೀಡಾಯಾಂ ಣಿಜಂತ ಲಿಙ್.

ಅವ:—ಅದ್ವೈತಶಾಸ್ತ್ರದ ಯುಕ್ತಿಗಳಿಂದ ದ್ವೈತಿಗಳನ್ನು ಜಯಿಸಲು ಸಾಧ್ಯವಾಗದಿದ್ದರೆ ಈ ಪದ್ಮತೀರ್ಥಾದಿಗಳು ಮಾರಣಾದಿಮಂತ್ರಶಕ್ತಿಯಿಂದ ಜಯಿಸುವರು—

ಯದ್ಯದ್ವೈತಂ ಕರ್ಕಶೈರ್ಗೌಣತರ್ಕೈ-
ರುದ್ಧಂ ಸಾಧ್ಯಂ ನೈವ ಭಾತ್ಯಸ್ತು ತಾವತ್ ।
ಷಟ್ಕರ್ಮಜ್ಞೈರ್ದಿವ್ಯ ಮಂತ್ರೌಷಧಾಢ್ಯೈ-
ರೇತೈರ್ಗುಪ್ತಾನ್ನೋ ನ ಜೇತಾ ಹಿ ಕೋಽಪಿ ॥೨೦॥

ಅ:—ಕರ್ಕಶೈಃ ಗೌಣತರ್ಕೈಃ ರುದ್ಧಂ ಅದ್ವೈತಂ ಸಾಧ್ಯಂ ನ ಏವ ಭಾತಿ ಅಸ್ತು ತಾವತ್ । ಷಟ್ಕರ್ಮಜ್ಞೈಃ ದಿವ್ಯಮಂತ್ರೌಷಧಾಢ್ಯೈಃ ಏತೈಃ ಗುಪ್ತಾನ್ ನಃ ಜೇತಾ ಕಃ ಅಪಿ ನಹಿ.

ಅರ್ಥ:—ಕರ್ಕಶೈಃ=ಕಠಿನವಾದ, (ಖಂಡಿಸಲಾಗದ) ಗೌಣತರ್ಕೈಃ =ಸಗುಣತ್ವಸಾಧಕವಾದ ತತ್ತ್ವವಾದಿಗಳ ಯುಕ್ತಿಗಳಿಂದ, ರುದ್ಧಂ= ಬಾಧಿತವಾದ, ಅದ್ವೈತಂ=ಜೀವೇಶ್ವರಾಭೇದವು, ಸಾಧ್ಯಂ ನ ಏವ= ಸಾಧಿಸಲು ಯೋಗ್ಯವಾದುದು ಅಲ್ಲವೇ ಅಲ್ಲವೆಂದು, ಯದಿ ಭಾತಿ= ತೋರಿದರೆ, ಅಸ್ತು ತಾವತ್=ಇರಲಿ, ಷಟ್ಕರ್ಮಜ್ಞೈಃ=ಚಾಲನ, ವಶೀಕರಣ, ಸ್ತಂಭನ, ವಿದ್ವೇಷಣ, ಉಚ್ಚಾಟನ, ಮಾರಣಗಳೆಂಬ ಆರು

Rarest Archiver

ಮಾಂತ್ರಿಕಕರ್ಮಗಳನ್ನು ಅರಿತ, ದಿವ್ಯ = ಶ್ರೇಷ್ಠವಾದ, ಮಂತ್ರ = ಮಂತ್ರಗಳು, ಔಷಧ = ಔಷಧಗಳು ಇವುಗಳಿಂದ, ಆಢ್ಯೈಃ = ಸಂಪನ್ನರಾದ, ಏತೈಃ = ಈ ಪದ್ಮತೀರ್ಥರಿಂದ, ಗುಪ್ತಾನ್ = ಕಾಪಾಡಲ್ಪಟ್ಟ, ನಃ = ನಮ್ಮನ್ನು, ಜೇತಾ = ಜಯಿಸುವವನು, ಕಃ ಅಪಿ = ಯಾವನೂ, ನ ಹಿ = ಇಲ್ಲ.

ತಾ:—ಇನ್ನು ದ್ವೈತಿಗಳ ಯುಕ್ತಿಗಳು ನಿರಾಕರಿಸಲು ಅಸಾಧ್ಯವಾಗಿವೆ. ಬ್ರಹ್ಮನಿಗೆ ಸಗುಣತ್ವಸಾಧಕವಾದ ಅವರ ಯುಕ್ತಿಗಳಿಂದ ಉಂಟಾದ ಪ್ರತಿರೋಧವನ್ನು ತಡೆಯಲು ಅಸಾಧ್ಯವೆನಿಸಿ ಅದ್ವೈತವನ್ನು ಸಾಧಿಸಲು ಅಸಾಧ್ಯವೆನಿಸಿದರೂ ಸಹ ನಾವು ಚಿಂತೆ ಮಾಡಬೇಕಾಗಿಲ್ಲ. ಚಾಲನ, ವಶೀಕರಣ, ಸ್ತಂಭನ, ವಿದ್ವೇಷಣ, ಉಚ್ಚಾಟನ, ಮತ್ತು ಮಾರಣವೆಂಬ ಆರು ತಂತ್ರಗಳನ್ನು ಅರಿತ ಪದ್ಮತೀರ್ಥರು ನಮಗೆ ಬೆಂಬಲವಾಗಿದ್ದಾರೆ. ಅವರು ಮಂತ್ರ ಔಷಧಗಳನ್ನು ಬಲ್ಲರು. ಅವರಿಂದ ರಕ್ಷಿತರಾದ ನಮ್ಮನ್ನು ಯಾರೂ ಗೆಲ್ಲಲಾರರು.

ವಿ:—ಗುಣಾನಾಂ ಇಮೇ ಗೌಣಾಃ, ಗೌಣಾಶ್ಚ ತೇ ತರ್ಕಾಶ್ಚ ಗೌಣತರ್ಕಾಃ ತೈಃ, ಷಟ್ ಚ ತಾನಿ ಕರ್ಮಾಣಿ ಚ ಷಟ್‌ಕರ್ಮಾಣಿ, ತಾನಿ ಜಾನಂತೀತಿ ಷಟ್‌ಕರ್ಮಜ್ಞಾಃ ತೈಃ, ಮಂತ್ರಾಶ್ಚ ಔಷಧಾನಿ ಚ, ಮಂತ್ರೌಷಧಾನಿ ತಾನಿ ಜಾನಂತೀತಿ ಮಂತ್ರೌಷಧಜ್ಞಾಃ ತೈಃ.

ಕ್ರಿ:—ಭಾತಿ ಭಾತಃ ಭಾಂತಿ ಇತ್ಯಾದಿ, ಭಾ ದೀಪ್ತೌ ಲಟ್.

ಅವ:—ದ್ವೈತವನ್ನು ನಿರ್ಮೂಲನಮಾಡುವುದು ಅಸಾಧ್ಯ, ಆದರೆ ನಾವು ಸುಮ್ಮನಿರಬಾರದು—

**ಯದ್ಯಪ್ಯೇವಂ ನಹ್ಯುಪೇಕ್ಷ್ಯೋ ವಿಪಕ್ಷಃ**
**ಕಿಂತು ಪ್ರಾಪ್ತೋ ನಾಧುನಾಕ್ರಂದಕಾಲಃ।**
**ಅಪ್ಯದ್ವಂದ್ವಸ್ವಾತ್ಮಬೋಧಪ್ರತೀತ್ಯೈ**
**ರಾಚಾರ್ಯೈರ್ಯಚ್ಛಂಕ್ಯತೇ ಶಂಕರಾದ್ಯೈಃ ॥೨೧॥**

ಅ:—ಯದ್ಯಪಿ ಏವಂ ವಿಪಕ್ಷಃ ಉಪೇಕ್ಷ್ಯಃ ನಹಿ. ಕಿಂತು ಅಧುನಾ

Rarest Archiver

ಆಕ್ರಂದಕಾಲಃ ನ ಪ್ರಾಪ್ತಃ। ಅದ್ವಂದ್ವಸ್ವಾತ್ಮಬೋಧಪ್ರತೀತೈಃ ಶಂಕರಾದ್ಯೈಃ ಆಚಾರ್ಯೈಃ ಅಪಿ ಯತ್ ಶಂಕ್ಯತೇ.

**ಅರ್ಥ:**—ಯದಿ ಅಪಿ = ವಿಚಾರಮಾಡಿದಾಗ, ಏವಂ = ಹೀಗೆಯೇ, ವಿಪಕ್ಷಃ = ತತ್ತ್ವವಾದಿಸಿದ್ಧಾಂತವು, ಉಪೇಕ್ಷ್ಯಃ ನಹಿ = ಉದಾಸೀನ ಮಾಡಲು ಯೋಗ್ಯವಲ್ಲ. ಕಿಂತು = ಆದರೆ, ಅಧುನಾ = ಈಗ, ಆಕ್ರಂದ ಕಾಲಃ = ಗೋಳಾಡುವ ಸಮಯವು, ನ ಪ್ರಾಪ್ತಃ = ಒದಗಿಲ್ಲ. ಅದ್ವಂದ್ವ = ಅಸದೃಶವಾದ, ಸ್ವಾತ್ಮಬೋಧ=ಜೀವಬ್ರಹ್ಮೈಕ್ಯಜ್ಞಾನದಲ್ಲಿ, ಪ್ರತೀತೈಃ = ಪ್ರಸಿದ್ಧರಾದ, ಶಂಕರಾದ್ಯೈಃ = ಶಂಕರರೇ ಮೊದಲಾಗಿ ಉಳ್ಳ, ಆಚಾರ್ಯೈಃ ಅಪಿ = ಸಿದ್ಧಾಂತಪ್ರವರ್ತಕರಾದ ಉಪದೇಶಕರಿಂದಲೂ, ಯತ್ = ಯಾವ ಪರಸಿದ್ಧಾಂತದ ದೆಸೆಯಿಂದ, ಶಂಕ್ಯತೇ = ಕಳವಳ ಹೊಂದಲ್ಪಡುತ್ತದೆಯೋ ಅಂತಹ ಸಿದ್ಧಾಂತವು ಉಪೇಕ್ಷಣೀಯವಲ್ಲ.

**ತಾ:**—ಹಾಗಿದ್ದರೂ ಕೂಡ ನಾವು ಈಗ ಅದ್ವೈತಸಿದ್ಧಾಂತಕ್ಕೆ ವಿರುದ್ಧವಾಗಿರುವ ತತ್ತ್ವವಾದಿಗಳ ದ್ವೈತಸಿದ್ಧಾಂತವನ್ನು ಉಪೇಕ್ಷಿಸ ಬಾರದು. ತತ್ತ್ವವಾದಿಸಿದ್ಧಾಂತವನ್ನು ಜಯಿಸದೆ ಇರಬಾರದು. ಆದರೆ ಈಗಲೇ ಗೋಳಾಡುವ ಕಾಲ ಬಂದಿಲ್ಲ. ಜೀವಬ್ರಹ್ಮೈಕ್ಯವನ್ನು ಸಾಕ್ಷಾತ್ಕಾರ ಮಾಡಿಕೊಂಡಿರುವವರು ಎಂದು ಪ್ರಸಿದ್ಧರಾದ ಶಂಕರಾಚಾರ್ಯರೇ ಮೊದಲಾದ ಸಿದ್ಧಾಂತಸ್ಥಾಪಕರೂ ಕೂಡ ದ್ವೈತವಾದವನ್ನು ನಿರಾಕರಿಸಲು ಸಾಧ್ಯವೋ ಅಸಾಧ್ಯವೋ ಎಂದು ಸಂದೇಹವನ್ನು ವ್ಯಕ್ತಮಾಡಿರುವುದರಿಂದ ನಾವಾದರೂ 'ಈ ಪದ್ಮತೀರ್ಥಾದಿಗಳಾದರೋ ಅದನ್ನು ಜಯಿಸಿಬಿಡು ತ್ತಾರೆ.' ಎಂದು ಹೇಳುವುದು ಹೇಗೆ? ಆದರೆ ಶಕ್ತಿಮೀರಿ ಈ ವಿರುದ್ಧ ಸಿದ್ಧಾಂತವನ್ನು ಖಂಡಿಸಲು ಯತ್ನಿಸಬೇಕು.

**ವಿ:**—ಉಪೇಕ್ಷಿತುಂ ಯೋಗ್ಯಃ ಉಪೇಕ್ಷ್ಯಃ ಆಕ್ರಂದಸ್ಯ ಕಾಲಃ, ನ ವಿದ್ಯತೇ ದ್ವಂದ್ವಂ ಯಸ್ಯ ಸಃ ಅದ್ವಂದ್ವಃ, ಆತ್ಮನಃ ಬೋಧಃ ಆತ್ಮ-ಬೋಧಃ, ಶೋಭನಶ್ಚಾಸೌ ಆತ್ಮಬೋಧಶ್ಚ, ಸ್ವಾತ್ಮಬೋಧಃ ಅದ್ವಂ-ದ್ವಶ್ಚಾಸೌ ಸ್ವಾತ್ಮಬೋಧಶ್ಚ, ಅದ್ವಂದ್ವಸಾತ್ಮಬೋಧೇನ ಪ್ರತೀತಾಃ

Rarest Archiver

ತೈಃ, ಶಂಕರಃ ಆದ್ಯಃ ಯೇಷಾಂ ತೇ, ತೈಃ|| ಕ್ರಿಯಾ:- ಶಂಕ್ಯತೇ ಶಂಕ್ಯೇತೇ ಶಂಕ್ಯಂತೇ, ಶಕಿ ಶಂಕಾಯಾಂ ಕರ್ಮಣಿ ಲಟ್ ; (ಆಚಾರ್ಯಾಃ ಶಂಕಂತೇ ಕರ್ತರಿ.)

ಅವ:—ನಾವು ಮಾಡಬೇಕಾದ ಉಪಾಯವೇನೆಂದು ಹೇಳುತ್ತೇನೆ, ಕೇಳಿರಿ—

**ಪಾರಂಪರ್ಯೇಣಾಗತಂ ತತ್ತ್ವಶಾಸ್ತ್ರಂ**
**ಹಂತೋತ್ಸನ್ನಂ ನೂತನೇನೇತ್ಯುದೀರ್ಯ |**
**ತೇಷಾಂ ದೋಷಾ ವರ್ಣನೀಯಾ ವಿದಗ್ಧೈಃ**
**ಸಂತೋsಸಂತೋ ವಾಪಿ ಮಧ್ಯಸ್ಥಲೋಕೇ ||೨೨||**

ಅ:—ವಿದಗ್ಧೈಃ ಮಧ್ಯಸ್ಥಲೋಕೇ "ನೂತನೇನ ಪಾರಂಪರ್ಯೇಣ ಆಗತಂ ತತ್ವಶಾಸ್ತ್ರಂ ಉತ್ಸನ್ನಂ ಹಂತ" ಇತಿ ಉದೀರ್ಯ ತೇಷಾಂ ಸಂತಃ ಅಸಂತಃ ವಾ ಅಪಿ ದೋಷಾಃ ವರ್ಣನೀಯಾಃ.

ಅರ್ಥ:—ವಿದಗ್ಧೈಃ = ಕುಶಲರಾದ ನಮ್ಮವರಿಂದ, ಮಧ್ಯಸ್ಥ-ಲೋಕೇ = ಉದಾಸೀನರಾಗಿರುವ ಮಧ್ಯಸ್ಥಜನರಲ್ಲಿ, ನೂತನೇನ = ಹೊಸ ಶಾಸ್ತ್ರದಿಂದ, ಪಾರಂಪರ್ಯೇಣ = ಅನಾದಿಕಾಲದಿಂದ, ಆಗತಂ = ಬಂದಿರುವ, ತತ್ವಶಾಸ್ತ್ರಂ = ಶಾಂಕರವೇದಾಂತಶಾಸ್ತ್ರವು, ಉತ್ಸನ್ನಂ = ಹಾಳಾಯಿತು, ಹಂತ = ಅಯ್ಯೋ!, ಇತಿ ಉದೀರ್ಯ = ಹೀಗೆಂದು ಹೇಳಿ, ತೇಷಾಂ = ಆ ಮಧ್ವಾಚಾರ್ಯರೇ ಮೊದಲಾದವರ, ಸಂತಃ = ಇರುವ, ಅಸಂತಃ ವಾSಪಿ = ಅಥವಾ ಇಲ್ಲದಿರುವ, ದೋಷಾಃ = ದೋಷಗಳು, ವರ್ಣನೀಯಾಃ = ಹೇಳಲ್ಪಡಬೇಕು.

ತಾ:—ನಮ್ಮಲ್ಲಿ ಬುದ್ಧಿವಂತರಾದ ಕೆಲವರು ಎರಡು ಮತಗಳಲ್ಲಿಯೂ ಉದಾಸೀನರಾಗಿರುವ ಮಧ್ಯಸ್ಥಜನರಲ್ಲಿ ಹೋಗಿ ಹೊಸದಾಗಿ ಬಂದಿರುವ ಮಧ್ವಾಚಾರ್ಯರ ಹೊಸ ಶಾಸ್ತ್ರದಿಂದ ಅನಾದಿಕಾಲದಿಂದ ಬಂದಿರುವ ನಮ್ಮ ಶಾಸ್ತ್ರವು ಹಾಳಾಯಿತು. ಇದು ಬಹಳ ದುಃಖಕರ ಎಂದು ಹೇಳಿ ಆ ಮಧ್ವಾನುಯಾಯಿಗಳ ಮೇಲೆ ಇರುವ ದೋಷಗಳನ್ನಾಗಲೀ, ಇಲ್ಲ

Rarest Archiver

ದಿರುವ ದೋಷಗಳನ್ನಾಗಲೀ ವರ್ಣಿಸಿ ಹೇಳಬೇಕು. ಹೀಗೆ ದೋಷಾರೋಪಣಮಾಡುವುದರಿಂದ ದ್ವೈತಸಿದ್ಧಾಂತದ ಪ್ರಸಾರವನ್ನು ತಡೆಗಟ್ಟಿದಂತಾಗುತ್ತದೆ. ಮಧ್ಯಸ್ಥರಿಗೆ ಮಧ್ವಮತದಲ್ಲಿ ದ್ವೇಷವುಂಟಾಗುವುದಕ್ಕೂ ಅನುಕೂಲವಾಗುತ್ತದೆ.

ವಿ:—ತತ್ವಸ್ಯ ಶಾಸ್ತ್ರಂ, ಮಧ್ಯಸ್ಥಶ್ಚ ಅಸೌ ಲೋಕಶ್ಚ, ತಸ್ಮಿನ್.

ಅವ :—ಇನ್ನೂ ಉಪಾಯವನ್ನು ಕೇಳಿರಿ—

**ಸ್ವಾಭಿಪ್ರಾಯೋ ಬ್ರಹ್ಮವತ್ ಸ್ಯಾದವಾಚ್ಯೋ**
**ಮಾಯಾಶಕ್ತ್ಯಾ ಸರ್ವನಿರ್ವಾಹಸಿದ್ಧಿಃ ।**
**ಇತ್ಥಂ ನೀತ್ಯಾ ಶಾಸ್ತ್ರನೀತ್ಯೇವ ಬಾಧ್ಯಃ**
**ಸರ್ವೋ ಲೋಕಃ ಸ್ವಾತ್ಮನೋ ಯಃ ಪರಃ ಸ್ಯಾತ್ ॥೨೩॥**

ಅ:—ಸ್ವಾಭಿಪ್ರಾಯಃ ಬ್ರಹ್ಮವತ್ ಅವಾಚ್ಯಃ ಸ್ಯಾತ್, ಮಾಯಾಶಕ್ತ್ಯಾ ಸರ್ವನಿರ್ವಾಹಸಿದ್ಧಿಃ, ಇತ್ಥಂ ಶಾಸ್ತ್ರನೀತ್ಯಾ ಇವ ನೀತ್ಯಾ ಸ್ವಾತ್ಮನಃ ಪರಃ ಯಃ ಸಃ ಸರ್ವಃ ಅಪಿ ಬಾಧ್ಯಃ ಸ್ಯಾತ್.

ಅರ್ಥ :—ಸ್ವಾಭಿಪ್ರಾಯಃ = ನಮ್ಮ ಅಭಿಪ್ರಾಯವು, ಬ್ರಹ್ಮವತ್ = ಪರಬ್ರಹ್ಮನಂತೆ, ಅವಾಚ್ಯಃ = ಹೇಳಲು ಅನರ್ಹವು, ಸ್ಯಾತ್ = ಆಗಬೇಕು. ಮಾಯಾಶಕ್ತ್ಯಾ = ಮಾಯೆಂಬ ಅಜ್ಞಾನದ ಸಾಮರ್ಥ್ಯದಿಂದ, ಸರ್ವ = ಎಲ್ಲಾ ಕಾರ್ಯದ (ವ್ಯವಹಾರದ), ನಿರ್ವಾಹಸಿದ್ಧಿಃ = ಹೊಂದಾಣಿಕೆಯು ಕೈಗೂಡುವಿಕೆಯು (ಭವತಿ = ಆಗುತ್ತದೆ), ಇತ್ಥಂ = ಈ ರೀತಿ, ಶಾಸ್ತ್ರನೀತ್ಯಾ ಇವ = ನಮ್ಮ ಸಿದ್ಧಾಂತದ ನೀತಿಯಿಂದ ಹೇಗೋ ಹಾಗೆ, ನೀತ್ಯಾ = ಉಪಾಯದಿಂದ, ಸ್ವಾತ್ಮನಃ = ನಮಗೆ, ಪರಃ = ವಿರುದ್ಧನಾದವನು, ಯಃ = ಯಾವನೋ, ಸರ್ವಃ = ಆ ಎಲ್ಲ, ಲೋಕಃ = ಜನರು, ಬಾಧ್ಯಃ = ಖಂಡಿಸಲು ಯೋಗ್ಯರು, ಸ್ಯಾತ್ = ಆಗಬೇಕು.

ತಾ:—'ಬ್ರಹ್ಮನು ಅವಾಚ್ಯನು, ಮಾಯಾಶಕ್ತಿಯಿಂದ ಎಲ್ಲಾ ಕಾರ್ಯಗಳ ಮತ್ತು ವ್ಯವಹಾರಗಳ ನಿರ್ವಾಹವಾಗುತ್ತದೆ.' ಇದು ನಮ್ಮ ಶಾಸ್ತ್ರನೀತಿಯು, 'ಸಮಸ್ತಜೀವರೂ ಬ್ರಹ್ಮಾಭಿನ್ನರು, ಬ್ರಹ್ಮನಿಗಿಂತ

Rarest Archiver

ಭಿನ್ನವಾದ ಪ್ರಪಂಚವೇ ಇಲ್ಲ. ಮಾಯೆಯಿಂದ ಪ್ರಪಂಚವು ಬ್ರಹ್ಮಭಿನ್ನವಾಗಿ ಕಾಣಿಸುತ್ತದೆ.' ಇತ್ಯಾದಿವಿಷಯಗಳನ್ನು ಸಾಧಿಸುವಂತೆ, ನಾವು ಅದೇರೀತಿಯಿಂದ ನಮ್ಮ ಅಭಿಪ್ರಾಯವನ್ನು ಬಹಿರಂಗ ಪಡಿಸಬಾರದು. 'ನಮ್ಮ ಮತವನ್ನೇ ಆಶ್ರಯಿಸಿರಿ. ತತ್ತ್ವವಾದವನ್ನು ತ್ಯಜಿಸಿರಿ' ಎಂದು ಹೇಳಬಾರದು. ಎಲ್ಲಾ ಕಾರ್ಯವನ್ನು ಕಪಟದಿಂದ ಸಾಧಿಸಬೇಕು. ನಮಗೆ ವಿರುದ್ಧರಾದ ಎಲ್ಲರನ್ನೂ ಹೀಗೆಯೇ ನಿರಾಕರಿಸಬೇಕು.

ವಿ:—ಸ್ವೇಷಾಂ ಅಭಿಪ್ರಾಯಃ, ಬ್ರಹ್ಮಣಾ ತುಲ್ಯಂ ಬ್ರಹ್ಮವತ್, ನ ವಾಚ್ಯಃ, ಮಾಯಾಯಾಃಶಕ್ತಿಃ ತಯಾ, ಸರ್ವಸ್ಯ ನಿರ್ವಾಹಃ, ತಸ್ಯ ಸಿದ್ಧಿಃ, ಶಾಸ್ತ್ರಸ್ಯ ನೀತಿಃ ತಯಾ, ಸ್ವಶ್ಚ (ಸ್ವಕೀಯಶ್ಚ) ಅಸೌ ಆತ್ಮಾ ಚ, ತಸ್ಮಾತ್ ;

ಕ್ರಿಯಾ:—ಸ್ಯಾತ್ ಸ್ಯಾತಾಂ ಸ್ಯುಃ, ಸ್ಯಾಃ ಸ್ಯಾತಂ ಸ್ಯಾತ ಇತ್ಯಾದಿ. ಅಸ ಭುವಿ ವಿಧಿಲಿಙ್.

ಅವ:—ಇದಕ್ಕಿಂತಲೂ ಹೆಚ್ಚಿನ ಉಪಾಯವು ಇನ್ನೊಂದಿದೆ—

**ಗ್ರಾಮೇ ಗ್ರಾಮೇ ವಾರ್ಯತಾಂ ಮಾನನೈಷಾಂ**
**ಪೂರ್ವಂ ಪೂರ್ವಂ ಸಾಮಪೂರ್ವೈರುಪಾಯೈಃ ।**
**ಸಂಪ್ರಾಪ್ತಾನಾಂ ಮಾನಭಂಗಾಯ ಕಾರ್ಯಂ**
**ಗ್ರಂಥಾಕರ್ಷಾದ್ಯುದ್ಯತೈರಸ್ಮದೀಯೈಃ ॥೨೪॥**

ಅ:—ಗ್ರಾಮೇ ಗ್ರಾಮೇ ಏಷಾಂ ಮಾನನಾ ಸಾಮಪೂರ್ವೈಃ ಉಪಾಯೈಃ ಪೂರ್ವಂ ಪೂರ್ವಂ ವಾರ್ಯತಾಂ. ಸಂಪ್ರಾಪ್ತಾನಾಂ ಮಾನಭಂಗಾಯ ಉದ್ಯತೈಃ ಅಸ್ಮದೀಯೈಃ ಗ್ರಂಥಾಕರ್ಷಾದಿ ಕಾರ್ಯಂ ।

ಅರ್ಥ:—ಗ್ರಾಮೇ ಗ್ರಾಮೇ = ಪ್ರತಿಹಳ್ಳಿಯಲ್ಲಿಯೂ, ಏಷಾಂ = ಈ ಮಾಧ್ವತತ್ತ್ವವಾದಿಗಳ, ಮಾನನಾ = ಸನ್ಮಾನವು, ಸಾಮಪೂರ್ವೈಃ = ಸಾಂತ್ವನೆ ಮೊದಲಾದ, ಉಪಾಯೈಃ = ಯುಕ್ತಿಗಳಿಂದ, ಪೂರ್ವಂ ಪೂರ್ವಂ = ಗ್ರಾಮಪ್ರವೇಶಕ್ಕಿಂತ ಮೊದಲೇ, ವಾರ್ಯತಾಂ = ತಡೆಯಲ್ಪಡಲಿ. ಸಂಪ್ರಾಪ್ತಾನಾಂ = ಗ್ರಾಮಪ್ರವೇಶಮಾಡಿದವರ, ಮಾನ-

Rarest Archiver

ಭಂಗಾಯ = ಅಭಿಮಾನಖಂಡನೆಗಾಗಿ, ಉದ್ಯತೈಃ = ಸಿದ್ಧರಾಗಿರುವ, ಅಸ್ಮದೀಯೈಃ = ನಮ್ಮವರಿಂದ, ಗ್ರಂಥಾಕರ್ಷಾದಿ = ಗ್ರಂಥಗಳನ್ನು ಕಿತ್ತು ಕೊಳ್ಳುವುದೇ ಮೊದಲಾದುದು, ಕಾರ್ಯಂ = ಮಾಡಲ್ಪಡತಕ್ಕದ್ದು.

ತಾ:—ನಮ್ಮವರು ಈ ಮಧ್ವಮತಪ್ರಸಾರಕರು ಬರಲಿರುವ ಪ್ರತಿ ಹಳ್ಳಿಗೂ ಹೋಗಿ, ಸಾಮೋಪಾಯದಿಂದ ಅಲ್ಲಿರುವ ಜನರನ್ನು ವಶಪಡಿಸಿ ಕೊಂಡು ಅವರು ಗ್ರಾಮವನ್ನು ಪ್ರವೇಶಿಸುವುದಕ್ಕಿಂತ ಮುಂಚಿತವಾಗಿಯೇ ಅವರಿಗೆ ಗೌರವಸಲ್ಲದಂತೆ ಯೋಜನೆಮಾಡಬೇಕು. ಒಂದು ವೇಳೆ ಅವರು ಗ್ರಾಮವನ್ನು ಪ್ರವೇಶಿಸಿದರೆ ಅವರ ಮಾನಭಂಗಮಾಡುವುದಕ್ಕೆ ಸಿದ್ಧ ರಾಗಿರುವ ನಮ್ಮ ಜನರು ಅವರ ಗ್ರಂಥಾಪಹಾರ, ದಂಡಖಂಡನ, ತಾಡನ ಇತ್ಯಾದಿಗಳನ್ನು ಮಾಡಬೇಕು.

ವಿ:—ಸಾಮ ಪೂರ್ವಂ ಯೇಷಾಂ ತೇ ತೈಃ, ಮಾನಸ್ಯ ಭಂಗಃ ತಸ್ಮೈ, ಗ್ರಂಥಾನಾಂ ಆಕರ್ಷಃ, ಗ್ರಂಥಾಕರ್ಷಃ ಆದಿಃ ಯಸ್ಯ ತತ್ ಗ್ರಂಥಾಕರ್ಷಾದಿ.

ಕ್ರಿ:—ವಾರ್ಯತಾಂ ವಾರ್ಯೇತಾಂ ವಾರ್ಯಂತಾಂ ಇತ್ಯಾದಿ. ವೃಞ್ ವರಣೇ. ಣಿಜಂತ, ಕರ್ಮಣಿ ಲೋಟ್.

ಅವ:—ಹೀಗೆ ದುರಾಲೋಚನೆ ಮಾಡಿದಂತೆ ಮಾಯಾವಾದಿಗಳು ಕಾರ್ಯವನ್ನೂ, ಆರಂಭಿಸಿದರು—

ಇತ್ಯಾದ್ಯೇತೇ ಕಾರ್ಯಮಾಲೋಚ್ಯ ಕಾಲೇ
ಚಕ್ರುರ್ವಕ್ರಾಶ್ಚಕ್ರಿಭಕ್ತಪ್ರತೀಪಂ ।
ಯೋಗ್ಯಾ ಮಂಕ್ತುಂ ತೇಽನ್ಯಥಾ ಸ್ಯುಃ ಕಥಂ ವಾ
ದುಃಖೋಗ್ರಾಂಭಸ್ಯಂಧತಾಮಿಸ್ರಸಿಂಧೌ ॥೨೫॥

ಅ:— ವಕ್ರಾಃ ಏತೇ ಕಾಲೇ ಇತ್ಯಾದಿ ಕಾರ್ಯಂ ಆಲೋಚ್ಯ ಚಕ್ರಿಭಕ್ತಪ್ರತೀಪಂ ಚಕ್ರುಃ। ಅನ್ಯಥಾ ತೇ ದುಃಖೋಗ್ರಾಂಭಸಿ ಅಂಧತಾಮಿಸ್ರಸಿಂಧೌ ಮಂಕ್ತುಂ ಕಥಂ, ವಾ ಯೋಗ್ಯಾಃ ಸ್ಯುಃ.

**ಅರ್ಥ:**—ವಕ್ರಾಃ=ಕುಟಿಲಬುದ್ಧಿಯುಳ್ಳ, ಏತೇ=ಈ ಮಾಯಾವಾದಿಗಳು, ಕಾಲೇ = ಶ್ರೀಮಧ್ವಾಚಾರ್ಯರು ತಮ್ಮ ಸಿದ್ಧಾಂತವನ್ನು ವಿವರಿಸುವ ಸಮಯದಲ್ಲಿ, ಇತ್ಯಾದಿಕಾರ್ಯಂ=ಇದೇ ಮೊದಲಾದ ದುಷ್ಟ ವ್ಯಾಪಾರವನ್ನು, ಆಲೋಚ್ಯ=ಆಲೋಚಿಸಿ, ಚಕ್ರಿಭಕ್ತ=ಚಕ್ರಪಾಣಿಯಾದ ಶ್ರೀಕೃಷ್ಣನ ಭಕ್ತರಾದ ಶ್ರೀಮಧ್ವಾಚಾರ್ಯರಿಗೆ, ಪ್ರತೀಪಂ=ವಿರೋಧವನ್ನು, ಚಕ್ರುಃ=ಮಾಡಿದರು. ಅನ್ಯಥಾ = ಹಾಗಿಲ್ಲದಿದ್ದರೆ, ತೇ=ಅವರು, ದುಃಖ=ಕಷ್ಟವೆಂಬ, ಉಗ್ರಾಂಭಸಿ=ಕಠಿನವಾದ ನೀರುಳ್ಳ, ಅಂಧತಾಮಿಸ್ರಸಿಂಧೌ = ಅಂಧತಮಸ್ಸೆಂಬ ಸಮುದ್ರದಲ್ಲಿ, ಮಂಕ್ತುಂ=ಮುಳುಗುವುದಕ್ಕೆ, ಕಥಂ ವಾ=ಹೇಗೆತಾನೇ, ಯೋಗ್ಯಾಃ ಸ್ಯುಃ=ಅರ್ಹರಾದಾರು?

**ತಾ:**—ಶ್ರೀಮಧ್ವಾಚಾರ್ಯರು ಶಾಸ್ತ್ರಪ್ರವಚನಮಾಡುತ್ತಾ ಸಜ್ಜನರಿಗೆ ಸಂತೋಷವನ್ನುಂಟುಮಾಡುತ್ತಿದ್ದಾಗ ಈ ಕುಟಿಲಬುದ್ಧಿಯು ಕೆಲವು ಮಾಯಾವಾದಿಗಳು ಸಭೆ ಸೇರಿ ಹಿಂದೆ ಹೇಳಿದಂತೆ ಕೆಲವು ದುಷ್ಟಕಾರ್ಯಗಳನ್ನು ಮಾಡಬೇಕೆಂದು ನಿಶ್ಚಯಿಸಿದರು. ಅನಂತರ ಶ್ರೀಹರಿಯ ಪರಮಭಕ್ತರಾದ ಶ್ರೀಮಧ್ವಾಚಾರ್ಯರಿಗೆ ವಿರುದ್ಧವಾದ ಅನೇಕಕಾರ್ಯಗಳನ್ನೂ ಮಾಡಿದರು. ಈ ರೀತಿಮಾಡುವುದು ಅವರಿಗೆ ಉಚಿತವೇ ಸರಿ. ಏಕೆಂದರೆ ಅವರು ಹಾಗೆ ಮಾಡದಿದ್ದರೆ ದುಃಖವೆಂಬ ದಾಟಲಸಾಧ್ಯವಾದ ಜಲದಿಂದ ಪೂರ್ಣವಾದ ಅಂಧತಾಮಿಸ್ರವೆಂಬ ಸಮುದ್ರದಲ್ಲಿ ಅವರು ಮುಳುಗಲು ಹೇಗೆ ಯೋಗ್ಯರಾದಾರು? (ಮಿಥ್ಯಾಜ್ಞಾನಿಗಳು ಸಜ್ಜನರಿಗೆ ತೊಂದರೆ ಮಾಡಿದರೇನೇ ಅವರ ಸಾಧನಪೂರ್ತಿಯಾಗಿ ಅವರಿಗೆ ಯೋಗ್ಯವಾದ ನಿತ್ಯ ನರಕವು ಸಿಗುತ್ತದೆ ಎಂದು ಭಾವ.)

**ವಿ:**—ಇತಿ ಆದಿಃ ಯಸ್ಯ ತತ್ ಇತ್ಯಾದಿ, ತತ್. ಚಕ್ರಂ ಅಸ್ಯ ಅಸ್ತೀತಿ ಚಕ್ರೀ, ಚಕ್ರಿಣಃ ಭಕ್ತಃ ಚಕ್ರಿಭಕ್ತಃ, ಚಕ್ರಿಭಕ್ತಸ್ಯ ಪ್ರತೀಪಂ, ತತ್; ದುಃಖಮೇವ ಉಗ್ರಂ ಅಂಭಃ ಯಸ್ಮಿನ್ ಸಃ ದುಃಖೋಗ್ರಾಂಭಾಃ ತಸ್ಮಿನ್, ಅಂಧತಾಮಿಸ್ರಮೇವ ಸಿಂಧುಃ ತಸ್ಮಿನ್;

**ಕ್ರಿಯಾ:**— ಚಕ್ರುಃ, ಇತ್ಯಾದಿ. ಡುಕೃಞ್ ಕರಣೇ ಲಿಟ್.

Rarest Archiver

ಅವ :—ಮಾಯಾವಾದಿಗಳು ಪುಂಡರೀಕಪುರಿಯನ್ನು ಆಚಾರ್ಯರನ್ನು ಜಯಿಸುವುದಕ್ಕಾಗಿ ಪ್ರೋತ್ಸಾಹಿಸಿದರು—

**ಯತ್ತ್ಯಾಕಾರಂ ವಾಸುದೇವದ್ವಿಷಂ ತಂ**
**ಪ್ರಾಜ್ಞಮ್ಮನ್ಯಂ ಪುಂಡರೀಕಾಭಿಧಾನಂ |**
**ವಾದವ್ಯಾಜಾಕ್ಷೇಪಕಾಮಾಃ ಕುಮಂತ್ರಾ-**
**ಶ್ಚಕ್ರುರ್ಯತ್ತಂ ರೂಪ್ಯಪೀಠಾಲಯೇಽಮೀ ||೨೬||**

ಅ:—ರೂಪ್ಯಪೀಠಾಲಯೇ ಕುಮಂತ್ರಾಃ ಅಮೀ ವಾದವ್ಯಾಜಾ(ತ್) ಕ್ಷೇಪಕಾಮಾಃ ಪ್ರತ್ಯಾಕಾರಂ ವಾಸುದೇವದ್ವಿಷಂ ಪ್ರಾಜ್ಞಂಮನ್ಯಂ ತಂ ಪುಂಡರೀಕಾಭಿಧಾನಂ ಯತ್ತಂ ಚಕ್ರುಃ |

ಅರ್ಥ:—ರೂಪ್ಯಪೀಠಾಲಯೇ (ಸ್ಥಿತಾಃ)=ಉಡುಪಿಯಲ್ಲಿ ಇದ್ದ, ಕುಮಂತ್ರಾಃ=ದುಷ್ಟಮಂತ್ರಾಲೋಚನೆಯುಳ್ಳ, ಅಮೀ=ಈ ಮಾಯಾವಾದಿಗಳು, ವಾದವ್ಯಾಜ=ವಾದಮಾಡುವ ನೆಪದಿಂದ, ಆಕ್ಷೇಪಕಾಮಾಃ =(ಮಧ್ವಾಚಾರ್ಯರನ್ನು) ಸೋಲಿಸುವ ಇಚ್ಛೆಯುಳ್ಳವರಾಗಿ, ಪ್ರತ್ಯಾ-ಕಾರಂ=ಸಂನ್ಯಾಸಿಯ ಆಕೃತಿಯುಳ್ಳ, ವಾಸುದೇವದ್ವಿಷಂ=ವಿಷ್ಣುದ್ವೇಷಿಯಾದ, ಪ್ರಾಜ್ಞಂಮನ್ಯಂ=ತನ್ನನ್ನು ಪಂಡಿತನೆಂದು ತಿಳಿದಿರುವ, ತಂ ಪುಂಡರೀಕಾಭಿಧಾನಂ=ಆ ಪ್ರಸಿದ್ಧನಾದ ಪುಂಡರೀಕಪುರೀ ಎಂಬವನನ್ನು, ಯತ್ತಂ ಚಕ್ರುಃ=ವಾದಕ್ಕೆ ಸನ್ನದ್ಧನನ್ನಾಗಿ ಮಾಡಿದರು.

ತಾ:—ದುಷ್ಟಮಂತ್ರಾಲೋಚನೆಯನ್ನು ಮಾಡಿದ ಈ ಮಾಯಾವಾದಿಗಳು ಉಡುಪಿಯಲ್ಲಿ ಒಟ್ಟು ಸೇರಿದರು. ವಾದವನ್ನು ಮಾಡುವ ನೆಪದಿಂದ ಮಧ್ವಾಚಾರ್ಯರಿಗೆ ಅವಮಾನ ಮಾಡಬೇಕು. ಅವರನ್ನು ಅಲ್ಲಿಂದ ತಿರಸ್ಕರಿಸಿ ಕಳುಹಿಸಬೇಕೆಂದು ಬಯಸಿದರು. ಅದಕ್ಕಾಗಿ ಸಂನ್ಯಾಸಿವೇಷದ ತಾನು ಮಹಾಪಂಡಿತನೆಂಬ ಅಹಂಕಾರವುಳ್ಳ ವಿಷ್ಣು ದ್ವೇಷಿಯೂ ಆದ ಪುಂಡರೀಕಪುರಿ ಎಂಬವನನ್ನು ವಾದಕ್ಕೆ ಸಜ್ಜು ಗೊಳಿಸಿದರು.

ವಿ:—ಪ್ರತಿನಃ ಆಕಾರಃ ಯಸ್ಯ ಸಃ ಪ್ರತ್ಯಾಕಾರಃ ತಂ, ವಾಸು-

Rarest Archiver

ದೇವಸ್ಯ ದ್ವಿಟ್ ತಂ, ಆತ್ಮಾನಂ ಪ್ರಾಜ್ಞಂ ಮನ್ಯತೇ ಇತಿ ಪ್ರಾಜ್ಞಂಮನ್ಯಃ ತಂ, (ಆತ್ಮಮಾನೇ ಖಶ್-ಚ-ಎಂದು ಖಶ್ ಪ್ರತ್ಯಯ.) ಪುಂಡರೀಕ ಇತಿ ಅಭಿಧಾನಂ ಯಸ್ಯ ಸಃ ತಂ, ವಾದ ಇತಿ ವ್ಯಾಜಃ ವಾದವ್ಯಾಜಃ ವಾದವ್ಯಾಜೇನ ಆಕ್ಷೇಪೇ ಕಾಮಃ ಯೇಷಾಂ ತೇ, ಕುತ್ಸಿತಃ ಮಂತ್ರಃ ಯೇಷಾಂ ತೇ ; **ಕ್ರಿಯಾ:**— ಚಕ್ರುಃ ಹಿಂದೆ ಬಂದಿದೆ.

**ಅವ:**—ಪುಂಡರೀಕಪುರಿಯು ಏನು ಮಾಡಿದನು ?—

**ಯದ್ವತ್ ಸಿಂಹಂ ಗ್ರಾಮಸಿಂಹೋಽಶುಚೀಚ್ಛೋ (ಚ್ಛುಃ)**
**ಹಂಸಂ ಕಾಕೋ ಯದ್ವದೇವೈಕದೃಷ್ಟಿಃ ।**
**ಯದ್ವನ್ಮಾಯೀ ಭೂರಿಮಾಯಸ್ತರಕ್ಷುಂ**
**ತದ್ವದ್ವಿದ್ವದ್ವರ್ಯಮಾಹ್ವಾಸ್ತ ಮೂಢಃ ॥೨೭॥**

**ಅ :**—ಅಶುಚೀಚ್ಛಃ ಗ್ರಾಮಸಿಂಹಃ ಸಿಂಹಂ ಯದ್ವತ್ ಏಕದೃಷ್ಟಿಃ ಕಾಕಃ ಹಂಸಂ ಯದ್ವತ್ ಮಾಯೀ ಭೂರಿಮಾಯುಃ ತರಕ್ಷುಂ ಯದ್ವತ್ ತದ್ವತ್ ಏವ ಮೂಢಃ ವಿದ್ವದ್ವರ್ಯಂ ಆಹ್ವಾಸ್ತ.

**ಆ:**—ಅಶುಚೀಚ್ಛಃ (ಚ್ಛುಃ) = ಅಶುದ್ಧವಸ್ತುಗಳಲ್ಲಿ (ಅಮೇಧ್ಯಾದಿಗಳಲ್ಲಿ, ಮತ್ತು ದುಷ್ಟವಾದ ಜೀವಬ್ರಹ್ಮೈಕ್ಯದಲ್ಲಿ) ಅಪೇಕ್ಷೆಯುಳ್ಳ, ಗ್ರಾಮಸಿಂಹಃ = ನಾಯಿಯು, ಸಿಂಹಂ ಯದ್ವತ್ = ಸಿಂಹವನ್ನು ಹೇಗೋ, ಏಕದೃಷ್ಟಿಃ = ಒಂದು ಕಣ್ಣುಳ್ಳ, ಬ್ರಹ್ಮ ಒಂದೇ ಸತ್ಯ ಉಳಿದವೆಲ್ಲ ಸುಳ್ಳು ಎಂಬ ಜ್ಞಾನವುಳ್ಳ, ಕಾಕಃ = ಕಾಗೆಯು, ಹಂಸಂ ಯದ್ವತ್ = ಹಂಸವನ್ನು ಹೇಗೋ, ಮಾಯೀ = ಕಪಟಿಯಾದ, (ಮಾಯೆಯನ್ನು ಆಶ್ರಯಿಸಿದ) ಭೂರಿಮಾಯುಃ = ನರಿಯು, ತರಕ್ಷುಂ ಯದ್ವತ್ = ಹುಲಿಯನ್ನು ಹೇಗೋ ತದ್ವತ್ ಏವ = ಹಾಗೆಯೇ, ಮೂಢಃ = ಬುದ್ಧಿಮೋಹವುಳ್ಳ ಪುಂಡರೀಕಪುರಿಯು, ವಿದ್ವದ್ವರ್ಯಂ = ಜ್ಞಾನಿಶ್ರೇಷ್ಠರಾದ ಶ್ರೀಮಧ್ವಾಚಾರ್ಯರನ್ನು, ಆಹ್ವಾಸ್ತ = ವಾದಕ್ಕಾಗಿ ಕರೆದನು.

**ತಾ:**—ಅಮೇಧ್ಯವಸ್ತುಗಳನ್ನು ಅಪೇಕ್ಷಿಸುವ ನಾಯಿಯು ಸಿಂಹವನ್ನು ಯುದ್ಧಕ್ಕಾಗಿ ಕರೆಯುವಂತೆಯೂ, ಒಂದು ಕಣ್ಣುಳ್ಳ ಕಾಗೆಯು ಹಂಸಪಕ್ಷಿಯನ್ನು ಸೌಂದರ್ಯಾದಿಸ್ಪರ್ಧೆಗಾಗಿ ಕರೆಯುವಂತೆಯೂ,

Rarest Archiver

ಕಪಟಿಯಾದ ನರಿಯು ಹೆಬ್ಬುಲಿಯನ್ನು ಮಲ್ಲಯುದ್ಧಕ್ಕಾಗಿ ಕರೆಯುವಂತೆಯೂ, ಅಪವಿತ್ರವಾದ ಜೀವೇಶ್ವರೈಕ್ಯಜ್ಞಾನವನ್ನು ಅಪೇಕ್ಷಿಸುವವನೂ, ಪ್ರಪಂಚವೆಲ್ಲಾ ಮಾಯಾಕಲ್ಪಿತವು, ಮಿಥ್ಯಾ ಎಂಬ ಜ್ಞಾನವುಳ್ಳವನೂ ಕಪಟಿಯೂ, ಮೋಹವುಳ್ಳವನೂ ಅವಿವೇಕಿಯೂ ಆದ ಆ ಪುಂಡರೀಕಪುರಿಯು ಪಂಡಿತಶ್ರೇಷ್ಠರಾದ ಶ್ರೀಮಧ್ವಾಚಾರ್ಯರನ್ನು ವಾದಕ್ಕಾಗಿ ಕರೆದನು. ಸಿಂಹ, ಹಂಸ, ಹುಲಿಗಳ ದೃಷ್ಟಾಂತದಿಂದ ಕ್ರಮವಾಗಿ ಆಚಾರ್ಯರು ವಾದದಲ್ಲಿ ತಮ್ಮ ಗಂಭೀರಶಾಸ್ತ್ರಸಿದ್ಧಾಂತದ ಗರ್ಜನೆಯಿಂದಲೇ ವಾದಿಗಳನ್ನು ಧಿಕ್ಕರಿಸುವ ಸಿಂಹಪರಾಕ್ರಮಿಗಳೆಂದೂ, ಹಂಸದಂತೆ ಪರಿಶುದ್ಧಸುಂದರಸ್ವರೂಪ ಮತ್ತು ಮಾನಸವುಳ್ಳವರೆಂದೂ, ವಾದಿಗಳ ವಿಷಯದಲ್ಲಿ ಹುಲಿಯಂತೆ, ನಿರ್ಭಯರೂ, ದಾಕ್ಷಿಣ್ಯರಹಿತರೂ ಎಂದೂ ಸೂಚಿತವಾಯಿತು. ಪುಂಡರೀಕಪುರಿಯು ನಾಯಿಯಂತೆ ನಿರರ್ಥಕವಾಗಿ ಬೊಗಳುವವನೆಂದೂ, ಕಾಗೆಯಂತೆ ವಿರಸವಾಗಿ ಕೂಗುವ ವಕ್ರದೃಷ್ಟಿಯುವನೆಂದೂ ನರಿಯಂತೆ ಕಪಟಿಯೆಂದೂ ಆಚಾರ್ಯರನ್ನು ಗೆಲ್ಲಲು ಸರ್ವಥಾ ಅಸಮರ್ಥನೆಂದೂ ಸೂಚಿತವಾಯಿತು.

**ವಿ:**—ಅಶುಚೌ ಇಚ್ಛಾ ಯಸ್ಯ ಸಃ, (ಅಶುಚೌ ಇಚ್ಛುಃ) ಏಕಾ ದೃಷ್ಟಿಃ ಯಸ್ಯ ಸಃ, ಮಾಯಾ ಅಸ್ಯ ಅಸ್ತೀತಿ ಮಾಯೀ, ವಿದುಷಾಂ ವರ್ಯಃ ; ತರಕ್ಷುಃ = ಹುಲಿ – ವ್ಯಾಘ್ರೋ ದ್ವೀಪೀ ಪುಂಡರೀಕಸ್ತರಕ್ಷುಃ ಶಾರ್ದೂಲಃ ಸ್ಯಾಚ್ಚಿತ್ರಕಾಯೋ ಮೃಗಾರಿಃ - **ಹಲ.**

**ಕ್ರಿ:**—ಆ + ಅಹ್ವಾಸ್ತ, ಅಹ್ವಾಸಾತಾಂ ಅಹ್ವಾಸತ, ಅಹ್ವಾಸ್ಥಾಃ ಅಹ್ವಾಸಾಥಾಂ ಅಹ್ವಾಧ್ವಂ, ಅಹ್ವಾಸಿ ಅಹ್ವಾಸ್ವಹಿ ಅಹ್ವಾಸ್ಮಹಿ. ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ ಆಙ್ ಉಪಸರ್ಗ. ಆತ್ಮನೇ. ಲುಙ್.

**ಅಸ್ಯಲ್ಪೋಽಸೌ ನಹ್ಯುಪೇಕ್ಷಾಂಬಭೂವೇ**
**ಲೋಲಾತ್ಮೇವಾದಕ್ಷಪಕ್ಷಃ ಪತಂಗಃ ।**
**ಮಧ್ವೇನಾಹೋ ದುಸ್ತರೇಣ ಸ್ವಭಾವಾ-**
**ತ್ತೇಜೋರಾಜೀರಾಜಿತೇನಾಗ್ನಿನೇವ ॥೨೮॥**

**ಅ:**—ಲೋಲಾತ್ಮಾ ಅದಕ್ಷಪಕ್ಷಃ ಪತಂಗಃ ಇವ ಅಲ್ಪಃ ಅಪಿ ಅಸೌ

Rarest Archiver

ಸ್ವಭಾವಾತ್ ದುಸ್ತರೇಣ ಮಧ್ವೇನ ತೇಜೋರಾಜೀರಾಜಿತೇನ ಅಗ್ನಿನಾ ಇವ ನ ಉಪೇಕ್ಷಾಂಬಭೂವೇ ಹಿ ಅಹೋ.

**ಅರ್ಥ:**— ಲೋಲಾತ್ಮಾ = ಚಂಚಲವಾದ ಮನಸ್ಸುಳ್ಳ, ಅದಕ್ಷ ಪಕ್ಷಃ=ಅಸಮರ್ಥವಾದ ರೆಕ್ಕೆಯುಳ್ಳ, ಅಶಕ್ತವಾದ ಸಿದ್ಧಾಂತವುಳ್ಳ, ಪತಂಗಃ ಇವ = ದೀಪದ ಹುಳುವಿನಂತೆ, ಅಲ್ಪಃ ಅಪಿ = ಸಣ್ಣ ಮನುಷ್ಯನಾದರೂ, ಅಸೌ = ಈ ಪುಂಡರೀಕಪುರಿಯು, ಸ್ವಭಾವಾತ್ = ಮಂತ್ರ ಔಷಧಾದಿ ಗಳಿಲ್ಲದೆ ಸ್ವರೂಪಶಕ್ತಿಯಿಂದಲೇ, ದುಸ್ತರೇಣ = ಎದುರಿಸಲು ಅಶಕ್ಯರಾದ, ಮಧ್ವೇನ = ಶ್ರೀಮಧ್ವಾಚಾರ್ಯರಿಂದ, ತೇಜೋರಾಜೀರಾಜಿತೇನ = ಕಾಂತಿಯ ಸಮೂಹಗಳಿಂದ ಪ್ರಕಾಶಿತನಾದ, ಅಗ್ನಿನಾ ಇವ = ಅಗ್ನಿದೇವ ನಿಂದ ಎಂಬಂತೆ, ನ ಉಪೇಕ್ಷಾಂಬಭೂವೇ = ಉದಾಸೀನಮಾಡಲ್ಪಡಲಿಲ್ಲ. ಅಹೋ = ಆಶ್ಚರ್ಯ.

**ತಾ:**—ಚಂಚಲಬುದ್ಧಿಯುಳ್ಳ, ರೆಕ್ಕೆಯಲ್ಲಿ ಬಲವಿಲ್ಲದ ಸಣ್ಣದಾದ ದೀಪದ ಹುಳವು ತನ್ನ ಮೇಲೆ ಬೀಳಲು ಬಂದಾಗ ಸ್ವಭಾವದಿಂದಲೇ ಕಾಂತಿಪುಂಜದಿಂದ ಜ್ವಲಿಸುವ ಅಗ್ನಿಪುರುಷದೇವನು ಇದು ಸಣ್ಣಪ್ರಾಣಿ ಯೆಂದು ಆಲೋಚಿಸದೆ ಸುಟ್ಟು ಬಿಡುತ್ತಾನೆ. ಹಾಗೆಯೇ ಮಂತ್ರ ಔಷಧಿ ತಪಸ್ಸು ಮುಂತಾದ ಯಾವ ಬಾಹ್ಯಸಹಾಯವಿಲ್ಲದೆ ಸ್ವಭಾವದಿಂದಲೇ ಪ್ರತಿವಾದಿಗಳಿಗೆ ಅಜೇಯರಾದ ಶ್ರೀಮಧ್ವಾಚಾರ್ಯರು, ಈ ಪುಂಡರೀಕ ಪುರಿಯು ಚಂಚಲಮನಸ್ಸಿನವನು, ಇವನು ತನ್ನ ಸಿದ್ಧಾಂತವನ್ನು ಸಮರ್ಥಿಸಲು ಮತ್ತು ಪರಸಿದ್ಧಾಂತವನ್ನು ಖಂಡಿಸಲು ಶಕ್ತಿ ಇಲ್ಲದ ಸಣ್ಣ ಮನುಷ್ಯನು ಎಂದು ಉಪೇಕ್ಷಿಸಲಿಲ್ಲ. ಅವನನ್ನು ವಾದದಲ್ಲಿ ಗೆದ್ದರು. ಇದು ಆಶ್ಚರ್ಯವು. ಆದರೆ ಯುಕ್ತವು. ಶತ್ರುವು ದುರ್ಬಲನೆಂದು ಉದಾಸೀನ ಮಾಡದೆ ಅವನನ್ನು ಸೋಲಿಸಲೇಬೇಕು.

**ವಿ:**—ಲೋಲಃ ಆತ್ಮಾ ಯಸ್ಯ ಸಃ, ನ ದಕ್ಷೌ ಅದಕ್ಷೌ, ಅದಕ್ಷೌ ಪಕ್ಷೌ ಯಸ್ಯ, ಅದಕ್ಷಃ ಪಕ್ಷಃ ಯಸ್ಯ ಸಃ, ದುಃಖೇನ ತರ್ತುಂ ಶಕ್ಯಃ ದುಸ್ತರಃ ತೇನ, ತೇಜಸಾಂ ರಾಜೀ ತೇಜೋರಾಜೀ, ತೇಜೋರಾಜ್ಯಾ ರಾಜಿತಃ ತೇನ;

Rarest Archiver

ಕ್ರಿ:—ಉಪ + ಈಕ್ಷಾಂಬಭೂವೇ - ಬಭೂವಾತೇ - ಬಭೂವಿರೇ ಉಪ ಉಪಸರ್ಗ, ಈಕ್ಷ ದರ್ಶನೇ ಕರ್ಮಣಿ ಲಿಟ್.

ಅವ:— ಪುಂಡರೀಕಪುರಿಯನ್ನು ಜಯಿಸಿದ ಪ್ರಕಾರ ಮತ್ತು ಆಚಾರ್ಯರು ಅನಂತರ ಮಾಡಿದ ಕಾರ್ಯ—

**ಮಾನ್ಯೈರ್ಮಾನ್ಯೈರ್ಭಾಸಮಾನೋಽಸಮಾನ್ಯೈ-**
**ರಾಕ್ಷಿಪ್ಯೈನಂ ಸ್ವಂ ಮತಂ ಸಾಧಯಿತ್ವಾ ।**
**ಪ್ರೀತ್ಯೈ ವಿಷ್ಣೋರುತ್ತಮಪ್ರೀತಿತೀರ್ಥೋ**
**ವೇದವ್ಯಾಖ್ಯಾಂ ವೇದವೇದೀ ಚಕಾರ ॥೨೯॥**

ಅ:—ಅಸಮಾನ್ಯೈಃ ಮಾನ್ಯೈಃ ಮಾನ್ಯೈಃ ಭಾಸಮಾನಃ ವೇದವೇದೀ ಉತ್ತಮಪ್ರೀತಿತೀರ್ಥಃ ಏನಂ ಆಕ್ಷಿಪ್ಯ ಸ್ವಂ ಮತಂ ಸಾಧಯಿತ್ವಾ ವಿಷ್ಣೋಃ ಪ್ರೀತ್ಯೈ ವೇದವ್ಯಾಖ್ಯಾಂ ಚಕಾರ.

ಅರ್ಥ:-ಅಸಮಾನ್ಯೈಃ = ಅಸದೃಶವಾದ, ಮಾನ್ಯೈಃ = ಗೌರವಿಸಲು ಯೋಗ್ಯವಾದ, ಮಾನ್ಯೈಃ = ಪ್ರಮಾಣಗಳಿಂದ, ಭಾಸಮಾನಃ = ಪ್ರಕಾಶಿಸುತ್ತಿರುವ, ವೇದವೇದೀ = ವೇದಜ್ಞರಾದ, ಉತ್ತಮಪ್ರೀತಿತೀರ್ಥಃ = ಶ್ರೇಷ್ಠರಾದ ಆನಂದತೀರ್ಥರು, ಏನಂ ಆಕ್ಷಿಪ್ಯ = ಈ ಪುಂಡರೀಕಪುರಿಯನ್ನು ಖಂಡಿಸಿ, ಸ್ವಂ ಮತಂ ಸಾಧಯಿತ್ವಾ = ತನ್ನ ಸಿದ್ಧಾಂತವನ್ನು ಸಾಧಿಸಿ, ವಿಷ್ಣೋಃ ಪ್ರೀತ್ಯೈ = ಶ್ರೀಹರಿಯ ಸಂತೋಷಕ್ಕಾಗಿ, ವೇದವ್ಯಾಖ್ಯಾಂ ಚಕಾರ = ವೇದಪ್ರವಚನವನ್ನು ಮಾಡಿದರು.

ತಾ:—ಅತಿಪ್ರಬಲಗಳೂ, ಪ್ರಮಾಣಗಳೆಂದು ಎಲ್ಲರೂ ಒಪ್ಪಿ ಗೌರವಿಸಲು ಯೋಗ್ಯಗಳೂ ಆದ ಶ್ರೇಷ್ಠವಾದ ಶ್ರುತಿಸ್ಮೃತಿಪ್ರಮಾಣಗಳಿಂದ ಪ್ರಕಾಶಿತರಾದ ವೇದಾರ್ಥಜ್ಞಶಿರೋಮಣಿಗಳಾದ ಶ್ರೀಮಧ್ವಾಚಾರ್ಯರು ಈ ಪುಂಡರೀಕಪುರಿಯನ್ನು ಆಕ್ಷೇಪಿಸಿ, ಜಯಿಸಿ ತನ್ನ ಮತವನ್ನು ಸಾಧಿಸಿ ಶ್ರೀಹರಿಯ ಪ್ರೀತಿಗಾಗಿ ವೇದಾರ್ಥಪ್ರವಚನವನ್ನು ಮಾಡಿದರು.

ವಿ:—ಮಾನಯಿತುಂ ಯೋಗ್ಯಾನಿ ಮಾನ್ಯಾನಿ ತೈಃ, ನ ವಿದ್ಯತೇ

Rarest Archiver

ಸಮಾನಂ ಯೇಷಾಂ ತಾನಿ ತೈಃ, ಪ್ರೀತಿಃ (ಪ್ರೀತಿಕರಂ) ತೀರ್ಥಂ ಯಸ್ಯ ಸಃ, ಉತ್ತಮಶ್ಚಾಸೌ ಪ್ರೀತಿತೀರ್ಥಶ್ಚ ಉತ್ತಮಪ್ರೀತಿತೀರ್ಥಃ, ವೇದಸ್ಯ ವ್ಯಾಖ್ಯಾ ತಾಂ, ವೇದಂ ವೇತ್ತೀತಿ ವೇದವೇದೀ (ನ್) ಕ್ರಿಯಾಃ- ಚಕಾರ.

**ಆಮ್ನಾಯಂ ಯೇ ಪೇಠುರಾಮ್ನಾಯಪೂರ್ವಂ**
**ಪ್ರಾಪ್ತಾ ವಿಪ್ರಾಸ್ತತ್ರಕೌತೂಹಲೇನ ।**
**ಪರ್ಯಾಸೀನಾಸ್ತಾವದಾಚಾರ್ಯವರ್ಯಂ**
**ಪ್ರೇಕ್ಷ್ಯಂ ಪ್ರೇಕ್ಷಾಂಚಕ್ರಿರೇಽನೇಕಸಂಖ್ಯಾಃ** ॥೩೦॥

ಅ :—ಯೇ ಆಮ್ನಾಯಪೂರ್ವಂ ಆಮ್ನಾಯಂ ಪೇಠುಃ ತಾವತ್ ತತ್ರ ಕೌತೂಹಲೇನ ಪ್ರಾಪ್ತಾಃ ಅನೇಕಸಂಖ್ಯಾಃ ವಿಪ್ರಾಃ ಪರ್ಯಾಸೀನಾಃ ಪ್ರೇಕ್ಷ್ಯಂ ಆಚಾರ್ಯವರ್ಯಂ ಪ್ರೇಕ್ಷಾಂಚಕ್ರಿರೇ ।

**ಅರ್ಥ** :—ಯೇ = ಯಾವ ಬ್ರಾಹ್ಮಣರು, ಆಮ್ನಾಯಪೂರ್ವಂ = ಸ್ವರವರ್ಣಾದಿಗಳ ವ್ಯತ್ಯಾಸವಿಲ್ಲದೆ ಸಂಪ್ರದಾಯದಂತೆ, ಆಮ್ನಾಯಂ = ವೇದವನ್ನು, ಪೇಠುಃ = ಅಧ್ಯಯನಮಾಡಿದ್ದರೋ, ತಾವತ್ = ಆಗ, ತತ್ರ ಕೌತೂಹಲೇನ ಪ್ರಾಪ್ತಾಃ = ಅಲ್ಲಿಗೆ ಕುತೂಹಲದಿಂದ ಬಂದಿದ್ದ, ಅನೇಕ ಸಂಖ್ಯಾಃ ವಿಪ್ರಾಃ = ಬಹುಸಂಖ್ಯೆಯ ಬ್ರಾಹ್ಮಣರು, ಪರ್ಯಾಸೀನಾಃ = (ಆಚಾರ್ಯರನ್ನು) ಸೇವಿಸುವವರಾಗಿ, ಪ್ರೇಕ್ಷ್ಯಂ ಆಚಾರ್ಯವರ್ಯಂ = ನೋಡಲುಯೋಗ್ಯರಾದ (ಸುಂದರರಾದ) ಶ್ರೇಷ್ಠರಾದ ಶ್ರೀಮಧ್ವಾಚಾರ್ಯ ರನ್ನು, ಪ್ರೇಕ್ಷಾಂಚಕ್ರಿರೇ = ನೋಡಿದರು.

ತಾ :—ಯಾವ ಬ್ರಾಹ್ಮಣರು ಯಾವ ಅಪಪಾಠವೂ ಇಲ್ಲದೆ, ಸ್ವರವರ್ಣಾದಿಗಳ ವ್ಯತ್ಯಾಸವಿಲ್ಲದಂತೆ ಸಂಪ್ರದಾಯಪೂರ್ವಕವಾಗಿ ವೇದ ವನ್ನು ಓದಿದ್ದರೋ, ಅಂತಹ ಅನೇಕ ಸಂಖ್ಯೆಯ ವೇದಜ್ಞಶಿಖಾಮಣಿ ಗಳಾದ ಬ್ರಾಹ್ಮಣರು ಆಚಾರ್ಯರು ರಜತಪೀಠಪುರದಲ್ಲಿ ವೇದಾರ್ಥವನ್ನು ಉಪದೇಶಿಸುತ್ತಿರುವಾಗ ಕುತೂಹಲದಿಂದ ಬಂದು ಅವರ ಸುತ್ತಲೂ ಕುಳಿತು ಅತಿಸುಂದರರಾದ ಆಚಾರ್ಯವರ್ಯ ಶ್ರೀಮಧ್ವರನ್ನು ನೋಡಿದರು.

ವಿ :—ಆಮ್ನಾಯಃ ಪೂರ್ವಃ ಯಥಾ ಭವತಿ ತಥಾ ಆಮ್ನಾಯ-

Rarest Archiver

ಪೂರ್ವಂ, ಆಚಾರ್ಯಾಣಾಂ ವರ್ಯಃ ತಂ, ಅನೇಕಾ ಸಂಖ್ಯಾ ಯೇಷಾಂ ತೇ ಅನೇಕಸಂಖ್ಯಾಃ;

ಕ್ರಿ:—ಪ್ರ + ಈಕ್ಷಾಂಚಕ್ರಿರೇ, —ಚಕ್ರೇ, ಚಕ್ರಾತೇ - ಚಕ್ರಿರೇ ಇತ್ಯಾದಿ, ಈಕ್ಷ ದರ್ಶನೇ ಆತ್ಮನೇ. ಲಿಟ್. ಪ್ರ ಉಪಸರ್ಗ.

**ಉಕ್ತಾಂಗೇಭ್ಯಃ ಕಾದಿಕಾನ್ ವ್ಯಂಜಯಂತಂ**
**ತತ್ತನ್ಮಾತ್ರಾವ್ಯಂಜನಾದೌ ಪ್ರವೀಣಂ।**
**ತಿಸ್ರೋಽವಸ್ಥಾಸ್ತದ್ಗುಣೈರ್ಭಾವಯಂತಂ**
**ದೇವಾ ದೃಷ್ಟ್ವಾ ಹ್ಯಸ್ಮರನ್ ದೇವದೇವಂ ||೩೧||**

ಅ:—ಉಕ್ತಾಂಗೇಭ್ಯಃ ಕಾದಿಕಾನ್ ವ್ಯಂಜಯಂತಂ ತತ್ತನ್ಮಾತ್ರಾ ವ್ಯಂಜನಾದೌ ಪ್ರವೀಣಂ ತಿಸ್ರಃ ಅವಸ್ಥಾಃ ತದ್ಗುಣೈಃ ಭಾವಯಂತಂ (ತಂ) ದೃಷ್ಟ್ವಾ ದೇವಾಃ, ದೇವದೇವಂ ಅಸ್ಮರನ್ ಹಿ.

ಅರ್ಥ:—ಉಕ್ತಾಂಗೇಭ್ಯಃ = ಆಯಾ ವರ್ಣೋಚ್ಚಾರಣೆಗೆ ನಿಯತವಾದ ಆಯಾ ಅಂಗಗಳಿಂದ, ಕಾದಿಕಾನ್ = 'ಕ'ಕಾರಾದಿವರ್ಣಗಳನ್ನು, ವ್ಯಂಜಯಂತಂ = ಉಚ್ಚಾರಣೆಯಿಂದ ವ್ಯಕ್ತಪಡಿಸುತ್ತಿರುವ, ತತ್ತನ್ಮಾತ್ರಾ = ಸ್ವರವ್ಯಂಜನಗಳ ಮಾತ್ರೆಗಳ, ವ್ಯಂಜನಾದೌ = ಸ್ಪಷ್ಟಪಡಿಸುವುದೇ ಮೊದಲಾದುದರಲ್ಲಿ, ಪ್ರವೀಣಂ = ಚತುರರಾದ, ತಿಸ್ರಃ ಅವಸ್ಥಾಃ = ಮೂರುಸಂಖ್ಯೆಯ, ಪಶ್ಯಂತೀ ಮಧ್ಯಮಾ ವೈಖರೀ ಎಂಬ ಅವಸ್ಥೆಗಳನ್ನು, ತದ್ಗುಣೈಃ = ಆಯಾ ಅವಸ್ಥೆಯ ದೇವತೆಗಳ ಗುಣಗಳಿಂದ ಕೂಡಿ, ಭಾವಯಂತಂ = ಉಂಟುಮಾಡುವ, (ತಂ = ಆ ಮಧ್ವಾಚಾರ್ಯರನ್ನು) ದೃಷ್ಟ್ವಾ = ನೋಡಿ, ದೇವಾಃ = ದೇವತೆಗಳು, ಉಕ್ತಾಂಗೇಭ್ಯಃ = ವೇದೋಕ್ತವಾದ ತಲೆ ಮೊದಲಾದ ಅವಯವಗಳಿಂದ, ಕಾದಿಕಾನ್ = ಬ್ರಹ್ಮನೇ ಮೊದಲಾದ ದೇವತೆಗಳನ್ನು ವ್ಯಂಜಯಂತಂ = ದೇಹಸಹಿತರನ್ನಾಗಿ ಮಾಡಿ ವ್ಯಕ್ತಗೊಳಿಸುತ್ತಿರುವ, ತತ್ತನ್ಮಾತ್ರಾ = ಆಕಾಶಾದಿ ಪಂಚಭೂತಗಳ ಶಬ್ದಾದಿ ಸೂಕ್ಷ್ಮಾಂಶಗಳ, ವ್ಯಂಜನಾದೌ = ಶಬ್ದಾದಿ ರೂಪಗಳಿಂದ ಸೃಷ್ಟಿಮಾಡುವುದೇ ಮೊದಲಾದುದರಲ್ಲಿ, ಪ್ರವೀಣಂ = ಚತುರನಾದ, ತಿಸ್ರಃ ಅವಸ್ಥಾಃ = ಸೃಷ್ಟಿ, ರಕ್ಷಣ, ಸಂಹಾರವೆಂಬ ಮೂರು

Rarest Archiver

ಅವಸ್ಥೆಗಳನ್ನು, ತದ್ಗುಣೈಃ = ಸೃಷ್ಟ್ಯಾದಿಗಳಿಗೆ ಉಚಿತವಾದ ರಜಸ್ಸು ಮುಂತಾದ ಗುಣಗಳಿಂದ, ಭಾವಯಂತಂ = ಉಂಟುಮಾಡುವ, ದೇವದೇವಂ = ದೇವತೆಗಳಿಗೂ ದೇವತೆಯಾದ ಶ್ರೀಹರಿಯನ್ನು, ಅಸ್ಮರನ್ ಹಿ = ಸ್ಮರಿಸಿದರಷ್ಟೆ.

ತಾ:—ಆಚಾರ್ಯರು ವೇದಪ್ರವಚನಮಾಡುವಾಗ ಕಕಾರವೇ ಮೊದಲಾದ ವರ್ಣಗಳ ಉಚ್ಚಾರಣೆಗೆ ವಿಹಿತವಾದ ಕಂಠ ತಾಲು ಮುಂತಾದ ಆಯಾಸ್ಥಾನಗಳಿಂದಲೇ ಕಕಾರಾದಿಗಳನ್ನು ಉಚ್ಚರಿಸುತ್ತಿದ್ದರು. ಹ್ರಸ್ವ-ದೀರ್ಘಪ್ಲುತಗಳನ್ನು ಒಂದುಮಾತ್ರೆ, ಎರಡುಮಾತ್ರೆಗಳು, ಮೂರು ಮಾತ್ರೆಗಳಿಂದಲೇ ಸರಿಯಾಗಿ ಉಚ್ಚರಿಸುತ್ತಿದ್ದರು. ಪಶ್ಯಂತೀ, ಮಧ್ಯಮಾ ವೈಖರೀ ಎಂಬ ಮೂರು ಅವಸ್ಥೆಗಳನ್ನು ಆಯಾ ಅವಸ್ಥಾದೇವತೆಗಳ ಧ್ಯಾನವೆಂಬ ಗುಣಕ್ಕೆ ಅನುಸಾರವಾಗಿ ಪ್ರಕಟಿಸುತ್ತಿದ್ದರು. ಇಂತಹ ಶ್ರೀಮಧ್ವಾಚಾರ್ಯರನ್ನು ದೇವತೆಗಳು ನೋಡಿ, ದೇವೋತ್ತಮನಾದ ಶ್ರೀಹರಿಯನ್ನು ಸ್ಮರಿಸಿದರು. ಈ ರೀತಿಯಾಗಿ ವೇದೋಚ್ಚಾರಣ ಮಾಡುತ್ತಿರುವ ಆಚಾರ್ಯರು ಪರಮಾತ್ಮನಂತೆ ತೋರಿದ್ದರಿಂದ ದೇವತೆಗಳು ಪರಮಾತ್ಮನನ್ನು ಸ್ಮರಿಸಿದರು; ಅದು ಹೇಗೆಂದರೆ–ಪರಮಾತ್ಮನು ಬ್ರಹ್ಮಾದಿ ದೇವತೆಗಳಿಗೆ ಉತ್ಪತ್ತಿಸ್ಥಾನವಾದ ಶಿರಸ್ಸು ಮೊದಲಾದ ಅಂಗಗಳಿಂದ ಆಯಾ ದೇವತೆಗಳನ್ನು ಸೃಜಿಸುತ್ತಾನೆ. ಆಕಾಶಾದಿಪಂಚಮಹಾಭೂತಗಳ ಗುಣಗಳಾದ ಶಬ್ದಸ್ಪರ್ಶಾದಿಗಳ ಸೃಷ್ಟಿಯಲ್ಲಿ ಸಮರ್ಥನು. ಸೃಷ್ಟಿ, ಸ್ಥಿತಿ, ಸಂಹಾರಗಳೆಂಬ ಮೂರು ಅವಸ್ಥೆಗಳನ್ನು ರಜಸ್ಸು, ಸತ್ತ್ವ, ತಮೋಗುಣಗಳಿಂದ ಉಂಟುಮಾಡುತ್ತಾನೆ. ಉಕ್ತಾಂಗಳಿಂದ ಕಾದಿವ್ಯಂಜಕತ್ವ, ತತ್ತನ್ಮಾತ್ರಾವ್ಯಂಜನಾದಿಪ್ರಾವೀಣ್ಯ, ತತ್ತದ್ಗುಣಗಳಿಂದ ಅವಸ್ಥಾತ್ರಯವ್ಯಂಜಕತ್ವ ಎಂಬ ಸದೃಶಧರ್ಮವಿರುವುದರಿಂದ ದೇವತೆಗಳು ಆಚಾರ್ಯರನ್ನು ನೋಡಿ ದೇವೋತ್ತಮನಾದ ಸರ್ವೋತ್ತಮನಾದ ಲಕ್ಷ್ಮೀಕಾಂತನನ್ನು ಸ್ಮರಿಸಿದರು. ಎಂದು ಭಾವ (ಆಭಾಸಕೋऽಸ್ಯ ಪವನಃ ಎಂಬ ಉಕ್ತಿಯಂತೆ ವಾಯುದೇವರು ಹರಿಯ ಪ್ರತಿಬಿಂಬರಾದ್ದರಿಂದ ಸ್ವಾಮಿಯ ಗುಣಗಳು ದಾಸನಲ್ಲಿಯೂ ಕಾಣುವುದು ಯುಕ್ತ.)

Rarest Archives

ವಿ:—ಉಕ್ತಾನಿ ಚ ತಾನಿ ಅಂಗಾನಿ ಚ ಉಕ್ತಾಂಗಾನಿ ತೇಭ್ಯಃ, ಕಃ ಆದಿಃ ಯೇಷಾಂ ತೇ ಕಾದಿಕಾಃ ತಾನ್ (ಕಃ ಬ್ರಹ್ಮದೇವರು, ಕಕಾರ ವೆಂಬ ವರ್ಣ,) ತಾಶ್ಚ ತಾಃ ಮಾತ್ರಾಶ್ಚ ತತ್ತನ್ಮಾತ್ರಾಃ, ತಾಸಾಂ ವ್ಯಂಜನಂ ಆದಿ ಯಸ್ಯ ಸಃ ತಸ್ಮಿನ್, ತಾಸಾಂ ಗುಣಾಃ ತೈಃ, ದೇವಾನಾಂ ದೇವಃ ತಂ; ಕ್ರಿಯಾ:–ವಿ + ಅಸ್ಮರತ್ ಅಸ್ಮರತಾಂ ಅಸ್ಮರನ್ ಇತ್ಯಾದಿ ಸ್ಮೃ–ಚಿಂತಾಯಾಂ ಲಙ್.

ಅವ:—ಮತ್ತೂ ವೇದವನ್ನು ಉಚ್ಚರಿಸುತ್ತಿರುವ ಆಚಾರ್ಯರ ವರ್ಣನೆ—

**ಆದೌ ಹ್ರಸ್ವತ್ವೇನ ವತ್ಸಾನುವೃತ್ತ್ಯಾ**
**ಮಾತ್ರಾಪಾದೌ ವರ್ತಯನ್ ದೃಶ್ಯಮಾನಃ ।**
**ಕುರ್ವನ್ನನ್ಯಾಶ್ಚಾಗ್ರ್ಯರೂಪಾ ವಿವೃತ್ತೀ–**
**ರ್ಗೋವಿಂದಶ್ರೀರಾಸ ಗೋವಿಂದಭಕ್ತಃ ॥೩೨॥**

ಅ:—ಆದೌ ಹ್ರಸ್ವತ್ವೇನ ವತ್ಸಾನುವೃತ್ತ್ಯಾ ಮಾತ್ರಾಪಾದೌ (ಮಾತ್ರಾ, ಪಾದೌ) ವರ್ತಯನ್ ದೃಶ್ಯಮಾನಃ ಅಗ್ರ್ಯರೂಪಾಃ ಅನ್ಯಾಃ ವಿವೃತ್ತೀಃ ಕುರ್ವನ್ ಗೋವಿಂದಭಕ್ತಃ ಗೋವಿಂದಶ್ರೀಃ ಆಸ.

ಅರ್ಥ:—ಆದೌ = ಮೊದಲು, ಹ್ರಸ್ವತ್ವೇನ = ಹ್ರಸ್ವವಾಗಿರುವಿಕೆಯಿಂದ, ವತ್ಸಾನುವೃತ್ತ್ಯಾ = ವತ್ಸಾನುವೃತ್ತಿ ಎಂಬ ವೃತ್ತಿಯಿಂದ, ಮಾತ್ರಾಪಾದೌ = ಮಾತ್ರಪರಿಮಾಣದ ಕಾಲದ ಎರಡಂಶಗಳನ್ನು ವರ್ತಯನ್ = ಉಚ್ಚಾರಣೆಯಿಂದ ತೋರಿಸುತ್ತಾ, ದೃಶ್ಯಮಾನಃ = (ದೇವತೆಗಳಿಂದ) ನೋಡಲ್ಪಡುವ, ಅಗ್ರ್ಯರೂಪಾಃ = ಶ್ರೇಷ್ಠವಾದ, ಅನ್ಯಾಃ = ಬೇರೆಯಾದ, ವಿವೃತ್ತೀಃ = ಪಾಕವತೀ ಪಿಪೀಲಿಕಾ ಎಂಬ ವಿವೃತ್ತಿಗಳನ್ನು, ಕುರ್ವನ್ = ಉಚ್ಚಾರಣೆಯಿಂದ ತೋರಿಸುತ್ತಿರುವ, ಗೋವಿಂದ-ಭಕ್ತಃ = ಗೋಪಾಲಕೃಷ್ಣನ ಭಕ್ತರಾದ ಆಚಾರ್ಯರು, ಆದೌ = ಬಾಲ್ಯದಲ್ಲಿ, ಹ್ರಸ್ವತ್ವೇನ = ಚಿಕ್ಕವನಾಗಿರುವುದರಿಂದ, ವತ್ಸಾನುವೃತ್ತ್ಯಾ = ಕರುಗಳ ಅನುಸರಿಸುವಿಕೆಯಿಂದ, ಪಾದೌ ವರ್ತಯನ್ = ಕಾಲುಗಳನ್ನು ಇಡುವವನಾಗಿ, ಮಾತ್ರಾ ದೃಶ್ಯಮಾನಃ = ತಾಯಿ ಯಶೋದೆಯಿಂದ

Rarest Archiver

ನೋಡಲ್ಪಡುತ್ತಿರುವ, ಅಗ್ರ್ಯರೂಪಾಃ = ಉತ್ತಮಸೌಂದರ್ಯವುಳ್ಳ, ಅನ್ಯಾಃ = ಇತರಗೋಪಿಕಾಸ್ತ್ರೀಯರನ್ನು, ವಿವೃತ್ತೀಃ = ಇತರ ವ್ಯಾಪಾರಗಳಿಲ್ಲದವರನ್ನಾಗಿ, ಕುರ್ವನ್ = ಮಾಡುತ್ತಿರುವ, ಗೋವಿಂದಶ್ರೀಃ = ಗೋಪಾಲಕಶ್ರೀಕೃಷ್ಣನ ಕಾಂತಿಯುಳ್ಳವರು, ಆಸ = ಆದರು. (ಪ್ರಕಾಶಿಸಿದರು.)

**ತಾ:**—ಆಚಾರ್ಯರು ವೇದೋಚ್ಚಾರಣ ಮಾಡುವಾಗ ಆರಂಭದಲ್ಲಿ ಹ್ರಸ್ವಸ್ವರವನ್ನು ಉಚ್ಚರಿಸಿ ವತ್ಸಾನುವೃತ್ತಿ ಎಂಬ ವೃತ್ತಿಯಿಂದ, ಸ್ವರಗಳ ಉಚ್ಚಾರಣೆಯ ಕಾಲರೂಪವಾದ ಮಾತ್ರಾಗಳಿಂದ ಹ್ರಸ್ವದೀರ್ಘಪ್ಲುತ ಮಾತ್ರೆಗಳನ್ನು ಸ್ಪಷ್ಟೀಕರಿಸುತ್ತಿರುವಾಗ ದೇವತೆಗಳಿಂದ ನೋಡಲ್ಪಟ್ಟರು. ಅತಿಶ್ರೇಷ್ಠಗಳಾದ ಪಾಕವತೀ ಪಿಪೀಲಿಕಾ ಮೊದಲಾದ ಬೇರೆ ಬೇರೆ ವೃತ್ತಿಗಳನ್ನು ಉಚ್ಚಾರಣಮಾಡುತ್ತಿದ್ದರು. ಆಗ ಗೋಪಾಲಕೃಷ್ಣನ ಭಕ್ತರಾದ ಆಚಾರ್ಯರು ಗೋಪಾಲಕೃಷ್ಣನಂತೆ ಪ್ರಕಾಶಿಸಿದರು. ಬಾಲ್ಯದಲ್ಲಿ ಚಿಕ್ಕ ಮಗುವಾಗಿದ್ದು ಕುಳ್ಳನಾಗಿರುವುದರಿಂದ ಕರುಗಳನ್ನು ಮೇಯಿಸುತ್ತಾ ಅವುಗಳನ್ನು ಹಿಂಬಾಲಿಸಿ ಗೋಪಾಲಬಾಲಕೃಷ್ಣನು ಹೆಜ್ಜೆಗಳನ್ನಿಡುತ್ತಿದ್ದನು. ಈ ಸುಂದರನು ತನ್ನವನಾದ ನಂದನ, ನಂದನನೆಂದು ತಾಯಿಯು ಪ್ರೀತಿಯಿಂದ ನೋಡುತ್ತಿದ್ದಳು. ಶ್ರೀಕೃಷ್ಣನನ್ನು ನೋಡುತ್ತಾ ಸುಂದರಿಯರಾದ ಗೋಪಿಯರು ಬೇರೆ ಎಲ್ಲಾ ಕೆಲಸಗಳನ್ನೂ ಮರೆಯುತ್ತಿದ್ದರು. ಇಂತಹ ಕೃಷ್ಣನಂತೆ ಕೃಷ್ಣಭಕ್ತರಾದ ಆಚಾರ್ಯರು ಶೋಭಿಸಿದರು. ಹ್ರಸ್ವತ್ವೇನ ವತ್ಸಾನುವೃತ್ತಿ, ಮಾತ್ರಾಪಾದಗಳ ವರ್ತನ ಸಮಯದಲ್ಲಿ (ಅಂದರೆ ಮಾತ್ರೆಗಳ ಅಂಶಗಳ ಉಚ್ಚಾರಣಸಮಯದಲ್ಲಿ ಮತ್ತು ಮಾತ್ರಾ = ತಾಯಿಯಿಂದ, ಪಾದೌ ವರ್ತಯನ್ = ಹೆಜ್ಜೆಗಳನ್ನು ಇಡುವ ಸಮಯದಲ್ಲಿ) ನೋಡಲ್ಪಡುವಿಕೆ, ಅಗ್ರ್ಯರೂಪದ ಅನ್ಯವಿವೃತ್ತಿಗಳ ಉಚ್ಚರಿಸುವಿಕೆ, ಅಗ್ರ್ಯರೂಪದ (ಸುಂದರರೂಪದ) ಅನ್ಯಗೋಪಿಯರನ್ನು ವಿವೃತ್ತಿಗಳನ್ನಾಗಿ ಮಾಡುವಿಕೆ, ಎಂಬಧರ್ಮಗಳಿಂದ ಗೋವಿಂದನ ಭಕ್ತರು ಗೋವಿಂದನ ಕಾಂತಿಯುಳ್ಳವರು ಆದರು. (ಶಬ್ದ ಮತ್ತು ವರ್ಣಗಳ ಸ್ವರೂಪವಿಶೇಷದ ಅಭಿವ್ಯಕ್ತಿಯೇ ವಿವೃತ್ತಿಯು, ಅಥವಾ ವೃತ್ತಿಯು; ಶಬ್ದವನ್ನು ಉಚ್ಚರಿಸುವಾಗ ಶಿಕ್ಷಾಶಾಸ್ತ್ರಾಭಿಜ್ಞರು ಅನೇಕ ಬಗೆಯ

Rarest Archiver

ವಿವೃತ್ತಿಗಳನ್ನು ಬಳಸುತ್ತಾರೆ. ಬುಡದಲ್ಲಿ ಹ್ರಸ್ವವುಳ್ಳದ್ದು ಹ್ರಸ್ವಾನುವೃತ್ತಿ; ಅಂತ್ಯದಲ್ಲಿ ಹ್ರಸ್ವವುಳ್ಳದ್ದು ವತ್ಸಾನುಸಾರಿಣೀವೃತ್ತಿ; ಆದ್ಯಂತಗಳಲ್ಲಿ ಹ್ರಸ್ವವುಳ್ಳದ್ದು ಪಾಕವತೀ, ಮಧ್ಯದಲ್ಲಿ ದೀರ್ಘವುಳ್ಳದ್ದು ಪಿಪೀಲಿಕಾವೃತ್ತಿ.)

**ವಿ:**— ಹ್ರಸ್ವಾಯಾಃ (ಹ್ರಸ್ವಸ್ಯ) ಭಾವಃ ಹ್ರಸ್ವತ್ವಂ ತೇನ, ಮಾತ್ರಾಯಾಃ ಪಾದೌ ತೇನ, ಅಗ್ರ್ಯಂ ರೂಪಂ ಯಾಸಾಂ ತಾಃ, ಗೋವಿಂದಸ್ಯ ಶ್ರೀರಿವ ಶ್ರೀಃ ಯಸ್ಯ ಸಃ, ಗೋವಿಂದಸ್ಯ ಭಕ್ತಃ.

**ಕ್ರಿ:**—ಆಸ ಆಸತುಃ ಆಸುಃ ಇತ್ಯಾದಿ. ಅಸ ಗತಿದೀಪ್ತ್ಯಾದಾನೇಷು ಎಂಬ ಧಾತುವಿನ ಲಿಟ್; ಅಥವಾ ಆಸ= ಇದ್ದರು ಎಂದು ಅರ್ಥ. ಇದು ತಿಙಂತಪ್ರತಿರೂಪಕಅವ್ಯಯ. (ತಿಙಂತದಂತೆ ಕಾಣಿಸುವ ಅವ್ಯಯ.)

**ಮಾಂಗಲ್ಯಾಂಗವ್ಯಕ್ತಭಾವಾ ತ್ರಿಲೋಕೀ-**
**ರಂಗಾರೂಢಾ ವಿಸ್ಮಯಂ ಪ್ರಾಪಯಂತೀ।**
**ಕೃಷ್ಣೇವಾನ್ಯಾ ಯೋಗ್ಯವಿನ್ಯಾಸಪಾದಾ**
**ರೇಜೇ ಮಾಧ್ವೀ ಸುಸ್ವರಾ ವೇದವಾಣೀ** ॥೩೩॥

**ಅ:**— ಮಾಂಗಲ್ಯಾಂಗವ್ಯಕ್ತಭಾವಾ ತ್ರಿಲೋಕೀಂ ವಿಸ್ಮಯಂ ಪ್ರಾಪಯಂತೀ ರಂಗಾರೂಢಾ ಯೋಗ್ಯವಿನ್ಯಾಸಪಾದಾ ಸುಸ್ವರಾ ಮಾಧ್ವೀ ವೇದವಾಣೀ ಅನ್ಯಾ ಕೃಷ್ಣಾ ಇವ ರೇಜೇ ॥

**ಅರ್ಥ:**— ಮಾಂಗಲ್ಯಾಂಗ = ಶ್ರೇಷ್ಠವಾದ ಶಿಕ್ಷಾದಿಅಂಗಗಳಿಂದ, ವ್ಯಕ್ತಭಾವಾ = ಸ್ಪಷ್ಟವಾದ ಅಭಿಪ್ರಾಯವುಳ್ಳ, ತ್ರಿಲೋಕೀಂ= ಮೂರು ಲೋಕಗಳನ್ನು, ವಿಸ್ಮಯಂ ಪ್ರಾಪಯಂತೀ= ಆಶ್ಚರ್ಯವನ್ನು ಹೊಂದಿಸುತ್ತಿರುವ, ರಂಗಾರೂಢಾ= ರಂಗಸ್ವರವೆಂಬ ಸ್ವರವಿಶೇಷದಿಂದಸಹಿತವಾದ, ಯೋಗ್ಯವಿನ್ಯಾಸ = ಯೋಗ್ಯವಾದ ವಿರಾಮವುಳ್ಳ, ಪಾದಾ= ಋಕ್ಕುಗಳ ನಾಲ್ಕನೆಯ ಒಂದಂಶವುಳ್ಳ, ಸುಸ್ವರಾ = ಉತ್ತಮವಾದ ಉದಾತ್ತಾದಿ ಸ್ವರಗಳುಳ್ಳ, ಮಾಧ್ವೀ ವೇದವಾಣೀ= ಶ್ರೀಮಧ್ವರು ಉಚ್ಚರಿಸಿದ ವೇದ-ಭಾರತಿಯು, ಮಾಂಗಲ್ಯಾಂಗ = ಮಂಗಳಕರವಾದ ಅವಯವಗಳಲ್ಲಿ,

ವ್ಯಕ್ತಭಾವಾ = ಪ್ರಕಟಗೊಳಿಸಿದ ವಿಲಾಸವುಳ್ಳ, ತ್ರಿಲೋಕೀಂ ವಿಸ್ಮಯಂ ಪ್ರಾಪಯಂತೀ = ಮೂರುಲೋಕಗಳನ್ನು ಬೆರಗುಗೊಳಿಸುವ, ರಂಗಾರೂಢಾ = ಸ್ವಯಂವರಮಂಟಪವನ್ನು ಪ್ರವೇಶಿಸಿದ, ಮಾನ್ಯವಿನ್ಯಾಸ = ಮನೋಹರವಾದ ಹೆಜ್ಜೆ ಇಡುವಿಕೆಯುಳ್ಳ, ಪಾದಾ = ಪಾದಗಳುಳ್ಳ, ಸುಸ್ವರಾ = ಇಂಪಾದ ಧ್ವನಿಯುಳ್ಳ, ಅನ್ಯಾ ಕೃಷ್ಣಾ ಇವ = ಬೇರೊಬ್ಬ ದ್ರೌಪದಿಯಂತೆ, ರೇಜೇ = ಪ್ರಕಾಶಿಸಿತು.

ತಾ :— ಆ ಮಧ್ವಾಚಾರ್ಯರ ವೇದಭಾರತಿಯು ಶ್ರೇಷ್ಠವಾದ ಶಿಕ್ಷಾದಿಷಡಂಗಗಳಿಂದ ತನ್ನ ಭಾವವನ್ನು ಪ್ರಕಟಿಸತಕ್ಕದ್ದೂ, ಮೂರು ಲೋಕಗಳಿಗೂ ಆಶ್ಚರ್ಯವನ್ನುಂಟು ಮಾಡತಕ್ಕದ್ದೂ, ರಂಗವೆಂಬ ಸ್ವರವಿಶೇಷದಿಂದ ಕೂಡಿದ್ದೂ ಆಗಿತ್ತು. ಉದಾತ್ತ ಅನುದಾತ್ತ ಸ್ವರಿತ ಗಳೆಂಬ ಮೂರು ಉತ್ಕೃಷ್ಟಸ್ವರಗಳಿಂದ ಕೂಡಿತ್ತು. ಯೋಗ್ಯವಾದ, ಪಾದ, ಅರ್ಧ, ಋಕ್ ಎಂಬ ವಿರಾಮ(ನಿಲ್ಲಿಸುವ) ಸ್ಥಾನವುಳ್ಳದ್ದೂ ಆಗಿತ್ತು. ಇಂತಹ ವೇದಭಾರತಿಯು ಮತ್ತೊಬ್ಬಳಾದ ಭಾರತಿಯ ಅವತಾರಳಾದ ಕೃಷ್ಣಾ ಎಂಬ ಹೆಸರಿನ ದ್ರೌಪದೀದೇವಿಯಂತೆ ಕಂಗೊಳಿಸಿತು. ಆ ಕೃಷ್ಣೆ(ಭಾರತಿ)ಯು ಅಂದವಾದ ಕೈಕಾಲುಮುಂತಾದ ಅಂಗಗಳಿಂದ ಭಾವ ವಿಲಾಸವನ್ನು ಪ್ರಕಟಗೊಳಿಸುವವಳೂ, ತನ್ನ ಸೌಂದರ್ಯಾದಿಗುಣಗಳಿಂದ ಮೂರುಲೋಕವನ್ನೂ ಬೆರಗುಗೊಳಿಸುವವಳೂ, ತನ್ನ ವಿವಾಹಕ್ಕಾಗಿ ಸ್ವಯಂವರಮಂಟಪವನ್ನೇರಿದವಳೂ, ಸುಂದರವಾದ ಪಾದವಿನ್ಯಾಸವುಳ್ಳ ವಳೂ, ಮತ್ತು ಇಂಪಾದ ಶುಕಹಂಸಕೋಕಿಲ-ಸ್ವರದಿಂದ ಕೂಡಿದವಳೂ ಆಗಿದ್ದಳು. ಈ ಉಪಮಾನದಿಂದ ಭಾರತೀದೇವಿಯ ಅವತಾರಳಾದ ಕೃಷ್ಣೆಯು ವೇದಾಭಿಮಾನಿಯೆಂದು ಸೂಚಿತವಾಯಿತು. ಶಿಕ್ಷಾ ವ್ಯಾಕರಣ ಛಂದಸ್ಸು ನಿರುಕ್ತ ಜ್ಯೋತಿಷ ಕಲ್ಪ ಎಂಬ ಆರುವೇದಾಂಗಗಳಿಗನುಸಾರ ವಾಗಿ ವೇದವನ್ನು ಪಠಿಸುತ್ತಾ ಉದಾತ್ತಾದಿಸ್ವರಗಳ ಕ್ರಮವನ್ನು ತಪ್ಪದೆ, ಪಾದ, ಅರ್ಧ, ಋಕ್ಕುಗಳಲ್ಲಿ ಸರಿಯಾದ ವಿರಾಮವನ್ನು ಕೊಡುತ್ತಾ ಆಚಾರ್ಯರು ವೇದವನ್ನು ಉಚ್ಚರಿಸಿದರು ಈ ರೀತಿ ಆಚಾರ್ಯರ ವೇದಪಠನವು ಅದ್ಭುತವಾಗಿತ್ತು. ರಂಗಸ್ವರ-ತಕ್ರಾ೦ ಮಜ್ಜಿಗೆ೦ ಎಂಬಂತೆ ಅನುನಾಸಿಕಸ್ವರ ಉಚ್ಚಾರಣೆ.

Rarest Archiver

ವಿ:—ಮಂಗಲಾನ್ಯೇವ ಮಾಂಗಲ್ಯಾನಿ, ಮಾಂಗಲ್ಯಾನಿ ಚ ತಾನಿ ಅಂಗಾನಿ ಚ (ಅಥವಾ ಮಂಗಲಾನಾಂ ಭಾವಃ ಮಾಂಗಲ್ಯಂ ಮಾಂಗಲ್ಯೇನ ಯುಕ್ತಾನಿ ಅಂಗಾನಿ) ಮಾಂಗಲ್ಯಾಂಗಾನಿ, ಮಾಂಗಲ್ಯಾಂಗೈಃ ವ್ಯಕ್ತಃ ಭಾವಃ ಯಸ್ಯಾಃ ಸಾ; ಮಾಂಗಲ್ಯಾಂಗೇಷು ವ್ಯಕ್ತಃ ಭಾವಃ ಯಸ್ಯಾಃ ಸಾ, ತ್ರಯಾಣಾಂ ಲೋಕಾನಾಂ ಸಮಾಹಾರಃ ತ್ರಿಲೋಕೀ ತಾಂ, ರಂಗಂ ಆರೂಢಾ, ಮಾನ್ಯಃ ವಿನ್ಯಾಸಃ ಯೇಷಾಂ ತೇ, ಮಾನ್ಯವಿನ್ಯಾಸಾಃ ಪಾದಾಃ ಯಸ್ಯಾಃ ಸಾ, ಮಾನ್ಯಃ ವಿನ್ಯಾಸಃ ಯಯೋಃ ತೌ, ಮಾನ್ಯವಿನ್ಯಾಸೌ, ಪಾದೌ ಯಸ್ಯಾಃ ಸಾ, ಶೋಭನಾಃ ಸ್ವರಾಃ (ಶೋಭನಃ ಸ್ವರಃ) ಯಸ್ಯಾಃ ಸಾ, ಮಧ್ವಸ್ಯ ಇಯಂ ಮಾಧ್ವೀ, ವೇದರೂಪಾ ವಾಣೀ;

ಕ್ರಿ:—ರೇಜೇ ರೇಜಾತೇ ರೇಜಿರೇ ಇತ್ಯಾದಿ ರಾಜೃ. ದೀಪ್ತೌ ಲಿಟ್.

ಅವ.—ಮತ್ತೂ ಆ ವೇದೋಚ್ಚಾರಣವನ್ನೇ ವರ್ಣಿಸುತ್ತಾರೆ—

**ಗಾಂಭೀರ್ಯಾದ್ಯೈರ್ಯುಕ್ತಮೌದಾರ್ಯಕಾರ್ಯೈ-**
**ರ್ನಾನಾನಾದಶ್ಲಾಘ್ಯಮುಚ್ಚಾರಣಂ ತತ್ ।**
**ಶಿಕ್ಷಾಶಿಕ್ಷಾಲಕ್ಷಣಾನಾಂ ಹಿ ಲಕ್ಷ್ಯಂ**
**ಮಾನ್ಯಂ ಮನ್ಯೇ ಧನ್ಯಬುದ್ಧೇರತುಲ್ಯಂ ॥೩೪॥**

ಅ:— ಔದಾರ್ಯಕಾರ್ಯೈಃ ಗಾಂಭೀರ್ಯಾದ್ಯೈಃ ಯುಕ್ತಂ ನಾನಾನಾದಶ್ಲಾಘ್ಯಂ ಶಿಕ್ಷಾಶಿಕ್ಷಾಲಕ್ಷಣಾನಾಂ ಲಕ್ಷ್ಯಂ ಮಾನ್ಯಂ ಧನ್ಯಬುದ್ಧೇಃ ತತ್ ಉಚ್ಚಾರಣಂ ಅತುಲ್ಯಂ ಮನ್ಯೇ ಹಿ ।

ಅರ್ಥ:-ಔದಾರ್ಯಕಾರ್ಯೈಃ= ತನ್ನ ಮಹತ್ತ್ವದಿಂದ ಉಂಟಾದ, ಗಾಂಭೀರ್ಯಾದ್ಯೈಃ ಯುಕ್ತಂ= ಗಾಂಭೀರ್ಯ ಮೊದಲಾದ ಗುಣಗಳಿಂದ ಕೂಡಿದ, ನಾನಾನಾದಶ್ಲಾಘ್ಯಂ= ಬಗೆಬಗೆಯ ಧ್ವನಿಗಳಿಂದ ಹೊಗಳಲು ಯೋಗ್ಯವಾದ, ಶಿಕ್ಷಾ= ಶಿಕ್ಷಾ ಎಂಬ ವೇದಾಂಗಗ್ರಂಥದಲ್ಲಿ ಹೇಳಿರುವ, ಶಿಕ್ಷಾ = ವೇದೋಚ್ಚಾರಣನಿಯಮದ, ಲಕ್ಷಣಾನಾಂ = ಲಕ್ಷಣಗಳಿಗೆ, ಲಕ್ಷ್ಯಂ = ಉದಾಹರಣವಾಗಿರುವ, ಮಾನ್ಯಂ= ಗೌರವಿಸಲು ಯೋಗ್ಯವಾದ, ಧನ್ಯಬುದ್ಧೇಃ = ಶ್ರೀಪೂರ್ಣಪ್ರಜ್ಞರ, ತತ್ ಉಚ್ಚಾರಣಂ= ಆ

Rarest Archiver

ವೇದೋಚ್ಚಾರಣೆಯನ್ನು, ಅತುಲ್ಯಂ ಮನ್ಯೇ ಹಿ= ಎಣೆಯಿಲ್ಲದ್ದನ್ನಾಗಿ ತಿಳಿಯುತ್ತೇನೆ. ಇದು ನಿಶ್ಚಯವು.

ತಾ:— ಶ್ರೀಪೂರ್ಣಪ್ರಜ್ಞರ ಮಹಿಮೆಯಿಂದ ಅವರ ವೇದೋಚ್ಚಾರಣವು ಗಾಂಭೀರ್ಯಮೊದಲಾದ ಗುಣಗಳಿಂದ ಕೂಡಿತ್ತು. ಅನೇಕ ಬಗೆಯ ಧ್ವನಿಗಳಿಂದ ಶ್ಲಾಘನೀಯವಾಗಿತ್ತು. ಶಿಕ್ಷಾ ಎಂಬ ವೇದಾಂಗ ಗ್ರಂಥದಲ್ಲಿ ಹೇಳಿರುವ ವೇದೋಚ್ಚಾರಣನಿಯಮಗಳಿಗೆ ಸರಿಯಾದ ಉದಾಹರಣವಾಗಿತ್ತು, ಆದುದರಿಂದಲೇ ದೇವತೆಗಳಿಗೂ ಮಾನ್ಯವಾದ ಈ ವೇದೋಚ್ಚಾರಣೆಯು ಅಸದೃಶವೆಂದು ನಾನು ತಿಳಿಯುತ್ತೇನೆ. (ಕವಿವಾಣಿ) ಆಚಾರ್ಯರ ವೇದೋಚ್ಚಾರಣೆಗೆ ಸಮಾನವಾದ ಮತ್ತೊಂದು ವೇದೋಚ್ಚಾರಣವೇ ಇಲ್ಲವೆಂದು ಭಾವ.

ವಿ:—ಗಂಭೀರಸ್ಯ ಭಾವಃ, ಗಾಂಭೀರ್ಯಂ ಆದ್ಯಂ ಯೇಷಾಂ ತೇ ಗಾಂಭೀರ್ಯಾದ್ಯಾಃ ತೈಃ, ಉದಾರಸ್ಯ ಭಾವಃ, ಔದಾರ್ಯಸ್ಯ ಕಾರ್ಯಾಃ ತೈಃ, ನಾನಾನಾದೈಃ ಶ್ಲಾಘ್ಯಂ, ಶಿಕ್ಷಾಯಾಂ ಶಿಕ್ಷಾ ಶಿಕ್ಷಾಶಿಕ್ಷಾಯಾಃ ಲಕ್ಷಣಾನಿ, ತೇಷಾಂ, ನ ತುಲ್ಯಂ ಅತುಲ್ಯಂ ತತ್ ।

ಕ್ರಿ:—ಮನ್ಯತೇ ಮನ್ಯೇತೇ ಮನ್ಯಂತೇ, ಮನ್ಯಸೇ ಮನ್ಯೇಥೇ ಮನ್ಯಧ್ವೇ, ಮನ್ಯೇ ಮನ್ಯಾವಹೇ ಮನ್ಯಾಮಹೇ ಮನ ಜ್ಞಾನೇ ಆತ್ಮನೇ. ಉ. ಪು. ಏ.

ಅವ:— ಶಿಕ್ಷಾದಿಷಡಂಗಗಳನ್ನು ಅನುಸರಿಸಿ ಆಚಾರ್ಯರು ವೇದೋಪನ್ಯಾಸಮಾಡಿದರು

ಕಾಲ್ಪೀಃ ಕ್ಲೃಪ್ತೀರ್ವ್ಯಂಜಯನ್ ಛಾಂದಸೀಶ್ಚ
ವ್ಯಕ್ತಂ ಶಾಬ್ದಂ ಶಾಸ್ತ್ರ(ಶಾಸ್ತ್ರಂ ಶಾಬ್ದ) ಮುದ್ಭಾವ್ಯ ಭೂಯಃ ।
ಸ ವ್ಯಾಚಖ್ಯಾವುಕ್ತನೈರುಕ್ತಮಾರ್ಗೋ
ಜ್ಯಾಯಾನ್ ಜ್ಯೋತಿರ್ವೇದಿನಾಂ ವೇದಮಿತ್ಥಂ ॥೩೫॥

ಅ: – ಸಃ ಕಾಲ್ಪೀಃ ಛಾಂದಸೀಃ ಕ್ಲೃಪ್ತೀಶ್ಚ ವ್ಯಂಜಯನ್ ಶಾಬ್ದಂ ಶಾಸ್ತ್ರಂ ಭೂಯಃ ವ್ಯಕ್ತಂ ಉದ್ಭಾವ್ಯ ಉಕ್ತನೈರುಕ್ತಮಾರ್ಗಃ ಜ್ಯೋತಿರ್ವೇದಿನಾಂ ಜ್ಯಾಯಾನ್ ಇತ್ಥಂ ವೇದಂ ವ್ಯಾಚಖ್ಯೌ ॥

Rarest Archiver

**ಅರ್ಥ:**— ಸಃ ಆ ಮಧ್ವಾಚಾರ್ಯರು, ಕಾಲ್ಪೀಃ = ಕಲ್ಪವೆಂಬ ವೇದಾಂಗಗ್ರಂಥದಲ್ಲಿ ಹೇಳಿರುವ, ಛಾಂದಸೀಃ = ಛಂದಶ್ಶಾಸ್ತ್ರದಲ್ಲಿಉಕ್ತವಾದ, ಕ್ಲೃಪ್ತೀಶ್ಚ=ಉಚ್ಚಾರಣೆಯ ನಿಯಮಗಳನ್ನು, ವ್ಯಂಜಯನ್ ಪ್ರಕಟಿಸುತ್ತಾ, ಶಾಬ್ದಂ ಶಾಸ್ತ್ರಂ = ಶಬ್ದಸಂಬಂಧಿಯಾದ ಶಾಸ್ತ್ರವನ್ನು (ವ್ಯಾಕರಣಶಾಸ್ತ್ರವನ್ನು) ಭೂಯಃ= ಬಹಳವಾಗಿ, ವ್ಯಕ್ತಂ= ಸ್ಪಷ್ಟವಾಗಿ, ಉದ್ಭಾವ್ಯ=ಪ್ರಕಟಿಸಿ, ಉಕ್ತನೈರುಕ್ತಮಾರ್ಗಃ= ಹೇಳಲ್ಪಟ್ಟ ನಿರುಕ್ತವೆಂಬ ವೇದಾಂಗದ ರೀತಿಯುಳ್ಳವರಾಗಿ, ಜ್ಯೋತಿರ್ವೇದಿನಾಂ (ಮಧ್ಯೇ) = ಜ್ಯೋತಿಶ್ಶಾಸ್ತ್ರವನ್ನು ಅರಿತವರ ಮಧ್ಯದಲ್ಲಿ, ಜ್ಯಾಯಾನ್= ಶ್ರೇಷ್ಠರಾಗಿ, ಇತ್ಥಂ ವೇದಂ ವ್ಯಾಚಖ್ಯೌ= ಈ ರೀತಿ ವೇದವನ್ನು ಪ್ರವಚನಮಾಡಿದರು.

**ತಾ:**—ಶ್ರೀಮಧ್ವಾಚಾರ್ಯರು ಕಲ್ಪ ಎಂಬ ವೇದಾಂಗದಲ್ಲಿ ಹೇಳಿದ ವೇದಾರ್ಥನಿಯಮಗಳನ್ನೂ, ಛಂದಸ್ಸೆಂಬ ಗ್ರಂಥದಲ್ಲಿ ಹೇಳಿದ ವೃತ್ತನಿಯಮಗಳನ್ನೂ ಪ್ರಕಟಿಸುತ್ತಾ, ವ್ಯಾಕರಣಶಾಸ್ತ್ರಕ್ಕೆ ಅನುಸಾರವಾಗಿ ಶಬ್ದಗಳ ವ್ಯುತ್ಪತ್ತಿಯನ್ನು ಮತ್ತೂ ಮತ್ತೂ ಸ್ಫುಟವಾಗಿ ಪ್ರಕಟಿಸುತ್ತಾ, ವೇದನಿಘಂಟು ಎಂಬ ನಿರುಕ್ತದ ದಾರಿಯನ್ನು ಬಿಡದೆ, ಜ್ಯೋತಿಷ್ಯವೆಂಬ ವೇದಾಂಗವನ್ನೂ ತಿಳಿದವರಲ್ಲಿ ಅತಿಶ್ರೇಷ್ಠರೆನಿಸಿ ವೇದ ವೇದಾರ್ಥಗಳ ಉಪನ್ಯಾಸಮಾಡಿದರು.

**ವಿ:**— ಕಲ್ಪಸ್ಯ ಇಮಾಃ ಕಾಲ್ಪ್ಯಃ ತಾಃ, ಛಂದಸಃ ಇಮಾಃ ಛಾಂದಸ್ಯಃ ತಾಃ ; ಶಬ್ದಸ್ಯ ಇದಂ ಶಾಬ್ದಂ ; ನಿರುಕ್ತಸ್ಯ ಅಯಂ ನೈರುಕ್ತಃ, ಉಕ್ತಃ ನೈರುಕ್ತಃ ಮಾರ್ಗಃ ಯೇನ ಸಃ, ಜ್ಯೋತಿಃ ವಿದಂತಿ ಇತಿ ಜ್ಯೋತಿರ್ವೇದಿನಃ ತೇಷಾಂ. ಅತಿಶಯೇನ ಪ್ರಶಸ್ಯಃ ಜ್ಯಾಯಾನ್ ;

**ಕ್ರಿ:**—ವಿ+ಆ+ ಚಖ್ಯೌ ಚಖ್ಯತುಃ ಚಖ್ಯುಃ, ಚಖ್ಯಿಥ ಚಖ್ಯಾಥ, ಚಖ್ಯಥುಃ ಚಖ್ಯ, ಚಖ್ಯೌ ಚಖ್ಯಿವ ಚಖ್ಯಿಮ. ಚಕ್ಷಿಙ್ ವ್ಯಕ್ತಾಯಾಂ ವಾಚಿ ಲಿಟ್, ಸೂ—ಚಕ್ಷಿಙಃ ಖ್ಯಾಞ್ - ಖ್ಯಾ ಆದೇಶ.

**ಅವ :**— ಆಚಾರ್ಯರ ವೇದಪ್ರವಚನವನ್ನು ಸಂಪೂರ್ಣವಾಗಿ ವರ್ಣಿಸಲು ಸಾಮಾನ್ಯರಿಗೆ ಶಕ್ಯವಿಲ್ಲ—

Rarest Archiver

ಶ್ರೌತೇ ವ್ಯಾಖ್ಯೋಚ್ಚಾರಣೇ ಚಾರುಣೀ ತೇ
ಮಾದೃಗ್ ದೇಹೀ ವರ್ಣಯೇದಸ್ಯ ಕೋ ನು।
ವಾಗೀಶಾನೈರ್ವಾಗ್ವಿಹಂಗೇಶಜೀವೈ-
ರ್ಭೂಯೋಽರ್ಶ್ಚರ್ಯೈರ್ವರ್ಣಿತೇ ಯೇ ಪ್ರಣಮ್ಯ ॥೩೬॥

ಅ :—ವಾಗೀಶಾನೈಃ ವಾಗ್ವಿಹಂಗೇಶಜೀವೈಃ ಭೂಯಾರ್ಶ್ಚರ್ಯೈಃ ಪ್ರಣಮ್ಯ ಯೇ ವರ್ಣಿತೇ ಅಸ್ಯ ಚಾರುಣೀ ಶ್ರೌತೇ ವ್ಯಾಖ್ಯೋಚ್ಚಾರಣೇ ಮಾದೃಕ್ ದೇಹೀ ಕೋ ನು ವರ್ಣಯೇತ್ ?

ಅರ್ಥ:—ವಾಗೀಶಾನೈಃ = ಒಳ್ಳೆಯ ಮಾತುಗಾರರಾದ, ವಾಕ್ = ಸರಸ್ವತಿ, ವಿಹಂಗೇಶ = ಗರುಡ, ಜೀವೈಃ = ಬೃಹಸ್ಪತಿ ಇವರಿಂದ, ಭೂಯಾಶ್ಚರ್ಯೈಃ = ಅಧಿಕವಾದ ಆಶ್ಚರ್ಯವುಳ್ಳವರಾಗಿ, ಪ್ರಣಮ್ಯ = ನಮಸ್ಕರಿಸಿ, ಯೇ = ಯಾವ ವ್ಯಾಖ್ಯಾನ ಮತ್ತು ಉಚ್ಚಾರಣಗಳು, ವರ್ಣಿತೇ = ಸ್ತುತಿಸಲ್ಪಟ್ಟವೆಯೋ, ತೇ = ಅಂತಹ ಆ, ಅಸ್ಯ = ಈ ಶ್ರೀಮಧ್ವಾಚಾರ್ಯರ, ಶ್ರೌತೇ = ವೇದಸಂಬಂಧಿಯಾದ, ವ್ಯಾಖ್ಯಾ = ಪ್ರವಚನವು, ಉಚ್ಚಾರಣೇ = ಉಚ್ಚಾರಣ ಇವುಗಳನ್ನು, ಮಾದೃಕ್ ದೇಹೀ = ನನ್ನಂತಹ ಜೀವನು, ಕೋ ನು = ಯಾವನು ತಾನೇ, ವರ್ಣಯೇತ್ = ವರ್ಣಿಸಿಯಾನು ?

ತಾ :— ಈ ಶ್ರೀಮಧ್ವಾಚಾರ್ಯರ ವೇದಾರ್ಥಗಳ ಉಪನ್ಯಾಸ ಮತ್ತು ಉಚ್ಚಾರಣವೆಂಬ ಇವೆರಡನ್ನು, ಪ್ರವಚನಧುರೀಣರೂ ವಾಗಭಿಮಾನಿಗಳೂ ಆದ ಸರಸ್ವತೀ, ಗರುಡ, ಬೃಹಸ್ಪತಿ ಇವರೆಲ್ಲರೂ ಬಹಳ ಆಶ್ಚರ್ಯವುಳ್ಳವರಾಗಿ ನಮಸ್ಕರಿಸಿ ಹೊಗಳುತ್ತಾರೆ. ಅಂತಹ ಮನೋಹರವಾದ ವೇದಾರ್ಥೋಪನ್ಯಾಸ ಮತ್ತು ಉಚ್ಚಾರಣಗಳನ್ನು, ನನ್ನಂತಹ ಸಾಮಾನ್ಯಜೀವನು ಯಾವನು ತಾನೇ ವರ್ಣಿಸಲು ಶಕ್ತನು ? ದೇವತೆಗಳಿಗೂ ಆಶ್ಚರ್ಯಕರವಾದ ಆಚಾರ್ಯರ ವೇದಪಠನ ಮತ್ತು ವ್ಯಾಖ್ಯಾನಗಳನ್ನು ಸಾಮಾನ್ಯರಿಗೆ ವರ್ಣಿಸಲು ಸಾಧ್ಯವಿಲ್ಲ ಎಂದು ಭಾವ.

ವಿ :—ಶ್ರುತೇಃ ಇಮೇ ಶ್ರೌತೇ, ವ್ಯಾಖ್ಯಾ ಚ ಉಚ್ಚಾರಣಂ ಚ ವ್ಯಾಖ್ಯೋಚ್ಚಾರಣೇ, ದೇಹಃ ಅಸ್ಯ ಅಸ್ತೀತಿ ದೇಹೀ (ನ್) ವಾಚಾಂ ಈಶಾನಾಃ ತೈಃ, ವಿಹಂಗಾನಾಂ ಈಶಃ ವಿಹಂಗೇಶಃ, ವಾಕ್ ಚ

ವಿಹಂಗೇಶಶ್ಚ ಜೀವಶ್ಚ ವಾಗ್ವಿಹಂಗೇಶಜೀವಾಃ ತೈಃ ಜೀವ ಆಂಗಿರಸೋ ವಾಚಸ್ಪತಿಃ—ಅಮರ. ಭೂರಿ ಆಶ್ಚರ್ಯಂ ಯೇಷಾಂ ತೇ ತೈಃ, **ಕ್ರಿಯಾ:** ವರ್ಣಯೇತ್ ವರ್ಣಯೇತಾಂ ವರ್ಣಯೇಯುಃ ಇತ್ಯಾದಿ, ವರ್ಣ ವರ್ಣ-ಕ್ರಿಯಾ ವಿಸ್ತಾರಗುಣವಚನೇಷು ಸಕ. ವಿಧಿಲಿಙ್.

ಅವ :—ಆಗ ಅಲ್ಲಿ ಸೇರಿದ ಸಭ್ಯರು ಏನು ಮಾಡಿದರು?—

**ಛಂದಸ್ಸಾರ್ಥಂ ಸಾರ್ಥಮತ್ರಾಮುನೇತ್ಥಂ**
**ಪ್ರೋಕ್ತಂ ಶ್ರುತ್ವಾ ಬ್ರಾಹ್ಮಣಾ ಬ್ರಹ್ಮಣೇವ।**
**ಸರ್ವೇ ಸೌಮ್ಯಾ ಜಿಷ್ಣುಜಿಜ್ಞಾಸಯಾಮೀ**
**ಪ್ರಾಪ್ಯ ಪ್ರೋಚುಶ್ಚಿತ್ರಕಾಯಾಭಿಧಾನಂ** ||೩೭||

ಅ:—ಸೌಮ್ಯಾಃ ಅಮೀ ಸರ್ವೇ ಬ್ರಾಹ್ಮಣಾಃ ಅತ್ರ ಬ್ರಹ್ಮಣಾ ಇವ ಅಮುನಾ ಇತ್ಥಂ ಸಾರ್ಥಂ ಪ್ರೋಕ್ತಂ ಛಂದಸ್ಸಾರ್ಥಂ ಶ್ರುತ್ವಾ ಜಿಷ್ಣು ಜಿಜ್ಞಾಸಯಾ ಚಿತ್ರಕಾಯಾಭಿಧಾನಂ ಪ್ರಾಪ್ಯ ಪ್ರೋಚುಃ।

**ಅರ್ಥ** :—ಸೌಮ್ಯಾಃ=ಪ್ರಸನ್ನರಾದ, ಅಮೀ ಸರ್ವೇ ಬ್ರಾಹ್ಮಣಾಃ =ಈ ಎಲ್ಲಾ ಬ್ರಾಹ್ಮಣರು, ಅತ್ರ=ಈ ವಿದ್ವಾಂಸರ ಸಭೆಯಲ್ಲಿ, ಬ್ರಹ್ಮಣಾ ಇವ=ಚತುರ್ಮುಖಬ್ರಹ್ಮದೇವರಿಂದ ಎಂಬಂತೆ, ಅಮುನಾ= ಈ ಶ್ರೀಮಧ್ವಾಚಾರ್ಯರಿಂದ, ಇತ್ಥಂ=ಹೀಗೆ, ಸಾರ್ಥಂ=ಅರ್ಥಸಹಿತ ವಾಗಿ, ಪ್ರೋಕ್ತಂ= ಹೇಳಲ್ಪಟ್ಟ, ಛಂದಸ್ಸಾರ್ಥಂ=ವೇದಸಮೂಹವನ್ನು, ಶ್ರುತ್ವಾ = ಕೇಳಿ, ಜಿಷ್ಣುಜಿಜ್ಞಾಸಯಾ=(ಶ್ರೀಮಧ್ವಾಚಾರ್ಯರನ್ನು) ಜಯಿಸುವವನು ಯಾರು ಎಂಬ ವಿಚಾರದಿಂದ, ಚಿತ್ರಕಾಯಾಭಿಧಾನಂ= ಪುಂಡರೀಕ ಪುರಿಯನ್ನು, ಪ್ರಾಪ್ಯ=ಹೊಂದಿ, ಪ್ರೋಚುಃ=ಹೇಳಿದರು.

ತಾ:—ಅಲ್ಲಿದ್ದ ಎಲ್ಲಾ ಸಭ್ಯರಾದ ಬ್ರಾಹ್ಮಣರು ಸಾಕ್ಷಾತ್ ಬ್ರಹ್ಮದೇವರಂತೆ ಆಚಾರ್ಯರು ಅರ್ಥಸಹಿತವಾಗಿ ವಿವರಿಸಿದ ಶ್ರುತಿ ಸಮೂಹವನ್ನು ಕೇಳಿದರು. ಅವರು ಯಾರು ಜಯಿಸುವರು ಎಂದು ತಿಳಿಯಲು ಬಯಸಿ, ವಿಚಾರಮಾಡಿ ಅನಂತರ ಪುಂಡರೀಕಪುರಿಯ ಬಳಿಗೆ ಬಂದು ಹೀಗೆಂದರು.

Rarest Archiver

**ವಿ:**—ಛಂದಸಾಂ ಸಾರ್ಥಃ ಛಂದಸ್ಸಾರ್ಥಃ ತಂ, ಸಾರ್ಥ = ಗುಂಪು, ಸಾರ್ಥೋ ವಣಿಕ್‌ಸಮೂಹೇ ಸ್ಯಾದಪಿ **ಸಂಘಾತಮಾತ್ರಕೇ**—ವಿಶ್ವ. ಅರ್ಥೇನ ಸಹಿತಂ ಯಥಾ ಭವತಿ ತಥಾ ಸಾರ್ಥಂ, **ಜಿಷ್ಣೋಃ** ಜಿಜ್ಞಾಸಾ ಜಿಷ್ಣುಜಿಜ್ಞಾಸಾ ತಯಾ, ಚಿತ್ರಕಾಯ **ಇತಿ ಅಭಿಧಾನಂ** ಯಸ್ಯ ಸಃ ತಂ, **ಕ್ರಿಯಾ:**- ಪ್ರ+ಊಚುಃ, ಉವಾಚ **ಊಚತುಃ ಊಚುಃ** ಇತ್ಯಾದಿ ಬ್ರೂಞ್ ವ್ಯಕ್ತಾಯಾಂ ವಾಚಿ ಲಿಟ್.

**ಅನ:**—ಆಲೋಚಿಸಿದಂತೆ ಅವರು ಪುಂಡರೀಕಪುರಿಯ ಹತ್ತಿರ ಹೋಗಿ ಹೀಗೆ ಹೇಳಿದರು—

**ಪ್ರಾಜ್ಯಪ್ರಜ್ಞಃ ಪ್ರಾಜ್ಯಯಾ ಪ್ರಜ್ಞಯಾಸೌ**
**ಹಂತಾವೋಚನ್ಮಂತ್ರವರ್ಣಾಭಿಧೇಯಂ ।**
**ತತ್ಪ್ರತ್ಯರ್ಥೀ ಪ್ರಾರ್ಥ್ಯತೇ ವಕ್ತುಮೇತತ್**
**ಪ್ರಾಜ್ಞಾಸ್ಮಾಭಿಃ ಶ್ರೋತುಕಾಮೋ ಭವಾಂಶ್ಚ** ॥೩೮॥

ಅ :—ಅಸೌ ಪ್ರಾಜ್ಯಪ್ರಜ್ಞಃ ಪ್ರಾಜ್ಯಯಾ ಪ್ರಜ್ಞಯಾ ಮಂತ್ರವರ್ಣಾಭಿಧೇಯಂ ಅವೋಚತ್ ಹಂತ! ಪ್ರಾಜ್ಞ! ತತ್‌ಪ್ರತ್ಯರ್ಥೀ ಭವಾನ್ ಚ ಶ್ರೋತುಕಾಮಃ ಅಸ್ಮಾಭಿಃ ಏತತ್ ವಕ್ತುಂ ಪ್ರಾರ್ಥ್ಯತೇ.

**ಅರ್ಥ:**—ಅಸೌ ಪ್ರಾಜ್ಯಪ್ರಜ್ಞಃ = ಈ ಪೂರ್ಣಪ್ರಜ್ಞರು, ಪ್ರಾಜ್ಯಯಾ ಪ್ರಜ್ಞಯಾ = ಪೂರ್ಣವಾದ ಬುದ್ಧಿಯಿಂದ, ಮಂತ್ರವರ್ಣಾಭಿಧೇಯಂ = ವೇದದ ಅರ್ಥವನ್ನು, ಅವೋಚತ್ = ಹೇಳಿದರು. ಹಂತ = ಇದು ಸಂತೋಷಕರವು (ಅಯ್ಯೋ ಕಷ್ಟ,) ಪ್ರಾಜ್ಞ! = ವಿದ್ವಾಂಸರಾದ ಪುಂಡರೀಕ ಪುರಿಗಳೇ! ತತ್‌ಪ್ರತ್ಯರ್ಥೀ = ಅವರಿಗೆ ಶತ್ರುವಾದ (ಪ್ರತಿವಾದಿಯಾದ), ಭವಾನ್ ಚ = ನೀವೂ ಕೂಡ, ಶ್ರೋತುಕಾಮಃ = ಕೇಳುವ ಇಚ್ಛೆಯುಳ್ಳ, ಅಸ್ಮಾಭಿಃ = ನಮ್ಮಿಂದ, ಏತತ್ ವಕ್ತುಂ = ಈ ವೇದದ ಅರ್ಥವನ್ನು ಹೇಳಲು, ಪ್ರಾರ್ಥ್ಯತೇ = ಪ್ರಾರ್ಥಿಸಲ್ಪಡುತ್ತೀರಿ.

**ತಾ:**—ಶ್ರೀಮಧ್ವಾಚಾರ್ಯರು ತಮ್ಮ ಶ್ರೇಷ್ಠವಾದ ಬುದ್ಧಿಯಿಂದ ವೇದಾರ್ಥವನ್ನು ವಿವರಿಸಿದರು. ಇದು ಚೆನ್ನಾಗಿದೆ, ಆದರೆ ನಮಗೆ ನಿಮಗೆ ಎಲ್ಲರಿಗೂ ದುಃಖಕರವಾಗಿದೆ. ಎಲೈ ಪಂಡಿತರಾದ ಪುಂಡರೀಕಪುರಿಗಳೇ!

Rarest Archive

ಆ ಮಧ್ವಾಚಾರ್ಯರ ಪ್ರತಿವಾದಿಗಳಾದ ನೀವೂ ವೇದಾರ್ಥವನ್ನು ಉಪನ್ಯಾಸ ಮಾಡಿರಿ, ನಾವು ಕೇಳಲು ಅಪೇಕ್ಷಿಸುತ್ತೇವೆ. ಇದಕ್ಕಾಗಿ ನಿಮ್ಮನ್ನು ಪ್ರಾರ್ಥಿಸುತ್ತೇವೆ.' ಎಂದು ಆ ವಿದ್ವಾಂಸರು ಪ್ರಾರ್ಥಿಸಿದರು.

ವಿ:—ಪ್ರಾಜ್ಞಾ ಪ್ರಜ್ಞಾ ಯಸ್ಯ ಸಃ, ಮಂತ್ರವರ್ಣಸ್ಯ ಅಭಿಧೇಯಃ ತಂ, ತಸ್ಯ ಪ್ರತ್ಯರ್ಥೀ, (ಪ್ರತ್ಯರ್ಥಿನ್ 'ನ್' ಅಂತ) ಶ್ರೋತುಂ ಕಾಮಃ ಯೇಷಾಂ ತೇ ತೈಃ ಕ್ರಿಯಾ:— ಅವೋಚತ್ ಅವೋಚತಾಂ ಅವೋಚನ್ ಇತ್ಯಾದಿ, ಬ್ರೂಞ್ ವ್ಯಕ್ತಾಯಾಂ ವಾಚಿ ಲುಙ್. ಪ್ರ + ಅರ್ಥ್ಯತೇ ಅರ್ಥ್ಯೇತೇ ಅರ್ಥ್ಯಂತೇ ಇತ್ಯಾದಿ. ಅರ್ಥ ಉಪಯಾಚ್ಞಾಯಾಂ ಪ್ರ- ಉಪಸರ್ಗ, ಕರ್ಮಣಿ ಲಟ್. ಕರ್ತರಿ—ತತ್ಪ್ರತ್ಯರ್ಥಿನಂ ಭವಂತಂ ಶ್ರೋತುಕಾಮಾಃ ವಯಂ ಪ್ರಾರ್ಥಯಾಮಹೇ |

ಅನ:—ಕೂಡಲೇ ಪುಂಡರೀಕಪುರಿಯು ಪೌಂಡ್ರಕವಾಸುದೇವನಂತೆ ಅಲ್ಲಿಗೆ ಬಂದನು—

**ಇತ್ಯುಕ್ತಸ್ತೈರೇಷ ವಿಸ್ತಾರಿಬುದ್ಧೇಃ**
**ಸಾಮ್ಯಂ ಪ್ರಾಪ್ತುಂ (ಪ್ರಾಪ್ತುಂ ಸಾಮ್ಯಂ)**
**ಸಂಪ್ರವೃತ್ತೋ ದುರಾತ್ಮಾ |**
**ಹಾಸ್ಯೋಽತ್ರಾಭೂದ್ ವಾಸುದೇವಪ್ರಭಾರ್ಥೀ**
**ಯದ್ವತ್ ಪೂರ್ವಂ ಪೌಂಡ್ರಕೋ ವಾಸುದೇವಃ ||೩೯||**

ಅ:—ತೈಃ ಇತಿ ಉಕ್ತಃ ವಿಸ್ತಾರಿಬುದ್ಧೇಃ ಸಾಮ್ಯಂ ಪ್ರಾಪ್ತುಂ ಸಂಪ್ರವೃತ್ತಃ ದುರಾತ್ಮಾ ಏಷಃ ಅತ್ರ ಪೂರ್ವಂ ವಾಸುದೇವಪ್ರಭಾರ್ಥೀ ಪೌಂಡ್ರಕಃ ವಾಸುದೇವಃ ಯದ್ವತ್ ಹಾಸ್ಯಃ ಅಭೂತ್ |

**ಅರ್ಥ:**—ತೈಃ = ಆ ಬ್ರಾಹ್ಮಣರಿಂದ, ಇತಿ ಉಕ್ತಃ = ಹೀಗೆ ಹೇಳಲ್ಪಟ್ಟ, ವಿಸ್ತಾರಿಬುದ್ಧೇಃ = ವಿಸ್ತಾರವಾದ ಬುದ್ಧಿಯುಳ್ಳ ಶ್ರೀಮಧ್ವರ, ಸಾಮ್ಯಂ ಪ್ರಾಪ್ತುಂ = ಸಾದೃಶ್ಯವನ್ನು ಹೊಂದಲು, ಸಂಪ್ರವೃತ್ತಃ = ತೊಡಗಿದ, ದುರಾತ್ಮಾ ಏಷಃ = ದುರ್ಜನನಾದ ಈ ಪುಂಡರೀಕಪುರಿಯು, ಅತ್ರ = ಈ ಸಭೆಯಲ್ಲಿ, ಪೂರ್ವಂ = ಹಿಂದೆ, ವಾಸುದೇವಪ್ರಭಾರ್ಥೀ =

Rarest Archiver

ಶ್ರೀಕೃಷ್ಣನ ಕಾಂತಿಯನ್ನು ಬಯಸಿದ, ಪೌಂಡ್ರಕಃ ವಾಸುದೇವಃ ಯದ್ವತ್ = ಪುಂಡ್ರಕನ ಮಗಳ ಮಗನಾದ ವಾಸುದೇವನಂತೆ, ಹಾಸ್ಯಃ ಅಭೂತ್ = ಉಪಹಾಸಕ್ಕೆ ಆಸ್ಪದನಾದನು.

**ತಾ:**—ಈ ರೀತಿ ಬ್ರಾಹ್ಮಣರು ಹೇಳಿದ ಕೂಡಲೇ ದುರ್ಬುದ್ಧಿಯುಳ್ಳ ಆ ಪುಂಡರೀಕಪುರಿಯು ಮಧ್ವಾಚಾರ್ಯರಂತೆ ತಾನೂ ಪಂಡಿತಶ್ರೇಷ್ಠನೆನಿಸ ಬೇಕೆಂದು ಅವರ ಸಾಮ್ಯವನ್ನು ಹೊಂದಲು ಪ್ರಯತ್ನಿಸಿ, ಹಿಂದೆ, ಶ್ರೀಕೃಷ್ಣನ ಸಾಮ್ಯವನ್ನು ಹೊಂದಲು ಪ್ರಯತ್ನಿಸಿ ಹಾಸ್ಯಾಸ್ಪದನಾದ ಪೌಂಡ್ರಕವಾಸುದೇವನಂತೆ, ಆ ಸಭೆಯಲ್ಲಿ ಅಪಹಾಸಕ್ಕೆ ಗುರಿಯಾದನು. ಪೌಂಡ್ರಕವಾಸುದೇವನೆಂಬ ಕೋಲ್ಹಾಪುರದ ರಾಜನು ತಾನೂ ಕೃಷ್ಣನಂತೆ ಚಕ್ರ ಶಂಖ ಮೊದಲಾದ ಆಯುಧವುಳ್ಳವನು, ಗರುಡವಾಹನನು, ತಾನೇ ನಿಜವಾದ ವಾಸುದೇವನು ಎಂದು ತೋರಿಸಿಕೊಳ್ಳಲು ಪ್ರಯತ್ನಿಸಿ ಕೃತಕ ವಾದ ಚಕ್ರಾದಿಗಳು, ಗರುಡ ಮುಂತಾದ್ದನ್ನು ಮಾಡಿಸಿಕೊಂಡು ಕೃಷ್ಣನ ಎದುರಾಗಿ ಯುದ್ಧಕ್ಕೆ ಬಂದನು. ನಿಜವಾದ ಚಕ್ರಾದಿಗಳನ್ನು ಧರಿಸಿದ ವಾಸುದೇವಕೃಷ್ಣನನ್ನು ಕಂಡು ಅವನ ಎದುರು ಕೃತ್ರಿಮಚಕ್ರಾದಿಧಾರಿ ಯಾದ ಪೌಂಡ್ರಕವಾಸುದೇವನನ್ನು ಜನರು ಅಪಹಾಸಮಾಡಿದರು. ಶ್ರೀಕೃಷ್ಣನು ತನ್ನ ಚಕ್ರದಿಂದ ಆ ವಕ್ರನ ಶಿರಸ್ಸನ್ನೇ ಕತ್ತರಿಸಿದನು— (ಭಾಗವತ) ಅದರಂತೆ ಆಚಾರ್ಯರ ಸಮ್ಮುಖಕ್ಕೆ ಬಂದ ಈ ವಾದಿಯನ್ನು ಜನರು ಮುಂದೆ ಹೇಳುವಕಾರಣದಿಂದಲೂ, ಅಪಹಾಸಮಾಡಿದರು.

**ವಿ:**—ವಿಸ್ತಾರಃ ಅಸ್ಯಾಃ ಅಸ್ತೀತಿ, ವಿಸ್ತಾರಿಣೀ ಬುದ್ಧಿಃ ಯಸ್ಯ ಸಃ, ತಸ್ಯ ; ಸಮಯೋಃ ಭಾವಃ ಸಾಮ್ಯಂ ತತ್, ದುಷ್ಟಃ ಆತ್ಮಾ (ಬುದ್ಧಿಃ) ಯಸ್ಯ ಸಃ ; ಹಸಿತುಂ ಯೋಗ್ಯಃ ಹಾಸ್ಯಃ, ವಾಸುದೇವಸ್ಯ ಪ್ರಭಾಂ ಅರ್ಥಯತೇ ಇತಿ ; **ಕ್ರಿಯಾ:**—ಅಭೂತ್.

**ಅವ:**—ಆ ಸಭೆಯಲ್ಲಿ ಪುಂಡರೀಕಪುರಿಗೆ ಆದ ಅವಮಾನವು ಹೀಗಿದೆ—

**ಆಜಾದೇಶಾದುತ್ತರಂ ಸ್ವಾದಿಶಬ್ದಂ**
**ಶ್ರುತ್ವಾ ನಾರೇತ್ಯುಕ್ತವಂತಂ ಪದಂ ತಂ ।**

Rarest Archiver

**ವ್ಯಾಖ್ಯಾಲೌಲ್ಯಾದೈತರೇಯಾದಿಸೂಕ್ತೇ**
**ಪೃಥ್ವೀದೇವಾ ನಿಂದನೀಯಂ ನಿನಿಂದುಃ** ||೪೦||

**ಅ:**—ಪೃಥ್ವೀದೇವಾಃ ಐತರೇಯಾದಿಸೂಕ್ತೇ ಅಜಾದೇಶಾತ್ ಉತ್ತರಂ ರಾದಿಶಬ್ದಂ ಶ್ರುತ್ವಾ ವ್ಯಾಖ್ಯಾಲೌಲ್ಯಾತ್ ನಾರೇತಿ ಪದಂ ಉಕ್ತವಂತಂ ನಿಂದನೀಯಂ ತಂ ನಿನಿಂದುಃ |

**ಅರ್ಥ:**—ಪೃಥ್ವೀದೇವಾಃ=ಬ್ರಾಹ್ಮಣರು, ಐತರೇಯಾದಿಸೂಕ್ತೇ =ಋಗ್ವೇದದ ಮೊದಲನೆಯ ಸೂಕ್ತದಲ್ಲಿರುವ 'ಅಗ್ನಿನಾರಯಿಮಶ್ನವತ್' ಇತ್ಯಾದಿ ಋಕ್ಕಿನಲ್ಲಿ, ಅಜಾದೇಶಾತ್='**ಆಙೋ ನಾಽಸ್ತ್ರಿಯಾಂ**' ಎಂಬ ಪಾಣಿನಿಸೂತ್ರದಿಂದ ತೃತೀಯಾವಿಭಕ್ತಿಯ ಏಕವಚನಕ್ಕೆ ಆದೇಶವಾಗಿ ಬರುವ '**ನಾ**' ಎಂಬುದಕ್ಕಿಂತ, ಉತ್ತರಂ=ಮುಂದೆ ಇರುವ, ರಾದಿಶಬ್ದಂ =ರೇಫವು ಆದಿಯಾಗಿ ಉಳ್ಳ, **ರಯಿ**ಶಬ್ದವನ್ನು, ಶ್ರುತ್ವಾ = ಕೇಳಿ, ವ್ಯಾಖ್ಯಾಲೌಲ್ಯಾತ್=ವ್ಯಾಖ್ಯಾನ ಮಾಡುವ ದುರಾಸೆಯಿಂದ, ನಾರೇತಿ ಪದಂ='ನಾರ' ಎಂಬ ಶಬ್ದವನ್ನು, ಉಕ್ತವಂತಂ = ಹೇಳಿದ, ನಿಂದ-ನೀಯಂ ತಂ = ನಿಂದಿಸಲು ಯೋಗ್ಯನಾದ ಆ ಪುಂಡರೀಕಪುರಿಯನ್ನು, ನಿನಿಂದುಃ=ನಿಂದಿಸಿದರು.

ತಾ:—ಋಗ್ವೇದದ ಮೊದಲನೆಯ ಸೂಕ್ತವು 'ಅಗ್ನಿಮೀಳೇ' ಎಂದು ಪ್ರಾರಂಭವಾಗುತ್ತದೆ. ಅದರ ಮೂರನೆಯ ಋಕ್ಕು '**ಅಗ್ನಿನಾರಯಿ-ಮಶ್ನವತ್ ಪೋಷಮೇವದಿವೇದಿವೇ**' | ಇತ್ಯಾದಿಯಾಗಿ ಇದೆ. ಅಲ್ಲಿ 'ಅಗ್ನಿನಾ' ಎಂಬುದು ಅಗ್ನಿಶಬ್ದಕ್ಕೆ ತೃತೀಯಾಏಕವಚನದಲ್ಲಿ ಬರುವ '**ಆಙ್**' (ಆ) ಎಂಬಪ್ರತ್ಯಯಕ್ಕೆ '**ಆಙೋ ನಾಽಸ್ತ್ರಿಯಾಂ**' ಎಂದು '**ನಾ**' ಆದೇಶ ಬಂದು ಸಿದ್ಧವಾದ ರೂಪ. ಅಗ್ನಿನಾ ಎಂಬುದರ ಅನಂತರ ರಯಿಂ ಎಂಬ ಪದವಿದೆ. ಅಲ್ಲಿ ಅಗ್ನಿನಾ+ರಯಿಂ ಎಂದು ಪದವನ್ನು ಬಿಡಿಸಿ ಅರ್ಥಹೇಳಬೇಕಾಗಿತ್ತು. ಆದರೆ ಪುಂಡರೀಕಪುರಿಯು ತಾನೂ ವೇದಋಕ್ಕಿಗೆ ಟೀಕೆ ಮಾಡಬೇಕೆಂಬ ದುರಾಸೆಯಿಂದ ಅಗ್ನಿ+ನಾರ+ ಯಿಂ, ಎಂದು ಪದಚ್ಛೇದಮಾಡಿದನು. ಅದನ್ನು ಕೇಳಿ ವೇದಜ್ಞರಾದ ಬ್ರಾಹ್ಮಣರು ಪುಂಡರೀಕಪುರಿಯು ಪದವಿಭಾಗವನ್ನು ತಪ್ಪಾಗಿಮಾಡಿದ್ದಾನೆ

Rarest Archiver

ಎಂದು ಅವನನ್ನು ನಿಂದಿಸಿದರು. ವ್ಯಾಕರಣಪಂಡಿತನಾದ ಪುಂಡರೀಕ ಪುರಿಯು ಹೀಗೆ ಏಕೆ ತಪ್ಪನ್ನು ಹೇಳಿದನು? ಎಂಬ ಸಂದೇಹ ಬರಬಹುದು. ಶ್ರೀಮಧ್ವಾಚಾರ್ಯರ ಪ್ರಭಾವದಿಂದ ವಾಗಭಿಮಾನಿನಿಯಾದ ಶಾರದೆಯು ಅವನ ಬಾಯಿಯಿಂದ ತಪ್ಪನ್ನು ನುಡಿಸಿದ್ದಾಳೆ. ಅವನು ತಪ್ಪನ್ನು ಆಡಲು ವಚನದೇವತೆಯಾದ ಭಾರತಿಯ ಪ್ರೇರಣೆಯೇ ಕಾರಣ. ಎಂದು ಇಲ್ಲಿ ನಾವು ಸಂದೇಹಪರಿಹಾರವನ್ನು ಮಾಡಿಕೊಳ್ಳಬೇಕು. ಅನಧೀತವಾನಿವ ಹಿ ಪುಂಡರೀಕಪೂರ್ಣನು ಶಾಬ್ದಿಕಃ ಕಥಮಿದಂ ವದೇದಿತಿ| ಅತಿಶಂಕಿ ಮಾ ದಶಮತೇರ್ಹಿ ಕಿಂಕರೀ ಸಕಲಸ್ಯ ಚೋದಯತಿ ಶಾರದಾ ಗಿರಃ ||(ಭಾ.ಪ್ರ.)

**ವಿ:**—ಅಜ್ ಇತಿ ಆದೇಶಃ ಅಜಾದೇಶಃ ತಸ್ಮಾತ್, 'ರ' ಆದಿಃ ಯಸ್ಯ ಸಃ ರಾದಿಃ, ರಾದಿಶ್ಚಾಸೌ ಶಬ್ದಶ್ಚ ರಾದಿಶಬ್ದಃ ತಂ, ಲೋಲಸ್ಯ ಭಾವಃ ಲೌಲ್ಯಂ, ವಾಖ್ಯಾಯಾಂ ಲೌಲ್ಯಂ ತಸ್ಮಾತ್, ಆದಿ ಚ ತತ್ ಸೂಕ್ತಂ ಚ, ಐತರೇಯ್ಯಾಃ ಆದಿಸೂಕ್ತಂ ತಸ್ಮಿನ್, ನಿಂದಿತುಂ ಯೋಗ್ಯಃ ನಿಂದನೀಯಃ ತಂ. **ಕ್ರಿಯಾ**—ನಿನಿಂದ ನಿನಿಂದತುಃ ನಿನಿಂದುಃ, ನಿನಿಂದಿಥ ನಿನಿಂದಥುಃ ನಿನಿಂದ, ನಿನಿಂದ ನಿನಿಂದಿವ ನಿನಿಂದಿಮ. ಣಿದಿ (ನಿಂದ್) ಕುತ್ಸಾಯಾಂ ಲಿಟ್.

**ಅವ:**—ಅವನಿಗಾದ ಅಪಮಾನವು ನ್ಯಾಯವಾದುದು—

**ಶಾರ್ದೂಲಾಖ್ಯಾಂ ಪ್ರಾಪ್ಯ ಸಂಭಾವಿತಃ ಪ್ರಾಕ್**
**ಲೋಕೇ ಧೂರ್ತೋ ಮಾಯಿಗೋಮಾಯುರೇಷಃ |**
**ವಾದಿದ್ವೀಪಿಧ್ವಂಸಿನಂ ಮಧ್ವಸಿಂಹಂ**
**ಪ್ರಾಪ್ತೋ ಹೀತ್ಥಂ ಶಬ್ದಶೇಷೋ ಬಭೂವ ||೪೧||**

**ಅ:**—ಧೂರ್ತಃ ಏಷಃ ಮಾಯಿಗೋಮಾಯುಃ ಶಾರ್ದೂಲಾಖ್ಯಾಂ ಪ್ರಾಪ್ಯ ಪ್ರಾಕ್ ಲೋಕೇ ಸಂಭಾವಿತಃ ವಾದಿದ್ವೀಪಿಧ್ವಂಸಿನಂ ಮಧ್ವಸಿಂಹಂ ಪ್ರಾಪ್ತಃ ಇತ್ಥಂ ಶಬ್ದಶೇಷಃ ಬಭೂವ ಹಿ ||

**ಅರ್ಥ:**—ಧೂರ್ತಃ = ಮೋಸಗಾರನಾದ, ಏಷಃ ಮಾಯಿಗೋಮಾಯುಃ = ಈ ಮಾಯಾವಾದಿಯಾದ ಪುಂಡರೀಕಪುರಿಯೆಂಬ ನರಿಯು,

Rarest Archiver

ಶಾರ್ದೂಲಾಖ್ಯಾಂ = ಹುಲಿಯೆಂಬ ಹೆಸರನ್ನು, ಪ್ರಾಪ್ಯ = ಹೊಂದಿ, ಪ್ರಾಕ್ = ಹಿಂದೆ, ಲೋಕೇ = ಪ್ರಪಂಚದಲ್ಲಿ, ಸಂಭಾವಿತಃ = ಸನ್ಮಾನಿತವಾಗಿ, ವಾದಿದ್ವೀಪಿಧ್ವಂಸಿನಂ = ವಾದಿಗಳೆಂಬ ಹುಲಿಗಳನ್ನು ನಾಶಮಾಡುವ, ಮಧ್ವಸಿಂಹಂ ಪ್ರಾಪ್ತಃ = ಶ್ರೀಮಧ್ವರೆಂಬ ಸಿಂಹವನ್ನು ಹೊಂದಿದವನಾಗಿ, ಇತ್ಥಂ = ಈ ರೀತಿ, ಶಬ್ದಶೇಷಃ ಬಭೂವ = ಪುಂಡರೀಕ ಎಂಬ ಶಬ್ದ ಮಾತ್ರಾವಶೇಷನು ಆದನು.

ತಾ:—ವಂಚಕನಾದ ಈ ಮಾಯಾವಾದಿಯಾದ ಪುಂಡರೀಕಪುರಿ ಎಂಬ ನರಿಯು ಪುಂಡರೀಕ (ಎಂದರೆ ಹುಲಿ, ಶಾರ್ದೂಲ) ಎಂಬ ಹೆಸರನ್ನಿಟ್ಟುಕೊಂಡು ಪೂರ್ವದಲ್ಲಿ ಜನರಿಂದ ಸನ್ಮಾನಿತನಾಗಿದ್ದನು. ಆದರೆ ದುರ್ವಾದಿಗಳೆಂಬ ಹುಲಿಗಳನ್ನೇ ಧ್ವಂಸಮಾಡುವ ಶ್ರೀಮಧ್ವಾಚಾರ್ಯರೆಂಬ ಸಿಂಹವನ್ನು ಭೇಟಿಮಾಡಿದಾಗ 'ಪುಂಡರೀಕ (ಹುಲಿ) ಎಂಬ ಹೆಸರು ಮಾತ್ರದಲ್ಲಿ ಉಳಿದನು; ನಾಮಾವಶೇಷನಾದನು. ನರಿಯು ಹುಲಿಯ ವೇಷವನ್ನು ಹಾಕಿಕೊಂಡು ತಾನು ಎಲ್ಲರನ್ನೂ ಹೆದರಿಸುತ್ತಿತ್ತು. ಅದು ಸಿಂಹದ ಕೈಯಲ್ಲಿ ಸಿಕ್ಕಿಕೊಂಡು ಧ್ವಂಸವಾಗುವಂತೆ, ಪುಂಡರೀಕಪುರಿಯು ಪಂಡಿತಪುಂಡರೀಕ, (ಪಂಡಿತವ್ಯಾಘ್ರ) ಎಂದು ಕೀರ್ತಿಯನ್ನು ಪಡೆದಿದ್ದು ಆಚಾರ್ಯರಲ್ಲಿ ಸೋತು ಹೆಸರಿಗೆ ಮಾತ್ರ ಪುಂಡರೀಕ(ಹುಲಿ) ಎಂದಾದನು. ಹುಲಿಯಂತಹ (ವಾದ)ಪರಾಕ್ರಮವೇನೂ ಉಳಿಯಲಿಲ್ಲ. ಎಂದು ಭಾವ.

ವಿ:— ಶಾರ್ದೂಲ ಇತಿ ಆಖ್ಯಾ ತಾಂ, ಮಾಯಿ ಏವ ಗೋಮಾಯುಃ, ವಾದಿನ ಏವ ದ್ವೀಪಿನಃ, ವಾದಿದ್ವೀಪಿನಃ ಧ್ವಂಸಯಿತುಂ ಶೀಲಂ ಅಸ್ಯೇತಿ ವಾದಿದ್ವೀಪಿಧ್ವಂಸೀ. (ಸಿನ್) – ತಂ, ಮಧ್ವ ಏವ ಸಿಂಹಃ ತಂ, ಶಬ್ದೇನ ಶೇಷಃ ; **ಕ್ರಿಯಾ:**— ಬಭೂವ ;

**ಅವ:**— ಹೀಗೆ 'ಪುಂಡರೀಕಪುರಿಯ ಪರಾಜಯವನ್ನು ವರ್ಣಿಸಿ ಪದ್ಮತೀರ್ಥನ ವೃತ್ತಾಂತವನ್ನು ವರ್ಣಿಸುತ್ತಾರೆ—

**ಕೃಷ್ಣಾಭೀಷ್ಟಾ ಶಾಸ್ತ್ರವಿಸ್ಪಷ್ಟಸಂಜ್ಞಾ**
**ಯಾ ಸ್ವೀಯಾ ಶ್ರೀಃ ಪಾಲಿತಾ ಸದ್ದ್ವಿಜೇನ ।**

Rarest Archiver

**ಪದ್ಮಾಖ್ಯಾಸತ್ಸೈಂಧವೇನಾಹೃತಾಂ ತಾಂ**
**ಶುಶ್ರಾವಾಗ್ರ್ಯಾನಂದತೀರ್ಥಾಖ್ಯಪಾರ್ಥಃ** ||೪೨||

**ಅ:**—ಅಗ್ರ್ಯಾನಂದತೀರ್ಥಾಖ್ಯಪಾರ್ಥಃ ಯಾ ಕೃಷ್ಣಾಭೀಷ್ಟಾ ಶಾಸ್ತ್ರವಿಸ್ಪಷ್ಟಸಂಜ್ಞಾ ಸದ್ದ್ವಿಜೇನ ಪಾಲಿತಾ ಸ್ವೀಯಾ ಶ್ರೀಃ, ತಾಂ ಪದ್ಮಾಖ್ಯಾಸತ್ಸೈಂಧವೇನ ಆಹೃತಾಂ ಶುಶ್ರಾವ.

**ಅರ್ಥ:**—ಅಗ್ರ್ಯ = ಶ್ರೇಷ್ಠರಾದ, ಆನಂದತೀರ್ಥಾಖ್ಯಪಾರ್ಥಃ = ಆನಂದತೀರ್ಥರೆಂಬ ಅರ್ಜುನನು, ಯಾ = ಯಾವ, ಕೃಷ್ಣಾಭೀಷ್ಟಾ = ಶ್ರೀವೇದವ್ಯಾಸರಿಗೆ ಪ್ರಿಯವಾದ, ಶಾಸ್ತ್ರವಿಸ್ಪಷ್ಟಸಂಜ್ಞಾ = ಶಾಸ್ತ್ರವೆಂದು ಪ್ರಸಿದ್ಧವಾದ ಹೆಸರುಳ್ಳ, ಸದ್ದ್ವಿಜೇನ = ಲಿಕುಚವಂಶದ ಶಂಕರಾಚಾರ್ಯನೆಂಬ ಒಳ್ಳೆಯ ಬ್ರಾಹ್ಮಣನಿಂದ, ಪಾಲಿತಾ = ರಕ್ಷಿತವಾದ, ಸ್ವೀಯಾ ಶ್ರೀಃ = ತನ್ನದಾದ ಶಾಸ್ತ್ರಪುಸ್ತಕಗಳೆಂಬ ಸಂಪತ್ತೋ, ತಾಂ = ಅದನ್ನು, ಪದ್ಮಾಖ್ಯ = ಪದ್ಮತೀರ್ಥನೆಂಬ, ಅಸತ್ಸೈಂಧವೇನ = ದುಷ್ಟನಾದ ಜಯದ್ರಥನಿಂದ, ಆಹೃತಾಂ = ಅಪಹರಿಸಲ್ಪಟ್ಟದ್ದನ್ನಾಗಿ, ಶುಶ್ರಾವ = ಕೇಳಿದನು.

**ತಾ:**—ಹಿಂದೆ ಅರ್ಜುನನು 'ಶ್ರೀಕೃಷ್ಣನಿಗೆ ಪ್ರೀತಿಪಾತ್ರಳೂ (ಕೃಷ್ಣಾಭೀಷ್ಟಾ) ಭಾರತವೆಂಬ ಶಾಸ್ತ್ರದಲ್ಲಿ ಪ್ರಸಿದ್ಧವಾದ ಹೆಸರುಳ್ಳವಳೂ, (ಶಾಸ್ತ್ರವಿಸ್ಪಷ್ಟಸಂಜ್ಞಾ) ಧೌಮ್ಯರೆಂಬ ಪಾಂಡವರ ಪುರೋಹಿತನಾದ ಉತ್ತಮಬ್ರಾಹ್ಮಣನಿಂದ ರಕ್ಷಿತಳೂ, (ಸದ್ದ್ವಿಜೇನ ಪಾಲಿತಾ) ಆದ, ಸಂಪತ್ತಿನಂತಹ ಯಾವ ದ್ರೌಪದೀದೇವಿಯು ಇದ್ದಾಳೋ, (ಯಾ ಶ್ರೀಃ = ದ್ರೌಪದಿಯು) ಅವಳನ್ನು ಜಯದ್ರಥನು ಅಪಹರಿಸಿದ'ನೆಂಬ ವಾರ್ತೆಯನ್ನು ಕೇಳಿದ್ದನು. ಶ್ರೇಷ್ಠರಾದ ಅರ್ಜುನನಂತಿರುವ ಶ್ರೀಮಧ್ವಾಚಾರ್ಯರೂ ವೇದವ್ಯಾಸರಿಗೆ ಸಂಮತವೂ, ಶಂಕರಾರ್ಯನೆಂಬ ಉತ್ತಮಬ್ರಾಹ್ಮಣನಿಂದ ರಕ್ಷಿತವೂ, ಆದ ದ್ವೈತಸಿದ್ಧಾಂತಶಾಸ್ತ್ರವೆಂಬ ಹೆಸರುಳ್ಳ ಸಂಪತ್ತನ್ನು ಪದ್ಮತೀರ್ಥನೆಂಬ ದುಷ್ಟಯತಿಯು ಅಪಹರಿಸಿದನೆಂಬ ವಾರ್ತೆಯನ್ನು ಕೇಳಿದರು. ವನವಾಸದಲ್ಲಿದ್ದಾಗ ಪಾಂಡವರೈವರೂ ಒಂದುಬಾರಿ ಬೇಟೆಗೆ ಹೋಗಿದ್ದರು. ಆಶ್ರಮದಲ್ಲಿ ಧೌಮ್ಯರು ಮಾತ್ರ ಇದ್ದರು. ಆಗ ದುರ್ಯೋಧನನ ಭಾವನಾದ ಸೈಂಧವನು ದ್ರೌಪದಿಯನ್ನು

ಅಪಹರಿಸಿದವಾರ್ತೆಯನ್ನು ಕೇಳಿದಂತೆ ಆಚಾರ್ಯರು ತನ್ನ ಪುಸ್ತಕ ಸಂಪತ್ತನ್ನು ಪದ್ಮತೀರ್ಥನು ಅಪಹರಿಸಿದನೆಂಬ ವಾರ್ತೆಯನ್ನು ಕೇಳಿದರು ಎಂದು ಭಾವ.

ವಿ:—ಕೃಷ್ಣಸ್ಯ ಅಭೀಷ್ಟಾ, ಶಾಸ್ತ್ರಂ ಇತಿ (ಶಾಸ್ತ್ರೀ) ವಿಸ್ಪಷ್ಟಾ ಸಂಜ್ಞಾ ಯಸ್ಯಾಃ ಸಾ, ಸ್ವಸ್ಯ ಇಯಂ ಸ್ವೀಯಾ, ಸಂಶ್ಚಾಸೌ ದ್ವಿಜಶ್ಚ ತೇನ, ಪದ್ಮಃ ಇತಿ ಆಖ್ಯಾ ಯಸ್ಯ ಸಃ ಅಸಂಶ್ಚ ಅಸೌ ಸೈಂಧವಶ್ಚ, ಪದ್ಮಾಖ್ಯಶ್ಚಾಸೌ ಅಸತ್ಸೈಂಧವಶ್ಚ ತೇನ, ಆನಂದತೀರ್ಥ ಇತಿ ಆಖ್ಯಾ ಯಸ್ಯ ಸಃ ಆನಂದತೀರ್ಥಾಖ್ಯಃ, ಅಗ್ರ್ಯಶ್ಚಾಸೌ ಆನಂದ ತೀರ್ಥಾಖ್ಯಶ್ಚ, ಅಗ್ರ್ಯಾನಂದತೀರ್ಥಾಖ್ಯ ಏವ ಪಾರ್ಥಃ,

ಕ್ರಿ:—ಶುಶ್ರಾವ ಶುಶ್ರುವತುಃ ಶುಶ್ರುವುಃ, ಶುಶ್ರೋಥ ಶುಶ್ರುವಥುಃ ಶುಶ್ರುವ, ಶುಶ್ರಾವ ಶುಶ್ರವ ಶುಶ್ರುವ ಶುಶ್ರುಮ. ಶ್ರು ಶ್ರವಣೇ ಲಿಟ್.

ಅನ:—ಶ್ರೀ ಆನಂದತೀರ್ಥಪಾರ್ಥರು ಪದ್ಮತೀರ್ಥಸೈಂಧವನನ್ನು ಜಯಿಸಿ ಶಾಸ್ತ್ರಶ್ರೀಯನ್ನು ಹಿಂತಿರುಗಿ ತಂದರು—

**ತೂರ್ಣಂ ತೀರ್ಣಾದಭ್ರಮಾರ್ಗೋಽಥ ಸಾರ್ಯಃ**<br>**ಸಂಪ್ರಾಪ್ತೋಽಸೌ ಗೋಗಣೈರ್ಭೀಷಯಿತ್ವಾ ।**<br>**ಸಂಯಮ್ಯಾಂತರ್ಯಂತೃಕಾಮೇನ ಹಾಸ್ಯಂ**<br>**ಸಂಪ್ರಾಪ್ತ ಶ್ರೀರ್ನಿರ್ಜಿತಂ ತಂ ಜ ಹಾಸ ॥೪೩॥**

ಅ:—ಅಥ ತೂರ್ಣಂ ತೀರ್ಣಾದಭ್ರಮಾರ್ಗಃ ಸಾರ್ಯಃ ಅಸೌ ತಂ ಸಂಪ್ರಾಪ್ತಃ ಗೋಗಣೈಃ ಭೀಷಯಿತ್ವಾ ಸಂಯಮ್ಯ ಸಂಪ್ರಾಪ್ತಶ್ರೀಃ ಅಂತರ್ಯಂತೃಕಾಮೇನ ಹಾಸ್ಯಂ ನಿರ್ಜಿತಂ ತಂ ಜಹಾಸ.

ಅರ್ಥ:—ಅಥ = ಅನಂತರ, ತೂರ್ಣಂ = ಜಾಗ್ರತೆಯಾಗಿ, ತೀರ್ಣಾದಭ್ರಮಾರ್ಗಃ = ದಾಟಲ್ಪಟ್ಟ ಬಹಳಯೋಜನದೂರದ ಮಾರ್ಗ ವುಳ್ಳ, ಸಾರ್ಯಃ = ಜ್ಯೇಷ್ಠಯತಿಗಳಿಂದ ಸಹಿತರಾದ, ಅಣ್ಣಭೀಮಸೇನ ಸಹಿತನಾದ, ಅಸೌ = ಈ ಮಧ್ವಾಚಾರ್ಯರು, ಅರ್ಜುನನು, ತಂ = ಆ ಪದ್ಮತೀರ್ಥನನ್ನು, ಜಯದ್ರಥನನ್ನು, ಸಂಪ್ರಾಪ್ತಃ = ಹೊಂದಿದವರಾಗಿ, ಗೋಗಣೈಃ = ಮಾತುಗಳ ಸಮೂಹದಿಂದ, ಬಾಣಗಳ ಸಮೂಹದಿಂದ,

Rarest Archiver

ಭೀಷಯಿತ್ವಾ = ಹೆದರಿಸಿ, ಸಂಯಮ್ಯ = ಉತ್ತರವಿಲ್ಲದವನನ್ನಾಗಿಸಿ, ಹಗ್ಗಗಳಿಂದ ಕಟ್ಟಿ, ಸಂಪ್ರಾಪ್ತಶ್ರೀಃ = ಹೊಂದಲ್ಪಟ್ಟ ಜಯಶ್ರೀ (ಶಾಸ್ತ್ರಸಂಪತ್ತು) ಉಳ್ಳವರಾಗಿ, ಹೊಂದಲ್ಪಟ್ಟ ದ್ರೌಪದಿಯುಳ್ಳವನಾಗಿ, ಅಂತರ್ಯಂತೃ = ಅಂತರ್ಯಾಮಿಯಾದ ಭಗವಂತನ, ಕಾಮೇನ = ಇಚ್ಛೆಯಿಂದ, ಮನಸ್ಸನ್ನು ಪ್ರೇರಿಸುವ ಮನ್ಮಥನಿಂದ, ಹಾಸ್ಯಂ = ಉಪಹಾಸಕ್ಕೆ ಗುರಿಯಾದ, ನಿರ್ಜಿತಂ ತ್ವಂ = ಸೋಲಿಸಲ್ಪಟ್ಟ ಆ ಪದ್ಮತೀರ್ಥನನ್ನು, ಸೈಂಧವನನ್ನು, ಜಹಾಸ = ಹಾಸ್ಯಮಾಡಿದರು.

ತಾ:—ಹೀಗೆ ಪುಸ್ತಕವನ್ನು ಅಪಹರಿಸಿದ ವಾರ್ತೆಯನ್ನು ಕೇಳಿದ ಮೇಲೆ ಆಚಾರ್ಯರು ಶೀಘ್ರವಾಗಿ ಬಹುದೂರದ ದಾರಿಯನ್ನು ದಾಟಿ ಜ್ಯೇಷ್ಠಯತಿಗಳೊಡನೆ ಪದ್ಮತೀರ್ಥನಿದ್ದಲ್ಲಿಗೆ ಹೋದರು. ಮಾತುಗಳಿಂದಲೇ ಅವನನ್ನು ಹೆದರಿಸಿ, ಅವನಿಗೆ ಉತ್ತರಕೊಡಲು ಬಾರದಂತೆ ಮಾಡಿದರು. ತನ್ನ ಶಾಸ್ತ್ರಸಂಪತ್ತನ್ನೂ, ಜಯಸಂಪತ್ತನ್ನೂ ತಿರುಗಿ ಪಡೆದರು. ಪರಾಜಯಹೊಂದಿದ ಪದ್ಮತೀರ್ಥನು ವಾದದಲ್ಲಿ-'ಇದೆಲ್ಲವನ್ನೂ ಅಂತರ್ಯಾಮಿಯು ಬಲ್ಲನು' ಎಂದು ತನ್ನಮತಕ್ಕೆ ವಿರುದ್ಧವಾಗಿ ಹೇಳಿದನು. ದೇವರು ಅಂತರ್ಯಾಮಿ, ಜೀವರು ನಿಯಮ್ಯರು (ದಾಸರು) ಎಂದು ಒಪ್ಪಿಕೊಂಡದ್ದನ್ನು ನೋಡಿ ಆಚಾರ್ಯರು ಅವನನ್ನು ಅಪಹಾಸ್ಯಮಾಡಿದರು. ಇದಕ್ಕೆ ದೃಷ್ಟಾಂತವಾಗಿ ಅರ್ಜುನನ ಕಥೆಯು-ಹೀಗಿದೆ-ದ್ರೌಪದಿಯನ್ನು ಜಯದ್ರಥನು ಅಪಹರಿಸಿದ್ದನ್ನು ಕೇಳಿ ಅಣ್ಣಭೀಮನಿಂದೊಡಗೂಡಿದ ಅರ್ಜುನನು, ಸೈಂಧವನನ್ನು ಬೆನ್ನಟ್ಟಿ ಹಿಡಿದು ಕಟ್ಟಿದನು. ದ್ರೌಪದಿಯನ್ನು ಹಿಂದಿರುಗಿ ಕರೆತಂದನು. ಪತಿವ್ರತೆಯಮೇಲೆ ಕಾಮಪರವಶನಾಗಿ ನಡೆಸಿದ ಅನ್ಯಾಯಕ್ಕೆ ಅವನನ್ನು ಜರೆದು ಅಪಹಾಸ್ಯಮಾಡಿದನು. ಅದರಂತೆ ಆಚಾರ್ಯರು ಕಾರ್ಯವನ್ನು ನಡೆಸಿದರು. ಎಂದು ಭಾವ. (ಮಾಯಿಗಳ ಮಂತ್ರಾಲೋಚನೆಗೆ ಸೇರಿದ್ದರೂ ಪದ್ಮತೀರ್ಥನು ಆಚಾರ್ಯರಿಗೆ ಅಂಜಿ ಅವರಿಂದ ದೂರದಲ್ಲಿ ಉಳಿದಿದ್ದನು. ಅವನು ಪುಂಡರೀಕಪುರಿಯ ಸೋತ ಸಮಾಚಾರವನ್ನು ಕೇಳಿ ವಿಷ್ಣುಮಂಗಲದಲ್ಲಿ ಆಚಾರ್ಯರ ಗ್ರಂಥಗಳನ್ನು ಅಪಹರಿಸಿದನು. ಇದನ್ನು ಕೇಳಿದ ಶ್ರೀಮಧ್ವಾಚಾರ್ಯರು. ರಜತಪೀಠಪುರದಿಂದ ಏಕವಾಟ ಎಂಬಲ್ಲಿಗೆ ಹೋಗಿ ಅಲ್ಲಿ ಪದ್ಮತೀರ್ಥನನ್ನು ವಾದಕ್ಕೆ ಕರೆ

Rarest Archiver

ದರು. ಆಗ ಅವನು 'ನಿಮ್ಮ ಸಿದ್ಧಾಂತವನ್ನು ಸ್ಥಾಪಿಸಲು ಬಯಸುವಿರಾದರೆ ಪ್ರಾಶ್ನಿಕರನ್ನು ಕರೆಯಿರಿ' ಎಂದನು. 'ಆಗ ಆಚಾರ್ಯರು-ಬೇಕಿದ್ದರೆ ನೀನೇ ಪ್ರಾಶ್ನಿಕರನ್ನು ಕರೆಸು' ಎಂದರು. 'ನಾನು ಕೃತಕೃತ್ಯನು, ನನ್ನ ಶಾಸ್ತ್ರವು ಪ್ರಪಂಚದಲ್ಲೆಲ್ಲಾ ವ್ಯಾಪ್ತವಾಗಿದೆ' ಎಂದು ಪದ್ಮತೀರ್ಥನು ಹೇಳಿದಾಗ ಆಚಾರ್ಯರು – 'ನಮ್ಮ ಶಾಸ್ತ್ರವು ಮೂರು ಲೋಕಗಳಲ್ಲಿಯೂ ವ್ಯಾಪ್ತವಾಗಿದೆ' ಎಂದರು. ಪದ್ಮತೀರ್ಥನು – 'ನಿಮ್ಮ ಈ ಕಪಟದ ಮಾತನ್ನು ಅಂತರ್ಯಾಮಿಯು ತಿಳಿದಿರುವನು' ಎಂದನು. ಆಗ ಶ್ರೀಮಧ್ವರು – ಅಂತರ್ಯಾಮಿ ಮತ್ತು ನಿಯಮ್ಯ ಎಂಬ ಈ ಎರಡನ್ನು ನೀನು ಅಂಗೀಕರಿಸಿದ್ದರಿಂದ ನಿನ್ನಲ್ಲಿಯೇ ನನ್ನ ದ್ವೈತಶಾಸ್ತ್ರವು ವ್ಯಾಪ್ತವಾಗಿದೆ ಎಂದು ಅಪಹಾಸ ಮಾಡಿ ಅವನನ್ನು ಸೋಲಿಸಿದರು. ಅನಂತರ ಪ್ರಾಶ್ನಿಕರು ಸೇರಿದಮೇಲೆ ಚರ್ಚೆಯು ನಡೆದು ಅದರಲ್ಲಿಯೂ ಪದ್ಮತೀರ್ಥನು ಪರಾಜಿತನಾದನು. ಆಗ ನಡೆದ ಶ್ರೀಮಧ್ವಾಚಾರ್ಯರ ಉಪನ್ಯಾಸವೇ **ವಾದ** (**ತತ್ತ್ವೋದ್ಯೋತ**) ಎಂಬ ಗ್ರಂಥವಾಯಿತು. ಭಾ.ಪ್ರ.

**ವಿ:**— ತೀರ್ಣಃ ಅದಭ್ರಃ ಮಾರ್ಗಃ ಯೇನ ಸಃ, ಆರ್ಯೇಣ ಸಹಿತಃ ಸಾರ್ಯಃ, ಗವಾಂ ಗಣಾಃ ಗೋಗಣಾಃ ತೈಃ, ಗೋ=ಬಾಣ, ಮಾತು ; ಅಂತಃ ಯಚ್ಛತೀತಿ ಅಂತರ್ಯಂತಾ ಅಂತರ್ಯಂತರಿ ಕಾಮಃ ಯಸ್ಯ ಸಃ ತೇನ, ಅಂತರ್ಯಂತಾ ಚಾಸೌ ಕಾಮುಶ್ಚ ತೇನ, ಹಸಿತುಂ ಯೋಗ್ಯಃ ಹಾಸ್ಯಃ ತಂ, ಸಂಪ್ರಾಪ್ತಾ ಶ್ರೀಃ ಯೇನ ಸಃ, ಶ್ರೀ=ಸಂಪತ್ತು, ದ್ರೌಪದಿ.

**ಕ್ರಿ:**— ಜಹಾಸ ಜಹಸತುಃ ಜಹಸುಃ, ಜಹಸಿಥ ಜಹಸಥುಃ ಜಹಸ, ಜಹಾಸ ಜಹಸ ಜಹಸಿವ ಜಹಸಿಮ, ಹಸೇ ಹಸನೇ ಲಿಟ್.

**ಅವ:**— ಆ ಪದ್ಮತೀರ್ಥನು ಶಂಕರಾರ್ಯರ ಮೇಲೆ ನಡೆಸಿದ ಆಕ್ರಮಣವನ್ನು ಆಚಾರ್ಯರು ಕ್ಷಮಿಸಲಿಲ್ಲ—

**ದುಷ್ಟಾತ್ಮಾಸೌ ಭದ್ರಮೇಕಾಕಿನಂ ಯಃ**
**ಕ್ಷೇಪ್ತುಂ ಹೇತುಃ ಸೌಖ್ಯದಾಖ್ಯಂ ಬಭೂವ ।**
**ಹರ್ಯಂಶೋಽಯಂ ತಂ ನ ಚಕ್ಷಾಮ ಭೂಯಃ**
**ಲೋಕೇ ಸನ್ನೇ ಸೂಕರಂ ಕೇಸರೀವ** ॥೪೪॥

Rarest Archiver

**ಅ:**—ದುಷ್ಟಾತ್ಮಾ ಯಃ ಅಸೌ ಭದ್ರಂ ಏಕಾಕಿನಂ ಸೌಖ್ಯದಾಖ್ಯಂ (ಸೌಭದ್ರಂ) ಕ್ಷೇಪ್ತುಂ ಹೇತುಃ ಬಭೂವ, ತಂ ಹರ್ಯಂಶಃ ಅಯಂ ತೋಕೇ ಸನ್ನೇ ಕೇಸರೀ ಸೂಕರಂ ಇವ ಭೂಯಃ ನ ಚಕ್ಷಾಮ.

**ಅರ್ಥ :**—ದುಷ್ಟಾತ್ಮಾ = ಕೆಟ್ಟಬುದ್ಧಿಯುಳ್ಳ, ಯಃ ಅಸೌ = ಯಾವ ಈ ಪದ್ಮತೀರ್ಥನು, ಸೈಂಧವನು, ಭದ್ರಂ = ಮಂಗಳಕರನಾದ, ಏಕಾಕಿನಂ = ಒಬ್ಬಂಟಿಗನಾದ, ಸೌಖ್ಯದಾಖ್ಯಂ = ಶಂಕರನೆಂಬ ಬ್ರಾಹ್ಮಣನನ್ನು, ಧರ್ಮರಾಜಾದಿಗಳಿಗೆ ಆನಂದವನ್ನುಂಟುಮಾಡುವ ಹೆಸರುಳ್ಳ, ಸೌಭದ್ರಂ = ಅಭಿಮನ್ಯುವನ್ನು, ಕ್ಷೇಪ್ತುಂ = ನಿರಾಕರಿಸಲು, ಕೊಲ್ಲಲು, ಹೇತುಃ ಬಭೂವ = ಕಾರಣನಾದನೋ, ತಂ = ಆ ಪದ್ಮತೀರ್ಥನನ್ನು, ಸೈಂಧವನನ್ನು, ಹರ್ಯಂಶಃ ವಾಯುವಿನ ಅವತಾರರಾದ, ಇಂದ್ರನ ಅವತಾರನಾದ, ಅಯಂ = ಈ ಮಧ್ವಾಚಾರ್ಯರು, ಅರ್ಜುನನು, ತೋಕೇ ಸನ್ನೇ (ಸತಿ) = ಮರಿಯು ಸತ್ತಾಗ, ಕೇಸರೀ ಸೂಕರಂ ಇವ = ಸಿಂಹವು ಕಾಡುಹಂದಿಯನ್ನೆಂಬಂತೆ, ಭೂಯಃ = ಮತ್ತೆ, (ಅವನು) ಸಾಯುವತನಕ, ನ ಚಕ್ಷಾಮ = ಕ್ಷಮಿಸಲಿಲ್ಲ.

**ತಾ:**— ಅರ್ಜುನಸುಭದ್ರೆಯರ ಪುತ್ರನಾದ ಅಭಿಮನ್ಯುವು ಧರ್ಮರಾಜಾದಿಪಂಚಪಾಂಡವರಿಗೂ ಆನಂದಕರನಾಗಿದ್ದನು. ಅವನು ಒಬ್ಬಂಟಿಗನಾಗಿ ಚಕ್ರವ್ಯೂಹವನ್ನು ಹೊಕ್ಕಾಗ ಜಯದ್ರಥನು ಅಭಿಮನ್ಯುವಿನ ಸಹಾಯಕ್ಕೆ ಪಾಂಡವಪಕ್ಷದ ಯಾರೂ ಬಾರದಂತೆ ತಡೆದು ಅಭಿಮನ್ಯುವಿನ ಮರಣಕ್ಕೆ ಕಾರಣನಾದನು. ಅನಂತರ ಇದನ್ನರಿತ ಇಂದ್ರನ ಅವತಾರನಾದ ತಂದೆ ಅರ್ಜುನನು ಸೈಂಧವನನ್ನು ಕೊಲ್ಲುವವರೆಗೂ ಕ್ಷಮಿಸಲಿಲ್ಲ. ಅದರಂತೆಯೇ ದುಷ್ಟಸ್ವಭಾವದ ಪದ್ಮತೀರ್ಥನು ತ್ರಿಕರಣಶುದ್ಧನಾಗಿ ಆಚಾರ್ಯರ ಗ್ರಂಥಗಳನ್ನು ರಕ್ಷಿಸುತ್ತಿದ್ದ, ಸಹಾಯಕರೂ ಇಲ್ಲದ ಸಾಧುವಾದ ಶಂಕರಾರ್ಯನನ್ನು ಹಿಂಸಿಸಿ ಅವನಲ್ಲಿದ್ದ ಗ್ರಂಥಾಪಹಾರವನ್ನು ಮಾಡಿದನು. ಇದನ್ನು ತಿಳಿದ ಮುಖ್ಯಪ್ರಾಣನ ಅವತಾರರಾದ ಶ್ರೀಮಧ್ವಾಚಾರ್ಯರು, ಮತ್ತೆ ಆ ಪದ್ಮತೀರ್ಥನನ್ನು ಜಯಿಸುವವರೆಗೂ ಕ್ಷಮಿಸಲಿಲ್ಲ. ಈ ಘಟನೆಯು ಕಾಡುಹಂದಿಯು

Rarest Archive

ಸಿಂಹವನ್ನು ವಂಚಿಸಿ ಅದರ ಮರಿಯನ್ನು ಕೊಂದಾಗ ಸಿಂಹವು ಆ ವನವರಾಹವನ್ನು ಕ್ಷಮಿಸದೆ ಕೊಲ್ಲುವ ಘಟನೆಯಂತಾಯಿತು.

**ವಿ:**—ದುಷ್ಟಃ ಆತ್ಮಾ ಯಸ್ಯ ಸಃ, ಸುಖಮೇವ ಸೌಖ್ಯಂ, ಸೌಖ್ಯಂ ದದಾತೀತಿ, ಸೌಖ್ಯದಃ ಇತಿ ಆಖ್ಯಾ ಯಸ್ಯ ಸೌಖ್ಯದಾಖ್ಯಃ ತಂ, ಹರೇಃ ಅಂಶಃ, ಹರಿ = ಯಮ, ವಾಯು, ಇಂದ್ರ, ಚಂದ್ರ, ಸೂರ್ಯ, ವಿಷ್ಣು, ಸಿಂಹ, ಕಿರಣ, ಕುದುರೆ, ಗಿಳಿ, ಹಾವು, ಕಪಿ, ಕಪ್ಪೆ, ಕಪಿಲವರ್ಣ.

**ಕ್ರಿ :**—ಬಭೂವ; ಹಿಂದೆ ಬಂದಿದೆ. ಚಕ್ಷಾಮ ಚಕ್ಷಮತುಃ ಚಕ್ಷಮುಃ ಚಕ್ಷಮಿಥ ಚಕ್ಷಂಥ, ಚಕ್ಷಮಥುಃ ಚಕ್ಷಮ, ಚಕ್ಷಾಮ ಚಕ್ಷಮ ಚಕ್ಷಮಿವ ಚಕ್ಷಣ್ವ, ಚಕ್ಷಮಿಮ ಚಕ್ಷಣ್ಮ. ಕ್ಷಮೂ ಸಹನೇ ಲಿಟ್.

**ಅವ:**— ಪದ್ಮತೀರ್ಥನ ಸಹಾಯಕ್ಕಾಗಿ ಬಂದ ಪುಂಡರೀಕಪುರಿಯನ್ನು ಆಚಾರ್ಯರು ಜಯಿಸಿದರು—

**ತಸ್ಯ ತ್ರಾಸಾತ್ ಪೃಷ್ಠತಸ್ತಿಷ್ಠತೋಽಭೂತ್**
**ಕ್ಷೇಮಾಪೇಕ್ಷೀ ಯೋ ಜನಃ ಪ್ರಾಗ್ ಜಿತೋಽಪಿ।**
**ಮಧ್ಯೇಽನ್ಯೇಷಾಂ ಗೋತತೀಸ್ತತ್ಪ್ರಯುಕ್ತಾಃ**
**ಸೋಽದ್ಯಜ್ಜಿಷ್ಣುಃ ಪಂಚಷೈರ್ಗೋವಿಶೇಷೈಃ** ॥೪೫॥

**ಅ:**—ಪ್ರಾಕ್ ಜಿತಃ ಅಪಿ ಯಃ ಜನಃ ತ್ರಾಸಾತ್ ಪೃಷ್ಠತಃ ತಿಷ್ಠತಃ ತಸ್ಯ ಕ್ಷೇಮಾಪೇಕ್ಷೀ ಅಭೂತ್ ಅನ್ಯೇಷಾಂ ಮಧ್ಯೇ ತತ್ಪ್ರಯುಕ್ತಾಃ ಗೋತತೀಃ ಜಿಷ್ಣುಃ ಸಃ ಪಂಚಷೈಃ ಗೋವಿಶೇಷೈಃ ಅದ್ಯತ್।

**ಅರ್ಥ:**—ಪ್ರಾಕ್ ಜಿತಃ ಅಪಿ = ಹಿಂದೆ ಸೋಲಿಸಲ್ಪಟ್ಟಿದ್ದರೂ, ಯಃ ಜನಃ = ಯಾವ ಪುಂಡರೀಕಪುರಿಯು, ಅಶ್ವತ್ಥಾಮಾದಿಜನವು, ತ್ರಾಸಾತ್ = (ಮಧ್ವರ, ಅರ್ಜುನನ) ಭಯದಿಂದ, ಪೃಷ್ಠತಃ = ಹಿಂಭಾಗದಲ್ಲಿ, ತಿಷ್ಠತಃ = ಇರುವ, ತಸ್ಯ = ಆ ಪದ್ಮತೀರ್ಥನ, ಸೈಂಧವನ, ಕ್ಷೇಮಾಪೇಕ್ಷೀ = ಕೀರ್ತಿಯ ರಕ್ಷಣೆಯನ್ನು, ಅಪೇಕ್ಷಿಸುವವನು, ಮರಣಾಭಾವವನ್ನು ಇಚ್ಛಿಸುವವನು, ಅಭೂತ್ = ಆದನೋ, ಅನ್ಯೇಷಾಂ = ಇತರಮಧ್ವಶಿಷ್ಯರ, ಪಾಂಡವರ, ಮಧ್ಯೇ = ನಡುವೆ, ತತ್ಪ್ರಯುಕ್ತಾಃ = ಆ ಪುಂಡರೀಕ

Rarest Archiver

ಪುರಿಯು ಹೇಳಿದ, ಆ ಅಶ್ವತ್ಥಾಮಾದಿಜನವು ಪ್ರಯೋಗಿಸಿದ, ಗೋತತೀಃ ಮಾತುಗಳ ಸಮೂಹಗಳನ್ನು, ಬಾಣಗಳ ಸಮೂಹಗಳನ್ನು, ಜಿಷ್ಣುಃ= ಜಯಶೀಲರಾದ, ಸಃ= ಆ ಮಧ್ವಾಚಾರ್ಯರು. ಪಂಚಷೈಃ ಗೋವಿಶೇಷೈಃ = ಐದಾರು ವಿಶೇಷವಾದ ವಾಕ್ಯಗಳಿಂದ, ಐದಾರು ಬಾಣವಿಶೇಷಗಳಿಂದ, ಅದ್ಯತ್= ಖಂಡಿಸಿದರು.

**ತಾ:**—ಹಿಂದೆ ಅರ್ಜುನನಿಂದ ಸೋತ ಅಶ್ವತ್ಥಾಮಾದಿಗಳು ಅರ್ಜುನನ ಭಯದಿಂದ ತಮ್ಮ ಹಿಂದೆ ನಿಂತಿರುವ, ಸೈಂಧವನನ್ನು ಕಾಪಾಡಲು ಬಯಸಿದರು. ಅವರು ಪಾಂಡವರ ನಡುವೆ ಅರ್ಜುನನ ಮೇಲೆ ಬಾಣಗಳನ್ನು ಪ್ರಯೋಗಿಸಿದರು. ಆಗ ಅರ್ಜುನನು ಆ ಬಾಣಗಳನ್ನು ಐದಾರು ವಿಶೇಷಬಾಣಗಳಿಂದ ಕತ್ತರಿಸಿದನು. ಹಾಗೆಯೇ ಹಿಂದೆ ಸೋತಿದ್ದ ಪುಂಡರೀಕಪುರಿಯು ಶ್ರೀಮಧ್ವಾಚಾರ್ಯರ ಭಯದಿಂದ ಹಿಂದೆ ನಿಂತಿದ್ದ ಪದ್ಮತೀರ್ಥನ ಕೀರ್ತಿಯನ್ನು ರಕ್ಷಿಸಲು ಅಪೇಕ್ಷಿಸಿದನು. ಆದುದರಿಂದ ಅವನು ಮಧ್ವಶಿಷ್ಯರ ನಡುವೆ ಸ್ವಮತೋಪನ್ಯಾಸವನ್ನು ಮಾಡಿದನು. ಆಚಾರ್ಯರು ಅವನ ಉಪನ್ಯಾಸವಾಕ್ಯಗಳನ್ನು ಐದಾರು ಮಾತುಗಳಿಂದಲೇ ಖಂಡಿಸಿ ಜಯಿಸಿದರು. 'ಆನಂದತೀರ್ಥಪಾರ್ಥಸ್ಯ ಭಯಾದಾಸ್ತೇ ಸ ಪೃಷ್ಠತಃ। ಪುರತಃ ಸ್ಥಾಪಯಿತ್ವಾನ್ಯಾನ್ ಪದ್ಮತೀರ್ಥಜಯದ್ರಥಃ ॥' (ಭಾ. ಪ್ರ.) ಆನಂದತೀರ್ಥರೆಂಬ ಪಾರ್ಥನಿಂದ ಹೆದರಿ ಪದ್ಮತೀರ್ಥನೆಂಬ ಜಯದ್ರಥನು ತನ್ನವರನ್ನು ಮುಂದೆ ನಿಲ್ಲಿಸಿ ತಾನು ಹಿಂದೆ ನಿಂತನು.

**ವಿ:**—ಕ್ಷೇಮಂ ಅಪೇಕ್ಷತೇ ಇತಿ, ಗವಾಂ ತತಯಃ ಗೋತತಯಃ ತಾಃ, ಗೋ = ಸ್ವರ್ಗ, ಬಾಣ, ಮಾತು, ಹಸು, ಎತ್ತು; ತೇನ ಪ್ರಯುಕ್ತಾಃ, ತಾಃ, ಪಂಚ ವಾ ಷಡ್ ವಾ ಪಂಚಷಾಃ ತೈಃ, ಗವಾಂ ವಿಶೇಷಾಃ ಗೋವಿಶೇಷಾಃ ತೈಃ ।

**ಕ್ರಿ:**—ಅಭೂತ್, ಹಿಂದೆ ಬಂದಿದೆ. ಅದ್ಯತ್ ಅದ್ಯತಾಂ ಅದ್ಯನ್, ಅದ್ಯಃ ಅದ್ಯತಂ ಅದ್ಯತ, ಅದ್ಯಂ ಅದ್ಯಾವ ಅದ್ಯಾಮ ದೋ ಅವಖಂಡನೇ ದಿವಾದಿ ಶ್ಯನ್ (ಯ) ವಿಕರಣ ಪ್ರತ್ಯಯ. ಲಙ್.

**ಅವ:**—ಆಚಾರ್ಯರು ಮತ್ತೂ ಪದ್ಮತೀರ್ಥನನ್ನು ಸೋಲಿಸಿದರು—

Rarest Archive

**ವಿಷ್ಣೋರ್ಭೂಯಃ ಶೋಭಯದ್ಭಿಃ ಪದಾಂತಂ**
**ಪಾರಂಪರ್ಯೇಣೇರ್ಯಮಾಣೈರವಾರ್ಯೈಃ ।**
**ಗೋವ್ರಾತೈಸ್ತಂ ದಾರಯಿತ್ವಾ ನ್ಯಗೃಹ್ಣಾತ್**
**ಕಂಜಾಖ್ಯಾನಂ ಸಿಂಧುಪಂ ಮಧ್ವಪಾರ್ಥಃ ॥೪೬॥**

**ಅ:**—ಮಧ್ವಪಾರ್ಥಃ ಭೂಯಃ ವಿಷ್ಣೋಃ ಪದಾಂತಂ ಶೋಭಯದ್ಭಿಃ ಪಾರಂಪರ್ಯೇಣ ಈರ್ಯಮಾಣೈಃ ಅವಾರ್ಯೈಃ ಗೋವ್ರಾತೈಃ ಕಂಜಾಖ್ಯಾನಂ ತಂ ಸಿಂಧುಪಂ ದಾರಯಿತ್ವಾ ನ್ಯಗೃಹ್ಣಾತ್.

**ಅರ್ಥ:**—ಮಧ್ವಪಾರ್ಥಃ = ಮಧ್ವಾಚಾರ್ಯರೆಂಬ ಅರ್ಜುನನು, ಭೂಯಃ = ಬಹಳವಾಗಿ, ವಿಷ್ಣೋಃ = ಶ್ರೀಮನ್ನಾರಾಯಣನ, ಪದಾಂತಂ = ಸ್ವರೂಪದ ನಿರ್ಣಯವನ್ನು, ಆಕಾಶವನ್ನು, ಶೋಭಯದ್ಭಿಃ = ಪ್ರಕಾಶಗೊಳಿಸುವ, ಪಾರಂಪರ್ಯೇಣ = ಒಂದರ ಹಿಂದೆ ಒಂದಾಗಿ, ಈರ್ಯಮಾಣೈಃ = ಹೇಳಲ್ಪಡುವ, ಪ್ರಯೋಗಿಸಲ್ಪಡುವ, ಅವಾರ್ಯೈಃ=ಖಂಡಿಸಲು ಸಾಧ್ಯವಿಲ್ಲದ, ತಡೆಯಲು ಸಾಧ್ಯವಿಲ್ಲದ, ಗೋವ್ರಾತೈಃ = ಮಾತುಗಳ ಸಮೂಹಗಳಿಂದ, ಬಾಣಗಳ ಸಮೂಹಗಳಿಂದ, ಕಂಜಾಖ್ಯಾನಂ = ಪದ್ಮತೀರ್ಥನೆಂದು ಹೆಸರುಳ್ಳ, ತಂ ಸಿಂಧುಪಂ = ಆ ಸೈಂಧವನನ್ನು, ದಾರಯಿತ್ವಾ = ಖಂಡಿಸಿ, ಸೀಳಿ, ನ್ಯಗೃಹ್ಣಾತ್ = ನಿಗ್ರಹಿಸಿದರು. (ಮಾತಾಡದಂತೆ ಮಾಡಿದರು) ಕೊಂದನು.

**ತಾ:**—ಹಿಂದೆ ಅರ್ಜುನನು ಆಕಾಶಪ್ರದೇಶವನ್ನು ಪ್ರಕಾಶಗೊಳಿಸುತ್ತಾ ಬರುತ್ತಿರುವ, ತಡೆಯಲಾಗದ ಬಾಣಗಳನ್ನು ನಿರಂತರವಾಗಿ ಪ್ರಯೋಗಿಸಿ ಅಭಿಮನ್ಯುವನ್ನು ಕೊಲ್ಲಿಸಿದ ಸೈಂಧವನ್ನು ಸೀಳಿ ಕೊಂದಿದ್ದನು, ಹಾಗೆಯೇ ಶ್ರೀಮಧ್ವಾಚಾರ್ಯರು ಶ್ರೀಮನ್ನಾರಾಯಣನ ಸ್ವರೂಪವನ್ನು ನಿರ್ಣಯಿಸುವ, ವೇದಾಂತಶಾಸ್ತ್ರವನ್ನೂ ಪರಿಷ್ಕೃತರೂಪದಿಂದ ತಿಳಿಸುವ, ಪ್ರತಿವಾದಿಗಳಿಗೆ ನಿಗ್ರಹಿಸಲು ಸಾಧ್ಯವಾಗದ ಮಾತುಗಳನ್ನು ಎಡೆಬಿಡದೆ ಆಡಿ, ಪದ್ಮತೀರ್ಥನನ್ನು ಖಂಡಿಸಿ ನಿರುತ್ತರನನ್ನಾಗಿ ಮಾಡಿದರು.

**ವಿ:**—ಪದ್ಯತೇ ಇತಿ ಪದಂ ಸ್ವರೂಪಂ, ಪದಸ್ಯ ಅಂತಃ (ನಿರ್ಣಯಃ) ಯಸ್ಮಾತ್ ತತ್ ಪದಾಂತಂ ತತ್, ನ ವಾರ್ಯಾಃ ಅವಾರ್ಯಾಃ ತೈಃ,

Rarest Archiver

ಗವಾಂ ವ್ರಾತಾಃ ಗೋವ್ರಾತಾಃ ತ್ರೈಃ, ಕಂಜಃ (ಪದ್ಮತೀರ್ಥಃ) ಇತಿ ಆಖ್ಯಾನಂ ಯಸ್ಯ ತಂ, ಸಿಂಧೂನ್ ಪಾತೀತಿ ಸಿಂಧುಪಃ ತಂ, ಮಧ್ವ ಏವ ಪಾರ್ಥಃ ಮಧ್ವಪಾರ್ಥಃ

**ಕ್ರಿ:**—ನಿ+ಅಗೃಹ್ಣಾತ್ ಅಗೃಹ್ಣೀತಾಂ ಅಗೃಹ್ಣನ್, ಅಗೃಹ್ಣಾಃ ಅಗೃಹ್ಣೀತಂ ಅಗೃಹ್ಣೀತ, ಅಗೃಹ್ಣಾಂ ಅಗೃಹ್ಣೀವ ಅಗೃಹ್ಣೀಮ. ಗ್ರಹ ಉಪಾದಾನೇ ಲಙ್. ನಿ ಉಪಸರ್ಗ.

**ಅವ:**—ಪದ್ಮತೀರ್ಥರೇ ಮೊದಲಾದವರು ಸೋತು ಓಡುವಾಗ ಶ್ರೀಮಧ್ವಶಿಷ್ಯರು ಆಡಿದ ಶ್ಲೋಕಗಳ ತಾತ್ಪರ್ಯಸಂಗ್ರಹರೂಪವಾದ ವರ್ಣನೆಗಳಿವು—

**ಆಸ್ತಾಮಾಸ್ತಾಮೇಷ ವೋ ವಿಶ್ವಮೋಷೋ**
**ರೇ ರೇ ಮಾಯಾವಾದಿಚೋರಾ ದ್ರವೇತ ।**
**ದ್ರಷ್ಟಾ ದ್ರಷ್ಟಾ ನಿಗ್ರಹೀತಾ ಧ್ರುವಂ ವಃ**
**ಪ್ರಾಪ್ತಃ ಕಾಲೋ ದ್ರಾಗ್ ಗುಹಾಂತಂ ಪ್ರವೇಷ್ಟುಂ ॥೪೭॥**

**ಅ :**—ರೇ ರೇ ಮಾಯಾವಾದಿಚೋರಾಃ ವಃ ಏಷಃ ವಿಶ್ವಮೋಷಃ ಆಸ್ತಾಂ ಆಸ್ತಾಂ, (ಯೂಯಂ) ದ್ರವೇತ. ದ್ರಷ್ಟಾ, ದ್ರಷ್ಟಾ ವಃ ಧ್ರುವಂ ನಿಗ್ರಹೀತಾ, ದ್ರಾಕ್ ಗುಹಾಂತಂ ಪ್ರವೇಷ್ಟುಂ ಕಾಲಃ ಪ್ರಾಪ್ತಃ ॥

**ಅರ್ಥ:**—ರೇ ರೇ ಮಾಯಾವಾದಿಚೋರಾಃ = ಎಲೈ, ಪ್ರಪಂಚವು ಮಾಯಾಕಲ್ಪಿತವು, ಸುಳ್ಳು ಎಂದು ಹೇಳುವ ಕಳ್ಳರೇ! ವಃ = ನಿಮ್ಮ, ವಿಶ್ವಮೋಷಃ = ಭೇದಮೊದಲಾದ ಸಮಸ್ತಪ್ರಪಂಚದ ಕಳ್ಳತನವು (ಪ್ರಪಂಚವು ಮಿಥ್ಯಾಎಂಬ ವಾದವು) ಆಸ್ತಾಂ ಆಸ್ತಾಂ = ಇರಲಿ ಇರಲಿ. (ಯೂಯಂ = ನೀವು) ದ್ರವೇತ = ಓಡಲೇಬೇಕು. ದ್ರಷ್ಟಾ ದ್ರಷ್ಟಾ = ಪ್ರಪಂಚವನ್ನು ನೋಡುತ್ತಿರುವ ಪ್ರತಿಯೊಬ್ಬ ಜೀವನೂ, ವಃ = ನಿಮ್ಮನ್ನು, ಧ್ರುವಂ = ನಿಶ್ಚಯವಾಗಿ, ನಿಗ್ರಹೀತಾ = ನಿರುತ್ತರರನ್ನಾಗಿ ಮಾಡುವನು. ದ್ರಾಕ್ = ಬೇಗನೆ, ಗುಹಾಂತಂ ಪ್ರವೇಷ್ಟುಂ = ಗುಹೆಯ ಒಳಭಾಗವನ್ನು ಪ್ರವೇಶಿಸುವುದಕ್ಕೆ, ಕಾಲಃ ಪ್ರಾಪ್ತಃ = ಸಮಯವು ಒದಗಿದೆ.

Rarest Archiver

**ತಾ:—** ಎಲೈ ಮಾಯಾವಾದಿಗಳೆಂಬ ಕಳ್ಳರಿರಾ! ಜಗತ್ತು ಮಾಯೆಯಿಂದ ಕಲ್ಪಿತವು, ಮಿಥ್ಯಾ ಎಂದು ಹೇಳುವ ನೀವು ಕಳ್ಳರಂತೆ ಇರುವಿರಿ. ಪ್ರಪಂಚವು ಅಸತ್ಯ, ಜೀವಬ್ರಹ್ಮರಿಗೆ ಭೇದವಿಲ್ಲ ಎಂದು ಹೇಳುತ್ತಾ ಭೇದ ಮತ್ತು ಪ್ರಪಂಚದ ನಿರಾಕರಣಮಾಡುವುದನ್ನು ನಿಲ್ಲಿಸಿ ಬೇಗನೆ ಓಡಿರಿ. ನಿಮ್ಮನ್ನು ನೋಡುವ ಪ್ರತಿಯೊಬ್ಬನೂ ನಿಮ್ಮನ್ನು ಹೀಗೆ ಕೇಳುವನು. 'ನೀವು ಹೇಳಿದುದು (ನಿಮ್ಮ ಮಾತು) ಸತ್ಯವೋ ಸುಳ್ಳೋ? ಸತ್ಯವಾದರೆ ನಿಮ್ಮ ಸಿದ್ಧಾಂತಕ್ಕೆ ವಿರೋಧವು. ಸುಳ್ಳು ಎಂದರೆ ನೀವು ಆಡಿದ ಮಾತು ಪ್ರಮಾಣದಿಂದ ಗೊತ್ತಾಗಿರುವುದರಿಂದ ನಿಮ್ಮ ಮಾತು ವಿರುದ್ಧವಾಗುತ್ತದೆ'. ಈ ರೀತಿ ವಾದಿಸಿ ನಿಮ್ಮನ್ನು ನಿರುತ್ತರರನ್ನಾಗಿ ಮಾಡುವನು, ನಿಮ್ಮನ್ನು ನಿಗ್ರಹಸ್ಥಾನಕ್ಕೆ ಗುರಿಪಡಿಸುತ್ತಾನೆ. ಆದುದರಿಂದ ನೀವು ಗುಹೆಯೊಳಗೆ ಸೇರಿಕೊಳ್ಳಲು ಸರಿಯಾದ ಕಾಲವಾಗಿದೆ. 'ರಾಜಭಟರು ಬಂದಾಗ ಅಥವಾ ಸೂರ್ಯೋದಯವಾದಾಗ ಕಳ್ಳರು ಗುಹೆಗಳಲ್ಲಿ ಹೊಕ್ಕು ಮರೆಯಾಗುತ್ತಾರೆ, ಅದರಂತೆ ಮಾಯಾವಾದಿಗಳಿಗೆ ತತ್ತ್ವವಾದಿಗಳಿಂದ ಸೋಲು ಒದಗಿದಾಗ ಜಗತ್ತು ಮಿಥ್ಯಾ, ಎಂದು ಹೇಳಿ ವೇದೋಕ್ತವಾದ ಜಗತ್ತಿನ ಸತ್ಯತೆಯನ್ನು ಅಲ್ಲಗಳೆಯುವ ಹವ್ಯಾಸವನ್ನು ಬಿಟ್ಟು ಅಡಗಿಕೊಳ್ಳುವ ಕಾಲವಿದು' ಎಂದು ಆಚಾರ್ಯರ ಶಿಷ್ಯರು ಪರಿಹಾಸ ಮಾಡಿದರು. 'ದ್ರವತ ದ್ರವತಾಶು ಮಾಯಿನಃ ನಿವಿಶಧ್ವಮತಂದ್ರಿತಾ ಗುಹಾಃ | ಕಮಲಾರಮಣಾಂಬರಾಶ್ರಯಃ ಸಮುದೇತ್ಯಖಿಲಜ್ಞಭಾಸ್ಕರಃ'|| ಭಾ.ಪ್ರ.

**ವಿ:—**ವಿಶ್ವಸ್ಯ ಮೋಷಃ, ಮಾಯಾವಾದಿನಃ ಏವ ಚೋರಾಃ, ಗುಹಾಯಾಃ ಅಂತಃ ತಂ; **ಕ್ರಿಯಾ:**—ಆಸ್ತಾಂ ಆಸಾತಾಂ ಆಸತಾಂ, ಆಸ್ಸ್ವ ಆಸಾಥಾಂ ಆಧ್ವಂ, ಆಸೈ ಆಸಾವಹೈ, ಆಸಾಮಹೈ ಆಸ ಉಪವೇಶನೇ ಲೋಟ್; ದ್ರವೇತ್ ದ್ರವೇತಾಂ ದ್ರವೇಯುಃ; ದ್ರವೇಃ ದ್ರವೇತಂ ದ್ರವೇತ, ದ್ರವೇಯಂ ದ್ರವೇವ ದ್ರವೇಮ. ದ್ರು ಗತೌ ವಿಧಿಲಿಙ್. ನಿ+ಗ್ರಹೀತಾ ಗ್ರಹೀತಾರೌ ಗ್ರಹೀತಾರಃ, ಗ್ರಹೀತಾಸಿ ಗ್ರಹೀತಾಸ್ಥಃ ಗ್ರಹೀತಾಸ್ಥ; ಗ್ರಹೀತಾಸ್ಮಿ ಗ್ರಹೀತಾಸ್ವಃ ಗ್ರಹೀತಾಸ್ಮಃ, ನಿ ಉಪಸರ್ಗ ಗ್ರಹ ಉಪಾದಾನೇ ಲುಟ್.

Rarest Archiver

ಅವ:—ಆಚಾರ್ಯರ ಶಿಷ್ಯರು ಹೇಳಿದ ಪರಿಹಾಸವಚನತಾತ್ಪರ್ಯವನ್ನು ಮುಂದುವರಿಸಿದ್ದಾರೆ—

ತೇಜೋ ವಿದ್ವಚ್ಚಕ್ರಚಂದ್ರಸ್ಯ ಲೀನಂ
ವಿಧ್ವಸ್ತಾಲಂ ವಾದಿನಕ್ಷತ್ರಲಕ್ಷ್ಮೀಃ ।
ವಿಶ್ವವ್ಯಾಪ್ತಂ ಯತ್ತು ತದ್ದೀಪ್ತಿಮೂಲಂ
ಯುಷ್ಮತ್ಪ್ರೇಷ್ಠಂ ತನ್ನಿರಸ್ತಂ ತಮಶ್ಚ ॥೪೮॥

ಅ:—ವಿದ್ವಚ್ಚಕ್ರಚಂದ್ರಸ್ಯ ತೇಜಃ ಲೀನಂ. ವಾದಿನಕ್ಷತ್ರಲಕ್ಷ್ಮೀಃ ಅಲಂ ವಿಧ್ವಸ್ತಾ. ವಿಶ್ವವ್ಯಾಪ್ತಂ ತದ್ದೀಪ್ತಿಮೂಲಂ ಯುಷ್ಮತ್ಪ್ರೇಷ್ಠಂ ಯತ್ ತು ತಮಃ ತತ್ ಚ ನಿರಸ್ತಂ.

ಅರ್ಥ :—ವಿದ್ವಚ್ಚಕ್ರ = ವಿದ್ವಾಂಸರ ಸಮೂಹವೆಂಬ, ಚಂದ್ರಸ್ಯ = ಚಂದ್ರನ, ತೇಜಃ ಲೀನಂ = ಬೆಳಕು (ಸಾಮರ್ಥ್ಯವು) ಅಡಗಿತು. ವಾದಿನಕ್ಷತ್ರ = ಕುವಾದಿಗಳೆಂಬ ನಕ್ಷತ್ರಗಳ, ಲಕ್ಷ್ಮೀಃ = ಜಯಸಂಪತ್ತು, ಶೋಭೆಯು, ಅಲಂ ವಿಧ್ವಸ್ತಾ = ಬಹಳವುಟ್ಟಿಗೆ ಹಾಳಾಯಿತು. ವಿಶ್ವವ್ಯಾಪ್ತಂ = ಪ್ರಪಂಚದಲ್ಲಿ ವ್ಯಾಪಿಸಿರುವ, ತತ್ = ಆ ವಿದ್ವಚ್ಚಕ್ರಚಂದ್ರನ ಮತ್ತು ವಾದಿನಕ್ಷತ್ರಗಳ, ದೀಪ್ತಿಮೂಲಂ = ಪ್ರಕಾಶಕ್ಕೆ ಕಾರಣವಾದ, ಯುಷ್ಮತ್ಪ್ರೇಷ್ಠಂ = ನಿಮಗೆ ಅತಿಪ್ರಿಯವಾದ, ಯತ್ತು ತಮಃ = ಯಾವ ಕತ್ತಲೆಯಿದೆಯೋ, ಅಜ್ಞಾನ (ಅವಿದ್ಯಾ) ವಿದೆಯೋ, ತತ್ ಚ ನಿರಸ್ತಂ = ಅದೂ ನಿವಾರಿತವಾಗಿದೆ.

ತಾ:–ಪಂಡಿತವರ್ಗವೆಂಬ ಚಂದ್ರನ ಕಾಂತಿಯು ಅಡಗಿ ಹೋಯಿತು. ವಾದಿಗಳೆಂಬ ನಕ್ಷತ್ರಗಳ ಪ್ರಭೆಯು ಪೂರ್ತಿಯಾಗಿ ಹಾಳಾಯಿತು. ಆ ಚಂದ್ರನ ಮತ್ತು ನಕ್ಷತ್ರಗಳ ಪ್ರಕಾಶಕ್ಕೆ ಕಾರಣವಾದ, ಲೋಕವನ್ನೆಲ್ಲಾ ವ್ಯಾಪಿಸಿದ್ದ ಕತ್ತಲೆಯೂ, ಅಜ್ಞಾನ (ಅವಿದ್ಯೆಯೂ)ವೂ, ನಷ್ಟವಾಯಿತು. ಸೂರ್ಯನ ಉದಯವಾದಕೂಡಲೇ ಚಂದ್ರಪ್ರಕಾಶವೂ ನಕ್ಷತ್ರಶೋಭೆಯೂ ನಾಶವಾಗುತ್ತದೆ. ಕಳ್ಳರು ಅವಿತುಕೊಳ್ಳಬೇಕಾಗುತ್ತದೆ. ಆಚಾರ್ಯ ಸೂರ್ಯನು ಕಂಗೊಳಿಸುತ್ತಿರುವುದರಿಂದ ಅದ್ವೈತಿಪಂಡಿತರೂ ವಾದಿಗಳೂ

Rarest Archives

ಸೋತು ಬಣ್ಣಗೆಟ್ಟರು. ಅಜ್ಞಾನವು ನಷ್ಟವಾಯಿತು ಮಾಯಿಗಳೇ ಅಡಗಿಕೊಳ್ಳಿರಿ.

**ವಿ:**—ವಿದುಷಾಂ ಚಕ್ರಂ, ವಿದ್ವಚ್ಚಕ್ರಮೇವ ಚಂದ್ರಃ ತಸ್ಯ, ವಾದಿನ ಏವ ನಕ್ಷತ್ರಾಣಿ, ವಾದಿನಕ್ಷತ್ರಾಣಾಂ ಲಕ್ಷ್ಮೀಃ, ವಿಶ್ವೇ ವ್ಯಾಪ್ತಂ, ತಯೋಃ ದೀಪ್ತೇಃ ಮೂಲಂ, ಯುಷ್ಮಾಕಂ ಪ್ರೇಷ್ಠಂ;

**ಅವ:**—ಮಧ್ವಸೂರ್ಯನು ಹೇಗೆ ಉದಯಿಸುತ್ತಾನೆ?—

**ಪೂರ್ವಾಶಾಮಾಪೂರ್ಯ ವಿಶ್ವಪ್ರಕಾಶೀ**
**ಗೋಸಂದೋಹೈಃ ಸಪ್ತವಿದ್ಯಾಖ್ಯವಾಹಃ ।**
**ಯುಷ್ಮಾಭಿಃ ಕಿಂ ನೈಕ್ಷಿ ದೇದೀಪ್ಯತೇಽಸೌ**
**ದೇವಃ ಸಾಕ್ಷಾತ್ ಸರ್ವವಿತ್‌ಸರ್ವದೀಪಃ ॥೪೯॥**

**ಅ:**—ಸಪ್ತವಿದ್ಯಾಖ್ಯವಾಹಃ ವಿಶ್ವಪ್ರಕಾಶೀ ದೇವಃ ಸರ್ವವಿತ್ಸರ್ವದೀಪಃ ಗೋಸಂದೋಹೈಃ ಪೂರ್ವಾಶಾಂ ಆಪೂರ್ಯ ಸಾಕ್ಷಾತ್ ದೇದೀಪ್ಯತೇ. ಯುಷ್ಮಾಭಿಃ ಅಸೌ ನೈಕ್ಷಿ ಕಿಂ?

**ಅರ್ಥ:**—ಸಪ್ತವಿದ್ಯಾಖ್ಯವಾಹಃ = ಋಗಾದಿ ಏಳು ವಿದ್ಯೆಗಳೆಂಬ ಕುದುರೆಗಳುಳ್ಳ, ವಿಶ್ವಪ್ರಕಾಶೀ = ಪ್ರಪಂಚವನ್ನು ಪ್ರಕಾಶಗೊಳಿಸುವ, ದೇವಃ = ಕ್ರೀಡಾದಿಗುಣಗಳುಳ್ಳ, ಸರ್ವವಿತ್ = ಎಲ್ಲವನ್ನೂ ಬಲ್ಲ ಪೂರ್ಣ ಪ್ರಜ್ಞರೆಂಬ, ಸರ್ವದೀಪಃ = ಸೂರ್ಯನು, ಗೋಸಂದೋಹೈಃ = ಮಾತುಗಳ ಸಮೂಹಗಳಿಂದ, ಕಿರಣಗಳ ಸಮೂಹಗಳಿಂದ, ಪೂರ್ವಾಶಾಂ = ಪೂರ್ವ ದಿಕ್ಕನ್ನು, ಹಿಂದಿನ ಬ್ರಹ್ಮಾದಿಗಳ ಅಭಿಪ್ರಾಯವನ್ನು, ಆಪೂರ್ಯ = ತುಂಬಿ, ಪೂರ್ತಿಗೊಳಿಸಿ, ಸಾಕ್ಷಾತ್ = ಪ್ರತ್ಯಕ್ಷವಾಗಿ, ದೇದೀಪ್ಯತೇ = ಪ್ರಕಾಶಿಸುತ್ತಾನೆ. ಯುಷ್ಮಾಭಿಃ = ನಿಮ್ಮಿಂದ, ಅಸೌ = ಈ ಮಧ್ವ-ಸೂರ್ಯನು, ನ ಐಕ್ಷಿ ಕಿಂ = ನೋಡಲ್ಪಡಲಿಲ್ಲವೇನು?

**ತಾ:**—ಸಕಲಪ್ರಪಂಚಕ್ಕೆ ದೀಪದಂತಿರುವ ಸೂರ್ಯನು ಏಳುಕುದುರೆಗಳನ್ನು ಕಟ್ಟಿದ ರಥದಲ್ಲಿ ಕುಳಿತು ತನ್ನ ಕಿರಣಗಳಿಂದ ಪೂರ್ವದಿಕ್ಕನ್ನು ತುಂಬಿ ಪ್ರಕಾಶಿಸುತ್ತಾ ಉದಯಿಸುತ್ತಾನೆ. ಹಾಗೆಯೇ ಶ್ರೀಮಧ್ವಾ

Rarest Archiver

ಚಾರ್ಯರೆಂಬ ಸೂರ್ಯನು ಋಕ್, ಯಜುಸ್, ಸಾಮ, ಅಥರ್ವ ಎಂಬ ನಾಲ್ಕು ವೇದಗಳು, ಮೂಲರಾಮಾಯಣ, ಭಾರತ, ಪಂಚರಾತ್ರ ಎಂಬ ಏಳುವಿದ್ಯೆಗಳಿಂದ ಪ್ರಪಂಚದ ಜನರಿಗೆ ಬ್ರಹ್ಮಸ್ವರೂಪವನ್ನು ಬೋಧಿಸುತ್ತಾ, 'ಶ್ರೀಹರಿಯ ಸರ್ವೋತ್ತಮತ್ವವೂ, ಜಗತ್ತಿನ ಸತ್ಯತೆಯೂ ಪ್ರಕಟವಾಗಿ, ಸಜ್ಜನರ ಅಜ್ಞಾನವು ನಾಶವಾಗಿ ಸುಜ್ಞಾನವು ಬರಲಿ' ಎಂಬ ಬ್ರಹ್ಮಾದಿಗಳ ಅಭಿಪ್ರಾಯವನ್ನು ಪೂರ್ತಿಗೊಳಿಸಿ ವಿರಾಜಿಸುತ್ತಿದ್ದಾನೆ. ಮಾಯಾವಾದಿ ಚೋರರೇ! ನೀವು ಈ ಮಧ್ವಸೂರ್ಯನನ್ನು ನೋಡಲಿಲ್ಲವೇ! ಬೇಗನೆ ಓಡಿರಿ.

**ವಿ:**—ಪೂರ್ವಾ ಚ ಸಾ ಆಶಾ ಚ, ಪೂರ್ವೇಷಾಂ ಆಶಾ ತಾಂ, ವಿಶ್ವಸ್ಮಿನ್ (ವಿಶ್ವೇ) ಪ್ರಕಾಶತೇ ಇತಿ, ವಿಶ್ವಸ್ಯ (ಬ್ರಹ್ಮಸ್ವರೂಪಸ್ಯ ಪ್ರಪಂಚಸ್ವರೂಪಸ್ಯ ಚ) ಪ್ರಕಾಶೀ, ಗವಾಂ ಸಂದೋಹಾಃ ತೈಃ, ಸಪ್ತ ಚ ತಾಃ ವಿದ್ಯಾಶ್ಚ, ಸಪ್ತವಿದ್ಯಾಃ ಇತಿ ಆಖ್ಯಾ ಯೇಷಾಂ ತೇ, ಸಪ್ತವಿದ್ಯಾಖ್ಯಾಃ ವಾಹಾಃ ಯಸ್ಯ ಸಃ, ಸರ್ವಂ ವೇತ್ತೀತಿ ಸರ್ವವಿತ್, ಸರ್ವಂ ದೀಪಯತೀತಿ ಸರ್ವದೀಪಃ, ಸರ್ವವಿದೇವ ಸರ್ವದೀಪಃ |

**ಕ್ರಿ:**—ದೇದೀಪ್ಯತೇ ದೇದೀಪ್ಯೇತೇ ದೇದೀಪ್ಯಂತೇ ಇತ್ಯಾದಿ; ದೀಪೀ ದೀಪ್ತೌ ಯಜಂತ ಲಟ್. ಐಕ್ಷಿ ಐಕ್ಷಿಷಾತಾಂ ಐಕ್ಷಿಷತ-ಇತ್ಯಾದಿ ಈಕ್ಷ ದರ್ಶನೇ ಕರ್ಮಣಿ ಲುಙ್.

**ಅವ:**—ಮಧ್ವಸೂರ್ಯನನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ—

**ಸರ್ವಾಧಾರಂ ಬ್ರಹ್ಮಸಂಜ್ಞಂ ವಿಹಾಯೋ**
**ರಮ್ಯಾಕಾರಂ ಶಾರದೇಂದೀವರಾಭಂ |**
**ಸನ್ನಿರ್ಣೀತಂ ಗುಣ್ಯಲಂ ಶಬ್ದಭೇದೈ-**
**ರ್ಮಧ್ವಾದಿತ್ಯಂ ಸಂಶ್ರಿತಂ ಕೋಽಪಿಧತ್ತೇ ||೩೦||**

**ಅ:**—ಸರ್ವಾಧಾರಂ ಶಾರದೇಂದೀವರಾಭಂ ರಮ್ಯಾಕಾರಂ ಶಬ್ದಭೇದೈಃ ಅಲಂ ಗುಣಿ ನಿರ್ಣೀತಂ ಸತ್ ಬ್ರಹ್ಮಸಂಜ್ಞಂ ವಿಹಾಯಃ ಸಂಶ್ರಿತಂ ಮಧ್ವಾದಿತ್ಯಂ ಕಃ ಅಪಿಧತ್ತೇ ?

**ಅರ್ಥ:**—ಸರ್ವಾಧಾರಂ = ಎಲ್ಲದಕ್ಕೂ ಆಶ್ರಯವಾದ, ಶಾರದೇಂದಿ-

Rarest Archiver

ವರಾಭಂ = ಶರತ್ಕಾಲದ ಕನ್ನೈದಿಲೆಯಂತೆ ಕಾಂತಿಯುಳ್ಳ, ರಮ್ಯಾಕಾರಂ = ಸುಂದರವಾದ ಆಕೃತಿಯುಳ್ಳ, ಶಬ್ದಭೇದೈಃ = ಅಪೌರುಷೇಯಶಬ್ದ ವಿಶೇಷಗಳಾದ ವೇದಗಳಿಂದ (ಅ, ಕ ಇತ್ಯಾದಿವರ್ಣಗಳಿಂದ) ಅಲಂ = ಚೆನ್ನಾಗಿ, ಗುಣಿ = ಗುಣಪೂರ್ಣವು, ಗುಣವುಳ್ಳದ್ದು ಎಂದು, ನಿರ್ಣೀತಂ = ನಿಶ್ಚಯಿಸಲ್ಪಟ್ಟ, ಸತ್ = ದೋಷವಿಲ್ಲದ, ಬ್ರಹ್ಮಸಂಜ್ಞಂ = ಬ್ರಹ್ಮ ಎಂದು ಹೆಸರುಳ್ಳ, ವಿಹಾಯಃ = ಆಕಾಶವನ್ನು, ಸಂಶ್ರಿತಂ = ಆಶ್ರಯಿಸಿದ, ಮಧ್ವಾದಿತ್ಯಂ = ಮಧ್ವ ಎಂದು ಹೆಸರುಳ್ಳ ಸೂರ್ಯನನ್ನು, ಕಃ = ಯಾವನು, ಅಪಿಧತ್ತೇ = ಮುಚ್ಚಿಯಾನು ? (ಖಂಡಿಸಿಯಾನು.)

ತಾ:— ಸರ್ವವಸ್ತುಗಳಿಗೂ ಆಧಾರವಾದ, ಶರತ್ಕಾಲದ ಕನ್ನೈದಿಲೆ ಯಂತೆ ನೀಲವೂ, ಸುಂದರಾಕೃತಿಯುಳ್ಳದ್ದೂ ದ್ರವ್ಯಾತ್ಮಕವಾದ ಶಬ್ದವೇ ಗುಣವಾಗಿ (ವಿಶೇಷಣವಾಗಿ) ಉಳ್ಳದ್ದೆಂದು ನಿಶ್ಚಿತವೂ ಆದ ಆಕಾಶವನ್ನು ಆಶ್ರಯಿಸಿ ಸೂರ್ಯನು ವಿರಾಜಿಸುತ್ತಾನೆ. ಹಾಗೆಯೇ ಶ್ರೀಮಧ್ವರೂ ಶ್ರೀಮನ್ನಾರಾಯಣನನ್ನು ಆಶ್ರಯಿಸಿರುತ್ತಾರೆ. ಆ ನಾರಾಯಣನು ಸಮಸ್ತಪ್ರಪಂಚಕ್ಕೆ ಆಶ್ರಯನು. ಶರತ್ಕಾಲದ ಕನ್ನೈದಿಲೆಯಂತೆ ನೀಲವರ್ಣನು. ಸುಂದರರೂಪನು. ಹೀಗೆ ಸೂರ್ಯನಂತಿರುವ ಇಂತಹ ಶ್ರೀಮಧ್ವಾಚಾರ್ಯರನ್ನು ಯಾರು ಖಂಡಿಸಿಯಾರು ? ವಿಷ್ಣುವನ್ನು ಆಶ್ರಯಿಸಿರುವ ಸರ್ವಜ್ಞರಾದ ಸರ್ವಜ್ಞಾಚಾರ್ಯರನ್ನು ಸೋಲಿಸಲು ಯಾರಿಗೂ ಸಾಧ್ಯವಿಲ್ಲ.

**ವಿ:**—ಸರ್ವಸ್ಯ ಆಧಾರಃ, ತತ್; ಬ್ರಹ್ಮ ಇತಿ ಸಂಜ್ಞಾ ಯಸ್ಯ ತತ್, ರಮ್ಯಃ ಆಕಾರಃ ಯಸ್ಯ ತತ್, ತತ್; ಶರದಿ ಭವಂ ಶಾರದಂ, ತಚ್ಚ ತತ್ ಇಂದೀವರಂ ಚ, ಶಾರದೇಂದೀವರಸ್ಯ ಅಭಾ ಇವ ಆಭಾ ಯಸ್ಯ ತತ್, ತತ್; ಗುಣಾಃ ಅಸ್ಯ ಸಂತೀತಿ ಗುಣಿ, ಶಬ್ದಸ್ಯ ಭೇದಾಃ ತೈಃ, ಮಧ್ವ ಏವ ಆದಿತ್ಯಃ ತಂ, **ಕ್ರಿಯಾ:**- ಅಪಿ + ಧತ್ತೇ ದಧಾತೇ ದಧತೇ ಇತ್ಯಾದಿ, ಅಪಿ ಉಪಸರ್ಗ ಡು(ಧಾ)ಞ್ ಧಾರಣಪೋಷಣಯೋಃ ಲಟ್.

**ಅವ:**—ಇನ್ನೊಂದು ರೀತಿಯಿಂದಲೂ ಆಚಾರ್ಯರನ್ನು ವರ್ಣಿಸಿ ಮಾಯಾವಾದಿಗಳನ್ನು ಹೆದರಿಸುತ್ತಾರೆ—

Rarest Archiver

**ವಿಧಾವತ ವಿಧಾವತ ತ್ವರಿತಮತ್ರಿವಾದಾಸುರಾ**
**ಅದಭ್ರಧಿಷಣಾಭಿಧೋ ನರಹರಿರ್ಹಿ ಜಾಜ್ವಲ್ಯತೇ |**
**ಸ ಯುಕ್ತಿನಖರೈಃ ಖರೈರ್ಮುಖರಮೂರ್ಖದುಃಖಾಂಕುರೈ-**
**ರ್ವಿದಾರಯತಿ ದಾರುಣಪ್ರವಚನಪ್ರಣಾದೋಽಪ್ರಿಯಾನ್ ||೫೧||**

ಅ:—ಹೇ ಅತ್ರಿವಾದಾಸುರಾಃ! ಅದಭ್ರಧಿಷಣಾಭಿಧಃ ನರಹರಿಃ ಜಾಜ್ವಲ್ಯತೇ ಹಿ. ಸಃ ಮುಖರಮೂರ್ಖದುಃಖಾಂಕುರೈಃ ಖರೈಃ ಯುಕ್ತಿ-ನಖರೈಃ ದಾರುಣಪ್ರವಚನಪ್ರಣಾದಃ ಅಪ್ರಿಯಾನ್ ವಿದಾರಯತಿ. ತ್ವರಿತಂ ವಿಧಾವತ ವಿಧಾವತ.

ಅರ್ಥ:—ಹೇ ಅತ್ರಿವಾದಾಸುರಾಃ = ಜೀವ ಈಶ್ವರ ಜಗತ್ತು ಇವು ಸತ್ಯಗಳೆಂದೂ ಪರಸ್ಪರಭೇದವುಳ್ಳವುಗಳೆಂದೂ ಹೇಳುವ ವೇದಗಳನ್ನು ಸುಳ್ಳೆಂದು ಹೇಳುವ ಮಾಯಾವಾದಿಗಳೆಂಬ ದೈತ್ಯರೇ! ಅದಭ್ರಧಿ-ಷಣಾಭಿಧಃ = ಶ್ರೀಪೂರ್ಣಪ್ರಜ್ಞರೆಂಬ, ನರಹರಿಃ = ನರಸಿಂಹದೇವನು, ಜಾಜ್ವಲ್ಯತೇ ಹಿ = ಹೆಚ್ಚಾಗಿ ಪ್ರಕಾಶಿಸುತ್ತಿರುವನಷ್ಟೆ! ಸಃ = ಆ ಮಧ್ವಾಖ್ಯನರಸಿಂಹನು, ಮುಖರ= ವಾಚಾಲರಾದ, ಮೂರ್ಖ= ಅವಿವೇಕಿಗಳಾದ ಕುವಾದಿಗಳಿಗೆ, ದುಃಖಾಂಕುರೈಃ= ದುಃಖಗಳ ಉತ್ಪತ್ತಿಗೆ ಕಾರಣವಾದ, ಖರೈಃ = ಹರಿತವಾದ, ಯುಕ್ತಿನಖರೈಃ= ಯುಕ್ತಿಗಳೆಂಬ ಉಗುರುಗಳಿಂದ, ದಾರುಣ= ತತ್ತ್ವನಿಷ್ಠುರವಾದ, ಪ್ರವಚನ= ವ್ಯಾಖ್ಯಾನವೆಂಬ, ಪ್ರಣಾದಃ= ಸಿಂಹನಾದ ಉಳ್ಳವನಾಗಿ, ಅಪ್ರಿಯಾನ್ = ಶತ್ರುಗಳನ್ನು, ವಿದಾರಯತಿ = ಸೀಳುತ್ತಾನೆ. ತ್ವರಿತಂ ವಿಧಾವತ ವಿಧಾವತ= ಬೇಗನೆ ಓಡಿರಿ ಓಡಿರಿ.

ತಾ:— 'ಸಮಸ್ತಚೇತನರೂ, ಪರಮಚೇತನನಾದ ಶ್ರೀಹರಿಯೂ, ಜಗತ್ತೂ ಸತ್ಯಗಳೆಂದೂ ಪರಸ್ಪರ ಭೇದವುಳ್ಳವುಗಳೆಂದೂ ಹೇಳುವ ವೇದಗಳೇ ಅತತ್ತ್ವಾವೇದಕಗಳು, ಸುಳ್ಳನ್ನು ಹೇಳುತ್ತವೆ, ಅಪ್ರಾಮಾಣಿಕವಾದ ಅರ್ಥವನ್ನು ಹೇಳುತ್ತವೆ' ಎಂದು ಹೇಳುವ ಎಲೈ ಮಾಯಾವಾದಿ ದೈತ್ಯರೇ! ನೀವು ಬೇಗನೆ ಓಡಿರಿ ಓಡಿರಿ. ಏಕೆಂದರೆ ಶ್ರೀಮಧ್ವನರಸಿಂಹನು ಅತಿಶಯವಾಗಿ ಪ್ರಜ್ವಲಿಸುತ್ತಿದ್ದಾನೆ. ಆ ನರಸಿಂಹನು ಶತ್ರುಗಳಿಗೆ

Rarest Archiver

(ಕುವಾದಿಗಳಿಗೆ) ಸಹಿಸಲಸಾಧ್ಯವಾದ ಶಾಸ್ತ್ರೋಪದೇಶವೆಂಬ ಸಿಂಹಗರ್ಜನೆಯನ್ನು ಮಾಡುತ್ತಿದ್ದಾನೆ. ಅಸಂಬದ್ಧಮಾತಾಡುವ ಮೂರ್ಖರಿಗೆ ದುಃಖವನ್ನುಂಟುಮಾಡುವ ಹರಿತವಾದ ಯುಕ್ತಿಗಳೆಂಬ ಉಗುರುಗಳಿಂದ ಶತ್ರುಗಳನ್ನು ಸೀಳುತ್ತಾನೆ. ನರಸಿಂಹನು ಹಿರಣ್ಯಕಶಿಪು ಮೊದಲಾದ ದೈತ್ಯರನ್ನು ಹರಿತವಾದ ಉಗುರುಗಳಿಂದ ಸೀಳಿದಂತೆ ಶ್ರೀಮಧ್ವಾಚಾರ್ಯರು ಶತ್ರುಗಳಿಗೆ ನಿರಾಕರಿಸಲಸಾಧ್ಯವಾದ ಯುಕ್ತಿಗಳಿಂದ ಮಾಯಾವಾದಿಗಳನ್ನು ಜಯಿಸುವರು ಎಂದು ಭಾವ.

ಆನಂದತೀರ್ಥಪುಂಸಿಂಹಃ ಮಾಯಾವಾದಿದಿತೇಃ ಸುತಾನ್ |
ವಿದಾರ್ಯ ಯುಕ್ತಿನಖರೈರಪ್ರತೀಪೋಽಭಿಭಾಸತೇ ||
ನೃಹರಿಃ ಸಕಲಜ್ಞನಾಮಕಃ ಸಮುಪೈತಿ ಹಿ ಮಾಯಿದಾನವಾನ್ |
ಪ್ರಪಲಾಯನಮತ್ರ ತತ್ ಕ್ಷಮಂ
ತ್ವರಯಾ ವೋ ವಸತಿರ್ಗುಹಾಸು ಚ || (ಭಾ. ಪ್ರ.)

ಮಧ್ವನರಸಿಂಹನು ಯುಕ್ತಿನಖಗಳಿಂದ ಮಾಯಾವಾದಿದಾನವರನ್ನು ಸೀಳಿ ಅಪ್ರತಿಭಟನಾಗಿ ಶೋಭಿಸುತ್ತಾನೆ. ಎಲೈ ಮಾಯಾವಾದಿದೈತ್ಯರೇ! ನೀವು ಬೇಗನೆ ಓಡಿ ಗುಹೆಗಳನ್ನು ಹೊಕ್ಕು ಬದುಕಿರಿ. (ಈ ಶ್ಲೋಕಗಳ ಸಾರಾಂಶವೇ ಮೇಲೆ ವರ್ಣಿತವಾಗಿದೆ.)

**ವಿ:**—ತ್ರಯಾಣಾಂ ವಾದಃ ತ್ರಿವಾದಃ, ನ ವಿದ್ಯತೇ ತ್ರಿವಾದಃ ಯೇಷಾಂ ತೇ, ಅತ್ರಿವಾದಾ ಏವ ಅಸುರಾಃ ಅತ್ರಿವಾದಾಸುರಾಃ; ಅದಭ್ರಾ ಧಿಷಣಾ ಯಸ್ಯ, ಅದಭ್ರಧಿಷಣಃ ಇತಿ ಅಭಿಧಾ ಯಸ್ಯ, ಯುಕ್ತಯ ಏವ ನಖರಾಃ ತೈಃ, ಮುಖರಾಶ್ಚ ತೇ ಮೂರ್ಖಾಶ್ಚ ಮುಖರಮೂರ್ಖಾಃ ಮುಖರಮೂರ್ಖಾಣಾಂ ದುಃಖಾನಿ, ಮುಖರಮೂರ್ಖದುಃಖಾನಾಂ ಅಂಕುರಾಃ ತೈಃ, ದಾರುಣಂ ಚ ತತ್ ಪ್ರವಚನಂ ಚ, ದಾರುಣಪ್ರವಚನಮೇವ ಪ್ರಣಾದಃ ಯಸ್ಯ ಸಃ, ನ ಪ್ರಿಯಾಃ ಅಪ್ರಿಯಾಃ ತಾನ್ |

**ಕ್ರಿಯಾ:**—ಜಾಜ್ವಲ್ಯತೇ ಜಾಜ್ವಲ್ಯೇತೇ ಜಾಜ್ವಲಂತೇ ಇತ್ಯಾದಿ. ಜ್ವಲ ದೀಪ್ತೌ, ಯಙಂತ ಲಟ್. ವಿ + ದಾರಯತಿ ದಾರಯತಃ ದಾರಯಂತಿ ಇತ್ಯಾದಿ. ದೄ ವಿದಾರಣೇ ಣಿಜಂತ ಲಟ್.

Rarest Archiver

**ವೃತ್ತ:**—ಜಸೌ ಜಸಯಲಾ ವಸುಗ್ರಹಯತಿಶ್ಚ ಪೃಥ್ವೀ ಗುರುಃ.

**ಅವ:**—ಆಚಾರ್ಯರನ್ನು ಗರುಡರೂಪದಿಂದ ವರ್ಣಿಸಿ ಮಾಯಿವಾದಿ ಸರ್ಪಗಳನ್ನು ಹೆದರಿಸುತ್ತಾರೆ.

**ಧತ್ತೇ ರೂಪಾಣ್ಯನಂತಾನ್ಯಪಿ**
**ಭುವನಪತೇರ್ಯೋ ಹೃದಾಪ್ಯೇಕಪಕ್ಷೋ ।**
**ದಕ್ಷಃ ಸದ್ಭ್ಯೋಽಖಿಲೇಭ್ಯೋಽಪ್ಯಮೃತಮಿಹ ದದೌ**
**ಕೇವಲಂ ಯೋ ನ ಮಾತ್ರೇ ॥**
**ಪಕ್ಷಿಶ್ರೇಷ್ಠೋಽಪರಃ ಸನ್ನಮಿತಮತಿಪದೋಽಸಂಪದೇ**
**ಸ್ಯಾದಯಂ ವೋ ।**
**ಮಾ ದರ್ಪಂ ಮಾಯಿಸರ್ಪಾ ಭಜತ ಭಜತ ತಾಸ್ತಾ**
**ಗುಹಾ ದ್ರಾಗ್ ದ್ವಿಜಿಹ್ವಾಃ ॥೫೨॥**

**ಅ:**-ಹೇ ದ್ವಿಜಿಹ್ವಾಃ ಮಾಯಿಸರ್ಪಾಃ ಯಃ ಭುವನಪತೇಃ ಅನಂತಾನಿ ಅಪಿ ರೂಪಾಣಿ ಹೃದಾ ಅಪಿ ಧತ್ತೇ, ಏಕಪಕ್ಷಃ ದಕ್ಷಃ ಯಃ ಇಹ ಮಾತ್ರೇ ಕೇವಲಂ ಅಮೃತಂ ನ ದದೌ, ಅಖಿಲೇಭ್ಯಃ ಸದ್ಭ್ಯಃ ಅಪಿ ಅಮೃತಂ ದದೌ ಅಮಿತಮತಿಪದಃ ಅಯಂ ಅಪರಃ ಪಕ್ಷಿಶ್ರೇಷ್ಠಃ ಸನ್ ವಃ ಅಸಂಪದೇ ಸ್ಯಾತ್; ದರ್ಪಂ ಮಾ ಭಜತ. ದ್ರಾಕ್ ತಾಃ ತಾಃ ಗುಹಾಃ ಭಜತ.

**ಅರ್ಥ:**—ದ್ವಿಜಿಹ್ವಾಃ = ಎರಡು ನಾಲಿಗೆಗಳುಳ್ಳ, ಮಾಯಿಸರ್ಪಾಃ = ಮಾಯಾವಾದಿಗಳೆಂಬ ಸರ್ಪಗಳೇ! ಯಃ = ಯಾರು, ಭುವನಪತೇಃ = ಲೋಕಗಳಿಗೆ ಒಡೆಯನಾದ ನಾರಾಯಣನ, ಅನಂತಾನಿ ಅಪಿ ರೂಪಾಣಿ = ಮಿತಿ ಇಲ್ಲದ (ಅಸಂಖ್ಯಾಕವಾದ) ರೂಪಗಳನ್ನು, ಹೃದಾ ಅಪಿ = ಮನಸ್ಸಿನಿಂದಲೂ, ಧತ್ತೇ = ಧರಿಸಿದ್ದಾರೋ, ಏಕಪಕ್ಷಃ = ಪ್ರಧಾನವಾದ ಒಂದೇ ಸಿದ್ಧಾಂತವುಳ್ಳ, ದಕ್ಷಃ = ಚತುರರಾದ, ಯಃ = ಯಾವ ಮಧ್ವರು, ಇಹ = ಈ ಲೋಕದಲ್ಲಿ, ಮಾತ್ರೇ ಕೇವಲಂ = ತಾಯಿಗೆ ಮಾತ್ರ, ಅಮೃತಂ = ಮೋಕ್ಷವನ್ನು, ನ ದದೌ ಕೊಡಲಿಲ್ಲವೋ, ಅಖಿಲೇಭ್ಯಃ ಸದ್ಭ್ಯಃ ಅಪಿ = ...ಜ್ಜನರಿಗೂ, ಅಮೃತಂ ದದೌ = ಮೋಕ್ಷವನ್ನು ಕೊಟ್ಟರೋ, ...ಪದಃ ಅಯಂ = ಪೂರ್ಣಪ್ರಜ್ಞ ಎಂಬ ಹೆಸರುಳ್ಳ ಇವರು,

Rarest Archiver

ಅಪರಃ ಪಕ್ಷಿಶ್ರೇಷ್ಠಃ ಸನ್=ಮತ್ತೊಬ್ಬ ಗರುಡರಾಗಿ, ಸಿದ್ಧಾಂತಿಶ್ರೇಷ್ಠರಾಗಿ, ವಃ ಅಸಂಪದೇ ಸ್ಯಾತ್=ನಿಮ್ಮ ಅನಿಷ್ಟಕ್ಕಾಗಿ ಆದಾಳು. ದರ್ಪಂ ಮಾ ಭಜತ=ಅಹಂಕಾರವನ್ನು ಹೊಂದಬೇಡಿರಿ. ದ್ರಾಕ್=ಬೇಗಬೇಗನೆ, ತಾಃ ತಾಃ=ಆಯಾಯ, ಗುಹಾಃ=ಗುಹೆಗಳನ್ನು, ಭಜತ=ಹೊಂದಿರಿ. (ಸೇವಿಸಿರಿ.)

**ತಾಃ**—ಎಲೈ ಮಿಥ್ಯಾವಾದಿಗಳಾದುದರಿಂದ ಎರಡು ನಾಲಿಗೆಯುಳ್ಳ ಸರ್ಪಗಳಂತಿರುವ ಮಾಯಾವಾದಿಗಳೇ! ಈ ಮಧ್ವಾಚಾರ್ಯರು ಸಿದ್ಧಾಂತಿಗಳಲ್ಲಿ ಶ್ರೇಷ್ಠರಾಗಿ ಪಕ್ಷಿ (ಸಿದ್ಧಾಂತಿ, ರೆಕ್ಕೆಉಳ್ಳವರು ಇವರಲ್ಲಿ) ಶ್ರೇಷ್ಠನಾದ ಗರುಡನಂತಿದ್ದರೂ ಗರುಡನಿಗಿಂತ ವಿಲಕ್ಷಣವಾಗಿದ್ದಾರೆ. . ಗರುಡನು ಶ್ರೀಮನ್ನಾರಾಯಣನನ್ನು ಭುಜದ ಮೇಲೆ ಮಾತ್ರ ಹೊತ್ತಿರುವನು. ಎರಡು ಪಕ್ಕ (ರೆಕ್ಕೆ)ಗಳುಳ್ಳವನು. ದಕ್ಷಪ್ರಜಾಪತಿಯ ಮಗಳಾದ ವಿನತೆಯಲ್ಲಿ ಕಶ್ಯಪರಿಂದ ಹುಟ್ಟಿದವನು. ತನ್ನ ತಾಯಿಗೆ ಮಾತ್ರ (ಅವಳ ದಾಸ್ಯವಿಮೋಚನೆಗಾಗಿ) ಅಮೃತವನ್ನು ತಂದಿತ್ತನು. ಈ ಮಧ್ವಾಚಾರ್ಯರು ಹನುಮಂತನಾಗಿ ತನ್ನ ಭುಜದಮೇಲೆ ಮಾತ್ರ ಹರಿಯನ್ನು ಹೊತ್ತದ್ದು ಮಾತ್ರವೇ ಅಲ್ಲ, ಶ್ರೀಹರಿಯ ಅನಂತರೂಪಗಳನ್ನು ಮನಸ್ಸಿನಿಂದಲೂ ಯಾವಾಗಲೂ ಧರಿಸಿರುತ್ತಾರೆ. ಏಕಪಕ್ಷವುಳ್ಳವರು, (ಪ್ರಧಾನವಾದ ಒಂದೇ ಸಿದ್ಧಾಂತವುಳ್ಳವರು.) ಎಲ್ಲ ವಿಷಯದಲ್ಲಿಯೂ ಚತುರರು. ಪ್ರಪಂಚದಲ್ಲಿರುವ ತಾಯಿಗೂ ಎಲ್ಲಾ ಸಜ್ಜನರಿಗೂ ಒಳ್ಳೆಯ ಸಿದ್ಧಾಂತವನ್ನಿತ್ತು (ಅಮೃತವನ್ನು) ಮೋಕ್ಷವನ್ನು ಕೊಟ್ಟಿರುವರು. ಇವರು ಗರುಡನು ಸರ್ಪಗಳನ್ನು ಖಂಡಿಸಿದಂತೆ ನಿಮ್ಮನ್ನು ಖಂಡಿಸಿ ಅನಿಷ್ಟವನ್ನುಂಟು ಮಾಡಿಯಾರು. ಅವರ ಮುಂದೆ ಅಹಂಕಾರ ತೋರಬೇಡಿರಿ. ಅಭಿಮಾನಶಾಲಿಗಳಾದ ನಾವು ಅವರ ಮುಂದೆ ವಿನಯದಿಂದ ಇರುವುದು ಹೇಗೆ ಎಂಬ ಶಂಕೆಯಿದ್ದರೆ, ಬೇಗನೆ ಹಾವುಗಳಂತೆ ಗುಟ್ಟಾದ ಸ್ಥಳಗಳಲ್ಲಿ ಅಡಗಿಕೊಳ್ಳಿರಿ. ಸರ್ಪರು ಪ್ರಸಿದ್ಧಗರುಡನಿಂದ ಹೆದರುವವರು. ಈ ಮಾಯಿಸರ್ಪಗಳು ವಿಲಕ್ಷಣನಾದ ಮಧ್ವಗರುಡನಿಂದ ಹೆದರಲೇ ಬೇಕು.

**ವಿ:**—ನ ವಿದ್ಯತೇ ಅಂತಃ ಯೇಷಾಂ ತಾನಿ, ತಾನಿ ; ಭುವನಾನಾಂ

Rarest Archiver

ಪತಿಃ ಭುವನಪತಿಃ ತಸ್ಯ, ಏಕಃ ಪಕ್ಷಃ ಯಸ್ಯ ಸಃ, ಪಕ್ಷಃ (ಪಕ್ಷೌ) ಏಷಾಂ ಅಸ್ತಿ (ಸ್ತಃ) ಇತಿ ಪಕ್ಷಿಣಃ, ಪಕ್ಷಿಷು ಶ್ರೇಷ್ಠಃ, ಅಮಿತಾ ಮತಿಃ ಯಸ್ಯ ಸಃ, ಅಮಿತಮತಿಃ ಇತಿ ಪದಂ ಯಸ್ಯ ಸಃ, ನ ಸಂಪತ್ ಅಸಂಪತ್ ತಸ್ಯೈ, ಮಾಯಿನ ಏವ ಸರ್ಪಾಃ, ದ್ವೇ ಜಿಹ್ವೇ ಯೇಷಾಂ ತೇ,

ಕ್ರಿ:—ಧತ್ತೇ ಹಿಂದೆ ಬಂದಿದೆ. ದದೌ ದದತುಃ ದದುಃ ಇತ್ಯಾದಿ ಡುದಾಞ್ ದಾನೇ ಲಿಟ್. ಸ್ಯಾತ್ ಸ್ಯಾತಾಂ ಸ್ಯುಃ ಅಸ ಭುವಿ ವಿಧಿಲಿಙ್. ಭಜ ಭಜತಾತ್ ಭಜತಂ ಭಜತ-ಭಜ ಸೇವಾಯಾಂ ಲೋಟ್ ಮ.ಪು.ಬ.

ವೃತ್ತ:—ಮ್ರಭ್ನೈರ್ಯಾನಾಂ ತ್ರಯೇಣ ತ್ರಿಮುನಿಯತಿಯುತಾ ಸ್ರಗ್ಧರಾ ಕೀರ್ತಿತೇಯಂ.

ಅವ:— ಶ್ರೀಮಧ್ವಾಚಾರ್ಯರನ್ನು ಶ್ರೀಮನ್ನಾರಾಯಣರೂಪ ದಿಂದ ವರ್ಣಿಸಿ ವಾದಿಗಳನ್ನು ಹೆದರಿಸುತ್ತಾರೆ—

**ವೇದವ್ರಾತಸುದರ್ಶನಃ ಪರಿಲಸತ್ತರ್ಕಾಖ್ಯಶಂಖಧ್ವನಿಃ**
**ವಿಭ್ರಾಜಿಷ್ಣು ಪುರಾಣಸಂಹತಿಗದಃ ಶ್ಲೋಕೌಘಶಾಂಗಾರ್ನ್ವಿತಃ ।**
**ಸತ್ಸೂತ್ರೇತಿಹಾಸನಂದಕಚಣಃ ಮಧ್ವಾಖ್ಯನಾರಾಯಣಃ**
**ಪ್ರಾಪ್ತೋ ವೋ ನಿಜಿಘೃಕ್ಷಯಾ ದ್ರವತ ಹೇ**
**ಮಾಯಾವಿದೇವದ್ವಿಷಃ ॥೫೩॥**

ಅ:— ವೇದವ್ರಾತಸುದರ್ಶನಃ ಪರಿಲಸತ್ತರ್ಕಾಖ್ಯಶಂಖಧ್ವನಿಃ ವಿಭ್ರಾಜಿಷ್ಣುಪುರಾಣಸಂಹತಿಗದಃ ಶ್ಲೋಕೌಘಶಾಂಗಾರ್ನ್ವಿತಃ ಸತ್ಸೂತ್ರೇತಿಹಾಸನಂದಕಚಣಃ ಮಧ್ವಾಖ್ಯನಾರಾಯಣಃ, ಹೇ ಮಾಯಾವಿ-ದೇವದ್ವಿಷಃ! ವಃ ನಿಜಿಘೃಕ್ಷಯಾ ಪ್ರಾಪ್ತಃ; ದ್ರವತ.

ಅರ್ಥ:—ವೇದವ್ರಾತಸುದರ್ಶನಃ = ವೇದಗಳ ಸಮೂಹವೆಂಬ ಸುದರ್ಶನಚಕ್ರವುಳ್ಳ, ಪರಿಲಸತ್ = ಪ್ರಕಾಶಿಸುವ, ತರ್ಕಾಖ್ಯ = ಬ್ರಹ್ಮ ತರ್ಕವೆಂಬ ಹೆಸರುಳ್ಳ, ಶಂಖಧ್ವನಿಃ = ಶಂಖದ ಧ್ವನಿಯುಳ್ಳ, ವಿಭ್ರಾಜಿಷ್ಣು = ಅತಿಶಯಪ್ರಕಾಶಸ್ವಭಾವದ, ಪುರಾಣಸಂಹತಿ = ಪುರಾಣಗಳಸಮೂಹ

Rarest Archiver

ವೆಂಬ, ಗದಃ=ಕೌಮೋದಕಿ ಎಂಬ ಗದೆಯುಳ್ಳ, ಶ್ಲೋಕೌಘ=ಪಂಚರಾತ್ರಶ್ಲೋಕಸಮೂಹಗಳೆಂಬ, ಶಾಂಗಾರ್ನ್ವಿತಃ=ಶಾಂರ್ಗವೆಂಬ ಬಿಲ್ಲಿನಿಂದ ಕೂಡಿದ, ಸತ್‌ಸೂತ್ರ=ನಿರ್ದೋಷವಾದ ಬ್ರಹ್ಮಸೂತ್ರಗಳೆಂಬ, ಇಷು=ಬಾಣಗಳು, ಇತಿಹಾಸನಂದಕ=ಭಾರತವೆಂಬ ನಂದಕಖಡ್ಗ, ಇವುಗಳಿಂದ, ಚಣಃ = ಪ್ರಸಿದ್ಧರಾದ, ಮಧ್ವಾಖ್ಯನಾರಾಯಣಃ = ಮಧ್ವಾಚಾರ್ಯರೆಂಬ ನಾರಾಯಣನು, ಹೇ ಮಾಯಾವಿದೇವದ್ವಿಷಃ=ಎಲೈ ಮಾಯಾವಾದಿಗಳೆಂಬ ದೈತ್ಯರೇ!, ವಃ=ನಿಮ್ಮ, ನಿಜಿಘೃಕ್ಷಯಾ = ನಿಗ್ರಹಿಸುವ ಇಚ್ಛೆಯಿಂದ, ಪ್ರಾಪ್ತಃ ಬಂದಿದ್ದಾರೆ, ದ್ರವತ=ಓಡಿರಿ.

ತಾ:—ಎಲೈ ಮಾಯಾವಾದಿಗಳೆಂಬ ದೈತ್ಯರೇ! ಓಡಿರಿ. ಶ್ರೀಮಧ್ವನಾರಾಯಣನೆಂಬ ದೈತ್ಯಾರಿಯು ನಿಮ್ಮನ್ನು ನಿಗ್ರಹಿಸಲು ಬಂದಿದ್ದಾನೆ. ಇವನ ಕೈಯಲ್ಲಿ ವೇದಸಮೂಹವೆಂಬ ಸುದರ್ಶನಚಕ್ರವಿದೆ. ಶೋಭಿಸುವ ಬ್ರಹ್ಮತರ್ಕವೆಂಬ ಪಾಂಚಜನ್ಯವನ್ನು ಈ ಮಧ್ವನಾರಾಯಣನು ಊದುತ್ತಿದ್ದಾನೆ. ಹದಿನೆಂಟುಪುರಾಣಗಳೆಂಬ ಕೌಮೋದಕೀಗದೆಯು ಈ ಮಧ್ವ-ನಾರಾಯಣನ ಕೈಯಲ್ಲಿ ಪ್ರಕಾಶಿಸುತ್ತಿದೆ. ಪಂಚರಾತ್ರವೆಂಬ ಶಾಂರ್ಗವು, ಬ್ರಹ್ಮಸೂತ್ರಗಳೆಂಬ ಬಾಣಗಳು, ಭಾರತವೆಂಬ ನಂದಕಖಡ್ಗವೂ ಈ ಮಧ್ವನಾರಾಯಣನ ಕೈಗಳಲ್ಲಿ ವಿರಾಜಿಸುತ್ತಿವೆ. (ಚಕ್ರ ಶಂಖ ಗದಾ ಶಾಙ್ರ್ಗ ನಂದಕವೆಂಬ ಪಂಚಾಯುಧಗಳನ್ನು ಧರಿಸಿ ದೈತ್ಯಾರಿಯಾದ ನಾರಾಯಣನು ಅಸುರನಿಗ್ರಹಮಾಡಿದಂತೆ, ವೇದ, ತರ್ಕ, ಪುರಾಣ, ಪಂಚರಾತ್ರ, ಬ್ರಹ್ಮಸೂತ್ರ, ಭಾರತ ಎಂಬ ಪ್ರಮಾಣಾಯುಧಗಳನ್ನು ಧರಿಸಿ ನಾರಾಯಣನಂತಿರುವ ಮಧ್ವರಾಜರು ಮಾಯಾವಾದಿಶತ್ರುಗಳನ್ನು ಗೆದ್ದು ಓಡಿಸುವರು. ಎಂದು ಭಾವ.) ಪಲಾಯಧ್ವಂ ಪಲಾಯಧ್ವಂ ತ್ವರಯಾ ಮಾಯಿದಾನವಾಃ| ಸರ್ವಜ್ಞಹರಿರಾಯಾತಿ ತರ್ಕಾಗಮ-ದರಾರಿಭೃತ್॥ (ಭಾ.ಪ್ರ.) 'ಎಲೈ ಮಾಯಾವಾದಿದೈತ್ಯರೇ! ತರ್ಕ, ಶಂಖ, ಆಗಮ ಚಕ್ರಗಳನ್ನು ಧರಿಸಿದ ಸರ್ವಜ್ಞಾಚಾರ್ಯರೆಂಬ ವಿಷ್ಣುವು ಬರುತ್ತಿದ್ದಾನೆ. ಎಲೈ ಮಾಯಾವಾದಿದಾನವರೇ! ಬೇಗನೆ ಓಡಿರಿ'. ಈ ಶ್ಲೋಕತಾತ್ಪರ್ಯವನ್ನೇ ಕವಿಗಳು ಇಲ್ಲಿ ವಿಸ್ತರಿಸಿದ್ದಾರೆ.

Rarest Archiver

ಟೀ:—ವೇದಾನಾಂ ವ್ರಾತಃ, ವೇದವ್ರಾತ ಏವ ಸುದರ್ಶನಂ ಯಸ್ಯ ಸಃ, ತರ್ಕಾ ಇತಿ ಆಖ್ಯಾ ಯಸ್ಯ ಸಃ, ತರ್ಕಾಖ್ಯಃ, ಪರಿಲಸಂಶ್ಚಾಸೌ ತರ್ಕಾಖ್ಯಶ್ಚಾಸೌ ಶಂಖಶ್ಚ ಪರಿಲಸತ್ತರ್ಕಾಖ್ಯಶಂಖಃ, ತಸ್ಯಾ ಧ್ವನಿಃ ಯಸ್ಯ ಸಃ, ವಿಭ್ರಾಜಿಷ್ಣುಃ ಪುರಾಣಾನಾಂ ಸಂಹತಿರೇವ ಗದಾ ಯಸ್ಯ ಸಃ, ಶ್ಲೋಕಾನಾಂ ಓಘಃ, ಶ್ಲೋಕೌಘ ಏವ ಶಾರ್ಙ್ಗಂ, ಶ್ಲೋಕೌಘಶಾರ್ಙ್ಗೇಣ ಅನ್ವಿತಃ; ಸಂತಿ ಚ ತಾನಿ ಸೂತ್ರಾಣಿ ಚ, ಸತ್‌ಸೂತ್ರಾಣ್ಯೇವ ಇಷವಃ, ಇತಿಹಾಸ ಏವ ನಂದಕಃ, ಸತ್‌ಸೂತ್ರೇಷುಭಿಃ, ಇತಿಹಾಸನಂದಕೇನ ಚ ವಿತ್ತಃ ಸತ್ ... ಚಣಃ, ಸೂ.—'ತೇನವಿತ್ತಃ ಚುಂಚುಪ್‌ಚಣಪೌ' ಚಣಪ್ ಪ್ರತ್ಯಯ. ಮಧ್ವ ಇತಿ ಆಖ್ಯಾ ಯಸ್ಯ ಮಧ್ವಾಖ್ಯಶ್ಚಾಸೌ ನಾರಾಯಣಶ್ಚ ಮಧ್ವಾಖ್ಯನಾರಾಯಣಃ ; ನಿಗ್ರಹೀತುಂ ಇಚ್ಛು ನಿಜಿಘೃಕ್ಷೌ ತಯಾ, ದೇವಾನಾಂ ದ್ವಿಷಃ; ಮಾಯಾವಿನ ಏವ ದೇವದ್ವಿಷಃ ||

ಕ್ರಿ:—ಧ್ರುವತೆ ಹಿಂದೆ ಬಂದಿದೆ. ವೃತ್ತ:—ಸೂರ್ಯಾಶ್ವೈರ್ಮ ಸಜಾಸ್ತತಾಃಸಗುರವಃ **ಶಾರ್ದೂಲವಿಕ್ರೀಡಿತಂ.**

ಅವ:—ಹೀಗೆ ಸಜ್ಜನರು ಪರಾಜಿತರಾದ ಮಾಯಾವಾದಿಗಳನ್ನು ಹೆದರಿಸಿದ ವಿಷಯವನ್ನು ವರ್ಣಿಸಿ, ಶ್ರೀಮಧ್ವಾಚಾರ್ಯರು ಪ್ರಾಗ್ರ್ಯವಾಟ (ಕೊಡಿಪಾಡಿ) ಎಂಬ ಸ್ಥಳದಲ್ಲಿ ವಾಸಿಸಿದರು ಎಂದು ಹೇಳಿ ಸರ್ಗಸಮಾಪ್ತಿಯನ್ನು ಮಾಡುತ್ತಿದ್ದಾರೆ.

ಇತಿ ನಿಗದತಿ ಮಾಯಾವಾದಿವಿದ್ವೇಷವೇಷೇ
ಶುಭಜನನಿಕರೇ ಸ್ವಾರಾಮತೋಽಸ್ಮಾತ್ ಪ್ರಯಾತಃ।
ನ್ಯವಸದಮರಧಿಷ್ಣ್ಯೇ ಪ್ರಾಗ್ರ್ಯವಾಟಾಭಿಧಾನೇ
ಗುರುಮತಿರಭಿನಂದನ್ ದೇವಮಾನಂದಮೂರ್ತಿಂ ||೫೪||

ಇತಿ ಶ್ರೀಮತ್ಸುಮಧ್ವವಿಜಯೇ ಮಹಾಕಾವ್ಯೇ ಆನಂದಾಂಕೇ
ಮಾಯಾವಾದಿವಿಜಯೋ ನಾಮ ದ್ವಾದಶಃಸರ್ಗಃ||

Rarest Archiver

ಅ:—ಮಾಯಾವಾದಿವಿದ್ವೇಷವೇಷೇ ಶುಭಜನನಿಕರೇ ಇತಿ ನಿಗದತಿ ಸತಿ ಅಸ್ಮಾತ್ ಸ್ವಾರಾಮತಃ ಪ್ರಯಾತಃ ಗುರುಮತಿಃ ಪ್ರಾಗ್ರ್ಯ-ವಾಟಾಭಿಧಾನೇ ಅಮರಧಿಷ್ಣ್ಯೇ ಆನಂದಮೂರ್ತಿಂ ದೇವಂ ಅಭಿನಂದನ್ ನ್ಯವಸತ್ ||

ಅರ್ಥ:—ಮಾಯಾವಾದಿ = ಜಗತ್ತು ಮಾಯಾಕಲ್ಪಿತ, ಮಿಥ್ಯಾ ಎಂದು ಹೇಳುವವರಲ್ಲಿ, ವಿದ್ವೇಷ = ವೈರಸ್ಯವೇ, ವೇಷೇ = ಅಲಂಕಾರವಾಗಿ ಉಳ್ಳ, ಶುಭಜನನಿಕರೇ = ಸಜ್ಜನರ ಸಮೂಹವು, ಇತಿ ನಿಗದತಿ ಸತಿ = ಈ ರೀತಿ ಹೇಳುತ್ತಿರಲಾಗಿ, ಅಸ್ಮಾತ್ ಸ್ವಾರಾಮತಃ = ಈ ಕಾವು ಎಂಬ ಗ್ರಾಮದಿಂದ, ಪ್ರಯಾತಃ = ಹೊರಟ, ಗುರುಮತಿಃ = ಶ್ರೀಪೂರ್ಣಪ್ರಜ್ಞರು, ಪ್ರಾಗ್ರ್ಯವಾಟಾಭಿಧಾನೇ = ಕೊಡಿಪಾಡಿ ಎಂಬ ಹೆಸರುಳ್ಳ, ಅಮರಧಿಷ್ಣ್ಯೇ = ದೇವಾಲಯದಲ್ಲಿ, ಆನಂದಮೂರ್ತಿಂ ದೇವಂ = ಆನಂದವೇ ಶರೀರವಾಗಿ ಉಳ್ಳ ಜನಾರ್ದನನಾಮಕನಾದ ದೇವರನ್ನು, ಅಭಿನಂದನ್ = ಸಂತೋಷ ಪಡಿಸುತ್ತಾ, (ನೋಡಿ ಸಂತೋಷಪಡುತ್ತಾ) ನ್ಯವಸತ್ = ವಾಸಮಾಡಿದರು.

ತಾ:—ಸಜ್ಜನರಿಗೆ ಮಾಯಾವಾದಿಗಳ ಜತೆಗೆ ವೈಮನಸ್ಯ ವೈರಸ್ಯಗಳೇ ಅಲಂಕಾರವು, ಅಂತಹ ಸಜ್ಜನರು ಹಿಂದೆ ಹೇಳಿದಂತೆ ಮಾಯಿಗಳನ್ನು ಪರಿಹಾಸಮಾಡಿದರು. ಅನಂತರ ಪದ್ಮತೀರ್ಥಾದಿಗಳನ್ನು ಸೋಲಿಸಿದ ಆಚಾರ್ಯರು ಸ್ವಾರಾಮ(ಕಾವುಮಠ) ಎಂಬಲ್ಲಿಂದ ಹೊರಟು ಪ್ರಾಗ್ರ್ಯ-ವಾಟ (ಕೊಡಿಪಾಡಿ) ಎಂಬಸ್ಥಳಕ್ಕೆ ಬಂದು ಅಲ್ಲಿ ಆನಂದಮೂರ್ತಿಯಾಗಿ ಕ್ರೀಡಾದಿಗುಣಸಂಪನ್ನನಾಗಿರುವ ಜನಾರ್ದನನೆಂಬ ಹೆಸರಿನ ಶ್ರೀಹರಿಯನ್ನು ಸೇವಿಸುತ್ತಾ ಚಾತುರ್ಮಾಸ್ಯಕ್ಕೆ ಕುಳಿತರು. (ಆಚಾರ್ಯರು ಪರಮಧೀ-ರೋದಾತ್ತನಾಯಕಸ್ವಭಾವಸಂಪನ್ನರು. ಅವರು ವಾದಿಗಳನ್ನು ಯಾವ ರೀತಿಯಲ್ಲಿಯೂ ತೆಗಳಲಿಲ್ಲ. ಮಾಯಿಗಳು ಮತ್ಸರದಿಂದ ಆಚಾರ್ಯರಿಗೆ ನಾನಾರೀತಿಯ ಉಪದ್ರವಗಳನ್ನು ಕೊಟ್ಟು ತಾವೇ ಸೋತು ಓಡಿದುದನ್ನು ಕಂಡು ಅಲ್ಲಿಯ ಸಜ್ಜನರು ಈ ರೀತಿ ಪರಿಹಾಸಮಾಡಿದರು.)

Rarest Archive

ವಿ:—ಮಾಯಾವಾದಿಷು ವಿದ್ವೇಷಃ ಮಾಯಾವಾದಿವಿದ್ವೇಷಃ, ಮಾಯಾವಾದಿವಿದ್ವೇಷ ಏವ ವೇಷಃ ಯಸ್ಯ ಸಃ ತಸ್ಮಿನ್, ಶುಭಾಶ್ಚ ತೇ ಜನಾಶ್ಚ, ಶುಭಜನಾನಾಂ ನಿಕರಃ ತಸ್ಮಿನ್, ಅಮರಾಣಾಂಧಿಷ್ಣ್ಯಂ ತಸ್ಮಿನ್, ಪ್ರಾಗ್ರ್ಯವಾಟ ಇತಿ ಅಭಿಧಾನಂ ಯಸ್ಯ ತತ್ ತಸ್ಮಿನ್, ಗುರುಃ ಮತಿಃ ಯಸ್ಯ ಸಃ, ಆನಂದಃ ಮೂರ್ತಿಃ ಯಸ್ಯ ಸಃ ತಂ. ಕ್ರಿಯಾ:— ನಿ+ ಅವಸತ್ ಅವಸತಾಂ ಅವಸನ್ ಇತ್ಯಾದಿ, ವಸ ನಿವಾಸೇ ಲಙ್.

ವೃತ್ತ:—ನನಮಯಯಯುತೇಯಂ ಮಾಲಿನೀ ಭೋಗಿಲೋಕೈಃ ||

ಇಲ್ಲಿಗೆ ಶ್ರೀಸುಮಧ್ವವಿಜಯಮಹಾಕಾವ್ಯದಲ್ಲಿ
ಮಾಯಾವಾದಿ ವಿಜಯವೆಂಬ ಹನ್ನೆರಡನೆಯ ಸರ್ಗಕ್ಕೆ
ಆಚಾರ್ಯ ಸಾಣೂರು ಭೀಮಭಟ್ಟರಿಂದ ರಚಿತವಾದ
ಕರ್ನಾಟಕಭಾಷಾನುವಾದವು ಸಮಾಪ್ತವಾಯಿತು.

Rarest Archives